ಕ್ರೈಸ್ತ ಸಭಾಪತ್ರವು.

(ಮಾಸ ಮಾಸಕ್ಕೆ ಪ್ರಕಟವಾಗುವಂಥಾದ್ದು.)

೧೦ನೇ ಪುಸ್ತಕವು.

MANGALORE
Basel Mission Book & Tract Depository
1878

ಅನುಕ್ರಮಣಿಕೆ.

ಕ್ರೈಸ್ತಸಭಾಪತ್ರ

ಪುಸ್ತಕ ೧೦. JANUARY 1878. ಅಂಕೆ ೭.

ಅಡಕವು: "ಸಂತೋಷಂ ಪರಮಂ ಧನಂ"—ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?—ಕನ್ನಡ ಜಿಲ್ಲಾ ಮಿಶ್ಯನ್ ಹಬ್ಬವು—ಉತ್ತರಗಳು—ವಿವಿಧ ವರ್ತಮಾನಗಳು.

"ಸಂತೋಷಂ ಪರಮಂ ಧನಂ."

ಆದರೆ ಜಕ್ಕಾಯನು ನಿಂತು ಕೊಂಡು, ಯೇಸುವಿಗೆ—ಸ್ವಾಮೀ! ನನ್ನೆಲ್ಲಾ ಆಸ್ತಿಯ ಅರೆವಾಶಿಯನ್ನು ಬಡವರಿಗೆ ದಾನ ಕೊಡುತ್ತೇನೆ; ಮತ್ತು ನಾನು ಯಾರಿಗಾದರೂ ಅನ್ಯಾಯ ಮಾಡಿ, ಏನಾದರೂ ಅಪಹರಿಸಿ ಕೊಂಡದಾದರೆ, ನಾಲ್ಕಷ್ಟು ಬದಲು ಕೊಡುತ್ತೇನೆ ಎಂದು ಅರಿಕೆ ಮಾಡಿದನು. ಲೂಕ. ೧೯, ೮.

ಒಬ್ಬನ ಹೃದಯದ ಇಂಗಿತ ಇಷ್ಟಾದಿಗಳು ವಾಗ್ರೂಪವಾಗಿ ಅವನ ಬಾಯಿಯಿಂದ ಹೊರಟು ಇತರರಿಗೆ ತಿಳಿದು ಬರುತ್ತವೆ. ಹೃದಯಕ್ಕೆ ಪ್ರಿಯವಾದ್ದನ್ನು ಬಾಯಿ ಆಡುವದು. ಮೊದಲು ಕಾಸಿಗೆ ಪ್ರಪಂಚಕ್ಕೆ ಜಕ್ಕಾಯನಲ್ಲಿದ್ದ ಪ್ರೀತಿಗೆ ಬದಲಾಗಿ ಬೇರೊಂದು ಪ್ರೀತಿ ಹುಟ್ಟಿ ನೆಲೆಗೊಂಡಿತು. ಮೊದಲು ಇಷ್ಟಾರ್ಥವಾಗಿದ್ದದು ಹೋಗಿ, ಒಂದು ಹೊಸ ಇಷ್ಟಾರ್ಥಕ್ಕೆ ಎಡೆಯಾಯಿತು. ಯಾವಾತನಲ್ಲಿ ಕ್ರಿಸ್ತ ಯೇಸುವಿನ ಪ್ರೀತಿ ನೆಲೆಗೊಂಡು ಬಲವಾಯಿತೋ, ಅವನು ಎಲ್ಲಾ ತರದ ಅನ್ಯಾಯಗಳಿಗೆ ತೊಲಗಿ ದೂರವಾಗುತ್ತಾನೆ. ಅನ್ಯಾಯವನ್ನು ಬಿಟ್ಟು ಬಿಡುವದೇ ಕರ್ತನವರ ಒಂದು ಲಕ್ಷಣವಾಗಿದೆ. ಆದರೆ ಜಕ್ಕಾಯನು ಇನ್ನು ಮುಂದೆ ಅನ್ಯಾಯವು ತನ್ನಿಂದಾಗದ ಹಾಗೆ ಮಾತ್ರವಲ್ಲದೆ, ಅಂದಿನ ವರೆಗೂ ತಾನು ಮಾಡಿದ್ದ ಎಲ್ಲಾ ಅನ್ಯಾಯಕ್ಕೂ ಅದರ ಬಾಧೆಗೂ ತಪ್ಪಿಸಿ ಕೊಳ್ಳುವಂತೆ ಸಹ ನೋಡಿಕೋ ಬೇಕು ಎಂದು ಸ್ಥಿರ ಮನಸ್ಸು ಹಿಡಿದನು. ಯೇಸು ಒಡೆಯನನ್ನು ಲಾಭ ಮಾಡಿ ಕೊಂಡವನು ತನ್ನ ಪೂರ್ವೋತ್ತರಗಳೆಲ್ಲವನ್ನು ಇದ್ದ ಹಾಗೆ ನೆಟ್ಟಗೆ ಅರಿತು ಕೊಳ್ಳ ಸಮರ್ಥನಾಗುತ್ತಾನೆ. ತನ್ನಲ್ಲಿಯೂ ಪ್ರಪಂಚದಲ್ಲಿಯೂ ಇಷ್ಟಗೊಂಡು, ಆಸಕ್ತನಾಗಿರುವವನು ತನ್ನನ್ನೂ ತನ್ನದನ್ನೂ ಸರಿಯಾಗಿ ತಿಳಿದು ಕೊಳ್ಳಲಾರದ ಕುರುಡನಷ್ಟೇ. ಜಕ್ಕಾಯನು ತನ್ನನ್ನು ಮುತ್ತಿಗೆ ಹಾಕಿದ ಸೈನ್ಯದಪ್ಪಂದ ಇದ್ದಂಥ ತನ್ನೆಲ್ಲಾ ಅನ್ಯಾಯಗಳನ್ನೂ ಅಪರಾಧಗಳನ್ನೂ ನೋಡಿ, ತಿಳಿದು ಕೊಂಡು, ತಲ್ಲಣಿಸಿ ಕೊಂಡನು. ಮತ್ತು ಕ್ರಿಸ್ತ ಯೇಸುವಿನಲ್ಲಿಟ್ಟ ವಿಶ್ವಾಸವು ಮೊದಲು ಅವನಿಗೆ ಅತಿಪ್ರಿಯವಾಗಿದ್ದ ಅನ್ಯಾಯಗಳಿಗೆ ಕೇವಲ ಪ್ರತಿಕೂಲವೇ ಆದ ನೀತಿಭಾವವನ್ನೂ ಸದ್ಗುಣಗಳನ್ನೂ ಅವನಲ್ಲಿ ಹುಟ್ಟಿಸುವಂಥಾದ್ದಾಯಿತು. ಮೊದಲು ಲೋಭಿಯಾಗಿ ಪರದ್ರವ್ಯಾಪಹಾರಿಯಾಗಿದ್ದವನು ಬಳಿಕ ಪರೋಪಕಾರಿಯಾದನು. ತನ್ನ ಪಾಪಕ್ಕೆ ಪ್ರಾ

ಯಶ್ಚಿತ್ತ ಸಲ್ಲಿಸ ಬೇಕೆಂತಲ್ಲಾ, ಮೊದಲು ತನ್ನಿಷ್ಟಾರ್ಥವಾಗಿದ್ದ ಆಸ್ತಿ ಮೇಲ್ಲೋಕದಲ್ಲಿಯ ಶಾಶ್ವತ ಪದವಿಯನ್ನು ಹುಡುಕಿ ಪಡಕೊಂಡ ತನಗೆ ಇನ್ನು ಇಷ್ಟಾರ್ಥವಾಗಿರದೆ, ಬೇಡವೇ ಬೇಡ ಎಂತಲೂ ತನ್ನ ದ್ರವ್ಯವನ್ನು ಇನ್ನು ಮುಂದೆ ಧರ್ಮಾರ್ಥಕ್ಕೆ ಹಚ್ಚಿ, ಉಪಯೋಗ ಮಾಡ ಬೇಕೆಂತಲೂ ಬಡವರಿಗೆ ದಾನ ಕೊಡುವವನಾದನು; ಹಾಗೂ ಅನ್ಯಾಯವಾಗಿ ತಾನು ಏನಾದರೂ ತಿಂದ ನೆನವು ಆಗುವಲ್ಲಿ ನಾಲ್ಕಷ್ಟು ಬದಲು ಕೊಟ್ಟು, ಅನ್ಯಾಯಕ್ಕೆ ದೂರುತ್ತಿದ್ದ ಮನಸ್ಸಾಕ್ಷಿಯನ್ನು ಸಮಾಧಾನ ಪಡಿಸುವಂತೆ ನೋಡಿದನು. ತೋಡಿದ ಭಾವಿಯನ್ನು ಮಣ್ಣುಮಸಣ ಹಾಕಿ, ತಿರಿಗಿ ತುಂಬಿಸಿ ಬಿಡಲಿಕ್ಕೆ ಕೂಡುವ ಹಾಗೆ, ಮಾಡಿದ ಪಾಪಗಳನ್ನು ಪುಣ್ಯ ಮಾಡಿ ರದ್ದು ಮಾಡಲಿಕ್ಕೆ ಕೂಡದು. ಆದರೆ ಯಾರೊಬ್ಬ ತನ್ನ ತನುಮನಧನಗಳನ್ನು ಎಷ್ಟಕ್ಕೆ ಸ್ವಾಮಿಗೆ ಒಪ್ಪಿಸಿ ಕೊಟ್ಟು, ಅರ್ಪಣೆ ಮಾಡುತ್ತಾ ಬರುತ್ತಾನೋ, ಅಷ್ಟಕ್ಕೆ ಸೈತಾನನ ಉರ್ಲಿಗೂ ಬಲೆಗೂ ತಪ್ಪಿಸಿ ಕೊಂಡು, ತಕ್ಕೊಳ್ಳುವ ಭಾಗ್ಯವನ್ನು ಅಧಿಕವಾಗಿ ಮೀರುವ ಕೊಡೋ ಭಾಗ್ಯವನ್ನು ಹೊಂದುತ್ತಾನೆ. ಜಕ್ಕಾಯನು ಬದಲು ಕೊಡುವದರಲ್ಲಿಯೂ ದಾನಧರ್ಮ ಕೊಡೋದರಲ್ಲಿಯೂ ಪಾಪಗಳನ್ನು ಪರಿಹರಿಸಿ ಕೊಳ್ಳಲಿಲ್ಲಾ, ಆದರೆ ತನ್ನ ಮನಸ್ಸು, ತನ್ನ ಚಾಳಿ ಸಹ, ಬೇರ್ಪಾಟವಾಯಿತೆಂತ ಕಾಣಿಸಿದನು. ತನ್ನದನ್ನು ಕೊಡೋ ಬುದ್ಧಿ, ತನ್ನನ್ನು ಅರ್ಪಣೆ ಮಾಡೋ ಭಕ್ತಿ ಎಷ್ಟುಂಟೋ ಅಷ್ಟು ಆಧಾರ ವಿಶ್ವಾಸವು ನಿಜವೇ ಎಂಬದಕ್ಕೆ ಉಂಟು. ಒಂದು ದುರ್ವ್ಯಸನವನ್ನು, ಪ್ರಿಯವಾದ ಪಾಪಕರ್ಮವನ್ನು ಬಿಟ್ಟು ಬಿಡಲಿಕ್ಕೆ ಉತ್ತಮ ವೈನವೇನೆಂತಲೂ ಈ ಸಂಗತಿಯಿಂದ ತಿಳಿದು ಕೊಳ್ಳಬಹುದು, ಅದೇನಂದರೆ: ಆ ವ್ಯಸನಕ್ಕೂ ಆ ಪಾಪಕ್ಕೂ ಕೇವಲ ವಿರೋಧವಾದ್ದನ್ನೇ ಮಾಡುತ್ತಾ ಕೈಕೊಳ್ಳುತ್ತಾ ಬರುವದು. — ನಿನ್ನ ಮರ್ಯಾದೆಯೂ ಹಾಗಾಗಲಿ!

ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?

ಯೆಹೋವನೇ! ನನ್ನನ್ನು ಪರಿಶೋಧಿಸಿ, ತಿಳಿದು ಕೊಂಡಿದ್ದೀ. ನಿನಗೆ ಗೊತ್ತಾಗದೆ ನಾನು ಕೂತು ಕೊಳ್ಳಲಿಕ್ಕೂ ಏಳಲಿಕ್ಕೂ ಕೂಡದು; ನನ್ನ ಆಲೋಚನೆಗಳನ್ನೂ ಇಂಗಿತಗಳನ್ನೂ ದೂರದಿಂದಲೇ ಗ್ರಹಿಸಿ ಕೊಳ್ಳುತ್ತೀ. ನನ್ನ ಮಾರ್ಗಗಳೂ ಬಗೆಗಳೂ ಯಾವತ್ತು ನಿನಗೆ ಗೊತ್ತಾಗಿವೆ. ನಿನಗೆ ಪೂರ್ಣವಾಗಿ ತಿಳಿಯದ ಮಾತು ನನ್ನ ನಾಲಿಗೆಯಲ್ಲಿ ಒಂದಾದರೂ ಇಲ್ಲಾ. ಹಿಂದೆಯೂ ಮುಂದೆಯೂ ನನ್ನನ್ನು ಇರಿಕಿಸಿ, ನಿನ್ನ ಕೈಯನ್ನು ನನ್ನ ಮೇಲೆ ಇಟ್ಟಿದ್ದೀ. ನಾನು ನಿನ್ನ ಮುಖಕ್ಕೆ ತಪ್ಪಿ ಎಲ್ಲಿಗೆ ಓಡಿ ಹೋಗಲಿ? ನಾನು ಅಂತರಿಕ್ಷಕ್ಕೇರಿ ಹೋದರೆ, ನೀನು ಅಲ್ಲಿ ಇರುತ್ತೀ. ಪಾತಾಳದಲ್ಲಿ ನನ್ನ ಹಾಸಿಗೆಯನ್ನು ಹಾಸಿ ಬಿದ್ದು ಕೊಳ್ಳುತ್ತೇನೆಂದರೆ, ನೀನು ಅಲ್ಲಿಯೂ ಇರುತ್ತೀ. ನಾನು ಅರುಣೋದಯದ ರೆಕ್ಕೆಗಳನ್ನು ತೆಕ್ಕೊಂಡು, ಸಮುದ್ರದ ಕಟ್ಟಕಡೆಗೆ ಹಾರಿ ಇಳುಕೊಳ್ಳುತ್ತೇನಂದರೆ, ಅಲ್ಲಿಯೂ ನಿನ್ನ ಕೈ ನನ್ನನ್ನು ಹಿಡಿಯುವದು. ಕೀರ್ತ. ೧೩೯.

ನಾನು ಹುಟ್ಟಿ, ನನ್ನ ಬಾಲ್ಯಪ್ರಾಯವನ್ನು ಕಳದ ಮನೆಯ ಎದುರಿನಲ್ಲಿ ಒಂದು ಕೆರೆ ಇತ್ತು. ಆ ಕೆರೆಯ ಬದೀಲಿ ಒಬ್ಬ ಕಮ್ಮಾರನ ಮನೆ ಇತ್ತು. ಆ ಕೆರೆಯೂ ಕಮ್ಮಾರನ ಶಾಲೆಯೂ ನನಗೂ ನನ್ನ ಅಣ್ಣ ತಮ್ಮಂದಿಯರಿಗೂ ಬಹಳ ಕುಶಾಲಿಗೆ ಆಸ್ಪದ ಕೊಡುವಂಥಾದ್ದಾಯಿತು. ಹಿಮಕಾಲದ ಛಳಿಗೆ ಕೆರೆ ನೀರಗಡ್ಡೆಯ ಕವಚವನ್ನು ಧರಿಸಿ ಕೊಂಡ ಸಮಯದಲ್ಲಿ ನಾವು ಅದರ ಮೇಲೆ ಜಾರ್‍ಯಾಟ ಮಾಡುತ್ತಿದ್ದೆವು. ಬೇಸಿಗೇ ಕಾಲದಲ್ಲಿ ಪಾರಿವಾಳ ಮೊದಲಾದ ಪಕ್ಷಿಗಳು ಬಂದು, ಕೆರೆಯಲ್ಲಿ ಸ್ನಾನ ಪಾನ ಮಾಡಿ ಹೋಗುತ್ತಿದ್ದವು. ಯಾವಾಗಾದರೊಮ್ಮೆ ಇತರ ಪಕ್ಷಿಗಳ ಜತೆಯಲ್ಲಿ ಬಂದ

ಮರಿಯೊಂದು ನೀರಿನ ಗೊಡವೆ ಚನ್ನಾಗಿ ತಿಳಿಯದೆ ಅದರಲ್ಲಿ ಬಿದ್ದು, ಮುಳಿಗಿ, ಸಾಯುವ ಹಾಗಾದ್ದು ಕಂಡರೆ, ನಾವು ಓಡಿ ಬಂದು, ಅದನ್ನು ನೀರಿಗೆ ತಪ್ಪಿಸಿ, ಅತಿ ಸಂತೋಷ ಪಡುತ್ತಿದ್ದೆವು. ಬೆಳದಿಂಗಳಿದ್ದ ರಾತ್ರೀ ವೇಳೆಯಲ್ಲಿಯೂ ಆ ಕೆರೆ ನಮ್ಮ ದೃಷ್ಟಿಯನ್ನು ಎಳದು ಕೊಂಡು ರಂಜಿಸುತ್ತಿತ್ತು. ಹೊತ್ತು ಮುಳಿಗಿ, ತಿಂಗಳು ಮೂಡದ ಸಾಯಂಕಾಲಗಳಲ್ಲಿ ನಾವು ನಮ್ಮ ಮನೆಯ ಜಗಲೀ ಮೇಲೆ ಕುಳಿತು, ಕಮ್ಮಾರನ ಕುಲುಮೇ ಕಡೆಗೆ ಕಣ್ಣು ಹೊಡದು ನೋಡುತ್ತಿದ್ದೆವು, ಯಾಕಂದರೆ ರಾತ್ರೀ ವೇಳೆಗೆ ಕಮ್ಮಾರನು ಕಬ್ಬಿಣವನ್ನು ಕಾಸಿ, ಅಡ್ಗಣಿಯ ಮೇಲೆ ಬಡಿದರೆ, ಕಿಡಿಗಳು ದಶ (ಹತ್ತು) ದಿಕ್ಕಿಗೆ ಹಾರಿ, ಕತ್ತಲಲ್ಲಿ ಬಹಳ ಪ್ರಕಾಶಮಾನವಾಗಿ ಮಿಂಚುತ್ತಿದ್ದವು. ಅವನು ಬಹಳ ಮೆಹನತುಗಾರನಾಗಿ ಹಗಲೆಲ್ಲಾ ಮಾತ್ರವಲ್ಲದೆ, ರಾತ್ರಿಯಲ್ಲ್ಯಾದರೂ ಸುಮಾರು ಹೊತ್ತು ಕೆಲಸ ಮಾಡುತ್ತಿದ್ದನು. ಅವನನ್ನು ಕೆಲಸದ ವಿಷಯದಲ್ಲಿ ದೂರ ಬೇಕಾದರೆ, ಅವನು ಮಿತಿ ಮಿಾರಿ ಕೆಲಸ ಮಾಡುತ್ತಿದ್ದನೆಂದು ದೂರಲಿಕ್ಕೆ ನ್ಯಾಯವಿರುವದಲ್ಲದೆ, ತಕ್ಕಷ್ಟು ಮಾಡಲಿಲ್ಲವೆಂತ ಎಂದಿಗೂ ದೂರಲಿಕ್ಕೆ ಕೂಡದು. ಹಗಲೆಲ್ಲಾ ಕೈಯಲ್ಲಿದ್ದ ಕೆಲಸಕ್ಕಲ್ಲದೆ ಬೇರೆ ಕಡೆಗೆ ಕಣ್ಣು ಹೋಗಲೀಸದವನು. ಶಿಟ್ಟುಂಟೋ? ಕಬ್ಬಿಣವನ್ನು ಕಂಡ ಕೂಡಲೇ ತಿಂದು ಬಿಡ ಬೇಕೆಂದಿದ್ಧಾನೋ? ಎಂಬ ಹಾಗೆ ಬಿಡದೆ ಗಂಟುಮೋರೆ ಮಾಡಿ, ಕೆಲಸ ಸಾಗಿಸುತ್ತಿದ್ದನು. ಆದರೆ ಅವನು ಎಷ್ಟು ಪ್ರಯಾಸ ಪಟ್ಟು ಕೆಲಸ ಮಾಡಿ ದುಡಿದರೂ, ಏನೂ ಸಾಲಲಿಲ್ಲಾ; ನಿತ್ಯ ಇಳಿಕೆ ಕಂಡದಲ್ಲದೆ, ಏರಿಗೆ ಬಾಳಿಗೆ ಕಾಣಲೊಲ್ಲದು. ಕಮ್ಮಾರನ ಮುಖದಲ್ಲಿ ಹ್ಯಾಗೋ ಹಾಗೆ ಮನೆಯಲ್ಲಿಯೂ ಸಂತೋಷದ ಒಂದು ಸುಳುಹಾದರೂ ಇದ್ದಿಲ್ಲಾ, ಸಮಾಧಾನದ ವ್ಯಾಪ್ತಿಯಾಗಲಿ ಸುಖದ ವಾಸನೆಯಾಗಲಿ ಕಾಣಲೇ ಇಲ್ಲಾ. ಅವನಿಗೂ ಅವನ ಹೆಂಡತಿಗೂ ಒಕ್ಕಟ್ಟಾಗಲಿ ಶೇರಿಕೆಯಾಗಲಿ ಇಲ್ಲವೇ ಇಲ್ಲಾ. ಅವನಿಗಾಗುವಂಥಾದ್ದು ಅವಳಿಗಾಗದ್ದು; ಅವಳು — ಬೇಕು! ಅಂದರೆ, ಅವನು—ಬೇಡ! ಅನ್ನುವನು. ಅವರೊಳಗಣ ಈ ಭೇದಬುದ್ಧಿ ಮಕ್ಕಳಿಗೂ ಬಹು ಕೇಡು, ಯಾಕಂದರೆ ತಂದೆಯನ್ನು ನೋಡಲೋ? ತಾಯಿಯನ್ನು ನೋಡಲೋ? ಎಂದಿರುವಷ್ಟರೊಳಗೆ ಹುಡುಗರು ಇಬ್ಬರ ಮಾತನ್ನು ಉಲ್ಲಂಘನ ಮಾಡುವವರಾಗಿ, ಮಮತೆ ವಿಧೇಯತೆ ದಾಕ್ಷಿಣ್ಯ ಮೊದಲಾದ ಗುಣಗಳೆಲ್ಲವನ್ನು ಕಳಕೊಂಡು, ದುರುಳತನ ಕಳ್ಳತನ ಇತ್ಯಾದಿಗಳಲ್ಲಿ ಬಿದ್ದು, ನೀತಿಗೇಡಿಗಳಾದರು. ಸುಶಿಕ್ಷೆ ಎಂಬದರ ವಾಸನೆಯಾದರೂ ಆ ಮನೆಯಲ್ಲಿ ಇದ್ದಿಲ್ಲಾ. ಗಂಡನು ಹೆಂಡತಿಗೆ—ರಂಡೇ! ಎಂದು ಬೈದರೆ, ಅವಳು—ರಂಡೇ ಗಂಡಾ! ಎಂದು ಪ್ರತಿಗೆ ಪ್ರತಿ ಬೈಯುವಳು. ಅನೇಕ ಸರ್ತಿ ಅವನು ಒಂದು ಬೈದದಕ್ಕೆ ಅವಳು ನಾಲ್ಕು ಬೈಯುವಳು. ಆಗ ಅವನು ಶಿಟ್ಟೇರಿ, ಮೂರು ನಾಲ್ಕು ದೆಬ್ಬಲು ಹೊಡೆಯುವನು. ಗುಡುಗಿನ ಹಿಂದೆ ಭೋರ್ಮಳೆ ಹ್ಯಾಗೋ ಹಾಗೆಯೇ ಅವನು ಹೊಡದ ಪೆಟ್ಟಿನ ಹಿಂದೆ ದೊಡ್ಡ ಬೊಬ್ಬೆಯೂ ಬೈಗಳೂ ಒಂದು ಹುಚ್ಚು ಮಳೆಯೋಪಾದಿಯಾಗಿ ಹೊಯ್ಯುವದು. ಮಾವಿನ ಮರದ ಹೂವಿಗೆ ಮೋಡವು ಹ್ಯಾಗೋ ಹಾಗೆಯೇ ಹೆತ್ತವರು ಇಟ್ಟ ಮಾದರಿ ಮಕ್ಕಳ ನೀತಿಗೂ ಮರ್ಯಾದೆಗೂ ಕೇಡಾಯಿತು. ಹೆಚ್ಚಿನ ತಪ್ಪು ಕಮ್ಮಾರತಿಯಲ್ಲಿತ್ತೆಂಬದಕ್ಕೆ ಸಂದೇಹವಿಲ್ಲಾ, ಯಾಕಂದರೆ ಗಂಡನು ಬಹು ಪರಿಶ್ರಮ ತಾಳಿ, ಪ್ರಯಾಸ ಪಟ್ಟು, ದುಡಿದು ಕೊಂಡ ಹಣವನ್ನು ಅವಳು ತಕ್ಕಂತೆ ಎಣಿಸದೆ, ಗಂಟು ಹಾಕಿ ಏನಾದರೂ ಉಳಿಸುವ ಬುದ್ಧಿ ಇಲ್ಲದೆ, ಬಂದಂತೆ ಖರ್ಚುವೆಚ್ಚ ಮಾಡಿ ಬಿಡುತ್ತಾ ಬಂದಳು. ಅದಲ್ಲದೆ ಹುಡುಗರನ್ನು ತಕ್ಕ ಕೆಲಸಕ್ಕೆ ಹಚ್ಚಿ, ಮರ್ಯಾದೆಗೂ ನೀತಿಗೂ ಸುಕ್ರಮದಲ್ಲಿ ನಡಿಸುವ ವಿವೇಕವು ಅವಳಲ್ಲಿ ಕಿಂಚಿತ್ತಾದರೂ ಇದ್ದಿಲ್ಲಾ. ಹೀಗೆ ಗಂಡನ ಮನಸ್ಸು ಒಡದು ಹೋಗಿ, ಕಹಿಯಾಗಿರಲಿಕ್ಕೆ ಹೆಂಡತಿ ಬಹಳ ಕಾರಣ ಕೊಡುತ್ತಿದ್ದಳು. ಆದರೆ ಗಂಡನ ಮನಸ್ಸು ಯಾವಾಗಲೂ ಒಡದು ಹೋಗಿ ಕಹಿಯಾಗಿರಲಿಕ್ಕೆ ಹೆಂಡತಿಯ ಅವಗುಣಗಳು ಒಂದೇ ಕಾರಣವಾಗಿದ್ದವೆಂತ

ಹೇಳಲಿಕ್ಕಾಗದು: ಅವನಲ್ಲಿಯೂ ಕಾರಣವಿತ್ತು, ಮುಖ್ಯ ಕಾರಣ ಅವನೇ ಎಂಧೇಳ ಬೇಕು. ಅವನ ಹೃತ್ಕಮಲಕ್ಕೆ ಸಮಾಧಾನವೆಂಬ ನೀರು ಇಲ್ಲದೆ ಹೋಗಿತ್ತು. ಅದ್ಗಣಿಯಾದರೂ ಸುತ್ತಿಗೆಯ ಪೆಟ್ಟಿನಿಂದ ಪುಡಿಪುಡಿಯಾಗಿ ಹೋಗ ಬೇಕೋ? ಎಂಬ ಹಾಗೆ ಕಾಣುವಷ್ಟು ಜೋರಿನಿಂದಲೂ ಶಿಟ್ಟಿನಿಂದಲೂ ಅವನು ಬಡಿದು ಬಡಿದು, ಕೆಲಸ ಮಾಡುತ್ತಿದ್ದದು ಅವನ ಮನಸ್ಸಿಗೆ ಹಿಡಿದು ಹೋಗಿದ್ದ ಅಂಧಕಾರವ್ಯಾಪ್ತೀ ಬಲದಿಂದಲೇ ಆಯಿತು. ಒಂದು ಶಾಪ ಅವನ ಮೇಲೆ ಇತ್ತು, ಅಂದರೆ ಸುಳ್ಳು ಪ್ರಮಾಣ ಮಾಡಿದ ಪಾಪವು ಅವನಿಗೆ ನಿತ್ಯ ಬಾಧೆ ಕೊಡುವಂಥಾದ್ದಾಗಿತ್ತು. "ಪಾಪದಲ್ಲಿ ತಾಪ ತಪ್ಪದು." ಅವನು ಒಬ್ಬ ಹಳ್ಳಿಯವನಿಗೆ ಒಂದು ಹಸು ನಾಲ್ಕುವರೆ ವರಹಕ್ಕೆ ಮಾರಿ ಕೊಟ್ಟಿದ್ದನು. ಆ ಹಳ್ಳಿಯವನು ಆ ಕ್ರಯವನ್ನು ಸಲ್ಲಿಸಿ ಕೊಟ್ಟಾಗ್ಯೂ, ಈ ಕಮ್ಮಾರನು ಹಣವು ತನಗೆ ಸಂದಾಯವಾಗಲಿಲ್ಲವೆಂತ ಕೈಫೇತು ಹಾಕಿ, ಸುಳ್ಳು ಪ್ರಮಾಣ ಮಾಡಿ, ಕ್ರಯವನ್ನು ಎರಡಾವರ್ತಿ ಈಸಿ ಕೊಂಡಿದ್ದನು. ಇದೇ ಅನ್ಯಾಯದ ಲಾಭದಲ್ಲಿ ಅವನ ಸುಖ ಸಮಾಧಾನ ಪರಿಣಾಮಗಳು ಪೂರ್ಣವಾಗಿ ಮುಳುಗಿ, ನಷ್ಟವಾಗಿ ಹೋಗಿದ್ದವು. ಆ ಸುಳ್ಳು ಪ್ರಮಾಣದಿಂದ ತಾನೇ ತನಗೆ ಹೊಡಿಸಿ ಕೊಂಡ ಪೆಟ್ಟಿನಿಂದ ಅವನು ಒಂದು ಒಡಕು ಡೋಣಿಯಂತಾಗಿದ್ದನು. ಸುಳ್ಳು ಪ್ರಮಾಣ ಮಾಡಿದಂದಿನಿಂದ ಅವನು ಸರ್ವಜ್ಞನಾದ ದೇವರ ಕಡೆಗೆ ಕಣ್ಣೆತ್ತಿ ಪ್ರಾರ್ಥಿಸ ಧೈರ್ಯಗೆಟ್ಟಿದ್ದನು. ದೇವರಿಗೆ ತಪ್ಪಿಸಿ ಕೊಂಡು ಅಡಗಿ ಕೊಳ್ಳಲಿಕ್ಕೆ ಮಾರ್ಗ ಕಂಡದಾದರೆ, ಅಡಗಿ ಕೊಳ್ಳುತ್ತಿದ್ದನು. ರಾತ್ರಿ ರಾತ್ರಿಗೆ ಸ್ವಪ್ನಗಳಲ್ಲಿ ಮಾತ್ರವಲ್ಲದೆ ಹಗಲಲ್ಲೂ ಕೆಲಸದಲ್ಲಾದ್ಯರೂ ಭಯವು ಅವನಿಗೆ ಒಂದು ಭೂತಾವೇಶದಂತೆ ಹಿಡಿದು ಹೋಗುತ್ತಿತ್ತು. ಹೀಗೆ ಭಯಭ್ರಾಂತನಾಗಿ ಹೋದ ಹೊತ್ತಿನಲ್ಲಿ ಹುಚ್ಚು ಹಿಡಿಯಿತೋ? ಕಿಡಿಗಳು ಮಾಡಿಗೆ ಹಾರ ಬೇಕೋ? ಅದ್ಗಣಿ ಪುಡಿಯಾಗಿ ಹೋಗ ಬೇಕೋ? ಏನೋ? ಎಂಬ ಹಾಗೆ ಕಬ್ಬಿಣದ ಪಾಳಗಳನ್ನು ಕಾಸಿ, ಬಡಿದು, ಕೆಲಸ ಮಾಡುತ್ತಿದ್ದನು. ಆದರೆ ಅವನ ತೋಳು ಬಡಿತದ ಜೋರಿಗೆ ಕಾದ ಕಬ್ಬಿಣವು ಕಾರಿದ ಕಿಡಿಗಳು ಹೆಚ್ಚಿ ಹಾರಿದಷ್ಟಕ್ಕೆ ಅವನ ಗುಂಡಿಗೆಬಡಿತವೂ ಜೋರಾಗಿ, ಎದೆ ಹಾರುವಂಥಾದ್ದಾಗುತ್ತಿತ್ತು.

ಅದಲ್ಲದೆ ಮೊದಲು ಕುಡಿಯಲರಿಯದವನು ತನ್ನ ಮನಸ್ತಾಪವನ್ನು ಆರಿಸಿ, ವ್ಯಸನವನ್ನು ಶಮನ ಪಡಿಸಲಿಕ್ಕಾದೀತು ಎಂದು ಸಾರಾಯಿಯಂಗಡಿಗೆ ಹೋಗುವವನಾದನು. ಆದರೆ ಸಾರಾಯಿಯ ಮರೆ ಹೊಕ್ಕು ಕುಡಿಯುತ್ತಾ ಬಂದಷ್ಟಕ್ಕೆ ಮನೋವ್ಯಸನವು ಹೆಚ್ಚುತ್ತಾ ಬಂತು. ಆ ಅನ್ಯಾಯದ ಹಣಕ್ಕೆ ಅವನು ಕೊಂಡು ಕೊಂಡ ಕಬ್ಬಿಣದ ಪಾಳಗಳನ್ನು ಕಾಸಿ ಬಡಿಯುತ್ತಿದ್ದ ಸಮಯದಲ್ಲಿ ವಿಶೇಷವಾಗಿ ಮನಸ್ಸಾಕ್ಷಿಯ ದೂರುಗಳೂ ಪೀಡೆಗಳೂ ಬಹಳವಾದವು. ಯಮದೂತರು ಬಂದು, ತನ್ನನ್ನು ಹಿಡಿದು, ತಕ್ಕೊಂಡು ಹೋಗಿ, ನರಕಾಗ್ನಿಯಲ್ಲಿ ದೊಬ್ಬಿ ಬಿಡುವ ಹಾಗೆ ಅವನು ಸ್ವಪ್ನದಲ್ಲಿ ಕಂಡು, ನರಕಯಾತನೆ ಎಂಬದನ್ನು ಒಂದಿಷ್ಟು ಅನುಭವ ಮಾಡ ಬೇಕಾಯಿತು. ಹೀಗೆ ಜೀವವು ಅವನಿಗೆ ಕಡು ಬೇಸರದ ಸಂಗತಿಯಾಗಿ ಹೋಯಿತು. ಆದರೂ ಮರಣಕ್ಕೂ ಅಂಜಿ ಕೊಂಡನು. ಮನುಷ್ಯನು ಮರ್ಯಾದೆಗೂ ಅನ್ನಕ್ಕೂ ಪೇಚಾಡುತ್ತಿದ್ದಾನೆ; ನಾನು ಎಷ್ಟೋ ಪೇಚಾಟ ಮಾಡಿದರೂ, ಹೊಟ್ಟೆಗೆ ಸಾಲುವದಿಲ್ಲಾ, ಮರ್ಯಾದೆಯೂ ಸುಖವೂ ಅಂತೂ ಇಲ್ಲಾ. ನಾನು ಬದುಕುವದು ಯಾತಕ್ಕೆ? ಉರ್ಲು ಹಾಕಿ ಕೊಂಡು ಹೋದರಾಯಿತು ಎಂತ ಅಂದುಕೊಳ್ಳಲಿಕ್ಕೆ ಅವನಲ್ಲಿ ಸಾವಿಗೆ ಇದ್ದ ಅಂಜಿಕೆ ಬಿಡಲಿಲ್ಲಾ. ಹೀಗೆ ಪೂರ್ಣವಾಗಿ ಕಂಗೆಟ್ಟು ಹೋದವನು ತನ್ನ ಅರಿಷ್ಟ ಸ್ಥಿತಿಗೆ ತಾನು ಹ್ಯಾಗೆ ಮಾಡಿ ತಪ್ಪಿಸಿ ಕೊಳ್ಳಲಿ? ಎಂಬುವ ವಿಷಯದಲ್ಲಿ ಬಹಳ ಯೋಚನೆ ಮಾಡುವವನಾದನು. ಕಡೆಗೆ ತಾನು ಎದ್ದು, ಅಮೇರಿಕಕ್ಕೆ ಓಡಿ ಹೋಗ ಬೇಕು, ದೇಶಾಂತರದಿಂದ ತನ್ನವಸ್ಥೆ ಲೇಸಾದೀತು ಎಂಬ ಯೋಚನೆ ಅವನಲ್ಲಿ ನೆಲೆಗೊಂಡಿತು. "ಆಚೇ ಬೀ

ದಿಯಲ್ಲಿ ಅಪಮಾನವಾದರೆ, ಈಚೇ ಬೀದಿಯಲ್ಲಿ ಹೊಸ ಆಳು" ಎಂಬ ಗಾದೆಯುಂಟಲ್ಲಾ! ವಿಲಾ
ಯತಿಯಲ್ಲಿ ಹುಟ್ಟಿ, ಏನಾದರೂ ಕಳ್ಳತನ ಅಥವಾ ತಕ್ಷೀರು ಮಾಡಿ, ಮಣ್ಣು ಹೊರುವ ಪುಣ್ಯಕ್ಕೆ
ಪಾತ್ರರಾಗಿ, ಅಥವಾ ದಿವಾಳಿ ತೆಗೆದು, ಅಥವಾ ಇನ್ನೊಂದು ಪ್ರಕಾರವಾಗಿ ಸ್ವರೂಪವನ್ನು ಕೆಡಿಸಿ
ಕೊಂಡು, ಅನೇಕರು ಅಮೇರಿಕಕ್ಕೆ ತಪ್ಪಿಸಿ ಕೊಂಡು, ಅಲ್ಲಿ ಪ್ರಯತ್ನಿಸಿ, ತಕ್ಕ ಮಟ್ಟಿನ ಸ್ಥಿತಿಯನ್ನೂ
ಮರ್ಯಾದೆಯನ್ನೂ ಪಡಕೊಂಡ ಹಾಗೆ ತಾನು ಸಹ ಅಲ್ಲಿಗೆ ಹೋಗಿ, ಸಮುದ್ರವನ್ನು ದಾಟುವ
ಸಮಯದಲ್ಲಿ ತನ್ನ ಪೂರ್ವಚರಿತ್ರವನ್ನೂ ತನ್ನೆಲ್ಲಾ ಚಿಂತಾಪಂಕವನ್ನೂ ಸಮುದ್ರದಲ್ಲಿ ಬಿಸಾಡಿ
ಬಿಟ್ಟು, ಅಮೇರಿಕದಲ್ಲಿ ಕೇವಲ ಹೊಸಬನಾಗಿ ಮರ್ಯಾದೆಗೂ ಅನ್ನಕ್ಕೂ ಪ್ರಯತ್ನ ಮಾಡ
ಬಹುದು ಎಂಬ ಯೋಚನೆಯಲ್ಲಿ ಅವನ ಮನಸ್ಸಿಗೆ ಒಂದಿಷ್ಟು ಸಮಾಧಾನವಾಯಿತು.

ಆದರೆ ದೇಶಾಂತರವು ಅವನ ಮನಸ್ಸಿಗೆ ಒಪ್ಪಾದ ಕೂಡಲೇ ಒಂದು ಚಿಂತೆ ಸಹ ಅದಕ್ಕೆ ಹಿಡಿ
ಯಿತು, ಏನಂದರೆ: ಅಂಥಾ ದೊಡ್ಡ ಪ್ರಯಾಣಕ್ಕೆ ಸುಮಾರು ಹಣ ಬೇಕಲ್ಲಾ! ಈ ಬಗ್ಯೆ ಹಣ
ಒದಗಿಸಿ ಕೊಳ್ಳುವದು ಹ್ಯಾಗೆ? ಅವನು ಈ ವಿಷಯದಲ್ಲಿ ಯೋಚನೆ ಮಾಡುವಲ್ಲಿ, ತನ್ನೊಬ್ಬನಿಗೆ
ಬೇಕಾದಷ್ಟು ಮಾಡಿ ಕೊಳ್ಳ ಬಹುದು, ಆದರೆ ತನ್ನ ಕುಟುಂಬವನ್ನು ಸಹ ಕರಕೊಂಡು ಹೋಗ
ಲಿಕ್ಕೆ ಸಾಲದು ಎಂದು ತಿಳಿದು, ಹಾಗಾದರೆ ಹೆಂಡತಿಯನ್ನೂ ಮಕ್ಕಳನ್ನೂ ಬಿಟ್ಟು ಹೋಗಲೋ?
ಎಂಬುವ ಪ್ರಶ್ನೆ ಸಹ ಅವನು ಬಗೆಹರಿಸ ಬೇಕಾಯಿತು. ಆದರೆ ಅದನ್ನು ಬಗೆಹರಿಸಲಿಕ್ಕೆ ಬಹಳ
ಸಮಯವಾಗಲೀ ಚಿಂತನೆಯಾಗಲೀ ಬೇಕಾಗಲಿಲ್ಲಾ; ಲಘು ಮನಸ್ಸಾಗಿ ಅವರನ್ನು ಬಿಟ್ಟು ಹೋ
ಗುತ್ತೇನೆ ಎಂತ ನಿಷ್ಕರ್ಷೆ ಮಾಡಿ ಕೊಂಡನು; ಯಾಕಂದರೆ ಅವರು ತನಗ್ಯಾತಕ್ಕೆ? ಅವರ ರಗಳೆ
ಸಾಕೇ ಸಾಕು; "ಸೋರುವ ಮನೆಯನ್ನೂ ಹೋರುವ ಹೆಂಡತಿಯನ್ನೂ ದೂರ ಬಿಡ ಬೇಕು."
ತಾನು ಹೋದ ಮೇಲೆ ತನ್ನ ಹೆಂಡತಿಗೆ ಬಹಳ ಕಷ್ಟ ಬಿದ್ದೀತು; ಆದರೂ ಚಿಂತಿಲ್ಲಾ, ಬೀಳಲಿ! ಈ
ರಂಡೆ ಕಷ್ಟದಲ್ಲಿ ಮುಳಿಗಿ, ತನಗೆ ಕೊಟ್ಟ ದುಃಖವನ್ನು ತಿಳಿಯ ಬೇಕು; ತನ್ನ ಮಕ್ಕಳು ತನ್ನ ಮ
ಕ್ಕಳೇ, ಹೌದು, ಆದರೂ ತಾನು ಅವರನ್ನು ಹ್ಯಾಗೂ ಬದುಕಿಸಲಾರದವ; ಅವರು ಬದುಕಿದರೆ,
ಬದುಕ್ಯಾರು; ಸತ್ತರೆ, ಸತ್ತಾರು ಎಂಬದಾಗಿ ಅಂದು ಕೊಂಡು, ಹೆಂಡತಿಗೂ ಯಾರಿಗೂ ತಿಳಿಯದೆ
ದೇಶಾಂತರಕ್ಕೆ ಸೌರಣೆ ಮಾಡುತ್ತಾ ಬಂದನು. ಕಡೆಗೆ ಈಗ ತಕ್ಕಷ್ಟು ಗಂಟು ತನ್ನ ಕೈಯಲ್ಲಿ
ಇದ್ದೀತು ಎಂದು ಕಂಡಾಗ, ಅವನು ಒಂದಾನೊಂದು ದಿನದ ಮುಂಜಾವಿಗೆ ಯಾರಿಗೂ ಸುದ್ದಿ
ಇಲ್ಲದೆ ಎದ್ದು, ಮನೆಗೂ ಊರಿಗೂ ಬೆನ್ನು ಹಾಕಿ ಹೋದನು. ಹೊರಟು, ಊರಿಗೆ ಒಂದು ಕೂ
ಗಳತೆ ದೂರವಾಗಿ ಹೋದಾಗ, ಹೊಲದಲ್ಲಿ ಸೊಪ್ಪು ಕಾಯಿಪಲ್ಯಗಳನ್ನು ಕಾಯುತ್ತಿದ್ದ ಒಬ್ಬ
ಪೋರನನ್ನು ಕಂಡು, ಅವನಿಗೆ ಕರೆದು, "ನನ್ನ ಹೆಣ್ಣು ನೀನು ಈಹೊತ್ತು ಕಂಡರೆ, ನಿನ್ನ ಗಂಡ ಅ
ಮೇರಿಕಕ್ಕೆ ಹೊರಟಾ ಎಂದು ಅವಳಿಗೆ ಹೇಳು" ಎಂಥೇಳಿ ನಡೆದನು. ಆ ಪೋರನು ಅಮೇರಿಕವಂ
ದರೇನು? ಅದು ಒಂದು ಪಟ್ಣವೋ? ಹಳ್ಳಿಯೋ? ಏನೋ? ಎಂತ ತಿಳಿಯದೆ, ಅವನ ಮಾತಿಗೆ
ಹೆಚ್ಚು ಲಕ್ಷ್ಯವಿಡದೆ, ಅವನ ಹೆಂಡತಿಯನ್ನು ಕಂಡಲ್ಲಿ ಆ ಮಾತನ್ನು ಹೇಳಿ ತಿಳಿಸಿದನು.

ತನ್ನೂರಿಗೆ ಎಷ್ಟು ದೂರವಾಗುತ್ತಾ ಹೋದನೋ, ಅಷ್ಟು ಶಾಂತಿ ತನ್ನ ಮನಸ್ಸಿಗೆ ಆಗುತ್ತಾ
ಬರುತ್ತದೆಂದು ಭಾವಿಸಿ ಕೊಳ್ಳುತ್ತಾ ಅವನು ಹೆಜ್ಜೇ ಮೇಲೆ ಹೆಜ್ಜೆ ಹಾಕುತ್ತಾ ನಡೆದನು. ಆದರೆ
ಮೂರು ನಾಲ್ಕು ಹರದಾರಿ ನಡೆದು ಹೋದಲ್ಲಿ ಇನ್ನೊಬ್ಬ ಹಾದಿಗಾರನು ಅವನಿಗೆ ಕಲತು, "ನಿನ್ನ
ದಾರಿ ಎಲ್ಲಿಂದ? ಎಲ್ಲಿಗೆ?" ಎಂದು ಕೇಳಿದ್ದಕ್ಕೆ, ಬೂದಿಯಲ್ಲಿ ಅಡಗಿದ ಉರಿಕೆಂಡಕ್ಕೆ ಘಾಳಿ ಬೀಸಿ ತಾ
ಗಿದಂತಾಯಿತು; ಅವನ ಮನಸ್ಸಿನ ಅಡಿಯಲ್ಲಿ ಆರದ ಬೆಂಕಿಯಂತೆಯೂ ಸಾಯದ ಕೀಟದಂತೆಯೂ
ಇದ್ದ ವ್ಯಥೆ ತಿರಿಗಿ ಎದ್ದು, ಬಹು ಬಾಧೆ ಕೊಡುವಂಥಾದ್ದಾಯಿತು. (ಮುಂದೆ ಸಾಗಿಸಲ್ಪಡುವದು.)

ಕನ್ನಡ ಜಿಲ್ಲಾ ಮಿಶ್ಯನ್ ಹಬ್ಬವು.

೧೮೭೭ನೇ ನವಂಬರ್ ೧೩ರಲ್ಲು ಬೆಳಿಗ್ಯೆ ಕಾರ್ಕ್ಳದ ಘನ ಹರ್ಟ್‌ಮನ್ ಅಯ್ಯನವರು ಹೊಶೇಯ ೧೩, ೯. ಓದಿ, ಅದರ ಮೇಲೆ ಬೋಧಿಸಿದ ವಿವರ—“ಇಸ್ರಯೇಲೇ, ನಿನ್ನನ್ನು ನೀನೇ ಕೆಡಿಸಿ ಕೊಂಡಿದ್ದೀ; ಆದರೆ ನನ್ನಲ್ಲಿ ನಿನಗೆ ಸಹಾಯುಗಳುಂಟು ಎಂಬ ಈ ವಚನ ಕೆಲವು ವರುಷ ಕ್ರೈಸ್ತರ ಮಧ್ಯದಲ್ಲಿದ್ದು, ಅವರ ಸ್ಥಿತಿಯನ್ನು ತಿಳಿದವನಾದ ನನಗೆ ನೆನಪಿಗೆ ಬಂತು. ನಮ್ಮ ಶಾಲೆಗಳಲ್ಲಿ ಬೋಧನೆ ಹೊಂದಿ, ಕಲಿತ ಯೌವನಸ್ಥರು ಎಷ್ಟೋ ಮಂದಿ ಪರಸ್ಥಳಕ್ಕೆ ಹೋಗಿ, ಸಭೆಗೂ ಬೋಧಕರಿಗೂ ದೂರವಾಗಿ, ಮನಸೋಇಷ್ಟ ನಡಕೊಳ್ಳುವವರಾದರೆ, ತಮ್ಮನ್ನು ತಾವೇ ಕೆಡಿಸಿ ಕೊಳ್ಳುವರಲ್ಲವೋ? ಸಭೆಯಲ್ಲೇ ದೇವರ ದಯೆಯಿಂದ ಬೇಕಾದ್ದೆಲ್ಲಾ ಹೊಂದಿ ಕೊಂಡು ಇರ ಬಹುದಿತ್ತಲ್ಲಾ. ಆದರೆ ಈ ಕೂಟದಲ್ಲಿ ಇರುವವರಲ್ಲಿಯೂ ಕೆಡುವಿಕೆ ಉಂಟು. ಹೆಚ್ಚಾದವರು ಹಣದಲ್ಲಿ ಮುಖ್ಯವಾದ ಸಹಾಯು ಹುಡುಕುತ್ತಾರೆ. ಮಕ್ಕಳಿಗೆ ದೊಡ್ಡ ಸಂಬಳವಾಗ ಬೇಕೆಂತ ಲೌಕೀಕ ವಿದ್ಯಾಭ್ಯಾಸ ಮಾಡಿಸುತ್ತಾರೆ. ತಾವೂ ಹೆಚ್ಚಿನ ಸಂಬಳಕ್ಕಾಗಿ ಅಲ್ಲಲ್ಲಿ ಸಂಚರಿಸುತ್ತಾರೆ. ಹಣದ ಮೇಲೆ ಭರವಸವಿಡುವವನು ದೇವರ ಸಹಾಯು ಹುಡುಕುವವನಲ್ಲಾ. ಮಗನೇ! ನಿನ್ನನ್ನು ನೀನೇ ಕೆಡಿಸಿ ಕೊಂಡಿ, ನನ್ನಲ್ಲಿ ನಿನಗೆ ಸಹಾಯು ಉಂಟೆಂದು ಕರ್ತನು ಈಗಲೂ ಕರಿಯುತ್ತಾನೆ.”

ಆ ಮೇಲೆ ಉಪದೇಶಿ ಎಲಿಯೇಸರಯ್ಯನವರು ಕೀರ್ತನೆ ಓದಿ ಪ್ರಾರ್ಥನೆ ಮಾಡಿದರು. ಬಳಿಕ ಮೇಲಶಾಲೆಯಲ್ಲಿ ತೇರ್ಗಡೆ ಪಟ್ಟ ಇಬ್ಬರಿಗೆ ಉಪದೇಶಿ ಉದ್ಯೋಗ ಪ್ರತಿಷ್ಠೆ ಆಗುವಂಥಾದ್ದು ಇದ್ದದರಿಂದ ಘನ ಗ್ರೇಟರ್ ಅಯ್ಯನವರು ೧ ತಿಮೋ. ೨, ೧—೧೩. ಓದಿ, ಬೋಧಿಸಿದ ವಿವರ—“ಪಾಲನು ತನ್ನ ತಿಮೊಥೆಯನ ವಿಷಯದಲ್ಲಿ ಬಹಳ ಎಚ್ಚರಿಕೆಯುಳ್ಳವನಾಗಿದ್ದು, ಈ ಪತ್ರಿಕೆಯಲ್ಲಿ ಸ್ವಲ್ಪ ಕಠಿಣವಾಗಿ ಮಾತಾಡುತ್ತಾನೆ. ಸಭಾಸೇವಕರಿಂದ ದೇವರ ರಾಜ್ಯದ ಸೇವೆಯಲ್ಲಿ ಎಷ್ಟೋ ತಪ್ಪುಗಳು ಶೇರಿ ಹೋಗುತ್ತವೆ; ಆದ್ದರಿಂದ ಈ ಸೇವೆಯಲ್ಲಿ ಒಬ್ಬನನ್ನು ಶೇರಿಸಲಿಕ್ಕೆ ಬಹಳ ಅಂಜಿಕೆಯಾಗುತ್ತದೆ. ಇಲ್ಲಿ ನಿಂತ ಇಬ್ಬರು ಸಾರುವ ವಾಕ್ಯದಿಂದ ದೇವರಿಗೆ ಮಾನ ಬರುವದೋ? ಅಪಮಾನ ಬರುವದೋ? ನಿಮ್ಮ ದೆಶೆಯಿಂದ ದೇವರ ಹೆಸರು ಜನಾಂಗಗಳಲ್ಲಿ ದೂಷಿಸಲ್ಪಡುತ್ತದೆಂತಾ ಹೇಳ ಬೇಕಾದೀತೋ? ಅನೇಕರು ಬೋಧಕರ ನಡತೆ ನೋಡುತ್ತಾರೆ, ಅದು ಸರಿಯಾಗಿದ್ದರೆ, ದೇವರ ವಾಕ್ಯವನ್ನು ಓದಲಿಕ್ಕೆ ಮನಸ್ಸು ಮಾಡುವರು. ನಿನ್ನ ನಡತೆಯಿಂದಲೂ ನೀನು ವಾಕ್ಯವನ್ನು ಸಾರುವವನಲ್ಲದಿದ್ದರೆ, ನಿನ್ನಿಂದ ದೇವರಿಗೆ ದೂಷಣೆ ಬಂದಂತಾಯಿತು. ಇವರು ಆಸಕ್ತಿಯಿಂದ ಕೆಲಸ ಮಾಡಿ, ಜನರನ್ನು ಮರಣದೊಳಗಿಂದ ಜೀವಕ್ಕೆ ದಾಟಿಸುವದಕ್ಕೆ ಇವರಿಗೆ ಮನಸ್ಸು ಇದ್ದೀತೋ? ನನ್ನ ಯತ್ನದ ಮೂಲವಾಗಿ ಎಷ್ಟು ಮಂದಿ ಮರಣದಿಂದ ಜೀವಕ್ಕೆ ದಾಟಿ ಬಂದರೆಂದು ಈ ವರೆಗೆ ಕೆಲಸದಲ್ಲಿದ್ದವರು ತಮ್ಮನ್ನೆ ಕೇಳಲಿ. ‘ಕ್ರಿಸ್ತ ಯೇಸುವಿನಲ್ಲಿರುವ ಕೃಪೆಯಲ್ಲಿ ಬಲಗೊಳ್ಳು.’ ಇದು ರೂಢಿಯೋ? ಶರೀರದ ಬೆಳಿಯುವಿಕೆ ಕಂಡು ಬರುತ್ತದೆ. ಆತ್ಮದ ಸ್ಥಿತಿ ಹ್ಯಾಗೆ? ದೇವರು ನಿನ್ನ ಹೃದಯದಲ್ಲಿ ಬಿತ್ತಿದ ಪ್ರಿಯವಾದ ಬೀಜದಲ್ಲಿ ಬಲಗೊಳ್ಳು, ಹೆಚ್ಚಾಗು! ‘ಯೇಸು ಕ್ರಿಸ್ತನನ್ನು ಜ್ಞಾಪಕ ಮಾಡಿ ಕೊಳ್ಳುವದು’ ಬಲಗೊಳ್ಳುವದಕ್ಕೆ ಉಪಾಯವಾಗಿದೆ. ‘ಶ್ರಮೆ ತಾಳಿಕೋ!’ ಯಾವ ದಂಡಿನವನಾದರೂ ತನ್ನನ್ನು ದಂಡಿನಲ್ಲಿ ಶೇರಿಸಿದವನನ್ನು ಮೆಚ್ಚಿಸುವ ಹಾಗೆ ಜೀವನದ ಕೆಲಸಗಳಲ್ಲಿ ಶಿಕ್ಕಿ ಕೊಳ್ಳುವದಿಲ್ಲಾ. ‘ಕರ್ತನ ದಂಡಿನಲ್ಲಿ ಶೇರಿದ ಮೇಲೆ ಅವನ ಚಿತ್ತವನ್ನೇ ಮಾಡಿ, ಅವನು ಅಪ್ಪಣೆ ಕೊಡುವಲ್ಲಿ ಹೋಗ ಬೇಕು.’ ನೇಮದ ಪ್ರಕಾರ ಯುದ್ಧ ಮಾಡದಿದ್ದರೆ, ಕಿರೀಟ ಹೊಂದನು. ‘ಮನುಷ್ಯರನ್ನು ಜೀವಕ್ಕೆ ಕರಿಯಲಿಕ್ಕೆ ಕಷ್ಟ ಮಾಡಿದರೆ, ನಿಮಗೂ

ಫಲ ಶಿಕ್ಕುವದು." ತರುವಾಯ ಉದ್ಯೋಗಪ್ರತಿಷ್ಠೆಗಾಗಿ ಆಶೀರ್ವಾದ ಕೊಡಲಾಯಿತು. ಆ ಮೇಲೆ ಉಪದೇಶಕ ಚಾರ್ಲ್ಸ್‌ಯ್ಯನವರು ಫಿಲಿ. ೩. ಓದಿ, ಪ್ರಾರ್ಥನೆ ಮಾಡಿದರು.

ಮಧ್ಯಾಹ್ನದ ಮೇಲೆ ಘನ ಡೈಮಲ್‌ಹೂಬರ್ ಅಯ್ಯನವರು ಅಪೊ. ಕ್ರಿ. ೧, ೬—೮. ಓದಿ, ಮಾತನಾಡಿದ ವಿವರ—"ಕರ್ತನು ತನ್ನ ರಾಜ್ಯ ಸ್ಥಾಪನೆ ಮಾಡಿ ಇಸ್ರಾಯೇಲ್ಯರನ್ನು ಅದರಲ್ಲಿ ಶೇರಿಸುವನೆಂದು ಶಿಷ್ಯರು ನೆನಸುತ್ತಿದ್ದರು. ಕರ್ತನು ಹೇಳುತ್ತಾನೆ—ಆ ವಿಚಾರ ನಿಮಗಲ್ಲ. ನಿಮ್ಮ ಕೆಲಸ ಸಾಕ್ಷಿ ಹೇಳುವದು. ಇದು ಎಲ್ಲಾ ಸೇವಕರ ಕೆಲಸವೂ ಆಗಿದೆ. ನಾವೂ ಸಾಕ್ಷಿ ಕೊಟ್ಟು ಬೇರೊಬ್ಬರನ್ನು ಬಲ ಪಡಿಸಲೂ ಬೇಕು, ಎಳಿಯಲೂ ಬೇಕು. ಒಬ್ಬನು ನನಗೊಮ್ಮೆ ಹೇಳಿದ—'ನೀವು ಇಷ್ಟು ಖರ್ಚು ಮಾಡಿ ಕಷ್ಟ ಪಟ್ಟದರಿಂದ ಆದಂಥಾ ಕಾರ್ಯ ಕಿರಿಬೆರಳಿಗೆ ಸಮ; ಇನ್ನೂ ನಾಲ್ಕು ಬೆರಳುಗಳಿವೆ.' ಅಂಥ ಮಾತು ಕೇಳಿ ನಾವು ಮನಗುಂದ ಬಾರದು. ಸಾಕ್ಷಿ ಕೊಡುವವರು ಬೋಧಕರು ಮಾತ್ರವಲ್ಲಾ, ಸಭೆಯವರಲ್ಲಿ ಒಬ್ಬೊಬ್ಬನೂ ಸಾಕ್ಷಿಗಾರನಾಗ ಬೇಕು. ಒಳ್ಳೇ ನಡತೆಯೇ ಮಾತಿಗಿಂತಲೂ ಬಲವಾದ ಸಾಕ್ಷಿ. ಸಭೆಯವರಲ್ಲಿ ನಡಿಯುವ ಸೈತಾನನ ಕೆಲಸಗಳು ಅನ್ಯರಿಗೆ ಗೊತ್ತಾಗುವದರಿಂದ ಸಾಕ್ಷಿ ಕೊಡುವದಕ್ಕೆ ಎಷ್ಟೋ ಅಭ್ಯಂತರವಾಗುತ್ತದೆ. ಇಂಥಾದ್ದಾಗದ ಹಾಗೆ ಒಳ್ಳೇ ನಡತೆ ಇರುವ ಹಾಗೆ ಕರ್ತನಿಂದ ಬಲವನ್ನು ಹೊಂದ ಬೇಕು. ಇನ್ನೊಂದು ಪ್ರಕಾರ ಸಾಕ್ಷಿ ಕೊಡ ಬೇಕು. ಸಾಕ್ಷಿ ಕೊಡಲಿಕ್ಕೆ ಹೋಗುವವರನ್ನು ಪ್ರಾರ್ಥನೆಗಳಲ್ಲಿ ನೆನಪು ಮಾಡ ಬೇಕು. ನಿಮ್ಮ ಮಕ್ಕಳನ್ನು ಚಿಕ್ಕಂದಿನಿಂದ ಕರ್ತನಿಗೊಪ್ಪಿಸಿ ಕೊಡಿರಿ! ಆಗ ಒಳ್ಳೇ ಸಾಕ್ಷಿ ಹೇಳುವವರು ನಮಗೆ ಶಿಕ್ಕುವರು. ಚೀನದ ಒಂದು ಊರಿನಲ್ಲಿ ೨೮ ವರುಷ ಕೆಲಸ ಮಾಡಿದ ಮೇಲೆ ೩೩ ಜನರು ಶಿಕ್ಕಿದರು. ಅವರು ಬಿಡದೆ ಸಾಕ್ಷಿ ಹೇಳುತ್ತಿದ್ದದರಿಂದ ಏಳು ವರುಷಗಳ ಮೇಲೆ ೧೮೦ ಜನರು ಬಂದರು. ಕರ್ತನ ಸಮಯ ಬರುವಾಗ್ಯೆ ಎಲ್ಲರೂ ಶೇರುವರು. ನಾವು ಸಾಕ್ಷಿ ಹೇಳುವದನ್ನು ಬಿಡದಿರುವಾ."

ಬಳಿಕ ಮಡಿಕೇರಿಯ ಘನ ಫೈಲ್ ಅಯ್ಯನವರು ಯೋಹಾ. ೧೬, ೨೪. ಓದಿ, ಮಾತಾಡಿದ ವಿವರ—"ನಾನು ಕೊಡಗು ಶೀಮೆಯಲ್ಲಿರುವವನು; ಕೊಡಗು ಶೀಮೆ ಒಂದು ದುರ್ಗದಂತೆ ಅದೆ. ಅದರಲ್ಲಿ ಕೊಡಗರೆಂಬ ಬಲವುಳ್ಳ ಜನಾಂಗವದೆ. ಈ ಜನಾಂಗವನ್ನು ಕ್ರಿಸ್ತನಿಗೆ ವಶ ಮಾಡುವದು ನಮ್ಮ ಕೆಲಸ. ಈ ಕೆಲಸಕ್ಕೆ ನೀವು ಪ್ರಾರ್ಥನೆಯಿಂದ ಬಲ ಕೊಡ ಬೇಕು. ಕೊಡಗಿನಲ್ಲಿ ಕೆಲ ಚಿಕ್ಕ ಕ್ರೈಸ್ತ ಸಭೆಗಳಿವೆ. ಇವು ಬೆಟ್ಟದ ಮೇಲಿರುವ ಪಟ್ಣದಂತಿರುವ ಹಾಗೆ ಬೇಡಿ ಕೊಳ್ಳುತ್ತೀರೋ? ಯೆರಿಕೋ ಪಟ್ಣಕ್ಕೆ ಹೊಂಚುಗಾರರು ಬಂದಂತೆ ಈ ಕೊಡಗು ದೇಶಕ್ಕೆ ೨೦ ವರುಷಗಳ ಹಿಂದೆ ಹೊಂಚುಗಾರರು ಬಂದರು. ಬಾಗಲು ಈ ವರೆಗೆ ತೆರೆಯಲ್ಪಡಲಿಲ್ಲಾ. ಕೆಲವರು ದೇವರ ವಾಕ್ಯ ಓದುತ್ತಾರೆ, ಕೆಲವರು ಹಣದ ಸಹಾಯ ಮಾಡುತ್ತಾರೆ; ಹೀಗೆ ಬಾಗಲು ಶುಸ ತೆರದ ಹಾಗಾಯಿತು. ಆದರೂ ಧೈರ್ಯದಿಂದ ಬಳನುಗ್ಗ ಕೂಡದು. ದೇವರು ತನ್ನ ಸಮಯದಲ್ಲಿ ಬಾಗಲು ತೆರದು, ಗೋಡೆ ಬೀಳಿಸಿ, ಜನಾಂಗವನ್ನು ತನಗೆ ವಶ ಮಾಡುವನು. ಈ ಸಮಯವನ್ನು ತಾಳ್ಮೆಯಿಂದ ಕೋರುತ್ತೇವೆ. ನಿಮ್ಮ ಸಂತೋಷ ಪೂರ್ತಿಯಾಗುವ ಹಾಗೆ ಬೇಡಿ ಕೊಳ್ಳಿರಿ."

ಬಳಿಕ ಮುಲ್ಕಿಯ ಉಪದೇಶಕ ಸಾಮುವೇಲಯ್ಯನವರು ೧ ಥೆಸ್ಸ. ೫, ೧೭. ಓದಿ, ಮಾತಾಡಿದ ವಿವರ—"ಮಿಶ್ಯನ ವರ್ತಮಾನ ಕೇಳಿ, ಮಿಶ್ಯನ ಕಾರ್ಯಕ್ಕೋಸ್ಕರ ಪ್ರಾರ್ಥಿಸಲಿಕ್ಕೆ ಕೂಡಿ ಬಂದ ನಮಗೆ, ಎಡೆಬಿಡದೆ ಪ್ರಾರ್ಥಿಸಿರಿ! ಎಂಬ ಮಾತು ಯೋಗ್ಯವೇ. ಅನೇಕಾವರ್ತಿ ನಾವು ನಾಲಿಗೆಯಿಂದಲೇ ಬೇಡಿ ಕೊಳ್ಳುವವರು. ನಮ್ಮ ಹೃದಯವು ಕೊಳತ ಹುಣ್ಣಿನಂತೆ ಅದೆ. ನಾಲಿಗೆಯಿಂದ ಅವಾಚ್ಯ ಮಾತುಗಳು ಹೊರಡುತ್ತವೆ. ಅದೇ ನಾಲಿಗೆಯಿಂದ ಪ್ರಾರ್ಥನೆ ಮಾಡಲಿಕ್ಕೆ ನಮಗೆ ತ್ರಾಣ

ವಿಲ್ಲಾ. ಆದರೂ, ಬೇಡಿ ಕೊಳ್ಳಿರಿ! ಎಂಬ ಅಪ್ಪಣೆ ನಮಗಿರುವದರಿಂದ, ಮೊದಲು ನಮ್ಮ ಸ್ವಂತ ಕೊರತೆಗಳನ್ನು ಕರ್ತನಿಗೆ ತೋರಿಸಿ, ನಮ್ಮ ಸ್ಥಿತಿ ಸಂಪೂರ್ಣವಾಗುವ ಹಾಗೆ ಬೇಡಿ ಕೊಳ್ಳುವಾ! ಮತ್ತು ಬೇರೊಬ್ಬರ ವಿಷಯದಲ್ಲಿಯೂ ದೇವರ ರಾಜ್ಯಕ್ಕಾಗಿಯೂ ಆತನ ಸೇವಕರಿಗಾಗಿಯೂ ಬೇಡುತ್ತಾ ಇರುವ!"

ಬಳಿಕ ಉಡ್ಪಿಯ ಘನ ಬ್ರಿಶೆ ಅಯ್ಯನವರು ಲೂಕ. ೧೦, ೧೭,—೨೨. ಓದಿ, ಮಾತಾಡಿದ ವಿವರ—"ಈ ವಾಕ್ಯದಲ್ಲಿ ಕರ್ತನೂ ಅವನ ಶಿಷ್ಯರೂ ಒಂದು ಮಿಶ್ಯನ ಹಬ್ಬವನ್ನು ಆಚರಿಸಿದರು. ಶಿಷ್ಯರು ಕರ್ತನ ಕೆಲಸದಿಂದ ಸಂತೋಷವಾಗಿ, ತಮ್ಮ ಸಂತೋಷ ಕರ್ತನಿಗೆ ತಿಳಿಸುವದಕ್ಕೆ ಬಂದರು. ಆಗ ಅವರಿಗೆ ಹೆಚ್ಚಿನ ಅಧಿಕಾರ ಕೊಟ್ಟು, ಅವರ ವಿಶ್ವಾಸ ಬಲ ಪಡಿಸಿದನು. ಕರ್ತನು ಹೇಳಿದನು:—ದುರಾತ್ಮಗಳು ವಶವಾದದರಿಂದಲ್ಲಾ, ನಿಮ್ಮ ಹೆಸರುಗಳು ಪರಲೋಕದಲ್ಲಿ ಬರೆಯಲ್ಪಟ್ಟವೆಂದು ಹೆಚ್ಚಾಗಿ ಸಂತೋಷ ಪಡಿರಿ! ಕರ್ತನಿಗೆ ಇನ್ನೂ ಹೆಚ್ಚಿನ ಸಂತೋಷವಾಯಿತು—ನೀನು ಇವುಗಳನ್ನು ಬಾಲಕರಿಗೆ ಪ್ರಕಟ ಮಾಡಿದ್ದರಿಂದ, ಸ್ತೋತ್ರ ಮಾಡುತ್ತೇನೆ ಅನ್ನುತ್ತಾನೆ. ನಾನು ಮಧ್ಯಶಾಲೆಯಲ್ಲಿ ಕೆಲಸ ನಡಿಸುವವನು; ಇದರ ಸಂಬಂಧವಾಗಿ ಸ್ವಲ್ಪ ಮಾತಾಡ ಬೇಕು. ಕರ್ತನು ಈವತ್ತು ಇಬ್ಬರನ್ನು ಸೈನ್ಯಕ್ಕೆ ಸೇರಿಸಿದನು. ಹೆಚ್ಚು ಆಗ ಬೇಕಿತ್ತು. ನಮ್ಮ ಮಧ್ಯಶಾಲೆ ಮೇಲಶಾಲೆಗಳಲ್ಲಿರುವವರು ಕರ್ತನಲ್ಲಿ ಬಲಗೊಂಡು, ಸೈತಾನನನ್ನು ಜೈಸುವವರಾಗುವಂತೆ ನೀವೂ ಪ್ರಾರ್ಥಿಸ ಬೇಕು. ಕರ್ತನ ಕೆಲಸಕ್ಕೆ ನಿಮ್ಮ ಬಲಹೀನರಾದ ಅಥವಾ ಬುದ್ಧಿಬಲ ಕಡಿಮೆಯಾದ ಮಕ್ಕಳನ್ನಲ್ಲಾ, ಇಸ್ರಯೇಲ್ಯರಲ್ಲಿ ಹ್ಯಾಗೋ ಹಾಗೆ ಸಂಪೂರ್ಣರಾಗಿರುವವರನ್ನು ಕರ್ತನಿಗೆ ಕೊಡಿರಿ!"

ಬಳಿಕ ಉಳ್ಳಿಲದ ಘನ ಸೆಬಸ್ತಿಯಾನ್ ಫುರ್ತಾದೊ ಅಯ್ಯನವರು ಯೆಶಾ. ೫, ೪. ಓದಿ, ಮಾತಾಡಿದ ವಿವರ—"ನನ್ನ ದ್ರಾಕ್ಷೇ ತೋಟಕ್ಕೆ ಇನ್ನೂ ಮಾಡ ಬೇಕಾದ ಯಾವದನ್ನೂ ಮಾಡದೆ ಹೋದೆನೆಂದು ಕರ್ತನು ಹೇಳುತ್ತಾನೆ. ಬೇಕಾದ ಸರ್ವವನ್ನೂ ಮಾಡಿ, ಫಲವನ್ನು ಕೇಳ ಪ್ರವಾದಿಗಳನ್ನು ಕಳುಹಿಸಿದನು; ಕಡೆಗೆ ಮಗನನ್ನು ಕಳುಹಿಸಿದನು. ಆದರೆ ಕಹಿಯಾದ ಫಲಗಳೇ ಹೊರತು ಒಳ್ಳೇ ಫಲ ಸಿಕ್ಕಲಿಲ್ಲಾ. ಕಡೆಗೆ ದ್ರಾಕ್ಷೇ ತೋಟ ಅನ್ಯ ಜನರಿಗೆ ಒಪ್ಪಿಸಿದನು. ನಮಗೂ ರಕ್ಷಣೆಗಾಗಿ ಸುವಾರ್ತೆ ಕೊಟ್ಟನು; ತನ್ನ ವಾಕ್ಯ ಬೆಳಕಾಗಿ ಕೊಟ್ಟನು. ಈ ಉಪಕಾರಗಳನ್ನು ನೆನಸಿ ಸಂತೋಷಿಸ ಬೇಕು. ನಾವು ಯಾವ ಫಲ ಕೊಟ್ಟೇವು? ಗರ್ವ, ಮದ್ಯಪಾನ, ವ್ಯಭಿಚಾರ ಮೊದಲಾದ ಕಹಿ ಫಲಗಳನ್ನು ಕೊಟ್ಟು, ಕರ್ತನನ್ನು ಪುನಃ ಶಿಲುಬೆಗೆ ಹಾಕುತ್ತೀಯೋ? ನೀನು ನನಗೆ ಕಹಿ ಫಲ ಕೊಡುತ್ತೀಯೋ? ಎಂತ ಕರ್ತನು ಕೇಳುತ್ತಾನೆ. ನಾವು ಅನ್ಯ ಜನರಿಗೆ ಸಾಕ್ಷಿ ಕೊಡುವವರೂ, ಬಡವರಿಗೆ ಸಹಾಯ ಮಾಡುವವರೂ ಆಗಿ, ಒಳ್ಳೇ ಫಲ ಫಲಿಸುವವರಾಗುವ!"

ಕಡೆಗೆ ಮುಲ್ಕಿಯ ಘನ ಮೆನ್ನರ್ ಅಯ್ಯನವರು ಇಬ್ರಿ. ೧೨, ೧೧. ಓದಿ ಮಾತಾಡಿದ ವಿವರ—"ಇಲ್ಲಿ ಶಿಕ್ಷೆಯು ಮತ್ತು ಅದರ ಫಲದ ವಿಷಯ ಹೇಳಿಯದೆ. ಶಿಕ್ಷೆ ನಮ್ಮೆಲ್ಲರಿಗೆ ಸಿಕ್ಕಿತು. ಜಿನಸ್ಸೆಲ್ಲಾ ಪ್ರಿಯವಾದ್ದೂ, ಅಲ್ಲಿಲ್ಲಿ ರೋಗಗಳು ಬಂದದೂ ಶಿಕ್ಷೆಯೇ. ಶಿಕ್ಷೆ ಬರ ಬೇಕಾದರೆ, ತಪ್ಪು ನಡದಿರ ಬೇಕು. ನಾವು ಎಚ್ಚರಿಕೆಯ ಮಾತುಗಳನ್ನು ಕೇಳಿದರೆ, ಪೆಟ್ಟು ಬೀಳಲಿಕ್ಕಿಲ್ಲಾ. ಕರ್ತನು ನಮ್ಮನ್ನು ಮಾನಸಾಂತರಕ್ಕೆ ಕರಿಯುತ್ತಾನೆ. ತಿರಿಗಿ ಕೊಳ್ಳದಿದ್ದರೆ, ಪೆಟ್ಟು ಬೀಳುವದು. ನಾವು ದೇವರ ಕಾರ್ಯವನ್ನು ಹೆಚ್ಚಾಗಿ ಚಿಂತಿಸುವವರಾಗಿ, ನೀತಿಯ ಫಲಗಳನ್ನು ಫಲಿಸ ಬೇಕು. ಅನೇಕರನ್ನು ಕರ್ತನು ಕರಕೊಂಡನು. ಅವರಿನ್ನೂ ಫಲ ಫಲಿಸಲಾರರು. ನಮ್ಮನ್ನು ಕರ್ತನು ಇಂದಿನ ವರೆಗೆ ಉಳಿಸಿದ್ದಾನೆ. ಮೊದಲು ಕರ್ತನದನ್ನು ಆ ಮೇಲೆ ನಮ್ಮದನ್ನು ಹುಡುಕಿ, ಕರ್ತನ ಕಾರ್ಯಕ್ಕೆ ಸಹಾಯ ಮಾಡುವವರಾಗುವಾ!"

ಉತ್ತರಗಳು.

(೬೯ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.)

46. ತಾವು ಹುಟ್ಟಿದ ದಿನವನ್ನು ಶಪಿಸಿದ್ದು. ಯೋಬ. ೩, ೧; ಯೆರೆಮಿಾ. ೨೦, ೧೪.

47. ಮಕ್ಕಳು ಯೋಬನಿಗೆ ಇನ್ನು ಪರದಲ್ಲಿಯೂ ಇದ್ದುಳಿದ ಕಾರಣ ೧೦ ಮಂದಿ ಮಾತ್ರ ತಿರಿಗಿ ಶಿಕ್ಕಿದಲ್ಲಿ ಇಮ್ಮಡಿ (೨೦) ಶಿಕ್ಕಿದ ಹಾಗಾಯಿತು.

48. "ಕೆಂಪು ಸಮುದ್ರ". ಅದರಲ್ಲಿ ಒಂದೇ ರಾತ್ರಿಗೆ ಸಂಭವಿಸಿದ ೩ ಅದ್ಭುತಕಾರ್ಯಗಳು ಯಾವವಂದರೆ: ೧. ನೀರು ಗೋಡೆಗಳಂತೆ ಇಸ್ರಯೇಲ್ಯರ ದಾರಿಯ ಇಕ್ಕಡೆಯಲ್ಲಿ ನಿಂತದು; ೨. ಧಡಕ್ಕಲ್ಲಾ ಸಮುದ್ರದೊಳಗೆ ಓಡುವಂತೆ ಐಗುಪ್ತ್ಯರಿಗೆ ದಿಗಿಲು ಹಿಡಿದು ಹೋಗ ಮಾಡಿದ್ದು; ೩. ಐಗುಪ್ತ್ಯರ ಸೈನ್ಯವು ಯಾವತ್ತು ಮಧ್ಯದಲ್ಲಿದ್ದಾಗಲೇ ಒಬ್ಬನಾದರೂ ಉಳಿಯದಂತೆ ನೀರು ಅವರ ಮೇಲೆ ಬಿದ್ದದು. ಹೊರಡೋಣ. ೧೪.

49. ಕಣ್ಣೀರೇ. ಕೀರ್ತ. ೪೨, ೩.

50. ಎಜೇಕಿಯೇಲನು. ಎಜೇಕಿ. ೪, ೪—೮.

ವಿವಿಧ ವರ್ತಮಾನಗಳು.

ಉತ್ತರ ಹಿಂದುಸ್ಥಾನದಲ್ಲಿರುವ ಒಂದು ಕ್ರೈಸ್ತ ಸಭೆಯ ಮೊಕ್ತೇಸರರು ಕೂಟ ಕೂಡಿ, ಸಭೆಗೆ ಅಯೋಗ್ಯರಾಗಿ ನಡಕೊಂಡು ಬಹಿಷ್ಕಾರ ಪಟ್ಟವರ ವಿಷಯದಲ್ಲಿ ಪೌಲನು ೧ ಕೊರಿ. ೫, ೧೧ ರಲ್ಲಿ ಬರದ ವಚನವನ್ನು ಕೈಕೊಳ್ಳ ಬೇಕೆಂತಾ ನಿಶ್ಚಯಿಸಿ, ಅಂಥವರಿಗೆ "ಹುಕ್ಕಾ ಪಾಣಿ ಬಂದ್ ಹೋಗಾ" ಅಂದರೆ ಹುಕ್ಕಾ ಮತ್ತು ನೀರು ನಿಷಿದ್ಧವೆಂದು ತೀರ್ಪು ಮಾಡಿದರು. ಯಾಕಂದರೆ ಬಹಿಷ್ಕಾರ ಪಟ್ಟವರು ಕ್ರೈಸ್ತರೆಂಬ ಹೆಸರು ಇನ್ನೂ ಧರಿಸಿ ಕೊಳ್ಳುವದರಿಂದ, ಅವರು ಬೇರೆ ಒಳ್ಳೇ ಕ್ರೈಸ್ತರ ಸಂಗಡ ಒಡನಾಡಿ ಪಂಕ್ತಿ ಭೋಜನ ಸಹ ಮಾಡುವವರಾದರೆ, ಒಳ್ಳೆಯವರೂ ಹೆಸರು ಕೆಡಿಸಿ ಕೊಳ್ಳುತ್ತಾರೆ. ಮತ್ತು ಬಹಿಷ್ಕಾರ ಹೊಂದಿದವರ ಸಂಗಡ ಬೇರೊಬ್ಬರೂ ಸಂಪರ್ಕ ಮಾಡಿದರೆ, ಸಭಾಶಿಕ್ಷೆಯಿಂದ ಅವರಿಗೆ ಏನೊಂದೂ ಪ್ರಯೋಜನವಾಗುವದಿಲ್ಲಾ. ಆದರೆ ಎಲ್ಲರೂ ಅವರ ಸಂಪರ್ಕವನ್ನೇ ದೂರ ಮಾಡುವವರಾದರೆ, ಈ ಲಜ್ಜೆಯೇ ಅವರಿಗೆ ಮಹಾ ಶಿಕ್ಷೆಯಾಗುತ್ತದೆ. ಇದರಿಂದ ಅಂಥವರಿಗೆ ಏನೊಂದೂ ಉಪಕಾರ ಮಾಡ ಬಾರದೆಂತಲ್ಲಾ, ಒಂದು ವೇಳೆ ಹೊರಗೆ ಹಾಕಿಸಿ ಕೊಂಡವನೊಬ್ಬನು ಅನ್ನಕ್ಕೆ ತತ್ವಾರ ಪಡುತ್ತಾನಾದರೆ, ಅಂಥವನಿಗೆ ಪ್ರತ್ಯೇಕವಾಗಿ ನೀಡ ಬೇಕೇ ಹೊರ್ತು ಪಂಕ್ತಿಯಲ್ಲಿ ಹಾಕ ಕೂಡದು. ಮೇಲೆ ಹೇಳಿದ ಸಭೆಯಲ್ಲಿ ಈ ಕಟ್ಟಳೆ ಮಿಶ್ಯನೆರಿಗಳಿಂದಲ್ಲಾ, ಈ ದೇಶದವರಿಂದಲೇ ಏರ್ಪಟ್ಟದ್ದಾಗಿರುತ್ತದೆ.

ದುಷ್ಕಾಲದ ದೆಶೆಯಿಂದ ಮೃತವಾದ ಜನರ ಸಂಖ್ಯೆ ತಕ್ಕ ಮಟ್ಟಿಗೆ ನಿಷ್ಕರ್ಷೆಯಾಗಿ ತಿಳಿಯುವ ಹಾಗೆ ದುಷ್ಕಾಲ ಬಿದ್ದಂಥಾ ಐದು ಜಿಲ್ಲೆಗಳಲ್ಲಿ ಪ್ರತಿ ಜಿಲ್ಲೆಯ ಎರಡು ತಾಲೂಕುಗಳ ಖಾನೆಶುಮಾರಿ ಲೆಖ್ಖ ಆಗ ಬೇಕೆಂತ ಸರಕಾರದವರು ಅಪ್ಪಣೆ ಮಾಡಿದ್ದಾರೆ. ಈ ಲೆಖ್ಖ ೧೮೭೮ ನೇ ಇಸವಿ ಜನವರಿ ೧೯ನೇ ತಾರೀಕಿನ ರಾತ್ರಿ ಆಗುವದು. ಇದನ್ನು ಅದೇ ತಾಲೂಕುಗಳಲ್ಲಿ ಮೊದಲು ಮಾಡಿದ ಲೆಖ್ಖವನ್ನೂ ತಾಳೆ ನೋಡಿದರೆ, ಜನಸಂಖ್ಯೆ ಕಮ್ಮಿಯಾದ್ದು ಕಂಡು ಬರುವದು. ಇದರ ಮೇಲೆ ಬೇರೆ ಜಿಲ್ಲೆಗಳಲ್ಲಿಯೂ ಇಂತಿಷ್ಟೇ ಜನರು ಮೃತವಾದರು ಎಂತ ಅಜಮಾಸು ಮಾಡಲಿಕ್ಕೆ ಆದೀತು.

ಹಿಂದುಸ್ಥಾನದ ಮೂರು ಸಂಸ್ಥಾನಗಳಲ್ಲಿ ಛಾಪಿಸಿ ಪ್ರಸಿದ್ಧ ಮಾಡುವ ವರ್ತಮಾನಪತ್ರಗಳು ಎಷ್ಟು ಅಂದರೆ: ಬಂಗಾಳ ಸಂಸ್ಥಾನದಲ್ಲಿ

೧೫೭, ಮುಂಬಾಯಿ ಸಂಸ್ಥಾನದಲ್ಲಿ ೧೬೫; ಮದ್ರಾಸ ಸಂಸ್ಥಾನದಲ್ಲಿ ೧೧೩.

ಹಿಂದುಸ್ಥಾನದಲ್ಲಿರುವ ಕಥೋಲಿಕರಿಗೆ ಶುಭಕಾಲ ಉದಯಿಸುವ ಹಾಗಿದೆ; ಏನಂದರೆ ಗೋವೆಯ ಅರ್ಚಬಿಶೊಪನೂ ಮತ್ತು ಪೊರ್ತುಗೀಸ ಸರಕಾರದವರೂ ಸಾಂತ್ ಫ್ರಾನ್ಸಿಸ್ ಕ್ಸವೀರನ ಶರೀರವು ಬರುವ ವರುಷದ ದಶಂಬರ ೩ರಲ್ಲು ಸರ್ವರಿಗೂ ತೋರಿಸಲಾಗುವದೆಂದು ಪ್ರಸಿದ್ಧಿ ಮಾಡಿದ್ದಾರೆ.

ರಂಗೂನಿನಲ್ಲಿ ಸಮಸ್ತ ಪ್ರಾಣಗಳ ದಿನವೆಂಬ ಕಥೋಲಿಕರ ಹಬ್ಬದ ದಿನ ಮೆರವಣಿಗೆ ಆಗುವಾಗ್ಯೆ, ಸಮಾಧಿಗಳ ಮೇಲೆ ಉರಿಸಿ ಇಟ್ಟಿದ್ದ ಮೋಂಬತ್ತಿಗಳ ಮೂಲಕವಾಗಿ ಇಬ್ಬರು ಯೌವನಸ್ಥೆಗಳ ವಸ್ತ್ರಕ್ಕೆ ಬೆಂಕಿ ಹಿಡಿದು, ಅವರು ಮೃತ ಪಟ್ಟರಂತೆ.

ಘರ್ಜನೆಯೊಂದಿಗೆ ಕೂಡಿದ ಅಲ್ಪವಾದ ಭೂಕಂಪವು ಲಾಹೋರಿನಲ್ಲಿ ಸಂಭವಿಸಿತು; ಕಂಪವು ದಕ್ಷಿಣದಿಂದ ಉತ್ತರಕ್ಕೆ ಇತ್ತು.

ಮದ್ರಾಸ ಸಂಸ್ಥಾನದಲ್ಲಿ ದುಷ್ಕಾಲದ ದೆಶೆಯಿಂದ ಖರ್ಚಾದ್ದೂ ಕಂದಾಯ ವಸೂಲಾಗದೆ ನಷ್ಟವಾದ್ದೂ ಒಟ್ಟುಕೂಡಿ ೮೫,೦೦೦,೦೦೦ ರೂಪಾಯಿಯು ಪೆಟ್ಟು ತಾಗಿತು. ಮುಂಬಯಿ ಸಂಸ್ಥಾನದಲ್ಲಿ ಒಟ್ಟಿಗೆ ೨೦,೦೦೦,೦೦೦ ರೂಪಾಯಿಗೆ ಸ್ವಲ್ಪ ಕಮ್ಮಿಯಾದೀತಂತೆ.

ಮಿ. ಲಿನ್ ಎಂಬವರೊಬ್ಬರು ಮುಂಬಾಯಿಯ ನಿವಾಸಿಗಳಿಗೆ ಮಹಾ ಚಮತ್ಕಾರಿಕ ಸಂಗತಿ ತೋರಿಸಿದರು. ಅದೇನಂದರೆ: ನಾಲ್ವತ್ತು ಮೊಳ ಎತ್ತರ ೨೦ ಮೊಳ ವ್ಯಾಸವುಳ್ಳ "ಬೆಲ್ಲೂನ್" ಎಂಬ ಆಕಾಶವಿಮಾನ ಮಾಡಿ, ಅದರೊಳಗೆ ಗಾಸ್ ತುಂಬಿಸಿ, ಆ ವಿಮಾನದ ಕೆಳಗೆ ಕಟ್ಟಿದ ಪುಟ್ಟಿಯಲ್ಲಿ ತಾನು ಕೂತು, ಮೇಲಕ್ಕೆ ಹೋದರು. ಶುಮಾರು ಒಂದುವರೆ ಮೈಲು ಮೇಲಕ್ಕೆ ಹೋಗಿ, ಘಾಳಿಯ ಬಲದಿಂದ ದಕ್ಷಿಣಕ್ಕೂ ಉತ್ತರಕ್ಕೂ ಸಂಚರಿಸಿದ ಮೇಲೆ, ಕೆಳಗಿಳಿದರು. ಉಷ್ಣವಾದ ಹವೆಯಿಂದ ಒಮ್ಮಿಂದೊಮ್ಮೆ ಶೀತವಾದ ಹವೆಗೆ ಹೋದದರಿಂದ ಅವರಿಗೆ ಸ್ವಲ್ಪ ಅಶಕ್ತಿಯಾದದ್ದೇ ಹೊರ್ತು ಮತ್ತೇನೂ ಆಗಲಿಲ್ಲ. ಈ ವಿಚಿತ್ರ ಸಂಗತಿ ನೋಡುವದಕ್ಕೆ ಒಂದು ಲಕ್ಷ ಜನ ಕೂಡಿ ಬಂದಿದ್ದರು. ಮಿ. ಲಿನ್ ಎಂಬವರು ಕೆಲ ದಿನಗಳ ನಂತರ ಎರಡನೆ ಸಾರಿ ಅದೇ ಪ್ರಕಾರ ಮಾಡಿ, ಸುಮಾರು ೨ ಮೈಲು ಎತ್ತರಕ್ಕೆ ಹೋಗಿ, ಕೆಳಗಿಳಿದರು. ಅಷ್ಟು ಎತ್ತರದಿಂದ ಕೆಳಗೆ ನೋಡಿದರೆ, ಎತ್ತರವಾದ ಮನೆಗಳು ಹುಡುಗರು ಆಡುವದಕ್ಕೆ ಮಾಡಿದ ಮನೆಗಳಂತೆ, ದೊಡ್ಡ ದೊಡ್ಡ ಹೊಗೆಹಡಗಗಳು ಒಂದು ಬೆರಳು ಉದ್ದ ಅರ್ಧ ಬೆರಳು ಅಗಲವಾಗಿ, ಮನುಷ್ಯರೂ ಗಾಡಿಗಳೂ ಹುಳಗಳಂತೆ ಕಾಣುತ್ತಿದ್ದವಂತೆ. ಸಮುದ್ರದ ತಳವು ದೃಷ್ಟಿಗೆ ಬಿದ್ದು, ಅದರಲ್ಲಿಯ ಕೆಸರು ಎಲ್ಲಿ ಕಪ್ಪು ಎಲ್ಲಿ ಬಿಳಿದು ಎಂತ ಸ್ಪಷ್ಟವಾಗಿ ಕಾಣುತ್ತಿತ್ತಂತೆ. ನೀರಿನಲ್ಲಿ ಹಡಗಗಳನ್ನು ನಡಿಸುವಂತೆ ಅಂತರಿಕ್ಷದಲ್ಲಿ ಇಂಥಾ ವಿಮಾನಗಳನ್ನು ಮನಸ್ಸು ಬಂದಲ್ಲಿಗೆ ನಡಿಸುವ ಯುಕ್ತಿ ಈ ವರೆಗೆ ಯಾರ ಬುದ್ಧಿಗೂ ಸೂಚಿಸಲಿಲ್ಲಾ. ಅಂಥಾ ಯುಕ್ತಿ ಮಾತ್ರ ಶಿಕ್ಕಿದಾದರೆ, ಜನರು ಹೊಗೆಬಂಡಿಗಳಲ್ಲಿ ಹಡಗಗಳಲ್ಲಿ ಕಷ್ಟ ಪಟ್ಟು ಪ್ರಯಾಣ ಮಾಡುವದಕ್ಕಿಂತ ವಿಮಾನದಲ್ಲಿ ಕೂತು ಆಕಾಶಕ್ಕೆ ಏರಿ ಶುದ್ಧವಾದ ಘಾಳಿ ಸೇವಿಸುತ್ತಾ ಪ್ರಯಾಣ ಮಾಡುವದಕ್ಕೆ ಎಷ್ಟು ಸಂತೋಷ ಪಡುತ್ತಿದ್ದಾರು?

ಅಮೇರಿಕದ ಮಿಶ್ಯನಿನವರಾದ ರೆವರೆಂಡ್ ಕಸಮ್ ಮುಹಮ್ಮದಜಿ ಎಂಬವರು ಖುರಾನನ್ನು ಮಹಾರಾಷ್ಟ್ರ ಭಾಷೆಗೆ ಭಾಷಾಂತರ ಮಾಡಿದ್ದಾರೆ. ಈ ಗ್ರಂಥವು ಛಾಪೆಗೆ ಸಿದ್ಧವಾಗಿದೆ.

ಬಡೋಧೆಯಲ್ಲಿ ವಾಂತಿಭೇದಿಯ ಉಪದ್ರವು ಬಹು ಕಠಿಣವಾದದರಿಂದ ಜನರು ಪಟ್ಣ ಬಿಟ್ಟು ಹೋಗುತ್ತಿದ್ದಾರಂತೆ.

ಗದ್ದಗ್ ಬೆಟ್ಟಿಗೆರಿಯ ಘನ ಹಾಸನ್‌ವಂದೆಲ್ ಅಯ್ಯನವರು ದುಷ್ಕಾಲದಿಂದ ಹಾವಳಿಪಡುವ ಜನರ ಸಹಾಯಾರ್ಥವಾಗಿ ಬಹಳ ಪ್ರಯಾಸ ಪಟ್ಟವರಾಗಿ ಕ್ಷೇಮ ಕಳಕೊಂಡು, ವಿ

ಲಾಯತಿಗೆ ಹೋದವರಾದರು. ಅವರು ಹೋಗುವಾಗ್ಯೆ ಸಭೆಯವರು ಒಂದು ಮಾನಪತ್ರವನ್ನು, ಅವರಿಗೂ ಅಮ್ಮನವರಿಗೂ ಒಂದೊಂದು ಭಂಗಾರದ ಹೂವನ್ನೂ, ಅವರ ಮಕ್ಕಳಿಗೆ ದೇಶೀಯ ಜರದ ಟೋಪಿ ಹಾಂಗೂ ಒಂದು ದಟ್ಟಿ ಇಷ್ಟು ನಜರ್‍ಕಾಣಿಕೆಯಾಗಿ ಕೊಟ್ಟರು. ಆ ವೇಳೆಗೆ ಕೂಡಿ ಬಂದವರಲ್ಲಿ ಕಣ್ಣೀರು ಸುರಿಸದ ಒಬ್ಬರಾದರೂ ಉಳಿಯಲಿಲ್ಲವಂತೆ.—ಅವರು ಮುಂಬಾಯಿಗೆ ಹೋಗುವಾಗ್ಯೆ ಕಾರವಾರದಲ್ಲಿ ಅವರ ಮಗು ತೀರಿ ಕೊಂಡಿತು.

ವಿಲಾಯತಿಯಿಂದ ಥುಮ್ ಜಿಗ್ಲರ್ ಶೌಫ್ಲರ್ ಮಿಲ್ಲರ್ ಧೊರೆಗಳು ಕ್ಷೇಮವಾಗಿ ತಿರಿಗಿ ಬಂದು ಮುಟ್ಟಿದರು.—ಗುಳೇದಗುಡ್ಡದಲ್ಲಿ ವೈಗಲೆ ಧೊರೆಗಳು ತೀರಿ ಕೊಂಡರು. ಅವರ ಕುಟುಂಬಕ್ಕೂ ಸಭೆಗೂ ಆಪ್ತರಿಗೂ ದೊಡ್ಡ ಪೆಟ್ಟಾಯಿತು.

ಅದೇ ಬೆಟ್ಟಿಗೇರಿಯಲ್ಲಿ ಹೆಚ್ಚು ಕಡಿಮೆ ೬೦೦ ಜನ ಕೂಡ್ರು ಬಹುದಾಗುವಂಥಾದ್ದೊಂದು ದೇವಾಲಯ, ಗುಳೇದಗುಡ್ಡದಲ್ಲಿ ೮೦೦ ಹಿಡಿಯುವಂಥಾದ್ದೊಂದೂ ಕಟ್ಟಿಸುವದಕ್ಕೆ ನಮ್ಮ ಮಿಶ್ಯನವರು ಪ್ರಾರಂಭ ಮಾಡಿದ್ಧಾರೆ. ಗುಳೇದಗುಡ್ಡದ ಆಚೆಗೆ ೬ ಹರದಾರಿ ದೂರ ಮುಷ್ಟಿಗೇರಿ ಎಂಬ ಗ್ರಾಮದಲ್ಲಿ ಒಂದು ಉಪಶಾಖ್ಯೆ ಸ್ಥಾಪನ ಮಾಡುವದರ ಸಲವಾಗಿ ಅಲ್ಲಿಯೂ ೪೦೦ ಜನ ಹಿಡಿಯುವಂಥಾದ್ದೊಂದು ದೇವಾಲಯವನ್ನೂ ಉಪದೇಶಕನಿಗಾಗಿ ಒಂದು ಮನೆಯನ್ನೂ ಕಟ್ಟಿಸುತ್ತಿದ್ಧಾರೆ.

ಮಂಗಳೂರಿನ ಉಪದೇಶಿ ಶಾಲೆಯಲ್ಲಿ ಕಲಿತ ಮೂವರೂ ಮೊದಲು ಉಪದೇಶಿಗಳಾಗಿದ್ದ ಒಬ್ಬನೂ ಹೀಗೆ ನಾಲ್ಕು ಮಂದಿ ದಕ್ಷಿಣ ಮಹಾರಾಷ್ಟ್ರಕ್ಕೆ ನೇಮಕವಾದವರಾಗಿ ದಶಂಬರ ತಿಂಗಳಲ್ಲಿ ಅಲ್ಲಿಗೆ ಹೊರಟು ಹೋದರು.

ಫ್ರಾನ್ಸ ದೇಶದಲ್ಲಿ ಮೊಸೆಲ್ ನದಿಯ ತೀರದಲ್ಲಿ ಸ್ಲರ್ಕ್ ಎಂಬ ಒಂದು ಊರಿನಲ್ಲಿ ಕೆಲವು ಕಾಲಕ್ಕೆ ಹಿಂದೆ ನಡದ ಒಂದು ಚಮತ್ಕಾರದ ಗೋಷ್ಟಿ ಏನಂದರೆ—ಹೆರ್ಶ್ಮಿತ್ ಎಂಬವನೊಬ್ಬನ ಹತ್ತರ ಒಂದು ನಾಯಿ ಇತ್ತು; ಅದರಿಂದ ಅವನಿಗೆ ಬೇಸರವಾಗಿ, ಇದು ತನಗಿನ್ನು ಬೇಡ ಎಂತ ಒಂದು ದಿನ ಆ ನಾಯಿಯನ್ನು ಹಿಡುಕೊಂಡು, ಒಂದು ದೋಣಿಯಲ್ಲಿ ಕೂತು ಕೊಂಡು, ನದಿಯ ಮಧ್ಯಕ್ಕೆ ಹೋದನು; ಮತ್ತು ಆ ನಾಯಿಯ ಕೊರಳಿಗೆ ಒಂದು ದೊಡ್ಡ ಕಲ್ಲು ಕಟ್ಟಿ. ನದಿಯಲ್ಲಿ ಹಾಕಿ ಬಿಟ್ಟನು; ಆ ಕಲ್ಲಿನ ಭಾರದಿಂದ ಆ ನಾಯಿ ತತ್ಕಾಲ ಮುಣುಗಿದರೂ, ಕಾಲುಗಳ ಬಡಿದಾಟದಿಂದ ಕಲ್ಲು ಹಗ್ಗದಿಂದ ಕಳಚಿ ಹೋಯಿತು. ಆಗ ನಾಯಿ ಪುನಹ ನೀರಿನ ಮೇಲಕ್ಕೆ ಬಂದು, ದೋಣಿಯಲ್ಲಿ ಹತ್ತಲಿಕ್ಕೆ ಮಾಡಲು, ಅದರ ಧನಿ ಮೇಲಿನಿಂದ ಮೇಲೆ ಹೊಡದು, ದೋಣಿಯಲ್ಲಿ ಬರಲಿಕ್ಕೆ ಬಿಡಲಿಲ್ಲಾ. ಆದರೂ ನಾಯಿ ತನ್ನ ಪ್ರಯತ್ನ ಬಿಡದಿರಲು, ಧನಿಗೆ ಶಿಟ್ಟು ಬಂದು, ಒಳ್ಳೇ ಪೆಟ್ಟು ಹಾಕುತ್ತೇನೆಂತ ಹೊಡಿಯಲಾಗಿ, ತಾನೇ ನೀರಿನಲ್ಲಿ ಬಿದ್ದನು. ಅವನಿಗೆ ಈಚಲಿಕ್ಕೆ ಬರುತ್ತಿದ್ದಿಲ್ಲಾದ್ದರಿಂದ ಮುಣುಗಲಿಕ್ಕಾದಾಗ ನಾಯಿ ಹತ್ತರ ಬಂದು, ಅವನ ವಸ್ತ್ರ ಹಿಡುಕೊಂಡು, ಭೂಮಿಯ ಕಡೆಗೆ ನಡಿಸುತ್ತಾ ನೀರಿನ ಶಳವಿನಿಂದ, ಕಷ್ಟವಾದರೂ, ಸುರಕ್ಷಿತವಾಗಿ ತೀರಕ್ಕೆ ತಂದು ಮುಟ್ಟಿಸಿತು. ನಾಯಿ ತನಗೆ ಅಪಕಾರಕ್ಕೆ ಬದಲಾಗಿ ಉಪಕಾರ ಮಾಡಿದ್ದರಿಂದ ಧನಿ ಅದನ್ನು ಕೊಲ್ಲ ಬೇಕೆಂಬ ಆಲೋಚನೆ ಪೂರ್ಣವಾಗಿ ಬಿಟ್ಟವನಾದನು. ಅವನು ಬಿಟ್ಟದ್ದು ಒಳ್ಳೇದಾಯಿತು; ಇಲ್ಲವಾದರೆ ಅತ್ಯಂತ ಕೃತಘ್ನನಾಗಿರುತ್ತಿದ್ದನು.

ಅಮೇರಿಕದಲ್ಲಿ ಸಾಲೆಮ ಎಂತ ಒಂದು ಊರು ಅದೆ; ಅಲ್ಲಿಯ ಹೊಗೆಭಂಡಿಯ ಕಂಪನಿಯವರು ತಮ್ಮ ಚಾಕರರಿಗೆ ಕಳದ ಸಪ್ತಂಬರ ತಿಂಗಳಲ್ಲಿ ಒಂದು ದಿನದ ಹುಟ್ಟುವಳಿಯನ್ನು ಧರ್ಮವಾಗಿ ಕೊಟ್ಟರು. ಈ ವರ್ತಮಾನ ಜನರಿಗೆ ತಿಳಿದು ಬಂದಾಗಲೇ ಹೊಗೆಭಂಡಿಯಲ್ಲಿ ಕೂತು ಹೋಗುವವರ ಲೆಖ್ಖ ಬಹುಶಾ ಹೆಚ್ಚಾಯಿತು. ಅನೇಕರು ದುಡ್ಡಿಗೆ ಬದಲಾಗಿ ರೂಪಾಯಿ ಕೊಟ್ಟದರಿಂದ ಅಂದು ೧೨೦೦ ರೂಪಾಯಿ ಬಂತು. ಇ

ದನ್ನು ಆ ಚಾಕರರು ೨೨ ಮಂದಿ ತಮ್ಮೊಳಗೆ ಪಾಲು ಮಾಡಿ ಕೊಂಡರು. ಆ ಕಂಪನಿಯವರ ಔದಾರ್ಯವು ಸ್ತುತ್ಯವೇ ಸರಿ.

ಅಮೇರಿಕದಲ್ಲಿ ಮಿ. ನೋಲನ್ ಎಂಬವನೊಬ್ಬನು ತನ್ನಷ್ಟಕ್ಕೆ ತಾನೇ ನಡಿಯುವ ಒಂದು ಕುದುರೆ ಮಾಡಿದ್ಧಾನೆ. ಕುದುರೆಯ ಮೇಲೆ ಕೂತು, ಲಗಾಮು ಹಿಡಿದು ನಡಿಸುವಂತೆ ಅದರ ಮೇಲೆಯೂ ಕೂತು ನಡಿಸ ಬೇಕಂತೆ. ಆ ಚಮತ್ಕಾರದ ಯಂತ್ರಕ್ಕೆ ಚಲಿಸುವ ಶಕ್ತಿ ಕೂತವನ ಭಾರದಿಂದಲೂ ಬೇರೆ ಇಟ್ಟಂಥಾ ಭಾರಗಳಿಂದಲೂ ಬರುತ್ತದೆ. ಒಂದು ತಾಸಿಗೆ ೧೦, ೧೨ ಮೈಲ್ ನಡಿಯುವ ಇಂಥಾ ಕುದುರೆಗಳನ್ನು ಮೂವತ್ತು ರೂಪಾಯಿಗೆ ಮಾಡಿ ಕೊಡುತ್ತೇನೆಂತ ಸಂಕಲ್ಪಿಸಿದವನು ಹೇಳುತ್ತಾನಂತೆ.

ಜರ್ಮನಿಯ ಮಹಾರಾಜರ ಮನಸ್ಸು ಬಹುಶಾ ಈಗ ರುಸ್ಯರಿಗೂ ತುರ್ಕರಿಗೂ ನಡಿಯುವ ಕಾಳಗದ ಮೇಲೆ ಅದೆ. ವಿಲಾಯತಿಯ ಕ್ರೈಸ್ತರನ್ನು ಹ್ಯಾಗಾದರೂ ತುರ್ಕನ ಕೈಯಿಂದ ಉದ್ಧರಿಸಲೇ ಬೇಕು ಎಂದು ತಮ್ಮ ಅಭಿಪ್ರಾಯವೆಂತ ಅವರು ಸ್ಪಷ್ಟವಾಗಿ ಹೇಳಿದರಂತೆ.

ಜರ್ಮನಿಯಲ್ಲಿ ಮುನಿಚ್ ಪಟ್ಣದಲ್ಲಿ ಒಬ್ಬ ಸರಕಾರಿ ಪೊಟೊಗ್ರಾಫರ್ ಅಂದರೆ ತದ್ರೂಪನಕ್ಷೆ ತೆಗಿಯುವವನು ಹೊಸ ಯುಕ್ತಿ ಕಂಡು ಕೊಂಡಿದ್ಧಾನೆ. ಏನಂದರೆ ನಕ್ಷೆ ತೆಗಿಯುವ ವೇಳೆಯಲ್ಲಿ ಜನರು ಯಾವ ಬಣ್ಣದ ವಸ್ತ್ರ ಉಟ್ಟು ಕೊಂಡು ಕೂತು ಕೊಳ್ಳುತ್ತಾರೋ ಅದೇ ಬಣ್ಣವು ನಕ್ಷೆಯಲ್ಲಿಯೂ ಬರುವಂತೆ ಮಾಡುವದು.

ಯೆರೂಸಲೇಮಿನಲ್ಲಿ ಮೊಕಾಮಾಗಿರುವ ಸಂಯುಕ್ತಸಂಸ್ಥಾನಗಳ ಕೊನ್‌ಸಲ್ (ಅಂದರೆ ಸರಕಾರಿ ವಕೀಲ) ೬೮ ದಿನದಲ್ಲಿ ಒಂದು ಭೂಪ್ರದಕ್ಷಿಣ ಮಾಡಿ ತೀರಿಸಿದನು, ಅಂದರೆ ಭೂಗೋಳವನ್ನು ಸುತ್ತಿ ಬಂದನು.

ತುರ್ಕ್ಯ ಅರ್ಮೇನ್ಯದ ಮುಖ್ಯ ನಗರವಾಗಿರುವ ಎರ್ಜೆರುಮ್ ಎಂಬ ಪಟ್ಣದ ನೆರೆಹೊರೆಯಲ್ಲಿಯೂ ತುರ್ಕರಿಗೆ ಇತ್ತಲಾಗೆ ಒಳ್ಳೇ ಪೆಟ್ಟು ತಾಗಿ, ೪೦ ತೋಪುಗಳೂ ಹೇರಳ ರಸ್ತುಗಳೂ ರುಸ್ಯರ ಕೈಯಲ್ಲಿ ಬಿದ್ದವಂತೆ.—ಪ್ಲೆವ್ನ ಎಂಬ ಪಟ್ಣದ ಅಂಡೆಯನ್ನು ಹೊಕ್ಕಿದ್ದ ತುರ್ಕ್ಯ ಸೈನ್ಯವೆಲ್ಲವೂ (ಸುಮಾರು ೬೦,೦೦೦ ಆಳುಗಳಲ್ಲದೆ ೧೦ ಮಂದಿ ಪಾಚ್ಛರೂ ೨,೧೨೮ ಸರದಾರರೂ) ಸಮಸ್ತ ಆಯುಧಾದಿಗಳ (೭೭ ತೋಫುಗಳ) ಸಹಿತವಾಗಿ ರುಸ್ಯರ ಕೈಯಲ್ಲಿ ಬಿದ್ದು, ರುಸ್ಯರಿಗೆ ಮಹೋತ್ಸವಕ್ಕೆ ಕಾರಣವಾಯಿತು. ರುಸ್ಯರ ಎದುರಾಳಿಗಳಿಗೆ ಒಲೆಯುವವರೆಲ್ಲರಿಗೂ ಇದೊಂದು ಪೆಟ್ಟಿನಂತಾಯಿತು.

ಸೀಯಮ ರಾಜ್ಯವು ನೆರೆಯಲ್ಲಿರುವ ಚೀನರಾಜ್ಯದ ಮೇಲೆ ಯುದ್ಧ ಮಾಡುವದಕ್ಕೆ ಸನ್ನಾಹ ಮಾಡುತ್ತದೆ; ಚೀನಿಯವರು ಸೀಯಮನವರು ಕೊಡ ತಕ್ಕ ಕಪ್ಪವನ್ನು ಕೇಳಿದ್ದೇ ಇದಕ್ಕೆ ಕಾರಣ. ಸೀಯಮ ಮಾತ್ರವಲ್ಲ, ನೇಪಾಳ ಬರ್ಮ ರಾಜ್ಯಗಳು ಸಹ ಪ್ರತಿ ವರುಷವೂ ಚೀನಕ್ಕೆ ಕಪ್ಪ ಕೊಡುವ ಹಂಗಿನಲ್ಲಿದ್ದವು. ಸೀಯಮ ಕಪ್ಪ ಕೊಡುವದಕ್ಕೆ ಅಡ್ಡಿ ಮಾಡಲು, ಚೀನಿಯವರು ಯುದ್ಧ ಮಾಡುವದಕ್ಕೆ ಬರುತ್ತೇವೆಂತ ಹೇಳುವದರಿಂದ ಕಾಳಗಕ್ಕೆ ಬೇಕಾದ ಯಾವತ್ತೂ ಸಾಮಗ್ರಿ ಸೀಯಮ ರಾಜ್ಯದವರು ಸಿದ್ಧ ಮಾಡುತ್ತಿದ್ಧಾರೆ.

ದುಷ್ಕಾಲ ಬಿದ್ದ ಪ್ರದೇಶಗಳಲ್ಲಿ ಯಥೇಷ್ಟ ಮಳೆ ಬಂದದೆ ಎಂಬ ಸಂಗತಿ ಶುಭವಾರ್ತೆಯೇ ಸರಿ. ಕೆಲ ಸ್ಥಳಗಳಲ್ಲಿ ಅತಿವೃಷ್ಟಿಯಾಗುವದಾಯಿತು. ಕೆಲವು ತಿಂಗಳ ಹಿಂದೆ ಕ್ಷಾಮವು ಮಹಾ ಕಠಿಣವಾಗಿದ್ದ ಮದ್ರಾಸ ಸಂಸ್ಥಾನದ ಜಿಲ್ಲೆಗಳಲ್ಲಿ ಮಳೆ ಚನ್ನಾಗಿ ಬಂದದರಿಂದ, ಕ್ಷಾಮದ ಹಾವಳಿ ಪರಿಹಾರವಾಗುವದು. ಸಿಂಧು, ಮಹ್ರಾಡ, ಮದ್ರಾಸ ಮುಂತಾದ ಕೆಲ ಕಡೆಗಳಲ್ಲಿ ಮಳೆ ಹೆಚ್ಚಾಗಿ, ಪೈರಿಗೆ ಹಾನಿಯಾದಾಗ್ಯೂ, ಒಟ್ಟಾರೆ ನೋಡಿದರೆ, ಒಳ್ಳೇ ಸ್ಥಿತಿಯೇ ಸರಿ. ಅಲ್ಲಲ್ಲಿ ಕೆಲ ಸ್ಥಳಗಳಲ್ಲಿ ಇನ್ನೂ ಮಳೆ ಬೇಕು. ದೇವರ ದಯೆಯಿಂದ ಬರುವ ವರುಷ ದುರ್ಭಿಕ್ಷೆಯ ಕಾಲವಲ್ಲ, ಸುಭಿಕ್ಷೆಯ ಕಾಲವಾಗಿರುವದು.

Printed at the Basel Mission Press, Mangalore.

ಕ್ರೈಸ್ತಸಭಾಪತ್ರ

ಪುಸ್ತಕ ೧೦. **FEBRAURY 1878.** ಅಂಕೆ ೮

ಅಡಕವು: "ಸಂತೋಷಂ ಪರಮಂ ಧನಂ"—ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?—ಚಿನ್ನದ ಹರಳುಗಳು—ಯಾರ ತಪ್ಪು?—ವಿವಿಧ ವರ್ತಮಾನಗಳು.

"ಸಂತೋಷಂ ಪರಮಂ ಧನಂ."

ಆಗ ಯೇಸು ಜಕ್ಕಾಯನಿಗೆ ಹೇಳಿದ್ದೇನಂದರೆ: ಈ ಹೊತ್ತು ಈ ಮನೆಗೆ ರಕ್ಷಣೆಯಾಯಿತು; ಇವನು ಸಹ ಅಬ್ರಹಾಮನ ಮಗನಲ್ಲವೋ? ಯಾಕಂದರೆ ಮನುಷ್ಯನ ಮಗನು ಕಳದು ಹೋದ್ದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು. ಲೂಕ. ೧೯, ೯. ೧೦.

ರಕ್ಷಣೆಯಾಗಲಿ! ಶುಭಮಸ್ತು! ಎಂಧೇಳಿ ರಕ್ಷಕನಾದ ಯೇಸು ಆಶೀರ್ವದಿಸಿದಲ್ಲಿ ಮಹದಾಶೀರ್ವಾದ ಉಂಟು. ಯೇಸು ಬಂದು ಶೇರಿದ ಮನೆಗೆ ಮಹಾ ಶುಭಲಾಭವಾಗಿ, ಮಹಾ ಪರಿಣಾಮ, ಮಹಾ ಕಲ್ಯಾಣವೇ ಆಗುತ್ತದೆ. ಯೇಸು ಮುಟ್ಟಿದಲ್ಲಿ ಪಾಪವೂ ಬಾಧೆಯೂ ಪರಿಹಾರವಾಗಿ, ಆನಂದವು, ಪರಮಾನಂದವೇ ಉಂಟು. ಒಳ್ಳೇ ನೆಂಟರಿಷ್ಟರ ಭೇಟಿಗೆ ಎಷ್ಟೋ ಸಂತೋಷವಾಗುತ್ತದೆ! ಯೇಸುವಿನ ದರ್ಶನವು ಕೇವಲ ಕೈವಲ್ಯವೇ! ಆತನು ಪ್ರವೇಶವಾಗಿ ಕೂತು ಕೊಂಡ ಮನೆ ಸ್ವರ್ಗವೇ ಅಂತಾಯಿತು. ಆತನಲ್ಲಿಯ ರಕ್ಷಣೆಯಂದರೆ ಅತುಲ್ಯ ದ್ರವ್ಯ, ಅಖಂಡ ಪದವಿ, ಶಾಶ್ವತ ಜೀವ. ಜಕ್ಕಾಯನಿಗೆ ಅಂಥ ಲಾಭವು ಆದ್ದಕ್ಕೆ ಅವನ ವಿಶ್ವಾಸವೇ ಕಾರಣವಾಯಿತು. ಅಂಥ ವಿಶ್ವಾಸವು ಕಂಡ ಕಂಡಲ್ಲಿ ಶಿಕ್ಕದು: ಅದು ಬಹಳ ಅಪರೂಪವಾಗಿದೆ. ಹೀಗಿರಲಾಗಿ ಜಕ್ಕಾಯನಿಗೆ ಆದ ಲಾಭವೂ ಬಹು ಅಪರೂಪವೇ.

ಸ್ವಸ್ಥವಾಗಿರುವವರಿಗಲ್ಲಾ ಅಸ್ವಸ್ಥದವರಿಗೆ ವೈದ್ಯನು ಬೇಕು. ಲೂಕ. ೫, ೩೧. ಯೇಸುವಿಗೆ ವಾಶಿ ಮಾಡಲಿಕ್ಕೆ ಆಸ್ಪದವಿಲ್ಲದಲ್ಲಿ ಆತನು ವೈದ್ಯನಾಗಿ ಉಪಕಾರ ಮಾಡಿ ರಕ್ಷಿಸಲಾರನು. ಅಸ್ವಸ್ಥದವರೆಂದು ಅನ್ನಿಸಿ ಕೊಳ್ಳ ತಕ್ಕಂಥವರಿಗೋಸ್ಕರ ಮಾತ್ರವಲ್ಲಾ, ನೀತಿ ಸ್ಥಿತಿಗೆಟ್ಟವರಿಗೋಸ್ಕರವೂ ಬಂದಾತನಾಗಿದ್ಧಾನೆ. ಕಳದು ಹೋದದನ್ನು ಹುಡುಕುವಾತನೂ ಆಗಿದ್ಧಾನೆ. ತಪ್ಪಿ ಹೋದವರನ್ನು ಹುಡುಕುವಾತನಾಗಿ ಯೇಸು ತಪ್ಪಿ ಹೋದವರ ಅರಿಷ್ಟ ಸ್ಥಿತಿಯನ್ನು ಪರಾಂಬರಿಸಿ ನೋಡಿ, ಅದನ್ನು ಅವರಿಗೆ ಕಾಣಿಸಿ ಕೊಟ್ಟು, ತಿಳಿಯ ಪಡಿಸುತ್ತಿದ್ಧಾನೆ. ಆತನು "ಮನುಷ್ಯನ ಮಗನು" ಆಗಿ, ನರಕುಲದೀಪಕನೂ ನರವಂಶೋದ್ಧಾರಕನೂ ಆಗಿ, ಗತಿಗೆಟ್ಟವರ ದುರವಸ್ಥೆಯನ್ನು ಅರಿತು ಕೊಂಡು, ಕನಿಕರವುಳ್ಳಾತನಾಗುತ್ತಾನೆ. ಕ್ರೂಜೆಯಲ್ಲಿ ಪಾಪದ ವಿಶಿಷ್ಟ ಬಾಧೆಯನ್ನು ತಾನೇ ಹೊತ್ತು ಕೊಂಡನಲ್ಲಾ! ಆದರೂ ಹೆಚ್ಚಾದವರು ತಮ್ಮ ಅರಿಷ್ಟವನ್ನು ಆತನ ಕೈಯಿಂದ

ಪರಿಹರಿಸಿ ಕೊಳ್ಳದೆ, ಪರಿಣಾಮವಾಗದೆ, ಸ್ವಂತ ಶಕ್ತಿಯಿಂದ ನೀತಿಯನ್ನು ಸಾಧಿಸಿ ಕೊಳ್ಳ ಬೇಕೆಂದು ಪೇಚಾಡುತಾ್ತ, ಆತನಿಗೆ "ತೊಲತೊಲಗು!" ಎಂದನ್ನುವವರಾಗುತ್ತಾರೆ. ಕಲಿಸೋದಕ್ಕೆ, ನೀತಿಗಳನ್ನು ಬೋಧಿಸೋದಕ್ಕೆ, ಒಂದಿಷ್ಟು ಕುಂದು ಕೊರತೆ ಇದ್ದದನ್ನು ತಿದ್ದೋದಕ್ಕೆ ಮಾತ್ರವೇ ಕ್ರಿಸ್ತ ಯೇಸು ಬರಲಿಲ್ಲಾ; ಆತನು ಬರೇ ಉಪಾಧ್ಯಾಯನಾಗಲಿ ಆಚಾರ್ಯನಾಗಲಿ ನೀತಿಶಾಸ್ತ್ರಿಯಾಗಲಿ ಸಾಲದ್ದನ್ನು ಭರ್ತಿ ಮಾಡುವಾತನಾಗಲಿ ಆಗಿರದೆ, ಕಳದು ಹೋದ್ದನ್ನು ಹುಡುಕುವಾತನೂ ಮುಳುಗಿ ಹೋದ್ದನ್ನು ಉದ್ಧಾರ ಮಾಡುವಾತನೂ ಜೀವ ಕಳಕೊಂಡದನ್ನು ಬದುಕಿಸುವಾತನೂ ಆಗಿರುತ್ತಾನೆ. ಆತನನ್ನು ಅಂಥವನೆಂತಾ ಜಕ್ಕಾಯನು ಅನುಭವ ಮಾಡಿದನು. ಅಂಥವನೇ ಎಂತ ಆತನನ್ನು ಹಾಗೆಯೇ ಅನುಭವ ಮಾಡಿದವರು ಮಾತ್ರ ಆತನಲ್ಲಿ ಇಷ್ಟಲಾಭ ಮಾಡಿ ಕೊಂಡು, ಸಂತೋಷವುಳ್ಳವರಾಗ ಬಹುದು. ಆದರೆ ಯಾರಾದರೂ ತಾನು ಗತಿಗೆಟ್ಟವನೆಂದು ತಿಳಿದು ಕೊಳ್ಳ ಬೇಕಾದರೆ, ಪಾಪದ ಬಾಧೆಯನ್ನು, ಒಂದಿಷ್ಟು ನರಕಯಾತನೆ ಎಂಬಂತಾದ ತಾಪವನ್ನು, ಮನಸ್ತಾಪವನ್ನು ಅನುಭವಿಸ ಬೇಕು. ಪಾಪ ಬೋಧವು ತಾರತಮ್ಯವುಳ್ಳದಾಗಿದೆ, ಅಂದರೆ ತಾನು ಪಾಪಿ ಎಂಬ ಬೋಧವು ಒಬ್ಬನಲ್ಲಿ ಹೆಚ್ಚು ಒಬ್ಬನಲ್ಲಿ ಕಡಿಮೆ ಇರುವದು. ಹೀಗಿರಲಾಗಿ ಪಾಪಕ್ಕಾಗಿ ಶೋಕ ಪಡುವದರಲ್ಲಿಯೂ ಬಹಳ ಹೆಚ್ಚು ಕಡಿಮೆ ಕಾಣುತ್ತದೆ. ಪಾಪಕ್ಕೆ ಪಡ ತಕ್ಕ ದುಃಖವು ಎಲುಬಿನಲ್ಲಿ ಕೊರೆಯುವ ಒಂದು ಕೀಟದ ಕಾಟದಂತೆ, ಸುಡುವ ಬೆಂಕಿಯಂತೆ ಇದ್ದು, ಬಹು ಮನೋವ್ಯಥೆ ಕೊಡುವಂಥಾದ್ದಾಗ ಬೇಕು. ಹೀಗಾಗುವ ಪಕ್ಷ ಮಾತ್ರದಲ್ಲಿ ತಾನು ಪಾಪಿ ಎಂತ ತಿಳಿದು ಕೊಂಡ ಮನುಷ್ಯನು ಯೇಸುವನ್ನು ಮರೆಹೊಗಲಿಕ್ಕೆ ಓಡಿ ಓಡಿ ಬಂದಾನು,—ಕಡಜದ (ಕಣಜದ ಹುಳದ) ಉರಿಗೆ ಗುರಿಯಾದವನು ನೀರಿಗೆ ಓಡಿ ಹಾರುವಂತೆ.

ನಿನಗೆ ಎಚ್ಚರಿಕೆಯಾಗಿ, ನಿನ್ನರಿಷ್ಟ ಸ್ಥಿತಿ ತಿಳಿದು ಬಂದು, ದುಃಖವಾದರೆ, ನೀ ತಡೆಯದೆ ಇದ್ದ ಹಾಗೆ ಓಡಿ, ಯೇಸುವನ್ನು ಮರೆ ಹೊಗು! ನಿನಗೋಸ್ಕರವೂ ಕ್ರೂಜೆಯಲ್ಲಿ ಪಾಪಪ್ರಾಯಶ್ಚಿತ್ತಾರ್ಥಕ ಮರಣವನ್ನು ತಾಳಿದ ಕ್ರಿಸ್ತನನ್ನು ಎರಡು ಕಣ್ಣು ಊರಿ ಇಟ್ಟು ನೋಡು! ನಿನ್ನೆಲ್ಲಾ ಅರಿಷ್ಟವು ಆತನಲ್ಲಿ ಕ್ರೂಜೆಗೆ ಬಿದ್ದು, ನಿನಗೆ ತಪ್ಪಿದಂತಾಯಿತು. ಆತನನ್ನು ನೀನು ಹಿಡುಕೊಂಡರಾಯಿತು. ಯೇಸುವನ್ನು ಮರೆ ಹೊಕ್ಕವರ ಪಾಪಗಳು ಲಾಕಿಬಣ್ಣದ ಹಾಗಿದ್ದರೂ, ಹಿಮದ ಹಾಗೆ ಬಿಳುಪಾಗುವವು; ಅವು ರಕ್ತದ ಹಾಗೆ ಕೆಂಪಾಗಿದ್ದರೂ, ಉಣ್ಣೆಯ ಹಾಗೆ ಆಗುವವು. ಯೆಶಾ. ೧, ೧೮. ಪಾಪವು ಹೆಚ್ಚಿದಲ್ಲಿ ಜೀವದಾಯಕ ದೇವತಾಕೃಪೆ ಮತ್ತೂ ಹೆಚ್ಚುವದು. ರೋಮ. ೫, ೨೦. ೨೧.

ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?

(೭೭ನೇ ಪಾನಿನಿಂದ ಮುಂದೆ.)

ಜರ್ಮನ್ ದೇಶದ ದಕ್ಷಿಣದಿಂದ ವಾಯವ್ಯ ದಿಕ್ಕಿನಲ್ಲಿರುವ ಬ್ರೇಮೆನ್ ಎಂಬ ಬಂದರಕ್ಕೆ ನಡದು ಮುಟ್ಟಲಿಕ್ಕೆ ಅವನಿಗೆ ಸುಮಾರು ದಿವಸ ಬೇಕಾದ್ದಲ್ಲದೆ, ಬಹು ಪ್ರಯಾಸವೂ ಆಯಾಸವೂ ಆಯಿತು. ಬ್ರೇಮೆನ್ ಬಂದರದಲ್ಲಿ ಮುಟ್ಟಿ, ಸಮುದ್ರಪಯಣಕ್ಕೆ ಬೇಕಾದ್ದನ್ನು ಸವರಿಸಿ ಕೊಂಡು, ಹಡಗವನ್ನೂ ಹುಡುಕಿ ಕೊಂಡು, ಏರಿ ಕೊಂಡು, ಕೂತು, ಸುಮಾರಿನ ಸಂತೋಷದಲ್ಲಿ ತೆರಳುವ ಘಳಿಗೆಯನ್ನು ಕಾದು ಕೊಂಡನು; ಆದರೆ ಆವಾಗಾದರೂ ಕರಕರೆ ತಪ್ಪಲಿಲ್ಲಾ. ಹಡ

ಗವನ್ನು ಹತ್ತಿ ಕೊಂಡ ಇತರ ಜನರು, ಈಗ ಒಬ್ಬನು, ಮತ್ತೂ ಒಬ್ಬನು, ಅವನ ಹತ್ತರ ಬಂದು,
ನೀನು ಯಾವ ಊರಿನವನು? ಹೆಂಡತಿ ಮಕ್ಕಳು ನಿನಗಿಲ್ಲವೋ? ಅವರನ್ನು ಬಿಟ್ಟು, ಒಬ್ಬನಾಗಿ ದೇ
ಶಾಂತರಕ್ಕೆ ಹೊರಟ ನಿಮಿತ್ತವೇನು? ಎಂಬದಾಗಿ ಕೇಳುವವರಾದರು. ಈ ತರದ ಸವಾಲುಗ
ಳನ್ನು ಹಡಗವನ್ನೇರಿ ಕೊಂಡ ದಿನದಲ್ಲಿ ಮಾತ್ರವಲ್ಲಾ, ಮತ್ತಿನ ದಿನಗಳಲ್ಲಿಯೂ ಅವನು ಘಳಿಗೆ
ಘಳಿಗೆಗೆ ಕೇಳ ಬೇಕಾಯಿತು. ಅಂಥಾ ನಾಲ್ಕು ಪ್ರಶ್ನೆಗೆ ಒಂದು ಉತ್ತರವನ್ನಾದರೂ ಕೊಡು
ವದು ಅವನಿಗೆ ಬಹು ಇಕ್ಕಟ್ಟಾಯಿತು; ಯಾಕಂದರೆ ನಿಜವನ್ನು ಹೇಳಲಿಕ್ಕೆ ನಾಚಿಕೆ ಬಿಡಲಿಲ್ಲಾ,
ಸುಳ್ಳು ಹೇಳಲಿಕ್ಕೆ ಮನಸ್ಸಾಕ್ಷಿ ಒಡಂಬಡಲಿಲ್ಲಾ. ಹಡಗದಲ್ಲಿ ಜನರ ದೃಷ್ಟಿಗೂ ಮಾತಿಗೂ ತಪ್ಪಿಸಿ
ಕೊಳ್ಳ ಸಾಧ್ಯವಾಗಿದ್ದದಾದರೆ, ಒಂದು ಬಿಲವನ್ನಾದರೂ ನುಸುಳಿ, ತಪ್ಪಿಸಿ ಕೊಳ್ಳುತ್ತಿದ್ದನು. ಆದರೆ
ಪರಿಚಿತಿ ಇಲ್ಲದ ಜನರ ಸವಾಲಿಗೆ ಜವಾಬು ಕೊಡುವದು ಅಷ್ಟು ಇಕ್ಕಟ್ಟಿನ ಕೆಲಸವಾದ ಮೇಲೆ
ಪರಿಚಿತಿ ಇದ್ದವರಿಗೂ ಕರ್ಮಫಲದಾಯಕ ಸರ್ವಜ್ಞ ನ್ಯಾಯದೀಶನಾದ ದೇವರಿಗೂ ಹ್ಯಾಗೆ ಉ
ತ್ತರ ಕೊಡುತ್ತಿದ್ದನು? ದೇವರು ಕೇಳಿದರೆ, ಏನು ಜವಾಬು ಕೊಟ್ಟೇ? ಎಂಬ ಪ್ರಶ್ನೆಯನ್ನು ಅವನ
ಮನಸ್ಸಾಕ್ಷಿ ಅವನಿಗೆ ಮತ್ತೂ ಮತ್ತೂ ಹಾಕುತ್ತಾ ಬಂತು. ಮತ್ತು ಮನೆಯ ನೆನಪು ಸಹ
ಆಗದೆ ಹೋಗಲಿಲ್ಲಾ. ನನ್ನ ಹೆಂಡತಿ, ನನ್ನ ಮಕ್ಕಳು ಈಗ ದಿಕ್ಕಿಲ್ಲದವರು; ಅವರನ್ನು ನೋಡಿ ಸಂ
ರಕ್ಷಿಸ ಋಣಸ್ಥನಾದ ನಾನು ದ್ರೋಹಿಯಾಗಿ ಅವರನ್ನು ಬಿಟ್ಟು ಬಂದೆ; ಅವರ ಗತಿ ಏನಾದೀತು?
ಅಕಟಕಟಾ! ಎಂಬದಾಗಿ ಮನಸ್ಸಿಗೆ ಚಿಂತೆ ಹಿಡಿದು ಹೋಗಿ, ಅವನು ಹಾಲು ಎಂದು ನೆನಸಿದ್ದಕ್ಕೆ
ಮಣ್ಣು ಹಾಕಿ ಬಿಡುವಂಥಾದ್ದಾಯಿತು. ನಿಟ್ಟುಸುರಿನ ಮೇಲೆ ನಿಟ್ಟುಸುರು ಬರುವಂತಾಯಿತು;
ಆದರೆ ಸಂಗಡವಿದ್ದ ಜನರನ್ನು ನೋಡಿ ಅವನು ನಿಟ್ಟುಸುರುಗಳನ್ನು ಬಿಡಲಾರದೆ, ಅವನ್ನು ಅಣಗಿಸಿ
ನುಂಗಿ ಬಿಡ ಬೇಕಾಯಿತು. ಇದರಿಂದ ಎದೆಗೆ ಮಹಾ ಭಾರ ಬಿದ್ದು, ಕಡು ಇಕ್ಕಟ್ಟಾಯಿತು.
ಘಾಳಿ ಅನುಕೂಲವಾಗಿ ನಾವೆ ಚನ್ನಾಗಿ ಓಡಿದ್ದಕ್ಕೆ ಇತರರೆಲ್ಲರು ಸಂತೋಷ ಪಡುತ್ತಿದ್ದ ಸಮಯ
ದಲ್ಲಿಯಾದರೂ ಅವನ ಎದೆಗೆ ಇಕ್ಕಟ್ಟು ತಪ್ಪಲಿಲ್ಲಾ; ಆವಾಗಾದರೂ ಅಧೋಮುಖನಾಗಿ ಮನೋ
ವ್ಯಸನದಲ್ಲಿ ಕುಳಿತು ಇರುತ್ತಿದ್ದನು. ಘಾಳಿ ಅನನುಕೂಲವಾಗಿ, ಬಿರುಘಾಳಿ ಏಳಲಿಕ್ಕೆ ಸಾಕು
ಎಂದು ಕಂಡ ಸಮಯದಲ್ಲಿ ಹಡಗವು ಮುಳುಗಿ, ತಾನು ಸಹ ಮುಳುಗಿ ಹೋದರೆ, ತನ್ನ ಗತಿ
ಯೇನು? ಸಮುದ್ರದ ಅಡಿಗೆ ಮಾತ್ರವಲ್ಲಾ, ಪರಮನರಕಕ್ಕೆ ತಾನು ಇಳಿದು ಬೀಳುವದು ಸೈ ಎಂತ
ಬಹು ಘಾಬ್ರಿಯಾಗಿ ಭಯ ಪಡುತ್ತಿದ್ದನು. ಒಮ್ಮೆ ಅವನು ಚಿಂತಾಪಂಕಮಗ್ನನಾಗಿ ಕೇವಲ ಆಶಾ
ಭ್ರಷ್ಟನಂತೆ ಕಾಣಿಸಿ ಕೊಂಡಲ್ಲಿ ಹಡಗವನ್ನು ಹತ್ತಿ ಕೊಂಡಿದ್ದ ಒಬ್ಬ ಕೃಷಿಕನು ಅವನ ಹತ್ತರ ಬಂದು,
ಕುಳಿತು, ಬಹು ಸ್ನೇಹಭಾವವಾಗಿ—ಏನಪ್ಪಾ! ನಿನ್ನ ಮೋರೆಯಲ್ಲಿ ಕಡು ಮನೋವ್ಯಥೆ ಕಾಣಿ
ಸುತ್ತದೆ. ನಿನಗೆ ಬಹಳ ತಾಪತ್ರಯ ಅನುಭವವಾಗಿರ ಬೇಕು; ನಿನ್ನ ಕುಟುಂಬದಲ್ಲಿ ಯಾರಾ
ದರೂ, ಒಂದು ವೇಳೆ ನಿನ್ನ ಹೆಂಡಿತಿಯೇ ತೀರಿ ಹೋದ ವಿಯೋಗತಾಪವು ಕಾಡುತ್ತಿರುತ್ತದೋ?
ನಿನ್ನ ದುಃಖವನ್ನು ನನಗೆ ಸ್ವಲ್ಪ ತಿಳಿಸು! ಬಾಯಿ ಬಿಟ್ಟರೆ, ಎದೆಗೆ ಬಿದ್ದ ಭಾರವು ಬಹುಶಾ ಉತಾ
ರಾಗುತ್ತದೆ ಎಂಬದಾಗಿ ಮಾತಾಡಿ, ಅವನನ್ನು ಮತಾಡಿಸ ನೋಡಿದಲ್ಲಿ ನಾಚಿಕೆ ಅವನ ಬಾಯಿ
ಯನ್ನು ಕಟ್ಟಿ, ಮಾತಾಡ ಬಿಡಲಿಲ್ಲಾ. ಅವನ ಎದೆಯಲ್ಲಿ ಉರಿ ಹೆಚ್ಚಿ, ಉರುಬಾಗಲು, ಅವನು
ತಂಘಾಳಿಯಿಂದ ಮನಸ್ಸಿಗೆ ಸ್ವಲ್ಪ ತಂಪಾಗಿ, ಶಾಂತಿಯಾದೀತು ಎಂದು ಎದ್ದು, ಹಡಗದ ಮೇಲೆ
ಅಡ್ಡಾಡಿದನು. ಆದರೆ ಅಡ್ಡಾಡುತ್ತಿರುವಾಗ್ಯೆ ಸಮುದ್ರದ ವಿಶಾಲವೂ ಅಂತರಿಕ್ಷದ ವಿಶಾಲವೂ ದೇ
ವರ ಮಹತ್ವ ಸರ್ವಶಕ್ತಿ ಇವುಗಳನ್ನು ಅವನ ದೃಷ್ಟಿಗೆ ತಂದು ಕೊಟ್ಟು, ದೇವರ ನೆನಪು ಹುಟ್ಟಿಸಿತು.
ದೇವರ ನೆನಪಾಗುತ್ತಲೇ ಭಯವೂ ಕಳವಳವೂ ಹೆಚ್ಚಿತು. ಯಾಕಂದರೆ ಆತನ ಪ್ರೀತಿ ದಯ ಕರು

ಣಾತಿಶಯಗಳು ಅವನಿಗೆ ತೋರದೆ, ಆತನ ಶಕ್ತಿ ನೀತಿ ನ್ಯಾಯವಿಚಾರಣಾಕರ್ತೃತ್ವಾದಿಗಳು ಮಾತ್ರವೇ ಅವನ ಮನಸ್ಸಿಗೆ ಹತ್ತಿದವು. ಆಗ ಅಡ್ಡಾಟದಲ್ಲಿಯೂ ಶಾಂತಿಯಾಗದೆ, ರೋಮಾಂಚವೇ ಆಗಿ, ಅವನ ಮೈಯೆಲ್ಲಾ ನಡುಗುವಂಥಾದ್ದಾಗಿ, ತಾನು ತನ್ನ ಹೆತ್ತವರಿಗೂ, ಅನಂತರ ಹೆಂಡತಿಗೂ ಮಕ್ಕಳಿಗೂ ಮನನೋಯಿಸಿದ್ದು, ಅನ್ಯಾಯ ಮಾಡಿದ್ದು, ಸುಳ್ಳಾಡಿದ್ದು, ಸುಳ್ಳು ಪ್ರಮಾಣ ಮಾಡಿದ್ದು, ಅಮಲುಖೋರನಾದದು ಮೊದಲಾದ ಅಪರಾಧಗಳೆಲ್ಲವೂ ಅವನ ಕಣ್ಣೆದುರಿಗೆ ಬಂದಂತಾದವು. ಮತ್ತವನು ಕಂಗೆಟ್ಟು, ತನ್ನ ಸುತ್ತಮುತ್ತಲೂ ಬರೇ ಶಾಪವನ್ನು ಕಾಣುವವನಾಗಿ, ದೇವಾನುಗ್ರಹದಲ್ಲಿ, ದೇವರ ಕ್ಷಮಾದಯೆಯಲ್ಲಿ ನಂಬಿಕಿಡಲಿಕ್ಕೆ ಕೂಡದೆ, "ನೀನು ಶಾಪಗ್ರಸ್ತನೇ! ಎಲ್ಲಿಗೆ ಹೋದರೂ, ನೀನು ಶಾಪಗ್ರಸ್ತ! ಶಾಪತಾಪ ನಿನಗೆ ತಪ್ಪದು!" ಎಂಬುವ ಶಬ್ದವನ್ನು ಮನಸ್ಸಾಕ್ಷಿಯಲ್ಲಿ ಕೇಳುವವನಾದನು. ಮತ್ತು ಸುಳ್ಳು ಪ್ರಮಾಣ ಮಾಡಿ, ಕಚೇರಿಯಿಂದ ಹೊರಟು ಬರುವಾಗ್ಯೆ ಆ ಹಳ್ಳಿಯವನು ಹೇಳಿದ ಮಾತು ಮನಸ್ಸಾಕ್ಷಿಯ ಶಬ್ದದ ಸಂಗಡಲೇ ಕೇಳುತ್ತಿತ್ತು; ಆ ಮಾತು ಏನಂದರೆ: "ನೀನು ಸುಳ್ಳು ಪ್ರಮಾಣ ಮಾಡಿ, ನನ್ನನ್ನು ಸುಲುಕೊಂಡಿ; ಆದರೂ ಚಿಂತಿಲ್ಲಾ; ಈ ಅನ್ಯಾಯದ ಲಾಭವು ನಿನಗಿರಲಿ! ನೀನು ನಿನ್ನ ಮೇಲೆ ಬರ ಮಾಡಿ ಕೊಂಡ ಶಾಪಕ್ಕೂ ಬಾಧೆಗೂ ನೀನೇ ಬಾಧ್ಯನು, ನಾನಲ್ಲಾ!"

ಬಿರುಘಾಳಿಯಾಗಲಿ ಸುಳಿಘಾಳಿಯಾಗಲಿ ಆಗದೆ, ಸಮುದ್ರಪಯಣವು ತಕ್ಕಷ್ಟು ಅನುಕೂಲವಾಗಿ ಸಾಗಿದ್ದಾಗ್ಯೂ, ಸ್ವಲ್ಪ ಕಡಿಮೆ ಹಡಗವನ್ನು ಹತ್ತಿ ಕೊಂಡಿದ್ದ ಜನರೆಲ್ಲರಿಗೆ ವಾಂತಿಯಾಗದೆ ಹೋಗಲಿಲ್ಲಾ; ಕೆಲವರಿಗೆ ಕಡು ಸಂಕಟವಾದರೂ ಆಯಿತು; ಇಬ್ಬರು ಹಡಗದಲ್ಲಿ ತೀರಿ ಕೊಂಡು, ಸಮುದ್ರವೆಂಬ ಸಮಾಧಿಯಲ್ಲಿ ತಮ್ಮ ಪಯಣವನ್ನು ಮುಗಿಸಿದರು. ಹೀಗಾಗಲಾಗಿ ಒಂದಾನೊಂದು ದಿವಸ ಹೊತ್ತಾರೆ ಕೂವೆಮರದಲ್ಲಿ ಕಾವಲಿದ್ದ ಖಲಾಶಿ ಕರೆಯನ್ನು ಕಂಡು, "ಭೂಮಿ! ಭೂಮಿ!" ಎಂತ ಕೂಗಿದ್ದಕ್ಕೆ ಎಲ್ಲರು ಮಹಾ ಹರುಷಧ್ವನಿ ಗೈದು, ಆನಂದಮುಖರಾಗಿ ನಿಂತು ಕೊಂಡು, ಸಲ್ಲಾಪಿಸುತ್ತಾ ಹಾಡುತ್ತಾ ಆಡುತ್ತಾ ಕರೆಯನ್ನು ನೋಡುವವರಾದರು. ತಮ್ಮನ್ನು ದಾಟಿಸಿ, ಕಾಸಾಡಿ ಉಳಿಸಿದ್ದಕ್ಕಾಗಿ ಕೆಲವರಾದರೂ ಮನಸ್ಸಿನಲ್ಲಿ ದೇವರನ್ನು ಕೊಂಡಾಡಿದರು. ಹಡಗದವರ ಉಲ್ಲಾಸವನ್ನು ನೋಡಿ, ಅವರು ಕಂಡ ಭೂಮಿ ಪಂಚಭೂಖಂಡಗಳಲ್ಲಿ ಒಂದು ಎಂಬದನ್ನು ತಿಳಿಯದವನು ಆ ಹೊಸ ಭೂಮಿ ಸ್ವರ್ಗಲೋಕಕ್ಕೆ ಶೇರಿದ್ದೋ? ಏನೋ? ಎಂದು ಆಶ್ಚರ್ಯಪಟ್ಟು, ಪ್ರಶ್ನೆ ಕೇಳ ಬಹುದಿತ್ತು. ಅವರು ಕರೆಗೆ ಸಮೀಪಿಸುವಷ್ಟಕ್ಕೆ ಕರೆಯಿಂದ ಬೀಸುತ್ತಿದ್ದ ಬಹು ಸುಗಂಧದ ತಂಘಾಳಿ ಅವರ ಉಲ್ಲಾಸವನ್ನು ಹೆಚ್ಚಿಸುವಂಥಾದ್ದಾಯಿತು. ಕಡೆಗೆ ಬಲ್ತಿಮೋರೆಂಬ ಪಟ್ಟದ ರೇವನ್ನು ಶೇರುವಾಗ್ಯೆ ಎಲ್ಲರು ಸಾನಂದರಾಗಿ ಕಣ್ಣು ಹೊಡದು, ಬಂದರವನ್ನೂ ಪಟ್ಣವನ್ನೂ ನೋಡಿ, ನೋಡೋದೇ ಮಾಡಿದರು. ಕಟ್ಟಕಡೆಗೆ ಲಂಗರು ಬಿಡುತ್ತಲೇ ಇಳಿಯ ತೊಡಗಿದರು. ಕೊಯಿಲರ್ (ಆ ಕಮ್ಮಾರನ ಹೆಸರು) ಸಹ ತನ್ನ ಗಂಟನ್ನು ಕೈಯಲ್ಲಿ ಹಿಡುಕೊಂಡು ಇಳಿದನು. ಆದರೆ ಕರೆಯನ್ನು ಕಂಡು ಎಲ್ಲರು ಮಹಾ ಸಂತೋಷ ಪಟ್ಟಾಗ್ಯೆ ಸಂತೋಷ ಪಡಲಾರದವನ ಮುಖದಲ್ಲಿ ಇಳಿಯುವಾಗಲೂ ಸಂತೋಷದ ಕಳೆಯೊಂದೂ ಕಾಣಲೊಲ್ಲದು. ಎಲ್ಲವರು ಅರಳಿದ ಕಮಲಪುಷ್ಪದಂತಾದ ಆನಂದಮುಖರಾಗಿ ಮದುವೇ ಊಟಕ್ಕೆ ಹೋಗುವ ದಿಬ್ಬಣದವರೋ? ಎಂಬ ಹಾಗೆ ಬಾಜಾರಿನ ದಾರಿ ಹಿಡಿದು ಹೋಗುವಲ್ಲಿ ಅವನು ಕೈದಾದ ಗಂಟುಗಳ್ಳನೋ? ಎಂಬಂತೆ ಅಧೋಮುಖನಾಗಿ ಕಾಲೆಳದು ನಡೆದನು. "ರಾಮೇಶ್ವರಕ್ಕೆ ಹೋದರೂ, ಶನೀಶ್ವರ ಬಿಡನು"—"ಹೆಣ ಸುಟ್ಟರೂ, ಋಣ ಸುಡಲಿಲ್ಲಾ"—"ಎತ್ತ ಹೋದರೂ, ಕರ್ಮವು ಬೆನ್ನಟ್ಟದೆ ಹೋಗದು"—"ಪಾಪಿ ಸಮುದ್ರವನ್ನು ಹೊಕ್ಕರೂ, ಮೊಣಕಾಲುದ್ದ ನೀರು"—"ಪಾಪಿ ಇದ್ದಲ್ಲಿ

ಪಾತಾಳ" ಎಂಬೀ ಮೊದಲಾದ ನೀತಿವಾಕ್ಯಗಳ ಪ್ರತಿಧ್ವನಿ ಹೊಸ ಊರಲ್ಲಿಯೂ ಅವನ ಕಿವಿಯಲ್ಲಿ ಕೇಳುವಂಥಾದ್ದಾಗಿ, ಅವನ ಸೊಂಪನ್ನೆಲ್ಲಾ ಅಳಿಸಿ, ಸೊಂಟ ಮುರಿದಂತೆ ಮಾಡಿ ಬಿಟ್ಟಿತು. "ತೋಡಿದ ಭಾವಿಗೆ ಜಲವೇ ಸಾಕ್ಷಿ: ಮಾಡಿದ ಪಾಪಕ್ಕೆ ಮನವೇ ಸಾಕ್ಷಿ" ಎಂಬ ಮಾತುಂಟಲ್ಲಾ!

ಕೊಯಿಲರ್ ಹಿಂದು ಮುಂದು ನೋಡದೆ, ಕೈಯಲ್ಲಿಯ ಗಂಟು ಬಹು ಹಗುರವಾಗಿದ್ದರೂ, ದೊಡ್ಡ ವಜ್ಜೆ ಹೊರುವವನಂತೆ ಬಾಜಾರಿನಲ್ಲಿ, ಕೆಲವು ಸರ್ತಿ ಜನರ ದೊಡ್ಡ ಗೊಂದಣಗಳಲ್ಲಿ, ತಾನು ಎಲ್ಲಿ? ತನ್ನ ದಾರಿ ಎಲ್ಲಿಗೆ? ಎಂತ ತಿಳಿಯದೆ, ಬೀದಿಯಿಂದ ಬೀದಿಗೆ ನಡೆದು ಹೋದನು. ಕಡೆಗೆ ಬಹಳ ಹೊತ್ತಾಗಿ ಹೊಟ್ಟೆ ತನ್ನ ಹಕ್ಕನ್ನು (ಅನ್ನಪಾನ) ಕೇಳಿ ಕೊಂಡ ಕಾರಣದಿಂದ ತಡಿಸಿ ಕೊಂಡು, ಒಂದು ಆಶ್ರಯಶಾಲೆಯನ್ನು ಶೇರಿದನು. ಎಲ್ಲವು ಬಹಳ ತುಟ್ಟಿಯಾಗಿದ್ದದರಿಂದ ಊಟಕ್ಕೂ ಮೊಕಾಮಿಗೂ ಭಾರಿ ಹಣ ಕೊಡ ಬೇಕಾಯಿತು. ಕೆಲಸದ ವಿಷಯದಲ್ಲಿ ಸಹ ಅಲ್ಲಿ ವಿಚಾರಿಸಿ ಕೇಳಿದನು; ಆದರೆ ಆ ಛತ್ರದವರಿಗೆ ಜರ್ಮನ್ ಭಾಷೆ ತಿಳಿಯಲಿಲ್ಲಾ; ಇವನಿಗೆ ಅವರ ಭಾಷೆ (ಇಂಗ್ಲಿಷ್) ಬರಲಿಲ್ಲಾ. ಈ ಕಾರಣದಿಂದಲೂ ಪರದೇಶಿಯ ಮೇಲೆ ಅವರಿಗೆ ಕರುಣ ಹುಟ್ಟದ್ದರಿಂದಲೂ ಅವನಿಗೆ ಕೆಲಸವು ಶಿಕ್ಕುವ ಹಾಗೆ ಯಾರೂ ಕೈ ಕೊಡಲಿಲ್ಲಾ, ಕಿವಿಯಾದರೂ ಯಾರೂ ನೀಡಲಿಲ್ಲಾ. ಮರು ದಿನ ಬೆಳಿಗ್ಯೆ ಅವನು ಎದ್ದು, ತಿರಿಗಿ ಬೀದಿ ಬೀದಿಯಲ್ಲಿ ತಿರುಗಾಡ ತೊಡಗಿದನು. ಬಹಳ ಹೊತ್ತು ತಿರುಗಾಡಿ, ಕಮ್ಮಾರನ ಶಾಲೆಯನ್ನು ಹುಡುಕಿದ ಕಡೆಗೆ ಒಂದನ್ನು ಕಂಡು ಕೊಂಡು ಶೇರಿದನು. ಆ ಶಾಲೆಯ ಧನಿಗೆ ಜರ್ಮನ್ ಭಾಷೆ ತಿಳಿದ ಕಾರಣ ಕೊಯಿಲರ್ ಅವನ ಹತ್ತರ ಮಾತಾಡಿ, ತನ್ನ ಸುಖದುಃಖವನ್ನು ಅರಿಕೆ ಮಾಡ ಬಹುದಾಯಿತು. ಆ ಕಮ್ಮಾರನಿಗೆ ಯಾರೂ ಕೆಲಸದವರು ಬೇಕಿದ್ದಿಲ್ಲಾ; ಆದರೆ ಕೆಲಸದವನೊಬ್ಬನು ಬೇಕಾಗಿದ್ದ ಇತರ ಕಮ್ಮಾರನೊಬ್ಬನ ಪರಿಚಿತಿ ಇತ್ತು. ಈತನ ಶಾಲೆಯನ್ನು ಕೊಯಿಲರನಿಗೆ ತೋರಿಸಿ ಕೊಡಿಸಿದನು. ಕೊಯಿಲರ್ ಈತನ ಶಾಲೆಗೆ ಬಂದು, ಕೆಲಸವನ್ನು ಬೇಡಿ ಕೊಂಡದಕ್ಕೆ ಆ ಕಮ್ಮಾರನು ಕೆಲಸದಲ್ಲಿ ಒಳ್ಳೇ ಘಟ್ಟಿಗನಾದವನಿಗೆ ತಾನು ಕೊಡುವ ಸಂಬಳವೆಷ್ಟೆಂದು ತಿಳಿಸಲು, ಕೊಯಿಲರ್ ಆ ಸಂಬಳಕ್ಕೆ ಒಡಂಬಟ್ಟು, ಕೆಲಸಕ್ಕೆ ನಿಂತನು.

ಅವನ ಯಜಮಾನನು ದಕ್ಷಿಣ ಜರ್ಮನ್ ದೇಶದಲ್ಲಿ ಹುಟ್ಟಿದವನು. ವಿಲಾಸಪ್ರಿಯನೂ ಭುಕ್ತಿಯೇ ಮುಕ್ತಿ ಎಂಬುವ ವಾದದ ವಾಸನೆ ಸ್ವಲ್ಪವಾದರೂ ಇದ್ದವನೂ ಆಗಿದ್ದನು. ಕೆಲಸದವರಿಗೆ ಸರಾಗವಾಗಿ ಮಾತ್ರವಲ್ಲಾ ದಯವಾಗಿ ನಡಿಸುತ್ತಿದ್ದನು. ಕೊಯಿಲರ್ ಕೆಲಸದಲ್ಲಿ ಒಳ್ಳೇ ಕಳೆ ಇದ್ದವನಾಗಿದ್ದದಲ್ಲದೆ, ಕೆಲಸಕ್ಕೆ ಒಳ್ಳೇ ಮನಸ್ಸು ಕೊಡುವವನೂ ಆಗಿದ್ದದರಿಂದ ಯಜಮಾನನು ಅವನಿಗೆ ಬೇಗ ಮೆಚ್ಚಿ, ಒಲೆಯುವವನಾದನು. ಯಜಮಾನಿ ಸಹ ಅವನ ಅಂಗಿ ಇಜಾರುಗಳನ್ನು ಒಗದು, ಹರಕು ಬಟ್ಟೆಗಳನ್ನು ಹೊಲಿದು, ತಿದ್ದಿ ಕೊಟ್ಟು, ತನ್ನ ಮತ್ತು ಗಂಡನ ಒಲುಮೆಯನ್ನು ತೋರಿಸ ಬೇಕೆಂದಿದ್ದಳು. ಆದರೂ ಕೊಯಿಲರ್ ಏನೂ ಸಂತೋಷವಿಲ್ಲದವನಂತೆ ಇದ್ದನು. ನಿತ್ಯ ಮೌನದಲ್ಲಿ ಅವನು ಕೆಲಸ ಮಾಡುತ್ತಿದ್ದದನ್ನು ಅವರು ನೋಡಿ, ತಮ್ಮಲ್ಲಿ ಆಶ್ಚರ್ಯ ಪಟ್ಟರು; ಆದರೆ ಈ ಮರ್ಯಾದೆಗೆ ವಿ ಯೋ ಗ ತಾ ಪ ವೇ ಕಾರಣವಾಗಿದ್ದೀತೆಂದು ಭಾವಿಸಿ ಕೊಂಡು, ಅವರು ಅವನನ್ನು ಖುಷಾಲು ಪಡಿಸಿ, ನೆಗಾಡಿಸ ನೋಡುತ್ತಿದ್ದರು. ಯಜಮಾನನು ಅವನನ್ನು ಕೆಲವು ಸರ್ತಿ ಮದ್ಯಪಾನ ಸಹ ಮಾಡಿಸಿದನು. ಮತ್ತು ಕೆಲಸವು ಸಾಗದ ಆದಿತ್ಯವಾರಗಳಲ್ಲಿ ತಿರುಗಾಡಲಿಕ್ಕೂ ತಮಾಷೆಗೂ ಕರಕೊಂಡು ಹೋಗುತ್ತಿದ್ದನು. ಆದರೆ ಅವರಿಬ್ಬರು ಏನೂ ಬಗೆದು ಮಾಡಿದರೂ, ಕೊಯಿಲರನ ಮುಖಾರವಿಂದವು ಅರಳಿ ಕಳೆಗೊಳ್ಳಲೊಲ್ಲದೆ ಹೋಯಿತು. ಅಳುವ ಮಕ್ಕಳನ್ನು, ಕೈಯಲ್ಲಿ ಬೆಲ್ಲ ಕೊಟ್ಟು, ಖುಷಾಲು ಪಡಿಸ ಬಹುದು; ಆದರೆ ಮನಸ್ತಾಪವಿದ್ದ ಆಳಿಗೆ

ಸಕ್ಕರೆ ತಿನ್ನಿಸಿದರೂ, ಮನಸ್ತಾಪವು ಆರದು. ಯಜಮಾನ ಯಜಮಾನಿಯರು ದಯ ಸ್ನೇಹ ತೋರಿಸಿದಷ್ಟಕ್ಕೆ ಕೊಯಿಲರನಲ್ಲಿ ತಾನು ಅಂಥಾ ಸ್ನೇಹಕ್ಕೂ ದಯಕ್ಕೂ ಅಪಾತ್ರನೆಂಬ ಭಾವವು ಹೆಚ್ಚಿ, ಮನೋವ್ಯಥೆ ಮಿಗಿಲಾದ್ದರಿಂದ ಅವನು ಇನ್ನು ತಡೆಯಲಿಕ್ಕೆ ಕೂಡದೆ, ಅಪ್ಪಣೆ ಬೇಡಿ ಕೊಂಡು, ಹೊರಟು, ಬೇರೆ ಕಡೆಯಲ್ಲಿ ಕೆಲಸ ಹುಡುಕಿದನು. ನಾಲ್ಕು ದಿನ ಹೋಗದೆ ಅವನಿಗೆ ತಿರಿಗಿ ಕೆಲಸ ಶಿಕ್ಕಿತು. ಹೊಸ ಯಜಮಾನ ಯಜಮಾನಿಯರು ಬಹಳ ದಯಾವಂತ ಸಜ್ಜನರಾಗಿದ್ದದಲ್ಲದೆ ಒಳ್ಳೇ ದೇವಭಕ್ತರೂ ಆಗಿದ್ದರು. ತನ್ನ ಅಂಕೆಗೂ ಅಂಡೆಗೂ ಬೆಂಕೊಟ್ಟು, ತಪ್ಪಿ ಹೋದ ಕುರಿಯನ್ನು ಒಳ್ಳೇ ಕುರುಬ ದೇವರು ಕೈ ಬಿಡದೆ, ಹೆಜ್ಜೆ ಹಿಡಿದು, ಅಡಿಗಡಿಗೆಂಬಂತೆ ಹುಡುಕಿ, ತಿರುಗಿಸಿ ತರಲಿಕ್ಕೆ ನೋಡುತ್ತಾ ಬಂದನು. ಹೊಸ ಯಜಮಾನರಲ್ಲಿ ಬೈಬಲೆಂಬ ದೇವವಾಗ್ಗ್ರಂಥವು ಬಹು ಗಣ್ಯವಾಗಿತ್ತು. ಭಕ್ತಿಸಾಧನೆಯಲ್ಲಿ ಗಂಡ ಹೆಂಡರಿಬ್ಬರು ಒಬ್ಬರಿಗೊಬ್ಬರು ಜೋಡಾಗಿ, ಒಳ್ಳೇ ಸಹಾಯಕರಾಗಿದ್ದರು. ಮಕ್ಕಳಲ್ಲಿಯೂ ಭಕ್ತಿ ಶೋಭಿಸುವದು. ಅವರ ಭಕ್ತಿ ಒಕ್ಕಟ್ಟು ಸಮಾಧಾನ ಸುಖಕಲ್ಯಾಣಗಳು ಅವನಿಗೆ ಕಾಣದೆ ಹೋಗಲಿಲ್ಲಾ. ಆದರೆ ಅವರು ದೇವಪ್ರಸಾದಿಗಳು, ಆಶೀರ್ವದಿಸಲ್ಪಟ್ಟವರು ಎಂದು ತಿಳಿದು ಕೊಂಡು, ಅವನು ತನ್ನ ದುರ್ಗತಿಯನ್ನೂ ಶಾಪಗ್ರಸ್ತಿಕೆಯನ್ನೂ ಮತ್ತಷ್ಟು ತಿಳಿದು ಅನುಭವಿಸಿ ಕೊಳ್ಳ ಬೇಕಾಯಿತು. ಹೀಗೆ ನಿಜ ನಿತ್ಯ ಸುಖಜೀವಿಗಳ ಮಧ್ಯದಲ್ಲಿ ಇದ್ದ ದೌರ್ಭಾಗ್ಯನು ಮತ್ತಷ್ಟು ದೌರ್ಭಾಗ್ಯನಾಗಿ, ತನ್ನನ್ನು ತಾನೇ ಹೇಸಿ, ಶಪಿಸಿ ಕೊಳ್ಳುವವನಾದನು. ಮೊದಲನೇ ಯಜಮಾನನನ್ನು ಬಿಟ್ಟು ಇವರಲ್ಲಿ ಬಂದ ಕೊಯಿಲರ್ ಮಳೆಗೆ ಹೆದರಿ ಹೊಳೆಗೆ ಬಿದ್ದಂತಾದನು. ತನ್ನ ಸ್ಥಿತಿ ಗತಿಯನ್ನು, ತನ್ನ ಸಮಸ್ತ ಪೂರ್ವೋತ್ತರಗಳನ್ನು ನೆನಸಿ ಕೊಂಡಲ್ಲಿ ನರಕದ ಬಾಗಲನ್ನು ಕಂಡು, ಅದರಲ್ಲಿ ತನಗೋಸ್ಕರ ಸಿದ್ಧವಾದ ಅಗ್ನಿಯ ಉಷ್ಣವು ತನ್ನ ಮೋರೆಯಲ್ಲೂ ಮೈಯಲ್ಲೂ ಮನದಲ್ಲೂ ಸುಡುತ್ತದೆ ಎಂಬ ಹಾಗೆ ಅನುಭವಿಸಿದನು. ತನ್ನೆಲ್ಲಾ ಕಥೆಯನ್ನು ಪೂರ್ಣವಾಗಿ ಮರತು ಬಿಡುತ್ತಿದ್ದನು; ಆದರೆ ಮರುವು ಬರಲಿಲ್ಲಾ. ನೆನಪು ನಿತ್ಯ ಕಾಟವೇ ಮಾಡುತ್ತಾ ಬಂತು. (ಮುಂದೆ ಸಾಗಿಸಲ್ಪಡುವದು.)

ಚಿನ್ನದ ಹರಳುಗಳು.

೧. ಕಳದ ಶತಮಾನದಲ್ಲಿ ಶ್ವೀಚರ್‌ಲಂದದಲ್ಲಿ ಕಾಳಗವು ನಡೆದ ಸಮಯದಲ್ಲಿ ಒಬ್ಬಾನೊಬ್ಬ ಹಳ್ಳಿಯವನು ಬರೇ ಪಾದುಕೆ (ಹಾವುಗೆ) ಮೆಟ್ಟಿ ಕೊಂಡು, ದಂಡಿಗೆ ಬಂದು ಶೇರಿದಲ್ಲಿ ಇತರ ದಂಡಿನವನೊಬ್ಬನು ಅವನನ್ನು ನೋಡಿ, ನೆಗಾಡಿ, ಅವನಿಗೆ—"ಹಾವಿಗೆ ಮೆಟ್ಟಿ ಕೊಂಡು ದಂಡಿಗೆ ಬಂದಿಯಾ? ಬೆಂಕೊಟ್ಟು ಓಡುವ ಸಂಗತಿಯಾದರೆ, ನೀನು ಹ್ಯಾಗೆ ಮಾಡಿ ಚನ್ನಾಗಿ ಓಡುವಿ?" ಎಂದು ಪ್ರಶ್ನೆ ಹಾಕಿ, ಚೋದ್ಯ ಮಾಡಿದ್ದಕ್ಕೆ ಆ ಹಳ್ಳಿಯವನು ಅಂದದೇನಂದರೆ: "ಬೆಂಕೊಟ್ಟು ಓಡೋಕ್ಕೆ ನಾನು ಬರಲಿಲ್ಲಾ: ಎದೆಗೊಟ್ಟು ಹೋರೋಕ್ಕೆ ನಾ ಬಂದೆ!"—ಕ್ರೈಸ್ತರು ಅಂದರೆ ಕ್ರಿಸ್ತನಾಥನ ದಂಡಾಳುಗಳೇ. ಎಂಥಾ ದಂಡಾಳು ನೀನು? ಬೆಂಕೊಟ್ಟು ಓಡುವವರ ಕೂಡ ಓಡುವವನೋ? ಎದೆಗೊಟ್ಟು ತಡೆಯುವವನೋ? ನಿನ್ನ ಬಗೆ ಹ್ಯಾಗೆ? ನಿನ್ನ ಬಗೆ ಹ್ಯಾಗಿದ್ದರೂ, "ತನ್ನ ಜೀವವನ್ನು ಉಳಿಸ ಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಳ್ಳುವವನು ಅದನ್ನು ಲಾಭ ಮಾಡಿ ಕೊಳ್ಳುವನು" ಎಂಬುವ ಯೇಸುವಿನ ಮಾತು ನೆನಪಿರಲಿ!

೨. ನಾವೆಯ ಸಾಮ್ಯವು ಕ್ರಿಸ್ತಭಕ್ತರಿಗೆ ಬಹಳ ಒಪ್ಪಾಗಿದೆ. ನಾವೆ ಸಮುದ್ರದ ನೀರಿನಲ್ಲಿ ಹ್ಯಾಗೋ, ಹಾಗೆಯೇ ಕ್ರಿಸ್ತಭಕ್ತರು ಸಂಸಾರವೆಂತಲೂ ಪ್ರಪಂಚವೆಂತಲೂ ಅನ್ನಿಸಿ ಕೊಳ್ಳುವ

ಈ ಭೂಲೋಕದ ವ್ಯವಹಾರಾದಿಗಳಲ್ಲಿ ಇದ್ದು, ಭವಸಾಗರಸಂಚಾರ ಮಾಡುತ್ತಿರುತ್ತಾರೆ. ಮತ್ತು ಹಡಗವು ಸಮುದ್ರದಲ್ಲಿ ಮುಳಿಗಿ ನಷ್ಟವಾಗಿ ಹೋಗುವ ಕಂಟಕಕ್ಕೆ ಗುರಿಯಾಗಿರುವಂತೆ ಕ್ರಿಸ್ತಭಕ್ತರು ಈ ಸಂಸಾರದಲ್ಲಿ ಮುಳುಗಿ ನಾಶನವಾಗುವ ಕಂಟಕಕ್ಕೆ ಗುರಿಯಾಗಿದ್ದಾರೆ; ಆದರೆ ಹಡಗವು ಮುಳುಗಿ ನಷ್ಟವಾಗೋದಕ್ಕೆ ಅದು ನೀರಿನಲ್ಲೇ ಇರುವದು ಅಲ್ಲಾ, ನೀರು ಅದರೊಳಗೆ ಬರುವದೇ ಕಾರಣ ಹ್ಯಾಗೋ, ಹಾಗೆಯೇ ಪ್ರಪಂಚದಲ್ಲಿ ಇರೋಣವು ಅಲ್ಲಾ, ಪ್ರಪಂಚವು ಅವರೊಳಗೆ ಹೊಕ್ಕು ಶೇರುವದೇ ಮಾತ್ರ ಕ್ರಿಸ್ತಭಕ್ತರು ಗತಿಗೆಟ್ಟು ನಾಶವಾಗೋದಕ್ಕೆ ಕಾರಣವಾಗುತ್ತದೆ.—ಈ ಸಾಮ್ಯವೂ ನಿನಗೆ ನೆನಪಿರಲಿ!

೩. ದೇವರು **ಹೇಳಿದ್ದು** (ಹೇಳುತ್ತಲೇ) ಆಗುತ್ತದೆ. ಕೀರ್ತನೆ ೩೩, ೯; ವಿಶ್ವಾಸಿ **ಬೇಡಿದ್ದು** ಆಗುತ್ತದೆ. ಮತ್ತಾ. ೮, ೧೩.

೪. ಮನುಷ್ಯರ ಮುಂದೆ ನನ್ನನ್ನು ಅರಿಕೆ ಮಾಡುವವನ್ಯಾವನೋ ಅವನನ್ನು ನಾನು ಸಹ ದೇವದೂತರ ಮುಂದೆ ಅರಿಕೆ ಮಾಡುವೆನು; ಆದರೆ ಮನುಷ್ಯರ ಮುಂದೆ ನನ್ನನ್ನು ಬೊಂಕುವವನು ದೇವದೂತರ ಮುಂದೆ ಬೊಂಕಲ್ಪಡುವನು. ಲೂಕ. ೧೨, ೮. ೯. ಯೇಸು ಕ್ರಿಸ್ತನನ್ನು ಅರಿಕೆ ಮಾಡುವಂಥಾದ್ದೂ ಬೊಂಕುವಂಥಾದ್ದೂ ಬೇರೆ ಬೇರೆ ಸಮಯದಲ್ಲಿಯೂ ವಿದ್ಯಮಾನಗಳಲ್ಲಿಯೂ ಬೇರೆ ಬೇರೆ ಪ್ರಕಾರದಲ್ಲಿ ಆಗುತ್ತದೆ. ಯೇಸುವನ್ನು ಅರಿಕೆ ಮಾಡುವವರಿಗೆ ಅನುಭವವಾಗುವ ಹಿಂಸೆ ವಿರೋಧಗಳು ಸಹ ಕಾಲಾಂತರದಲ್ಲಿ ರೂಪಾಂತರವಾಗುತ್ತವೆ. ಈ ದೇಶದಲ್ಲಿ ಸುವಾರ್ತೆಯನ್ನು ಅಂಗೀಕರಿಸಿ, ಯೇಸು ಕ್ರಿಸ್ತನನ್ನು ಅರಿಕೆ ಮಾಡುವವರಿಗೆ ಸದ್ಯಕ್ಕೆ ವಿಶೇಷ ಧರ್ಮಾರ್ಥ ಹಿಂಸೆಯೇನೂ ಆಗದಿರುತ್ತದೆ. ಎದ್ದ ಹಿಂಸಾಗ್ನಿಗೆ ಹೆದರಿ ಕೊಂಡು ಬೊಂಕುವವರು ಅಪರಾಧಿಗಳಾಗುತ್ತಾರೆ; ಹಾಗಾಗಲಾಗಿ ಈ ದೇಶದ ಕ್ರೈಸ್ತರು ಈಗ ನುಡಿಯಿಂದಾಗಲೀ ನಡೆಯಿಂದಾಗಲೀ ಯೇಸುವನ್ನು ಬೊಂಕುವದಾದರೆ, ಅವರು ಬಹು ಹೆಚ್ಚಿನ ಅಪರಾಧಕ್ಕೆ ಗುರಿಯಾದಾರು.

ಯಾರ ತಪ್ಪು?

ಒಳ್ಳೇ ಭಕ್ತಿ ದಯ ವಿವೇಕ ಮೊದಲಾದ ಶೀಲಗಳಿಂದ ಶೋಭಿಸುತ್ತಿದ್ದ ಒಬ್ಬಾನೊಬ್ಬ ಧೊರೆಯಲ್ಲಿ ಒಬ್ಬ ಕೂಲಿಯವನು ಕೆಲಸಕ್ಕಿದ್ದನು. ಇವನು ಕೆಲಸಕ್ಕೆ ಸಂತೋಷದ ಮನಸ್ಸಿಲ್ಲದೆ ಬಹು ಬೇಸರಗೊಂಡು, ಗುಣುಗುಟ್ಟುತ್ತಾ ಆದಮ ಹವ್ವ ಇವರಿಬ್ಬರು ದೇವರ ಅಪ್ಪಣೆಯನ್ನು ಮಿಾರಿ, ಪಾಪದಲ್ಲಿ ಬಿದ್ದದೇ ಎಲ್ಲಾ ಕಷ್ಟಕ್ಕೆ, ಕಾಯಕಷ್ಟಕ್ಕೂ, ಕಾರಣವಾಯಿತೆಂದು ನೆನಸಿ, ಅವರನ್ನು ದೂರುತ್ತಾ ಬೈಯುತ್ತಾ ಇರುವನು. ಬೇಸಿಗೇ ಕಾಲದ ಒಂದಾನೊಂದು ದಿವಸ ಬಿಸಲು ಚನ್ನಾಗಿ ಕಾದು ಹೊಡೆಯುತ್ತಿದ್ದ ಹೊತ್ತಿನಲ್ಲಿ ಅವನು ಧೊರೆಯ ಹಿತ್ತಲಲ್ಲಿ ಹಶಿ ಕಟ್ಟಿಗೆಕಂಪೆಗಳನ್ನು ಒಡದು ಹಾಕ ಬೇಕಾಯಿತು. ಆ ಕೆಲಸದಲ್ಲಿ ಮೈಯೆಲ್ಲಾ ಬೆವರ್ತು ಬಹಳ ಉಬ್ಬಸವಾದಲ್ಲಿ ಅವನು ಗುಣುಗುಣು ಅನ್ನುವವನಾದ್ದಲ್ಲದೆ, "ಪಾಪ! ಅವರು (ಅಂದರೆ: ಆದಮನೂ ಹವ್ವಳೂ) ಆ ಮರದ ಹಣ್ಣು ಯಾಕೆ ತಿಂದರು? ಏನು ಹುಚ್ಚಾಗಿ ತಿಂದರು? ತಿಂದದು ಎಂಥಾ ಗ್ರಹಚಾರ!" ಎಂಬದಾಗಿ ಅಂದು ಕೊಂಡು, ಅವರನ್ನು ಬಹಳ ದೂರುವವನಾದನು. ಅವನು ಆ ಪ್ರಕಾರವಾಗಿ ದೂರುವದನ್ನೂ ಗುಣುಗುಟ್ಟುವದನ್ನೂ ಆ ಧೊರೆ ತಿಳಿದು, ಮನಸ್ಸಿನಲ್ಲಿ ಒಂದಿಷ್ಟು ನೆಗಾಡಿ, ಯೋಚನೆ ಮಾಡಿ, ಅವನಿಗೆ ಚೋದ್ಯದಲ್ಲಿ ಬುದ್ಧಿ ಕಲಿಸಿ, ತಿದ್ದ ಬೇಕೆಂತ ಅವನ ಹತ್ತರ ಹೋಗಿ, ಸ್ನೇಹಭಾವವಾಗಿ ಮಾತಾಡಿ—"ಏನಪ್ಪಾ! ಈ ಕಠಿಣ ಬಿಸಲಲ್ಲಿ ಕಟ್ಟಿಗೆ ಕಡಿದು ಒಡದು ಹಾಕುವದು ತಡೆಯು

ಲಿಕ್ಕೆ ಕೂಡದಷ್ಟು ದೊಡ್ಡ ಪ್ರಯಾಸವಲ್ಲವೋ?" ಎಂದು ಕೇಳಿದ್ದಕ್ಕೆ ಅವನು—"ಹೌದಯ್ಯಾ! ಏನು ಹೇಳಲಿ! ಮೈಯೆಲ್ಲಾ ಬೆವರಾಗಿ, ಉಬ್ಬಸವಾಗಿ, ಪ್ರಾಣ ಎಳೆಯುತ್ತದೆ! ಪಾಪ! ನಮ್ಮಾದಿ ತಂದೆ ತಾಯಿಗಳು ಒಂಧಣ್ಣಿಗೆ ಆಶೆಬಡಕರಾಗಿ ನನ್ನಂಥಾ ಬಡವನಿಗೆ ಎಂಥಾ ಕಷ್ಟವನ್ನು ಸಂಪಾದಿಸಿ ಹೋದರಕಟಾ! ಶಿಟ್ಟು ಮಾಡ ಬಾರದಂತೆ; ಆದರೆ ನಾನು ಅವರ ಕಥೆಯನ್ನು ನೆನಸುವಾಗೆಲ್ಲಾ ನನಗೆ ಬಹಳ ಶಿಟ್ಟೇರಿ ಹೋಗುತ್ತದೆ" ಎಂದು ಪ್ರತ್ಯುತ್ತರವಾಗಿ ಹೇಳಲು, ಆ ಧೊರೆ ಅಂದದೇನಂದರೆ: "ಹಾದಪ್ಪಾ! ಈ ಬಿಸಲು ನನಗೆ ನಿನ್ನ ಮೇಲೆ ಕನಿಕರ ಹುಟ್ಟಿಸಿತು. ನೀನು ನನ್ನ ಮಾತಿಗೆ ಕಬೂಲಾದರೆ, ನೀನು ನಿನ್ನ ಕೈಯಲ್ಲಿಯ ಕೊಡ್ಲಿಯನ್ನು ಒಕ್ಕೊಟ್ಟು, ಸಾಯುವ ತನಕ ಇನ್ನು ಕೆಲಸದ ರಗಳೆಗೆ ಹೋಗದೆ, ನನ್ನ ಬಂಗ್ಲೆಯಲ್ಲಿ ಊಟ ಉಡಿಗೆ ತೊಡಿಗೆ ಹೊಂದಿ ಸುಖದಲ್ಲಿ ಇರ ಬಹುದು." ಈ ಮಾತಿಗೆ ಕೂಲಿಯವನ ಬಾಯಿ ತುಂಬ ನೀರಾಗಿ ಅವನು—"ಯಾವ ಮಾತಿಗೆ?" ಎಂದು ಕೇಳಲು, ಧೊರೆ—"ನೀನು ನನ್ನ ಬಂಗ್ಲೆಯಲ್ಲಿದ್ದು, ಏನೂ ಕಾಯಕಷ್ಟ ಮಾಡದೆ, ಯಥೇಷ್ಟ ಉಣ್ಣಲೂ ತಿನ್ನಲೂ ಬಹುದು; ಆದರೆ ನಿನಗೆ ಊಟಕ್ಕೆ ಬಡಿಸುವ ಮೇಜಿನಲ್ಲಿ ಒಂದೊಂದು ಊಟಕ್ಕೆ ಒಂದು ಪಿಂಗಾಣಿ ಬಟ್ಟಲನ್ನೂ ಇಡಿಸುತ್ತಿರುವೆನು. ಈ ಬಟ್ಟಲಿನ ಮುಚ್ಚಳವನ್ನು ನೀನು ಎಂದಿಗಾದರೂ ಎತ್ತಿಕೊಂಡು, ಬಟ್ಲಲ್ಲಿದ್ದ ಆಹಾರವನ್ನು ರುಚಿ ನೋಡ ಬಾರದು. ಅದರ ಮುಚ್ಚಳವನ್ನು ನೀನು ಎತ್ತಿತೆಗೆದ ದಿನದಲ್ಲಿ ಕರಾರು ರದ್ದಾಗಿ, ನೀನು ತಿರಿಗಿ ಎಂದಿನಂತೆ ಕಷ್ಟ ಮಾಡಿ ಉಣ್ಣ ಬೇಕು. ಒಪ್ಪಿಕೊಳ್ಳುತ್ತೀಯೋ?" ಎಂತ ಹೇಳಿ ಕೇಳಿದ್ದಕ್ಕೆ ಅವನು ಬಹಳ ಸಂತೋಷವಾಗಿ— "ಒಡೆಯರ ಈ ಮಾತಿಗೆ ನಾನು ಒಪ್ಪಿ ಕೊಳ್ಳದಿದ್ದೇನೋ? ಒಪ್ಪಿ ಕೊಳ್ಳುತ್ತೇನೆ, ಕಬೂಲಾಗಿದ್ದೇನೆ!" ಎಂದು ಹೇಳಿದನು. ಆಗ್ಯೆ ಕರಾರಿನ ಮೇರೆಗೆ ಆ ಕೂಲಿಯವನು ಆ ಧೊರೆಯ ಬಂಗ್ಲೆಯಲ್ಲಿ ಕೆಲಸ ಮಾಡದೆ ಹೊತ್ತು ಹೊತ್ತಿಗೆ ಊಟ ಮಾಡುವವನಾದನು. ಧೊರೆಯ ಅಡಿಗೆಯವನು ಧೊರೆಗೆನೇ ಅಟ್ಟು ಬಡಿಸುತ್ತಿದ್ದ ಭೋಜನವನ್ನು ಆ ಆಳಿಗೂ ಕ್ರಮ ತಪ್ಪದೆ ಬಡಿಸುತ್ತಿದ್ದನು. ಈ ಮರ್ಯಾದೆಯಲ್ಲಿ ಹತ್ತೆಂಟು ದಿವಸ ಕಳದು ಹೋಗಿ, ಕೂಲಿಯವನು ಚನ್ನಾಗಿ ಊಟ ಮಾಡುತ್ತಾ ಬಂದು, ತೃಪ್ತನೂ ಪುಷ್ಟನೂ ಆದ ಮೇಲೆ ದಿನ ದಿನಕ್ಕೆ ಹೊತ್ತು ಹೊತ್ತಿಗೆ ತಪ್ಪದೆ ಮೇಜಿನಲ್ಲಿ ಇಡೋಣಾಗುತ್ತಿದ್ದ ಪಿಂಗಾಣಿ ಬಟ್ಲಲ್ಲಿ ಏನು ವಿಚಿತ್ರವಿದ್ದೀತು? ಎಂಬ ಕೌತುಕವು ಆಳಿನ ಮನಸ್ಸಿನಲ್ಲಿ ಹುಟ್ಟಿತು. ನಾಲ್ಕೈದು ದಿವಸ ಆ ಆಶೆಯನ್ನು ಅಣಗಿಸುತ್ತಾ ಬಂದ ಕಡೆಗೆ ಅವನು ಆ ಆಶೆಗೆ ಸೋತು ಹೋಗಿ, ಚಾಕ್ರಿಯವನು ಬಡಿಸಿ ಹೋಗಿ, ಯಾರೂ ಇಲ್ಲದ ವೇಳೆಗೆ ಬಟ್ಟಲಿನ ಮುಚ್ಚಳವನ್ನು ಸ್ವಲ್ಪ ಎತ್ತಿ ನೋಡಲಿಕ್ಕೆ ಕೈ ಹಾಕಿದನು. ಮುಚ್ಚಳವನ್ನು ಸ್ವಲ್ಪ ಸ್ವಲ್ಪ ಎತ್ತುತ್ತಲೇ ಒಂದು ಚಿಕ್ಕ ಬಿಳೀ ಇಲಿ ಬಟ್ಟಲಿನಿಂದ ಹಾರಿ, ಕೋಣೆಯಲ್ಲಿ ಓಡ್ಯಾಡುವಂಥಾದ್ದಾದ್ದರಲ್ಲಿ ಅವನ ಪುಣ್ಯಾ ಬೈಲಾಯಿತು. ಆಗ ಧೊರೆ ಬಂದು, ಕರಾರಿನ ಮಾತು ನೆನಪು ಹುಟ್ಟಿಸಲು ಅವನು ಬಹಳ ನಾಚಿ ಕೊಂಡು, ಧರ್ಮದ ಊಟವನ್ನು ಬಿಟ್ಟು, ತಿರಿಗಿ ತನ್ನ ಕಷ್ಟಾರ್ಜಿತವನ್ನು ತಿಂದು, ಮೊದಲಿನ ಕೂಲೀ ಕೆಲಸದಲ್ಲಿ ಕಾಲಕ್ಷೇಪ ಮಾಡ ಬೇಕಾಯಿತು. ಆದರೆ ಅನಂತರದಲ್ಲಿ ಅವನು ಗುಣುಗುಟ್ಟುವದನ್ನೂ ಇತರರನ್ನು ದೂರುವದನ್ನೂ ಪೂರ್ಣ ಬಿಟ್ಟು ಬಿಟ್ಟನಂತೆ.

ಓದುವವರಾದ ನೀವು ಸಹ ನಿಮ್ಮ ಕಷ್ಟಾದಿಗಳನ್ನು ಹ್ಯಾಗೆ ತಡೆಯುತ್ತೀರಿ? ಗುಣುಗುಟ್ಟುತ್ತಾ ಇತರರನ್ನೂ ಅದನ್ನೂ ಇದನ್ನೂ ದೂರುತ್ತಾ ಬರುತ್ತೀರೋ? ದೂರಲಿಕ್ಕೆ ಯಾರಿಗಾದರೂ ಕಾರಣ ಕಂಡರೆ, ತನ್ನನ್ನೇ ದೂರಿ ಕೊಳ್ಳಲಿ! ಇತರರು ಅಲ್ಲಾ, ಮುಖ್ಯವಾಗಿ ತಾನೇ ತನ್ನ ಕಷ್ಟಕ್ಕೆ ಕಾರಣವೆಂದು ಪ್ರತಿಯೊಬ್ಬ ತಿಳುಕೊಳ್ಳುವದು ನ್ಯಾಯವೇ!

ವಿವಿಧ ವರ್ತಮಾನಗಳು.

೧೮೭೭ನೇ ಇಸವಿ ಜನವರಿ ೧ನೇ ತಾರೀಕಿನಲ್ಲಿ ಡಿಲ್ಲಿಯಲ್ಲಿ ಮಹಾ ದರಬಾರು ಆದಾಗ್ಯೆ ದರಬಾರಿನ ಅಪ್ಪಣೆ ಮೇರೆಗೆ ಹಿಂದುಸ್ಥಾನದ ಬಹುತೇಕ ವರ್ತಮಾನಪತ್ರಕರ್ತರು ಆ ದರಬಾರಿಗೆ ಹೋಗಿದ್ದರು. ಆಗ ಸರ್ವರ ಅನುಮತಿಯಿಂದ ಪ್ರತಿ ವರ್ಷವೂ ವರ್ತಮಾನಪತ್ರಕರ್ತರ ಮಂಡಳಿ ಆಗ ಬೇಕು ಎಂಬದಾಗಿ ನಿರ್ಣಯವಾಗಿತ್ತು. ಈ ನಿರ್ಣಯದ ಮೇರೆಗೆ ಈ ವರ್ಷ ಅವರ ಮಂಡಳಿ ಜನವರಿ ತಿಂಗಳಲ್ಲಿ ಕಲ್ಕತ್ತದಲ್ಲಿ ನೆರದು ಬರುವಂಥಾದ್ದು ಅದೆ. ಈ ಮಂಡಳಿಯ ಮುಖ್ಯ ಉದ್ದೇಶ ಹೀಗೆಂದು ತೋರುತ್ತದೆ—ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳವರಿಗೆ ಐಕ್ಯ ಉಂಟಾಗಿ ತಮ್ಮ ದೇಶದ ಹಿತಕ್ಕಾಗಿರುವ ಸಂಗತಿಗಳ ವಿಷಯ ಏಕಸ್ಥರಾಗಿ ವಿಚಾರ ಮಾಡುವದೂ, ಮತ್ತು ಆ ಸಂಗತಿಗಳ ವಿಷಯ ಸರಕಾರದವರಿಗೆ ಏನಾದರೂ ವಿನಂತಿ ಮಾಡುವಂಥಾದ್ದು ಇದ್ದರೆ, ಸರ್ವರೂ ಕೂಡಿ ಮಾಡುವದೂ. ಈ ಮಂಡಳಿಯಿಂದ ಹಿಂದು ದೇಶಕ್ಕೆ ಶ್ರೇಯಸ್ಸು ಉಂಟಾಗುವದಾದರೆ, ಅವರು ಕೂಡಿ ಬರುವಂಥಾದ್ದು ವ್ಯರ್ಥವಾಗದು.

ವೇಲ್ಸ್ ಪ್ರಾಂತದ ದಕ್ಷಿಣ ಭಾಗದಲ್ಲಿ ಕಬ್ಬಿಣದ ಕಾರಖಾನೆಗಳು ಬಂದು ಆದ್ದರಿಂದ ಅಲ್ಲಿಯ ಕೂಲಿ ಜನರು ಮಹಾ ಭಯಂಕರ ವಿಪತ್ತಿನಲ್ಲಿ ಬಿದ್ದಿದ್ಧಾರೆ.

ಮುಂಬಾಯಿಯಲ್ಲಿ ಬ್ರಹ್ಮಸಮಾಜದ ರೀತಿಯ ಪ್ರಕಾರ ಒಬ್ಬ ಬ್ರಾಹ್ಮಣ ವಿಧವೆಗೆ ಪುನರ್ವಿವಾಹವಾಯಿತು.

ಮಚಲಿಪಟ್ಣದಲ್ಲಿ ಒಬ್ಬ ಬ್ರಾಹ್ಮಣನು ಕ್ರೈಸ್ತ ಧರ್ಮ ಸ್ವೀಕರಿಸಿದನು. ಈತನು ಮೊದಲು ಮಿಶ್ಯನ ಶಾಲೆಯ ವಿದ್ಯಾರ್ಥಿಯಾಗಿದ್ದನು.

ಹಿಂದುಸ್ಥಾನದಲ್ಲಿ ಪದೇ ಪದೇ ದುಷ್ಕಾಲ ಬೀಳುವಂಥಾದ್ದಾದರೂ, ನಿವಾಸಿಗಳಿಗೆ ಸಾಕಾಗುವಷ್ಟು ಆಹಾರ ಅದೆ. ಜನರು ಧಾವತಿ ಪಡುವದು ಆಹಾರವಿಲ್ಲದ್ದರಿಂದಲ್ಲ, ಹಣವಿಲ್ಲದ್ದರಿಂದಲೇ. ಸಾಧಾರಣವಾಗಿ ಈ ದೇಶದಿಂದ ಪರದೇಶಗಳಿಗೆ ೫,೨೦೦,೦೦೦ ಖಂಡಿ ಅಕ್ಕಿ ಕಳುಹಿಸಲ್ಪಡುತ್ತದೆ. ಕಳೆದ ವರ್ಷ ಕಠಿಣ ಕ್ಷಾಮವಾಗಿ ಎಲ್ಲಾ ಕಡೆಯಿಂದ ಮದ್ರಾಸಿಗೂ ಮುಂಬಾಯಿಗೂ ಅಕ್ಕಿ ಯಥೇಷ್ಟವಾಗಿ ಬರ ಬೇಕಾದಾಗ್ಯೆ ೩,೮೦೦,೦೦೦ ಖಂಡಿ ಅಕ್ಕಿ ಪರದೇಶಗಳಿಗೆ ಕಳುಹಿಸ ಬಹುದಾಯಿತು. ಇದರ ಹೊರ್ತು ೧೮೭೬ನೇ ಇಸವಿಯಲ್ಲಿ ೬೪೦,೦೦೦ ಖಂಡಿ ಗೋಧಿ, ೧೮೭೭ನೇ ಇಸವಿಯ ಆರಂಭದ ಒಂಭತ್ತು ತಿಂಗಳುಗಳಲ್ಲಿ ೮೦೦,೦೦೦ ಖಂಡಿ ಗೋಧಿ ಇಂಗ್ಲಾಂಡಿಗೆ ಕಳುಹಿಸಲಾಯಿತು. ಕಠಿಣ ಬರಗಾಲದಿಂದ ಹಾವಳಿ ಪಡುವಂಥಾ ವಿಶಾಲಪ್ರದೇಶಗಳಿಗೆ ಧಾನ್ಯದವಸ ಒದಗಿಸಿ ಕೊಟ್ಟು, ಮೇಲೆ ಹೇಳಿದ ದರದಲ್ಲಿ ಪರದೇಶಗಳಿಗೂ ಕಳುಹಿಸುವದಕ್ಕೆ ಸಾಮರ್ಥ್ಯವಿರುವ ದೇಶವು ಧಾನ್ಯದವಸವಿಲ್ಲದೆ ಧಾವತಿ ಪಡುವ ಗಂಡಾಂತರದಲ್ಲಿ ಇಲ್ಲಾ.

ಲಖನಾವಿನಲ್ಲಿ ಒಬ್ಬ ಬ್ರಾಹ್ಮಣ ವಿಧವೆ ಸ್ವಧರ್ಮವನ್ನು ಬಿಟ್ಟು, ಕ್ರೈಸ್ತಧರ್ಮವನ್ನು ಸ್ವೀಕರಿಸಿದಳು. ಸಂಭಾವಿತರಾದ ಅವಳ ಸಂಬಂಧಿಕರು ಅವಳ ಮನಸ್ಸನ್ನು ಪಲ್ಲಟ ಮಾಡುವದಕ್ಕೆ ಸರ್ವ ಪ್ರಯತ್ನ ಮಾಡಿದರೂ, ಅವಳು ತಾನು ಸ್ವೀಕರಿಸಿದ ಧರ್ಮವನ್ನು ಬಿಡಲೊಲ್ಲದೆ ಸ್ಥಿರವಾಗಿದ್ಧಾಳೆ.

ಅಮೇರಿಕದ ನ್ಯೂಯೋರ್ಕ ಪಟ್ಣದಲ್ಲಿ ಮದ್ಯ ಮಾರುವ ವಿಷಯ ಇರುವ ಕಾಯಿದೆ ಏನಂದರೆ: ಹದಿನಾಲ್ಕು ವಯಸ್ಸಿನ ಒಳಗಿನ ಹುಡುಗನಿಗೆ ವೈನ್, ಬೀರ್ ಮುಂತಾದ ಮದ್ಯ ಮಾರಿದರೆ, ೫೦ ರೂಪಾಯಿ ಜುಲುಮಾನೆ; ಹದಿನೆಂಟು ವಯಸ್ಸಿನ ಹುಡುಗನಿಗೆ, ಅವನ ತಂದೆತಾಯಿಗಳ ಅನುಮತಿಯ ವಿನಹ ಮದ್ಯ ಮಾರಿದರೆ, ೨೦ ರೂಪಾಯಿ ಜುಲುಮಾನೆ. ಇಂಥಾ ಕಾಯಿದೆ ಈ ದೇಶದಲ್ಲಿಯೂ ಅವಶ್ಯವಿಲ್ಲವೋ?—("ಜ್ಞಾನೋದಯ.")

ಔಷ್ಧಿಗಳನ್ನು ಕುಡಿಯುವದೂ ಕುಡಿಸುವದೂ ಅನೇಕರಿಗೆ ಪದೇ ಪದೇ ಅವಶ್ಯ ಬೀಳುತ್ತದೆ.

ಅದನ್ನು ಕುಡಿಯುವಾಗ ವಾಕರಿಕೆ ಉಂಟಾಗುತ್ತದೆಂದು ಎಲ್ಲವರೂ ಬಲ್ಲರು. ಇದನ್ನು ಪರಿಹರಿಸುವದಕ್ಕೆ ಉಪಾಯವೇನಂದರೆ—ಚನ್ನಾಗಿ ಹಣ್ಣಾದ ಎರಡು ಲಿಂಬೆಹಣ್ಣು ತೆಕ್ಕೊಂಡು ಸಮ ಎರಡು ಭಾಗ ಮಾಡಿ, ಒಂದು ಭಾಗ ಒಂದು ಗಾಜಿನ ಪಾತ್ರದಲ್ಲಿ ಹಿಂಡ ಬೇಕು, ಅದರ ಮೇಲೆ ಮೆಲ್ಲಗೆ ಔಡ್ಲೆಣ್ಣೆ ಹೊಯ್ಯ ಬೇಕು, ಅನಂತರ ಬಾಕಿ ಉಳಿದ ಅರ್ಧ ಲಿಂಬೆಹಣ್ಣು ಅದರ ಮೇಲೆ ಹಿಂಡ ಬೇಕು. ಈ ಮೂರನ್ನು ಒಂದಕ್ಕೊಂದು ಬೆರಸದೆ ಎಲ್ಲಾ ಕುಡಿದು ಬಿಟ್ಟರೆ, ಔಡ್ಲೆಣ್ಣೆಯ ಅರೋಚಕವು ಕಿಂಚಿತ್ತಾದರೂ ತಿಳಿಯದು; ಔಡ್ಲೆಣ್ಣೆಯ ಈ ನೂತನ ಅನುಪಾನವು ಅಮೇರಿಕದಲ್ಲಿ ಒಬ್ಬನು ಪ್ರಸಿದ್ಧಿ ಮಾಡಿದ್ದಾಗಿರುತ್ತದೆ.

ದಕ್ಷಿಣ ಅಮೇರಿಕದಲ್ಲಿ ಬ್ರಜೀಲ್ ರಾಜ್ಯದಲ್ಲಿ ಪರಾಗ್ವೆ ಎಂತ ಒಂದು ಸಂಸ್ಥಾನವದೆ, ಅದರ ಸರಕಾರವು ಹಣದ ತತ್ವಾರದಿಂದ ಕೇವಲ ದಿವಾಳಿ ತೆಗದಿತ್ತು; ಆದರೆ ಇತ್ತಲಾಗೆ ಆ ಶೀಮೆಯಲ್ಲಿ ಬೆಳ್ಳಿಯ ಖನಿಗಳು ದೊರಕಿದ್ದರಿಂದ ಹೇರಳ ದ್ರವ್ಯಸಂಪಾದನೆಯಾಗಿ, ತಮ್ಮ ಅಡಚಣೆ ಎಲ್ಲಾ ಪರಿಹರಿಸಿಕೊಳ್ಳ ಬಹುದೆಂತ ಭರವಸ ಉಂಟಂತೆ.

ರುಸ್ಯ ರಾಜ್ಯದಲ್ಲಿ ೩೦ ಲಕ್ಷಕ್ಕಿಂತ ಹೆಚ್ಚು ಯೆಹೂದ್ಯರು ಇದ್ದಾರೆ.

ಸ್ವೀದನ್ ದೇಶದಲ್ಲಿ ಉಪಸಾಲಾ ಎಂತ ಒಂದು ಪಟ್ಣವದೆ. ಅಲ್ಲಿಯ ಮಹಾ ವಿದ್ಯಾಶಾಲೆ ಸ್ಥಾಪಿಸಿ ೪೦೦ ವರ್ಷಗಳಾದವು. ಆ ಶಾಲೆಯ ಪುಸ್ತಕಖಾನೆಯಲ್ಲಿ ೧ ಲಕ್ಷ ೬೦ ಸಾವಿರ ಪುಸ್ತಕಗಳವೆ. ಅವುಗಳಲ್ಲಿ ಹೊಸ ಒಡಂಬಡಿಕೆಯ ಒಂದು ಗ್ರಂಥ ಉಂಟು. ಅದರ ಅಕ್ಷರಗಳು ಬೆಳ್ಳಿಯವುಗಳಾಗಿ, ಚರ್ಮಕಾಗದಕ್ಕೆ ಹಚ್ಚಿದವುಗಳು. ನಿಶ್ಚಯವಾಗಿ ದೇವರ ವಾಕ್ಯವು ಬೆಳ್ಳಿ ಭಂಗಾರಗಳ ಅಕ್ಷರಗಳಿಂದ ಮಾತ್ರವಲ್ಲಾ ವಜ್ರದ ಅಕ್ಷರಗಳಿಂದ ಬರಿಯಲ್ಪಡುವದಕ್ಕೆ ಯೋಗ್ಯವೇ ಸರಿ.

ಮದ್ರಾಸ ಸಂಸ್ಥಾನದ ಗಂಜಾಮ ಜಿಲ್ಲೆಯಲ್ಲಿ ಸರ್ವ ಜಿನಸು ಬಹಳ ಪ್ರಿಯವಾಗಿ ಜನರಿಗೆ ಕೊಳ್ಳುವದಕ್ಕೆ ಶಕ್ತಿಯೂ ಇಲ್ಲದೆ, ಜಿನಸು ಶಿಕ್ಕುವದೂ ಪ್ರಯಾಸವಾಗಿ ಸಾವಿರಾರು ಜನರು ಧಾವತಿ ಪಡುತ್ತಾರೆ, ಅವರ ಉಪಕಾರಕ್ಕಾಗಿ ಸರಕಾರದವರು ಬೇಗನೇ ಅನ್ನಛತ್ರಗಳನ್ನು ಇಡುವರು.

ಈ ಕಾಲದಲ್ಲಿ ನೂತನ ಚಮತ್ಕಾರದ ಯಂತ್ರಗಳು ದಿನೇ ದಿನೇ ಬೆಳಕಿಗೆ ಬರುತ್ತಾ ಅವೆ. ತಂತಿಟಪ್ಪಾಲಿನ ಹಾಗೆಯೇ ಹೊಸ ವಿಧದ ಒಂದು ತಂತಿ ಅಮೇರಿಕದಲ್ಲಿ ಸಂಕಲ್ಪಿಸಿದ್ದಾರೆ. ಈ ತಂತಿಯ ಒಂದು ಕಡೆಯಲ್ಲಿ ಮಾತಾಡಿದರೆ, ಬಹಳ ದೂರವಿರುವ ಮತ್ತೊಂದು ತುದಿಯವರಿಗೆ ಸಮೀಪದಲ್ಲಿ ಎಂಬಂತೆ ಕೇಳುತ್ತದೆ. ಒಂದೇ ಕೋಣೆಯಲ್ಲಿ ಕೂತು ಸಂಭಾಷಣೆ ಮಾಡುವಂತೆ ಆ ತಂತಿಯ ಎರಡು ಕಡೆಗಳಲ್ಲಿರುವವರು ಮಾತಾಡಿ ಕೊಂಡು ಗಾಯನವನ್ನೂ ಕೇಳಿಸ ಬಹುದು. ತೆಲಿಫೋನ್ ಎಂತ ಹೆಸರ್ಗೊಂಡ ಈ ಯಂತ್ರವನ್ನು ಈ ದೇಶದಲ್ಲಿಯೂ ಮಾಡಲಿಕ್ಕೆ ಪ್ರಾರಂಭಿಸಿದ್ದಾರೆ. ಇದರ ಹಿಂದೆಯೇ ಇನ್ನೊಂದು ಚಮತ್ಕಾರ ಮಾಡಿದ್ದಾರೆ, ಅದೇನಂದರೆ: ತಂತಿಯ ಒಂದು ಕಡೆಯಲ್ಲಿ ಆಡಿದ ಮಾತು ಮತ್ತೊಂದು ಕಡೆಯಲ್ಲಿಟ್ಟ ಕಾಗದ ತುಂಡಿನ ಮೇಲೆ ಅಕ್ಷರರೂಪವಾಗಿ ಉದಯಿಸುತ್ತದೆ. ಮತ್ತು ಅದೇ ಕಾಗದ ತುಂಡನ್ನು ಪುನಃ ಯಂತ್ರದೊಳಗಿಟ್ಟರೆ, ಈಚೆ ಕಡೆಗೆ ಮಾತು ಕೇಳಲ್ಪಡುತ್ತದೆ. ಕಡೆಗೆ ಹೇಳಿದ ಎರಡು ಯಂತ್ರಗಳು ತಿದ್ದುಪಾಟಾಗಿ ಎಲ್ಲಾ ಶೀಮೆಗಳಲ್ಲಿ ಪ್ರಯೋಗಕ್ಕೆ ಬಂದರೆ, ಈಗ ಇರುವ ತಂತಿಟಪ್ಪಾಲು ಕಾಗದ ಟಪ್ಪಾಲು ಎಲ್ಲಾ ತಾರುಮಾರಾಗಿ ಹೋಗುವವು. ಮತ್ತು ಕಾಗದ ಬರದು ಟಪ್ಪಾಲಿಗೆ ಹಾಕಿ ಅನೇಕ ದಿವಸಗಳು ಕಾದು ಕೊಳ್ಳುವದಕ್ಕೆ ಬದಲಾಗಿ ಕ್ಷಣ ಮಾತ್ರದಲ್ಲಿ ನಮ್ಮ ಮಿತ್ರಬಾಂಧವರ ಸಂಗಡ ಮಾತಾಡಲಿಕ್ಕಾಗುವದು ಎಂಥಾ ಲಾಭ! ಎಂಥಾ ಸಂತೋಷ!

ಡಕ್ಟರ್ ಲಿವಿಂಗ್ಸ್ಟನ್ ಎಂಬವರು ಅಫ್ರಿಕ ಖಂಡದ ಮಧ್ಯಪ್ರದೇಶವನ್ನು ಪರಿಶೋಧನೆ ಮಾಡುವದರಲ್ಲಿ ಅನೇಕ ವರುಷ ಪ್ರವರ್ತಿಸಿ, ಅದರ

ಲ್ಲೇ ತಮ್ಮ ಪ್ರಾಣಹಾನಿ ಪಡುವವರಾದ ಮೇಲೆ ಸ್ಟೆನ್ಲಿ ಎಂಬವರು ಅವರ ಕೆಲಸ ಮುಂದೆ ಸಾಗಿಸುವದಕ್ಕೆ ಮನಸ್ಸು ಮಾಡಿ, ೩೪೭ ಮಂದಿಯನ್ನು ತಮ್ಮ ಸಂಗಡ ತಕ್ಕೊಂಡು, ಮೂರು ನಾಲ್ಕು ವರುಷ ಬಹಳ ಅಧ್ವಾನ ಪಟ್ಟು, ೬,೯೦೦ ಮೈಲುಗಳು ಅಫ್ರಿಕ ಖಂಡವನ್ನು ಪರಿಶೋಧಿಸಿ, ಪರಿಜನರಲ್ಲಿ ೨೬೧ ಮಂದಿ ಕಳಕೊಂಡು, ಎರಡು ಮೂರು ತಿಂಗಳ ಹಿಂದೆ ಅಫ್ರಿಕದ ಪೂರ್ವತೀರದಲ್ಲಿರುವ ಜಂಜಿಬರ್ ಎಂಬ ಬಂದರಿಗೆ ಮುಟ್ಟಿದರು.

ಈಗ ರುಸ್ಯರಿಗೂ ತುರ್ಕರಿಗೂ ನಡಿಯುತ್ತಾ ಇರುವ ಯುದ್ಧದ ದೆಶೆಯಿಂದ ಸುರ್ಯದಲ್ಲಿರುವ ಯೆಹುದ್ಯರು ಬಹಳ ಥಾವತಿ ಪಡುವವರಾಗಿ ತಮ್ಮ ಸಹಾಯಾರ್ಥವಾಗಿ ಪರೋಪಕಾರಿಗಳಾದ ಗೃಹಸ್ಥರಿಂದ ರೊಖ್ಖ ಬೇಡಿ ಕೊಳ್ಳುವದಕ್ಕೆ ರಬ್ಬಿಗಳನ್ನು ನಾನಾ ದೇಶಗಳಿಗೆ ಕಳುಹಿಸಿದ್ದಾರೆ; ಒಬ್ಬ ರಬ್ಬಿ ಮದ್ರಾಸಿಗೆ ಬಂದು ಮುಟ್ಟಿದ್ದಾನೆ.

ಹಿಂದುಸ್ಥಾನದ ಉತ್ತರಪಶ್ಚಿಮ ಸಂಸ್ಥಾನದ ಪ್ರಾಂತದಲ್ಲಿರುವ ಜವಾಕಿ ಅಫ್ರಿದಿ ಎಂಬ ಒಂದು ಜಾತಿಯವರು ತಂಟೆ ನಡಿಸಿದಕ್ಕೆ ಸರಕಾರದವರು ಅವರನ್ನು ಅಣಗಿಸುವದಕ್ಕೆ ಸೈನ್ಯ ಕೊಟ್ಟು ಕಳುಹಿಸಿ, ಕೆಲವು ಕಾಲದಿಂದ ಅಲ್ಲಿ ಯುದ್ಧ ನಡದಾಗ್ಯೂ, ಆ ಕಾಡ ಜಾತಿಯವರು ಇನ್ನೂ ಪೂರ್ಣವಾಗಿ ಸರಕಾರಕ್ಕೆ ಒಳಬೀಳಲಿಲ್ಲಾ.

ಕಡಪೆ ಜಿಲ್ಲೆಯಲ್ಲಿ ಮಿಡಿತೆಗಳು ತಂಡ ತಂಡವಾಗಿ ಬಂದು, ಬೆಳಿಯುವ ಪೈರನ್ನು ತಿಂದು, ನಷ್ಟಪಡಿಸುತ್ತವೆ. ಈ ವರೆಗೆ ಈ ಒಂದೇ ಜಿಲ್ಲೆಯಲ್ಲಿ ಹೊರ್ತು ಮತ್ತೆಲ್ಲಿಯೂ ಈ ಮಿಡಿತೆಗಳು ಕಾಣಿಸಿ ಕೊಳ್ಳಲಿಲ್ಲವಂತೆ. ಅವು ಅನೇಕ ಸಾರಿ ಮಹಾ ಮೇಘಗಳೋಪಾದಿ ಬಂದು, ಎಲ್ಲಾ ಹಸುರು ಗಿಡಗಳನ್ನು ನಾಶ ಮಾಡುವದುಂಟು. ಹೀಗಾದ ಪಕ್ಷದಲ್ಲಿ ಇನ್ನೊಂದು ಬರಗಾಲ ಬೀಳುವದಾದೀತು. ಇಂಥಾ ಅವಸ್ಥೆಯಾಗದ ಹಾಗೆ ದೇವರು ಕಟಾಕ್ಷವಿಡುವವನಾಗಲಿ!

ನಮ್ಮ ಹಿಂದು ದೇಶದಲ್ಲಿ ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಶುಭವರ್ತಮಾನವನ್ನು ಸಾರುವಂಥ ಕೆಲಸವನ್ನು ಅನೇಕ ಸಂಘಗಳವರು ನಡಿಸುತ್ತಿದ್ದಾರಷ್ಟೇ. ಈ ಕೆಲಸವು ಎಷ್ಟು ವಿಧವಾಗಿ ನಡಿಯುತ್ತದಂದರೆ:— ಊರಿಂದೂರಿಗೆ ಪ್ರಯಾಣ ಮಾಡುತ್ತಾ ಸಾರುವದು; ಮನೆಮನೆಗಳಿಗೆ ಹೋಗಿ ಸಾರುವದು; ಮಿಶ್ಯನ ಬಂಗಲೆಗಳಲ್ಲಿ ಬಂದವರ ಸಂಗಡ ಸಂಭಾಷಣೆ ಮಾಡುವದು; ತರ್ಕಚರ್ಚೆ ಮಾಡುವದು; ಪೇಟೆಯಲ್ಲಿಯೂ ಜಾತ್ರೆ ಉತ್ಸವಗಳಾಗುವ ಸ್ಥಳಗಳಲ್ಲಿಯೂ ಪ್ರಸಂಗಿಸುವದು; ಪ್ರತ್ಯೇಕ ಸ್ಥಳಗಳಲ್ಲಿ ತಕ್ಕ ಮನೆಯಲ್ಲಾಗಲಿ ತಂಬಿನಲ್ಲಾಗಲಿ ದೇವಾರಾಧನೆ ನಡಿಸುವದು; ಪುಸ್ತಕಗಳನ್ನು ಮಾರುವದೂ, ಧರ್ಮಾರ್ಥವಾಗಿ ಸಹ ಪುಸ್ತಕಗಳನ್ನು ಕೊಡುವದೂ, ಹೆಂಗಸರ ಸಂಗಡ ದೇವರ ವಾಕ್ಯದ ವಿಷಯ ಮಾತಾಡುವದಕ್ಕೆ ಬುದ್ಧಿವಂತೆಗಳಾದ ಸ್ತ್ರೀಯರನ್ನು ಕಳುಹಿಸುವದು; ಉಪದೇಶಕರನ್ನೂ ಉಪಾಧ್ಯಾಯರನ್ನೂ ಸಿದ್ಧ ಮಾಡುವ ಶಾಲೆಗಳು, ದೇಶಭಾಷೆಗಳನ್ನು ಕಲಿಸುವ ಶಾಲೆಗಳು, ಇಂಗ್ಲಿಷ ಶಾಲೆಗಳು, ಅನಾಥ ಮಕ್ಕಳಿಗೆ ಅನ್ನವಸ್ತ್ರವೂ ಕೊಟ್ಟು ವಿದ್ಯೆ ಕಲಿಸುವ ಶಾಲೆಗಳು, ಪೇಟೆಯಲ್ಲಿಟ್ಟ ಆದಿತ್ಯವಾರಶಾಲೆಗಳು ಮುಂತಾದ ಶಾಲೆಗಳನ್ನು ಸ್ಥಾಪಿಸುವದು; ಆಸ್ಪತ್ರಿಗಳನ್ನಿಟ್ಟು ರೋಗಿಗಳಿಗೆ ಔಷಧ ಕೊಡುವದೂ, ದೇವರ ವಾಕ್ಯ ತಿಳಿಸುವದೂ; ಬೇರೆ ಆಸ್ಪತ್ರಿಗಳಲ್ಲಿರುವ ರೋಗಿಷ್ಠರನ್ನು ನೋಡಲಿಕ್ಕೆ ಹೋಗುವದು; ಕುಷ್ಟರೋಗಿಗಳಿಗೆ ಆಶ್ರಯಗೃಹಗಳನ್ನಿಟ್ಟು ಪರಾಂಬರಿಕೆ ಮಾಡುವದು, ಜನಾನಾಗಳಲ್ಲಿರುವ ಸ್ತ್ರೀಯರಿಗೂ ಮಕ್ಕಳಿಗೂ ಸುವಾರ್ತೆ ತಿಳಿಸುವದು; ದೇವರ ವಾಕ್ಯ ಭಾಷಾಂತರ ಮಾಡುವದು; ಪುಸ್ತಕಗಳನ್ನು ರಚಿಸುವದು, ಅಥವಾ ಭಾಷಾಂತರ ಮಾಡುವದು; ವರ್ತಮಾನಪತ್ರಗಳನ್ನು ಛಾಪಿಸುವದು; ಸತ್ಯವೇದವ್ಯಾಖ್ಯಾನಗಳನ್ನು ರಚಿಸುವದು. ಈ ಮಹಾ ಕೆಲಸಕ್ಕೆ ಹಣದ ಸಹಾಯ ಎಷ್ಟು ಬೇಕು? ಮನುಷ್ಯನ ಸಹಾಯ ಎಷ್ಟು ಬೇಕು? ಎಂತ ಓದುವವರು ತಿಳಿಯುವರು.

(ಹಿಂದಿನದನ್ನು ಸಂಗ್ರಹಿಸಿದ್ದು: Ch. W.)

೧೮೭೬ನೇ ಇಸ್ವಿಯೊಳಗೆ ಪ್ರುಸ್ಯರಾಷ್ಟ್ರದಲ್ಲಿ ೧೦,೮೯,೫೮೩ ಶಿಶುಗಳು (೫,೬೫,೯೦೧ ಗಂಡು, ೫,೩೨,೭೮೨ ಹೆಣ್ಣು) ಜನಿಸಿದವು. ಇಷ್ಟು ಶಿಶುಗಳಲ್ಲಿ ೪೫,೫೨೩ ನಿರ್ಜೀವವಾಗಿ ಹುಟ್ಟಿದವು. ೧೨೮೫೬ ಪ್ರಸವಗಳಲ್ಲಿ ಅವಳಿ ಮಕ್ಕಳು ಹುಟ್ಟಿದವು. (ಇವುಗಳಲ್ಲಿ ೪,೧೧೨ ಸಾರಿ ಎರಡೂ ಗಂಡು, ೪,೮೦೦ ಸಾರಿ ಒಂದು ಗಂಡು ಒಂದು ಹೆಣ್ಣು, ೩,೮೦೦ ಸಾರಿ ಎರಡೂ ಹೆಣ್ಣು ಹುಟ್ಟಿತು.) ೧೪೬ ಪ್ರಸವಗಳಲ್ಲಿ ಮುಮ್ಮಕ್ಕಳು ಜನಿಸಿದವು. (೪೦ ಸಾರಿ ಮೂರೂ ಗಂಡು, ೩೫ ಸಾರಿ ಎರಡು ಗಂಡು ಒಂದು ಹೆಣ್ಣು, ೩೬ ಸಾರಿ ಒಂದು ಗಂಡು ಎರಡು ಹೆಣ್ಣು, ೩೫ ಸಾರಿ ಮೂರೂ ಹೆಣ್ಣು ಹುಟ್ಟಿತು.) ಒಂದು ಪ್ರಸವದಲ್ಲಿ ೪ ಮಕ್ಕಳು (ನಾಲ್ಕೂ ಹೆಣ್ಣು) ಜನಿಸಿದ್ದೂ ಆಯಿತು.

ಇತಲಿ ದೇಶದ ಅರಸು ವಿಕ್ಟೋರ್ ಇಮ್ಮಾನುವೇಲ್ ಜನವರಿ ೧೦ರಲ್ಲಿ ತೀರಿ ಕೊಂಡ ವರ್ತಮಾನ ತಲಪಿದೆ.

ಇತ್ತಲಾಗೆ ರುಸ್ಯರಿಗೆ ಎಲೆನ ಎಂಬಲ್ಲಿ ತುರ್ಕರ ಕೈಯಿಂದ ಒಂದಿಷ್ಟು ಪೆಟ್ಟು ಬಿತ್ತು; ಆದರೂ ರುಸ್ಯರು ಚನ್ನಾಗಿ ಮೇಲಾಡುತ್ತಾ ಬರುತ್ತಾರೆ. ಇತ್ತಲಾಗೆ ಸೊಫಿಯ ಎಂಬಲ್ಲಿ ಸಹ ತುರ್ಕರದೊಂದು ದಳವನ್ನು ಮುರಿದು ಶೆರೆ ಹಿಡಿದರು.—ಪ್ಲೆವ್ನ ಎಂಬಲ್ಲಿದ್ದ ತುರ್ಕ್ಯ ದಳವನ್ನು ಅವರು ಹಿಡಿದ ಬಳಿಕ ಸೆರ್ವ್ಯ ಎಂಬ ಶೀಮೆಯವರೂ ತುರ್ಕರ ಮೇಲೆ ಎದ್ದು, ರುಸ್ಯರನ್ನು ಕೂಡಿ ಕೊಂಡು, ನಿಷ ಎಂಬ ತುರ್ಕ್ಯ ಕೋಟೆಯನ್ನೂ ಸಾಧಿಸಿ ಹಿಡು ಕೊಂಡರು.—ಅಂತಿವರಿ ಎಂಬ ತುರ್ಕ್ಯ ಸಮುದ್ರ ದುರ್ಗವು ಮೊಂತೆನಿಗ್ರೊ ಶೀಮೆಯವರಿಗೆ ಕೈವಶವಾಯಿತು.—ಪ್ಲೆವ್ನದಲ್ಲಿ ತುರ್ಕರು ಸಿಂಹಗಳಂತೆ ಮಹಾ ಶೌರ್ಯದಿಂದ ಕಾದಾಡಿ ಶೋಭಿಸಿದರು; ಆದರೂ ಅವರ ಸಾಹಸವೆಲ್ಲವೂ ಬಾಯಿಗೊಳ್ಳದೆ, ಶೆರೆಯಲ್ಲಿ ಆರಿ ಹೋಯಿತು. ಇಂಗ್ಲಿಷರು ಹ್ಯಾಗೂ ಅವರಿಗೆ ಏನೂ ಕುಮುಕು ಮಾಡರೆಂದು ಕಾಣುತ್ತದೆ. ರುಸ್ಯರಿಗೆ ಹೆದರಿಸುತ್ತಿದ್ದಾರೆ; ಆದರೂ ಬೊಗಳಲಿ ಮುದುಕಿ! ಎಂಬುವ ಹಾಗೆ ರುಸ್ಯರು ಅವರ ಬೆದರಿಕೆಗಳನ್ನು ಲಕ್ಷ್ಯಕ್ಕೆ ತಾರದೆ, ತಮ್ಮ ಕಾರ್ಯವನ್ನು ಬಿಡದೆ ಸಾಗಿಸುತ್ತಿದ್ದಾರೆ. ಔಸ್ತ್ರೀಯ ಸರಕಾರದವರು ಇಂಗ್ಲಿಷರ ಆಶೆಗೆ ಅನುಕೂಲವಾಗಿದ್ದರೆ, ಇಂಗ್ಲಿಷರು ರುಸ್ಯರಿಗೆ ಒಂದು ವೇಳೆ ಕತ್ತೀ ಮಾತನ್ನು ಕೊಟ್ಟಾರು; ಆದರೆ ಔಸ್ತ್ರೀಯದವರು ಇಂಗ್ಲಿಷರ ವಾದ್ಯಕ್ಕೆ ಕುಣಿಯಲೊಲ್ಲರು. ಕಡೆಗೆ ಇಂಗ್ಲಿಷರು ರುಸ್ಯರನ್ನು ಮಾತ್ರವಲ್ಲ, ತುರ್ಕರನ್ನು ಸಹಾ ಬೇಸರಗೊಳಿಸಿ, ಇಬ್ಬರ ಹಗೆಗೆ ಗುರಿಯಾಗಲಿಕ್ಕೆ ಸಾಕು.—ತುರ್ಕರು ಈಗ ಸಂಧಾನಕ್ಕೆ ಹರುವು ದೊರಕಿಸಿ ಕೊಳ್ಳ ನೋಡಿ ರುಸ್ಯರ ಹತ್ತರ ಜಗಳಸಮಾಧಾನವನ್ನು ಬೇಡಿ ಕೊಂಡರು.

ಪ್ರತಿ ಹನ್ನೊಂದನೇ ವರುಷಕ್ಕೆ ಮಳೆ ತಕ್ಕಷ್ಟು ಬಾರದೆ, ಹಿಂದುಸ್ಥಾನದಲ್ಲಿ ದವಸಗಳು ಹೆಚ್ಚು ಪ್ರಿಯವಾಗುವ ಕಾಲವಾಗಲಿ ಪೂರ್ಣ ಬರಗಾಲವೇ ಆಗಲಿ ಆಗುತ್ತಾ ಬರುತ್ತದೆಂಬದಾಗಿ ಮಳೆಯ ಸಂಗತಿಯನ್ನು ಇತ್ತಲಾಗೆ ಹೆಚ್ಚಿನ ವಿಚಾರಕ್ಕೆ ತಂದು ಕೊಂಡ ವಿದ್ವಾಂಸರು ಹೇಳುತ್ತಾರೆ.

ಏಳೇಳು ಚಿತ್ರಗಳು ಇದ್ದಂಥ ೧೦ ಚಿತ್ರಪುಸ್ತಕಗಳು ಇತ್ತಲಾಗೆ ಛಾಪೆಯಾದವು. ಒಂದೊಂದು ಒಂದೊಂದಾಣೆಗೆ ವಿಕ್ರಯವಾಗುತ್ತದೆ.

ಫೆಬ್ರುವರಿ ತಾರೀಖು ೧೨ರಲ್ಲಿ (ಒಂದು ಮಂಗಳವಾರದಲ್ಲಿ) ಉಡ್ಪಿ ಮಿಶ್ಯನ್ ಹಬ್ಬವು ಆಗುವದು. ಇತರ ಸಭೆಯವರೂ ಪ್ರೀತಿಯಿಟ್ಟು, ಹಬ್ಬಕ್ಕೆ ಬರ ಬೇಕೆಂಬದಾಗಿ ಆ ಸಭೆಯ ಹಿರಿಯರು ಬೇಡಿ ಕೊಳ್ಳುತ್ತಾರೆ.

Printed at the Basel Mission Press, Mangalore.

ಕ್ರೈಸ್ತಸಭಾಪತ್ರ



ಪುಸ್ತಕ ೧೦. **MARCH 1878.** ಅಂಕೆ ೯.

ಅಡಕವು: ಎರಡು ಮಿಶ್ಯನ್ ಗೀತಗಳು—ಹೊಸ ಪ್ರಶ್ನೆಗಳು—ನಿಜ ಸುಖವು—ಹೊಲದಲ್ಲಿ ಬಚ್ಚಿಟ್ಟ ದ್ರವ್ಯವೂ ಬಹು ಬೆಲೆಯುಳ್ಳ ಮುತ್ತೂ—ಆಕಳನ್ನು ದುಡಿದು ಕೊಂಡ ಹುಡುಗನು—ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?—ಉತ್ತರಗಳು—ವಿವಿಧ ವರ್ತಮಾನಗಳು.

ಎರಡು ಮಿಶ್ಯನ್ ಗೀತಗಳು.

Mel.: Brüder streuet guten Samen. 66.

೧. ಬಿತ್ರೊ ಕಾಲವಿರಲಾಗಿ
ಒಳ್ಳೆ ಬೀಜ ಬಿತ್ತಿರಿ!
ಕೃಷಿ ಮಾಡ್ರಿ ಧೀರವಾಗಿ
ಯೇಸು ನಾಮಧೇಯದಿ!
ಕ್ರಿಸ್ತನಾಥ ಪುನಃ ಬರುವಲ್ಲಿ
ಆಳಿನೆಡೆ ಹರುಷಾಬ್ಧಿಯಲ್ಲಿ.

೨. ಸದ್ಯಃ ಕಷ್ಟಕಾಲದಲ್ಲಿ
ಮುಖ್ಯ ಕಾರ್ಯ ತಾಳೋದೇ.
ಆಳು ತನ್ನ ಸೇವೆಯಲ್ಲಿ
ದಣುಕೊಳ್ಳ ಬಾರದೇ?
ಇಲ್ಲಿ ತಾಳಿದಷ್ಟು ಕಷ್ಟ ತಾಪ
ಆಗೊದಲ್ಲಿ ಸುಖಪೂರ್ತಿಲಾಭ.

Mel.: Der du in Todesnächten. 30. 4. 155.

೧. ಕಠೋರ ಶ್ರಮ ತಾಳಿ,
ನರಾರಿಯೊಡನೆ
ಅಘೋರ ಹೋರನಾಡಿ,
ಉತ್ಸಾಹದೊಂದಿಗೆ
ಮಹೋಚ್ಚ ಸ್ಥಾನದಲ್ಲಿ
ಶೇರಿರ್ವ ರಕ್ಷಕಾ!
ನೀ ದಯದಿಂದೆಮ್ಮಲ್ಲಿ
ಬಂದಿರು ಸರ್ವದಾ!

೨. ಭೂಪರಲೋಕದಲ್ಲಿ
ಸರ್ವಾಧಿಕಾರವಂ
ನೀ ಹೊಂದಿ, ಸರ್ವರಲ್ಲಿ
ಮಹನ್ಮಹಿಮೆಯಂ
ನೀ ಬೇಗ ಪಡಕೊಳ್ಳು,
ರಾಜಾಧಿರಾಜನೇ!
ನಿನ್ನಾಳ್ಗಳನ್ನು ನೋಡು,
ಸಂಸ್ತುತ್ಯ ಪ್ರಭುವೇ!

ಹೊಸ ಪ್ರಶ್ನೆಗಳು.

51. ಶೂರ ಶಿರೋಮಣಿಯಾದವನೊಬ್ಬನಿಗೆ ಅಕ್ಕನೂ ಮೂರು ಮಂದಿ ಮಹಾ ಶೂರರಿಗೆ ತಾಯಿಯೂ ಆಗಿದ್ದವಳೊಬ್ಬಳ ಹೆಸರೇನು?

52. ಸತ್ತು ಹೋದ ಮೇಲೆ ಪರದೇಶಿಗಳಿಗೆ ಒಂದು ಉಪಕಾರಕ್ಕೆ ಕಾರಣನಾದ ಮಹಾ ಲೋಭಿಯೊಬ್ಬನ ಹೆಸರೇನು?

53. ಯಾರ ತಲೇ ಮೇಲೆ ದೂತರು ಮುಂಡಾಸವನ್ನು ಇಟ್ಟರು?

54. ಲಕ್ಷೋಪಲಕ್ಷ ರೂಪಾಯಿಗಿಂತಮೂಲ್ಯವಾಗಿದ್ದ ಪುಸ್ತಕವನ್ನು ಕಂಡು ಕೊಂಡದಕ್ಕೆ ದೊಡ್ಡ ದಿಗಿಲುಗೊಂಡದು ಯಾರು?

ನಿಜ ಸುಖವು.

ಬಂಗಾಳದಲ್ಲಿ ಒಬ್ಬ ಉಪದೇಶಕನು ತನ್ನ ಸಭೆಯ ಒಬ್ಬ ಬಡವೆ ಹೆಂಗಸಿನ ಮನೆಗೆ ಹೋಗಿ, ಅವಳ ಸುಖದುಃಖವನ್ನು ವಿಚಾರಿಸಿದಲ್ಲಿ ಅವಳು—ನಾನು ಸುಖಿಯಾಗಿದ್ದೇನೆ, ನಿಜವಾಗಿ ಸುಖಿಯಾಗಿದ್ದೇನೆ ಎಂತ ಹೇಳಿ, ತನ್ನ ಕೈಯನ್ನು ಬಂಗಾಳಿ ಸತ್ಯವೇದಗ್ರಂಥದ ಮೇಲಿಟ್ಟು, ಇದರೊಳಗೆ ಕ್ರಿಸ್ತನು ಇದ್ದಾನೆ ಅಂದಳು. ಮತ್ತೆ ತನ್ನ ಕೈಯನ್ನು ಹೃದಯದ ಮೇಲಿಟ್ಟು, ಇದರೊಳಗೆ ಸಹ ಕ್ರಿಸ್ತನು ಇದ್ದಾನೆ ಅಂದಳು. ಕಡೆಗೆ ತನ್ನ ಬೆರಳನ್ನು ಆಕಾಶದ ಕಡೆಗೆ ತೋರಿಸಿ, ಅಲ್ಲಿಯೂ ಕ್ರಿಸ್ತನಿದ್ದಾನೆ; ಆದ ಕಾರಣ ನಾನು ಇಷ್ಟು ಸುಖಿಯಾಗಿದ್ದೇನೆ. ಯೇಸು ಕ್ರಿಸ್ತನ ಮೇಲೆ ವಿಶ್ವಾಸವನ್ನೂ ಪ್ರೀತಿಯನ್ನೂ ಇಡುವದು ಇದೇ ನಿಜವಾದ ಸುಖವೆಂತ ನಾನು ಸರ್ವದಾ ತಿಳಿದಿದ್ದೇನೆ; ಯಾಕಂದರೆ ಇದೇ ನಿತ್ಯಕಾಲದ ಸುಖವಾಗಿದೆ ಎಂದ್ಹೇಳಿದಳು.

ಹೊಲದಲ್ಲಿ ಬಚ್ಚಿಟ್ಟ ದ್ರವ್ಯವೂ ಬಹು ಬೆಲೆಯುಳ್ಳ ಮುತ್ತೂ.

ಸ್ವರ್ಗರಾಜ್ಯವು ಹೊಲದಲ್ಲಿ ಬಚ್ಚಿಟ್ಟ ದ್ರವ್ಯಕ್ಕೆ ಸಮಾನವಾಗಿದೆ. ಅದನ್ನು ಒಬ್ಬ ಮನುಷ್ಯನು ಕಂಡು, ಅಡಗಿಸಿ, ಅದಕ್ಕೆ ಸಂತೋಷಭರಿತನಾಗಿ, ಹೋಗಿ, ತನಗಿದ್ದದನ್ನೆಲ್ಲಾ ಮಾರಿ ಬಿಟ್ಟು, ಆ ಹೊಲವನ್ನು ಕೊಂಡುಕೊಂಡನು. ಮತ್ತು ಒಳ್ಳೇ ಮುತ್ತುಗಳನ್ನು ಹುಡುಕುವ ವರ್ತಕನಿಗೆ ಸ್ವರ್ಗರಾಜ್ಯವು ಸಮಾನವಾಗಿದೆ. ಅವನು ಬಹು ಬೆಲೆಯುಳ್ಳ ಒಂದು ಮುತ್ತನ್ನು ಕಂಡು, ಹೋಗಿ, ತನಗಿದ್ದದನ್ನೆಲ್ಲಾ ಮಾರಿ ಬಿಟ್ಟು, ಅದನ್ನು ಕೊಂಡುಕೊಂಡನು. ಮತ್ತಾ ೧೩, ೪೪—೪೬.

ಈ ಭೂಲೋಕದಲ್ಲಿ ಲಭ್ಯವಾಗಿರುವ ದ್ರವ್ಯದಲ್ಲಿ ಹೊನ್ನೂ ಮುತ್ತೂ ಮುಖ್ಯವಾದ್ದೇ. ಯಥೇಷ್ಟ ಚಿನ್ನ ಬೆಳ್ಳಿ ಇದ್ದಂಥವರು ಸೋಪಾಯಸ್ಥರಾಗಿ, ತಮಗೆ ಇಷ್ಟವಾಗಿರುವ ಒಡವೆಗಳನ್ನು ದೊರಕಿಸಿ ಕೊಂಡು, ಯಥೇಷ್ಟ ಭೋಗಗಳನ್ನು ಒದಗಿಸಿ ಕೊಂಡು, ಅರ್ಥವಂತರೆಂತಲೂ ಐಶ್ವರ್ಯವಂತರೆಂತಲೂ ಸುಖಜೀವಿಗಳೆಂತಲೂ ಅನ್ನಿಸಿ ಕೊಂಡಾರು. ಆದರೆ ಯಥೇಷ್ಟ ಚಿನ್ನ ಬೆಳ್ಳಿ ಇದ್ದು, ಯಥೇಷ್ಟ ಭೋಗಗಳನ್ನು ಮಾಡಿ, ಮಹಾ ಪರಮ ಸುಖದಲ್ಲಿ ಬಾಳುವಂಥವರು ಈ ಜಗತ್ತಿನಲ್ಲಿ ಕಾಣರು. ಯೇಸು ಕ್ರಿಸ್ತನಾಥನ ಸುವಾರ್ತೆ ಅಂಥ ಪರಮಸುಖವನ್ನೀಯುವ ಮುತ್ತು ಶಿಕ್ಕುವ ರತ್ನಾಕರವು (ಸಾಗರ) ಆಗಿದೆ. ಅದರಲ್ಲಿ ದೊರಕುವ ಮುತ್ತು ಬರೇ ಕ್ಷಣಿಕ ಭೋಗವನ್ನಲ್ಲಾ ನಿತ್ಯ ಸುಖವನ್ನು, ಪರಮಾನಂದವನ್ನು ತಂದೀಯುತ್ತದೆ. ಶಾಶ್ವತ ಪದವಿ, ಸ್ವರ್ಗೀಯ, ಅಖಂಡ, ಅತುಲ್ಯ, ಅಕ್ಷಯ ಒಡವೆಗಳು ಶಿಕ್ಕುತ್ತವೆ. ಅದಲ್ಲದೆ ದೇವರ ರಾಜ್ಯದಲ್ಲಿಯೂ ಆತನ ನೀತಿಯಲ್ಲಿ

ಯೂ ತನ್ನ ಆಶಾಬಂಧವನ್ನು, ತನ್ನ ಸರ್ವ ಇಷ್ಟಾರ್ಥವನ್ನು ಇಟ್ಟು ಸಾಧಿಸಿ ಕೊಳ್ಳುವವರಿಗೆ ಇತರವಾದ್ದೆಲ್ಲವೂ (ಅಶನವಸನಾದಿಗಳು) ಕೊಸರು ಎಂಬ ಹಾಗೆ ಅದರ ಕೂಡ ದೊರಕುವದು. ಇತರ ದ್ರವ್ಯಗಳಿಂದ ಒದಗಲಾರದ ಸುಖವು ಸುವಾರ್ತೆಯಲ್ಲಿ ಲಭ್ಯವಾಗಿರುವ ದ್ರವ್ಯದಿಂದ ಒದಗುವದು, ಯಾಕಂದರೆ ಈ ದ್ರವ್ಯವು ಮೃತಸಂಜೀವನದೋಪಾದಿಯಾಗಿ ಬದುಕಿಸುವಂಥಾದೂ ಸಂತೃಪ್ತಿ ಕೊಡುವಂಥಾದೂ ಆಗಿರುತ್ತದೆ.

ಮನುಷ್ಯನ ಬುದ್ಧಿಗೂ ಇಷ್ಟಕ್ಕೂ ಸಾಧನೆಗೂ ಯೋಗ್ಯವಾದ ಬೇರೆ ಬೇರೆ ವಿಷಯಗಳೂ ಉದ್ದಿಶ್ಯಾರ್ಥಗಳೂ (ಗುರಿಗಳು) ಇದ್ದಾವೆಂಬದಕ್ಕೆ ಸಂದೇಹವಿಲ್ಲ. ಮನೆ ಬದುಕು, ಮಾನ ಮರ್ಯಾದೆ, ವಿದ್ಯಾಭ್ಯಾಸ, ವ್ಯಾಪಾರ ಮೊದಲಾದ್ದರಲ್ಲಿ ಮನುಷ್ಯನು ಮನಸ್ಸಿಟ್ಟು ಪ್ರಯತ್ನ ಮಾಡತಕ್ಕದು. ಅದೆಲ್ಲವು ನಿಂದ್ಯವಾಗಲಿ ವ್ಯರ್ಥವಾಗಲಿ ಆಗಿರದೆ, ಸ್ತುತ್ಯವೂ ಪ್ರಯೋಜನದ್ದೂ ಆಗಿ, ಒಳ್ಳೇ ಅರ್ಥವೆಂತಲೂ ಮುತ್ತೆಂತಲೂ ಅನ್ನಿಸಿ ಕೊಳ್ಳ ಬಹುದು. ಆದರೆ ಗಣ್ಯವೂ ಘನವೂ ಇಷ್ಟಪ್ರಿಯವೂ ಎಂದೆಣಿಸಿ ಕೊಳ್ಳ ತಕ್ಕಂಥಾದೆಲ್ಲಾದಕ್ಕಿಂತ ಸ್ವರ್ಗರಾಜ್ಯಪದವಿ ಅತಿಗಣ್ಯವೂ ಅತಿ ಪ್ರಿಯವೂ ಆಗಿರ ತಕ್ಕಂಥಾದಾಗಿ, ಬೆಲೆಯುಳ್ಳ ಒಂದೇ ಮುತ್ತು ಎಂಥೇಳ ಬೇಕು. ಈ ಪದವಿಯನ್ನು ಪಡಕೊಳ್ಳದವನಿಗೆ ಇತರವಾದ್ದು ಏನೇನೂ ಎಷ್ಟೆಷ್ಟೂ ಇದ್ದರೂ, ಯಥೇಷ್ಟವೇ ಇದ್ದರೂ, ಪ್ರಪಂಚವಿಚಾರದಲ್ಲಿ ಸರ್ವಾರ್ಥಸಿದ್ಧಿ ಅವನಿಗಾದರೂ, ಸಂತೃಪ್ತನಾಗಲಾರನು. ಸಕಲ ದ್ರವ್ಯ ಲಾಭವನ್ನೂ ವಿದ್ಯಾಲಾಭವನ್ನೂ ಅಧಿಕಾಧಿಕವಾಗಿ ಮೀರಿ ಹೋಗುವಂಥಾ ಸೊತ್ತುಂಟು. ಈ ಸೊತ್ತಿನ ಅನುಭೋಗದಲ್ಲಿರುವ ಸುಖವು ಭಾಷಾತೀತವೂ ಭಾವಾತೀತವೂ ಆಗಿದೆ. ಸ್ವರ್ಗ ರಾಜ್ಯದ ಆಳ್ಮನಾದ ದೇವರಲ್ಲಿ, ಅನಂತಾನಂದನಾದ ಪರಮಾತ್ಮನಲ್ಲಿ ಅಲ್ಲದೆ, ಇತರವಾದೊಂದು ಒಡವೆಯಲ್ಲಾಗಲಿ ಜೀವಿಯಲ್ಲಾಗಲಿ ಜೀವಾತ್ಮನಿಗೆ ತೃಪ್ತಿ, ಇಷ್ಟಪೂರ್ತಿ, ಪ್ರಾಪ್ತಿಯಾಗದು. ಸ್ವರ್ಗಪದವಿಗೂ ಸ್ವರ್ಗೇಶನ ಸನ್ನಿಧಿಗೂ ಯೇಸು ಕ್ರಿಸ್ತನು ಒಂದೇ ಮಾರ್ಗವಾಗಿದ್ದಾನೆ. ಈತನ ಸುವಾರ್ತೆಯನ್ನು ನಂಬಿ, ಈತನಲ್ಲೇ ವಿಶ್ವಾಸವಿಟ್ಟು, ನಾವು ಮಹಾ ಅರ್ಥವಂತರೂ ಶಾಶ್ವತಪದವಿಗೆ ಬಾಧ್ಯಸ್ಥರೂ ಆಗ ಬಹುದು.

ಆ ದ್ರವ್ಯವು ಹೊಲದಲ್ಲಿ ಬಚ್ಚಿಟ್ಟ ವಸ್ತು. ಮುತ್ತು ಚಿಪ್ಪಿನಲ್ಲಿ ಸಮುದ್ರದ ಅಡಿಯಲ್ಲಿ ಅಡಗಿದ್ದಾಗಿ ಶಿಕ್ಕುತ್ತದೆ. ಮುತ್ತಿನ ಅಂಡೆ ಅಥವ ಹೊದಿಕೆ ಆಗಿರುವ ಚಿಪ್ಪನ್ನು ಮಾತ್ರವೇ ನೋಡಿದರೆ, ಮುತ್ತಿನ ಬೆಲೇ ಸಂಗತಿವಿಶೇಷವು ಕಿಂಚಿತ್ತಾಗಿಯಾದರೂ ಕಾಣದೆ, ಅದು ಬರೇ ಅಲ್ಪ ವಸ್ತು ಎಂತ ಕಾಣುವದು. ಹಾಗೆಯೇ ಅವತರಿಸಿ ಕೊಂಡು, “ದಾಸರೂಪವನ್ನು” ಧರಿಸಿ ಕೊಂಡು, ಭೂಮಿಯಲ್ಲಿ ಮನುಷ್ಯರ ಮಧ್ಯದಲ್ಲಿ ಸಂಚಾರ ಮಾಡುತ್ತಿದ್ದ ಯೇಸುಕ್ರಿಸ್ತನಾಥನ ನರದೇಹಾಕಾರಾವಸ್ಥೆಗಳೆಂಬ ಹೊದಿಗೆಯನ್ನು ಮಾತ್ರವೇ ನೋಡಿ, ಆ ಹೊದಿಗೆಯೊಳಗಿದ್ದ ಮೈಯನ್ನು, ಅಂದರೆ ಮನುಷ್ಯಾಕಾರದಲ್ಲಿ ಮರೆಯಾಗಿದ್ದ ಮಹಿಮೆಯನ್ನೂ ದಿವ್ಯತ್ವವನ್ನೂ ಪರಾಂಬರಿಸಿ ನೋಡದೆ ಹೋದವರಿಗೆ ಆತನ ಸ್ವಭಾವಾದಿಗಳ ವಿಶೇಷತ್ವವು ಕಾಣದೆ, ಆತನು ಪರಾತ್ಪರ ಸ್ವಾಮಿಯ ಪ್ರತಿರೂಪನೂ ಸ್ವರ್ಗರಾಜನೂ ಶಾಶ್ವತಜೀವವನ್ನು ಕೊಡುವ ಜೀವದಧಿಪತಿಯೂ ಎಂಬದು ನಂಬಲಿಕ್ಕೆ ಕೂಡದೆ ಹೋಗ ಬಹುದಾಯಿತು. ಆತನ ರಾಜ್ಯದ ವಾಕ್ಯಕ್ಕೂ ಸ್ನಾನ ರಾತ್ರಿಭೋಜನಗಳೆಂಬ ಪ್ರಸಾದಗಳಿಗೂ ಒಂದು ಭೌತಿಕ ಅಂದರೆ ಪಂಚಭೂತಗಳಿಗೆ ಸಂಬಂಧವಾದ ರೂಪವು, ಭೌಮಿಕ ವಸ್ತುವಿನ ಆಕಾರವು ಉಂಟು. ಇದು ಅವುಗಳ ದಿವ್ಯ ಸತ್ವ ವ್ಯಾಪ್ತಿಬಲಗಳ ವಾಹನವೇ ಎಂಬಂತೆ ಆಗಿರುವದಲ್ಲದೆ, ಮುಸುಕುವ ಹೊದಿಕೆಯಂತೆಯೂ ಇರುತ್ತದೆ. ಹಾಗೂ ಬೈಬಲ್ ಎಂಬ ದೇವವಾಗ್ಗ್ರಂಥವು ದೇವೋಕ್ತಿಗಳ (ಅಂದರೆ ದೇವರ ನುಡಿಗಳ) ಸಂಗ್ರಹವಾಗಿ, ಮಹಾ ಗ್ರಂ

ಥಶ್ರೇಷ್ಠವೇ ಆಗಿದ್ದರೂ, ಉಳಿದ ಗ್ರಂಥಶಾಸ್ತ್ರಗಳಂತೆ ನರಹಸ್ತವು ಹಿಡಿದಿದ್ದ ಲೇಖಿನಿಯಿಂದ ಲಿಖಿತವಾಗಿ, ಕಣ್ಣನ್ನಾಗಲಿ ಕಿವಿಯನ್ನಾಗಲಿ ರಂಜಿಸುವಂಥಾ ಬಾಹ್ಯ ಮಹಿಮೆ ಇಲ್ಲದ್ದಾಗಿದೆ. ಸ್ನಾನ ರಾತ್ರಿಭೋಜನಗಳು ದೇವತಾಕೃಪಾಭರಿತವಾದ ಪ್ರಸಾದಗಳೇ ಆಗಿ, ದಿವ್ಯ ಪ್ರಾಣತ್ರಾಣಪ್ರದವಾಗಿದ್ಧಾವೆ; ಆದರೂ ಪಂಚಭೂತಾತ್ಮಕ ವಸ್ತುವಿನ ಮುಖಾಂತರವಾಗಿ ಮಾತ್ರವೇ ಅಂಥ ಪ್ರದಾನ ಮಾಡುತ್ತಿದ್ಧಾವೆ. ಕ್ರಿಸ್ತನ ಸಭೆ ಸಹ ಜಗತ್ತಿನಲ್ಲಿ ಸ್ಥಾಪಿತವಾಗಿ, ದೇವರ ರಾಜ್ಯದ ಪ್ರದರ್ಶನವೂ ಅಂಡೆಯೂ ಆಗಿದ್ದರೂ, ಮನುಷ್ಯರ ಸಹವಾಸರೂಪಗಳಲ್ಲಿ ಒಂದಾಗಿ, ಉಳಿದ ಎಲ್ಲ ಸಭೆಗಳಿಗೂ ಇರುವ ಲೌಕಿಕ ಸ್ವರೂಪದಲ್ಲಿ ಗೋಚರಿಸುತ್ತಿರುತ್ತದೆ. ಕ್ರೈಸ್ತ ಸಭೆಯ ಚರಿತ್ರವು ಲೋಕಚರಿತ್ರವೆಂಬದಕ್ಕೆ ಹೋಲಿಕೆಯಾಗಿದೆ. ಈ ಸಭೆಯನ್ನು ನೋಡುವವನಿಗೆ ಅದು ಲೋಕವೆಂಬ ಘೋರಾರಣ್ಯದ ಪಾಲೆಂದು ಕಾಣುವದಿಲ್ಲವಾದರೂ, ಅದೊಂದು ಬಹು ರಮ್ಯ ರಾಜವನವೆಂತ ತೋರದೆ, ಊದರೆ, ಕಳೆ, ದತ್ತೂರಿಗಿಡ ಮೊದಲಾದ್ದು, ಮುಳ್ಳುಗಿಡವಾದರೂ, ಇದ್ದಂಥ ಹೊಲವೆಂದು ಕಾಣುವದು. (ಮುಂದೆ ಸಾಗಿಸಲ್ಪಡುವದು.)

ಆಕಳನ್ನು ದುಡಿದು ಕೊಂಡ ಹುಡುಗನು.

ಕೂಲಿ ಕೆಲಸದಲ್ಲಿ ಕಾಲಕ್ಷೇಪ ಮಾಡುತ್ತಿದ್ದ ಬಡ ಗಂಡಹೆಂಡರಿಬ್ಬರಿಗೆ ಒಬ್ಬನೇ ಮಗನಿದ್ದನು. ಈತನು ೧೮ ವರುಷ ಪ್ರಾಯದ ಹುಡುಗನಾಗಿ, ಒಂದು ನೆರೆಯೂರಿನ ರೈತನೊಬ್ಬನಲ್ಲಿ ಆಳಾಗಿ ಊಳಿಗ ಮಾಡುವವನಾದನು. ಒಂದಾನೊಂದು ದಿವಸ ಅವನು ಹೊಲಕ್ಕೆ ಹೋಗಿ ಉಳ ಬೇಕಾಯಿತು. ಉತ್ತು ದಣಿದು ಹೋದ ಎತ್ತಿನ ಜೋಡು ವಿಶ್ರಮಿಸಿ ಕೊಳ್ಳಲಿಕ್ಕಾಗಿ ಬಿದ್ದು ಕೊಂಡು, ನೆಮರು ಹಾಕುತ್ತಾ, ಅವನೂ ನೇಗಿಲಿಗೆ ಒರಗಿ ಕೊಂಡು ವಿಶ್ರಮಿಸಿ ಕೊಳ್ಳುತ್ತಾ ಇರುವಾಗಲೇ ಹೊಲದ ಬದೀಲಿಯ ರಸ್ತೆಯಲ್ಲಿ ಅವನ ಊರಿನವನೊಬ್ಬನು ನಡದು ಬಂದು, ಅವನನ್ನು ಕಾಣಲು, ಕರದು ಹೇಳಿದ್ದೇನಂದರೆ: "ಹೋದ ರಾತ್ರಿಯಲ್ಲಿ ನಿನ್ನ ತಂದೆತಾಯಿಗಳ ಆಕಳು ಸತ್ತು ಹೋದ್ದು ನಿನಗೆ ಗೊತ್ತಾಯಿತೋ?" ಈ ಮಾತಿಗೆ ಆ ಹುಡುಗನು ಬಹಳ ಕಳವಳಗೊಂಡು, ತಂದೆತಾಯಿಗಳನ್ನು ನೆನಸಿ, ಕಣ್ಣೀರಾದರೂ ಇಟ್ಟು, ತನ್ನ ತಂದೆತಾಯಿಗಳಿಗೆ ತಾನು ಕೈಕೊಡುವ ಬಗೆಯನ್ನು ಯೋಚನೆ ಮಾಡುವವನಾದನು. ಸಾಯಂಕಾಲವಾಗಿ ಎತ್ತನ್ನು ಹೊಡಕೊಂಡು ಬಂದು, ಯಜಮಾನನ ಮುಖವನ್ನು ಹುಡುಕಿ, ಅವನಿಗೆ ತನ್ನ ತಂದೆತಾಯಿಗಳಿಗೆ ಬಿದ್ದ ಪೆಟ್ಟಿನ ಸುದ್ದಿಯನ್ನು ತಿಳಿಸಿ ಬಿನ್ನೈಸಿದ್ದೇನಂದರೆ: "ದಯ ಮಾಡಿ, ನಿಮ್ಮ ದನಗಳಲ್ಲಿ ಒಂದನ್ನು ನನಗೆ ಮಾರಿ ಕೊಡಿರಿ; ಅದರ ಕ್ರಯವನ್ನು ನಾನು ಈಗಲೇ ಸಂದಾಯ ಮಾಡಲಾರೆ; ಆದರೆ ಅದರ ಕ್ರಯಕ್ಕೆಂತ ಈ ವರುಷ ನಿಮಗೆ ಊಳಿಗ ಮಾಡುತ್ತೇನೆ."

ಹುಡುಗನು ಒಳ್ಳೇ ನಂಬಿಕೆಯುವನು ಆಗಿದ್ದ ಕಾರಣ ಅವನ ಯಜಮಾನನು ಅವನ ಬಿನ್ನಹವನ್ನು ಲಾಲಿಸಿ, ತನ್ನದೊಂದು ಒಳ್ಳೇ ಆಕಳನ್ನು ಕೊಟ್ಟು ಬಿಟ್ಟನು. ಹುಡುಗನು ಅದನ್ನು ಅದೇ ರಾತ್ರೆ ತನ್ನೂರಿಗೆ ಹೊಡಕೊಂಡು, ತನ್ನ ತಂದೆತಾಯಿಗಳ ಹಟ್ಟಿಯಲ್ಲಿ ಕಟ್ಟಿ ಹಾಕಿ, ಯಾರ ಹತ್ತರ ಮಾತಾಡದೆ, ತಿರಿಗಿ ಯಜಮಾನನ ಮನೆಗೆ ಬಂದನು. ಮರು ದಿವಸ ಹೊತ್ತಾರೆ ಅವನ ತಾಯಿ ಎದ್ದು ಹಟ್ಟಿಯಲ್ಲಿ ಹೊಸ ಆಕಳನ್ನು ಕಂಡು, ಮಗನು ಅದನ್ನು ತಂದು ಹೋಗಿದ್ದಾನೆಂದು ಊಹೇಮೇಲೆ ತಿಳಿದು ಕೊಂಡು, ಆನಂದಬಾಷ್ಪಗಳನ್ನು ಸುರಿಸಿ, ಮಗನನ್ನು ತನ್ನ ಮನಸ್ಸಿನಲ್ಲಿ ಬಹಳವಾಗಿ ಹರಸುವವಳಾದಳು. ಹುಡುಗನು ಒಂದು ಇಡೀ ವರುಷ ಒಂದು ಕಾಸನ್ನಾದರೂ ನಸಿಪುಡಿ ಚುರುಟು ಮೊದಲಾದ ಖಾಸಗತೀ ಖರ್ಚಿಗೆ ಈಸಿ ಕೊಳ್ಳದೆ, ಊಳಿಗ ಮಾಡಿ, ಆಕಳಿನ ಕ್ರಯವನ್ನು

ಯಜಮಾನನಿಗೆ ಸಂದಾಯ ಮಾಡಿದನು. ಬಳಿಕ ಮತ್ತೂ ೧೦ ವರುಷ ಬಹು ನಂಬಿಕೆಯುಳ್ಳವನಾಗಿ ಊಳಿಗ ಮಾಡಿ, ಹೆತ್ತವರಿಗಿದ್ದ ಸಾಲಗಳನ್ನು ತೀರಿಸಿ, ಅಡವಿಟ್ಟದ್ದ ಅವರ ಮನೆಮಾರನ್ನು ಬಿಡಿಸಿ ಕೊಂಡ ಮೇಲೆ ಮದುವೆ ಮಾಡಿ ಕೊಂಡು, ತಕ್ಕ ಪರಿಣಾಮದಲ್ಲಿ ತನ್ನ ಮನೆ ಬದುಕನ್ನು ಸಾಗಿಸಿ, ಮಾನಮರ್ಯಾದೆಯಲ್ಲಿ ಬದುಕುವವನಾದನು.

ತಂದೆತಾಯಿಗಳ ಆಶೀರ್ವಾದವು ಮಕ್ಕಳಿಗೆ ಮಹದಾದಾಯವೇ — ಚುರುಟು ಶೇದುವದರಲ್ಲಿಯೂ, ಬೆಡುಗುಗಾರಿಕೆಯಲ್ಲಿಯೂ, ಮೂರು ಕಾಸು ದುಡಿದು ಕೊಂಡು ಆರುಕಾಸು ಖರ್ಚುವೆಚ್ಚ ಮಾಡಿ ಮೆರೆಮೆರೆಯುವದರಲ್ಲಿಯೂ, ಇತರ ಯಾವದೊಂದು ಅಮಸಾಣಿಯ ಮರ್ಜಿಯಲ್ಲಿಯೂ ಹೆತ್ತವರ ಆಶೀರ್ವಾದವಾಗಲಿ ದೇವಾನುಗ್ರಹವಾಗಲಿ ಲಭ್ಯವಾಗೋದಿಲ್ಲಾ.

"ತಾಳಿದವನು ಬಾಳ್ಯಾನು—ಆಳಾಗ ಬಲ್ಲವ ಅರಸಾಗ ಬಲ್ಲ."

ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?

(90ನೇ ಪಾನಿನಿಂದ ಮುಂದೆ.)

ಕೊಯಿಲರನ ಎರಡನೇ ಯಜಮಾನನೂ ಜರ್ಮನ್ ದೇಶದಲ್ಲಿ ಹುಟ್ಟಿದವನಾಗಿದ್ದನು. ಮನವು ಬಹಳವಾಗಿ ಕುಂದಿ ಹೋಗಿ, ಕೇವಲ ಖಿನ್ನನಾಗಿದ್ದ ಆಳಿನ ಮೇಲೆ ಅವನಿಗೆ ಬಹಳ ಕರುಣ ಹುಟ್ಟಿ ಹೋಯಿತು. ಅವನ ಶೋಕವು ಪರಿಹಾರವಾಗಿ, ಅವನು ಸಂತುಷ್ಟನಾಗುವ ಬಗೆ ಏನು? ಎಂಬುವ ವಿಷಯದಲ್ಲಿ ಆ ಯಜಮಾನನು ಸಲೆ ಚಿಂತಿಸಿ, ಯೋಚನೆ ಮಾಡುವವನಾದನು. ಮತ್ತು ಕೊಯಿಲರ್ ಕೆಲವು ಸಮಯ ಮನೆಯಲ್ಲಿದ್ದು, ಆದಿತ್ಯವಾರಗಳಲ್ಲಿ ಪ್ರಾರ್ಥನೆಗೆಂತ ದೇವಾಲಯಕ್ಕೆ ಒಮ್ಮೆಯಾದರೂ ಹೋಗದೆ ಇದ್ದದನ್ನು ನೋಡಿ, ಅವನು ಒಂದಾನೊಂದು ಆದಿತ್ಯವಾರ ಬೆಳಿಗ್ಯೆ ಅವನ ಕೋಣೆಗೆ ಹೋಗಿ, ಬಹು ದಯಾಯುಕ್ತವಾದ ಸ್ನೇಹಭಾವದಿಂದ ಅವನ ಹತ್ತರ ಮಾತಾಡಿ, ಹೇಳಿದ್ದೇನಂದರೆ: "ನಾನೂ ನನ್ನ ಮನೆಯೂ ಈಗ ಪ್ರಾರ್ಥನೆಗೆ ಹೋಗ ಬೇಕೆಂದಿದ್ದೇವೆ. ನೀನು ಸಹ ನಮ್ಮ ಕೂಡ ಬಂದರೆ, ನಮಗೆ ಬಹು ಸಂತೋಷವಾಗುತ್ತದೆ; ಹ್ಯಾಗೂ ಬಾ! ನಮ್ಮ ಬೋಧಕರು ಒಳ್ಳೇ ಪ್ರಸಂಗ ಮಾಡುವವರು. ಪ್ರಸಂಗವೂ ಪ್ರಾರ್ಥನೆ ಗಾಯನಗಳೂ ಯಾವತ್ತು ಜರ್ಮನ್ ಭಾಷೆಯಲ್ಲಿ ಆಗುತ್ತದೆ." ಈ ಮಾತಿಗೆ ಕೊಯಿಲರ್ ಬೆಬ್ಬರ ಬಿದ್ದು, ತಪ್ಪಿಸಿ ಕೊಳ್ಳುವರೆ ನೆವನು ಹೇಳಿದನು. ಯಜಮಾನನು ಅವನ ಬಡತನದ ದುಸ್ತನ್ನು ನೋಡಿ, ಅದೇ ಅವನು ಪ್ರಾರ್ಥನೆಗೆ ಹೋಗಲೊಲ್ಲದ ಕಾರಣವೆಂದು ನೆನಸಿ, ತನ್ನ ಕೋಣೆಗೆ ತಿರಿಗಿ ಬಂದು, ಹೆಂಡತಿಗೆ ಹೇಳಿದ್ದೇನಂದರೆ: "ನಮ್ಮಾಳು ಅಷ್ಟು ಚಿಂತಾಕ್ರಾಂತನಾಗಿರಲಿಕ್ಕೆ ಬಡತನವೇ ಕಾರಣವೆಂದು ನನಗೆ ತೋರುತ್ತದೆ. ಅವನ ಉಡಿಗೆ ತೊಡಿಗೆಗಳಿಂದಲೂ ಬಡತನವು ಕಾಣುವದರಿಂದ ನಮ್ಮ ಹೆಚ್ಚಿನ ಸಹವಾಸಕ್ಕೂ ನಮ್ಮ ಕೂಡ ಪ್ರಾರ್ಥನೆಗೆ ಹೋಗಲಿಕ್ಕೂ ಅವನಿಗೆ ನಾಚಿಕೆಯಾಗುತ್ತದೆ. ನನ್ನ ದುಸ್ತುಗಳಲ್ಲಿ ಅವನಿಗೆ ತಕ್ಕಂಥಾದು ಒಂದೆರಡು ಇಲ್ಲವೋ? ಬರುವ ಆದಿತ್ಯವಾರದಲ್ಲಿ ಅವನು ಹ್ಯಾಗೂ ನಮ್ಮ ಸಂಗಡ ಬರಲಿಕ್ಕೆ ಕೂಡುವ ಹಾಗೆ ತಕ್ಕ ಉಡುಪು ಅವನಿಗೆ ಶಿಕ್ಕುವಂತೆ ನೋಡು!" ಆದರೆ ಆಕೆ ಬರುವ ಆದಿತ್ಯವಾರವನ್ನು ಕಾದು ಕೊಳ್ಳದೆ ತತ್‌ಕ್ಷಣಕ್ಕೆ ಹೋಗಿ, ತನ್ನ ಗಂಡನ ಒಂದಂಗಿಯನ್ನೂ ಇಜಾರನ್ನೂ ಹೊಸ ಕಮಿಾಸು ಮೇಜೋಡುಗಳನ್ನೂ ಪೆಟ್ಟಿಗೆಯಿಂದ ತೆಗೆದು ತಂದು, ಗಂಡನಿಗೆ ತೋರಿಸಿ, ಅವನು "ಆಗುವದು" ಎಂಧೇಳಲು, ಅಷ್ಟು ಉಡುಪನ್ನೆಲ್ಲಾ ತಾನೇ ಬಹು ಸಂತೋಷದಲ್ಲಿ ತಕ್ಕೊಂಡು ಹೋಗಿ, ಕೊಯಿಲರನ ಕೈಯಲ್ಲಿ ಕೊಟ್ಟಳು. ಯಜಮಾನಿ ತಾನೇ ತನಗೆ ದುಸ್ತು ತಂದು ಕೊಟ್ಟದಕ್ಕೆ ಅವನು ಬೆರಗಾಗಿ, ಮೂರು ನಾಲ್ಕಾವರ್ತಿ "ಉಪಕಾರ! ದೊಡ್ಡ ಉಪಕಾರ!"

ಎಂಥೇಳಿದ್ದಾಗ್ಯೂ, ತನ್ನ ಮುಖದಲ್ಲಿ ಸಂತೋಷದ ಕಳೆ ಒಂದನ್ನಾದರೂ ಕಾಣಿಸಲಿಲ್ಲಾ, ಯಾತಕ್ಕಂದರೆ ಯಜಮಾನಿ ತನಗೆ ಅಂಥಾ ಉಡುಗೆರೆಯನ್ನು ಕೊಟ್ಟದು ತಾನು ಹ್ಯಾಗೂ ಅವರ ಕೂಡ ಪ್ರಾರ್ಥನೆಗೆ ಹೋಗ ಬೇಕೆಂಬುವ ಅಪ್ಪಣೆಯಂತಾಯಿತೆಂದು ನೆನಸಿ ಕೊಂಡು, ತಾನು ದೇವರ ಸನ್ನಿಧಿಯನ್ನು ಹುಡುಕುವವರ ಸಂಗತಿಗೆ ಕೇವಲ ಅಪಾತ್ರನೆಂತ ಮನಸ್ಸಿನಲ್ಲಿ ಹೆಚ್ಚು ಕರಕರೆ ಪಟ್ಟನು.

ಮರು ಆದಿತ್ಯವಾರ ಬೆಳಿಗ್ಯೆ ಕೊಯಿಲರ್ ತನ್ನನ್ನು ಪ್ರಾರ್ಥನೆಗೆ ಕರಕೊಂಡು ಹೋಗಲಿಕ್ಕೆ ಬಂದಾರು ಎಂದು ನೆನಸಿ ಕೊಂಡು, ತಪ್ಪಿಸಿ ಕೊಳ್ಳುವಂತೆ ತನ್ನ ಕೋಣೆಯಲ್ಲಿ ಕುಂಡ್ರದೆ, ಕುಲುಮೆ ಕೊಟ್ಟಿಗೆಗೆ ಹೋಗಿ, ಕುಲುಮೇ ಹತ್ತರ ಕೂತು ಕೊಂಡನು. ಯಜಮಾನನು ಅವನನ್ನು ಕರಕೊಳ್ಳಲಿಕ್ಕೆ ಅವನ ಕೋಣೆಗೆ ಬಂದಲ್ಲಿ ಅವನನ್ನು ಕಾಣದೆ, ಹುಡುಕುವವನಾದನು. ಕುಲುಮೆ ಕೊಟ್ಟಿಗೆಯಲ್ಲಿಯೂ ಹುಡುಕಲಿಕ್ಕೆ ಬಂದವನಿಗೆ ಶಿಕ್ಕಿದನು. ಅವನನ್ನು ಕಂಡು ಕೊಂಡು ಯಜಮಾನ ಬಹು ಪ್ರೀತಿಭಾವವಾಗಿ ಕರದು ಹೇಳಿದ್ದೇನಂದರೆ: "ತಮ್ಮನೇ! ನೀನು ಈಗ ನಮ್ಮ ಸಂಗಡ ಬರಲಿಕ್ಕೆ ತಯಾರೋ? ತಯಾರಾಗಲಿಲ್ಲವೆಂದು ತೋರುತ್ತದೆ. ಬೇಗನೇ ನಿನ್ನ ಮಡಿ ದುಸ್ತು ಹಾಕಿ ಕೊಂಡು ಬಾ! ನಾವೆಲ್ಲರು ಹೋಗಲಿಕ್ಕೆ ತಯಾರಾಗಿ ನಿನ್ನನ್ನು ಕಾದು ಕೊಂಡು ತಡದಿದ್ದೇವೆ." ಯಜಮಾನನ ಈ ಮಾತಿಗೆ ಕೊಯಿಲರ್ ಬೇರೆ ಉಪಾಯವಿಲ್ಲದೆ ಎದ್ದು, ತನ್ನ ಕೊಠಡಿಗೆ ಹೋಗಿ, ಉಟ್ಟು ತೊಟ್ಟು ಕೊಂಡು, ಅವರ ಸಂಗಡ ಪ್ರಾರ್ಥನೆಗೆ ಹೋಗಲಿಕ್ಕೆ ತಯಾರಾಗ ಬೇಕಾಯಿತು. ಅವನು ತನ್ನ ಕೊಠಡಿಯಿಂದ ಹೊರಟು ಬರುವಾಗಲೇ ಯಜಮಾನ ಯಜಮಾನಿಯರು ಸುತೆಸುತರ ಸಮೇತ ಬಾಗಲಲ್ಲಿ ಕಾದು ಕೊಳ್ಳುತ್ತಾ ನಿಂತಿದ್ದರು. ಅವನು ತಮ್ಮ ಬಳಿಗೆ ಬರುವದನ್ನು ಯಜಮಾನಿ ಕಂಡ ಕೂಡಲೇ ಆಕೆ ಅವನನ್ನು ಎದುರುಗೊಳ್ಳಲಿಕ್ಕೆ ಬಂದು, ಅವನ ಕೈಯಲ್ಲಿ ಒಂದು ಗೀತಪುಸ್ತಕವನ್ನು ಕೊಟ್ಟಳು. ಹುಡುಗರು ಸಹ ಬಹಳ ಸಂತೋಷದಲ್ಲಿ ಅವನನ್ನು ನೋಡಿ, ಅವನ ಬಳಿಯಲ್ಲಿ ನಲಿದಾಡ ತೊಡಗಿದರು. ಅವರೆಲ್ಲರ ಯಥಾರ್ಥವಾದ ಸ್ನೇಹಭಾವದ ಸಂತೋಷವನ್ನು ನೋಡಿ, ಅವನು ಭೂಮಿಯೊಳಗೆ ಅಡಗಿ ಕೊಳ್ಳಲೋ? ಎಂಬುವ ಹಾಗೆ ನಾಚಿಕೆಯಿಂದ ಕುಗ್ಗಿ ಹೋದನು. ಈ ಮನೆಯವರ ಮಧ್ಯದಲ್ಲಿ ನಾನು ಸುರರಲ್ಲಿ ಹೊಕ್ಕ ಅಸುರನಂತೆ; ಇವರು ಪುಣ್ಯಮೂರ್ತಿಗಳು: ನಾನಾದರೆ, ಬರೇ ಹೊಲ್ಲ ಹೊಲೆಯ; ನನ್ನ ಪೂರ್ವೋತ್ತರವೆಲ್ಲವೂ ಇವರಿಗೆ ತಿಳಿದಿದ್ದರೆ, ನನಗೆ "ತೊಲತೊಲಗು, ಮಾರೀ!" ಎಂಥೇಳ್ಯಾರು ಎಂಬದಾಗಿ ತನ್ನಲ್ಲಿ ಅಂದು ಕೊಳ್ಳುತ್ತಾ ಅವರ ಕೂಡ ದೇವಾಲಯದ ದಾರಿಯನ್ನು ಹಿಡಿದು ನಡೆದನು. ತುಸ ಹೊತ್ತು ನಡೆದು, ಅವರು ಆದರ ಬಾಗಲಿಗೆ ಮುಟ್ಟಲು, ಒಳಗೆ ನೆರವಿ ಕೊಂಡಿದ್ದ ಸಭೆ ಒಂದು ಗೀತವನ್ನು ಹಾಡ ತೊಡಗುವಂಥಾದಾಯಿತು. ಆ ಗೀತವು ಹ್ಯಾಗಂದರೆ:

೧. ಓ ದೇವರೇ! ಅಪಾರವೇ
ನಾ ಗೈದು ಬಂದ ಪಾಪ.
ಸೃಷ್ಟ್ಯೊಳಗೆ ಯಾರೆನಗೆ
ಸಹಾಯ ಮಾಡಲಾಪ?

೨. ಯಾರಿಂದಲು ಆದಾಗದು;
ನೀನೊಬ್ಬನೆನ್ನ ತಂದೆ!
ನೀನೆನ್ನನು, ಐ, ಮನ್ನಿಸು!
ನಿನ್ನಾಸರಕ್ಕೆ ಬಂದೆ.

೩. ಓ ತಂದೆಯೇ, ಸುದಂಡನೆ
ಬೇಕ್! ಆದರೇಸುವಲ್ಲಿ
ಸಂಧೈರ್ಯವ ಕೊಟ್ಟಾದರ
ಇಡಂಜುವಾತ್ಮದಲ್ಲಿ!

೪. ನಿನ್ನಲ್ಲಿಯೇ ವಿಮೋಚನೇ,
ಓ ಕರ್ತ, ದಯೆ ಮಾಡು!
ನಿನ್ನೈಕ್ಯದ ಸಂತೃಪ್ತಿಯ
ಕೊಟ್ಟಾತ್ಮವಂ ಕಾಪಾಡು!

೫. ಓ ರಕ್ಷಕ! ನನ್ನಾಸರ
ನಿನ್ನೈದು ಘಾಯದಲ್ಲಿ.
ಅಲ್ಲಿಹುದು ಸುಕ್ಷೇಮವು
ಸಮಸ್ತ ವ್ಯಥೆಯಲ್ಲಿ.

ಆ ಗಾಯನವು ಕೊಯಿಲರನ ಕಿವಿಗೆ ಬೀಳಲು ಬಹಳ ದಿವಸ ದೇವರ ಸ್ಮರಣೆ ಮಾಡದವನಲ್ಲಿ ತಾನು ಚಿಕ್ಕ ಪ್ರಾಯದ ಶಾಲೆಗೂ ದೇವಾಲಯಕ್ಕೂ ಹೋಗುತ್ತಿದ್ದ ದಿವಸಗಳ ನೆನಪು ಹುಟ್ಟಿ, ಅವನ ಮನಸ್ಸನ್ನು ಕರಗಿಸಿ ಬಿಟ್ಟಿತು.

ಆದರೆ ಗಾಯನಕ್ಕಿಂತ ಪ್ರಸಂಗವು ಅವನ ಮನಸ್ಸಿಗೆ ತಾಗುವಂಥಾದಾಯಿತು. ಕಡು ಪಾಪಿಗಳನ್ನಾದರೂ ಯೇಸು ಕನಿಕರಿಸಿ, ಸೇರಿಸಿ ಕೊಳ್ಳುತ್ತಾನೆ; ಕೇಳುವವರಲ್ಲಿ ತಾನು ಅಂಥ ಪಾಪಿ ಎಂದು ನೆನಸಿ ಕೊಳ್ಳುವವನೊಬ್ಬನು ಇದ್ದರೆ, ಯೇಸುವನ್ನು ಮರೆ ಹೊಕ್ಕು, ಕ್ಷಮಾದಯವನ್ನೂ ಸಮಾಧಾನವನ್ನೂ ಪಡಕೊಳ್ಳಲಿ! ಎಂಬದಾಗಿ ಪ್ರಸಂಗಿ ಮಾತಾಡಿದಲ್ಲಿ ಯೇಸುವು ಕ್ರೂಜೆಯಲ್ಲಿ ತೂಗಿದ್ದ ಕಳ್ಳನಿಗೆ ಕೊಟ್ಟ ಅಭಯದ ಮಾತನ್ನೂ ಉದಾಹರಿಸಿದನು. ಆ ಮಾತು ಏನಂದರೆ: "ನಿಶ್ಚಯವಾಗಿ ನಿನಗೆ ಹೇಳುತ್ತೇನೆ: ಈ ಹೊತ್ತು ನನ್ನ ಸಂಗಡ ಪರದೈಸಿನಲ್ಲಿ (ಸ್ವರ್ಗದಲ್ಲಿ*) ಇರುವಿ." ದಿವ್ಯ ದಯಾರಸಭರಿತವಾದ ಈ ಅಭಯದ ವಾಗ್ದಾನವು ಕೊಯಿಲರನ ಮನಸ್ಸನ್ನು ಪೂರ್ಣ ಹಿಡಿಯಿತು. ಒಳ್ಳೇ ಕಿವಿ ಕೊಟ್ಟು, ಕೇಳುವವನಾದನು. ಉರಿಯಾಗಿ, ಕಡುನೋವು ಕೊಡುವ ಘಾಯಕ್ಕೆ ತೈಲವು ಹ್ಯಾಗೋ ಹಾಗೆಯೇ ನಾನಾ ತಾಪಗಳಿಂದ ಪೀಡೆ ಹತ್ತಿದ್ದ ಅವನ ಹೃದಯಕ್ಕೆ ಆ ಪ್ರಸಂಗವು ಶಮನ ಕೊಡುವಂಥಾದಾಯಿತು. ಸೂರ್ಯನ ರಶ್ಮಿಗಳಲ್ಲಿ ಹಿಮವು ಕರಗಿ, ಹಿಮಾಚಲಗಳಿಂದ ನೀರು ಹರಿದು ಬರುವಂತೆ, ಆ ಪ್ರಸಂಗದಲ್ಲಿ ಅವನಿಗೆ ಉದಯವಾದ ದೇವತಾಕರುಣೆಯ ವ್ಯಾಪ್ತಿಗೆ ಅವನ ಮನಸ್ಸು ಕರಗಿ, ಕಣ್ಣಿನಿಂದ ನೀರು ಸುರಿಯುವದಾಯಿತು. ಸ್ವಂತ ಊರಿನಲ್ಲಿ ಎಷ್ಟೋ ಪ್ರಸಂಗಗಳನ್ನು ಕೇಳಿ ಇದ್ದನು; ಆದರೆ ಕೇಳಿದ್ದು ತಾಗಲಿಲ್ಲಾ, ನಾಟಲಿಲ್ಲಾ; ಪರದೇಶದಲ್ಲಿ ಕೇಳಿದ್ದು ಒಂದು ಕಿವಿಯಲ್ಲಿ ಸೇರಿ ಎರಡನೇದರಿಂದ ಹೊರಡದೆ, ಹೃದಯಕ್ಕೆ ಸೇರಿ ಹೋದ್ದರಿಂದ, ಹೃದಯವನ್ನು ಮುಸುಕಿದ್ದ ಮಲರಾಶಿ ತೊಳಕೊಂಡು, ತಾಗಿದ ಶಾಪದ ಬಾಧೆ ಸಹ ತಪ್ಪಿದಂತಾಯಿತು. ತನಗಾದರೂ ಸದ್ಗತಿಗೆ ಇನ್ನು ಮಾರ್ಗವು ಉಂಟೆಂತ ಕೇಳಿ, ನಂಬಿ ಕೊಂಡು, ಮುಳುಗುವವನು ಕೈಗೆ ಶಿಕ್ಕಿದ ಹಲಿಗೆಯನ್ನು ಹಿಡಿಯುವಂತೆ, ಅವನು ಆ ಮಾರ್ಗವನ್ನು ಹಿಡುಕೊಂಡನು. ಇತರ ಜನರೆಲ್ಲರನ್ನು ತೀರಾ ಮರತು, ಪ್ರಸಂಗದಲ್ಲಿ ಮುಳುಗಿ ಹೋದನು. ಪ್ರಸಂಗವೂ ಪ್ರಾರ್ಥನೆಯೂ ಆದ ಮೇಲೆ ಯಜಮಾನರ ಕೂಡ ತಿರಿಗಿ ಮನೆಗೆ ಬಂದನು. ಮನೆಯಲ್ಲಿ ತನ್ನನ್ನು ಕರಕೊಂಡು ಹೋದ್ದು ದೊಡ್ಡ ಉಪಕಾರವಾಯಿತೆಂದು ಸ್ವಲ್ಪ ಮಾತಿನಲ್ಲಿ ಅರಿಕೆ ಮಾಡಿದನು. ಅವನಿಗೆ ಒಳ್ಳೇ ಲಾಭವಾಯಿತೆಂದು ತಿಳಿದು ಕೊಂಡು ಯಜಮಾನ ಯಜಮಾನಿಯರು ಅವನಿಗೆ ಏನಾದರೂ ಪ್ರಶ್ನೆ ಹಾಕದೆ, ಹೆಚ್ಚು ಮಾತಾಡದೆ, ತಮ್ಮ ಮನಸ್ಸಿನಲ್ಲಿ ಬಹಳ ಸಂತೋಷ ಪಟ್ಟರು. ತನ್ನ ಕೊಠಡಿಗೆ ಬಂದವನು ಅಲ್ಲಿಯೂ ಬಹಳ ಕಣ್ಣೀರಿಟ್ಟನು. ಕಣ್ಣೀರು ಸುರಿದು ಬಂದಷ್ಟಕ್ಕೆ ಅವನ ಎದೆಗೆ ಹಿಡಿದಿದ್ದ ಇಕ್ಕಟ್ಟು ಕಡಿಮೆಯಾಗುತ್ತಾ ಬಂತು. ಯಜಮಾನರ ಕೋಣೆಯಲ್ಲಿ ದಿನಾಲು ಪ್ರಾತಃಕಾಲಕ್ಕೂ ಸಾಯಂಕಾಲಕ್ಕೂ ಪ್ರಾರ್ಥನೆ ಆಗುತ್ತಿತ್ತು. ಮನೆಯವರೆಲ್ಲರು ಅದಕ್ಕೆ ಕೂಡುವ ಮರ್ಯಾದೆಯಿತ್ತು. ಅವನನ್ನೂ ಅದಕ್ಕೆ ಮೊದಲು ಕರೆದಷ್ಟು ಸರ್ತಿ ಏನಾದರೂ ನೆವನು ಹೇಳಿ ಬಾರದೆ ಹೋಗುತ್ತಿದ್ದನು; ಆದರೆ ಆ ಆದಿತ್ಯವಾರದಂದಿನಿಂದ ಅವನು ಅದಕ್ಕೆ ತಪ್ಪದೆ ಬರುವವನಾದನು. ದಿನದಿನಕ್ಕೆ ಓದೋಣಾಗುತ್ತಿದ್ದ ಸತ್ಯವೇದದ ವಾಕ್ಯದಿಂದ ಅವನು ತನ್ನನ್ನು ಆದರಿಸಿ ಕೊಳ್ಳುತ್ತಾ ಕರುಣಾಳು ದೇವರು ತನಗೂ ಕರುಣೆ ತೋರಿಸಿ, ತನ್ನನ್ನು ತಳ್ಳಿ ಬಿಡದೆ ಸೇರಿಸಿ ಕೊಳ್ಳುವನೆಂತ ಹೆಚ್ಚೆಚ್ಚು ಭರವಸವಾಗಿ ನಂಬಿ ಕೊಳ್ಳುವವನಾದನು. (ಮುಂದೆ ಸಾಗಿಸಲ್ಪಡುವದು.)

---

* ಸ್ವರ್ಗವಂದರೆ: ಸುವರ್ಗ, ಅಂದರೆ: ಒಳ್ಳೇ ವರ್ಗ. ಸ್ವರ್ಗ ಪಡಕೊಂಡವರು ಒಳ್ಳೇ ವರ್ಗದಾರರೇ.

ಉತ್ತರಗಳು.

(98ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.)

51. ಚೆರೂಯಳು. ೧ ದಿನಚ. ೨, ೧೬. ಅವಳು ದಾವೀದನ ಅಕ್ಕ, ಯೊವಾಬ, ಅಬಿಷಯ್ಯ, ಅಸಹೇಲ ಇವರ ತಾಯಿ.

52. ಯೂದನು. ಪರದೇಶಿಗಳನ್ನು ಹೂಣಿಡುವದಕ್ಕೆ ಹೊಲವನ್ನು ಕೊಂಡು ಕೊಳ್ಳಲಿಕ್ಕೆ ರೂಪಾಯಿ ಬಿಟ್ಟು ಹೋದನು. ಮತ್ತಾ. ೨೭, ೩—೧೦. ಅವನು ಮಹಾ ಲೋಭಿಯಾಗಿದ್ದದಕ್ಕೆ ಯೋಹಾ. ೧೨, ೪—೬ರಲ್ಲಿ ಸಾಕ್ಷಿ.

53. ಪ್ರಧಾನಯಾಜಕನಾದ ಯೆಹೋಶುವನ ತಲೇ ಮೇಲೆ. ಜಕರೀ. ೩, ೫.

54. ಆರಸನಾದ ಯೊಷೀಯನು. ೨ ಅರಸು. ೨೨, ೮—೧೦.

ವಿವಿಧ ವರ್ತಮಾನಗಳು.

ಸದ್ಯಾ ಹಿಂದುಸ್ಥಾನದ ಬೇರೆ ಬೇರೆ ಪ್ರದೇಶಗಳಲ್ಲಿ ಬರಗಾಲ ಬಿದ್ದು ಸರಕಾರಕ್ಕೆ ಬಹಳ ವೆಚ್ಚವಾಯಿತು. ೧೮೬೬ನೇ ಇಸವಿಯಲ್ಲಿ ಒರಿಸಾ ಪ್ರಾಂತದಲ್ಲಿ ಉಂಟಾದ ದುಷ್ಕಾಲದಿಂದ ಸರಕಾರಕ್ಕೆ ೧೭,೦೦೦,೦೦೦ ರೂಪಾಯಿ ಖರ್ಚಾಯಿತು. ಅನಂತರ ೧೮೭೪ನೇ ಇಸವಿಯಲ್ಲಿ ಬಂಗಾಳದಲ್ಲಿ ಬಿದ್ದ ಬರಗಾಲದಿಂದ ೬೭,೫೦೦,೦೦೦ ರೂಪಾಯಿ ಖರ್ಚಾಯಿತು. ಗತ ವರ್ಷದ ದುಷ್ಕಾಲದಲ್ಲಿ ೫೨,೫೦೦,೦೦೦ ರೂಪಾಯಿ ಖರ್ಚಾಗುವದೆಂತ ಅಂದಾಜು ಮಾಡಿದ್ದು ತಪ್ಪಾಗಿ, ವಾಸ್ತವ್ಯಖರ್ಚು ೯೨,೫೦೦,೦೦೦ ರೂಪಾಯಿ ಆಯಿತು. ಅದು ಕಾರಣ ಸರಕಾರಕ್ಕೆ ೧೬೦,೦೦೦,೦೦೦ ರೂಪಾಯಿ ಹೆಚ್ಚಿಗೆ ಸಾಲವಾಗಿ ಅದರ ಬಡ್ಡಿ ೬೪,೦೦,೦೦೦ ರೂಪಾಯಿ ಆಗಿದೆ. ಹೀಗಿರುವದರಿಂದ ಸರಕಾರದವರು ವರುಷಂಪ್ರತಿ ೧೫,೦೦೦,೦೦೦ ರೂಪಾಯಿ ದುಷ್ಕಾಲ ಬೀಳುವ ಶೀಮೆಗಳಲ್ಲಿ ಖರ್ಚು ಮಾಡುವ ಬಗ್ಯೆ ವಿಂಗಡವಾಗಿ ಇಡುವದಕ್ಕೆ ಆಲೋಚಿಸಿದ್ಧಾರೆ. ಹೀಗೆ ಮಾಡುವದರಿಂದ ದುಷ್ಕಾಲದ ಖರ್ಚು ಸಮಾನವಾಗಿ ಪಾಲಾಗಿ, ಒಮ್ಮೆಯೇ ಭಾರವಾಗಲಿಕ್ಕಿಲ್ಲ. ದುಷ್ಕಾಲದ ಖರ್ಚಿನ ಉದ್ದಿಶ್ಯದ ಮೇಲಿನ ಹಣದ ಹೊರ್ತು ಅಕಸ್ಮಾತ್ತಾಗಿ ಘಟಿಸುವ ಯಾವದೊಂದು ಅಡಚಣೆಯಲ್ಲಿ ಖರ್ಚಿನ ಬಗ್ಯೆ ೫,೦೦೦,೦೦೦ ರೂಪಾಯಿ ಸಹ ಎತ್ತ ಬೇಕೆಂತ ಆಲೋಚನೆಯದೆ.

ಹಿಂದುಸ್ಥಾನದಲ್ಲಿ ಪದೇ ಪದೇ ದುಷ್ಕಾಲ ಬೀಳುವದಕ್ಕೆ ಕಾರಣವೇನು? ಮತ್ತು ದುಷ್ಕಾಲ ಬೀಳದ ಹಾಗೆ ಯಾವ ಉಪಾಯ ಮಾಡ ಬೇಕು? ಎಂಬ ಸಂಗತಿಯ ವಿಚಾರ ಮಾಡುವದಕ್ಕೆ ಪಂಚಾಯತರನ್ನು ನೇಮಿಸ ಬೇಕು ಎಂಬದಾಗಿ ಸ್ಟೇಟ ಸೆಕ್ರೆಟರಿ ಧೊರೆಗಳಿಂದ ಅಪ್ಪಣೆ ಬಂದದೆ. ಹಿಂದುಸ್ಥಾನದ ಸರಕಾರದವರು ಅದಕ್ಕೆ ಬೇಗನೇ ಲಕ್ಷ್ಯವಿಡುವರು.

ಹಿಂದುಸ್ಥಾನದಲ್ಲಿ ದುಷ್ಕಾಲಗ್ರಸ್ತರಾದವರಿಗೋಸ್ಕರ ನ್ಯೂಜೀಲಂಡ್ ದ್ವೀಪದ ಮೂಲನಿವಾಸಿಗಳು ಹಿಂದೂ ಜನರ ಗುರ್ತು ಪರಿಚಯ್ರ್ವೇನೂ ಇಲ್ಲದಿದ್ದಂಥವರು ಎರಡು ಸಾವಿರ ರೂಪಾಯಿ ಕೂಡಿಸಿ ಕಳುಹಿಸಿ ಕೊಟ್ಟರು. ಆ ದ್ವೀಪದವರು ಮೊದಲು ಮನುಷ್ಯರನ್ನಾದರೂ ತಿಂದು ಬಿಡುವ ಕಿರಾತರಾಗಿದ್ದರು. ಇತ್ತಲಾಗಿನ ಕಾಲದಲ್ಲಿ ಅವರು ಕ್ರೈಸ್ತರಾದವರು. ಮಿಶ್ಯನಿನ ಮುಖಾಂತರ ಅಂಥಾ ಬೇರ್ಪಾಟಕ್ಕೆ ಕಾರಣವಾದ ಕ್ರೈಸ್ತಧರ್ಮವು ಹಿಂದುಸ್ಥಾನದವರ ನೀತಿಸ್ಥಿತಿಗಳನ್ನು ಗುಣೀಕರಿಸ ಬಾರದೋ?

ದುಷ್ಕಾಲದಲ್ಲಿ ಇಂಗ್ಲಾಂಡಿನಿಂದಲೂ ಔಸ್ತ್ರಾಲ್ಯದಿಂದಲೂ ಹಿಂದುಸ್ಥಾನದ ಬೇರೆ ಕಡೆಗಳಿಂದ

ಲೂ ಪರೋಪಕಾರಿಗಳಾದ ಗೃಹಸ್ಥರು ಉದಾರವಾಗಿ ಒತ್ತಾಸೆ ಮಾಡಿದ್ದಕ್ಕೆ ಅವರ ಉಪಕಾರಸ್ಮರಣೆ ಮಾಡುತ್ತೇವೆಂತ ತಿಳಿಸುವ ಬಗ್ಯೆ ಮದ್ರಾಸಿನಲ್ಲಿ ದೊಡ್ಡದೊಂದು ಮಂಡಳಿ ನೆರೆದು ಬರುವಂಥಾದಾಯಿತು.

ಉತ್ತರ ಹಿಂದುಸ್ಥಾನದಲ್ಲಿ ಬರೆಲ್ಲಿ ಎಂಬಲ್ಲಿ ಮೆಥೊಡಿಸ್ಟ ಎಪಿಸ್ಕೊಪಲ್ ಶುಭವಾರ್ತಿಕರ ಸಭೆ ಕೂಡಿ ಬಂದಾಗ್ಯೆ ಓದಲಾದ ಗತ ವರ್ಷದ ರಿಪೋರ್ಟಿನಲ್ಲಿ ತಿಳಿದು ಬರುವದೇನಂದರೆ—ಕಳೆದ ವರ್ಷ ೩೦೬ ಪ್ರಾಯಪ್ರಬುದ್ಧರಿಗೂ ೩೬೫ ಬಾಲಕರಿಗೂ ಸ್ನಾನವಾಯಿತು. ಇಷ್ಟು ಮಂದಿಯಲ್ಲಿ ೨೭೭ ಹಿಂದುಗಳು ೧೮ ಮುಸಲ್ಮಾನರು ಉಳಿಕಿಯವರು ಕ್ರೈಸ್ತ ತಾಯಿ ತಂದೆಗಳ ಮಕ್ಕಳು. ಅಯೋಧ್ಯೆ, ರೋಹಿಲ್‌ಖಂಡ, ಕಮವಾನ, ಗಾರವಾಡ ಈ ಪ್ರಾಂತಗಳಲ್ಲಿ ಮೆಥೊಡಿಸ್ಟ ಮಿಶ್ಯನ ಠಾಣ್ಯಾಗಳಲ್ಲಿ ಶುಭವರ್ತಮಾನ ಪ್ರಸಾರಣೆಯ ಪ್ರವೃತ್ತಿಯು ಬಹಳ ವೇಗದಿಂದ ನಡಿಯುತ್ತದೆ. ಇನ್ನೂ ಕೆಲ ಠಾಣ್ಯಾಗಳಲ್ಲಿ ಕ್ರೈಸ್ತರಾಗಲಿಕ್ಕೆ ಬಂದವರ ಲೆಖ್ಖ ಬಹಳ ಹೆಚ್ಚಾಗುವದಾದ್ದರಿಂದ ಅಯೋಗ್ಯವಾದ ಹೇತುಗಳಿಂದ ಯಾರೂ ಬರಬಾರದು ಎಂಬದಾಗಿ ಅನೇಕರನ್ನು ಬಾಕಿ ಇಡಬೇಕಾಯಿತು. ಇಷ್ಟು ಬಲವಾಗಿ ಆಗುವ ದೇವರ ರಾಜ್ಯದ ವರ್ಧನೆಯೂ ಸುವಾರ್ತೆಯ ಅಂಗೀಕಾರವೂ ಕೇಳಿ ಸಂತೋಷವಾಗುತ್ತದೆ. ಇದೇ ರೀತಿಯಿಂದ ನಮ್ಮ ಜಿಲ್ಲೆಯಲ್ಲಿಯೂ ಆಗ ಬೇಕೆಂಬದು ನಮ್ಮ ಪ್ರಾರ್ಥನೆ. ಮೇಲೆ ಹೇಳಿದ ಮಿಶ್ಯನಿನ ಮೂಲಕವಾಗಿ ಕ್ರೈಸ್ತರಾದವರ ಸಭೆ ಮತ್ತೊಬ್ಬರ ಮೇಲೆ ಭಾರ ಹಾಕದೆ, ತಮ್ಮ ಕಾಲಿನಲ್ಲೇ ನಿಂತು ಕೊಳ್ಳುತ್ತಾರೆಂತ ಕೇಳುವಾಗಲೂ ಸಂತೋಷವಾಗುತ್ತದೆ.

ದಕ್ಷಿಣ ಪ್ರದೇಶಗಳಲ್ಲಿ ಬರೆಗಾಲ ಬಿದ್ದ ಕಡೆಗಳಲ್ಲಿ ಜನರು ಈಗ ಬಹುಶಾ ಧರ್ಮವಿಚಾರಕ್ಕೆ ಮನವೊಡ್ಡುವವರಾಗಿದ್ದಾರೆ. "ನಮ್ಮ ದೇವಸ್ಥಾನಗಳ ಭಂಡಾರದಲ್ಲಿ ಬೆಳ್ಳಿ ಭಂಗಾರ ರತ್ನಾದಿಗಳು ಯಥೇಷ್ಟವಿದ್ದಾಗ್ಯೂ, ನಾವು ಹಶಿವೆಯಿಂದ ಸಾಯುವಾಗ್ಯೆ ಬ್ರಾಹ್ಮಣ ಭಟ್ಟರು ನಮ್ಮ ಉಪಶಮನಕ್ಕೆ ರುವ್ವಿ ಒಂದೂ ಕೊಡಲಿಲ್ಲಾ. ಕ್ರೈಸ್ತ ಪಾದರಿಗಳು ಬಹಳ ಶ್ರಮಗೊಂಡು ನಮಗೆ ಅನ್ನಾಹಾರ ನಡಿಸಿದರು" ಎಂದು ಜನರು ಹೇಳುತ್ತಾರೆ. ಮಧುರೆ ಜಿಲ್ಲೆಯಲ್ಲಿ ಬಾತಲಕುಂಡು ತಾಲೂಕಿನಲ್ಲಿ ಪಲ್ಲಪಟ್ಟಿ ಎಂಬ ಊರಿನಲ್ಲಿ ಒಬ್ಬ ಶೂದ್ರನು ದೇವಾಲಯಕ್ಕೆ ಬಂದು, ಪ್ರಸಂಗ ಕೇಳಿ, ಆ ಪ್ರಸಂಗ ಹೆಚ್ಚಾಗಿ ಹೃದಯಕ್ಕೆ ತಾಗಿದ್ದರಿಂದ ಕ್ರೈಸ್ತನಾದನು. ಅವನ ಉದಾಹರಣೆಯಿಂದ ಆ ಊರಲ್ಲಿ ೨೭ ಕುಟುಂಬಗಳೂ, ಮತ್ತು ೨-೩ ತಿಂಗಳ ಹಿಂದೆ ಇನ್ನೂ ೧೭ ಮಂದಿಯೂ ಸಭೆಗೆ ಶೇರಿದರು. ಇನ್ನೂ ಅನೇಕರು ಸ್ನಾನ ಹೊಂದಲಿಕ್ಕಿರುತ್ತಾರೆ. ಸೋಮನಪಟ್ಟಿ ಎಂಬ ಇನ್ನೊಂದು ಸಣ್ಣ ಊರಿನಲ್ಲಿ ಸ್ವಲ್ಪ ಕಡಿಮೆ ಎಲ್ಲರೂ ಕ್ರೈಸ್ತರಾದರು. ಇನ್ನೂ ಅನೇಕ ಕಡೆಗಳಲ್ಲಿ ಮಿಶ್ಯನ ಕಾರ್ಯವು ವಿಶೇಷವಾಗಿ ಸಫಲವಾಗುತ್ತಾ ಅದೆ.

ಅನೇಕ ಊರುಗಳಲ್ಲಿ ಕ್ರೈಸ್ತರಲ್ಲದ ಅಜ್ಞಾನಿಗಳಾದ ಹುಡುಗರ ಉದ್ದಿಶ್ಯ ಆದಿತ್ಯವಾರದ ಶಾಲೆಗಳನ್ನಿಟ್ಟು, ದೇವರ ವಾಕ್ಯದ ಉಪದೇಶ ಮಾಡುತ್ತಾರೆ. ಲಖನೌ ಪಟ್ಣದಲ್ಲಿರುವ ಇಂಥಾದೊಂದು ಶಾಲೆಯಲ್ಲಿ ಮುಸಲ್ಮಾನ ಹುಡುಗ ಒಬ್ಬ ಸುಮಾರು ಹನ್ನೆರಡು ವರ್ಷದವನು ಬರುತ್ತಾ ಇದ್ದನು. ಕೆಲವು ಕಾಲಕ್ಕೆ ಹಿಂದೆ ಆ ಹುಡುಗನಿಗೆ ಶಿಡುಬು ಆಗಿ, ಪ್ರಾಣಾಂತಿಕವಾಗುವ ವರೆಗೂ ಅವನು ಶಾಲೆಯಲ್ಲಿ ಕಲಿತ ಕ್ರೈಸ್ತಗೀತಗಳನ್ನು ಹಾಡುತ್ತಾ ಸಂತುಷ್ಟನಾಗಿದ್ದು, ಶಾಲೆಯಲ್ಲಿದ್ದ ತನ್ನ ಪರಿಚಿತರನ್ನು ಕೇಳುತ್ತಾ ಸಮಾಧಾನದಲ್ಲಿ ಕಣ್ಣು ಮುಚ್ಚಿದನು. ಹೀಗೆ ಶಾಲೆಯಲ್ಲಿ ಅವನು ಕಲಿತ ಸದ್ಬೋಧೆ ಅವನಿಗೆ ಫಲಿತವಾಗ ಬೇಕೆಂಬದಾಗಿ ಉಪಾಧ್ಯಾಯರು ಅವನಿಗಾಗಿ ಮಾಡಿದ ಪ್ರಾರ್ಥನೆ ದೇವರು ಅನುಕೂಲಿಸುವವನಾದನು.

ಬಂಗಾಳ ಸಂಸ್ಥಾನದಲ್ಲಿ ಅಸ್ಸಮ ದೇಶದ ಪ್ರಾಂತದಲ್ಲಿ ನಾಗರೆಂಬ ಒಂದು ಜಾತಿಯವರು ಮುಂಚೆ ಇಂಗ್ಲಿಷರ ದಂಡಿನಲ್ಲಿದ್ದ ಒಬ್ಬ ಶಿಪಾಯಿಯನ್ನು ತಮಗೆ ನಾಯಕನಾಗಿ ಮಾಡಿ ಕೊಂ

ಡು, ಕೋವಿ ರಸ್ತು ಮುಂತಾಗಿ ಯುದ್ಧದ ಸಾಮಾನು ಕೂಡಿಸಿ ಕೊಂಡು, ನಮ್ಮ ಸರಕಾರಕ್ಕೆ ಬಹಳ ತಂಟೆ ಕೊಡುತ್ತಾ ಇದ್ದದರಿಂದ ಅಲ್ಲಿಗೆ ಸೈನ್ಯ ಕಳುಹಿಸಿ, ಆ ಜಾತಿಯನ್ನು ಪುನಹಾ ಅಣಗಿಸಲಿಕ್ಕೆ ಪ್ರಯತ್ನ ಮಾಡಿದರೂ, ಆ ದಂಗೆ ಮುರಿಯೋಣವಾಗಲಿಲ್ಲಾ.

ದುರ್ಭಿಕ್ಷೆ ಎಂಬ ರಾಕ್ಷಸನು ಹಿಂದುಸ್ಥಾನವನ್ನು ಪೂರ್ಣ ಬಿಟ್ಟು ಹೋಗ ಮನಸ್ಸಿಲ್ಲದೆ, ಇನ್ನೂ ಹಾವಳಿ ಮಾಡುತ್ತಾ ಇರುತ್ತಾನೆಂತ ತೋರುತ್ತದೆ. ಕಟ್ಟವಾಡದಲ್ಲಿಯೂ ಹಾಂಗೂ ಕಾಶ್ಮೀರದಲ್ಲಿಯೂ ದುಷ್ಕಾಲ ಸಂಭವಿಸುವ ಹಾಗೆ ಅದೆ.

ಬಾಬು ಪ್ರತಾಪಚಂದ್ರಮುಜುಮದಾರ ಎಂಬ ಬ್ರಹ್ಮಸಮಾಜದ ಮಿಶ್ಯನೆರಿ ಮುಂಬಾಯಿಯಲ್ಲಿ ವ್ಯಾಖ್ಯಾನ ಮಾಡುವಾಗ್ಯೆ, ಹಿಂದು ಜನರಲ್ಲಿ ಬೇರೂರಿ ಇರುವ ಕೆಲ ದುರ್ಗುಣಗಳನ್ನು ತಿದ್ದುವದಕ್ಕೆ ದೇಶದವರ ಹಿತಚಿಂತಕರಾಗಿರುವವರು ಪ್ರಯತ್ನ ಮಾಡ ಬೇಕೆಂತ ಹೇಳಿದರು. ಈ ದುರ್ಗುಣಗಳಲ್ಲಿ ಒಂದು ಸಚ್ಛೀಲ್ಯಭಂಗ, ಎರಡನೆದು ಅಸತ್ಯ ಮಾತಾಡುವದು; ಮೂರನೆದು ಸ್ವಾರ್ಥ ಬುದ್ಧಿ; ನಾಲ್ಕನೆದು ಯೌವನಪ್ರಾಯದವರು ದೇವಭಕ್ತಿಗೆ ಮನಸ್ಸಿಡದೆ ಉದಾಸರಾಗಿರುವದು. ಈ ದುರ್ಗುಣಗಳು ಹಿಂದು ಜನರೊಳಗೆ ಬೇರೂರಿ ಹೋಗಿರುವದು ವಾಸ್ತವ್ಯವೇ. ಇವಕ್ಕೆ ಮಾಡಿದ ಉಪಕಾರ ಮರಿಯೋಣವೆಂಬ ಇನ್ನೊಂದು ದುರ್ಗುಣ ಕೂಡಿಸಿದರೆ, ಸುಮಾರು ಎಲ್ಲಾ ದುರ್ಗುಣಗಳನ್ನು ಹೇಳಿದ ಹಾಗಾಯಿತು. ಮನುಷ್ಯನು ದುರ್ಗುಣಗಳನ್ನು ಪರಿಹರಿಸಿ ಕೊಂಡು ಸುಗುಣಿಯಾಗೋಣ ದೇವತಾಸಹಾಯದಿಂದಲ್ಲದೆ ಮನುಷ್ಯಯತ್ನದಿಂದ ಸರ್ವಥಾ ಆಗದಿರಲಾಗಿ ಹಿಂದು ಜನರು ಸುಗುಣಿಗಳೂ ಸನ್ಮಾರ್ಗಶೀಲರೂ ಆಗ ಬೇಕಾದರೆ, ಏಕ ರಕ್ಷಕನಾಗಿರುವ ಯೇಸು ಕ್ರಿಸ್ತನ ಶರಣು ಹೊಗುವದರಿಂದಲೇ ಆಗ ಬೇಕು; ಅನ್ಯಥಾ ಅವರಿಗೆ ಪರಿಣಾಮವಿಲ್ಲಾ.

ಉತ್ತರ ಹಿಂದುಸ್ಥಾನದಲ್ಲಿ ಸನ್ನಿರೋಗಕ್ಕೆ ನೂತನವಾದೊಂದು ಚಿಕಿತ್ಸೆ ಮಾಡುತ್ತಾರೆ. ಅದೇನಂದರೆ—ಒಬ್ಬನಿಗೆ ಸನ್ನಿ ಪ್ರಾರಂಭವಾದಾಗಲೇ ಕೆಂಪಗೆ ಕಾದ ಕಬ್ಬಿಣದ ಸರಳಿನಿಂದ ಹೊಟ್ಟೆಗೆ ಬರೆ ಹಾಕುವದು. ಸುಲಭವಾಗಿರುವ ಈ ಚಿಕಿತ್ಸೆಯಿಂದ ಅನೇಕರು ಗುಣವಾದವರಿದ್ದಾರೆ.

ಮುಂಬಾಯಿಯಲ್ಲಿ ಸ್ವೀಟಿಂಗ್ ಎಂಬ ಒಬ್ಬ ಯುರೋಪಿಯನ್ ಗೃಹಸ್ಥನು ಟ್ರಾಮ್‌ವೇ ಭಂಡಿಯ ಬಾಡಿಗೆಯ ವಿಷಯದಲ್ಲಿ ವಿರುದ್ಧ ಮಾತಾಡಿ, ಅರ್ಧ ಆಣೆ ಕೊಡಲಿಲ್ಲಾ. ಅದಕ್ಕೆ ಆ ಭಂಡಿಯ ಒಡೆಯರು ಅವನ ಮೇಲೆ ವ್ಯಾಜ್ಯ ಮಾಡಲಾಗಿ, ಆ ಗೃಹಸ್ಥನು ಬಾರಿಸ್ಟರನ್ನು ಇಟ್ಟು, ಅವನಿಗೆ ೪೫ ರೂಪಾಯಿ ರುಸುಮು ಕೊಡ ಬೇಕಾದ್ದಲ್ಲದೆ, ಕೋರ್ಟಿನವರ ತೀರ್ಪಿನ ಮೇರೆಗೆ ಆ ಅರ್ಧ ಆಣೆ ಸಹ ಕೊಡ ಬೇಕಾಯಿತು.

ದಖ್ಖಾನದಲ್ಲಿ ಇಂದೋರ ಎಂಬ ಊರಿಗೆ ಒಬ್ಬ ಅರಬಿ ಹೆಂಗಸು ಬಂದಿದ್ದಾಳೆ. ಅವಳು ಗಂಡಸರ ಹಾಗೆ ದುಸ್ತು ಹಾಕಿ ಕೊಂಡು, ಖಡ್ಗ, ಪಿಸ್ತೂಲು, ಡಾಲು ಮುಂತಾದ ಆಯುಧ ಧರಿಸಿದವಳಾಗಿ, ಅವುಗಳ ಅಭ್ಯಾಸದಲ್ಲಿ ಬಹು ಸುಟಿಯಾಗಿದ್ದು, ಕುದುರೆಸವಾರಿಯಲ್ಲಿ ಮಹಾ ಶೂರೆಯಾಗಿದ್ದಾಳೆ. ಅವಳಿಗೆ ಅರಬಿ ಫಾರಸಿ ಮುಂತಾಗಿ ಎರಡು ಮೂರು ಭಾಷೆ ಬರುತ್ತವೆ. ಅವಳ ಸಂಗಡ ಹೆಚ್ಚು ಕಡಿಮೆ ನೂರು ಜನರಿದ್ದಾರೆ.

ಕೊನ್‌ಸ್ತಂತಿನೊಪೊಲಿಯ ಕೆಲ ಮುಸಲ್ಮಾನ ವಿದ್ವಾಂಸರು ಹೇಳುತ್ತಾರಂತೆ—"ತೀರಿ ಹೋದ ಸುಲ್ತಾನ ಅಬ್ದುಲ್ ಅಜಿಜನಿಗೆ ತಾವು ತಕ್ಕ ಹಾಗೆ ನಡಿಸದೆ, ತಳ್ಳಿ ಬಿಟ್ಟದಕ್ಕೆ ಈಗಿನ ಯುದ್ಧವು ದೇವರು ತಮ್ಮ ಮೇಲೆ ಕಳುಹಿಸಿದ ಶಿಕ್ಷೆ." ಯುದ್ಧವು ದೇವರಿಂದ ಬಂದ ಶಿಕ್ಷೆ ಎಂಬದು ನಿಸ್ಸಂಶಯವೇ; ಅದರ ಕಾರಣವು ಬುದ್ಧಿಬಲ ಕಮ್ಮಿಯಾದ ವಿಷಯಲಂಪಟ ಅರಸನನ್ನು ತಳ್ಳಿ ಹಾಕಿದ್ದು ಅಲ್ಲಾ, ಬೇರೇನಾದರೂ ಆಗಿರ ಬೇಕು.

ಪೂರ್ವಿಕ ರೋಮನ್ ಸಾಮ್ರಾಜ್ಯದ ಬಹು ರಮ್ಯವಾದ ಶೀಮೆಗಳನ್ನು ಹೆಚ್ಚು ಕಡಿಮೆ ನಾನೂರು ವರುಷ ಆಳಿದ ತುರ್ಕರು ಯುರೋಪಿನಲ್ಲಿ ಕಡೇ ಸರ್ತಿಗೆ ಯುದ್ಧ ಮಾಡಿದ ಮೇಲೆ ರೋಮ

ಪಟ್ಣದ ಪಾಪಸ್ವಾಮಿಯ ಲೌಕಿಕ ಅಧಿಕಾರವು ಗತವಾದಂತೆ ಅವರ ಲೌಕಿಕ ಅಧಿಕಾರವೂ ಗತವಾಗುವದಾಯಿತು. ಪಾಪಸ್ವಾಮಿ ಇನ್ನೂ ರೋಮಪಟ್ಣದಲ್ಲಿ ವಸ್ತಿ ಮಾಡಿ ಇರುವಂತೆ, ತುರ್ಕನೂ ಕೊನ್ಸ್ತಂತಿನೊಪೊಲಿ ಪಟ್ಣದಲ್ಲಿ ವಸ್ತಿ ಮಾಡಿ ಕೊಂಡು ಇರುವನು ಖರೆ; ಆದರೆ ವಿಲಾಯತಿಯ ಶ್ರೇಷ್ಠ ರಾಜ್ಯಗಳ ಪಟ್ಟಿಯಿಂದ ತುರ್ಕಿ ಮಹಾ ರಾಜ್ಯದ ಹೆಸರು ಅಳಿದು, ಇನ್ನು ಮುಂದೆ ರುಸ್ಯಕ್ಕೆ ಅಧೀನವಾದ ಶೀಮೆ ಮಾತ್ರವೇ ಆಗಿರುವದು ಎಂದು ತೋರುತ್ತದೆ.

ಚೀನಿ ರಾಜ್ಯದ ಶಾಂಕಿನ್ ಪ್ರದೇಶದಲ್ಲಿ ಉಂಟಾದ ಮಹಾ ದುಷ್ಕಾಲದಿಂದ ಜನರು ಸುಬುದ್ಧಿ ಕಲಿತು ಕೊಂಡು, ಅನೇಕರು ಕ್ರೈಸ್ತರಾಗುತ್ತಾರೆ. ಅಲ್ಲಿ ಸುವಾರ್ತೆಯ ಪ್ರವೇಶಕ್ಕೆ ಅಗಲವಾದ ಬಾಗಲು ತೆರದಂತೆ ಅದೆ.

ಇಂಗ್ಲಾಂಡು, ವೇಲ್ಸ್ ದೇಶಗಳಲ್ಲಿ ೬೬,೬೩೬ ಹುಚ್ಚರು ಇದ್ಧಾರೆ. ವಿಲಾಯತಿಯವರಲ್ಲಿ ಹೆಚ್ಚಾಗಿ ಸೋಲ್ಜರರು ಹುಚ್ಚರಾಗಿ ಹೋಗುವದುಂಟು. ಸಾಧಾರಣವಾಗಿ ೧೦ ಸಾವಿರದಲ್ಲಿ ೬ ಮಂದಿ ಹುಚ್ಚರಾದರೆ, ಸೋಲ್ಜರರಲ್ಲಿ ೧೯ ಸಾವಿರದಲ್ಲಿ ೩೧ ಮಂದಿ ಹುಚ್ಚರಾಗುತ್ತಾರೆ. ಆ ಸೋಲ್ಜರರಿಗೆ ಹಗಲೆಲ್ಲಾ ಕೆಲಸ ಕಮ್ಮಿ, ಮದಿವೆಯೂ ಇಲ್ಲಾ, ದಿನ ನಿತ್ಯವೂ ಮದ್ಯಪಾನ ಶಿಕ್ಕುತ್ತದೆ. ಇದೇ ಅವರಲ್ಲಿ ಹೆಚ್ಚು ಮಂದಿ ಹುಚ್ಚರಾಗುವದಕ್ಕೆ ಕಾರಣ.

೯ನೇ ಪಿಯುಸ್ ಪಾಪನು ಆ ಸ್ಥಾನಕ್ಕೆ ಬಂದವರಲ್ಲಿ ೨೫೭ನೆಯವನು. ಇವರಲ್ಲಿ ೧೫ ಫ್ರೆಂಚರು, ೧೩ ಗ್ರೇಕರು, ೮ ಸೂರ್ಯರು, ೬ ಜರ್ಮನರು, ೫ ಸ್ಪಾನಿಯರು, ೨ ಅಫ್ರಿಕದವರು, ೨ ಸವೋಯಿಯವರು, ೨ ದಲ್ಮಾತ್ಯರು, ಇಂಗ್ಲಾಂಡ, ಪೊರ್ತುಗಲ್, ಹೊಲ್ಲಾಂಡ್, ಸ್ವಿಚರ್ಲಾಂಡ್, ಕಂದ್ಯ ಈ ದೇಶಗಳವರು ಒಬ್ಬೊಬ್ಬನು. ಉಳಿದವರೆಲ್ಲರೂ ಇತಾಲ್ಯರು. ಪೇತ್ರನ ವಿನಹಾ ಈ ೨೫೨ ಪಾಪರಲ್ಲಿ ೮ ಮಂದಿ ಒಂದು ತಿಂಗಳೊಳಗೆ, ೪೦ ಮಂದಿ ಒಂದು ವರ್ಷದೊಳಗೆ, ೨೨ ಮಂದಿ ಎರಡು ವರ್ಷದೊಳಗೆ, ೫೪ ಮಂದಿ ಎರಡರಿಂದ ೫ ವರ್ಷಗಳೊಳಗೆ, ೫೭ ಮಂದಿ ಐದರಿಂದ ೧೦ ವರ್ಷಗಳೊಳಗೆ, ೫೧ ಮಂದಿ ಹತ್ತರಿಂದ ೧೫ ವರ್ಷಗಳೊಳಗೆ, ೧೮ ಮಂದಿ ಹದಿನೈದರಿಂದ ೨೦ ವರ್ಷಗಳೊಳಗೆ, ೯ ಮಂದಿ ಇಪ್ಪತ್ತು ವರ್ಷಗಳಿಗಿಂತ ಹೆಚ್ಚು ಆಳಿ ತೀರಿ ಕೊಂಡರು. ಈಗಿನ ಪಾಪನು ೧೮೭೪ನೇ ಇಸವಿಯಲ್ಲೇ ತನ್ನ ಆಳಿಕೆಯ ವರ್ಷಗಳಲ್ಲಿ ಹಿಂದಿನವರೆಲ್ಲರಿಗಿಂತ ಅಧಿಕನು ಆಗಿದ್ದನು. ಪ್ರಾಯ ನೋಡಿದರೆ, ಅವನಿಗಿಂತಲೂ ಹೆಚ್ಚು ವಯೋವೃದ್ಧರಾದವರು ಅನೇಕರಿದ್ದರು.

(ಹಿಂದಿನದನ್ನು ಸಂಗ್ರಹಿಸಿದ್ದು: Ch. W.)

ಜನವರಿಯಲ್ಲಿ ತೀರಿ ಕೊಂಡ ವಿಕ್ಟೋರ್ ಇಮ್ಮಾನುವೇಲೆಂಬ ಅರಸನಿಗೆ ಕಡು ಎದುರಾಳಿಯಾಗಿದ್ದ ಪಿಯೊ ನೋನೊ ಎಂಬ ಪಾಪಸ್ವಾಮಿ ಫೆಬ್ರುವರಿ ೭ರಲ್ಲಿ ತೀರಿ ಹೋದನು. ಹೊಸ ಪಾಪನನ್ನು ಪಟ್ಟಕ್ಕೆ ಆರಿಸಿ ಕುಳ್ಳಿರಿಸುವ ಬಗ್ಯೆ ಕರ್ಡಿನಾಲರೆಂಬ ಶ್ರೇಷ್ಠಾಧ್ಯಕ್ಷರು ಸದ್ಯಕ್ಕೆ ರೋಮಪುರದಲ್ಲಿ ನೆರವಿ ಕೊಂಡಿದ್ಧಾರೆ.

ರುಸ್ಯರು ಇತ್ತಲಾಗೆ ಜಯದ ಮೇಲೆ ಜಯವನ್ನು ಗೊಳ್ಳುತ್ತಾ ಬಂದದರಿಂದ ತುರ್ಕರು ಜಗಳಸಮಾಧಾನವನ್ನು ಬೇಡಿ ಕೊಂಡರು. ಈಗ ಜಗಳಸಮಾಧಾನವಾಯಿತು. ಪೂರ್ಣ ಸಮಾಧಾನವಾಗುವ ಬಗ್ಯೆ ಉಭಯತ್ರರ ರಾಯಭಾರಿಗಳೊಳಗೆ ಬಹಳ ಸಂವಾದಗಳು ನಡೆಯುತ್ತಿದ್ಧಾವೆ. ಇಂಗ್ಲಿಷರು ಕೇವಲ ಸ್ವಾರ್ಥ ಬುದ್ಧಿಯಿಂದ ಪ್ರೇರಿತರಾಗಿ ಉಭಯತ್ರರೊಳಗೆ ದಳ್ಳಾಳಿಗಳಾಗಿ ಮಧ್ಯಸ್ತಿಕೆ ಮಾಡಲಿಕ್ಕೆ ಹತ್ತಿದರು. ಇತ್ತಲಾಗೆ ಅವರು ತುರ್ಕರ ಹತ್ತರ ತಮಗೆ ಕೊನ್ಸ್ತಂತಿನೊಪೊಲಿಗೆ ಬರಲಿಕ್ಕೆ ಅಪ್ಪಣೆ ಕೊಡ ಬೇಕೆಂದು ಬೆಸಗೊಂಡರು; ಆದರೆ ತುರ್ಕರು ಅವರಿಗೆ ಇನ್ನು ನಂಬಿ ಕೊಳ್ಳಲಾರದೆ ಬರ ಬಾರದೆಂತ ಅಪ್ಪಣೆ ಕೊಟ್ಟರು; ಮತ್ತು ಓಸ್ತ್ರಿಯ, ಇತಲ್ಯ, ಫ್ರಾಂಚ ಎಂಬೀ ಮೂರು ರಾಜ್ಯಗಳ ಸರಕಾರದವರು ಇಂಗ್ಲಿಷ ನಾವೆಗಳು ಆ ದಿಕ್ಕಿಗೆ ಹೋಗಿ ಶೇರಿದರೆ, ನಮ್ಮವುಗಳೂ ಹೋಗಿ ಶೇರ ಬೇಕು

ಎಂದು ನಿರೂಪಿಸಿದರು. ಮತ್ತು ರುಸ್ಯರು ಕಟ್ಟುತ್ತರ ಕೊಟ್ಟು ಹೇಳಿದ್ದೇನಂದರೆ: ಇಂಗ್ಲಿಷರ ಯುದ್ಧನಾವೆ ಕೊನ್‍ಸ್ತಂತಿನೊಪೊಲಿಗೆ ಬಂದರೆ, ನಮ್ಮ ದಳವು ಕೊನ್‍ಸ್ತಂತಿನೊಪೊಲಿ ಹಿಡುಕೊಳ್ಳ ಬೇಕು. ಇಂಗ್ಲಿಷರು ಹಟ ಹಿಡಿದು, ಐದಾರು ನಾವೆಗಳನ್ನು ಆ ದಿಕ್ಕಿಗೆ ರವಾನೆ ಮಾಡಿಸಿದ್ದಾರೆ. ರುಸ್ಯರು ಹೋಗಿ, ಕೊನ್‍ಸ್ತಂತಿನೊಪೊಲಿಯ ಪ್ಶ್ಚಿಮ ಕಡೆಯ ಕಂದಕ, ಬುರುಜು ಉಪಪಟ್ಣಗಳನ್ನು ಹಿಡುಕೊಂಡು ಇದ್ದಾರೆ. ಹೀಗಿರಲಾಗಿ ಇಂಗ್ಲಿಷರಿಗೂ ರುಸ್ಯರಿಗೂ ಮಾತ್ರವಲ್ಲ, ಇಂಗ್ಲಿಷರಿಗೂ ತುರ್ಕರಿಗೂ ಕಚ್ಚಾಟ ತೊಡಗಲಿಕ್ಕೆ ಸಾಕು, ಯಾಕಂದರೆ ರುಸ್ಯರಿಗೆ ಮಾತ್ರವಲ್ಲದೆ ತುರ್ಕರಿಗೂ ಆಗದ್ದನ್ನು ಇಂಗ್ಲಿಷರು ಬಗೆದು ಸಾಧಿಸಿ ಕೊಳ್ಳ ಬೇಕೆಂದಿರುತ್ತಾರೆ. ತುರ್ಕ್ಯ ರಾಜ್ಯದ ಸಂಬಂಧದಲ್ಲಿ ಇಂಗ್ಲಿಷ್ ಸರಕಾರದವರು ಈ ವರೆಗೂ ಕಾಣಿಸಿದ ರಾಜನೀತಿಗೂ ರಾಜ್ಯಕಾರ್ಯವಿಚಾರಕ್ಕೂ ಅನೇಕರು, ಇಂಗ್ಲಿಷ್ ಜನರಲ್ಲ್ಯಾದರೂ ಅನೇಕರು, ಕುಂದಿಟ್ಟು ದೂರುತ್ತಿದ್ದಾರೆ. ಒಬ್ಬ ಫ್ರೆಂಚ ಚಿತ್ರಗಾರನು ಇತ್ತಲಾಗೆ "ತನ್ನ ಹಲ್ಲು ತೋರಿಸುವ ಸಿಂಹ" ಎಂತ ಒಂದು ವಿಚಿತ್ರ ಚಿತ್ರವನ್ನು ಛಾಪಿಸಿದ್ದಾನೆ. ಆದರೆ ಆ ಚಿತ್ರದಲ್ಲಿ ಕಾಣುವ ಮೃಗವು ಸಿಂಹಕ್ಕೆ ಹೋಲದೆ, ಭೂಮಿಗೆ ಬಾಲವನ್ನು ಊರಿ ಕೊಂಡು ಕುಂಡ್ರುವ ಮುದಿ ನಾಯಿಯನ್ನು ಹೋಲುವದು. ಆ ನಾಯಿ ತನ್ನ ಬಾಯಿಯನ್ನು ಬಹು ದೊಡ್ಡದಾಗಿ ತೆರೆದದೆ. ಆದರೆ ಹಲ್ಲು ಕಾಣದೆ, ಹಲ್ಲು ಉದರಿ ಬಿದ್ದ ದವಡೆಗಳು ಮಾತ್ರ ಕಾಣುತ್ತವೆ. ಮತ್ತು ಒಬ್ಬ ದಂತ ವೈದ್ಯನು ಹಲ್ಲು ಮಾಡಿ, ಅದರ ಬಾಯಿಯಲ್ಲಿ ಕುಂಡ್ರಿಸ ನೋಡುತ್ತಾನೆ—ಈ ವಿಚಿತ್ರ ಚಿತ್ರವು ಇಂಗ್ಲಂದ ಸರಕಾರದ ಪರಿಹಾಸ್ಯಕ್ಕೆ ರಚನೆಯಾಯಿತಂತೆ.

ದಕ್ಷಿಣ ಆಫ್ರಿಕದಲ್ಲಿ ಇಂಗ್ಲಿಷರಿಗೂ ಕಫ್ರರಿಗೂ ಯುದ್ಧದ ಗೊಡವೆ ಆಗಿ ನಡೆಯುತ್ತದೆ.

"ಹುಳಿ ಮೆಣಸಿಗೆ ನೆಂಟು, ಕಳ್ಳ ಕಳ್ಳಗೆ ನೆಂಟು" ಎಂಬುವ ಗಾದೆಯುಂಟು; ಆದರೆ ಕಳ್ಳನಿಗೆ ಕಳ್ಳ ಯಮನಾಗುವದು ಸಹ ಉಂಟು. ಮುಲ್‍ಹೌಸನ್ ಎಂಬ ಪಟ್ಣದ ನೆರೆಯಲ್ಲಿರುವ ಒಂದು ತೋಪಿನಲ್ಲಿ ಇತ್ತಲಾಗೆ ೧೨ ವರುಷದ ಹುಡುಗನೊಬ್ಬನ ಹೆಣವು ಶಿಕ್ಕಿತು. ಆ ಹುಡುಗನು ಒಬ್ಬ ಅಂಗಡಿಯವನಿಗೆ ೨೮ ರೂಪಾಯಿ ಕದ್ದುಕೊಂಡು, ಆ ತೋಪಿಗೆ ತಪ್ಪಿಸಿ ಕೊಂಡನು. ಅಲ್ಲಿ ಅವನಿಗೆ ಇನ್ನೊಬ್ಬ ಕಳ್ಳನು ಗಂಟು ಬಿದ್ದು, ಆ ರೂಪಾಯಿಗಳನ್ನು ಆಶಿಸುವವನಾಗಿ, ಅವನನ್ನು ಕೊರಳು ಹಿಸುಕಿ, ಕೊಂದು, ಸುಲುಕೊಂಡು ಹೋಗಿರ ಬೇಕೆಂಬ ಊಹೆಗೆ ಸರಕಾರದವರ ದರ್ಯಾಪ್ತಿ ಆಸ್ಪದ ಕಾಣಿಸಿ ಕೊಟ್ಟಿತು.

ಕಳೆದ ವರುಷದಲ್ಲಿ ವಿಲಾಯತಿಯ ರಸಾಯನಶಾಸ್ತ್ರಜ್ಞರಿಗೆ ವಾಯುವನ್ನು (ಘಾಳಿಯನ್ನು) ನೀರೇ ಆಗ ಮಾಡಲೂ ಬಳಿಕ ಹೆಪ್ಪುಗ ಮಾಡಲೂ ಹರವು ದೊರಕಿತು.—ವಿದ್ವಾಂಸರು ಹೆಪ್ಪುದ ಘಾಳಿಯನ್ನು ಜನರಿಗೆ ದೋಶೆ ಎಂತ ತಿನ್ನಿಸ ಶಕ್ತರಾಗಿ, ಬರವು ಇನ್ನು ಬಾರದಂತೆ ಮಾಡ್ಯಾರೋ?

ಸುಮಾರು ೬೦ ವರುಷಗಳ ಹಿಂದೆ ಬವಾರಿಯ ದೇಶದ ರಾಜಧಾನಿಯಾದ ಮುನಿಖೆನ್ ಎಂಬ ಪಟ್ಣದಲ್ಲಿ ಯಾರೂ ಪ್ರೊಟೆಸ್ಟಾಂಟರು ಇದ್ದಿಲ್ಲ; ಮೊದಲಿನವರಿಗೆ ಆ ಪಟ್ಣದಲ್ಲಿ ಬಿಡಾರವನ್ನು ಮಾಡಿ ಕೊಳ್ಳಲಿಕ್ಕಾದರೂ ಬಹು ಪ್ರಯಾಸವಾಯಿತು. ೧೮೩೨ನೇ ಇಸ್ವಿಯಲ್ಲಿ ಮೊದಲನೇ ಪ್ರೊಟೆಸ್ಟಾಂಟ ದೇವಾಲಯವು ಆ ಪಟ್ಣದಲ್ಲಿ ಕಟ್ಟೋಣಾಯಿತು. ಕಳೆದ ಅಕ್ಟೋಬರ ೨೮ರಲ್ಲಿ ಎರಡನೇದು ಕಟ್ಟೋಣಾಗಿ ಪ್ರತಿಷ್ಠೆಯಾಯಿತು. ೪ ವರುಷದೊಳಗೆ ಆ ಶೀಮೆಯಲ್ಲಿ ಪ್ರೊಟೆಸ್ಟಾಂಟರ ಸಂಖ್ಯೆ ೫೦೮೨೪ ಮಂದಿಯಷ್ಟು ಹೆಚ್ಚಿತು.

ನಮ್ಮ ಬಾಸಲ್ ಮಿಶ್ಯನ್ ಕಮಿಟಿಯಲ್ಲಿ ರಿಸ್ಸನ್‍ಬಕ್ ಎಂಬ ದೇವಜ್ಞಾನಶಾಸ್ತ್ರಪಂಡಿತರು ಅಗ್ರಾಸೀನರಾದರು.

Printed at the Basel Mission Press, Mangalore.

ಕ್ರೈಸ್ತ ಸಭಾ ಪತ್ರ

ಪುಸ್ತಕ ೧೦. APRIL 1878. ಅಂಕೆ ೧೦.

ಅಡಕವು: ಹೊಲದಲ್ಲಿ ಬಚ್ಚಿಟ್ಟ ದ್ರವ್ಯವೂ ಬಹು ಬೆಲೆಯುಳ್ಳ ಮುತ್ತೂ—ಸತ್ಯವೇದದ ಗಣಿತ ವಿದ್ಯೆ—ಒಂದು ಪ್ರಶ್ನೆ—ಕಳ್ಳನ ಜಾಡೆ ತೆಗೆದ ಯುಕ್ತಿ—ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?—ವಿವಿಧ ವರ್ತಮಾನಗಳು.

ಹೊಲದಲ್ಲಿ ಬಚ್ಚಿಟ್ಟ ದ್ರವ್ಯವೂ ಬಹು ಬೆಲೆಯುಳ್ಳ ಮುತ್ತೂ.

(100ನೇ ಪಾನಿನಿಂದ ಮುಂದೆ.)

ಆ ಹೊಲದಲ್ಲಿ ಒಂದು ದ್ರವ್ಯವು ಬಚ್ಚಿಟ್ಟದ್ದದು ಆ ಮನುಷ್ಯನಿಗೆ ಮೊದಲು ಗೊತ್ತಿದ್ದಿಲ್ಲಾ; ಆದರೆ ಆ ಹೊಲವನ್ನು ಚನ್ನಾಗಿ ವ್ಯವಸಾಯ ಮಾಡಿದಲ್ಲಿ ಆ ದ್ರವ್ಯವನ್ನು ಕಂಡು ಕೊಂಡನು. ಆ ವರ್ತಕನಿಗೂ ಮೊದಲು ಬಹು ಬೆಲೆಯುಳ್ಳ ಆ ಒಂದೇ ಮುತ್ತಿನ ಗೊತ್ತು ಇದ್ದಿಲ್ಲಾ; ಆದರೆ ಒಳ್ಳೇ ಮುತ್ತುಗಳನ್ನು ಹುಡುಕುವ ಪ್ರಯತ್ನದಲ್ಲಿ ಅದನ್ನು ಕಂಡು ಕೊಂಡನು. ಮೊದಲು ತಿಳಿಯದೆ, ತಾವು ಬಗೆಯದೆ, ಇದ್ದದು ಅವರಿಬ್ಬರಿಗೆ ಶಿಕ್ಕಿದ್ದರಿಂದ ಅವರಿಗೆ ಅಧಿಕ ಸಂತೋಷವು ಉಂಟಾಗಿ, ಅವರು ತಮ್ಮ ಸಂತೋಷಕ್ಕೆ ಕಾರಣವಾದ್ದನ್ನು ಸ್ವಾಧೀನ ಮಾಡಿ ಕೊಳ್ಳುವ ಬಗ್ಯೆ ತಮ್ಮದನ್ನೆಲ್ಲಾ ಮಾರಿ ಬಿಟ್ಟು, ಅದನ್ನು ಕೊಂಡು ಕೊಂಡರು.

ಆತ್ಮನಿಗೆ ಪರಮದ್ರವ್ಯವೂ ಅತ್ಯಮೂಲ್ಯವಾದ ಮುತ್ತೂ ಆಗಿರುವಂಥಾದನ್ನು ಯಾರು ಕಂಡು ಕೊಂಡು, ಲಾಭ ಮಾಡಿ ಕೊಳ್ಳ ಬಹುದು? ಎಂಬ ಪ್ರಶ್ನೆಗೆ ಈ ಸಾಮ್ಯದಲ್ಲಿ ತಕ್ಕ ಉತ್ತರವು ಬಹು ವ್ಯಕ್ತವಾಗಿ ತೋರುತ್ತದೆ. ಕಾಮಾದಿಗಳಿಂದ ಪ್ರೇರಿತರಾಗಿ, ದುರ್ವಿಷಯಗಳಿಗೆ ಸೋತು ಹೋಗಿ, ಕಲಿಮಾಯಾಂಧಕಾರದಲ್ಲಿ ಮುಳುಗಿ, ಪ್ರಪಂಚಕ್ಕೆ ಅನುಗುಣವಾಗಿ ನಡಕೊಳ್ಳುವಂಥವರು ಪರಮ ಒಡವೆಯನ್ನು ಕಂಡು ಕೊಳ್ಳಲಾರರು; ಆದರೆ ಘನವೂ ಸ್ತುತ್ಯವೂ ಆಗಿರುವಂಥಾದಕ್ಕೆ ತನ್ನ ಮನೋವಾಕ್ಕಾಯಗಳನ್ನು ಮುಟ್ಟಸಿ, ಕ್ಷಣಭಂಗುರವಾಗಿರದೆ, ಶಾಶ್ವತವೂ ನಿಜವಾಗಿ ಮೇಲೂ ಮಂಗಲವೂ ಆಗಿರುವಂಥಾದನ್ನು ಪಡಕೊಳ್ಳ ಬೇಕೆಂದು ವ್ಯಭಿಚಾರ ಭಕ್ತಿಯಿಲ್ಲದೆ ಏಕೋಭಾವವಾಗಿ ತನ್ನ ತನುಮನಧನಗಳನ್ನು ಸ್ವರ್ಗೇಶ ದೇವರ ಸೇವೆಗಿಟ್ಟು, ಹೃದ್ಯುದ್ಧಿಯನ್ನೂ ಪರಮಾರ್ಥವನ್ನೂ ಸಾಧಿಸಿ ಕೊಳ್ಳುತ್ತಾ ಬರುವವನು ಪರಮ ಒಡವೆಯನ್ನು, ಶಾಶ್ವತ ಪದವಿಯನ್ನು ಕಂಡು ಕೊಂಡು, ಲಾಭ ಮಾಡಿ ಕೊಳ್ಳುವನು.

ಕಂಡು ಕೊಳ್ಳುವದು ಯಾವಾಗ ಮತ್ತು ಹ್ಯಾಗೆ ಆಗುತ್ತದಂದರೆ: ಪ್ರಪಂಚಮೋಹಾಂಧಕಾರವೆಂಬ ನಿದ್ರೆಯಿಂದ ಎಚ್ಚತ್ತು ಎದ್ದು, ಭವರೋಗಗ್ರಸ್ತರಿಗೆ ವೈದ್ಯನಾಗಿರುವ ಕರುಣಾಸಾಗರ

ನಾದ ದೇವರನ್ನು ಶರಣ ಹೊಕ್ಕು, ಆತನ ಕ್ಷಮಾದಯವನ್ನೂ ಕೃಪೆಯನ್ನೂ ಪ್ರಥಮತಾ **ಅನುಭವಿಸುವಲ್ಲಿಯೇ** ಕಂಡು ಕೊಳ್ಳುವದಾಗುತ್ತದೆ. ಇದಕ್ಕೆ ಒಬ್ಬರಿಗೆ ಹೆಚ್ಚು ಇನ್ನೊಬ್ಬರಿಗೆ ಕಡಿಮೆ ಹೊತ್ತು ತಾಗ ಬಹುದು. ಹೇಳಿದ ಅನುಭವದಿಂದ ಆತ್ಮನಿಗೆ ದಿವ್ಯ ಸಮಾಧಾನವು ದೊರಕುವದು. ಈ ಸಮಾಧಾನವು ಆತ್ಮನನ್ನು ವ್ಯಾಪಿಸಿ ಹೋಗಿ, ಬಹು ಸಾನಂದನಾಗ ಮಾಡುವದು. ಆದರೆ ಈ ಅನುಭವವಾಗುತ್ತಲೇ ತಾನು ಮಾಡಿ ಕೊಂಡ ಲಾಭವನ್ನು ಅವಸರದಲ್ಲಿ ಹೋಗಿ, ಇತರರಿಗೆ ತಿಳಿಸುವದು ವಿಹಿತವಲ್ಲಾ: ಮೌನದಲ್ಲಿ, ಆತ್ಮಧ್ಯಾನ ಆತ್ಮಜ್ಞಾನ ಎಂಬದರಲ್ಲಿ, ಹೃದಯದ ಬುಡದಲ್ಲಿ ಆ ಅನುಭವವು ಆಗಿ, ಅದರಿಂದ ಒದಗುವ ಲಾಭವು ಸಂಚಿತವಾಗ ಬೇಕು. ಹಾಗಾಗುವ ಪಕ್ಷ ಮಾತ್ರದಲ್ಲಿ ಯೇಸು ಕ್ರಿಸ್ತನ ಸ್ವರ್ಗರಾಜ್ಯದ ಶುಭವಾರ್ತೆಯ ವಾಸ್ತವ್ಯಾರ್ಥವೂ ಮಹತ್ವವೂ ಮನಸ್ಸಿಗೆ ಖಚಿತವಾಗಿ, ಮನಸ್ಸು ಅದರಲ್ಲಿ ದೃಢವಾಗಿ, ಸಂತೋಷಭರಿತವಾಗ ಬಹುದು. ಸಂತೋಷವು ದೃಢತ್ವದ ಹೊಳವು ಎಂತಲೂ ವಾಸನೆಯೆಂತಲೂ ಹೇಳ ಬಹುದು. ಈ ಸಂತೋಷದ ವ್ಯಾಪ್ತಿಯಿಂದ ಮತ್ತಿನ ಅನುಭವಗಳು ಆಗಿ, ಹೊಸ ಜ್ಞಾನವು ಉದಯವಾಗಿ, ತಾನು ಒಂದು ಹೊಸ ಸಂಸಾರದಲ್ಲಿ ಒಂದು ಪುನರ್ಜನ್ಮವನ್ನು ಪಟ್ಟು, ಹೊಸ ಸಂಸರ್ಗದಲ್ಲಿ ಹೊಸ ಅನುಬಂಧಗಳಲ್ಲಿ ಶೇರಿದ ಹಾಗೆ ಆತ್ಮನಿಗೆ ತೋರುವದಾಗುತ್ತದೆ.

ಆದರೆ ಕಂಡು ಕೊಂಡರಾಯಿತಂತಲ್ಲಾ: ಕಂಡು ಕೊಂಡ ದ್ರವ್ಯವೂ ಮುತಪ್ಪು ನ್ಯಾಯದಲ್ಲಿ ಸ್ವಾಧೀನವಾಗಿ, ಸ್ವಂತ ಆಸ್ತಿ, ಕಾಯಮ್ ಸೊತ್ತು, ಆಗಿ, ಬಹಿರಂಗದಲ್ಲಿಯೂ ಅಡ್ಡಿಯಾಗದೆಯೂ ಪರಿಪೂರ್ಣವಾಗಿಯೂ ಅನುಭೋಗಿಸಲಿಕ್ಕೆ ತಕ್ಕಂಥಾದು ಆಗ ಬೇಕಲ್ಲಾ! ಅದಕ್ಕೋಸ್ಕರ ಅದನ್ನು ಕ್ರಯಕ್ಕೆ ಕೊಂಡು ಕೊಳ್ಳಲಿಕ್ಕೆ ಕೂಡುವ ಹಾಗೆ ಕಂಡು ಕೊಂಡವನು ತನ್ನದನ್ನೆಲ್ಲಾ ಮಾರಿ ಬಿಡ ಬೇಕು; ಅಂದರೆ ದುರ್ವ್ಯಸನಗಳನ್ನೂ, ಕ್ಷಣಭಂಗುರವಾದ ಪ್ರಪಂಚದ ಒಡವೆಗಳ ಆಶೆಯನ್ನೂ ಅನುಭೋಗವನ್ನೂ ಮಾತ್ರವಲ್ಲಾ, ಸ್ವನೀತಿ ಸ್ವಬುದ್ಧಿ ಸ್ವಾಭಿಮಾನಾದಿಗಳನ್ನೂ ಸಂತೋಷದಿಂದ ಅರ್ಪಣೆ ಮಾಡಿ ಬಿಟ್ಟು ಬಿಡ ಬೇಕು.

ಇನ್ನೊಂದು ಮಾತನ್ನು ವಿಶೇಷ ಲಕ್ಷ್ಯಕ್ಕೆ ತಂದು ಕೊಳ್ಳ ಬೇಕು; ಏನಂದರೆ: ಈ ದ್ರವ್ಯವನ್ನು ಕಂಡು ಕೊಂಡವನು ಅದನ್ನು ಸ್ವಾಧೀನ ಮಾಡಿ ಕೊಳ್ಳುವ ಬಗ್ಯೆ ದ್ರವ್ಯವು ಬಚ್ಚಿಟ್ಟಿರುವ ಹೊಲವನ್ನೂ ಕ್ರಯಕ್ಕೆ ತೆಗೆದು ಕೊಳ್ಳ ಬೇಕು. ದ್ರವ್ಯವು ಬೇಕು: ಹೊಲವು ಬೇಡ! ಎಂಬ ಬಗೆ ಎಂದಿಗೂ ಸಲ್ಲದು. ಪರಮ ಪದವಿ, ಸ್ವರ್ಗರಾಜ್ಯ, ಶಾಶ್ವತ ಜೀವವು ಬೇಕು, ತನ್ನ ಪಾಪ ಪರಿಹಾರವಾಗ ಬೇಕು ಎಂದಿರುವವನು ಸಭೆ ಯಾತಕ್ಕೆ? ಸಭಾಕ್ರಮದಲ್ಲಿ ನಡಕೊಳ್ಳುವದ್ಯಾತಕ್ಕೆ? ಸ್ನಾನ ಮುಂತಾದ್ದು ಏನು ಪ್ರಯೋಜನ? ಬಹಿರಂಗವಾಗಿ ಕ್ರೈಸ್ತ ಸಭೆಯನ್ನು ಶೇರಿ, ಕ್ರಿಸ್ತ ಯೇಸುವನ್ನು ಅರಿಕೆ ಮಾಡಿ, ಆತನ ಭಕ್ತನೂ ಶಿಷ್ಯನೂ ಆಗಿ, ಜಾತಿ ಕೆಟ್ಟವನು ಎಂದೆನ್ನಿಸಿ ಕೊಳ್ಳುವದರಿಂದೇನು? ನಾನು ಏಕಾಂತದಲ್ಲಿ ಕ್ರಿಸ್ತನ ಭಕ್ತನಾಗಿ, ಆತನಲ್ಲಿ ವಿಶ್ವಾಸವಿಟ್ಟು, ಆತನಿಗೆ ಪ್ರಾರ್ಥಿಸುತ್ತಿದ್ದೇನೆ ಎಂಬದಾಗಿ ನೆನಸಿ ಕೊಳ್ಳಲಿಕ್ಕೂ ಅಂದು ಕೊಳ್ಳಲಿಕ್ಕೂ ಕೂಡದು. ಬಲೆಯ ಸಾಮ್ಯವೂ ಈ ಮಾತಿಗೆ ಆಧಾರ. ಅದರಲ್ಲಿಯೂ "ದೃಶ್ಯ ಸಭೆ" ಎಂತಲೂ "ಬಾಹ್ಯ ಸಭೆ" ಎಂತಲೂ ಅನ್ನಿಸಿ ಕೊಳ್ಳುವಂಥಾದರ ಗೊಡವೆ ಬೇಕೇ ಬೇಕು ಎಂದು ಕಾಣುತ್ತದೆ. ಆಯಾ ಸಭಾಂಗಗಳಿಗೆ ಮಾತ್ರವಲ್ಲದೆ, ಕ್ರೈಸ್ತ ಸಭೆಗಾದರೂ ನಾನಾ ಕುಂದು ಕೊರತೆಗಳು ಇದ್ದಾಗ್ಯೂ, ಅದು ವೈದ್ಯನಾದ ದೇವರು ಸ್ಥಾಪನೆ ಮಾಡಿ, ತಾನು ರೋಗಿಗಳನ್ನು ನೋಡಿ ಪರಾಂಬರಿಸುವ ಬಗ್ಯೆ ಬರುತ್ತಾ ಹೋಗುತ್ತಾ ಇರುವ ಆಸ್ಪತ್ರಿಯೆಂತಲೂ ಗುರುಶ್ರೇಷ್ಠನಾದ ಕ್ರಿಸ್ತಯೇಸುವು ಜಗತ್ತಿನಲ್ಲಿ ಹಾಕಿದ ಶಾಲೆಯೆಂತಲೂ ಹೇಳ ತಕ್ಕದು. ಹೀಗಿರಲಾಗಿ, ಪ್ರಿಯರೇ! ನೀವೂ ಯೇಸುವಿನ ಶಾಲೆಯಲ್ಲಿ ಶೇರಿ,

ಒಳ್ಳೇ ಶಿಷ್ಯರಾಗಿ, ಅಭ್ಯಾಸ ಮಾಡಿ, ಈ ಗುರುಶ್ರೇಷ್ಠನಿಂದ ಕೈಲಾದಷ್ಟು ಲಾಭ ಮಾಡಿ ಕೊಳ್ಳಿರಿ! ನಿಮ್ಮದನ್ನೆಲ್ಲಾ ಮಾರಿ ಬಿಟ್ಟು, ಈ ಹೊಲದ ಸಹಿತವಾಗಿ ಅದರಲ್ಲಿ ಬಚ್ಚಿಟ್ಟ ದ್ರವ್ಯವನ್ನು ಕ್ರಯಕ್ಕೆ ತೆಗದು ಕೊಳ್ಳಿರಿ!

ಸತ್ಯವೇದದ ಗಣಿತವಿದ್ಯೆ.

ಸಂಕಲಿತ.—ನಿಮ್ಮ ವಿಶ್ವಾಸಕ್ಕೆ ಸದ್ಗುಣವನ್ನು, ಸದ್ಗುಣಕ್ಕೆ ತಿಳುವಿಕೆಯನ್ನು, ತಿಳುವಿಕೆಗೆ ಮಿತಾನುಭವವನ್ನು, ಮಿತಾನುಭವಕ್ಕೆ ತಾಳ್ಮೆಯನ್ನು, ತಾಳ್ಮೆಗೆ ಭಕ್ತಿಯನ್ನು, ಭಕ್ತಿಗೆ ಸಹೋದರ ಸ್ನೇಹವನ್ನು, ಸಹೋದರ ಸ್ನೇಹಕ್ಕೆ ಪ್ರೀತಿಯನ್ನು ಕೂಡಿಸಿರಿ. ೨ ಪೇತ್ರ. ೧, ೫—೭.

ವ್ಯವಕಲಿತ.—ಸಕಲ ಕೆಟ್ಟತನವನ್ನೂ ಸಕಲ ಮೋಸವನ್ನೂ ಕಪಟಗಳನ್ನೂ ಹೊಟ್ಟೆಕಿಚ್ಚುಗಳನ್ನೂ ಸಕಲ ನಿಂದೆಗಳನ್ನೂ ತೆಗದು ಹಾಕಿ, ವಾಕ್ಯವೆಂಬ ಮೋಸವಿಲ್ಲದ ಹಾಲನ್ನು ಅದರಿಂದ ಬೆಳಿಯುವ ಹಾಗೆ ಅಪೇಕ್ಷಿಸಿರಿ. ೧ ಪೇತ್ರ. ೨, ೧. ೨.

ಗುಣನ.—ದೇವರೂ ನಮ್ಮ ಕರ್ತನಾದ ಯೇಸೂ ಇವರ ತಿಳುವಿಕೆಯಿಂದ ಕೃಪೆಯೂ ಸಮಾಧಾನವೂ ನಿಮಗೆ ಹೆಚ್ಚಲಿ. ೨ ಪೇತ್ರ. ೧, ೨.

ಬಿತ್ತುವವನಿಗೆ ಬೀಜವನ್ನು ತಂದು ಕೊಡುವಾತನು ಉಣ್ಣುವದಕ್ಕೆ ರೊಟ್ಟಿಯನ್ನು ತಂದು, ನೀವು ಬಿತ್ತಿದ್ದನ್ನು ಹೇರಳ ಮಾಡಿ, ನಿಮ್ಮ ನೀತಿಯ ಬೆಳೆಗಳನ್ನು ವೃದ್ಧಿ ಮಾಡಲಿ! ೨ ಕೊರಿ. ೯, ೧೧.

ಭಜನ.—ಅವರ ಮಧ್ಯದಲ್ಲಿಂದ ಹೊರಟು ಬಂದು, ಅಗಲಿ, ಅಶುದ್ಧವಾದ್ದನ್ನು ಮುಟ್ಟದೆ ಇರ್ರಿ; ಆಗ ನಾನು ನಿಮ್ಮನ್ನು ಅಂಗೀಕರಿಸುವೆನು, ಮತ್ತು ನಿಮಗೆ ತಂದೆಯಾಗಿರುವೆನು, ನೀವು ನನಗೆ ಕುಮಾರ ಕುಮಾರ್ತೆಗಳು ಆಗಿರುವಿರಿ ಎಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ. ೨ ಕೊರಿ. ೬, ೧೭. ೧೮.

ತ್ರೈರಾಶಿಕ.—ಈಗಾದರೆ, ವಿಶ್ವಾಸವೂ ನಿರೀಕ್ಷೆಯೂ ಪ್ರೀತಿಯೂ ಈ ಮೂರು ಇರುತ್ತವೆ; ಇವುಗಳಲ್ಲಿ ದೊಡ್ಡದು ಪ್ರೀತಿಯೇ. ೧ ಕೊರಿ. ೧೩, ೧೩.

ಒಂದು ಪ್ರಶ್ನೆ.

ಒಬ್ಬ ಗೃಹಸ್ಥನು ಒಬ್ಬ ಸ್ತ್ರೀಯ ಪ್ರಾಯ ತಿಳಿಯುವ ಬಗ್ಯೆ ತನ್ನ ಹೆಸರಿನಲ್ಲಿ ಚೀಟು ಕಳುಹಿಸಿ, ಅದರಲ್ಲಿ "ಉತ್ಪತ್ತಿ ೪೭, ೮." ಎಂತ ಬರದನು. ಇಷ್ಟೇ ವಿನಹಾ ಅದರಲ್ಲಿ ಬೇರೇನೂ ಬರದಿರಲಿಲ್ಲಾ. ಅವಳು ಆ ಚೀಟು ಓದಿ, ಕಳುಹಿಸಿದ ಉತ್ತರವೇನಂದರೆ—"ಅಬ್ರಹಾಮು ಈಸಾಕ ಯಾಕೋಬ ಯೋಸೇಫ ಇವರ ವಯಸ್ಸನ್ನು ಒಟ್ಟು ಕೂಡಿಸಿ, ಅದರಿಂದ ಕೆಳಗೆ ಕಾಣಿಸಿದ ಸಂಖ್ಯೆ ಕಳಿಯಿರಿ. ಯಾವವಂದರೆ:

ಯಾಕೋಬನು ಐಗುಪ್ತದಲ್ಲಿ ವಾಸ ಮಾಡಿದ ವರ್ಷಗಳು.
ಸೊಲೊಮೋನನು ದೇವಾಲಯ ಕಟ್ಟುವದಕ್ಕೆ ಹಿಡಿದ ವರ್ಷಗಳು.
ಯೋಸೇಫನಿಗೆ, ತಂದೆ ವಿಚಿತ್ರವಾದ ಅಂಗಿ ಕೊಟ್ಟಾಗ, ಇದ್ದ ಪ್ರಾಯ.
ಅನಾಕನ ಮಕ್ಕಳ ಸಂಖ್ಯೆ.
ಯೊಶೀಯನು ಆಳಲಾರಂಭಿಸಿದಾಗ ಅವನಿಗಿದ್ದ ಪ್ರಾಯ.
ಫರೋನನು ಸ್ವಪ್ನದಲ್ಲಿ ಕಂಡ ಪುಷ್ಟವಾದ ದನಗಳ ಸಂಖ್ಯೆ.
ಯೆಶಾಯನು ಮೆಟ್ಟು ಇಲ್ಲದೆ ನಡದ ವರ್ಷಗಳು.

ಯೊನಥಾನನು ಹೊಡದ ರಾಕ್ಷಸನ ಬಲಗೈಗೆ ಇದ್ದ ಬೆರಳುಗಳ ಸಂಖ್ಯೆ.

ಇಷ್ಟು ಕಳದ ಮೇಲೆ ಉಳಿದ್ದನ್ನು ಅಬೀಯನ ಕುಮಾರ್ತೆಗಳ ಸಂಖ್ಯೆಯಿಂದ ವಿಭಾಗಿಸಿದರೆ, ನನ್ನ ವಯಸ್ಸು ನಿಮಗೆ ತಿಳಿಯುವದು."

ಹಾಗಾದರೆ ಅವಳ ಪ್ರಾಯವೆಷ್ಟಾಗಿತ್ತು?

ಕಳ್ಳನ ಜಾಡೆ ತೆಗೆದ ಯುಕ್ತಿ.

ಕನ್ನಗಳ್ಳನಾಗಲಿ ಗಂಟುಕಳ್ಳನಾಗಲಿ ಎಂಥ ಕಳ್ಳನಾದರೂ ದುಷ್ಟರ ಲೆಖ್ಖದಲ್ಲಿ ಶೇರಿದವ. ಆದರೆ ಮನೆಯೊಳಗಣ ಕಳ್ಳ, ಅಂದರೆ ತಾನು ಇದ್ದ ಮನೆಯಲ್ಲಿ ಕದ್ದು ಕೊಳ್ಳುವವನು, ಕಳ್ಳರಲ್ಲಿ ಕಡುಗಳ್ಳನಾಗಿ, ಮಹಾ ದುಷ್ಟನಾಗಿದ್ದಾನೆ; ಯಾಕಂದರೆ ಅಂಥವನು ವಿಶ್ವಾಸಘಾತಕನಾಗಿರುವದಲ್ಲದೆ, ಮನೆಯವರಲ್ಲಿ ಒಬ್ಬರ ಮೇಲೊಬ್ಬರಿಗೆ ಸಂಶಯ ಹುಟ್ಟಿಸಿ, ಮನೆಯವರ ಒಕ್ಕಟ್ಟನ್ನೂ ಸಮಾಧಾನವನ್ನೂ ಒಬ್ಬರ ಮೇಲೊಬ್ಬರಿಗೆ ಇರ ತಕ್ಕ ನಂಬಿಕೆಯನ್ನೂ ಕೆಡಿಸಿ, ಬಹಳ ವಿಷಮಕ್ಕೆ ಕಾರಣನಾಗಿ, ಮನೆಗೆ ನಿತ್ಯ ಮಹಾ ಮಾರಿಯೇ ಆಗಿದ್ದಾನೆ. "ವಿಷ ತಿಂದು ಬದುಕ ಬಹುದು, ವಿಷಮದಲ್ಲಿ ಬದುಕಲಿಕ್ಕೆ ಕೂಡದು" ಎಂಬುವ ಮಾತುಂಟಲ್ಲಾ! ಅಂಥಾ ಕಳ್ಳನ ಜಾಡೆ ಯಾರೊಬ್ಬರಿಂದ ತೆಗಿಯಲಿಕ್ಕೆ ಕೂಡಿದರೆ, ಅವನು ಇದ್ದ ಮನೆಯವರೆಲ್ಲರಿಗೆ ಮಹೋಪಕಾರವೇ ಆಗುತ್ತದೆ. ಅಂಥ ಉಪಕಾರವು ಒಂದು ಮನೆಗೆ ಆದ ವಿವರವನ್ನು ನಾನೀಗ ಹೇಳಿ ತಿಳಿಸ ಬೇಕೆಂದಿದ್ದೇನೆ.

ನನ್ನ ನೆರೆಹೊರೆಯ ಗೃಹಸ್ಥನೊಬ್ಬನ ಸಂದೂಕದಿಂದ, ಅದನ್ನು ಎಷ್ಟೋ ಬಂದೋಬಸ್ತಿನಲ್ಲಿಟ್ಟರೂ, ಮತ್ತೂ ಮತ್ತೂ ರೊಖ್ಖವು ಕಳವು ಆಗಿ ಕಾಣದೆ ಹೋಗುತ್ತಿತ್ತು. ಅದಕ್ಕವನು ಸಹಜವಾಗಿ ಬಹಳ ಕರಕರೆ ಪಟ್ಟನು. ಹಣವು ಕಾಣದೆ ಹೋದ ನಷ್ಟವಲ್ಲದೆ, ಕಳ್ಳನು ಯಾರು? ಎಂಬದು ತಿಳಿಯದೆ ಇದ್ದದೂ ಕರಕರೆಗೆ ಕಾರಣವಾಯಿತು. ಅವನು ಮನೆಯವರಲ್ಲಿ ಯಾರನ್ನಾದರೂ ಸಂಶಯದ ಮೇಲೆ ವಿಚಾರಿಸಿ ಕೇಳಿದಲ್ಲಿ ಎಲ್ಲರು—"ನನಗೆ ಗೊತ್ತಿಲ್ಲಾ, ನಾನು ಕದ್ದು ಕೊಳ್ಳಲಿಲ್ಲಾ" ಎಂಥೇಳುತ್ತಿದ್ದರು. ತಮ್ಮ ಮೇಲೆ ಸಂಶಯ ಪಟ್ಟದಕ್ಕೆ ಕೆಲವರು ಕೆದರಿ ಕೊಂಡು, ಶಿಟ್ಟಾದರೂ ಮಾಡಿದರು. ಗುರ್ತು ಹಾಕಿದ ಕುರಿಗಳನ್ನಾದರೂ ಹುಲಿ ಹಿಡಿದು ತಿನ್ನುವದು ಎಂದು ತಿಳಿದಿದ್ದಾಗ್ಯೂ, ಆ ಗೃಹಸ್ಥನು ಕೆಲವು ರೂಪಾಯಿಗಳಿಗೆ ಗುರ್ತು ಹಾಕಿ ಬಿಟ್ಟನು; ಆದರೆ ಅವುಗಳು ಸಹ ಹಾಗೆಯೇ ಕಾಣದೆ ಹೋದಾಗ, ಅವನು ಹೆಚ್ಚು ಕೋಪಿಸಿ ಕೊಂಡು, ತನ್ನ ಸುತೆಸುತರನ್ನೂ ಆಳುಮಕ್ಕಳನ್ನೂ ಬಹಳ ದರ್ಯಾಪ್ತಿ ಮಾಡಿದನು. ಆ ದರ್ಯಾಪ್ತಿಯಾಗುವಾಗಲೇ ಅವನ ಸ್ನೇಹಿತನೊಬ್ಬನು ಮನೆಗೆ ಬಂದನು. ಇವನು ಒಳ್ಳೇ ವಿಚಾರಶೀಲನಾದ ಯುಕ್ತಿಶಾಲಿಯಾಗಿ ಆ ದರ್ಯಾಪ್ತಿಯ ಕಾರಣವೆಲ್ಲವನ್ನು ಕೇಳಿ ತಿಳಿದು ಕೊಂಡ ಕೂಡಲೇ ಹೇಳಿದ್ದೇನಂದರೆ: "ಹಣವನ್ನು ಕದ್ದು ಕೊಳ್ಳುತ್ತಾ ಬಂದವನು ಮನೆಯೊಳಗಣ ಕಳ್ಳನಾಗಿ, ಮನೆಯವರ ಮಧ್ಯದಲ್ಲಿ ಇರುವವನಾದರೆ, ನೀವು ಒಪ್ಪಿ ಕೊಳ್ಳುವ ಪಕ್ಷದಲ್ಲಿ ನಾನು ಅವನನ್ನು ಹಿಡಿದು ತೋರಿಸಿ ಕೊಡ ಬಲ್ಲೆ. ಒಳ್ಳೇ ದೈವಜ್ಞೆಯಾದ ಒಬ್ಬ ಕಣಿಗಾರೆ ಕಳ್ಳರ ಗೊತ್ತು ಹತ್ತಿಸಿ ಕೊಳ್ಳುವ ಮಂತ್ರತಂತ್ರಗಳನ್ನು ನನಗೆ ತಿಳಿಸಿ ಕೊಟ್ಟಿದ್ದಾಳೆ." ಆ ಗೃಹಸ್ಥನೂ ಅವನ ಮನೆಯವರೆಲ್ಲರೂ ಒಪ್ಪಿ ಕೊಂಡು, ಕಳ್ಳನ ಗೊತ್ತು ಮಾಡಿ ಕೊಡ ಬೇಕೆಂತಾ ಬೇಡಿ ಕೊಳ್ಳಲು, ಅವನು ಹಿತ್ತಲಲ್ಲಿ ಹೋಗಿ, ಹತ್ತೆಂಟು ಕಡ್ಡಿಗಳನ್ನು ಹುಡುಕಿ, ತಂದು, ಅವುಗಳನ್ನು ಉದ್ದದಲ್ಲಿ ಒಂದಕ್ಕೊಂದು ಸಮ ಬೀಳ ಮಾಡಿ, ಹೇಳಿದ್ದೇನಂದರೆ: "ಈಗ ನೀವೆಲ್ಲರೂ ನನ್ನ ಮುಂದೆ ಅರ್ಧವೃತ್ತಾಕಾರದಲ್ಲಿ ಕುಂಡ್ರ ಬೇಕು; ಒಬ್ಬರೂ ನಾಲಿಗೆಯ

ನ್ನಾಗಲಿ ಇತರ ಯಾವದೊಂದು ಅಂಗವನ್ನಾಗಲಿ ಆಡಿಸಲೂ ಅಲ್ಲಾಡಿಸಲೂ ಬಾರದು; ಒಬ್ಬರನ್ನೊಬ್ಬರು ನೋಡಲೂ ಬಾರದು. ಒಬ್ಬೊಬ್ಬರ ಬಾಯಿಯಲ್ಲಿ ನಾನು ಒಂದೊಂದು ಕಡ್ಡಿಯನ್ನು ಹಾಕಿಕೊಡುತ್ತೇನೆ. ಆ ಹಣವನ್ನು ಕದ್ದು ಕೊಂಡವನ ಅಥವಾ ಕದ್ದು ಕೊಂಡವಳ ಬಾಯಿಯಲ್ಲಿ ಕಡ್ಡಿ ಹತ್ತು ನಿಮಿಷದೊಳಗೆ ಹ್ಯಾಗೂ ತೋರುಬೆರಳಿನಷ್ಟು ಉದ್ದಕ್ಕೆ ಬೆಳದು ಹೋದೀತು." ಹೀಗೆ ಹೇಳಿ, ಎಲ್ಲವರನ್ನು ಕುಂಡ್ರಿಸಿ, ಮಂತ್ರಿಸುವವನಂತೆ ತನ್ನ ಬಾಯಿಯನ್ನು ಆಡಿಸುತ್ತಾ ಬಹು ಗುಪ್ತದಲ್ಲಿ ಒಬ್ಬೊಬ್ಬನ ಬಾಯಿಯಲ್ಲಿ ಒಂದೊಂದು ಕಡ್ಡಿಯನ್ನು ಹಾಕಿ ಬಿಟ್ಟು, "ಸುಮ್ಮಗಿರ್ರಿ! ಅಲ್ಲಾಡ ಬೇಡಿರಿ! ಹತ್ತು ನಿಮಿಷ ತಡೆಯಿರಿ!" ಎಂಥೇಳಿ, ಕೈಯಲ್ಲಿ ಘಡಿಯಾರವನ್ನು ಹಿಡುಕೊಂಡು, ಎಲ್ಲವರನ್ನು ಕಣ್ಣು ಹೊಡದು ನೋಡುತ್ತಿದ್ದನು. ಅವರೆಲ್ಲರು ಕೂತ ಬಗೆಯನ್ನು ನೋಡಿದವನಿಗೆ ನೆಗಾಡದೆ ತನ್ನ ಮುಖಭಾವವನ್ನು ಗಾಂಭೀರ್ಯದಲ್ಲಿ ಇರಿಸಿ ಕೊಂಡುಳಿಯಲಿಕ್ಕೆ ಪ್ರಯಾಸವಾಯಿತು; ಆದರೂ ಅವನು ನೆಗಾಡದೆ ಅವರನ್ನು ನೋಡುತ್ತಾ ನೋಡುತ್ತಾ ಇರುವಲ್ಲಿ ಆ ಗೃಹಸ್ಥನ ಆಳು ಮಗನೊಬ್ಬ ಶೆಕೆಗೋ? ಛಳಿಗೋ? ಕಂಬಳಿಯನ್ನು ಹೊದ್ದು ಕೊಳ್ಳ ಬೇಕೆಂಬುವ ಹಾಗೆ ಮಾತ್ರ ವಲ್ಲಾ, ಶೂಲಕ್ಕೆ ಬಿದ್ದ ಹಾಗೆಯೂ ಆಗಿ ಹೋಗಲಾಗಿ, ಅವನು ಇವನನ್ನೇ ಕಣ್ಣೂರಿ ನೋಡುವವನಾದನು. ಅವನ ದೃಷ್ಟಿಯ ಬಲಕ್ಕೆ ಆ ಆಳುಮಗನ ಮೋರೆ ತಗ್ಗಿ ಹೋಗಿ, ಮೈಯೆಲ್ಲಾ ಬೆವರಾಯಿತು. ಒಂಭತ್ತು ನಿಮಿಷವು ಆದಾಗ ಅವನು—"ಈಗ ಒಂಭತ್ತು ನಿಮಿಷವಾಯಿತು; ಇನ್ನೊಂದು ನಿಮಿಷ ತಡೆಯಿರಿ! ಗುಟ್ಟು ಬೇಗ ಶಿಕ್ಕೀತು!" ಎಂಥೇಳಿ, ಆ ಆಳನ್ನು ಮತ್ತೂ ನೋಡಲು, ಆಳಿನ ಮನಸ್ಸಿನಲ್ಲಿ ಕಳವಳವು ಹೆಚ್ಚಿತು. ಹೆಚ್ಚಿದ ಕಳವಳದಿಂದ ತನ್ನ ಬಾಯಿಯಲ್ಲಿಯ ಕಡ್ಡಿ ಉದ್ದಕ್ಕೆ ಬೆಳದು ಹೋಗುತ್ತದೆಂಬ ಭಾವವೂ ಅವನಲ್ಲಿ ಹುಟ್ಟಿತು. ಈ ಭಾವವು ಹುಟ್ಟಲು, ಅವನು ತಾನು ಶಿಕ್ಕ ಬಾರದೆಂದು ಕಡ್ಡಿಯ ಒಂದು ತುದಿಯನ್ನು ಹಲ್ಲಿನಿಂದ ಕಡಿದು ಬಿಟ್ಟನು. ಆಳಿನ ಬಾಯಿ ಒಂದಿಷ್ಟು ಆಡಿದ್ದು ಬಹು ಜಾಗ್ರತೆಯಾಗಿ ನೋಡಿದವನಿಗೆ ಕಂಡು ತಿಳಿದ್ದಲ್ಲದೆ, ಕಡ್ಡಿಯನ್ನು ಕಡಿದ ಸದ್ದು ಸಹ ಅವನ ಕಿವಿಗೆ ಕೇಳಿದ್ದರಿಂದ ಅವನು—"ಇವ ಕಳ್ಳನೇ ಸೈ!" ಎಂದು ತನ್ನಲ್ಲಿ ನಿಶ್ಚೈಸಿ ಕೊಂಡನು. ಹತ್ತು ನಿಮಿಷವಾದಾಗ ಅವನು—"ಈಗ ಎಲ್ಲರು ಬಾಯಿಯನ್ನು ತೆರೆದು, ಕಡ್ಡಿಯನ್ನು ತೆಗೆದು ನನ್ನ ಕೈಯಲ್ಲಿ ಕೊಡ ಬೇಕು!" ಎಂದು ಅಪ್ಪಣೆ ಕೊಟ್ಟಲ್ಲಿ ಎಲ್ಲವರು ಆ ಪ್ರಕಾರವಾಗಿ ಮಾಡಿ, ತಮ್ಮ ತಮ್ಮ ಬಾಯಿಯಲ್ಲಿದ್ದ ಕಡ್ಡಿಯನ್ನು ಅವನ ಕೈಯಲ್ಲಿ ಕೊಟ್ಟು ಬಿಟ್ಟಾಗ, ಆ ಆಳಿನ ಕಡ್ಡಿ ಎಲ್ಲವರದಕ್ಕಿಂತ ಸುಮಾರು ಒಂದು ಕಾಲು ಅಂಗುಲದಷ್ಟು ಗಿಡ್ಡವಾಗಿ ಹೋಗಿತ್ತು. ಅದನ್ನು ಅವನು ನೋಡಿ, ಎಲ್ಲವರಿಗೆ, ಆ ಆಳಿಗೂ, ತೋರಿಸಿ, ಹೇಳಿದ್ದೇನಂದರೆ: "ತೋಡಿದ ಭಾವಿಗೆ ಜಲವೇ ಸಾಕ್ಷಿ; ಮಾಡಿದ ಪಾಪಕ್ಕೆ ಮನವೇ ಸಾಕ್ಷಿ"—ಹೌದಲ್ಲವೋ? ಮತ್ತು ಆ ಆಳಿಗೆ ಪ್ರತ್ಯೇಕವಾಗಿ—ಅಂಗೈ ಹುಣ್ಣಿಗೆ ಕನ್ನಡಿ ಬೇಕೇ?" ಎಂಥೇಳಿದ್ದಕ್ಕೆ ಇವನು ತನ್ನ ಕಳ್ಳತನವನ್ನು ಮಾಜಲಾರದೆ, ಬಹಳ ನಾಚಿ ಕೊಂಡು, ಆ ಮನೆಯನ್ನು ಬಿಟ್ಟು, ಪರ ಊರಿಗೆ ಹೊರಟು ಹೋದನು.—ಓಡಿಸುವವರು ಇಲ್ಲದಿರುವಾಗಾದರೂ ಕಳ್ಳರು ಓಡುವದುಂಟು.

ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?

(103ನೇ ಪಾನಿನಿಂದ ಮುಂದೆ.)

ಕೊಯಿಲರನ ಮನಃಸ್ಥಿತಿ ಆ ಪ್ರಕಾರವಾಗಿ ಬೇರೆ ಆಗುತ್ತಾ ಬರಲಾಗಿ, ಅವನ ಮನಸ್ಸಿನಲ್ಲಿ ತಾನು ಪರದೇಶದಲ್ಲಿ ನಿಲ್ಲದೆ, ತಿರಿಗಿ ಊರಿಗೆ ಹೋಗಿ, ತಾನು ಅಲ್ಲಿ ಮಾಡಿದ ಅನ್ಯಾಯಕ್ಕೆ ಸಾಧ್ಯವಾದಷ್ಟು ಪ್ರಾಯಶ್ಚಿತ್ತ ಸಲ್ಲಿಸ ಬೇಕೆಂಬ ಭಾವನೆ ಹುಟ್ಟಿ ಖಚಿತವಾಯಿತು. ಆದರೆ ಆ ಭಾವ

ನೆಯ ಜೊತೆಯಲ್ಲಿ ಚಿಂತೆಗಳೂ ಸಂಶಯಗಳೂ ಭಯಗಳೂ ಒಂದರ ಮೇಲೊಂದು ಅವನ ಮನಸ್ಸಿನಲ್ಲಿ ಹುಟ್ಟಿ ಬಹು ಕಳವಳಕ್ಕೆ ಕಾರಣವಾದವು. "ನನ್ನ ಮೊದಲನೇ ಅನ್ಯಾಯದಿಂದ ನನಗೆಷ್ಟೋ ಅರಿಷ್ಟವಾಗಿ, ಎಷ್ಟೋ ಬಾಧೆ ಬಂತಲ್ಲಕಟಾ! ನನ್ನ ಹೆಂಡತಿ ಮಕ್ಕಳು ಸಹ ನನ್ನ ದೆಶೆಯಿಂದ ಅರಿಷ್ಟರಾಗಿ, ನನ್ನನ್ನು ಶಪಿಸುತ್ತಾ ದಿಕ್ಕಿಲ್ಲದೆ ಸತ್ತು ಹೋದರೇನೋ? ಅಕಟಕಟಾ! ನಾನು ಸುಳ್ಳು ಪ್ರಮಾಣ ಮಾಡಿ ಸುಲುಕೊಂಡ ಹಳ್ಳಿಯವನು ಇನ್ನು ಜೀವದಿಂದಿದ್ಧಾನೇನೋ? ನಾನು ಅಪಹರಿಸಿ ಕೊಂಡು ತಿಂದ ಹಣವನ್ನು ವಾಪಸು ಮಾಡಲಿಕ್ಕೆ ಕೂಡುವ ತನಕ ಬದುಕುವನೇನೋ?" ಎಂಬದಾಗಿ ಮರುಗುತ್ತಿದ್ದನು. ಆದರೆ ಎಲ್ಲಾ ಕಳವಳದಲ್ಲಿ ಒಂದು ವಚನವು ಅವನಿಗೆ ಕೆಸರಿನಲ್ಲಿ ನೆಟ್ಟ ಸ್ತಂಭದಂತಾಗಿ ಸ್ಥಿರತ್ವಕ್ಕೆ ಆಧಾರವಾಯಿತು; ಯಾವ ವಚನವಂದರೆ: "ತನ್ನ ಅಪರಾಧವನ್ನು ಅಲ್ಲಗಳೆಯುವವನಿಗೆ ಒಳ್ಳೇದಾಗದು; ಆದರೆ ಅದನ್ನು ಅರಿಕೆ ಮಾಡಿ, ಪಾಪವನ್ನು ತೊಲಗಿ ಬಿಡುವವನು ಕ್ಷಮಾದಯವನ್ನು ಪಡಕೊಳ್ಳುವನು."

ಕೊಯಿಲರ್ ತನ್ನೂರಿಗೆ ತಿರಿಗಿ ಹೋಗುವ ಪ್ರಯಾಣಕ್ಕೆ ಸಿದ್ಧ ಮಾಡುವವನಾದನು. ಮತ್ತು ತಾನು ದುಡಿದು ಕೊಂಡು ಉಳಿಸಿದ್ದು ದಾರೀ ಖರ್ಚಿಗೆ ಸಾಲುವದಕ್ಕಲ್ಲದೆ ಊರಿಗೆ ತಕ್ಕಷ್ಟು ಗಂಟು ಕಟ್ಟಿ ಕೊಂಡು ಶೇರಲಿಕ್ಕೆ ಕೂಡುವ ಹಾಗೆಯೂ ಅಂದಿನಿಂದ ಎರಡಷ್ಟು ಕೆಲಸ ಮಾಡುವವನಾದನು. ತನ್ನ ಒಳ್ಳೇ ಯಜಮಾನ ಯಜಮಾನಿಯರನ್ನು ಬಿಟ್ಟು ಬಿಡುವದು ಮಾತ್ರವೇ ಅವನಿಗೆ ಬಹು ಕಷ್ಟವೆಂದು ಕಾಣುವದಾಯಿತು, ಯಾಕಂದರೆ ಅವರು ತನಗೆ ಮಾಡಿದ ಬೇರೆ ಬೇರೆ ಉಪಕಾರಗಳನ್ನು ಚನ್ನಾಗಿ ತಿಳಿದು ನೆನಸಿ ಕೊಳ್ಳುವವನಾಗಿದ್ದನು. ಮುಖ್ಯವಾಗಿ ತಾನು ಪರಿಣಾಮಕ್ಕೆ ಬಂದದು ದೇವರ ಕೃಪೆಯಿಂದ ಹ್ಯಾಗೋ ಹಾಗೆ ಅವರ ಸಹಾಯದಿಂದಲೂ ಆಯಿತೆಂದು ಚನ್ನಾಗಿ ಅರಿತಿದ್ದನು. ನನ್ನೂರಿಗೆ ಹೋಗುತ್ತೇನೆಂಬ ಅವನ ಮಾತಿಗೆ ಯಜಮಾನ ಯಜಮಾನಿಯರು ಸಹ ಬಹು ದುಃಖ ಪಟ್ಟರು, ಯಾಕಂದರೆ ಅವನು ಕೆಲಸಕ್ಕೆ ಭಾರಿ ಮನಸ್ಸು ಕೊಡುವವನೂ ತಮ್ಮ ಮುಖಾಂತರ ಮಾನಸಾಂತರ ಪಟ್ಟು, ದೇವರ ಸಂಸರ್ಗದಲ್ಲಿ ನಡಕೊಳ್ಳ ಬೇಕೆಂಬುವ ಭಕ್ತಿಸಾಧನೆ ಮಾಡುವವನೂ ಆದ್ದರಿಂದ ಅವರಿಗೆ ಅವನ ಮೇಲೆ ಒಳ್ಳೇ ಪ್ರೀತಿಭಾವವು ಹುಟ್ಟಿ ಹೋಗಿತ್ತು. ಅವನು ಅಪ್ಪಣೆ ತೆಗೆದು ಕೊಂಡು ಹೊರಡುವಾಗ ಯಜಮಾನನು ಸಂಬಳವನ್ನಲ್ಲದೆ ಒಂದು ಪೌಂಡು (ಹತ್ತು ರೂಪಾಯಿ) ಇನಾಮು ಸಹ ಕೈಯಲ್ಲಿ ಕೊಟ್ಟನು. ಆ ಇನಾಮ್ ತೆಗೆದು ಕೊಳ್ಳಲಿಕ್ಕೆ ಅವನಿಗೆ ಲಜ್ಜೆಯಾಗಿ, ಇಷ್ಟು ಉಪಕಾರಕ್ಕೆ ತಾನು ಯೋಗ್ಯನಲ್ಲ ಎಂದು ಹೇಳಿದ್ದಕ್ಕೆ ಯಜಮಾನನು ಅಂದದೇನಂದರೆ: "ನಾವೆಲ್ಲರು ದೇವರ ದಯಕ್ಕೆ ಅಯೋಗ್ಯರು, ಹೌದು; ಆದರೆ ನಾನು ಕೊಟ್ಟದನ್ನು ಹ್ಯಾಗೂ ತೆಗೆದು ಕೊಳ್ಳ ಬೇಕು. ಇನ್ನು ಮುಂದೆ ಯಾವಾಗಾದರೂ ಅದರಿಂದ ನಿನಗೆ ಉಪಕಾರವಾಗಿ, ನಮ್ಮನ್ನು ನೆನಸಿ ಕೊಳ್ಳಲಿಕ್ಕೆ ಆಸ್ಪದವಾದೀತು." ಯಜಮಾನನು ಕೊಯಿಲರನನ್ನು ಹಡಗಕ್ಕೆ ಸಾಗ ಕಳುಹಿಸಿದನು. ಹಡಗದಲ್ಲಿ ಕೊಯಿಲರ್ ಇನ್ನೊಮ್ಮೆ ಯಜಮಾನ ಯಜಮಾನಿಯರ ಅನೇಕ ಉಪಕಾರಗಳನ್ನು ಜ್ಞಾಪಕ ಮಾಡಿ ಕೊಂಡನು. ಇಬ್ಬರು ಒಬ್ಬರಿಗೊಬ್ಬರು ಸ್ವಸ್ತಿವಚನವನ್ನು ಹೇಳಿದ ಮೇಲೆ ಹಡಗವು ಒಂದು ಅರ್ಧ ತಾಸು ತಡೆಯಿತು. ಅದರ ಮೇಲೆ ಘಂಟೆ ಹೊಡೆಯಲು, ಖಲಾಶಿಗಳು ಲಂಗರೆತ್ತಿ, ಪಠಗಳನ್ನು ಏರಿಸುತ್ತಲೇ ಹಡಗವು ವಿಲಾಯತಿಗೆ ತೆರಳಿತು. ಕೊಯಿಲರ್ ತಾನು ಬಿಟ್ಟು ಬಂದ ಪರದೇಶದ ಕಡೆಗೆ ಒಮ್ಮೆಯಾದರೂ ಕಣ್ಣು ಮಾಡಿ ನೋಡಲಿಕ್ಕೆ ಮನಸ್ಸಾಗದೆ, ಸ್ವದೇಶದ ಕಡೆಗೆ ಮಾತ್ರವೇ ಮುಖ ಮಾಡಿ ಕೊಂಡು ನೋಡುವವನಾಗಿ, "ನಾನು ಮುಟ್ಟುವಾಗ ನನ್ನವರೂ ಆ ಹಳ್ಳಿಯವನೂ ಇನ್ನು ಜೀವದಿಂದಿದ್ದಾರೋ?" ಎಂಬುವ ಒಂದೇ ಚಿಂತೆಯನ್ನು ಮಾಡುತ್ತಿದ್ದನು. ಮತ್ತು ತಾನು ಬೇಗ ಮುಟ್ಟುವಂತೆ ಹಡಗವು

ಚೆನ್ನಾಗಿ ಓಡಲಿ! ಎಂದು ಅಪೇಕ್ಷೆಯುಳ್ಳವನಾಗಿದ್ದನು. ಆದರೆ ಸಮುದ್ರಪ್ರಯಾಣದಲ್ಲಿ ಕಷ್ಟವಸರ ಇದ್ದವರಾದರೂ ತಾಳ್ಮೆ ಪಾಠವನ್ನು ಕಲಿತುಕೋ ಬೇಕು. ಕೊಯಿಲರ್ ತಾನು ಹಡಗದಲ್ಲಿದ್ದ ದಿವಸಗಳ ಲೆಖ್ಖವನ್ನು ತಪ್ಪದೆ ಮಾಡುತ್ತಾ ಬರುವವನಾಗಿ, ಸುಮಾರು ಅರ್ಧ ಸಮಯವು ಈಗ ದಾಟಿತು ಎಂದು ಎಣಿಕೆಯಾದಾಗ ಬಹಳ ಸಂತೋಷ ಪಟ್ಟನು; ಆದರೆ ಅಂದೇ ಫಕ್ಕನೆ ದೊಡ್ಡ ಬಿರುಘಾಳಿ ಎದ್ದದರಿಂದ ಮುಳುಗಿ ಹೋಗುವ ಭಯಕ್ಕೆ ಬಹಳ ಕಾರಣವಾಯಿತು. ಆ ಸಮಯ ದಲ್ಲಿ ಅವನು ದೇವರಿಗೆ ಬಹಳವಾಗಿ ಪ್ರಾರ್ಥಿಸಿ, ಬಿರುಘಾಳಿ ನಿಂತು ಹೋಗಿ, ತಾನು ಉಳಿದು, ತನ್ನ ಋಣಾದಿಗಳನ್ನು ತೀರಿಸಲಿಕ್ಕೆ ಕೂಡುವ ಹಾಗೆ ದಯ ಪಾಲಿಸ ಬೇಕೆಂಬದಾಗಿ ಬಹು ಚುರು ಕಾಗಿ ಬೇಡಿ ಕೊಳ್ಳುತ್ತಿದ್ದನು. ಬಿರುಘಾಳಿ ಅಣಗಿ ಸಮುದ್ರವು ತಿರಿಗಿ ಶಾಂತವಾದ ಮೇಲೆ ಹಡಗವು ದಿಕ್ಕಿಗೆ ತಪ್ಪಿ ಹೋಯಿತೆಂದು ತಿಳಿದು ಬಂದದರಿಂದ ತಾಳ್ಮೆ ಎಂಬ ಕವಚವನ್ನು ಮತ್ತೂ ಧರಿಸಿ ಕೊಳ್ಳ ಲವಶ್ಯವಾಯಿತು. ಆಹಾರವು ಸಹ ಖರ್ಚಾಗಿ ಮುಗಿಯಲಿಕ್ಕಾದ್ದರಿಂದ ಹಡಗದವರೆಲ್ಲರಿಗೆ ಬೇಸರ ವೂ ಮುಟ್ಟುವ ಹಂಬಲವೂ ಅಧಿಕವಾಯಿತು. ಬಹಳ ಕಳವಳದಲ್ಲಿ ಸುಮಾರು ದಿವಸ ಗತಿಸಿ ಹೋದ ಮೇಲೆ ಒಂದಾನೊಂದು ದಿನ ಪ್ರಾತಃಕಾಲದಲ್ಲಿ "ಭೂಮಿ! ಭೂಮಿ!" ಎಂಬುವ ಕೂಗು ಹಡಗದಲ್ಲೆಲ್ಲಾ ಕೇಳುವಂಥಾದಾಯಿತು. ಆ ಕೂಗಿಗೆ ಹಡಗದಲ್ಲಿದ್ದವರೆಲ್ಲರು ಮಾಳಿಗೆಗೆ ಓಡಿ, ಭೂಮಿಯ ಕಡೆಗೆ ನೋಡುತ್ತಾ ಬ್ರೇಮೆನ್ ಎಂಬ ಪಟ್ಣದ ರೇವಿನಲ್ಲಿ ಶೇರುವ ಘಳಿಗೆಯನ್ನು ಕಾದು ಕೊಳ್ಳುತ್ತಾ ನಿಂತರು. ಕಡೆಗೆ ಆ ರೇವನ್ನು ಶೇರಿ ಎಲ್ಲರು ಮುಟ್ಟಿದ್ದಕ್ಕೆ ಮಹಾ ಸಂತೋಷ ಪಟ್ಟರು. ಕೆಲವರಾದರೂ ದೇವರನ್ನು ಕೃತಜ್ಞರಾಗಿ ತಮ್ಮ ಮನಸ್ಸಿನಲ್ಲಿ ಕೊಂಡಾಡಿದರು. ಅವರಲ್ಲಿ ಕೊಯಿ ಲರ್ ಸಹ ಒಬ್ಬನಾಗಿ ಹಡಗದಿಂದಿಳಿದು, ಮೊಣಕಾಲೂರಿ ಕೊಂಡು, ತಾನು ಪಾಪ ಮಾಡಿ ಬಹು ದುಃಖ ಪಡಿಸಿದಂಥಾ, ಆದರೂ ತಪ್ಪಿ ಹೋದ ಕುರಿಯಂತಾದ ತನ್ನನ್ನು ಕೈ ಬಿಡದೆ, ಹುಡುಕಿ, ಕಂಡು ಕೊಂಡು, ಮನೆಗೆ ಹೆಗಲಲ್ಲಿ ಹೊತ್ತು ಕೊಂಡು ಎಂಬ ಹಾಗೆ ತಂಧಾಕಿದಂಥಾ ಒಳ್ಳೇ ಕು ರುಬನಾದ ದೇವರನ್ನು ಪ್ರಾರ್ಥಿಸಿ ಕೊಂಡಾಡಿದನು. ಹಗಲಿರುಳು ಕೈಲಾದಷ್ಟು ತ್ವರೆಯಲ್ಲಿ ತನ್ನೂ ರಿನ ದಾರಿ ಹಿಡಿದು ನಡೆದನು. ಕಡೆಗೆ ರಾತ್ರಿ ವೇಳೆಗೆ ತನ್ನೂರಿಗೆ ಮುಟ್ಟಿ ಶೇರಿದನು. ಅವನು ತನ್ನ ಮನಸ್ಸನ್ನು ಮಾತ್ರ ಕೇಳಿ ನಡದು ಕೊಂಡದಾದರೆ, ನೆಟ್ಟಗೆ ತನ್ನ ಮನೆಗೆ ಹೋಗುತ್ತಿದ್ದನು; ಆದರೆ ಅದಾಗದು ಎಂತ ಅವನ ಬುದ್ಧಿಗೆ ಕಂಡದರಿಂದ ಅವನು ತಾನು ನೆನಸಿದ್ದು ಆಗದ ಹಾಗೆ ಹೆಂಡತಿಯ ದೆಶೆಯಿಂದ ಅಭ್ಯಂತರವಾದೀತೆಂದು ಭಯ ಪಟ್ಟು, ತನ್ನ ಮನೆಗೆ ಹೋಗದೆ, ಬೋಧ ಕನ ಮನೆಗೆ ಹೋದನು. ತನ್ನ ಹೊರೆ ತನಗೆ ತಪ್ಪಿಸ ಬೇಕೆಂಬ ಒಂದೇ ಯೋಚನೆಯಲ್ಲದೆ ರಾತ್ರಿ ವೇಳೆ ಭೇಟಿಗೆ ತಕ್ಕದೋ? ಏನೋ? ಎಂಬ ಯೋಚನೆಯಾಗಲಿ ಇತರವಾದೊಂದಾಗಲಿ ಅವನ ಮನಸ್ಸಿಗೆ ಹತ್ತಲೇ ಇಲ್ಲಾ. ಆದರೆ ಕೊಯಿಲರ್ ರಾತ್ರೀ ಹೊತ್ತಿಗೆ ಬಂದಾಗ್ಯೂ ಬೋಧಕನು ಅವ ನಿಗೆ ಬಾಗಲನ್ನು ತೆಗೆದು, ಆಸನ ಕೊಟ್ಟು, ಬಂದ ನಿಮಿತ್ತವನ್ನು ತಿಳುಕೊಳ್ಳುವ ಬಗ್ಯೆ ಪ್ರಶ್ನೆ ಹಾಕಿ ಕೇಳಿದನು. ಕೊಯಿಲರ್ ತನ್ನ ಹೆಸರು ಹೇಳಿ, ಮಾತಾಡ ತೊಡಗುತ್ತಲೇ ಬೋಧಕನು ಅವನ ಗುರ್ತು ಹಿಡಿದು, ಮಹಾ ಆಶ್ಚರ್ಯ ಪಡಲು, ಅವನು ತಾನು ತಿರಿಗಿ ಬಂದ ನಿಮಿತ್ತವನ್ನು ತಿಳಿಸಿ, ಸುಳ್ಳು ಪ್ರಮಾಣ ಮಾಡಿದ ಪಾಪವನ್ನು ಅರಿಕೆ ಮಾಡಿದನು. ಈ ಅರಿಕೇ ಮೇಲೆ ಬೋಧಕನು ಅಂಥಾ ಮಹಾಪರಾಧ ಮಾಡಿದ ಪಾಪಿಗಳಿಗೆ ಸತ್ಯವೇದದಲ್ಲಿರುವ ಭಯದ ವಾಕ್ಯಗಳನ್ನು ತಿಳಿಸಿ, ಬಹಳ ಗಂಭೀರವಾಗಿ ಎಚ್ಚರಿಸಿ ಬುದ್ಧಿ ಹೇಳಿದನು. ಆದರೆ ಕೊಯಿಲರನ ಮನಸ್ತಾಪವನ್ನು ನೋಡಿ, ಸುವಾರ್ತೆಯಲ್ಲಿರುವ ಆದರಣಾವಾಕ್ಯಗಳನ್ನೂ ಅಭಯಗಳನ್ನೂ ಹೇಳಿ ತಿಳಿಸಿದನು. ಬಳಿಕ ಕೊಯಿಲರ್ ತಾನು ಸರಕಾರಕ್ಕೆ ಹೋಗಿ, ಸುಳ್ಳುಪ್ರಮಾಣ ಮಾಡಿದ ಪಾಪವನ್ನು ಅರಿಕೆ

ಮಾಡಿ, ಆದಕ್ಕೆ ಕಾನೂನಿನಲ್ಲಿ ವಿಧಿಸಿರುವ ಶಿಕ್ಷೆಯನ್ನು ತಾಳುತ್ತೇನೆಂದು ಹೇಳಿದ್ದಕ್ಕೆ ಬೋಧಕನು ಒಳ್ಳೇದೆಂದು ಒಡಂಬಟ್ಟನು.

ಮರು ದಿನದ ಬೆಳಿಗ್ಯೆ ಕೊಯಿಲರ್ ತಾಲೂಕು ಕಚೇರಿಗೆ ಹೋಗಿ, ಕಚೇರಿಯವರು ಬರುವ ತನಕ ಬಾಗಲಲ್ಲಿ ಕಾದು ಕೊಳ್ಳುವವನಾದನು. ಕಚೇರಿ ಶುರುವಾಗುವ ಹೊತ್ತಿಗೆ ಪ್ಯಾದೆಗಳೂ ಗುಮಾಸ್ತರೂ ಮೊದಲಾದ ನೌಕರರೂ ಕಡೆಯಲ್ಲಿ ತಹಶಿಲದಾರನೂ ಬಂದರು. ಈತನು ಬರಲು ಕೊಯಿಲರ್ ಅವನನ್ನು ಎದುರುಗೊಂಡು, ತನಗೊಂದು ಅರಿಕೆಯುಂಟು, ಅದನ್ನು ದಯ ಮಾಡಿ ಲಾಲಿಸಿ ಬರದಿಟ್ಟು ಕೊಳ್ಳ ಬೇಕೆಂತ ಬಿನ್ನವಿಸಿ ಕೊಂಡನು. ತಹಶಿಲದಾರ ಮೇಜಿನ ಬಳಿಯಲ್ಲಿ ಕುರ್ಚಿಯ ಮೇಲೆ ಕೂತು ಕೊಂಡಾಗ, ಕೊಯಿಲರ್ ತಾನು ಮೂರು ವರುಷಗಳ ಹಿಂದೆ ಅನ್ಯಾಯದ ಕೈಫೇತು ಹಾಕಿ, ಸುಳ್ಳು ಪ್ರಮಾಣ ಸಹ ಮಾಡಿದ್ದನ್ನು ತಿಳಿಸಿದನು. ಈ ಅರಿಕೇ ಮೇಲೆ ತಹಶಿಲದಾರನು ಅವನನ್ನು ಕಣ್ಣೂರಿ ನೋಡಿದಾಗ, ಅವನ ಗುರ್ತು ಹಿಡಿದು, ಆ ವ್ಯವಹಾರವನ್ನು ನೆನಪು ಮಾಡಿ ಕೊಂಡನು. ಮತ್ತು ಬಹು ಗಂಭೀರವಾಗಿ—"ಆ ಸಂಗತಿಯೆಲ್ಲವು ನಿನ್ನೇ ಆದ ಹಾಗೆ ನನ್ನ ನೆನಪಿಗೆ ತೋರುತ್ತದೆ; ಇಲ್ಲಿ (ಕೊಯಿಲರ್ ಅಂದು ನಿಂತ ಜಾಗವನ್ನು ಬೆರಳು ತೋರಿಸಿ), ಇಲ್ಲಿ ನೀನು ನಿಂತು ಕೊಂಡಿದ್ದಿ. ಸೀಸ್ ಎಂಬ ಹಳ್ಳಿಯವನು ಕೈಗಳನ್ನುಜೋಡಿಸಿ ಕೊಂಡು, ಆಕಾಶಕ್ಕೆ ಕಣ್ಣೆತ್ತಿ ನೋಡಿದ್ದು ನನಗೆ ಚನ್ನಾಗಿ ನೆನಪಾಗುತ್ತದೆ. ಈ ಕೈಫೇತು ಅನ್ಯಾಯದ್ದೇ, ಈ ಪ್ರಮಾಣವು ಸುಳ್ಳೇ ಎಂಬ ಬರಹವು ನಿನ್ನ ಮುಖದಲ್ಲಿ ಇದ್ದ ಹಾಗೆ ನನಗೆ ಆವಾಗಲೇ ಕಂಡಿತು. ನಿನ್ನ ಅನ್ಯಾಯಕ್ಕೂ ಮಾತಿಗೂ ನಿನ್ನ ಮನಸ್ಸಾಕ್ಷಿ ಒಡಂಬಡದೆ, ನಿನಗೆ ವಿರೋಧವಾಗಿ ಎದ್ದು ತಡಿಸಿದ್ದು ಪ್ರತ್ಯಕ್ಷವಾಗಿ ಕಂಡಿತು. ಅಂದು ಅಂಥಾ ಪಾಪಕ್ಕೂ ಬಾಧೆಗೂ ಗುರಿಯಾಗಲಿಕ್ಕೆ ನಿನಗೆ ಭಯವಾಗಲಿಲ್ಲವೋ?" ಎಂಧೇಳಿದ್ದಕ್ಕೆ ಕೊಯಿಲರ್ ಉತ್ತರವನ್ನು ಹೇಳಲಾರದೆ, ನಿಟ್ಟುಸುರಿಟ್ಟನು. ಕಡೆಗೆ ತಹಶಿಲದಾರನು—"ಇನ್ನೇನಾದರೂ ಅರಿಕೆಯುಂಟೋ?" ಎಂದು ಕೇಳಿದ್ದಕ್ಕೆ ಕೊಯಿಲರ್ ಪ್ರತ್ಯುತ್ತರವಾಗಿ—"ತಕ್ಕ ಶಿಕ್ಷೆಯಾಗಲಿ!" ಎಂಧೇಳಿದನು. ಆದಕ್ಕೆ ತಹಶಿಲದಾರನು ಅಂದದೇನಂದರೆ: "ನೀನು ಶಿಕ್ಷೆಯನ್ನು ತಾಳಿದರೆ, ನಿನ್ನ ಪಾಪವು ಪರಿಹಾರವಾಯಿತೆಂದು ನೆನಸಿ ಕೊಳ್ಳ ಬೇಡಾ. ಆದರೆ ಶಿಕ್ಷೆಯನ್ನು ತಾಳಿ ಕೊಳ್ಳುವಂಥದು ಒಂದು ಪರಿಯ ಪ್ರಾಯಶ್ಚಿತ್ತವಾಗಿ ವಿಹಿತವಾಗಿದೆ. ನೀನು ಈಗ ಹೋಗ ಬಹುದು. ಈ ವಿಷಯದಲ್ಲಿ ನಾನು ಆಲೋಚನೆ ಮಾಡಿ, ರಿಪೋರ್ಟ್ ಮಾಡುತ್ತೇನೆ. ನನ್ನ ರಿಪೋರ್ಟಿನ ಮೇಲೆ ತೀರ್ಪು ಆಗಿ, ನಿನಗೆ ಶಿಕ್ಷೆಯಾಗುವದು."

ಅಂಥ ಅಪ್ಪಣೆಯಾದೀತು ಎಂದು ಕೊಯಿಲರ್ ಮೊದಲು ನೆನಸಿ ಇದ್ದನು; ಆದರೂ ತಹಶಿಲದಾರನ ಮಾತು ಅವನಿಗೆ ಒಂದು ಸಿಡಿಲಿನಂತೆ ತಾಗಿ ಬಡಿಯಿತು. "ಹುಕುಮ್ ಬರುವ ತನಕ ನಾನು ಹೋಗಿ, ನನ್ನ ಮನೆಯಲ್ಲಿ ಕುಂದ್ರ ಬಹುದೋ?" ಎಂದು ಕೊಯಿಲರ್ ಬಹು ವಿನಯವಾಗಿ ಕೇಳಿದ್ದಕ್ಕೆ ತಹಶಿಲದಾರನು—"ಬಹುದು, ಆದರೆ ಊರನ್ನು ಬಿಟ್ಟು ಹೋಗ ಬಾರದು" ಎಂಧೇಳಿದನು. ಕೊಯಿಲರ್ ಕಚೇರಿಯಿಂದ ಹೊರಟು, ತನ್ನ ಮನೆಗೆ ನಡೆದು ಹೋಗುವ ದಾರಿಯಲ್ಲಿ ದೇವರಿಗೆ ಪ್ರಾರ್ಥಿಸಿ ಬಿನ್ನವಿಸಿದ್ದೇನಂದರೆ: "ದೇವರೇ! ನಾನು ಈಗ ಮಾಡಿ ಬಂದ ಅರಿಕೆಗೆ ನೀನು ನನಗೆ ಧೈರ್ಯ ಕೊಟ್ಟು ಅನುಕೂಲಿಸಿದ್ದಕ್ಕಾಗಿ ನಿನಗೆ ಸ್ತೋತ್ರವಾಗಲಿ! ಕಚೇರಿಗೆ ಹೋಗಿ ಬರಲಿಕ್ಕೆ ನನಗೆ ಪ್ರಯಾಸವಾಯಿತು; ಆದರೆ ಈಗ ನನ್ನ ಮನೆಗೆ, ನನ್ನ ಹೆಂಡತಿ ಮಕ್ಕಳು ಇವರ ಬಳಿಗೆ, ಹೋಗುವದು ಹತ್ತು ಪಾಲಷ್ಟು ಪ್ರಯಾಸವೇ. ಅವರ ಎದುರಿಗೆ ನಾನು ಹ್ಯಾಗೆ ಹೋಗಿ ನಿಲ್ಲಲಿ? ನನ್ನವರಲ್ಲಿ ನನಗೆ ಆಸ್ಪದ ದಯ ಪಾಲಿಸು! ನನಗೆ ಕೈ ಕೊಡು! ಹೆಚ್ಚಿನ ದುಃಖಕ್ಕೆ ಕಾರಣವಾಗದಂತೆ ಅನುಗ್ರಹಿಸು!" (ಮುಂದೆ ಸಾಗಿಸಲ್ಪಡುವದು.)

ವಿವಿಧ ವರ್ತಮಾನಗಳು.

ಹಿಂದುಸ್ಥಾನದಲ್ಲಿ ೯,೫೮,೭೮೦ ಮಂದಿ ಇನ್ನೂ ಸಿಲೋನ್, ಬ್ರಿಟಿಷ ಬರ್ಮ, ಸೀಯಮ್, ಮಲಯು ಅರ್ಧದ್ವೀಪ ಈ ಪ್ರಾಂತಗಳಲ್ಲಿ ೨,೧೩,೮೯೯ ಮಂದಿ ಕಥೋಲಿಕರು ಇದ್ದಾರಂತೆ. ಪ್ರೀಸ್ತರು ೧,೦೮೪ ಮಂದಿ ಇದ್ದಾರೆ. ಈ ವಿಶಾಲವಾದ ಪ್ರದೇಶಕ್ಕೆ ಇಪ್ಪತ್ತು ಮಂದಿ ಬಿಶೊಪರು. ಶಾಲೆಗಳು ೧,೨೨೮; ಶಾಲೆಗಳಲ್ಲಿ ಕಲಿಯುವ ಹುಡುಗರು ೫೩,೩೪೧.

ಮೈಸೂರ ಪ್ರಾಂತದಲ್ಲಿ ಸದ್ಯಾ ಆದ ಖಾನೆಸುಮಾರಿಯಿಂದ ಕಳೆದ ದುಷ್ಕಾಲದಲ್ಲಿ ೧೨,೫೦,೦೦೦ ಜನರು (ಅಂದರೆ ನೂರಕ್ಕೆ ೨೫ರ ಮೇರೆಗೆ) ಮೃತವಾದರೆಂತ ತಿಳಿದು ಬರುತ್ತದೆ.

ಪುಣೆಯಲ್ಲಿ ಒಬ್ಬ ಸ್ತ್ರೀ ಕೆರೊಸೀನ್ ಎಣ್ಣೆಯ ದೀಪದ ಕಾಡಿಗೆ ತೆಗದು ಕೊಂಡು ತನ್ನ ಮಕ್ಕಳ ಕಣ್ಣುಗಳಿಗೆ ಹಚ್ಚಿದಳು; ಅನಂತರ ಆ ಮಕ್ಕಳಿಗೆ ಏನೂ ಕಾಣುವದಿಲ್ಲ ಎಂತ ಕಂಡು ಬಂತು. ಯಾವ ತರದ ಕಾಡಿಗೆಯಾದರೂ ಕಣ್ಣಿಗೆ ಹಚ್ಚುವದು ಮೊದಲೇ ಒಳ್ಳೇದಲ್ಲ. ಹೀಗಿರುತ್ತಾ ತನಗೆ ಗುಣಾವಗುಣ ಗೊತ್ತಿಲ್ಲದ ಎಣ್ಣೆಯ ಕಾಡಿಗೆ ಹಚ್ಚುವದು ಎಷ್ಟು ಕೆಟ್ಟದು! ಆ ಸ್ತ್ರೀಯ ಉದಾಹರಣೆಯಿಂದ ಎಲ್ಲರೂ ಎಚ್ಚರ ತಕ್ಕೊಳ್ಳಬೇಕು; ಆಕೆ ತನ್ನ ಮಕ್ಕಳನ್ನು ಕುರುಡರು ಮಾಡಿ, ಇತರರಿಗೆ ಒಳ್ಳೇ ಬುದ್ಧಿ ಕಲಿಸಿ ಕೊಟ್ಟಳು.

ಬ್ರಹ್ಮಸಮಾಜದವರ ನಾಯಕ ಬಾಬು ಕೇಶವಚಂದ್ರಸೇನನು ತನ್ನ ಹಿರೇ ಮಗಳು ಶ್ರೀಮತಿಸುನೀತಿ ಎಂಬಾಕೆಯನ್ನು ಕುಚ್ ಬೇಹಾರಿನ ಮಹಾರಾಜ ನೃಪೇಂದ್ರನಾರಾಯಣ ಇವರಿಗೆ ಲಗ್ನ ಮಾಡಿ ಕೊಡುವದಕ್ಕೆ ನಿಶ್ಚಯ ಮಾಡಿದ್ದಾನೆ. ಮದುಮಗನೂ ಮದುಮಗಳೂ ಇಬ್ಬರೂ ಎಳೇ ಪ್ರಾಯದವರು. ಬಾಲವಿವಾಹವನ್ನು ಬಹುಶಾ ಖಂಡಿಸಿ, ಬ್ರಹ್ಮರಲ್ಲಿ ಅದು ಆಗ ಬಾರದೆಂತ ನಿರೂಪಿಸಿದ ಈತನು ತಾನೇ ಅಂಥಾ ಕಾರ್ಯದಲ್ಲಿ ಪ್ರವೇಶ ಮಾಡಿದ್ದಕ್ಕೆ ಅನೇಕ ಬ್ರಹ್ಮರು ವೈಮನಸ್ಸುಗೊಂಡು, ಅವನಿಗೆ ಗದ್ದಲ ಹಾಕುತ್ತಿದ್ದಾರೆ. ಅವನು ಅದರ ಕಡೆಗೆ ಲಕ್ಷ್ಯವಿಡುವದಿಲ್ಲ. ಇದರಿಂದ ಆ ಸಮಾಜದಲ್ಲಿ ಭೇದ ಹುಟ್ಟುವ ಚಿನ್ಹ ಕಾಣುತ್ತದೆ.

ಮೈಸೂರಿನಲ್ಲಿಯೂ ಮದ್ರಾಸಿನಲ್ಲಿಯೂ ಸಾಕಷ್ಟು ಪೈರು ಆಗದೆ ಹೋದದರಿಂದ ಇನ್ನೊಂದಾವರ್ತಿ ಕ್ಷಾಮ ಬಾಧೆ ತಟ್ಟುವಂತೆ ಅದೆ. ಸಹಾಯಾರ್ಥಕ ಕೆಲಸಗಳಲಿ ಅನ್ನಾರ್ಥಿಗಳಾದ ಜನರ ಸಂಖ್ಯೆ ಹೆಚ್ಚುತ್ತಲೇ ಅದೆ. ಮತ್ತು ಮದ್ರಾಸಿನ ದುಷ್ಕಾಲದ ಕಮ್ಮಿಟಿಯವರು ಕಲ್ಕತದವರನ್ನು ಸಹಾಯಾರ್ಥವಾಗಿ ಹಣ ಕೊಡಬೇಕೆಂತ ಬೇಡಿ ಕೊಂಡಿದ್ದಾರೆ.

ನಸ್ಸೀಕ ಅಹಮುದನಗರ ಜಿಲ್ಲೆಗಳಲ್ಲಿ ಧಾನ್ಯದವಸ ಬಹಳ ಪ್ರಿಯವೂ ದುರ್ಲಭವೂ ಆದ್ದರಿಂದ ಮುಂಬಾಯಿ ಸರಕಾರದವರು ಆ ಜಿಲ್ಲೆಗಳಲ್ಲಿ ಸಹಾಯಾರ್ಥಕ ಕೆಲಸಗಳನ್ನು ಪ್ರಾರಂಭಿಸಬೇಕೆಂತ ಅಪ್ಪಣೆ ಮಾಡಿದ್ದಾರೆ.

ಅಹಮುದನಗರದ ಜಿಲ್ಲೆಯಲ್ಲಿ ಎಸ್. ಪಿ. ಜಿ. ಸೊಸ್ಯೆಟಿ ಎಂಬ ಮಿಶ್ಯನಿಗೆ ಶೇರಿದ ಕೆಲ ಉಪದೇಶಿಗಳೂ ಇತರ ಕ್ರೈಸ್ತರೂ ರೋಮ ಸಭೆಯನ್ನು ಶೇರಿದರು. ರೋಮನ ಕಥೋಲಿಕ ಬಿಶೋಪನು ಇತ್ತಲಾಗೆ ಆ ಪ್ರಾಂತದಲ್ಲಿ ಸಂಚಾರ ಮಾಡಿದವನಾಗಿ ಆ ಮಿಶ್ಯನಿನ ಕ್ರೈಸ್ತರಿಗೆ ಆಶೆ ತೋರಿಸಿದ್ದರಿಂದ ಅವರು ಅವನ ಸಭೆಗೆ ಹೋಗಿ ಬಿಟ್ಟರು. ಇನ್ನೂ ಅನೇಕ ಮೂರ್ತಿಪೂಜಕರು ಕ್ರೈಸ್ತಧರ್ಮದ ಜ್ಞಾನವೇನೂ ಇಲ್ಲದಂಥವರು ಸ್ನಾನ ಹೊಂದಿದರು. ಈ ಹೊಸಬರು ಅಮೆರಿಕನ್ ಮಿಶ್ಯನಿನ ಕ್ರೈಸ್ತರನ್ನು, ನೀವೂ ರೋಮನ ಸಭೆಗೆ ಬನ್ನಿ, ನಿಮಗೆ ಹಣ ಶಿಕ್ಕುವದು ಎಂತ ಹೇಳಿ ಪುಸಲಾಯಿಸುತ್ತಿದ್ದರಂತೆ.

ಮಧುರೆ ಶೀಮೆಯ ಕಂಬಮ ಊರಲ್ಲಿರುವ ಕ್ರೈಸ್ತ ಸಭೆಯಲ್ಲಿ ಮೂರನೇ ಅಂಶ ಕಳದ ದುಷ್ಕಾಲದಲ್ಲಿ ತೀರಾ ಅನ್ನಕ್ಕೆ ತತ್ವಾರ ಪಡುವವರಾಗಿದ್ದರು. ಈ ಅವಸ್ಥೆಯಲ್ಲಿದ್ದಾಗ್ಯೂ ಅವರು ತಮ್ಮ ಬೋಧಕರ ಖರ್ಚಿಗೆ ಎಂದಿನಂತೆ ಕೊಡುತ್ತಿದ್ದ

ರೆಂತ ತಿಳಿದು ಬರುತ್ತದೆ. ತಮ್ಮ ದುಷ್ಕಾಲದಲ್ಲಿ ಕೊಟ್ಟವರದನ್ನು ದೇವರು ಮಾನ್ಯ ಮಾಡಿದರೆ, ತಮ್ಮ ತತ್ಪರದಿಂದ ಕೊಟ್ಟವರದನ್ನು ಎಷ್ಟು ಹೆಚ್ಚಾಗಿ ಮಾನ್ಯ ಮಾಡುವನು! ಹಿಂದು ದೇಶದ ಸರ್ವ ಕ್ರೈಸ್ತ ಸಭೆಗಳು ಮೇಲೆ ಹೇಳಿದ ರೀತಿಯಲ್ಲಿ ನಡಕೊಳ್ಳುವ ವರೆಗೆ ಅವರಿಗೆ ಪೂರ್ಣ ಆಶೀರ್ವಾದ ಪ್ರಾಪ್ತವಾಗದು.

ಏತದ್ದೇಶಿಯ ಕ್ರೈಸ್ತರ ಶುಭವರ್ತಮಾನ ಪ್ರಸಾರಕ ಸಭೆ ಎಂಬ ಹೆಸರುಳ್ಳ ಒಂದು ಸಭೆ ಸ್ಥಾಪನೆ ಮಾಡ ಬೇಕೆಂತ ಮುಂಬಾಯಿಯ ಕ್ರೈಸ್ತರ ಮನಸ್ಸಿನಲ್ಲಿತ್ತು. ಈ ಉದ್ದಿಶ್ಯ ಮೂರು ತಿಂಗಳ ಹಿಂದೆ ಬೇರೆ ಬೇರೆ ಮಿಶ್ಯನುಗಳ ಸಹೋದರರ ಮಂಡಳಿ ಮುಂಬಾಯಿಯಲ್ಲಿ ನೆರದು ಬಂದು, ಆಲೋಚನೆ ಮಾಡಿ, ಪರದೇಶಗಳ ಕ್ರೈಸ್ತರಿಗೆ ಒಂದು ಪತ್ರ ಕಳುಹಿಸಿ ಕೊಟ್ಟರು. ಆ ಪತ್ರದಲ್ಲಿ ಕಾಣುವಂತೆ ಆ ಸಭೆಯ ಉದ್ದೇಶವೇನಂದರೆ: ೧. ಮುಂಬಾಯಿಯಲ್ಲಿಯ ಮತ್ತು ಪರದೇಶಗಳ ಕ್ರೈಸ್ತ ಸಹೋದರರೊಳಗೆ ಪ್ರೀತಿಯೂ ಒಕ್ಕಟ್ಟೂ ವೃದ್ಧಿಯಾಗುವಂತೆ ಪ್ರಯತ್ನವಿಡ ಬೇಕು. ೨. ಐಕ್ಯಭಾವದಿಂದಲೂ ಸ್ವತಂತ್ರದಿಂದಲೂ ಅಂದರೆ ಅನ್ಯ ರಾಜ್ಯಗಳವರ ಸಹಾಯವಿಲ್ಲದೆ ತಮ್ಮ ದೇಶದ ಬಂಧು ಬಾಂಧವರಿಗೆ ಸುವರ್ತಮಾನ ಸಾರ ಬೇಕು. ೩. ಸ್ವದೇಶಿಯ ಮಿಶ್ಯನು ಸ್ಥಾಪಿಸ ಬೇಕು; ಅದರಲ್ಲಿ ಯಾವ ವಿಧದ ಪಕ್ಷಾಭಿಮಾನವಿರ ಬಾರದು. ಇಂಥಾ ಮಿಶ್ಯನು ಈ ದೇಶದವರಿಗೆ ಸುವರ್ತಮಾನ ಸಾರುವ ಕೆಲಸಕ್ಕೆ ಬಹು ಸಾಧಕವಾಗುವದು.—ಹೀಗೆ ಕ್ರಿಸ್ತನ ಸೇವೆಗೆ ಶ್ರಮ ಮಾಡುವದು ಈ ಸಭೆಯ ಉದ್ದೇಶವಾಗಿರುವದರಿಂದ ಸರ್ವರೂ ಅದರ ಸಭಾಸದರಾಗಿ, ಆ ಸಭೆಯ ಮುಖಾಂತರ ಆಗುವ ಕೆಲಸದ ಖರ್ಚು ಪಾಲು ಹಂಚಿ ಕೊಳ್ಳುವ ಬಗ್ಗೆ ಸಾಮರ್ಥ್ಯಾನುಸಾರ ವಂತಿಗೆ ಕೊಡ ಬೇಕೆಂತ ಅವರು ಬೇಡಿ ಕೊಳ್ಳುತ್ತಾರೆ. ಮೇಲೆ ಹೇಳಿದ ಸಭೆಯು ಪ್ರಸ್ತಾಪ ಜ್ಞಾನೋದಯ ಪತ್ರದಿಂದ ಎತ್ತಿದಂಥಾದು. ಪತ್ರದಲ್ಲಿ ಆ ಸಭೆಯ ವಿಷಯ ಇನ್ನೆರಡು ಸೂಚನೆಗಳು ಹೇಳಿಯವೆ, ಯಾವವಂದರೆ:—ಈ ಸಭೆಯು ಮಾಡಿದ ಆಲೋಚನೆ ಉತ್ತಮವೇ, ಅದು ಮಾಡಿದ ಮೂರು ಉದ್ದೇಶಗಳಲ್ಲಿ ಮೊದಲನೆದು ಸುಲಭವಾದದು, ಯೋಗ್ಯ ರೀತಿಯಿಂದ ಪ್ರಯತ್ನ ಮಾಡಿದರೆ, ದೇವರ ದಯೆಯಿಂದ ಸಿದ್ಧಿಯಾಗುವದು. ಉಳಿದ ಎರಡು ಕೆಲಸಗಳು ಮುಖ್ಯತಾ ಮೂರನೆ ಕಾರ್ಯವು ಬಹು ಅಗತ್ಯವಾದ್ದೇ; ಆದರೆ ಅದಕ್ಕೆ ಅಡಚಣೆಗಳು ಬಹಳ ಅವೆ. ಆದಾಗ್ಯೂ ಸರ್ವ ಅಡಚಣೆಗಳನ್ನು ದೂರ ಮಾಡುವವನು ದೇವರಿದ್ದಾನೆ; ಆತನ ಸಹಾಯವನ್ನು ಆಶ್ರಯಿಸಿ ಪ್ರಯತ್ನ ಮಾಡ ಬೇಕು. ಇಂಥಾ ದೊಡ್ಡ ಕಾರ್ಯಗಳು ಮನುಷ್ಯಸಹಾಯದ ವಿನಹಾ ಆಗುವವುಗಳಲ್ಲಾ; ಆದ್ದರಿಂದ ನಮ್ಮ ಕ್ರೈಸ್ತರು ಅವಶ್ಯವಾಗಿ ಅದಕ್ಕೆ ಸಹಾಯ ಮಾಡ ಬೇಕು. ಯಾರಾದರೂ ವಿರುದ್ಧವಾದ ಆಲೋಚನೆ ಹೇಳಿದರೂ, ಮನಸ್ಸಿಗೆ ತರ ಬಾರದು. ಯಾಕಂದರೆ ನಮ್ಮ ಜನರ ಐಕ್ಯತೆ ಆಗುವಂಥಾದು ಬಹು ಅಗತ್ಯವೇ. ಎಲ್ಲಾ ಸಹೋದರರು ಸಹಾಯ ಮಾಡುವರು ಎಂಬದಾಗಿ ನಾವು ಹಾರೈಸುತ್ತೇವೆ.

ಬೆಳಗಾವಿನಲ್ಲಿ ಲಂಡನ ಮಿಶ್ಯನಿನ ಹಳಬ ಮಿಶ್ಯನೆರಿಯಾಗಿದ್ದ ರೆ. ಮಿ. ಬೆನಸ್ ಇವರು ತೀರಿ ಕೊಂಡರು. ಅವರು ಈ ದೇಶದಲ್ಲಿ ಐವತ್ತಕ್ಕಿಂತ ಹೆಚ್ಚು ವರ್ಷಗಳು ಕೆಲಸ ನಡಿಸಿದವರು. ಹಾಗೆಯೇ ಕಲ್ಕತದಲ್ಲಿ ಮಿಶ್ಯನೆರಿಯಾಗಿದ್ದ ಜಗದ್ವಿಖ್ಯಾತರಾದ ರೆ. ಡಾಕ್ಟರ್ ಡಫ ಇವರೂ ಇಂಗ್ಲಾಂಡಿನಲ್ಲಿ ಮರಣ ಪಟ್ಟರು. ಇವರಿಂದ ಕಲ್ಕತದಲ್ಲಿ ಬಹು ಮಂದಿಗೆ ವಿದ್ಯೆ ಪ್ರಾಪ್ತಿಯಾಯಿತು, ಮತ್ತು ಅವರ ಪ್ರಯತ್ನದಿಂದ ಬಹು ಜನರು ಕ್ರೈಸ್ತಧರ್ಮ ಸ್ವೀಕರಿಸಿದರು.

ಪೀಯೊನೋನೊ ಎಂಬ ಪೋಪನು ಮೂವತ್ತೊಂದು ವರುಷ ಏಳು ತಿಂಗಳು ಹದಿನೇಳು ದಿನ ಸಿಂಹಾಸನಸ್ಥನಾಗಿ, ಕಡೆಗೆ ತೀರಿ ಕೊಂಡ ವರ್ತಮಾನ ಕಳೆದ ಅಂಕೆಯಲ್ಲಿ ಪ್ರಸ್ತಾಪವಾಯಿತಷ್ಟೇ. ಈತನ ಮೂಲ ನಿಜ ಹೆಸರು ಗ್ಯೋವಾ

ನಿ ಮೆರಾಯಾ ಮಾಸ್ತಾಯಿ ಫೆರಿತಿ ಎಂತ. ಅವನು ೧೭೯೨ನೆ ವರ್ಷದಲ್ಲಿ ಹುಟ್ಟಿದನು. ಅವನ ತಂದೆ ಇತಲಿ ದೇಶದಲ್ಲಿ ಕೌಂಟ (ಅಂದರೆ ಸರದಾರ) ಆಗಿದ್ದು, ತನ್ನ ಮಗನಿಗೆ ದಂಡಿನಲ್ಲಿ ಯಾವದೊಂದು ಉದ್ಯೋಗವಾಗ ಬೇಕೆಂತ ಮನಸ್ಸು ಮಾಡಿದಾಗ್ಯೂ, ಮಗನು ತನ್ನ ಶರೀರಪ್ರಕೃತಿ ಅಶಕ್ತವಾಗಿದ್ದದರಿಂದ ಶಿಪಾಯಿಗಿರಿ ತನ್ನಿಂದಾಗದೆಂತ, ಪಾದ್ರಿಯ ಪಟ್ಟ ತಕ್ಕೊಳ್ಳಲಿಕ್ಕೆ ನಿಶ್ಚಯ ಮಾಡಿ, ೧೮೧೮ನೆಯಲ್ಲಿ ದೀಕ್ಷೆ ಹೊಂದಿದನು. ಅನಂತರ ಅಮೇರಿಕಕ್ಕೆ ನೇಮಕವಾಗಿ, ಅಲ್ಲಿ ಕೆಲ ಕಾಲವಿದ್ದು, ೧೮೨೭ನೆಯಲ್ಲಿ ಅವನಿಗೆ ಅರ್ಚ್‌ಬಿಶೋಪನ ಸ್ಥಾನವಾಯಿತು. ೧೮೪೦ನೆಯಲ್ಲಿ ಆಗಿನ ಪೋಪನು ಅವನನ್ನು ಕಾರ್ಡಿನಾಲನಾಗಿ ನೇಮಕ ಮಾಡಿದನು. ಈ ಉದ್ಯೋಗದಲ್ಲಿ ೬ವರ್ಷಗಳಿದ್ದ ಮೇಲೆ ೧೬ನೆ ಗ್ರೇಗರಿ ಎಂಬ ಪೋಪನು ಮರಣ ಪಟ್ಟಾಗ್ಯೆ ೧೮೪೬ರಲ್ಲಿ ಕಾರ್ಡಿನಲರ ಸಭೆ ನೆರದು ಬಂದು, ಅವನಿಗೆ ಪೋಪಸ್ವಾಮಿ ಪಟ್ಟ ಕಟ್ಟಿ, ರಾಜ್ಯಾಭಿಷೇಕ ಮಾಡಿ, ಪೀಯೊ ನೋನೊ ಎಂಬ ನಾಮಧೇಯ ಕೊಟ್ಟರು. ಇವನ ಮರಣದನಂತರ ಈಗ ಆ ಸ್ಥಾನಕ್ಕೆ ಬಂದಾತನ ಹೆಸರು ಗಿಯಾಚಿನೋ (ಯೋಯಾಕಿಮ್) ಪೆಕ್ಕಿ (ಅಥವಾ ಪೆಕ್ಚಿ); ಈತನೂ ಇತಾಲ್ಯನು. ಇವನ ಜನನ ೧೮೧೦ರಲ್ಲಿ ಸಂಭವಿಸಿತು. ೧೮೪೬ನೆಯಲ್ಲಿ ಆರ್ಚ್ ಬಿಶೊಪನಾಗಿ, ೧೮೫೩ನೆ ಇಸವಿಯಲ್ಲಿ ಕಾರ್ಡಿನಾಲನಾಗಿ, ಕಳೆದ ವರ್ಷದಲ್ಲಿ "ಕಾರ್ಡಿನಾಲ ಕಮಾರ್ಲಿಂಗೊ" ಎಂಬ ಸ್ಥಾನಕ್ಕೆ ಬಂದನು. ಇದು ದೊಡ್ಡ ಉದ್ಯೋಗ. ಪೋಪನು ಮರಣಪಟ್ಟರೆ, ರಾಜ್ಯಭಾರ ಅವನು ನಡಿಸ ಬೇಕಾಗುತ್ತದೆ. ಹೀಗೆ ಅವನು ಆ ಉದ್ಯೋಗ ನಡಿಸುತ್ತಿರುವಾಗ, ಕರ್ದಿನಾಲರ ಸಭೆ ಯಾರನ್ನು ನೇಮಿಸೋಣ? ಎಂತ ಆಲೋಚನೆ ಮಾಡದೆ, ಅವರಲ್ಲಿ ಪ್ರಮುಖರಾಗಿದ್ದವರು ಕಾರ್ಡಿನಾಲ್ ಪೆಕ್ಚಿಯನ್ನೇ ನೇಮಿಸ ಬೇಕೆಂತ ಅವನ ಮುಂದೆ ಸಾಷ್ಟಾಂಗ ಬಿದ್ದು, ದೇವರು ನಿಮ್ಮನ್ನು ಪೋಪ ನೇಮಿಸಿದ್ಧಾನೆ ಎಂತ ಹೇಳಿದರು. ಇದನ್ನು ನೋಡಿ ಉಳಿದವರೂ ಹಾಗೆಯೇ ಮಾಡಿದರು. ಈ ಹೊಸ ಪೋಪಸ್ವಾಮಿ ೧೩ನೇ ಲಿಯೋ ಎಂಬ ನಾಮಧೇಯ ಇಟ್ಟು ಕೊಂಡಿದ್ಧಾನೆ. ಮೊದಲು ಎಲ್ಲ್ಯಾದರೂ ಅವನ ಪ್ರಸಿದ್ಧಿ ಇಲ್ಲದಿದ್ದರೂ, ಅವನು ಆ ಸ್ಥಾನಕ್ಕೆ ನೇಮಕವಾದ್ದರಿಂದ ಸರ್ವ ರೋಮನ್ ಕಥೋಲಿಕರಿಗೆ ಮಹಾ ಸಂತೋಷ ಉಂಟಾಗಿದೆ.

ವಿಲಾಯತಿಯ ಪ್ರೊತೆಸ್ತಂತ ರಾಜ್ಯಗಳಿಂದ ಪರದೇಶಗಳಿಗೆ ಕಳುಹಿಸಿದ ಮಿಶ್ಯನೆರಿಗಳ ಸಂಖ್ಯೆ ೨,೧೧೦; ಇವರಲ್ಲಿ ೧,೦೬೦ ಗ್ರೇಟ ಬ್ರಿಟನ್ ರಾಜ್ಯದವರು, ಉಳಿದವರೆಲ್ಲರೂ ಅಮೇರಿಕದಿಂದ ಜರ್ಮನಿಯಿಂದ ಬಂದವರು.

ಈ ವರೆಗೆ ಲೋಹದಿಂದ ಮಾಡಿದ ಅಕ್ಷರಗಳು ಛಾಪಖಾನೆಗಳಲ್ಲಿ ಪ್ರಯೋಜನವಾಗುತ್ತಿದ್ದವು; ಆದರೆ ಸದ್ಯಾ ಘಟ್ಟಿ ಮಾಡಿದ ಬಿಲಾವರದಿಂದ ಅಕ್ಷರಗಳನ್ನು ಮಾಡುವ ಹೊಸ ಯುಕ್ತಿ ಕಂಡಿದ್ಧಾರೆ. ಈ ಅಕ್ಷರಗಳು ಅಗ್ಗವಾಗಿಯೂ ಬಾಳುವವುಗಳಾಗಿಯೂ ಇದ್ದು, ಬಡ್ಡಾಗದೆ ಸ್ಪಷ್ಟವಾಗಿ ಮುದ್ರಿತವಾಗುವದರಿಂದ ಲೋಹದ ಅಕ್ಷರಗಳ ಪ್ರಯೋಗ ಬಹುಶಾ ಕಡಿಮೆಯಾಗುವದು.

ವಹ್ರಾಡದಲ್ಲಿ ಒಬ್ಬ ಯುರೋಪಿಯನ್ ಉದ್ಯೋಗಸ್ಥನು ಪಯಣಕ್ಕೆ ಹೋಗಿದ್ದಾಗ್ಯೆ ಒಂದು ಸ್ಥಳದಲ್ಲಿ ತಂಬು ಹೊಡದಿರಲು, ಆ ತಂಬಿನ ಬಳಿಯ ಒಂದು ಸರ್ಪವೂ ಅದರ ಐದು ಮರಿಗಳೂ ಆತನ ದೃಷ್ಟಿಗೆ ಬಿದ್ದವು. ಆಗ್ಯೆ ತನ್ನ ಕೋವಿ ಬಾರು ಮಾಡಿ, ಆ ಸರ್ಪವನ್ನು ಹೊಡದನು. ಆದರೆ ಮರಿಗಳು ಎಲ್ಲಿಯೋ ಕಾಣದೆ ಹೋದವು. ಎಷ್ಟು ಹುಡುಕಿದಾಗ್ಯೂ ಶಿಕ್ಕಲಿಲ್ಲಾ; ಬಳಿಕ ಆ ಸರ್ಪದ ಹೊಟ್ಟೆ ಶೀಳಿ ನೋಡಲು, ಐದು ಮರಿಗಳು ಅದರಲ್ಲಿದ್ದವು. ಹೆಣ್ಣು ಸರ್ಪಗಳು ಏನಾದರೂ ಭಯಾಸ್ಪದವಾದರೆ ತಮ್ಮ ಬಾಯಿ ತೆರದು, ಮರಿಗಳಿಗೆ ಹೊಟ್ಟೆಯಲ್ಲಿ ಆಶ್ರಯ ಕೊಟ್ಟು ರಕ್ಷಣೆ ಮಾಡುತ್ತವಂತೆ.

ಚೀನಿರಾಜ್ಯದ ಟಿಯನ್‌ತ್ಸಿನ್ ಊರಿನಿಂದ ಭಯಂಕರ ಅಗ್ನಿಪ್ರಳಯದ ವರ್ತಮಾನ ತಲಪಿಯದೆ. ಅಲ್ಲಿ ಊರ ಹೊರಗೆ ಕ್ಷಾಮ ಬಿದ್ದ ಪ್ರ

ದೇಶಗಳಿಂದ ಅನ್ನಾರ್ಥಿಗಳಾಗಿ ಬಂದವರಿಗೋಸ್ಕರ ಸಾಲು ಸಾಲಾಗಿ ಚಾಪೆಗಳಿಂದ ಗುಡಿಸಿಲುಗಳನ್ನು ಕಟ್ಟಿಸಿದ್ದರು. ಇವುಗಳ ಸುತ್ತಲೂ ಗೂಟಗಳ ಬೇಲಿ ಇತ್ತು. ಹೆಂಗಸರೂ ಮಕ್ಕಳೂ ಕೂಡ ಸುಮಾರು ಮೂರು ಸಾವಿರ ಮಂದಿ ಒಳಗೆ ಇರುವಾಗ ಹ್ಯಾಗೋ ಗುಡಿಸಿಲುಗಳ ಸಾಲಿಗೆ ಬೆಂಕಿ ತಾಗಿ ಬಲವಾದ ಘಾಳಿ ಬೀಸುತ್ತಿದ್ದರಿಂದ ಪ್ರಬಲಗೊಂಡಿತು. ಆ ಜಾಗಕ್ಕೆ ವಿಚಾರಕನಾಗಿದ್ದವ ಇದ್ದ ಒಂದೇ ಬಾಗಲಿಗೆ ಬೀಗ ಹಾಕಿ ಘಾಬರಿಗೊಂಡು ಪಲಾಯನ ಮಾಡಲು, ತಪ್ಪಿ ಹೊರಗೆ ಬರಲಿಕ್ಕೆ ಮಾರ್ಗವಿಲ್ಲದೆ ನೂರು ಮಂದಿಯು ವಿನಹಾ ಒಳಗಿದ್ದ ಎಲ್ಲಾ ಬಡ ಪ್ರಾಣಿಗಳು ಸುಟ್ಟು ಹೋದರು.

ವಿಕ್ಟೋರಿಯಾ ಚಕ್ರವರ್ತಿನಿಯವರ ಕಿರೀ ಪುತ್ರರಾದ ಪ್ರಿನ್ಸ್ ಲ್ಯೋಪೋಲ್ಡ್ ಇವರು ಬೋಧಕೋದ್ಯೋಗದ ದೀಕ್ಷೆ ತಕ್ಕೊಳ್ಳ ಬೇಕೆಂತ ಬಹು ಅಪೇಕ್ಷೆಯುಳ್ಳವರಾಗಿದ್ದಾರೆ; ಅವರಿಗೆ ಮೊದಲು ಮಾತುಶ್ರೀಯವರ ಅನುಮತಿ ಶಿಕ್ಕಲಿಲ್ಲ. ಈಗ ಚಕ್ರವರ್ತಿನಿಯವರು ದೀಕ್ಷೆ ತಕ್ಕೊಳ್ಳಲಿಕ್ಕೆ ಅಪ್ಪಣೆ ಕೊಟ್ಟಿದ್ದಾರೆ.

ತುರ್ಕರ ಬಲವೆಲ್ಲವೂ ರುಸ್ಯರ ಮುಂದೆ ಪೂರ್ಣವಾಗಿ ಮುರಿದು ಹೋಗಿ, ತುರ್ಕ್ಯ ದೇಶವೆಲ್ಲವೂ ರುಸ್ಯರಿಗೆ ಕೈವಶವಾದಂತಾಗಿದೆ. ರುಸ್ಯರಿಗೆ ಹೆದರಿ ಕೊಂಡು, ಗೂಳೆ ತೆಗೆದು, ಕೊನ್ಸ್ತಂತಿನೊಪೊಲಿಗೆ ಪಲಾಯನ ಮಾಡಿದ ತುರ್ಕ ಪ್ರಜೆಗಳು (ಮುಖ್ಯವಾಗಿ ಹೆಂಗಸರೂ ಹುಡುಗರೂ) ಆ ಪಟ್ಣದಲ್ಲಿ ರಾಶಿರಾಶಿಯಾಗಿ ಕೂಡಿ ಕೊಂಡು, ಬಿಡಾರವಾಗಲಿ ಅಶನವಸನವಾಗಲಿ ಪರಾಂಬರಿಕೆಯಾಗಲಿ ಇಲ್ಲದೆ, ಮಹಾ ದುರ್ದಶೆಯವರಾಗಿ, ದಿನ ದಿನ ಸಾವಿರ ಕಟ್ಟಳೆಯಲ್ಲಿ ಸತ್ತು ಹೋಗುತ್ತಿದ್ದಾರಂತೆ. ಅವರ ದುರವಸ್ಥೆಯನ್ನು ನೋಡಿ ಕಲ್ಲು ಆದ್ದಾದರೂ ಕರಗಿ ಹೋಗ ಬೇಕಂತೆ—ಸಕಲ ಗಣಗಳ ಅಧಿಪತಿ ದೇವರು ಮುಯ್ಯಿಗೆ ಮುಯ್ಯಿ ತೀರಿಸುವಂಥಾದು ಆಗುವಲ್ಲಿ ನಿಲ್ಲುವವರ್ಯಾರು?—ತುರ್ಕರು ಈಗ ರುಸ್ಯರ ಸಂಗಡ ಸಮಾಧಾನದ ಒಪ್ಪಂದ ಮಾಡಿ ಕೊಂಡರು. ರುಸ್ಯರಿಗೆ ಆದ ಜಯಗಳೂ ಲಾಭಗಳೂ ವಿಶೇಷವಾಗಿ ಇಂಗ್ಲಿಷರಿಗೂ ಏನೂ ದಕ್ಕುವದಿಲ್ಲಾ. ಅವರು ಇತ್ತಲಾಗೆ ಮತ್ತು ಮತ್ತು ಯುದ್ಧಕ್ಕೆ ಹೊರಡುತ್ತೇವೆ ಎಂಬದಾಗಿ ಕಾಣಿಸಿ, ರುಸ್ಯರಿಗೆ ಹೆದರಿಸ ನೋಡುತ್ತಾ ಇದ್ದಾಗ್ಯೂ, ರುಸ್ಯರು ಹೆದರಿ ಕೊಳ್ಳಲಿಲ್ಲಾ. ಅವರಿಗೂ ಇವರಿಗೂ ಲಡಾಯಿ ಶುರುವಾದರೆ, ತುರ್ಕರು ರುಸ್ಯರ ಹೇಳಿಕೆಯಲ್ಲಿ ನಡಕೊಂಡು, ರುಸ್ಯರಿಗೆ ಅನುಕೂಲವಾಗಿರ ಬೇಕಲ್ಲದೆ, ಇಂಗ್ಲಿಷರಿಗೆ ಏನೂ ಕೈ ಕೊಡಲಿಕ್ಕೆ ಕೂಡದು ಎಂದು ಕಂಡು ಬಂದದರಿಂದಲೂ ಬೇರೆ ಸಹಾಯಕರು ಈ ವರೆಗೂ ಇಂಗ್ಲಿಷರಿಗೆ ಶಿಕ್ಕದ್ದರಿಂದಲೂ ಅವರು ರುಸ್ಯರ ಮೇಲೆ ಬೀಳಲಿಕ್ಕೆ ಇನ್ನು ಧೈರ್ಯಗೊಳ್ಳಲಿಲ್ಲಾ.—ಬೆರ್ಲಿನ್ ಪಟ್ಣದಲ್ಲಿ ಎಲ್ಲಾ ರಾಜ್ಯಗಳ ರಾಯಭಾರಿಗಳು ಕೂಡಿ ಕೊಂಡು, ಒಂದು ರಾಜಸಭೆಯಾಗಿ, ತುರ್ಕ್ಯ ರಾಜ್ಯದ ಸಂಬಂಧವಾದ ಕಾರ್ಯಗಳು ವಿಚಾರಣೆಯಾಗಿ, ಬಗೆಹರಿಯೋಣಾಗ ಬೇಕೆಂಬ ನಿಷ್ಕರ್ಷೆಯಾಯಿತು. ಬಿಸ್ಮರ್ಕ ಪ್ರಭು ಈ ರಾಜಸಭೆಯಲ್ಲಿ ಅಗ್ರಾಸೀನರಾಗಿ, ಆಲೋಚನೆಗಳನ್ನೂ ನಿರ್ಣಯಗಳನ್ನೂ ಸಾಗಿಸ ಬೇಕಂತೆ. ಸದರಿ ಸಭೆ ನೆರವಿ ಕೊಂಡು, ಈ ದೊಡ್ಡ ರಾಜ್ಯವ್ಯವಹಾರವನ್ನು ಬಗೆಹರಿಸುವ ಮೊದಲು ಪೂರ್ಣ ಸಮಾಧಾನದ ಮಾತಾಗಲಿ ಯುದ್ಧವು ತಿರಿಗಿ ತೊಡಗುವ ಮಾತಾಗಲಿ ನಿಶ್ಚಯವಲ್ಲಾ. ಸದ್ಯಕ್ಕೆ ರುಸ್ಯರು ರಣಭೂಮಿಯಲ್ಲಿಯೂ ರಾಜ್ಯಕಾರ್ಯಕುಶಲತೆಯಲ್ಲಿಯೂ ಭಾರಿ ಜಯಶಾಲಿಗಳಾದವರು, ತುರ್ಕರೂ ಇಂಗ್ಲಿಷರೂ ಸೋತು ಹೋದವರು ಎಂದು ಹೇಳ ಬೇಕು.

೧೦೩ನೇ ಪಾನಿನ ೨ನೇ ಪಂಕ್ತಿಯಲ್ಲಿ "ಚಿಕ್ಕ ಪ್ರಾಯದ" ಎಂತಲ್ಲ "ಚಿಕ್ಕ ಪ್ರಾಯದಲ್ಲಿ" ಎಂತ ಓದ ತಕ್ಕದು.

111ನೇ ಪಾನಿನಲ್ಲಿಯ ಪ್ರಶ್ನೆಗೆ ತಕ್ಕ ಉತ್ತರವೇನಂದರೆ:
ಮೂವತ್ತನಾಲ್ಕು ವರುಷ.

Printed at the Basel Mission Press, Mangalore.

ಕ್ರೈಸ್ತ ಸಭಾ ಪತ್ರ

ಪುಸ್ತಕ ೧೦. **MAY 1878.** ಅಂಕೆ ೧೧.

"ಗಾಯನ ದೇವರು."

ಶಿಲುಬೆಗೆ ಹಾಕಲ್ಪಟ್ಟು, ಯೆಹೂದ್ಯರಿಗೆ ಆಟಂಕವು, ಗ್ರೀಕರಿಗೆ ಹುಚ್ಚು, ಆದರೆ ಕರೆಯಲ್ಪಟ್ಟವರಿಗೆ ದೇವರ ಬಲವೂ ದೇವರ ಜ್ಞಾನವೂ ಆಗಿರುವ ಕ್ರಿಸ್ತನನ್ನು ಸಾರುತ್ತೇವೆ. ೧. ಕೊರಿ. ೧, ೨೩. ೨೪.

ಕೆಲವು ವರುಷಗಳ ಹಿಂದೆ ರೋಮಪುರದಲ್ಲಿ ಹಾಳು ಬಿದ್ದಿದ್ದ ಒಂದು ಪ್ರಾಚೀನ ಕಾಲದ ರಾಜಮಂದಿರದ ಗೋಡೆಗಳನ್ನು, ಕಸಗಿಸ ಮಣ್ಣುಮಸಣ ತೆಗೆದು ಹಾಕಿ, ತಿರಿಗಿ ಬೈಲಿಗೆ ತರುವ ಕೆಲಸವು ಸಾಗುವಲ್ಲಿ ಆದದೇನಂದರೆ: ಆ ಅರಮನೆಯ ಒಂದು ಕಡೆಯಲ್ಲಿ ದ್ವಾರಪಾಲಕರು ಮೊದಲಾದ ಜವಾನರು ಉಳುಕೊಳ್ಳುತ್ತಿದ್ದ ಕೋಣೆಯ (ಚಾವಡಿಯ) ಗೋಡೆಗಳು ಸಹ ಬೈಲಿಗೆ ಬಿದ್ದಲ್ಲಿ ಆ ಗೋಡೆಗಳೊಂದರ ಮೇಲೆ ಒಂದು ಚಿತ್ರವು ಕಾಣಿಸಿ ಕೊಂಡಿತು. ಆ ಚಿತ್ರವು ಕ್ರೂಜೆಯಲ್ಲಿ ತೂಗುವ ಮನುಷ್ಯನನ್ನು ಕಾಣಿಸುವಂಥಾದು. ಆದರೆ ಅವನ ಮಂಡೆ ನರಶಿರವಾಗಿರದೆ, ಕತ್ತೇ ತಲೆಯಾಗಿರುತ್ತದೆ. ಕ್ರೂಜೆಯ ಅಡಿಯಲ್ಲಿ ಕ್ರೂಜಿತನಾದಾತನ ಪಾದದಲ್ಲಿ ಒಬ್ಬನು ಮೊಣಕಾಲೂರಿ ಕೊಂಡು, ಕೈ ಮುಗಿದು, ಪ್ರಾರ್ಥಿಸುತ್ತಿದ್ದಾನೆ. ಚಿತ್ರದ ಬುಡದಲ್ಲಿ "ಪ್ರಾರ್ಥಿಸುವ ಗಾಯನೂ ಅವನ ದೇವರೂ" ಎಂಬುವ ಲಿಪಿಯುಂಟು. ಆ ವಿಲಕ್ಷಣವಾದ ಚಿತ್ರವು ಕಾಣಿಸುವದೇನಂದರೆ: ಆ ಅರಮನೆಯ ಜವಾನರಲ್ಲಿ ಕ್ರಿಸ್ತಭಕ್ತನಾಗಿದ್ದ ಗಾಯ ಎಂಬವನೊಬ್ಬನು ಇದ್ದಿದ್ದಾನು.* ಆ ಚಿತ್ರದಲ್ಲಿ ಏನಾದರೂ ಚಮತ್ಕಾರವಾಗಲಿ ಚಿತ್ರಗಳನ್ನು ರಚಿಸುವ ಕೈಗುಣವಾಗಲಿ ತೋರದ್ದರಿಂದ, ಒಬ್ಬ ಚಿತ್ರಗಾರನಲ್ಲಾ, ಆ ಚಾವಡಿಯಲ್ಲಿ ಕೂತು ಕೊಳ್ಳುತ್ತಿದ್ದ ಜವಾನರಲ್ಲಿ ಒಬ್ಬನಾಗಲಿ ಕೆಲವರು ಕೂಡಿ ಆಗಲಿ ಆ ಚಿತ್ರವನ್ನು ಮಾಡಿರ ಬೇಕೆಂಬ ಊಹೆಗೆ ನ್ಯಾಯ ತೋರುತ್ತದೆ. ಮತ್ತು ಆ ಗಾಯನನ್ನು ಅಪಹಾಸ್ಯ ಮಾಡ ಬೇಕೆಂಬ ಭಾವದಿಂ

* ಪೌಲ ಅಪೊಸ್ತಲನ ಕಾಲದಲ್ಲ್ಯಾದರೂ "ಕೈಸರನ" (ಮಹಾರಾಜನ) ಅರಮನೆಯವರಲ್ಲಿ ಕ್ರೈಸ್ತರಾದವರು ಇದ್ದರೆಂದು ಫಿಲಿ. ೪, ೨೨ರಿಂದ ಕಾಣ ಬರುತ್ತದೆ.

ದಲೇ ಅದು ರಚನೆಯಾಯಿತೆಂಬದಕ್ಕೆ ಕಿಂಚಿತ್ತಾದರೂ ಸಂದೇಹವಿಲ್ಲಾ, ಯಾಕಂದರೆ (ವಿಲಾಯತಿಯಲ್ಲಿ) ಕತ್ತೆ ಧಡ್ಡತನದ ಸಾದೃಶ್ಯವಾಗಿದೆ. ಆದರೆ ಆ ಗಾಯನ ಅಪಹಾಸ್ಯಕ್ಕೆ ಮಾತ್ರವಲ್ಲಾ, ಕ್ರಿಸ್ತಯೇಸುವಿನ ಅಪಹಾಸ್ಯಕ್ಕೂ ಆ ಚಿತ್ರವು ಮಾಡಲಾಯಿತು, ಯಾಕಂದರೆ ಕ್ರೂಜಿತನಾದ ಯೇಸು ಕ್ರಿಸ್ತನು ಕತ್ತೇ ತಲೆಯವನಾಗಿ ಧಡ್ಡನೇ, ಆತನಲ್ಲಿ ವಿಶ್ವಾಸವಿಟ್ಟು ಆತನಿಗೆ ಪ್ರಾರ್ಥಿಸುವವರು ಧಡ್ಡರೇ ಎಂತ ಆದರಿಂದ ತೋರಿಸಿದ ಹಾಗಾಯಿತು.

ಕ್ರಿಸ್ತಭಕ್ತನಾಗಿದ್ದ ಆ ಗಾಯನಿಗೆ ಆ ಅರಮನೆಯ ಚಾಕ್ರಿಯಲ್ಲಿ ಎಷ್ಟೋ ಹಾಸ್ಯ ನಿಂದೆ ಇತ್ಯಾದಿ ಕಷ್ಟಗಳು ಬಿದ್ದಿದ್ದಾವು! ಅವನ ವೃತ್ತಾಂತವೇನೂ ನಮಗೆ ಗೊತ್ತಿಲ್ಲಾ; ಆದರೆ ಅವನು ನಿತ್ಯವೇ ಅಪಹಾಸ್ಯ ಮೊದಲಾದ್ದಕ್ಕೆ ಗುರಿಯಾಗಿದ್ದು, ಕ್ರಿಸ್ತನಾಥನಿಗಾಗಿ ಬಹಳ ಉಪದ್ರವಗಳನ್ನು ತಾಳಿ ಕೊಳ್ಳುತ್ತಾ ಬರ ಬೇಕಾಯಿತು ಎಂಬದಕ್ಕೆ ಆ ಚಿತ್ರವೇ ಒಂದು ದೃಷ್ಟಾಂತವಾಗಿದೆ. ಅವತಾರಪುರುಷನೂ ದೇವರೂ ಆದಾತನು ಕ್ರೂಜೆಯಲ್ಲಿ ಮರಣ ತಾಳಿದ ಮಾತು ಮದಾಂಧರೂ ಗರ್ವಾಂಧರೂ ಆದ ಮೂರ್ತಿಪೂಜಕರಿಗೆ ಎಲ್ಲಾ ಕಾಲಗಳಲ್ಲಿ ಹುಚ್ಚುತನದ ಮಾತೆಂದು ಕಂಡು, ಒಂದು ಎಡತಡೆಯಾಗಿತ್ತು. ಸದ್ಯಕ್ಕೂ ಕ್ರೈಸ್ತಮತಕ್ಕೂ ಮುಖ್ಯವಾಗಿ ಕ್ರೂಜೇ ಮರಣವನ್ನು ತಾಳಿದ ಯೇಸು ಕ್ರಿಸ್ತನ ವೃತ್ತಾಂತಕ್ಕೂ ಜಗತ್ತಿನಲ್ಲೆಲ್ಲಾ ಎದುರು ಬರುವಷ್ಟು ಅಪವಾದ ಕುಚೋದ್ಯ ದ್ವೇಷಗಳು ಇತರವಾದ ಯಾವ ಮತಕ್ಕಾಗಲಿ ಪ್ರಸಂಗಕ್ಕಾಗಲಿ ಎದುರು ಬಾರವು. ಲಿಪಿಕಾರರಿಗೂ ಬಿಲ್ಲೆಕಾರರಿಗೂ, ಲಕ್ಷೇಶ್ವರರಿಗೂ ಭಿಕ್ಷೇಶ್ವರರಿಗೂ, ಪಂಡಿತರಿಗೂ ಅಪಂಡಿತರಿಗೂ, ಸರದಾರರಿಗೂ ಚಟ್ಟಿಗಾರರಿಗೂ, ವೈದಿಕರಿಗೂ ಲೌಕಿಕರಿಗೂ, ಸಂಭಾವಿತರಿಗೂ ಕಾಕಪೋಕರಿಗೂ ಯೇಸು ಕ್ರಿಸ್ತನ ಸಮಾಚಾರವು ಆಗದಂಥಾದಾಗಿ, ಟಾಕು ಹೊಡೆಯಲಿಕ್ಕೂ ಕಂಠ ಹದ ಮಾಡಲಿಕ್ಕೂ ಬಾಣಗಳನ್ನಾಗಲಿ ಹಲ್ಲುಗಳನ್ನಾಗಲಿ ಮಸೆಯಲಿಕ್ಕೂ ವಿಷವ ಕಾರಿ ಬಿಡಲಿಕ್ಕೂ ಯಥೇಷ್ಟ ಆಸ್ಪದ ಕೊಡುತ್ತಾ ಬಂದದೆ.

ಯೇಸುಕ್ರಿಸ್ತನಾಥನಿಗೆ ಜಗತ್ತಿನಲ್ಲೆಲ್ಲವೂ ಎದುರು ಬರುವ ವಿರೋಧಭಾವವನ್ನು ಮಾತ್ರವಾದರೂ ನೋಡುವವನು ಕ್ರೈಸ್ತಧರ್ಮವು ಸರಿ ಈಡು ಇಲ್ಲದ್ದೇ ಎಂದು ಅರಿಕೆ ಮಾಡ ಬೇಕು. ಆದರೆ ಅದರಿಂದಲೂ ಕ್ರಿಸ್ತನ ಸಮಾಚಾರದ ಪ್ರಸಂಗದಿಂದಲೂ ಜಗತ್ತಿಗೆಲ್ಲಾ ಹುಟ್ಟಿ ಬಂದ ಪ್ರಯೋಜನಗಳನ್ನೂ ಹಿತಲಾಭಾತಿಶಯವನ್ನೂ ವಿಚಾರಿಸಿ ನೋಡಿದರೆ, ಕ್ರೈಸ್ತರಲ್ಲದವರೂ ಕ್ರಿಸ್ತನ ವಿರೋಧಿಗಳಾದರೂ, ಅವರು ಕೇವಲ ಕಳ್ಳರಾಗಿರದ ಪಕ್ಷದಲ್ಲಿ, ಯೇಸುವಿನ ಮುಖಾಂತರದಿಂದ ನರಜಾತಿಗೆ ಒದಗಿದ ಹಿತಲಾಭವು ಬಹು ಗಣ್ಯವೇ ಎಂತ ಅರಿಕೆ ಮಾಡದೆ ಹೋಗಲಿಕ್ಕೆ ಕೂಡದು. ಕ್ರಿಸ್ತಭಕ್ತರು ಪಾಶಕ್ಕೆ ಬಿದ್ದು, ಸತ್ತೇ ಹೋದವನನ್ನು ನಂಬುವ ಹುಚ್ಚರು ಎಂಬದಾಗಿ ಅಪಹಾಸ್ಯ ಮಾಡ ಮನಸ್ಸಿದ್ದವರು ಅಪಹಾಸ್ಯ ಮಾಡಲಿ! ಯಥೇಷ್ಟ ಅಪಹಾಸ್ಯಗಳನ್ನು ಗೈಯಲಿ! ಆದರೆ ಗೊಲ್ಗಥಾದ್ರಿಯೆಂಬ ಯಾಗಶಾಲೆಯಲ್ಲಿ ಕ್ರೂಜೆಯೆಂಬ ಯಜ್ಞವೇದಿಯಲ್ಲಿ ತನ್ನ ಜೀವವನ್ನು ಅರ್ಪಣೆ ಮಾಡಿ ಕೊಟ್ಟು ಬಿಟ್ಟ ಯೇಸುವಿನಿಂದ ಜಗಜ್ಜನಕ್ಕೆ ಆದಷ್ಟು ಉಪಕಾರವು ಈ ವರೆಗೂ ಯಾರಿಂದಲೂ ಆಗಲಿಲ್ಲಾ, ಇನ್ನು ಮೇಲೆಯೂ ಆಗಲಿಕ್ಕಿಲ್ಲಾ ಎಂಬುವ ನ್ಯಾಯವಾದ ಕೀರ್ತಿಯನ್ನು ಯಾರೂ ಅಪಹಾರ ಮಾಡದಿರಲಿ! ಹೊಸ ಜೀವ ಹೊಸ ನೀತಿ ಹೊಸ ಪ್ರೀತಿ ಎಂಬುವ ನೀರು ಯೇಸುವಿನಿಂದ ಈ ಭೂಮಿ ಎಂಬ ಗೋಳುಹಳ್ಳಕ್ಕೆ ಹರಿದು ಬರುವಂಥಾದಾಯಿತು. ಮೊದಲು ಮರಣದ ವ್ಯಾಪ್ತಿ ಮಾತ್ರವೇ ಕಾಣುತ್ತಿದ್ದಲ್ಲಿ ಈಗ ಜೀವಜಲದ ಬಲವ್ಯಾಪ್ತಿಯಿಂದ ದಿವ್ಯ ಸಸಿಗಳು ಹುಟ್ಟಿ, ಪುಷ್ಪಗಳಿಂದಲೂ ಫಲಗಳಿಂದಲೂ ಶೋಭಿಸುತ್ತಿದ್ದಾವೆ. ಮೊದಲು ಮರುಭೂಮಿ, ಬರೇ ಸುಡುಗಾಡು ಆಗಿದ್ದದು ಯೇಸು ಕ್ರಿಸ್ತನ ಮೂಲವಾಗಿ ದಿವ್ಯ ಉದ್ಯಾನವನವಾಗಿಯೂ ಸ್ವರ್ಗದ್ವಾರವಾಗಿಯೂ

ಹೋಯಿತು. ಹೀಗಿರಲಾಗಿ "ಗಾಯನ ದೇವರು" ಸರ್ವವಂದನೀಯ ಜಗದ್ರಕ್ಷಕನೂ ಜಗದ್ಗುರುವೂ ಆಗಿ, ನನ್ನ ದೇವರೂ ನನ್ನ ಸ್ವಾಮಿಯೂ ಆಗಿರಲಿ!

೧. ನನ್ನ ಪ್ರೀತಿ ಕ್ರೂಜೆಯಲ್ಲಿ!
ಬೇರೆ ಆಶೆ ಇರದು.
ಅತಿಪ್ರಿಯ ಯೇಸುವಲ್ಲಿ
ಹೃತ್ತು ದೃಢವಾಯಿತು.
ಎಂದಿಗೊಂದೆ ವಾಕ್ಯವು
ಹೃತ್ಸಂಗೀತವಹುದು:
"ಸುಖದುಃಖಕಾಲದಲ್ಲಿ
ಪ್ರೀತಿ ಕ್ರೂಜೆಯಾತನಲ್ಲಿ!

೨. ಪ್ರೀತಿಯಿಂದ ನಿಂದೆ, ನಷ್ಟ,
ಹಿಂಸೆ, ಬಡತನವು,
ಚಿಂತೆ ಮೊದಲಾದ ಕಷ್ಟ
ಹುಟ್ಟೋದೆಂತ ಬಲ್ಲೆನು.
ಯೇಸು ಆಜ್ಞೆ ಕೊಡಲು,
ತೀಕ್ಷ್ಣ ಮೃತಿಗಂಜೆನು.
ಸುಖದುಃಖಕಾಲದಲ್ಲಿ
ಪ್ರೀತಿ ಕ್ರೂಜೆಯಾತನಲ್ಲಿ!

೩. ಆತನ್ಹೊರ್ತು ಇಹಸುಖ ನಂಗೆ ಸುಖವಲ್ಲವು;
ಆತನಿರೆ, ಎಲ್ಲಾ ದುಃಖ ಸುಖವೆಂತ ಹೇಳ್ವೆನು.
ಈ ಪ್ರಪಂಚದವರು ಬೈದರೇನು ಚಿಂತೆಯು?
ಸುಖದುಃಖಕಾಲದಲ್ಲಿ ಪ್ರೀತಿ ಕ್ರೂಜೆಯಾತನಲ್ಲಿ!

ಮಹಾ ಪ್ರೀತಿಯ ಕಾರ್ಯವು.

ಸುಮಾರು ಎಂಭತ್ತು ವರುಷಗಳ ಹಿಂದೆ ಇಂಗ್ಲಿಷರಿಗೂ ಮೈಸೂರು ದೇಶದ ಅರಸನಾದ ಟೀಪುಸುಲ್ತಾನನಿಗೂ ಬಹು ಘೋರ ಯುದ್ಧವು ನಡೆಯುತ್ತಿದ್ದ ಕಾಲದಲ್ಲಿ ಇಂಗ್ಲಿಷ್ ದಂಡಿನ ಆಳುಗಳೂ ಸರದಾರರೂ ಟೀಪುಸುಲ್ತಾನನ ಶೆರೆಯಲ್ಲಿ ಬಿದ್ದ ದುರ್ದಶೆ ಇಂಗ್ಲಿಷರಿಗೆ ಸಂಭವಿಸಿತು. ಆ ಶೆರೆಯವರಲ್ಲಿ ಬೇರ್ಡ್ ಎಂಬವನೊಬ್ಬನೂ ಇದ್ದನು. ಶೆರೆಯಾದ ಎಲ್ಲಾ ಸರದಾರರನ್ನು ಬಂಧಿಸಿ, ಶೆರೆಮನೆಯಲ್ಲಿ ಹಾಕಿಸುವ ಬಗ್ಯೆ ಟೀಪುಸುಲ್ತಾನನು ಬೇಡಿಗಳನ್ನೂ ಸಂಕೋಲೆಗಳನ್ನೂ ಕೊಡಿಸಿ, ದಂಡಾಳುಗಳನ್ನು ಕಳುಹಿಸಿದನು. ಆ ಬೇರ್ಡ್ ಧೊರೆ ಬಹಳ ಘಾಯಗಳು ಬಿದ್ದು ರಕ್ತ ಸೋರಿದ್ದ ಕಾರಣ ಬಹು ಬಲಹೀನನಾಗಿದ್ದನು. ಆಗ ಇತರ ಸರದಾರರಲ್ಲಿ ಮುದುಕನಾಗಿದ್ದವನೊಬ್ಬನು ಅವನನ್ನು ಬೆರಳು ತೋರಿಸಿ, ಟೀಪುಸುಲ್ತಾನನ ಕಡೆಯ ದಂಡಾಳುಗಳಿಗೆ—ಅರೆಜೀವದಲ್ಲಿ ಬಿದ್ದ ಈತನಿಗೆ ನೀವು ಸಂಕೋಲೆ ಹಾಕಲಿಕ್ಕಿಲ್ಲವಲ್ಲಾ? ಎಂದು ಪ್ರಶ್ನಾರೂಪದಲ್ಲಿ ಅಪ್ಪಣೆ ಕೊಟ್ಟದಕ್ಕೆ ಅವರು ಪ್ರತ್ಯುತ್ತರವಾಗಿ—ನೀವು ಎಷ್ಟು ಮಂದಿ ಶೆರೆಯವರೋ ಅಷ್ಟು ಸಂಕೋಲೆಗಳನ್ನು ನಮ್ಮ ಸುಲ್ತಾನಸಾಹೇಬರವರು ನಮ್ಮ ಕೈಯಲ್ಲಿ ಕೊಡಿಸಿ, ಅವೆಲ್ಲವನ್ನು ಹಾಕಿ ಬರ ಬೇಕೆಂತ ಹುಕುಮ್ ಕೊಟ್ಟಿರುತ್ತಾರೆ ಅಂದಾಗ, ಆ ಮುದುಕನು ಹೇಳಿದ್ದೇನಂದರೆ: ಹಾಗಾದರೆ ನನ್ನದೂ ಅವನದೂ ಎರಡು ಸಂಕೋಲೆಗಳನ್ನು ನನಗೆ ಹಾಕಿ! ನಾನು ಎರಡೂ ಹೊತ್ತು ಕೊಳ್ಳುತ್ತೇನೆ. ಆ ಮಾತಿನ ಮೇಲೆ ಆ ಮುದುಕನಿಗೆ ಎರಡು ಸಂಕೋಲೆಗಳನ್ನು ಹಾಕಿ, ಬಂಧಕ ಮಾಡಿದರು. ಬೇರ್ಡ್ ಧೊರೆ ಬಂಧಕ ಬೀಳದೆ ಉಳಿಕೆಯವರ ಸಂಗಡ ಕೈದಾದನು.

ಕಾಲಗತಿಯಲ್ಲಿ ಬೇರ್ಡ್ ಧೊರೆ ಶೆರೆಯಿಂದ ತಿರಿಗಿ ಬಿಡುಗಡೆಯಾದನು. ಟೀಪುಸುಲ್ತಾನನು ಇಂಗ್ಲಿಷರಿಗೆ ಸೋತು ಹೋಗಿ, ಸತ್ತು ಹೋದದನ್ನು ಸಹಾ ನೋಡಿದನು. ಆದರೆ ಅವನ ಮೇಲೆ ಕರುಣ ಇಟ್ಟು, ಅವನ ಸಂಕೋಲೆಯಿಂದಲೂ ತನ್ನನ್ನು ಕಟ್ಟಿಸಿ ಕೊಂಡ ಮುದುಕನಿಗೆ ಕಾಲವು

ಬಂದಲ್ಲಿ ಮಾತ್ರವೇ ಟೀಪುವಿನ ಶೆರೆಯಿಂದ ಬಿಡುಗಡೆಯ ದಿವಸವು ಮೂಡಿ ಬಂತು. ಉಸುರು ನಿಂತು ಹೋಗುವ ತನಕ ಆ ಎರಡು ಸಂಕೋಲೆ ಅವನ ಮೈ ಮೇಲೆ ಇತ್ತು.

ಆ ಮುದುಕನು ತನ್ನ ಸ್ನೇಹಿತನ ಮೇಲೆ ಕರುಣವಿಟ್ಟು, ಅವನ ಸಂಕೋಲೆಯನ್ನು ಅವನಿಗೆ ತಪ್ಪಿಸಿ, ತನಗೆ ಕಟ್ಟಿಸಿ ಕೊಂಡು, ಎರಡಷ್ಟು ಭಾರ ಕಷ್ಟಗಳನ್ನು ಸಹಿಸಿ ಕೊಂಡದು ಮಹಾ ದೊಡ್ಡ ಸ್ನೇಹದ ಕಾರ್ಯವಾಯಿತಲ್ಲಾ! ಆದರೆ ಅದಕ್ಕಿಂತ ಮಹಾ ದೊಡ್ಡ ಪ್ರೀತಿಯ ಕಾರ್ಯವು ಇನ್ನೊಂದು ಆಯಿತು, ಏನಂದರೆ: ಅವತಾರಪುರುಷನಾದ ಯೇಸು ಕ್ರಿಸ್ತನು ತನಗೆ ದೇವಲೋಕದಲ್ಲಿ ಇದ್ದ ಮಹಿಮೆಯನ್ನೂ ಆನಂದವನ್ನೂ ತ್ಯಜಿಸಿ ಬಿಟ್ಟು, ಈ ಕೀಳುಲೋಕಕ್ಕೆ ಅವತರಿಸಿ ಕೊಂಡು ಬಂದು, ಸ್ನೇಹಿತರಾಗಿರದೆ, ದ್ರೋಹಿಗಳೇ, ಕಡು ವೈರಿಗಳೇ, ಆಗಿದ್ದ ಮನುಷ್ಯರ ಓಲಾಗಿ ಪಾಪಪ್ರಾಯಶ್ಚಿತ್ತಾರ್ಥಕ ಮರಣವನ್ನು ಶಿಲುಬೆಯಲ್ಲಿ ತಾಳಿ ಕೊಂಡು, ತನ್ನಲ್ಲಿ ವಿಶ್ವಾಸವಿಡುವವರೆಲ್ಲರಿಗೆ ಪಾಪವನ್ನೂ ಬಾಧೆಯನ್ನೂ ಪರಿಹರಿಸಿ, ಸ್ವರ್ಗರಾಜ್ಯಕ್ಕೆ ಮಾರ್ಗವನ್ನು ಮಾಡಿ ಕೊಟ್ಟು, ಶಾಶ್ವತಜೀವವನ್ನು, ಪರಮಾನಂದದ ಪದವಿಯನ್ನು ದೊರಕಿಸಿದ್ದೇ. ಇದು ಮಹಾ ದೊಡ್ಡ ಪ್ರೀತಿ, ಈಡಿಲ್ಲದ ಪ್ರೀತಿ, ನೆಲೆಗಾಣದ ಅಪರಿಮಿತ ಪ್ರೀತಿ ಅಲ್ಲವೋ? ನಮ್ಮನ್ನು ಮೊದಲು ಹಾಗೆ ಪ್ರೀತಿಸಿದಾತನನ್ನು ನಾವು ನಂಬಿ ಕೊಂಡು, ಶೇರಿ ಕೊಂಡು, ಬದಲಿಗೆ ಮನಃಪೂರ್ವಕವಾಗಿ ಪ್ರೀತಿ ಮಾಡ ಬಾರದೋ?

ಪ್ರಶ್ನೆಗಳು.

55. ತಮ್ಮ ಮೊದಲನೇ ಪ್ರಯಾಣವನ್ನು ಕಾಲ್ನಡೆಯಾಗಿ, ಕಡೇದನ್ನು ರಥವನ್ನೇರಿ ಕೊಂಡವರಾಗಿ ಮಾಡಿದ ದೇವಭಕ್ತರಿಬ್ಬರ ಹೆಸರೇನು?

56. ಎಲ್ಲಾ ಕಾಯಕಗಳಲ್ಲಿ (ವೃತ್ತಿಗಳಲ್ಲಿ) ಹಿರಿದು (ಮೊದಲಿನದು ಸಹ) ಯಾವದು?

57. ತಮ್ಮ ಕೈವಾಡವು (ಕಸಬು) ಹಿರಿದು (ಪ್ರಥಮವಾದ್ದು) ಎಂತ ಯಾವ ಜಾತಿಯವರು (ಕಸಬಿನವರು) ಹೊಗಳಿ ಕೊಳ್ಳ ಬಹುದು?

58. ಮೃದಂಗಕ್ಕೂ ಮಾತಾಳಿಗಳಿಗೂ (ಮಾತಾಳಿಗಳೆಂದರೆ ಬಹು ಮಾತಿನವರು) ಹೋಲಿಕೆ ಏನು?

ಎರಡು ಬುದ್ಧಿಮಾತು.

೧. ಸೂರ್ಯನ ಬೆಳಕು ಇಲ್ಲದ ಇರುಳಲ್ಲಿ ದೀಪದ ಬೆಳಕು ಬೇಕಾಗಲಾಗಿ, ಸಾವಿರಾರು ಮನೆಗಳಲ್ಲಿ ಸಾವಿರಾರು ದೀಪಗಳು ಹಚ್ಚಿಡೋಣಾಗುತ್ತವೆ; ಸೂರ್ಯನು ಮೂಡಿ ಹಗಲಾಗಲು ದೀಪವೆಲ್ಲವೂ ಬೇಡವಾಗಿ ಕಾಣದೆ ಹೋಗುತ್ತದೆ.—ಸತ್ಯದ ಬೆಳಕು ಇಲ್ಲದ ಜನರಲ್ಲಿ ಬೇರೆ ಬೇರೆ ಮತಗಳು ಉತ್ಪನ್ನವಾಗಿ ಇರುತ್ತವೆ; ಆದರೆ ಅವೆಲ್ಲವೂ ಸದ್ಗುರುವೂ ಸತ್ಯಸ್ವರೂಪನೂ ಆಗಿರುವ ಕ್ರಿಸ್ತ ಯೇಸುವಿನ ಬೆಳಕಿನಲ್ಲಿ ಆರಿ ಹೋಗುವವು.—ಕ್ರಿಸ್ತನಲ್ಲಿ ನೆಲೆಯಾಗಿರದ ಕ್ರೈಸ್ತರಿಗೂ ಬೇರೆ ಬೇರೆ ಹೆಸರೂ ಬೇರೆ ಬೇರೆ ಜನರ ದಯವೂ ಆಶ್ರಯವೂ ಬೇಕಾಗುತ್ತದೆ; ಆದರೆ ಕ್ರಿಸ್ತ ಯೇಸುವಿನಲ್ಲಿ ನೆಲೆಯಾದವರಿಗೆ ಇತರ ಹೆಸರಾಗಲಿ ಇತರರ ದಯವೂ ಆಶ್ರಯವೂ ಆಗಲಿ ಅನವಶ್ಯವಾಗಿ, ಆತನ ಹೆಸರೂ ಆಶ್ರಯವೂ ಪೂರ್ಣ ಸಾಕಾಗಿರುತ್ತದೆ.

೨. ಮನುಷ್ಯರಲ್ಲಿ ತಪ್ಪು ಮಾಡುವಂಥಾದು ಅತಿ ವಾಡಿಕೆಯಾಗಿರುವದರಿಂದ ತಪ್ಪುಗಳನ್ನು ಬಹುಶಾ ಅಲಕ್ಷ್ಯ ಮಾಡಿ ಬಿಡುತ್ತಾರೆ. ಆದರೆ ತಪ್ಪುಗಳನ್ನು ತಿಳುಕೊಂಡು ತಿದ್ದದೆ, ಅಥವಾ

ತಿದ್ದಿಸದೆ, ಹೋಗುವವನು ಬಹಳ ಮೋಸಕ್ಕೂ ನಷ್ಟಕ್ಕೂ ಗುರಿಯಾಗ ಬಹುದು. ಒಂದೇ ತಪ್ಪಿನಿಂದ ಎಷ್ಟೋ ಹೆಚ್ಚುಕಡಿಮೆಯಾಗಿ, ಎಷ್ಟೋ ಭಾರಿ ನಷ್ಟವು ಬರ ಬಹುದು ಎಂಬದು ಲೆಖ್ಖದ ಸಂಗತಿಯಲ್ಲಿ ಚನ್ನಾಗಿ ಕಾಣ ಬರುತ್ತದೆ. ಇತ್ತಲಾಗೆ ಛಾಪೆಯಾದ ಒಂದು ಪಟ್ಟಿಯಲ್ಲಿ ಸಂಬಳದಿಂದ ಶೇಕಡೆಗೆ ೨⅓ ಮೇರೆಗೆ ಕೊಟ್ಟು ಬಿಡ ಬೇಕು ಎಂಬರ್ಥದ ಮಾತಿಗೆ ಬದಲಾಗಿ "ಸಂಬಳದ ೨⅓ನೇ ಅಂಶವನ್ನು" ಕೊಟ್ಟು ಬಿಡ ಬೇಕು ಎಂತ ತಪ್ಪಾಗಿ ಶೇರಿ ಹೋಯಿತು. ಕಣ್ಣಿಗೆ ಸ್ವಲ್ಪವೇ ಎಂದು ತೋರುವ ಈ ಹೆಚ್ಚುಕಡಿಮೆ ರೂಪಾಯಿಯ ಎಣಿಕೆಯಲ್ಲಿ ಎಷ್ಟೋ ಭಾರಿಯಾಗ ಬಹುದು!— ಆದರೆ ಒಂದು ಕೆಲಸದ ನೂರು ಪಾಲಿನಲ್ಲಿ ಮನುಷ್ಯನು ಒಂದು ವೇಳೆ ೨⅓, ದೇವರು ೯೭⅔ ಪಾಲು ಮಾಡಿ ತೀರಿಸಿದ್ದಲ್ಲಿ ಮನುಷ್ಯನು ತಾನು ಆ ಕೆಲಸದ ೨⅓ನೇ ಅಂಶವನ್ನೇ, ಹಾಗಾದರೆ ಅದರ ೬ ಪಾಲಿನಲ್ಲಿ ೫೫ ಪಾಲು, ಮಾಡಿ ತೀರಿಸಿದ್ದೆಂತ ಎಣಿಸಿ ಕೊಂಡು, ತನ್ನನ್ನೂ, ತನ್ನ ಬುದ್ಧಿ ಬಲ ಯತ್ನಾದಿಗಳನ್ನೂ ಹೊಗಳಿ ಕೊಳ್ಳುವಂಥಾದು ಎಷ್ಟೋ ಸಾರಿ ಆಗುತ್ತದಲ್ಲಾ! ಇದೊಂದು ತಪ್ಪಲ್ಲವೋ? ಈ ತಪ್ಪಿನಿಂದ ಭಾರಿ ಹೆಚ್ಚುಕಡಿಮೆಯಾಗಿ, ದೊಡ್ಡ ಅನ್ಯಾಯವಾಗದೋ? ಆಗುತ್ತದೆ. ಈ ತರದ ತಪ್ಪು ನಿನ್ನಿಂದ ಎಷ್ಟಾಯಿತು?—ಆದರೆ ಲೆಖ್ಖದ ಸಂಗತಿಯಲ್ಲಿ ಹ್ಯಾಗೋ ಹಾಗೆ ಮಾತಿನಲ್ಲಿಯೂ ಕ್ರಿಯೆಯಲ್ಲಿಯೂ ದೊಡ್ಡ ದೊಡ್ಡ ತಪ್ಪುಗಳು ಆಗಿ, ಭಾರಿ ಹೆಚ್ಚುಕಡಿಮೆಗೆ ಕಾರಣವಾಗಿ, ಲೆಖ್ಖ ಮಾಡಲಿಕ್ಕೆ ಕೂಡದಷ್ಟು ಲುಕಸಾನು ಬೀಳ ಬಹುದು. ಮುಖ್ಯವಾಗಿ ರಕ್ಷಣೆಯ ಸುವಾರ್ತೆಯನ್ನು ಸಾರಿ, ರಕ್ಷಣೆಯ ಮಾರ್ಗವನ್ನು ತಮ್ಮ ಬೋಧನೆಯಿಂದಲೂ ನಡತೆಯಿಂದಲೂ ಇತರರಿಗೆ ತೋರಿಸಿ ಕೊಡ ತಕ್ಕಂಥವರಿಂದ ಎಂಥೆಂಥಾ ಹೆಚ್ಚುಕಡಿಮೆಗಳು ಆಗಿ, ಬಹು ಮೋಸವೇ ಒದಗ ಬಹುದು! ಇದನ್ನು ಲಕ್ಷ್ಯಕ್ಕೆ ತಂದು ಕೊಂಡು, ಒಬ್ಬೊಬ್ಬನು ತನ್ನ ಮತ್ತು ಬೇರೊಬ್ಬರ, ಆದರೆ ಮುಖ್ಯವಾಗಿ ತನ್ನ, ತಪ್ಪುಗಳನ್ನು ತಿದ್ದುವ ಹಾಗೆಯೂ ತಿದ್ದಿಸಿ ಕೊಳ್ಳುವ ಹಾಗೆಯೂ ನೋಡಿ ಕೊಳ್ಳಲಿ! ತಪ್ಪುಗಳ ಅರಿವು ತಿದ್ದುಪಡಿಯ ಬುಡವೇ. ಹೀಗಿರಲಾಗಿ ಆದ ತಪ್ಪುಗಳನ್ನು ತಡೆಯದೆ ತಿಳುಕೊಳ್ಳ ಬೇಕು. ತಿಳಿದು ಕೊಂಡ ತಪ್ಪುಗಳನ್ನು ತಡೆಯದೆ ತಿದ್ದಲೂ ತಿದ್ದಿಸಿ ಕೊಳ್ಳಲೂ ಬೇಕು. ಮತ್ತು ತಪ್ಪು ಆಗದ ಹಾಗೆ ಜಾಗ್ರತೆಯಾಗಿ ನೋಡಿಕೋ ಬೇಕು. ಈ ಮೂರು ನೀತಿಗೆ ಘನವನಸ್ಸು ಕೊಡುವವನು ಕಾರ್ಯಪ್ರವೀಣನಾಗಿ, ಕಾರ್ಯಸಿದ್ಧನೂ ಆಗಿ, ಬಾಳ್ವಾನು.

ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?

(116ನೇ ಪಾನಿನಿಂದ ಮುಂದೆ.)

ಕೊಯಿಲರ್ ತನ್ನ ಮನೆಯ ಸಮೀಪಕ್ಕೆ ಬಂದಾಗ ಅವನ ಹೆಂಡತಿ ಒಂದು ಹೊರೆ ಕಟ್ಟಿಗೆ ಹೊತ್ತುಕೊಂಡು ಬರುವವಳಾಗಿದ್ದಳು. ಬರೇ ಹರಕು ಬಟ್ಟೆ ಹಾಕಿ ಕೊಂಡಂಥ, ಮುಖದಲ್ಲಿ ಏನೂ ಕಳೆ ಇಲ್ಲದಂಥಾ ಚಿಕ್ಕ ಹುಡುಗಿಯೊಬ್ಬಳು ಅವಳ ಹಿಂದೆ ಎರಡನೇ ಕಟ್ಟಿಗೆ ಹೊರೆ ಹೊತ್ತು ಕೊಳ್ಳುತ್ತಾ ಬಂದಳು. ಇಬ್ಬರನ್ನು, ವಿಶೇಷವಾಗಿ ತನ್ನ ಮಗಳಾಗಿದ್ದ ಹುಡುಗಿಯನ್ನು, ಆ ಅವಸ್ಥೆಯಲ್ಲಿ ಕಂಡು, ದುಃಖಾಕ್ರಾಂತನಾಗಿ, ಬಹಳ ಮನೋವ್ಯಥೆ ಪಟ್ಟನು. ಅವನ ಹೆಂಡತಿ ಅವನನ್ನು ಕಾಣದೆ, ಮನೆಯ ಬಾಗಲಿಗೆ ಬಂದು, ತನ್ನ ಹೊರೆಯನ್ನಿಳಿಸಿ, ಒಳಗೆ ಹೋದಳು. ಅವನೂ ಬಾಗಲಿಗೆ ಬಂದು, ಅವಳ ಹಿಂದೆ ಒಳ ಶೇರಿದನು. ಒಳಗಿದ್ದ ಅಲ್ಪ ಸ್ವಲ್ಪ ಸಾಮಾನು ದೊಡ್ಡ ದಾರಿದ್ರ್ಯದ ಅವಸ್ಥೆಯನ್ನು ಕಾಣಿಸಿದ್ದಲ್ಲದೆ, ಏನೂ ಅಚ್ಚುಕಟ್ಟಾಗಿರದೆ, ಎಲ್ಲಾ ಅಡಿಮೇಲಾಗಿ, ಬಹು ವಿಕೃತವಾಗಿತ್ತು. ಅವನ ಹೆಂಡತಿ ಬಂದವನನ್ನು ಕಂಡು, ಒಂದು ದೊಡ್ಡ ಕೂಗು ಬಿಟ್ಟಳು; ಆದರೂ ಶಿಟ್ಟೇ

ರದೆ, ಒಂದು ತರದ ಪ್ರೀತಿಭಾವದಿಂದ ಸಂತೋಷ ಪಟ್ಟಳು. ತನ್ನ ಗಂಡನು ತಕ್ಕಷ್ಟು ಹಣವನ್ನು ಸಂಪಾದಿಸಿ ಕೊಂಡು, ತಿರಿಗಿ ಬಂದು, ಸಾಲಗಳನ್ನು ತೀರಿಸಿದ್ದರಿಂದ ಎಲ್ಲಾ ಕಷ್ಟವು ಹೋಗಿ, ತಾವು ಸುಖದಲ್ಲಿ ಬದುಕುವೆವು ಎಂದು ಅವಳು ಬಹಳ ಸಾರಿ ಕನಸು ಕಂಡಿದ್ದಳು. ಅವನು ಸುದ್ದಿಯಿಲ್ಲದೆ ಓಡಿ ಹೋಗಿ, ತನ್ನನ್ನೂ ಮಕ್ಕಳನ್ನೂ ದಿಕ್ಕಿಲ್ಲದ ದುರವಸ್ಥೆಯಲ್ಲಿ ಬಿಟ್ಟು ಬಿಟ್ಟದಕ್ಕೆ ಅವಳು ಆರಂಭ ದಲ್ಲಿ ಕಡು ಕೋಪಗೊಂಡು, ಶಾಪ ಹಾಕುತ್ತಾ ಇದ್ದಾಗ್ಯೂ, ಕಾಲಗತಿಯಲ್ಲಿ ಕೋಪವು ಅಣಗಿ ಹೋಗಿ, ವಿಯೋಗತಾಪವೂ ತಾನು ಮೊದಲು ಗಂಡನ ಮನಸ್ಸು ಒಡದು ಹೋಗಲಿಕ್ಕೆ ಬಹಳ ಕಾರಣ ಕೊಡುತ್ತಾ ಬಂದದಕ್ಕೆ ಪಶ್ಚಾತ್ತಾಪವೂ ಹುಟ್ಟಿ ಬಂದದರಿಂದ, ಆವನು ತಿರಿಗಿ ಬರುವ ದನ್ನು ಹಂಬಲಿಸುವವಳಾಗಿ, ಅವನು ತಿರಿಗಿ ಬಂದರೆ, ತಾನು ಅಷ್ಟು ಜಗಳಾಟ ಆಗದಂತೆಯೂ ಅವನ ಮನಸ್ಸು ಒಡದು ಹೋಗದಂತೆಯೂ ನೋಡಿ, ಜಾಗ್ರತೆ ಪಟ್ಟೇನು ಎಂಬದಾಗಿ ಅವಳು ಸಂಕಲ್ಪ ಸಹ ಮಾಡಿ ಕೊಂಡಿದ್ದಳು.

ಕೊಯಿಲರ್ ತನ್ನ ಹೆಂಡತಿ ಮಕ್ಕಳ ಕ್ಷೇಮಸಮಾಚಾರವನ್ನು ವಿಚಾರಿಸಿ ಕೇಳಿದನು; ಆದರೆ ಸಂತೋಷದ ಮಾತು ಒಂದಾದರೂ ಹೆಂಡತಿಯ ಬಾಯಿಯಿಂದ ಹೊರಡಲಿಲ್ಲಾ. ಅವಳು ಹೇಳಿದ ಕಥೆಯ ಸಾರಾಂಶವೇನಂದರೆ: ತನಗೆ ಅಸ್ವಸ್ಥವಾಗಿ, ಕೆಲಸ ಮಾಡಿ, ಏನಾದರೂ ಸಂಪಾದಿಸಿ ಕೊಳ್ಳಲಾರದ ಥಾವತಿಯಾಯಿತು. ಆ ಸಮಯದಲ್ಲಿ ತಾನು ಮಕ್ಕಳನ್ನು ಭಿಕ್ಷೆ ಬೇಡಲಿಕ್ಕೆ ಒಮ್ಮೆ ಕಳು ಹಿಸಿದ ಮೇಲೆ ಅವರು ಭಿಕ್ಷೆ ಎತ್ತಲಿಕ್ಕೆ ಹೋಗುವದು ದಿನದ ಕಟ್ಟಳೆಯಾಯಿತು. ದೇವರೂ ಪರೋ ಪಕಾರಿಗಳಾದ ಕೆಲವು ಜನರೂ ದಯವಿಟ್ಟು ಕೈ ಕೊಡದೆ ಹೋದದಾದರೆ, ತಾವು ಕಷ್ಟದಲ್ಲಿ ಮು ಳಿಗಿ, ಹೊಟ್ಟೆಗಿಲ್ಲದೆ ಸತ್ತೇ ಹೋಗುತ್ತಿದ್ದೆವು. ಅವಳ ಮಾತೆಲ್ಲಾ ಅವನಿಗೆ ಬಹಳವಾಗಿ ತಾಗಿ, ಬಹಳ ಮನೋವ್ಯಥೆ ಕೊಟ್ಟಿತು. ಬಹು ದುಃಖದಲ್ಲಿ ಅವನವಳಿಗೆ—"ಕಥರೀನಾ! (ಇದು ಅವಳ ಹೆಸರು) ನಾನು ನಿನಗೆ ಕೊಟ್ಟ ದುಃಖವನ್ನು ಕ್ಷಮಿಸು! ನಿಮ್ಮನ್ನೂ ನಿಮ್ಮ ಕಷ್ಟವನ್ನೂ ಬಿಡದೆ ನೆನಸುತ್ತಾ ಬಂದೆ; ಆದ್ದರಿಂದ ಪರದೇಶದಲ್ಲಿ ನಿಲ್ಲಲಿಕ್ಕಾಗಲಿಲ್ಲಾ; ನಿಮ್ಮ ಬಳಿಗೆ ಹ್ಯಾಗೂ ತಿರಿಗಿ ಬರ ಬೇಕೆಂಬ ಮನಸ್ಸು ಮಿಗಿಲಾಗಿತ್ತು" ಎಂದು ಹೇಳಿದನು.

ಬಂದ ಗಂಡನನ್ನು ಕಂಡ ಕೂಡಲೇ ಹೆಂಡತಿ ತಮ್ಮ ಕಷ್ಟಕಾಲವು ಈಗ ತೀರಿದ್ದೀತು ಎಂದು ಬಗೆದು, ಮನಸ್ಸಿನಲ್ಲಿ ಧೈರ್ಯ ಪಟ್ಟಳು; ಆದರೆ ಅವನು ಇಷ್ಟು ಮಾತುಕಥೆಯಾದ ಮೇಲೆ—"ನಿಮಗೆ ಹಣವನ್ನು ಗಂಟು ಕಟ್ಟಿ ಕೊಂಡು ಬಂದಿದ್ದೇನೆ" ಎಂತ ಹೇಳಿದ್ದಕ್ಕೆ ಅವಳ ಮೋರೆಯೆಲ್ಲಾ ಹೊಳಪಾ ಯಿತು. ಅಷ್ಟರೊಳಗೆ ಹುಡುಗಿ ಸಹ ಒಳ ಬಂದಳು. ಅವಳ ಹಿಂದೆ ಹುಡುಗನೂ ಬಂದನು. ಅವನು ಇಬ್ಬರನ್ನು ತಬ್ಬಿಕೊಂಡು, ಮುದ್ದಿಟ್ಟು, "ನನ್ನ ಗುರ್ತು ನಿಮಗುಂಟೋ?" ಎಂದು ಕೇಳಿದ್ದಕ್ಕೆ ಅವರು ಗುರ್ತಿಲ್ಲಾ ಎಂಥೇಳಲು, ಅವನು—"ನಿಮ್ಮ ತಂದೆ ನಾನು" ಎಂತ ಹೇಳಿದ್ದಕ್ಕೆ ಅವರು ಬಹು ಆಶ್ಚರ್ಯ ಪಟ್ಟರು. ಅವನು ಆವರನ್ನು ಚಿಕ್ಕ ಪ್ರಾಯದಲ್ಲಿ ಬಿಟ್ಟು ಹೋದ್ದರಿಂದಲೂ ಮೊದಲು ಇಲ್ಲದ ದುಸ್ತು ಹಾಕಿ ಕೊಂಡು ಇದ್ದದರಿಂದಲೂ ಅವರಿಗೆ ಅವನ ಗುರ್ತು ಶಿಕ್ಕದೆ ಹೋಯಿತು. ಅಷ್ಟು ಒಳ್ಳೇ ದುಸ್ತು ಹಾಕಿ ಕೊಂಡು ಬಂದವನು ತಮ್ಮ ತಂದೆಯೋ ಎಂಬದಕ್ಕೆ ವಿಶೇಷವಾಗಿ ಆಶ್ಚರ್ಯ ಪಟ್ಟರು. ಅವನಿಗೂ ಮಕ್ಕಳಿಗೂ ಮಾತು ತೊಡಗುತ್ತಲೇ ಅವನ ಹೆಂಡತಿ ಕಾಪೀ ಕಷಾ ಯವನ್ನು ಮಾಡಿ ತರಲಿಕ್ಕೆ ಹೋದಳು. ಅವಳು ಇದಕ್ಕೆ ಹೋದವಳೆಂತ ಅವನು ತಿಳುಕೊಂಡು, ತನ್ನ ಮಗಳ ಕೈಯಲ್ಲಿ ರೊಖ್ಖ ಕೊಟ್ಟು, ರೊಟ್ಟಿ ಸಕ್ಕರೆ ಹಾಲು ಕ್ರಯಕ್ಕೆ ತೆಗೆದು ಕೊಂಡು ಬರಲಿಕ್ಕೆ ಅವಳನ್ನು ಕಳುಹಿಸಿದನು. ಅವನ ಹೆಂಡತಿ ಅವನು ಹುಡುಗಿಗೆ ಹೇಳಿದ ಮಾತನ್ನು ಕೇಳಿ, ಎಷ್ಟು ಹಣ ಸಂಪಾದಿಸಿ, ಗಂಟು ಕಟ್ಟಿ ಕೊಂಡು ಬಂದಿದ್ದಾನು ಎಂಬುವ ವಿಷಯದಲ್ಲಿ ನೀರು ಕಾ

ಯಿಸುವಷ್ಟು ಹೊತ್ತೆಲ್ಲಾ ಆಶೆ ತಾಳಿ ಊಹೆ ಕಟ್ಟುತ್ತಿದ್ದಳು. ಅವಳು ಕಾಪೀ ನೀರನ್ನು ತಯಾರು ಮಾಡಿ, ಮೇಜಿಗೆ ತಂದಿಟ್ಟಾಗ ಅವನು ಒಂದು ಚೀಲ ತುಂಬಾ ರೂಪಾಯಿ ಮೇಜಿನ ಮೇಲೆ ಹಾಕಿದನು. ಆ ರೂಪಾಯಿ ಕಂಡು ಅವಳು ಪರವಶವಾದಂತಾದಳು. ಆಗ ಅವನು ಅಂದದೇನಂದರೆ: "ಈ ಹಣವನ್ನೆಲ್ಲಾ ನಾನು ಕಷ್ಟ ಮಾಡಿ ದುಡಿದು ಕೊಂಡಿದ್ಧೇನೆ. ಈ ಚೀಲದಲ್ಲಿ ಅನ್ಯಾಯದ ಕಾಸು ಒಂದೂ ಇಲ್ಲಾ. ಅಕಟಾ! ನಾನು ಮೊದಲು ಮನೆಯಲ್ಲಿದ್ದಾಗ ಅನ್ಯಾಯದ ಮಲದಲ್ಲಿ ನನ್ನ ಸಂಪತ್ತೆಲ್ಲಾ ಮಣ್ಣಾಯಿತು. ಆದರೆ ಇಂದಿನದಕ್ಕೂ ಅಂದಿನದಕ್ಕೂ ಬಹಳ ಹೆಚ್ಚು ಕಡಿಮೆ. ನನ್ನ ಅನ್ಯಾಯವನ್ನೆಲ್ಲಾ ದೇವರು ಮನ್ನಿಸಲಿ!" ಅಷ್ಟರಲ್ಲಿ ಹುಡುಗಿ ತಿರಿಗಿ ಬಂದು, ಮಕ್ಕಳಿಬ್ಬರೂ ಆನಂದಮುಖರಾಗಿ ಮೇಜಿನ ಮೇಲೆ ಇದ್ದದನ್ನು ನೋಡಿದರು. ಹೆತ್ತವರೂ ಮಕ್ಕಳೂ ಕೂಡಿ, ಸಂತೋಷದಲ್ಲಿ ಕಾಪೀ ಕಷಾಯವನ್ನು ಕುಡಿದು ರೊಟ್ಟಿ ತಿಂದರು. ಬಳಿಕ ಅವನು ಬಹು ಮಮತಾಭಾವದಲ್ಲಿ ಮಾತಾಡಿ, ಮಕ್ಕಳಿಬ್ಬರ ಕೈಯಲ್ಲಿ ರೊಖ್ಖ ಕೊಟ್ಟು ಹೇಳಿದ್ದೇನಂದರೆ: "ನೀವು ಇನ್ನು ಮುಂದೆ ಶಾಲೆಗೆ ಹೋಗ ಬೇಕು. ಆದ್ದರಿಂದ ಈಗ ಹೋಗಿ, ನಿಮಗೆ ಕಾಗದ ಸ್ಲೇಟು ಮುಂತಾದ್ದನ್ನು ಕ್ರಯಕ್ಕೆ ತೆಗೆದು ಕೊಳ್ಳಿರಿ!" ಹುಡುಗರು ಸಂತೋಷದಿಂದ ಹಾರಿ ಅಂಗಡಿಗೆ ಓಡಿದರು. ಅಂದಿನದರಂಥಾ ಉತ್ಸಾಹದಿವಸವು ಅವರಿಗೆ ಮುಂಚೆ ಎಂದೂ ಮೂಡಿ ಬಂದಿದ್ದಿಲ್ಲಾ.

ಹುಡುಗರು ಅಂಗಡಿಗೆ ಹೊರಟು ಹೋದ ಮೇಲೆ ಅವನು ಬಹು ದುಃಖಮುಖನಾಗಿ ಹೆಂಡತಿಯನ್ನು ನೋಡಿದನು. ಅವನನ್ನು ನೋಡಿ ಅವಳು ಅವನ ಮನಸ್ಸಿನಲ್ಲಿ ಬಹಳ ದುಃಖವೂ ಕರಕರೆಯೂ ಇರ ಬೇಕು ಎಂದು ತಿಳುಕೊಂಡು, ಕನಿಕರ ಪಟ್ಟಳು. ಆದರೆ ತನ್ನ ಕರಕರೆಯ ವಿಷಯದಲ್ಲಿ ಹೆಂಡತಿಯ ಹತ್ತರ ಬಾಯಿ ಬಿಡಲಿಕ್ಕೆ ಅವನಿಗೆ ಧೈರ್ಯ ಸಾಲದಂತಾಯಿತು. ಕಡೆಗೆ ಬಾಯಿ ಬಿಟ್ಟು, ಅವನು ಕೇಳಿದ್ದೇನಂದರೆ: "ಸೀಸ್ ಎಂಬ ಆ ಹಳ್ಳಿಯವನು ಇನ್ನು ಬದುಕುತ್ತಿದ್ದಾನೋ?" ಅವಳು—"ಇದ್ದಾನೆ" ಎಂದು ಉತ್ತರ ಕೊಡಲು, ಅವನು ಒಂದು ದೊಡ್ಡ ನಿಟ್ಟುಸುರು ಬಿಟ್ಟು, ಆರ್ತಸ್ವರದಿಂದ ಹೇಳಿದ್ದೇನಂದರೆ: "ನಾನು ಅಂದು ಸುಳ್ಳು ಪ್ರಮಾಣ ಮಾಡಿ, ಅವನ ಕೈಯಿಂದ ೪೨ ವರಹಾ ಅನ್ಯಾಯವಾಗಿ ತಿಂದೆ. ಈ ಪಾಪವು ನನಗೆ ಈ ವರೆಗೆ ಹೇಳಲಿಕ್ಕೆ ಕೂಡದಷ್ಟು ಬಾಧೆ ಕೊಡುತ್ತಾ ಬಂದದೆ. ಈ ಬಾಧೆಯನ್ನು ಇನ್ನು ತಡೆಯಲಾರದೆ ನಾನು ಹೋದ ರಾತ್ರಿ ಊರಿಗೆ ಮುಟ್ಟಿ, ನೆಟ್ಟಗೆ ನಮ್ಮ ಬೋಧಕರಲ್ಲಿ ಹೋಗಿ, ನನ್ನ ಆ ಪಾಪವನ್ನು ಅರಿಕೆ ಮಾಡಿದೆ. ಈ ಹೊತ್ತು ಮುಂಜಾನೆಗೆ ಕಚೇರಿಗೂ ಹೋಗಿ, ಸುಳ್ಳು ಪ್ರಮಾಣದ ತಕ್ಕೀರನ್ನು ಅರಿಕೆ ಮಾಡಿ, ಈ ಅಪರಾಧಕ್ಕೆ ಕಾಯಿದೆಯಲ್ಲಿ ವಿಧಿಸಿರುವ ಶಿತುವೆಗೆ ಒಳಗಾಗುತ್ತೇನೆ ಎಂತ ತಿಳಿಸಿ ಬಂದಿದ್ದೇನೆ."

ಈ ಮಾತನ್ನು ಕೇಳಿ ಅವನ ಹೆಂಡತಿಗೆ ದಿಗಿಲು ಹಿಡಿದು ಹೋಯಿತು. ಆದರೆ ದಿಗಿಲಿನ ಬೆನ್ನಿನಲ್ಲಿ ಕಡು ಶಿಟ್ಟು ಸಹ ಏರಿ, ಅವಳು ಹೇಳಿದ್ದೇನಂದರೆ: "ಅಂಥಾ ನಾಚಿಕೆಯನ್ನು ನಮ್ಮ ಮೇಲೆ ತರಲಿಕ್ಕೆ ಬಂದಿದ್ದೀಯೋ? ಯಾಕೆ ಬಂದಿ? ಅರಿಕೆ ಮಾಡುವ ಮೊದಲು ನನಗೆ ಯಾಕೆ ತಿಳಿಸಲಿಲ್ಲಾ? ತಿಳಿಸಿದ್ದಾದರೆ, ನೀನು ಅರಿಕೆ ಮಾಡದ ಹಾಗೆ ನಾನು ತಡಿಸಿ, ನಿನಗೆ ಸಮಾಧಾನ ಪಡಿಸುತ್ತಿದ್ದೆ. ಜನರು ಕೇಳಿ, ಏನು ಹೇಳ್ಯಾರು? ಅವ ಹುಚ್ಚನೆಂಧೇಳ್ಯಾರು. ಛೀ ಛೀ! ತೊಲತೊಲಗು! ಎಂದು ಜರಿದು ಬಿಟ್ಟಾರು. ನನ್ನ ಮೇಲೆಯೂ ನನ್ನ ಮಕ್ಕಳ ಮೇಲೆಯೂ ಈ ನಾಚಿಕೆ ಸಾಯುವ ತನಕ ಹೋಗದೆ ಇರುವದು." ಅದಕ್ಕವನು ಮಹಾ ದುಃಖಾಕ್ರಾಂತನಾಗಿ ಅಂದದೇನಂದರೆ: "ಹೌದು, ನಾಚಿಕೆಯ ಸಂಗತಿ ಸರಿ; ಆದರೂ ಅರಿಕೆ ಮಾಡದಿರಲಿಕ್ಕೆ ಕೂಡಲಿಲ್ಲಾ; ಅಂಗೈಯಲ್ಲಿ ಬೆಂಕಿ ತಡೆದೇನು: ಎದೆಯಲ್ಲಿಯ ಬೆಂಕಿಯನ್ನು ಹೆಚ್ಚು ದಿವಸ ತಡೆಯಲಿಕ್ಕಾಗಲಿಲ್ಲಾ; ನಾನು ಮಾಡಿ ಕೊಂಡದನ್ನು ಈಗ ತಿನ್ನ ಬೇಕಾಗುತ್ತದೆ. ನಾನು ಮೊದಲು ನಿನ್ನ ಹತ್ತರ ಬಂದು, ನಿನಗೆ ಎಲ್ಲಾ ತಿಳಿಸಿ,

ಅರಿಕೆ ಮಾಡಲಿಕ್ಕೆ ಹೋಗುತ್ತೇನೆ ಅಂದು ಕೊಂಡಿದ್ದೆ; ಆದರೆ ನೀನು ಒಡಂಬಡದೆ ಆಟಕಾಯಿಸುವಿ ಎಂದು ಭಯ ಪಟ್ಟು, ನಾನು ನಿನ್ನಲ್ಲಿ ಬಾರದೆ, ನೆಟ್ಟಗೆ ಬೋಧಕರಲ್ಲಿ ಹೋಗಿ, ನನ್ನ ಮೇಲಿದ್ದ ಪಾಪವನ್ನು ಅರಿಕೆ ಮಾಡಿದೆ. ಅಮೇರಿಕದಲ್ಲಿ ನನಗೆ ಉಣ್ಣಲಿಕ್ಕೂ ತಿನ್ನಲಿಕ್ಕೂ ಯಥೇಷ್ಟವೇ ಇತ್ತು; ಆದರೂ ಸುಖವೆಂಬದು ನನಗಲ್ಲಿ ಆಗಲೇ ಇಲ್ಲಾ; ನನ್ನ ಪಾಪವು ನನ್ನೆಲ್ಲಾ ಹಾಲಿನಲ್ಲಿ ಮಣ್ಣು ಹಾಕಿ ಬಿಟ್ಟಿತು; ನಿಮ್ಮವಸ್ಥೆಗಿಂತ ನನ್ನದು ಕೆಟ್ಟದಾಗಿತ್ತು; ನಾನೆಂಥಾ ದುರ್ಗತನಾಗಿದ್ದದು ನಿನಗೆ ಗೊತ್ತೇ ಇಲ್ಲಾ: ನನ್ನ ಎದೆಯಲ್ಲಿ ನಿತ್ಯವೇ ಬೆಂಕಿಯಿತ್ತು. ನನ್ನವಸ್ಥೆ ನಿನಗೆ ಕಿಂಚಿತ್ತಾಗಿ ತಿಳಿದಿದ್ದರೆ, ನನ್ನ ಮೇಲೆ ಕೋಪಿಸಿ ಕೊಳ್ಳದೆ, ಕನಿಕರವಿಡುತ್ತಿದ್ದಿ."

ಈ ಮಾತಿಗೆ ಅವಳ ಶಿಟ್ಟು ಅಣಗಿತು. ಮತ್ತು ಕಣ್ಣೀರಿಟ್ಟು ಅವಳು— "ನಿನಗೆ ಈಗ ಫಿತುವೆಯಾಗದ ಹಾಗೆ ಸರಕಾರದಲ್ಲಿ ಏನಾದರೂ ಮಾಡಲಿಕ್ಕೆ ಕೂಡದೋ?" ಎಂದು ಕೇಳಿದಳು. ಅದಕ್ಕವನು ಅಂದದೇನಂದರೆ: "ಏನೂ ಉಪಾಯವಿಲ್ಲಾ; ಆಗುವಂಥಾದನ್ನು ನಾನೀಗ ತಾಳಿಕೋ ಬೇಕಷ್ಟೇ. ನೀನು ಸಹ ಸೈರಿಸಿಕೋ ಬೇಕು. ನಮಗೆ ಕಷ್ಟವೂ ನಾಚಿಕೆಯೂ ಆದರೂ, ಚಿಂತಿಲ್ಲಾ; ಮನುಷ್ಯರು ಕಳ್ಳನೆಂತಲೂ ಕೆಟ್ಟವನೆಂತಲೂ ಹೇಳಿ ಜರಿದು ಬಿಟ್ಟರೂ, ದಯಾಳು ದೇವರು ತಳ್ಳಿಬಿಡದೆ, ಕರುಣವಿಟ್ಟು ಶೇರಿಸಿ ಕೊಂಡರೆ, ಸಾಕು; ಅನುದಿನ ಆತನ ಕ್ಷಮಾದಯವನ್ನು ಬೇಡಿ ಕೊಳ್ಳುತ್ತಾ ಬಂದೆ. ಈ ಹೊತ್ತು ಜರಿದು ಬಿಡುವ ಮನುಷ್ಯರು ನಾಳೆ ಇಲ್ಲಾ. ಅವರ ಮುಂದೆ ನಾಚಿಕೆಯಾಗಲಿ ಕೀರ್ತಿಯಾಗಲಿ ಎಷ್ಟರದು! ಆದರೆ ಮೇಲ್ಲೋಕದಲ್ಲಿ ಸರ್ವಜ್ಞನಾದ ದೇವರು ಇದ್ದು, ನಮ್ಮನ್ನು ನಿತ್ಯವೇ ನೋಡುತ್ತಿದ್ದಾನೆ. ನಾವು ಮಾಡುವಂಥಾದೆಲ್ಲವನ್ನು ವಿಚಾರಿಸಿ, ನ್ಯಾಯತೀರಿಸಿ, ಕರ್ಮಫಲದಾಯಕನಾಗಿದ್ದಾನೆ. ಇಲ್ಲಿ ತಮ್ಮ ಪಾಪಗಳಿಗೆ ಮನಸ್ತಾಪ ಪಡದವರನ್ನು ಆತನು ನರಕಾಗ್ನಿಯಲ್ಲಿ ಹಾಕಿಸುವನು."

ಗಂಡನು ಹೇಳಿದ್ದು ಅವಳಿಗೆ ಚನ್ನಾಗಿ ಗ್ರಹಿಕೆಯಾಗಲಿಲ್ಲಾ; ಆದರೂ ಅವಳನ್ನು ತಕ್ಕಷ್ಟು ಸಂತೈಸಿ, ಸಮಾಧಾನ ಪಡಿಸಿದನಂತರ ಆವನು ಮುಂದೆ ಮಾತಾಡಿ ಹೇಳಿದ್ದೇನಂದರೆ: "ನಾನು ಕ.... ಎಂಬ ಊರಿನ ಜೈಲಿಗೆ ಹೋಗ ಬೇಕಾದರೆ, ನಾನು ಆ ಊರಿನಲ್ಲಿಯ ನನ್ನ ಸಂಬಂಧಿಕನೊಬ್ಬನಲ್ಲಿ ನಮ್ಮ ಹುಡುಗನನ್ನು ಇರಿಸುತ್ತೇನೆ. ಅವನು ಅಲ್ಲಿ ಒಂದು ಕಸಬು ಕಲಿತು ಕೊಳ್ಳ ಬಹುದಲ್ಲದೆ ಆಗಿಂದಾಗ್ಯೆ ನನ್ನನ್ನು ನೋಡಲಿಕ್ಕಾಗಿ ಜೈಲಿಗೆ ಬಂದು ಹೋಗ ಬಹುದು." ಮತ್ತು ಹೆಂಡತಿಯ ಕೈಯಲ್ಲಿ ಅವಳು ಮೊದಲು ಎಂದೂ ಕಾಣದಷ್ಟು ಹಣ ಕೊಟ್ಟು, ಅವಳಿಗೆ ಹೇಳಿದ್ದೇನಂದರೆ: "ನಿನ್ನ ಸಂಪಾದನೆ ನಿನ್ನ ಮತ್ತು ಹುಡುಗಿಯ ಜೀವನಕ್ಕೆ ಸಾಲದಷ್ಟಕ್ಕೆ ಈ ಹಣವನ್ನು ಖರ್ಚು ಮಾಡುತ್ತಾ ಬಾ! ಹೀಗೆ ಮಾಡಿದರೆ, ಅದು ಹ್ಯಾಗೂ ನಾಲ್ಕೈದು ವರುಷಕ್ಕೆ ಬಂದೀತು. ಅಷ್ಟರೊಳಗೆ ಫಿತುವೆ ತೀರಿ, ನಾನು ಬಿಡುಗಡೆಯಾಗಿ ತಿರಿಗಿ ಬಂದೇನು." ಮತ್ತೊಂದು ಚೀಲವನ್ನು ತೋರಿಸಿ ಆವನವಳಿಗೆ ಹೇಳಿದ್ದೇನಂದರೆ: "ಈ ಚಿಕ್ಕ ಚೀಲದಲ್ಲಿರುವಷ್ಟು ಹಣವನ್ನು ನಾನು ಸೀಸನಿಗೆ ಮುಟ್ಟಿಸುತ್ತೇನೆ; ಅದು ಎಷ್ಟಂದರೆ: ನಾನು ಸುಳ್ಳು ಪ್ರಮಾಣ ಮಾಡಿ, ಅವನ ಕೈಯಿಂದ ಅನ್ಯಾಯವಾಗಿ ತಿಂದ ಆರ್ವತ್ತು ವರಹಾ ಮತ್ತು ಅದರ ಬಡ್ಡಿ."

ಬಳಿಕ ಅವನು ಎದ್ದು, ಸೀಸ್ ಎಂಬವನ ಬಳಿಗೆ ಹೋದನು. ಕೊಯಿಲರ್ ತನ್ನ ಬಳಿಗೆ ಬರುವದನ್ನು ಅವನು ತನ್ನ ಬಿಡಾರದ ನೆರೆಯಲ್ಲಿ ನೋಡಲು, ಮುಖವನ್ನು ತಿರುಗಿಸಿ, ಉಗುಳಿದನು. ಆದರೆ ಕೊಯಿಲರ್ ಅವನ ಎದುರಿಗೆ ಬಂದು, ನಿಂತು ಹೇಳಿದ್ದೇನಂದರೆ: "ತನ್ನ ಅನ್ಯಾಯಕ್ಕೆ ಪಶ್ಚಾತ್ತಾಪವನ್ನು ಪಡುವವನಿಗೆ ದೇವರು ಮಾಫು ಮಾಡುವಾತನು. ದೇವರು ಪಾಪಿಗಳಿಗೆ ನಡಿಸುವದಕ್ಕಿಂತ ಕಠಿಣವಾಗಿ ನೀನು ನನಗೆ ನಡಿಸ ಬೇಡಪ್ಪಾ! ಮನ್ನಿಸು! ನಾನು ನಿನಗೆ ದೊಡ್ಡ ಅನ್ಯಾಯ ಮಾಡಿ

ದ್ದೇನೆ. ಅದರ ಕಾರಣದಿಂದ ನಾನು ಊರಲ್ಲಿ ಇನ್ನು ತಡೆಯಲಿಕ್ಕೆ ಕೂಡದೆ, ಊರನ್ನು ಬಿಟ್ಟು, ಸಮುದ್ರವನ್ನು ದಾಟಿದೆ; ಆದರೆ ಸಮುದ್ರದ ಆಚೆಯಲ್ಲಿಯೂ ನನಗೆ ತಡೆಯಲಿಕ್ಕೆ ಕೂಡಲಿಲ್ಲ; ನಿನ್ನದನ್ನು ನಿನಗೆ ವಾಪಸು ಮಾಡಲಿಕ್ಕೆ ಪರದೇಶದಿಂದ ತಿರಿಗಿ ಬಂದಿದ್ದೇನೆ." ಕೊಯಿಲರನ ಮೇಲೆ ಸೀಸನಲ್ಲಿ ಅಂದಿನಿಂದ ದೊಡ್ಡ ಕೋಪವೂ ವಿರೋಧವೂ ಇತ್ತು; ಆದರೆ ಅದನ್ನು ಯಾರಿಗೂ ತೋರಿಸದೆ, ತನ್ನ ಮನಸ್ಸಿನಲ್ಲಿ ಇಟ್ಟು ಕೊಂಡಿದ್ದನು. ಮತ್ತು ದೇವರು ಅನ್ಯಾಯಕ್ಕೆ ತಕ್ಕ ಫಲವನ್ನು ಕೊಡುವಾತನಾಗಿ, ತನ್ನ ನ್ಯಾಯವನ್ನು ಬೈಲಿಗೆ ತಂದಾನು ಎಂದು ನಂಬಿ ಕೊಂಡಿದ್ದದರಿಂದಲೂ ಅವನು ಕೊಯಿಲರನ ವಿಷಯದಲ್ಲಿ ಯಾರ ಹತ್ತರವಾದರೂ ಹೆಚ್ಚು ಮಾತಾಡಿದ್ದಿಲ್ಲಾ. ಆದರೆ ಈಗ ಕೊಯಿಲರ್ ಬಂದು, ಕೇವಲ ದುಃಖಾಕ್ರಾಂತನಾಗಿ ತನ್ನ ಮುಂದೆ ನಿಂತು, ತನ್ನನ್ನು ಇಷ್ಟು ವಿನಯಪೂರ್ವಕವಾಗಿ ಬೇಡಿ ಕೊಂಡಲ್ಲಿ ಅವನ ಮನಸ್ಸು ಮೆತ್ತಗಾಗಿ, ಅವನು ಹೇಳಿದ್ದೇನಂದರೆ: "ಹೌದು, ದೇವರು ತನ್ನನ್ನು ಹಾಸ್ಯ ಮಾಡ ಬಿಡುವಾತನಲ್ಲಾ; ಆತನ ಭಯಹಸ್ತವು ಮೊಂಡವಾಗುವಂಥಾದಲ್ಲಾ." ಅದಕ್ಕೆ ಕೊಯಿಲರ್— "ನಾನು ಅಂದೇ ಅದನ್ನು ನೆನಸಿ ಕೊಂಡು, ಅನ್ಯಾಯಕ್ಕೆ ಹೆದರಿ ಕೊಂಡದಾದರೆ, ಆಗುತ್ತಿತ್ತು! ಆದರೆ ವಿವೇಕವಿಲ್ಲದೆ ದುಡ್ಡಿನ ಆಶೆಯಿಂದ ನಾನು ಅನ್ಯಾಯಕ್ಕೆ ಗುರಿಯಾದೆ. ಆದದನ್ನು ಆಗಲಿಲ್ಲಾ ಎಂತ ಮಾಡಲಿಕ್ಕೆ ಕೂಡಿದರೆ, ಏನೇನೂ ಕೊಟ್ಟೇನು" ಎಂದ್ಹೇಳಿ, ಆ ಚೀಲವನ್ನು ಸೀಸನ ಕೈಯಲ್ಲಿ ಕೊಟ್ಟು ಬಿಟ್ಟನು. ಅವನಿಗೆ ಅಂದು ಹಣವು ಬಹಳ ಅವಶ್ಯವಾಗಿ ಬೇಕಾಗಿತ್ತು; ಆದ್ದರಿಂದ ಆ ಚೀಲದಲ್ಲಿಯ ಹಣವನ್ನು ನೋಡಿದ ಕೂಡಲೇ ಅವನ ಮನಸ್ಸು ಪೂರ್ಣವಾಗಿ ಬೇರೆಯಾಗಿ ಹೋಯಿತು. ದುಃಖಾಕ್ರಾಂತನಾದ ಕೊಯಿಲರನಿಗೆ ಮನಃಪೂರ್ವಕವಾಗಿ ಕ್ಷಮೆ ಮಾಡಲಿಕ್ಕೆ ಒಡಂಬಟ್ಟನು. ಇಬ್ಬರು ಒಬ್ಬರಿಗೊಬ್ಬರು ಕೈಕೊಟ್ಟು, ಸ್ವಸ್ತಿ ಹೇಳಿ ಕೊಂಡರು. ಕೊಯಿಲರ್ ತಿರಿಗಿ ಹೋಗುವಾಗ್ಯೆ ಸೀಸ್ ಅವನ ಬೆನ್ನು ನೋಡುತ್ತಾ ತನ್ನ ಮನಸ್ಸಿನಲ್ಲಿ ನ್ಯಾಯದೀಶನೂ ಕರುಣಾಸಾಗರನೂ ಆದ ದೇವರನ್ನು ಸ್ಮರಿಸಿ ಕೊಂಡಾಡಿದನು.

(ಮುಂದೆ ಸಾಗಿಸಲ್ಪಡುವದು.)

ಉತ್ತರಗಳು.

(124ನೇ ಪಾನಿನಲ್ಲಿಯ ಪ್ರಶ್ನೆಗಳಿಗೆ.)

55. ಎಲೀಯ ಮತ್ತು ಯಾಕೋಬ. ಎಲೀಯನ ಮೊದಲನೇ ಪ್ರಯಾಣ ಅಹಾಬನ ಬಳಿಗೆ; ಕಡೇದು ಸ್ವರ್ಗಕ್ಕೆ. ೧ ಅರಸು. ೧೭, ೧; ೨ ಅರಸು. ೨, ೧೧. ಯಾಕೋಬನ ಮೊದಲಿನ ಪ್ರಯಾಣ ಪದನಾರಾಮಿಗೆ; ಉತ್ಪ. ೨೮; ೨೯, ೧; ಕಡೇದು ಐಗುಪ್ತಕ್ಕೆ. ಉತ್ಪ. ೪೬, ೫.

56. ವ್ಯವಸಾಯ (ಬೇಸಾಯ) ಎಂಬದು. ಉತ್ಪ. ೨, ೧೫.

57. ಚಿಪ್ಪಿಗರು (ಅಂದರೆ ಹೊಲಿಯುವ ಕೆಲಸ ಮಾಡುವ ದರಜಿಯವರು). ಉತ್ಪ. ೩, ೭.

58. ಮೃದಂಗವು ಹ್ಯಾಗೋ ಹಾಗೆಯೇ ಮಾತಾಳಿಗಳೂ ಹೊಳ್ಳುಪೊಳ್ಳು.

ವಿವಿಧ ವರ್ತಮಾನಗಳು.

ಬೆಂಗಳೂರಿನಲ್ಲಿ ವೆಸ್ಲಿಯನ್ ಮಿಶ್ಯನಿನ ಸಂಬಂಧದಲ್ಲಿ ಅನೇಕ ವರುಷಗಳು ಮಿಶ್ಯನೆರಿಯಾಗಿದ್ದ ರೆ. ಥೋಮಸ್ ಹಡ್ಸನ್ ಇವರು ವಿಲಾಯತಿಗೆ ಹೋದವರಾದರು. ಅವರಿಂದ ತಮಗುಂಟಾದ ಲಾಭದ ಸ್ಮರಣಾರ್ಥವಾಗಿ ದೇಶೀಯ ಕ್ರೈಸ್ತರು ಅವರ ಸನ್ನಿಧಾನದಲ್ಲಿ ಮಾನಪತ್ರವನ್ನು ಓದಿ, ಅವರಿಗೆ ಒಂದು ಗಂಧದ ಪೆಟ್ಟಿಗೆ, ಒಂದು ಗಂಧದ ಬರೆಯುವ ಮೇಜು ಕಾಣಿಕೆ ಮಾಡಿದರು.

ಮದ್ರಾಸಿನಲ್ಲಿ ಚರ್ಚ್‌ಮಿಶ್ಶನಿನ ದೇಶೀಯ ಮಿಶ್ಶನೆರಿ ರೆ. ಮಿ. ಸತ್ಯನಾಥನ್ ಇವರನ್ನು ಆ ಮಿಶ್ಶನಿನ ಕಮ್ಮಿಟಿಯವರು ವಿಶೇಷ ಕೆಲಸದ ಮೇಲೆ ಇಂಗ್ಲಾಂಡಿಗೆ ಕಳುಹಿಸಿದ್ದರಿಂದ ಅವರು ಕುಟುಂಬಸಮೇತವಾಗಿ ಅಲ್ಲಿಗೆ ಹೊರಟು ಹೋದರು. ಅವರು ಆರು ತಿಂಗಳಲ್ಲಿ ಹಿಂದಕ್ಕೆ ಬರುವರು.

ಛೋಟಾನಾಗಪುರದಲ್ಲಿ ಎಸ್. ಪಿ. ಜಿ. ಮಿಶ್ಶನಿನಲ್ಲಿ ಕೆಲವು ತಿಂಗಳು ಉಪದೇಶ ಹೊಂದಿ ಪರೀಕ್ಷಿತರಾದಂಥವರು ಕನಿಷ್ಟ ಪಕ್ಷಕ್ಕೆ ೧,೦೦೦ ಜನ ಪ್ರತಿ ವರ್ಷವೂ ಕ್ರೈಸ್ತರಾಗುತ್ತಾ ಇದ್ದಾರೆ.

ಬಂಗಾಳದ ಸಿಮ್ಲ ಊರಿನಲ್ಲಿ ಕಳೆದ ಆರು ಏಳು ತಿಂಗಳಲ್ಲಿ ಮೂರು ಭೂಕಂಪಗಳಾದವು. ಕಡೇ ಸಾರಿ ಆದ ಭೂಕಂಪವು ಒಂಭತ್ತು ನಿಮಿಷಗಳ ವರೆಗೆ ಇತ್ತು. ಇದೇ ಕಂಪವು ಪೇಶಾವರದಲ್ಲಿಯೂ ಸ್ಪರ್ಶವಾಗಿ, ಕೋಟೆಯ ಒಳಗಿನ ಗೋಡೆ ಬಿದ್ದು, ರಾವಲ್‌ಪಿಂಡಿ ಫೆರೋಜಪುರ ಊರುಗಳಲ್ಲಿಯೂ ಬಹಳ ನಷ್ಟ ಮಾಡುವಂಥಾದ್ದಾಯಿತು.

ಅಯೋಧ್ಯೆಯಲ್ಲಿ ಈ ಕಾಲದ ಪೈರು ಬಹಳ ಒಳ್ಳೇದು ಆದ್ದರಿಂದ ದವಸ ಧಾನ್ಯದ ಧಾರಣೆ ಉತಾರಾಗುತ್ತಾ ಅದೆ.

ಮುಂಬಾಯಿಯ ಟಂಕಶಾಲೆಯಲ್ಲಿ ೧೮೭೭-೮ ನೇ ವರ್ಷದಲ್ಲಿ ಹನ್ನೊಂದು ಕೋಟಿ ರೂಪಾಯಿ ನಾಣ್ಯ ಮಾಡಲಾದವು. ಯಾವ ಶೀಮೆಯ ಯಾವ ಟಂಕಶಾಲೆಯಲ್ಲಿಯೂ ಒಂದು ವರ್ಷದಲ್ಲಿ ಇಷ್ಟು ನಾಣ್ಯ ಮಾಡಿದ್ದು ಇಲ್ಲವಂತೆ.

ಅಮೇರಿಕದ ಯೂನೈಟೆಡ್ ಸ್ಟೇಟ್ಸ್ ಶೀಮೆಯಲ್ಲಿಯೂ ಫ್ರಾನ್ಸ ರಾಜ್ಯದಲ್ಲಿಯೂ ಬೆಳ್ಳಿಯ ನಾಣ್ಯಗಳನ್ನು ಮಾಡುವ ಕೆಲಸ ನಡಿಯುವದರಿಂದ ನಾಲ್ಕು ಕಡೆಗಳಲ್ಲಿಯೂ ಬೆಳ್ಳಿಯ ಧಾರಣೆ ಬಹುಶಾ ಏರಿಯದೆ.

ಚೀನಿ ಸರಕಾರದವರು ಪ್ರಜೆಗಳಿಂದ ಹಣ ಎತ್ತುವದಕ್ಕೆ ಹೊಸದೊಂದು ಉಪಾಯ ಕಂಡಿದ್ದಾರೆ. ಅದು ಏನು ಅಂದರೆ: ರಾಜ್ಯದಲ್ಲಿ ಹುಟ್ಟಿದ ಪ್ರತಿ ಒಂದು ಶಿಶುವಿಗೆ ಸುಮಾರು ನಾಲ್ಕು ಆಣೆ ಮಂಡೆತೆರಿಗೆ ನೇಮಿಸಿದ್ದಾರೆ. ಅವಳಿ ಮಕ್ಕಳು ಹುಟ್ಟಿದರೆ, ಹೆಚ್ಚಿಗೆ ತೆರಿಗೆ ಇಲ್ಲಾ.

ಚೀನಿ ರಾಜ್ಯದ ನಾಲ್ಕು ಸಂಸ್ಥಾನಗಳಲ್ಲಿಯೂ ಮಹಾ ಕ್ಷಾಮಕಾಲವಾಗಿ, ಹೆಚ್ಚು ಕಡಿಮೆ ೯೦ ಲಕ್ಷ ಜನರು ಅನ್ನಕ್ಕೆ ಮಾರ್ಗವಿಲ್ಲದೆ ಬಳಲುತ್ತಾರೆ. ಹೊಟ್ಟೆಗಿಲ್ಲದೆ ತಾಯಿ ತಂದೆಗಳು ಮಕ್ಕಳನ್ನು ಸಂತೆಗೆ ತಂದು ಮಾರುತ್ತಾರೆ.

ಚೀನ ದೇಶದಲ್ಲಿ ಹ್ಯಾಗೋ ಹಾಗೆ ಆ ದೇಶಕ್ಕೆ ಹೊಂದಿರುವ ಕೊರೇಯ ಎಂಬ ಅರ್ಧದ್ವೀಪದಲ್ಲಿಯೂ ಕಡು ಘೋರ ಬರವು ಬಿದ್ದಿತ್ತು. ಸಾವಿರಾರು ಜನರು ಹೊಟ್ಟೆಗಿಲ್ಲದೆ ಸತ್ತು ಹೋಗುತ್ತಿದ್ದರು. ಹಶಿವೆಗೆ ಸತ್ತ ಹೆಣಗಳನ್ನು ತಿನ್ನಲಿಕ್ಕಲ್ಲದೆ, ಕಂಡವರ ಮೇಲೆ ಬಿದ್ದು, ಅವರನ್ನು ಕೊಂದು ಹಾಕಿ ತಿನ್ನಲಿಕ್ಕೂ ಹತ್ತಿದರಂತೆ.

ತೆಲಿಫೋನ್ ಅಂದರೆ ಮಿಂಚಿನ ಶಕ್ತಿ ಮೂಲಕವಾಗಿ ಬಹು ದೂರವಿರುವವರ ಸಂಗಡ ಮಾತಾಡ ಬಹುದಾಗುವ ನವೀನ ಯಂತ್ರವನ್ನು ಕುರಿತು ಹಿಂದಿನ ಒಂದು ಅಂಕೆಯಲ್ಲಿ ಪ್ರಸ್ತಾಪವಾಯಿತು. ಇದಕ್ಕಿಂತಲೂ ಫೊನೊಗ್ರಾಫ್ ಎಂಬದು ಇನ್ನೊಂದು ಚಮತ್ಕಾರಿಕ ಯಂತ್ರವು ಸದ್ಯಾ ಸಂಕಲ್ಪಿಸಿದ್ದಾರೆ. ಇದರ ವಿಚಿತ್ರವೇನಂದರೆ— ಮಾತಾಡುವವನ ಅಥವಾ ಹಾಡುವವನ ಧ್ವನಿಯನ್ನು ಮಿಂಚಿನ ಶಕ್ತಿಯ ಮೂಲವಾಗಿ ಬರದಿಟ್ಟು, ಮುಂದಕ್ಕೆ ಅವಶ್ಯ ಬಿದ್ದಾಗ್ಯೆ ಅದಕ್ಕೆ ಸಂಬಂಧವಾದ ಒಂದು ಯಂತ್ರದ ಪ್ರಯೋಗದಿಂದ ಪುನಹಾ ಕಿವಿಗೆ ಕೇಳುವಂತೆ ಮಾಡುತ್ತಾರೆ. ಈ ಪ್ರಕಾರ ಮಹಾ ವಾಕ್ಚತುರನಾದ ಒಬ್ಬಾನೊಬ್ಬನ ವ್ಯಾಖ್ಯಾನವನ್ನು ಈ ಯಂತ್ರದಿಂದ ಬರದಿಟ್ಟು, ನೂರಾರು ವರುಷಗಳನಂತರ ಆ ವ್ಯಾಖ್ಯಾನಿ ಮೊದಲು ಉಚ್ಚರಿಸಿದಂತೆ ಅದೇ ಸ್ವರದಿಂದ ಪುನಶ್ಚ ನುಡಿಸ ಬಹುದು. ಹಾಗಾದರೆ ಮುಂದಿನ ತಲೆಗಳೆಯವರು ಮೃತವಾದವರ ಸ್ವರವನ್ನು ಅವರು ಜೀವಂತರಾಗಿರುವಾಗ್ಯೆ ಮಾತಾಡಿದಂತೆ ಕೇಳಬಹುದು. ತೆಲಿಫೋನ್ ಯಂತ್ರದಿಂದ ನೂರಾರು

ಹರದಾರಿ ದೂರವಿರುವವರ ಸಂಗಡ ಮಾತನಾಡಲಿಕ್ಕೆ ಆಗುತ್ತದೆ. ಫೊನೊಗ್ರಾಫ್ ಯಂತ್ರದಿಂದ ಮಾತಿನ ಸ್ವರವನ್ನು ಗಾಯನದ ಸುಸ್ವರವನ್ನು ಹಿಡಿದು ಸಂಗ್ರಹ ಮಾಡಿ, ಬೇಕಾದಷ್ಟು ಕಾಲ ಇಟ್ಟು ಕೊಂಡು, ಮನಸ್ಸು ಬಂದಾಗ್ಯೆ ಆ ಸ್ವರಗಳನ್ನೇ ಪುನಃ ಹೊರಡಿಸಿ, ಸಂತೋಷ ಪಡಬಹುದಾಗುತ್ತದೆ. ಟೆಲಿಫೊನಿನ ಸಂಬಂಧದಲ್ಲಿ ಇನ್ನೊಂದು ಹೇಳ ತಕ್ಕದ್ದು ಅದೆ; ಏನಂದರೆ— ಟೆಲಿಫೋನಿನ ತಂತಿಯಿಂದ ದೂರವಿರುವವರ ಸಂಗಡ ಮಾತಾಡುವಾಗ್ಯೆ ಮಿಂಚಿನ ಶಕ್ತಿ ಪ್ರಯೋಗಿಸಿ, ಮಾತಾಡುವವರ ಮುಖಛಾಯೆ ಆಚೆಗೂ ಈಚೆಗೂ ಹೋಗುವಂತೆ ಮಾಡಿ, ಅವರು ಒಬ್ಬನ ಮುಖ ಒಬ್ಬನು ನೋಡುವ ಹಾಗೆ ಮಾಡುವಂಥಾ ಹೊಸ ಯುಕ್ತಿ ಸಹಾ ಕಂಡಿದ್ಧಾರೆ. ಹೀಗೆ ಚಮತ್ಕಾರದ ಸಂಗತಿಗಳು ಬಂದರ ಹಿಂದೆ ಒಂದು ಬೆಳಕಿಗೆ ಬರುತ್ತಲೇ ಅವೆ.

ಇಂಗ್ಲಾಂಡಿನಲ್ಲಿ ಒಬ್ಬ ವೈದ್ಯನು ಮನುಷ್ಯನ ಕ್ಷೇಮವು ಚನ್ನಾಗಿ ಜೋಪಾಸನೆಯಾಗುವದಕ್ಕೆ ದಿವಸ ಒಂದಕ್ಕೆ ಆಹಾರವೆಷ್ಟು ಬೇಕಾದೀತು ಎಂತ ತಿಳಿಯುವ ಹಾಗೆ ತನ್ನ ಶರೀರದ ಮೇಲೆಯೇ ಪರೀಕ್ಷೆ ನಡಿಸಿದನು. ಅವನು ಆ ಪರೀಕ್ಷೆ ನಡಿಸುತ್ತಿದ್ದ ಆರು ವಾರಗಳಲ್ಲಿ ಮಾಂಸಾಹಾರ, ವೈನು ಬೀರು ಮುಂತಾದ ಮದ್ಯಪಾನ, ಚಾನೀರು, ಕಾಫಿನೀರು, ಹೊಗೆಸಪ್ಪು ಈ ಪದಾರ್ಥಗಳನ್ನು ತೆಗದು ಕೊಳ್ಳಲೇ ಇಲ್ಲಾ. ದಿನ ಒಂದಕ್ಕೆ ಕನಿಷ್ಟ ಪರಿಮಾಣದಲ್ಲಿ ೮ ಔನ್ಸ (ತುಮಾರು ೨೦ ತೊಲೆ) ಮಹತ್ಪರಿಮಾಣದಲ್ಲಿ ೧೨ ಔನ್ಸ (ತುಮಾರು ೩೦ ತೊಲೆ) ಆಹಾರ ತೆಗದುಕೊಂಡು ಕ್ಷೇಮವಾಗಿದ್ದನಂತೆ; ಪಾನವು ಶುದ್ಧವೂ ಉತ್ತೇಜನ ಗುಣಗಳಿಲ್ಲದ್ದೂ ಆಗಿದ್ದು, ಆಹಾರವು ಸಹಾ ನಿರ್ಮಲವೂ ಆಗಿದ್ದರೆ, ಮನುಷ್ಯನ ಕ್ಷೇಮವು ಒಳ್ಳೇದಾಗಿರುವದು ಎಂದು ತಾನು ಮಾಡಿದ ಪರೀಕ್ಷೆಯಿಂದ ಅವರಿಗೆ ತಿಳಿದು ಬಂತು.

ತುರ್ಕರಿಗೂ ರುಸ್ಯರಿಗೂ ಯುದ್ಧ ಪ್ರಾರಂಭವಾದ ದಿವಸದಿಂದ ಸಂಧಾನಕ್ಕೆ ಒಪ್ಪಿತ ಹಾಕಿದ ದಿವಸದ ವರೆಗೆ ಯೂರೋಪಿಯನ ತುರ್ಕಿಯಲ್ಲಿ ಹದಿನೈದು ಪಾಛಾಯರನ್ನೂ, ೧೧೩,೦೦೦ ದಳವಾಯಿಗಳನ್ನೂ ಶಿಪಾಯರನ್ನೂ, ೬೦೬ ತೋಫುಗಳನ್ನೂ, ೯೬೦೦ ಡೇರಗಳನ್ನೂ, ೯೪೦,೨೦೦ ಕೋವಿಗಳನ್ನೂ, ೨೪,೦೦೦ ಕುದುರೆಗಳನ್ನೂ, ೨೦೦,೦೦೦ ಪಿಸ್ತೂಲು ಮುಂತಾದ ಚಿಕ್ಕ ಆಯುಧಗಳನ್ನೂ, ೧೩,೦೦೦ ಭಲ್ಲೆಗಳೂ, ಇನ್ನೂ ಅರ್ಮೇನ್ಯದಲ್ಲಿ ಹದಿನಾಲ್ಕು ಪಾಛಾಯರನ್ನೂ, ೫೦,೨೦೦ ದಳವಾಯಿಗಳನ್ನೂ ಶಿಪಾಯರನ್ನೂ, ೬೬೨ ತೋಫುಗಳನ್ನೂ, ೧೬,೦೦೦ ಡೇರಗಳನ್ನೂ, ೪೨,೦೦೦ ಕೋವಿಗಳನ್ನೂ, ೧೮,೦೦೦ ಕುದುರೆಗಳನ್ನೂ, ಹೇರಳ ರಸ್ತನ್ನೂ ರುಸ್ಯರು ತುರ್ಕರಿಂದ ಶೆರೆ ಹಿಡಿದರು.

ಅರ್ಮೇನ್ಯ ದೇಶವನ್ನು ರುಸ್ಯರು ತಮ್ಮ ರಾಜ್ಯಕ್ಕೆ ಶೇರಿಸಿ ಕೊಂಡು, ತಮ್ಮ ಅಧಿಕಾರ ಅಲ್ಲಿ ನಡಿಸುತ್ತಾ, ಯುದ್ಧದ ಸಮಯದಲ್ಲಿ ಊರು ಬಿಟ್ಟು ಗುಳೆ ತೆಗದ ಮುಸಲ್ಮಾನರ ಭೂಮಿ ಯಾವತ್ತೂ ಮುಟ್ಟುಗೋಲಾಗ ಬೇಕೆಂತಲೂ ಇನ್ನು ಮುಂದೆ ಆ ಗುಳೆ ತೆಗದವರು ಪುನಃ ಬಂದರೆ, ಆ ಭೂಮಿಯಲ್ಲಿ ವಸ್ತಿ ಮಾಡಲಾಗದೆಂದೂ ಅಪ್ಪಣೆ ಏರ್ಪಡಿಸಿದ್ಧಾರೆ. ಮತ್ತು ಕುರ್ದಿಸ್ಥಾನದಲ್ಲಿರುವ ಕ್ರೈಸ್ತರಿಗೆ, ನೀವು ಅರ್ಮೇನಿಯದಲ್ಲಿ ಬಂದು ಇರ ಬೇಕು, ಮುಟ್ಟುಗೋಲು ಹಾಕಿದ ತುರ್ಕರ ಭೂಮಿ ನಿಮಗೆ ಕೊಡುತ್ತೇವೆ ಎಂತ ವರ್ತಮಾನ ಕಳುಹಿಸಿದ್ಧಾರೆ. ಹೀಗೆ ಬರುವವರಿಗೆ ಹಣ ಸಹ ಕೊಟ್ಟು ಸಹಾಯ ಮಾಡುವದಕ್ಕೆ ರುಸ್ಯ ಸರಕಾರದವರು ಸಿದ್ಧವಾಗಿದ್ಧಾರೆ.

ಇಂಗ್ಲಿಷರು ಯುದ್ಧಕ್ಕೆ ಬಹು ಸನ್ನಾಹ ಮಾಡಿ ಕೊಳ್ಳುತ್ತಾ ವಿಶೇಷವಾಗಿ ತಮ್ಮ ನೌಕಾಸೇನಾಬಲವನ್ನು ಸವರಿಸುತ್ತಿದ್ಧಾರೆ. ಇಂಗ್ಲಂದವು ಕಚ್ಚಲಿಕ್ಕೆ ಬಾಯಿ ತೆರದ ಸಿಂಹನಂತೆ ಕಾಣುತ್ತದೆ, ಆದರೆ ಕಚ್ಚಲಿಕ್ಕೆ ಹೋಗುವದೇನೋ? ತಿಳಿಯದು. ರುಸ್ಯರೂ ಯುದ್ಧಸನ್ನಾಹದಲ್ಲಿ ಇದ್ದೇ ಇದ್ಧಾರೆ. ಸದ್ಯಕ್ಕೆ ಕೂಡಿರುವಷ್ಟು ರುಸ್ಯದಂಡು ಯುದ್ಧವು ನಡೆಯುವ ಸಮಯದಲ್ಲಾಗ್ಯ

ದರೂ ಕೂಡಿದ್ದಿಲ್ಲವಂತೆ.—ಇತ್ತಲಾಗೆ ರುಸ್ಯರು ರುಮೇನ್ಯರಿಗೆ ಮಿತ್ರದ್ರೋಹವೆಂಬದಾಗಿ ಕಾಣುವ ಪ್ರಕಾರದಲ್ಲಿ ನಡಿಸಿದ್ದು ಈ ವರೆಗೆ ರುಸ್ಯರ ಪಕ್ಷವನ್ನು ಹಿಡಿದಿದ್ದ ಅನೇಕರ ಮನಸ್ಸಿಗೆ ನೋಯಿಸಿ, ಬಹು ವಿಕಲ್ಪಕ್ಕೆ ಕಾರಣವಾಯಿತು.—ಪಾರ್ಸಿಸ್ಥಾನದ ಶ್ಯಾ (ಮಹಾರಾಜ) ರುಸ್ಯ ಮಹಾರಾಜನ ಭೇಟಿಗಾಗಿ ಪೇತರ್ಸ್ಬುರ್ಗೆಂಬ ರುಸ್ಯ ರಾಜ್ಯಧಾನಿಗೆ ಬಿಜಯಂಗೈಯುವ ಆಲೋಚನೆಯಲ್ಲಿದ್ದಾನಂತೆ.—ರುಸ್ಯ ಸಾಮ್ರಾಜ್ಯದಲ್ಲಿ ೫ ಕೋಟಿ ೯೦ ಲಕ್ಷ ಗ್ರೇಕ ಕಥೋಲಿಕ ಕ್ರೈಸ್ತರು ಇದ್ದಾರಂತೆ. ಇತರ ಮತದವರ ಸಂಖ್ಯೆ ೨ ಕೋಟಿ ೪೦ ಲಕ್ಷ. ಈ ಸಂಖ್ಯೆಯಲ್ಲಿ ಯೆಹೂದ್ಯರೂ ತುರ್ಕರೂ ಮೂರ್ತಿಪೂಜಕರೂ ಇದ್ದಾರೆ.

ತೀರಿ ಕೊಂಡ ಪಿಯೊನೋನೊ ಎಂಬ ಪೋಪಸ್ವಾಮಿ ೫ ಕೋಟಿ ರೂಪಾಯಿಯಷ್ಟು ಧನಸಂಗ್ರಹ ಬಿಟ್ಟು ಹೋದನು. ಅವನು ಶೆರೆಯವನಾಗಿ, ಕೇವಲ ದುಃಖಜೀವಿಯಾಗಿ ಬದುಕುತ್ತಾನೆ ಎಂಬದಾಗಿ ಯೇಸುವಿತರು ಸುದ್ದಿ ಹಬ್ಬಿಸಿ, ಕಥೋಲಿಕರಲ್ಲಿ ಅವನ ಮೇಲೆ ಕನಿಕರವನ್ನು, ಇತಲ್ಯ ಸರಕಾರದ ಮೇಲೆ ಆಗ್ರಹವನ್ನು ಹುಟ್ಟಿಸ ನೋಡುತ್ತಿದ್ದರು. ಅವನು ಸತ್ತು ಹೋದ ಮೇಲೆ ಅವನ ಮಠದ ಕಿಂಕರರು ಜನರುಗಳಿಗೆ ಒಂದು ಕಟ್ಟು ಹುಲ್ಲು ತೋರಿಸಿ, ಅದು ಹಾಸಿಗೆ ಇದ್ದಿಲ್ಲವಾದ ಪೋಪಸ್ವಾಮಿಯ ಬಿಛಾನೆಯಾಗಿದ್ದದು ಎಂಥೇಳಿ, ಆ ಹುಲ್ಲನ್ನು ಒಂದೊಂದು ದಂಟನ್ನು ೧ ಸ್ತ್ರಿ ಪಾವಲಿಗೆ ವಿಕ್ರಯ ಮಾಡಿದರಂತೆ.

ಚಂದಾದಾರರಿಗೆ.

ಚಂದಾದಾರರಲ್ಲಿ ಸುಮಾರು ಮಂದಿ ವಂತಿಗೆ ಹಣವನ್ನು ಕೊಡದೆ ಹೋಗಿರುವದು ಕರಕರೆಗೆ ತಕ್ಕ ಕಾರಣವೇ. ಮಿಶ್ಯನ್ ಪುಸ್ತಕಖಾನೆಯ ಪಾರುಪತ್ಯಗಾರರು ಬಾಕಿದಾರರಿಗೆ ಎಚ್ಚರಿಸಿ ಬುದ್ಧಿ ಹೇಳ ಬೇಕೆಂಬದಾಗಿ ನನ್ನ ಹತ್ತರ ಹೇಳಿ ಕೊಂಡಿರುತ್ತಾರೆ. ಅದಲ್ಲದೆ ಬಾಕಿಯನ್ನು ಸಲ್ಲಿಸದೆ ಹೋಗುವವರಿಗೂ ಇನ್ನು ಮುಂದೆ ವಂತಿಗೆ ಹಣವನ್ನು ಮುಂದಾಗಿಯೇ ಕೊಡದವರಿಗೂ ಜೂಲೈ ತಿಂಗಳಲ್ಲಿ ಪ್ರಾರಂಭಿಸುವ ಹೊಸ ವರುಷದ ಕ್ರೈಸ್ತಸಭಾಪತ್ರವು ರವಾನೆಯಾಗಲಿಕ್ಕಿಲ್ಲಾ ಎಂಬದಾಗಿ ನಿಷ್ಕರ್ಷಿಸಿ ಕೊಂಡಿದ್ದಾರೆ.

ಅನೇಕ ಕ್ರೈಸ್ತಸಭೆಯವರು ಮಾತ್ರವಲ್ಲಾ, ಸಭೆಯವರಲ್ಲದ ಹಿಂದುಗೃಹಸ್ಥರಾದರೂ ಕ್ರೈಸ್ತಸಭಾಪತ್ರವನ್ನು ಓದಲಿಕ್ಕೆ ಇಷ್ಟಪಟ್ಟವರಾಗಿ, ವಂತಿಗೆ ಹಣವನ್ನು ಸಂತೋಷದಲ್ಲಿ ಮುಂದಾಗಿ ಸಲ್ಲಿಸಿ ಕೊಟ್ಟಿರುತ್ತಾರೆ. ಹೀಗಿದ್ದ ಮೇಲೆ ಬಾಕಿದಾರರು ಬಾಕಿಯನ್ನು ಸಂತೋಷದಲ್ಲಿ ಕೊಡ ಬಾರದೋ? ಕೊಡದೆ ಹೋದರೆ, ಅನ್ಯಾಯವಾಗದೋ? ಬರೇ ೮ ಆಣೆಗೆ, ಅಂದರೆ ತೀರಾ ತುಸ ವಂತಿಗೆ ಹಣಕ್ಕೆ, ದೊರಕುವ ಈ ಪತ್ರವು ಹತ್ತು ಮಂದಿ ಕ್ರೈಸ್ತರಿಗೆ ಮಾತ್ರವಲ್ಲಾ, ನಾಲ್ಕು ಮಂದಿ ಹಿಂದು ಗೃಹಸ್ಥರಿಗಾದರೂ ಪ್ರಯೋಜನದ್ದೆಂತ ಕಂಡು, ಇಷ್ಟಪ್ರಿಯವಾಗಿ ಹೋಗಿರಲಾಗಿ, ಯಾರಾದರೂ ಒಂದು ವೇಳೆ ಮೇಲಿನ ಮಾತಿಗೆ ಶಿಟ್ಟಾಗಿ—ಹಾಗಾದರೆ ಈ ಸಭಾಪತ್ರವು ನನಗೆ ಇನ್ನು ಬೇಡಾ! ಎಂದು ಹೇಳಿ, ಈ ಪತ್ರವನ್ನು ಬಿಟ್ಟು ಬಿಡುವ ಆಲೋಚನೆ ಹಿಡಿದರೆ, ಸಮವಾದೀತೇ? ಇತರರಿಗೆ ಪ್ರಯೋಜನವಾಗಿರುವ ಈ ಪತ್ರದ ಉಪಕಾರಕ್ಕೆ ಯಾರಾದರೂ ಸಭೆಯವರು ತಾವೇ ತಮ್ಮನ್ನು ಅಯೋಗ್ಯರೆಂತ ಕಾಣಿಸಿ ಕೊಳ್ಳದೆ, ಈ ಪತ್ರದ ಉಪಕಾರವು ಇನ್ನು ಮುಂದೆಯೂ ಸಾಧ್ಯವಾಗುವಷ್ಟು ಜನರಿಗೆ ದೊರಕುವಂತೆ ಎಲ್ಲರು ಕೈ ಕೊಟ್ಟು ಅನುಕೂಲವಾಗಿರಬೇಕೆಂದು ಬೇಡಿ ಕೊಳ್ಳುತ್ತೇನೆ.—ಕ್ರೈ. ಸ. ಕ.

Printed at the Basel Mission Press, Mangalore.

ಕ್ರೈಸ್ತಸಭಾಪತ್ರ

ಪುಸ್ತಕ ೧೦. JUNE 1878. ಅಂಕೆ ೧೨.

ಅಡಕವು: ಘನ ಪೂರ್ವದಲ್ಲಿ ಆದೊಂದು ತೀರ್ಪಿನ ಮಾತು—ಪ್ರಾರ್ಥನೆಗೆ ಕೇಡು—ನಿನ್ನ ಭಯ ಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?—ವಿವಿಧ ವರ್ತಮಾನಗಳು.

ಘನ ಪೂರ್ವದಲ್ಲಿ ಆದೊಂದು ತೀರ್ಪಿನ ಮಾತು.

ದೇವರಿಲ್ಲವೆಂದು ಬುದ್ಧಿಹೀನರು ತಮ್ಮ ಹೃದಯದಲ್ಲಿ ಹೇಳಿ ಕೊಳ್ಳುತ್ತಾರೆ; ಅವರು ಕೆಟ್ಟು ಹೋಗಿ, ತಮ್ಮ ಕರ್ಮಗಳಲ್ಲಿ ಅಸಹ್ಯರಾಗಿದ್ದಾರೆ; ಒಳ್ಳೇದನ್ನು ಮಾಡುವವನು (ಅವರಲ್ಲಿ) ಒಬ್ಬನೂ ಇಲ್ಲಾ. ಕೀರ್ತ. ೧೪, ೧.

ತನಗೆ ಹೆತ್ತ ತಾಯಿ ಇಲ್ಲಾ, ತಾನು ಹುಟ್ಟಲೇ ಇಲ್ಲಾ ಎಂದು ಯಾರೊಬ್ಬನು ಹೇಳಿದರೆ, ಇತರರು ನಂಬ್ಯಾರೇ? ಅವನಿಗೇನು ಅಂದಾರು? ಪೈತ್ಯಗಾರ, ಹುಚ್ಚಾ! ಎಂದು ಅಂದಾರಲ್ಲವೋ? ಪರಮಾತ್ಮನೂ ಸರ್ವಸದ್ಗುಣಸಂಪೂರ್ಣ ಸರ್ವೇಶನೂ ಸರ್ವಕರ್ತನೂ ಆಗಿರುವ ದೇವರು ಇಲ್ಲಾ ಎಂಥೇಳುವವನು ಹುಚ್ಚನಾಗಿರದೆ, ಭಾರಿ ಬುದ್ಧಿವಂತನೋ? ಅವನು ಮಾತ್ರ ಹುಚ್ಚನೋ? ಇವನೂ ಹುಚ್ಚನಲ್ಲವೋ? ಇಬ್ಬರೂ ಹುಚ್ಚರೇ; ಆದರೆ ಅವನಿಗಿಂತ ಇವನು ಭಾರಿ ಹುಚ್ಚನೆಂದು ಹೇಳಿದರೆ, ನ್ಯಾಯವಾದೀತು. ನಿರ್ಮಾಣಕರ್ತನೂ ರಕ್ಷಾಕರ್ತನೂ ದೇವರು ಇಲ್ಲವಾದರೆ, ಈ ಜಗತ್ತೆಲ್ಲವೂ, ಅಂದರೆ ಸ್ಥಾವರ ಜಂಗಮಾದಿಗಳು ಮಾತ್ರವಲ್ಲಾ, ಜಗತ್ತಿನಲ್ಲಿ ಆಗುವ ಕಾರ್ಯಗಳು ಸಹಾ (ಶಿಕ್ಷಾಕಾರ್ಯಗಳೂ ರಕ್ಷಾಕಾರ್ಯಗಳೂ) ಎಲ್ಲಿಂದ? ಯಾರಿಂದ? ಎಲ್ಲಕ್ಕೆ ಕಾರಣನು ಯಾರು? ಎಂಬ ಪ್ರಶ್ನೆಗೆ ತಕ್ಕ ಉತ್ತರ ಯಾರು ಕೊಟ್ಟಾನು? ಬರೇ ಅಲ್ಪ ಕಾರ್ಯಗಳಿಗಾದರೂ ಕಾರಣಗಳು ಇರಲಾಗಿ, ಮಹತ್ತಾದ ಕಾರ್ಯಗಳಿಗೆ, ಇವುಗಳ ಬುಡವೇ ಆಗಿರುವ ವಿಶ್ವೋತ್ಪತ್ತಿ ಎಂಬ ಕಾರ್ಯಕ್ಕೂ, ಕಾರಣವಿರದೋ? ಸರ್ವಕರ್ತನು ಇರನೋ? ದೇವರು ಯಾರಿಗೂ ಕಾಣದಾತನಾಗಿದ್ದರೂ, ಸರ್ವಜಾತಿಯವರಲ್ಲಿಯೂ ಸಕಲ ದೇಶದ್ವೀಪಾಂತರನಿವಾಸಿಗಳಲ್ಲಿಯೂ ದೇವರು ಇದ್ದಾನೆ ಎಂಬುವ ಬೋಧವು ಇರುವದಲ್ಲದೆ, ಆತನ ದಯ ಪ್ರಸಾದಗಳನ್ನು ಹೊಂದಿ, ಆತನ ದರ್ಶನ ಸಹಾ ಪಡಕೊಳ್ಳ ಬೇಕೆಂಬುವ ಭಕ್ತಿಭಾವವೂ ಉಂಟು. ನ್ಯಾಯವೂ ಕಾರಣವೂ ಇಲ್ಲದೆ ಅಂಥಾ ಬೋಧವು ಅಂಥಾ ಭಕ್ತಿಭಾವವು ನೆಲೆಗೊಂಡದಲ್ಲಾ; ಆದರೂ ದೇವರಿಲ್ಲವೆಂದು ಹೇಳುವವರು ಈ ಕಲಿಯುಗದಲ್ಲಿ ಅನೇಕರಿದ್ದಾರೆ. ಪರಂತು ಇವರು ಇತ್ತಲಾಗೆ ಮಾತ್ರ ಉತ್ಪನ್ನರಾಗಿ, ನೂತನ ಜ್ಞಾನಪ್ರಕಾಶ ಬಲದಿಂದ ಹಾಗೆ ತಿಳುಕೊಂಡು ಹೇಳುವವರಾದರೆಂದು ನೆನಸಲಾಗದು: ಅವರ ವಾದವು ಒಂದು

ಹಳೇ ಬೊಗಳಾಟವೇ. ಮೇಲಿನ ವಚನವನ್ನು ನೋಡಿದರೆ, ದೇವರಿಲ್ಲವೆಂಬ ನಾಸ್ತಿಕ್ಯಕ್ಕೆ ಒಂದು ನೂತನ ವಿದ್ಯಾಸಂಪತ್ತು ಅಲ್ಲಾ, ಒಂದು ಹಳೇ ರೋಗವೇ ಬುಡವಾಯಿತೆಂದು ತೋರುತ್ತದೆ.

ಆದರೆ ಈ ಹಳೇ ರೋಗದ ಸಂಗತಿ ಹ್ಯಾಗೆ? ಅಂಥಾ ಬುದ್ಧಿವಿಕಾರದ ಕಾರಣವೇನು? ಎಂಬುವ ಪ್ರಶ್ನೆಗೆ ಮೇಲಿನ ವಚನದಲ್ಲಿಯೂ ತಕ್ಕ ಉತ್ತರ ಕೊಟ್ಟದೆ. ಅವರು **ಕೆಟ್ಟು** (ಅಂದರೆ ನೀತಿಗೆಟ್ಟು) ಹೋಗಿ, **ತಮ್ಮ ಕರ್ಮಗಳಲ್ಲಿ ಅಸಹ್ಯರಾದ್ದರಿಂದ** (ಅಂದರೆ ಕೇವಲ ಅಸಹ್ಯವೇ ಆಗಿರುವಷ್ಟು ದುಷ್ಕರ್ಮಗಳನ್ನು ಮಾಡುವವರಾದ ಕಾರಣ) ಅವರು ಹಾಗೆ ಬೊಗಳುವವರಾದರು. ಯಾರ ದಾಕ್ಷಿಣ್ಯವಾಗಲಿ ಭಯವಾಗಲಿ ಅಂಕೆಯಾಗಲಿ ಇಲ್ಲದೆ, ಕೇವಲ ಇಛ್ಛಾಪ್ರಮಾಣವಾಗಿ ನಡಕೊಂಡು, ದುರ್ವ್ಯಸನಗಳನ್ನು ತೀರಿಸ ಬೇಕೆಂಬುವ ಮನೋಗತದಿಂದ ನಾಸ್ತಿಕ್ಯವು ಹುಟ್ಟಿದ್ದಾಗಿದೆ. ಪವಿತ್ರ ಪರಂಜೋತಿಯಾದ ದೇವರು, ಪರಾತ್ಪರ ಸರ್ವೇಶನು, ಸರ್ವಜ್ಞನಾದ ಕರ್ಮಫಲದಾಯಕ ನ್ಯಾಯದೀಶನು ಪಾಪಾತ್ಮರಿಗೆ ಆಗನು. ಬೆಳಕನ್ನು ದ್ವೇಷಿಸಿ, ಕತ್ತಲೆಯಲ್ಲಿ ನಡಕೊಳ್ಳ ಮನಸ್ಸಿದ್ದವರಿಗೆ ಅಂಥಾ ದೇವರ ನೆನಪಿನಿಂದ ಅಭ್ಯಂತರವೂ ಭಯಾಸ್ಪದವೂ ಆಗುವ ಕಾರಣದಿಂದ ಆತನು ಅವರಿಗೆ ಬೇಡವೇ ಬೇಡಂತಾಗುತ್ತಾನೆ. ಆದರೆ ದೇವರು ನಮಗೆ ಬೇಡವೇ ಬೇಡ ಎಂದು ಅರಿಕೆ ಮಾಡಲಿಕ್ಕೆ ಯಥಾರ್ಥ ಮನಸ್ಸು ಅವರಿಗೆ ಸಾಲದ ಕಾರಣ ಅವರು ಕಪಟಿಗಳಾಗಿ "ದೇವರು ಇಲ್ಲಾ" ಎಂತ ಬೊಗಳ ತೊಡಗುತ್ತಾರೆ.

ಆದರೆ ಸರ್ವವ್ಯಾಪಕನೂ ಸರ್ವಜ್ಞನೂ ಸರ್ವಶಕ್ತನೂ ಆಗಿರುವಂಥಾ ದೇವರು ಇರುವ ಪಕ್ಷದಲ್ಲಿ ಆತನ ಕೈಗೆ ತಪ್ಪಿಸಿ ಕೊಳ್ಳಲಿಕ್ಕೆ ಕೂಡದ್ದರಿಂದ ಅಂಥಾ ದುರ್ವಿಷಯಾಸಕ್ತರು "ಆತನು ಇಲ್ಲಾ" ಎಂಬುವ ಬೊಗಳಾಟವು ಹೌದಾದ ಮಾತೆಂದೂ ಮಹಾ ಜ್ಞಾನಸಂಯುಕ್ತವಾದ ಮಾತೆಂದೂ ಕಾಣ ಬರುವ ಹಾಗೆ ನೋಡಿ, ನಾಸ್ತಿಕ್ಯವನ್ನು ತಮ್ಮಲ್ಲಿಯೂ ಇತರರಲ್ಲಿಯೂ ಹುಟ್ಟಿಸಲಿಕ್ಕೆ ಪ್ರಯತ್ನ ಮಾಡುವವರಾಗುತ್ತಾರೆ. ಪಾಪಪುಣ್ಯ, ನಿತ್ಯನೀತಿ, ನರಕಸ್ವರ್ಗ ಎಂಬೀ ಮೊದಲಾದವುಗಳ ವಿಚಾರವು ಮೂಢಭಕ್ತಿವಂತ ಜನರಿಗೆ ಮಾತ್ರವೇ ಒಪ್ಪುವದು; ಆದರೆ ವಿದ್ವಾಂಸರೂ ಬುದ್ಧಿಶಾಲಿಗಳೂ ಅಂಥ ವಿಚಾರದ ಮಾತೆಲ್ಲವೂ ಅಜ್ಜಿಕಥೆ ಎಂತಾ ತಿಳುಕೊಂಡು, ಅದನ್ನು ಜರಿದು ಬಿಟ್ಟಿದ್ದಾರೆ ಎಂದು ಹೇಳಿ ನಂಬಿಸುವರು. ಮತ್ತು ಬುದ್ಧಿ ಹ್ಯಾಗೂ ವಿಕಾರವಾಗಿ, ದೇವರಿಲ್ಲವೆಂಬುವ ವಾದವು ಮನಸ್ಸಿಗೆ ರುಚಿ ತೋರಿ ಹತ್ತುವಂತೆ ಮನುಷ್ಯನು ತಾನೇ ತನಗೆ ದೇವರು, ತನ್ನಿಷ್ಟೆಯೇ ದೇವರ ಚಿತ್ತ, "ಅಹಂ ಬ್ರಹ್ಮ" ಎಂಬದಾಗಿ ಉಬ್ಬಿ ಕೊಂಡು, ವದಿಸುತ್ತಾ ಬರುವವರಾಗಿ, ಹಗಲಿಗೆ ಮನೆಯ ಕಿಟಕಿ ಬಾಗಲುಗಳನ್ನು ಮುಚ್ಚಿ ಹಾಕಿ, ಸೂರ್ಯನಿಲ್ಲವೆಂಥೇಳಿ, ಹೊನ್ನೆಣ್ಣೆಯ ದೀಪ ಹಚ್ಚಿ ಇಡುವವರಂತಾಗುತ್ತಾರೆ.

ಹೀಗಾಗಲಾಗಿ ನಾಸ್ತಿಕ್ಯವು ಸಾಧಾರಣವಾಗಿ ಬುದ್ಧಿಯಲ್ಲಿ, ಬುದ್ಧಿಯ ವಿವೇಚನದಿಂದ, ಅಥವಾ ಬುದ್ಧಿಯ ಹೆಚ್ಚಿಕೆಯಿಂದ ಹುಟ್ಟದೆ, ಮನಸ್ಸಿನಲ್ಲಿಯೇ, ಮನೋವಿಕಾರದಿಂದಲೇ ಹುಟ್ಟಿ ಬರುವಂಥಾದಾಗಿದೆ. ಮನಸ್ಸು, ಮನೋಗತವು ನಾಸ್ತಿಕ್ಯದ ಜನನಿ (ತಾಯಿ), ಕಾಮಕ್ರೋಧಾದಿಗಳು ಅದರ ಜನಕ (ತಂದೆ, ಬೀಜ) ಎಂದು ಹೇಳ ತಕ್ಕದಾಗಿದೆ. ಮತ್ತು ವಿದ್ಯಾಶಾಸ್ತ್ರರೂಪದ (ಅಥವಾ ವಾದರೂಪದ[a]) ನಾಸ್ತಿಕ್ಯವು ಹುಟ್ಟುವ ಮೊದಲು ವ್ಯವಹಾರಿಕ ನಾಸ್ತಿಕ್ಯವು (ಅಂದರೆ ಕಾರ್ಯರೂಪದ, ಕ್ರಿಯಾರೂಪದ ನಾಸ್ತಿಕ್ಯವು[b]) ಹುಟ್ಟುವದು. ಇದು ಅಕ್ಕ: ಅದು ತಂಗಿ. ದೇವರ ಭಯವು ಅಂತಃಕರಣಕ್ಕೆ (ಮನಸ್ಸಾಕ್ಷಿಗೆ) ಹಿಡಿದು ಹೋಗ ಬಾರದೆಂತ ಬಾಯಿ ದೇವರಿಲ್ಲವೆಂತ ಬೊಗಳಿ ನಂಬಿಸ ಬೇಕಷ್ಟೇ. ಕಟ್ಟಿಗೆ ಇದ್ದರೆ, ಪೆಟ್ಟು ಬಿದ್ದೀತು; ಹಾಗಾದರೆ ಪೆಟ್ಟು

---

a. Theoretical b. Practical atheism.

ಬೀಳ ಬಾರದೆಂದು ಕಾಡಡವಿಯಲ್ಲಿ ತಿರುಗಾಡಿದರೂ, "ಕಟ್ಟಿಗೆ ಇಲ್ಲಾ" ಎಂದು ಒಬ್ಬಾನೊಬ್ಬನು ಅಂದ ಹಾಗೆ ಪಾಪಾತ್ಮರು ದೇವರ ಕೈ ಎಲ್ಲೆಲ್ಲಿಯೂ ಕಂಡರೂ, ಆತನ ಕೈಯು ಪೆಟ್ಟಿಗೆ ಹೆದರಿ ಕೊಂಡು, ದೇವರಿಲ್ಲವೆಂಬುವ ಒಣವಾದವನ್ನು ಹಿಡಿದು, ನಾಸ್ತಿಕರಾಗಿದ್ದಾರಷ್ಟೇ.

ಉಷ್ಟ್ರ ಪಕ್ಷಿ ಬೇಟೆಗಾರರಿಗೆ ತಪ್ಪಿಸಿ ಕೊಳ್ಳುವಂತೆ ಓಟ ಮಾಡಿ ಓಡಿ, ದಣಿದು ಹೋಗಿ, ಇನ್ನು ಓಡಲಿಕ್ಕೆ ಕೂಡದ ಸಂಗತಿಯಾದರೆ, ಬೇಟೆಗಾರರು ತನಗೆ ಕಾಣದಿದ್ದರೆ, ತಾನೂ ಬೇಟೆಗಾರರಿಗೆ ಕಾಣಲಿಕ್ಕಿಲ್ಲವೆಂಬುವ ಬುದ್ಧಿಯಿಂದ ಬೆನ್ನಟ್ಟಿ ಬರುವ ಬೇಟೆಗಾರರು ತನಗೆ ಇನ್ನು ಕಾಣದ ಹಾಗೆ ತಲೆಯನ್ನು ರೆಕ್ಕೆಯ ಅಡಿಯಲ್ಲಾಗಲಿ ಮರಳಲ್ಲಾಗಲಿ ಅಡಗಿಸಿ, ಮರೆ ಮಾಡುತ್ತದಂತೆ. ಆ ಪಕ್ಷಿ ಹಾಗೆ ಮಾಡುವಂಥಾದು ಕೆಲಸಕ್ಕೆ ಬರುವ ಬುದ್ಧಿಯೋ? ಬೇಡರಿಗೆ ಕಾಣದೆ ಹೋಗಿ, ತಪ್ಪಿಸಿ ಕೊಂಡೀತೇ? ಅವರ ಬಾಣಕ್ಕೆ ಮತ್ತಷ್ಟು ಸುಲಭವಾಗಿ ಗುರಿಯಾಗುತ್ತದಲ್ಲ! ದೇವರಿಲ್ಲವೆಂದು ಬೊಗಳುನವರ ಬುದ್ಧಿಯೂ ಗತಿಯೂ ಹಾಗೆಯೇ. ಕಣ್ಣು ಕಟ್ಟಿ ಕೊಂಡು, ಸೂರ್ಯನು ಕಾಣುವದಿಲ್ಲವಲ್ಲಾ, ಹಾಗಾದರೆ ಸೂರ್ಯನೆಂಬದು ಸುಳ್ಳು! ಎಂಥೇಳಿದರೆ, ಬುದ್ಧಿಯೋ? ಹುಚ್ಚೋ? ದೇವರು ಅಂಥಾ ಹುಚ್ಚರನ್ನು ತನ್ನ ಮುಂದೆ ನಿಂತ್ರಿಸಿ, ಕರ್ಮವಿಚಾರಣೆ ಮಾಡುವಲ್ಲಿ ಏನಾಗಿ ಹೋಗುವರು?

ಆದರೆ ದೇವರು ಇದ್ದಾನೆ ಎಂಬದನ್ನು ನಂಬಿದರೂ ಸಾಲದು: ಆತನ ಭಯಭಕ್ತಿಯಲ್ಲಿ ನಡಕೊಳ್ಳಲೂ ಬೇಕು. ಆತನಲ್ಲಿ ವಿಶ್ವಾಸವನ್ನೂ ಪ್ರೀತಿಯನ್ನೂ ಭಯವನ್ನೂ ಇಟ್ಟು, ಆತನಿಂದ ನಡಿಸಿ ಕೊಳ್ಳುತ್ತಾ ಬರ ಬೇಕು. ದೇವರಿಗೆ ತೊಲಗಿ, ದೂರವಾಗಿ ಹೋದ ಮನುಷ್ಯರಲ್ಲಿ ನಾಸ್ತಿಕ್ಯವು ಹುಟ್ಟುವ ಸಂಗತಿ ಇರಲಾಗಿ ಆತನನ್ನು ಅರಸುತ್ತಾ, ಆತನ ಕೃಪೆಯನ್ನು ಅಪೇಕ್ಷಿಸುತ್ತಾ ಆತನ ಮುಖಕಾಂತಿಯಲ್ಲಿ ಶೇರಿ, ಆತನ ಸಂಸರ್ಗದಲ್ಲಿ ನಡಕೊಳ್ಳುತ್ತಾ ಬರುವದೇ ಆತನ ಹೆಚ್ಚಿನ ಅನುಭವವನ್ನು ಮಾಡಿ, ಆತನ ಹೆಚ್ಚಿನ ಜ್ಞಾನವನ್ನು ಪಡಕೊಳ್ಳುವ ಮಾರ್ಗವಾಗಿದೆ. ನಾವು ಯಾವಾಗಲೂ ಆತನ ಸನ್ನಿಧಿಯಲ್ಲಿ ಎಂಬುವ ಹಾಗೆ ಇದ್ದರೆ, ಆತನು ನಮ್ಮನ್ನು ಸಹಾ ಎಡೆಬಿಡದೆ ನೋಡುತ್ತಾ ಕೈಕೊಡುತ್ತಾ ಬಂದಾನು. ಮತ್ತು ಆತನ ಅನುಭವವೂ ಪರಿಚಿತಿಯೂ ನಮಗೆ ಹೆಚ್ಚಾಗುತ್ತಾ ಬರುವಂಥಾದಾಗಿ, ಕಡೆಯಲ್ಲಿ ಆತನ ನಿತ್ಯ ದರ್ಶನವು ಸ್ವರ್ಗದಲ್ಲಿ ನಮಗೆ ಆಗಿ, ಪರಮಾನಂದ ಪ್ರಾಪ್ತಿಯಾಗುವದು. ತಥಾಸ್ತು!

ಪ್ರಾರ್ಥನೆಗೆ ಕೇಡು.

ಸತ್ಯವೇದದಲ್ಲಿ ಪ್ರಾರ್ಥನೆಗೆ ಕೇಡಾಗಿರುವ ಸಂಗತಿಗಳು ಅನೇಕ ಹೇಳಿಯವೆ; ಅವುಗಳನ್ನೆಲ್ಲಾ ಐದು ಪ್ರಕರಣಗಳಲ್ಲಿ ಅಡಗಿಸ ಬಹುದು.

೧ನೆದು. "ನಾನು ನನ್ನ ಹೃದಯದಲ್ಲಿ ಪಾತಕವನ್ನು ಬಗೆದರೆ, ಕರ್ತನು ಕೇಳುವದಿಲ್ಲಾ." ಕೀರ್ತ. ೬೬, ೧೮. ರಕ್ಷಣೆಯನ್ನು ಅಪೇಕ್ಷಿಸುವ ಪಾಪಿಯಾಗಲಿ ಯಾವದಾದರೊಂದು ಅನುಗ್ರಹವನ್ನು ಅಪೇಕ್ಷಿಸುವ ಭಕ್ತನಾಗಲಿ ಸರ್ವ ವಿಧದ ಪಾತಕಗಳನ್ನು ತನ್ನಿಂದ ದೂರ ಮಾಡದೆ ಪ್ರಾರ್ಥನೆಗೆ ಉತ್ತರ ಹೊಂದನು.

೨ನೆದು. "ನ್ಯಾಯಪ್ರಮಾಣವನ್ನು ಕೇಳದ ಹಾಗೆ ಕಿವಿಯನ್ನು ತಿರುಗಿಸುವವನ ಪ್ರಾರ್ಥನೆಯು ಅಸಹ್ಯವಾಗಿದೆ." ಸಾಮತಿ. ೨೮, ೯. ದೇವರ ವಾಕ್ಯದ ಬೋಧನೆಯನ್ನು ಬೇಕೆಂದು ಅಲಕ್ಷ್ಯ ಮಾಡುವವರೆಲ್ಲರು ಇದರಲ್ಲಿ ಶೇರಿದ್ದಾರೆ. ಲೌಕೀಕವನ್ನು ಮೆಚ್ಚಿಸ ಬೇಕೆಂದಿರುವವ

ರೂ ತಮ್ಮ ಸ್ವಂತ ಮನಃಕಲ್ಪನೆಗಳಿಂದ ದೇವರ ವಾಕ್ಯಕ್ಕೆ ಬೆನ್ನು ಹಾಕಿ ನಡಿಯುವವರೂ ಇವರಲ್ಲಿ ಶೇರಿದ್ಧಾರೆ. "ಏನು ಬೇಡಿದರೂ ಆತನಿಂದ ಹೊಂದುತ್ತೇವೆ. ಯಾಕಂದರೆ ಆತನ ಕಟ್ಟಳೆಗಳನ್ನು ಕೈಕೊಂಡು, ಆತನ ಮುಂದೆ ಹಿತವಾದವುಗಳನ್ನು ಮಾಡುತ್ತೇವೆ" (೧ ಯೋಹಾ. ೩, ೨೨.) ಎಂಬ ವಚನದ ಮೇರೆಗೆ ದೇವರ ಅಪ್ಪಣೆಗಳನ್ನು ಕೈಕೊಳ್ಳುವದು ಪ್ರಾರ್ಥನೆಗೆ ಇರುವ ವಾಗ್ದತ್ತಗಳಿಗೆ ಕೂಡಿ ಇರುತ್ತದೆ.

೩ನೆದು. "ಮತ್ತು ಪ್ರಾರ್ಥಿಸುವವರಾಗಿ ನಿಂತು ಕೊಳ್ಳುವಾಗ, ಪರಲೋಕದಲ್ಲಿರುವ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ನಿಮಗೆ ಮನ್ನಿಸುವ ಹಾಗೆ ಯಾವನ ಮೇಲೆ ಏನಾದರೂ ಇದ್ದರೆ ಅದನ್ನು ಮನ್ನಿಸಿರಿ. ನೀವು ಮನ್ನಿಸದೆ ಇದ್ದರೆ, ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ಮನ್ನಿಸನು." ಮಾರ್ಕ. ೧೧, ೨೫. ೨೬. ಈ ಸೂತ್ರದ ಮೇರೆಗೆ ಯಾರೊಬ್ಬನ ಮೇಲೆ ವಿಮನಸ್ಸು ಶಿಟ್ಟು ಇಲ್ಲದೆ ನಾವು ಪ್ರಾರ್ಥನೆಗೆ ಬರ ಬೇಕು. ಕ್ರಿಸ್ತನು ಶಿಲುಬೆಯ ಮೇಲೆ, ಸ್ತೇಫಾನನು ಕಲ್ಲೆಸೆಯಲ್ಪಡುವಾಗ್ಯೆ ಮಾಡಿದಂತೆ ನಾವೂ ನಮ್ಮ ಶತ್ರುಗಳನ್ನು ಪ್ರೀತಿ ಮಾಡಿ, ನಮ್ಮನ್ನು ನಿಂದಿಸುವವರಿಗೋಸ್ಕರವಾಗಿಯೂ ಹಿಂಸಿಸುವವರಿಗೋಸ್ಕರವಾಗಿಯೂ ಪ್ರಾರ್ಥನೆ ಮಾಡ ಬೇಕು. ಅವರು ಪಶ್ಚಾತ್ತಾಪ ಪಟ್ಟು ಕ್ಷಮೆ ಬೇಡುವದಕ್ಕೆ ನಮ್ಮ ಬಳಿಗೆ ಬರ ಬೇಕೆಂದು ಕಾಯುವದು ಬೇಡಾ.

೪ನೆದು. "ನೀವು ಬೇಡಿ ಕೊಂಡರೂ, ನಿಮ್ಮ ಆಶೆಗಳಲ್ಲಿ ವೆಚ್ಚ ಮಾಡುವ ಹಾಗೆ ತಪ್ಪಾಗಿ ಬೇಡಿ ಕೊಳ್ಳುವ ಕಾರಣ ನೀವು ಹೊಂದುವದಿಲ್ಲಾ." ಯಾಕೋ. ೪, ೩. ಸತ್ಕಾರ್ಯದಲ್ಲಿಯೂ ಪ್ರಾರ್ಥನೆಯಲ್ಲಿಯೂ ಸ್ವಾರ್ಥಬುದ್ಧಿ ಮುಂತಾದ ತಪ್ಪಾದ ಹೇತುಗಳು ಶೇರಿ ಕೊಂಡರೆ, ಉತ್ತರ ಶಿಕ್ಕದ ಹಾಗೆ ವಿಘ್ನವಾಗುತ್ತದೆ.

೫ನೆದು. "ಏನೂ ಸಂದೇಹ ಪಡದೆ, ವಿಶ್ವಾಸವಾಗಿ ಬೇಡಿ ಕೊಳ್ಳಲಿ; ಯಾಕಂದರೆ ಸಂದೇಹ ಪಡುವವನು ಘಾಳಿಯಿಂದ ಬಡಿಯಲ್ಪಟ್ಟು ಕದಲುವ ಸಮುದ್ರದ ತೆರೆಗೆ ಸಮಾನವಾಗಿದ್ಧಾನೆ. ಆ ಮನುಷ್ಯನು ಕರ್ತನಿಂದ ಏನಾದರೂ ಹೊಂದುವನೆಂದು ನೆನಸದಿರಲಿ." ಯಾಕೋ. ೧, ೬. ೭. ದೇವರ ವಾಗ್ದಾನಗಳಲ್ಲಿ ಸಂಶಯ ಪಟ್ಟರೆ, ಆತನನ್ನು ಸುಳ್ಳುಗಾರನಾಗ ಮಾಡುವದರಿಂದ ಅದು ದೇವರಿಗೆ ಮಹಾ ವಿರೋಧವಾಗಿದೆ. ದೇವರು ಮಾಡಿದ ಸರ್ವ ವಾಗ್ದಾನಗಳಲ್ಲಿ ಮಕ್ಕಳ ಭಾವದ ಭರವಸವಿಡುವ ದಿವಸವೂ ಅಖಂಡ ಸತ್ಯವೇದವನ್ನು ನಮ್ಮ ಸ್ವಂತವೆಂದು ಮಾಡಿ ಕೊಂಡು, ಅದರಲ್ಲಿರುವ ದೇವವಚನಗಳು ನಮ್ಮ ಪಿತ್ರಾರ್ಜಿತ ಸ್ವಾಸ್ತಿ ಎಂತ ಮಾಡಿ ಕೊಳ್ಳುವ ದಿವಸವೂ ಸಮೀಪವಾಗುತ್ತದೆ.

ನಿನ್ನ ಭಯಹಸ್ತಕ್ಕೆ ತಪ್ಪಿಸಿ ಕೊಳ್ಳುವಂತೆ ನಾನೆಲ್ಲಿಗೆ ಹೋಗಲಿ?

(129ನೇ ಪಾನಿನಿಂದ ಮುಂದೆ.)

ಕೊಯಿಲರ್ ಸೀಸನಲ್ಲಿ ಹೋಗಿ ಮನೆಗೆ ಬಂದ ಮೇಲೆ ತನ್ನವರ ಸಂಗಡ ಕೆಲವು ದಿನಗಳನ್ನು ಬಹಳ ಸಮಾಧಾನದಲ್ಲಿಯೂ ಒಕ್ಕಟ್ಟಿನಲ್ಲಿಯೂ ಕಳದನು. ಅವನು ತಂದು ಕೊಟ್ಟ ಹಣದಿಂದ ಅವನ ಹೆಂಡತಿ ಅಂಗಡಿಗೆ ಹೋಗಿ, ಮಕ್ಕಳಿಗೆ ಅತ್ಯವಶ್ಯವಾಗಿದ್ದ ಉಡುಪನ್ನು ಕ್ರಯಕ್ಕೆ ತೆಗೆದು ಕೊಂಡು ಬಂದಳು. ತಮ್ಮ ಹೊಸ ದುಸ್ತನ್ನು ನೋಡಿ ಹುಡುಗರು ಸಂತೋಷದಿಂದ ಮರುಳಾಗಿ ಹೋದರೋ? ಎಂಬಂತೆ ಕೇವಲ ಹರುಷಾಬ್ಧಿಮಗ್ನರಾಗಿ ಹೋಗಿ, ಹರ್ಷಿಸಿ ನಲಿದಾಡಿದರು. ಅವರ

ಮಹಾ ಸಂತೋಷವನ್ನು ನೋಡಿ ಅವರ ತಂದೆಗೆ ಸಹ ಬಹು ಸಂತೋಷವು ಹಿಡಿದು ಹೋಗಿ, ತನಗೆ ಆಗಲಿಕ್ಕಿದ್ದ ಫಿತುವೆಯ ಕರಕರೆ ಒಂದಿಷ್ಟು ಸಮಯಕ್ಕಾದರೂ ಮರತು ಹೋಯಿತು. ಮೊದಲು ಎಂದೂ ಸಂತೋಷಮುಖಿಯಾಗದಿದ್ದ ಅವನ ಹೆಂಡತಿಗಾದರೂ ತಮ್ಮ ಕಂಗಾಳತನವು ಹೋಗಿ, ಒಂದಿಷ್ಟು ಸುಖದಲ್ಲಿ ಕಾಲಕ್ಷೇಪವನ್ನು ಮಾಡಲಿಕ್ಕೆ ಅನುಕೂಲವು ಒದಗಿದ್ದಕ್ಕೆ ಮುಖದಲ್ಲಿ ಸಂತೋಷದ ಕಳೆ ಹುಟ್ಟಿ ಕಾಣುವಂಥಾದಾಯಿತು. ಅವರ ಮುಂಚಿನ ಸಹವಾಸಕ್ಕೂ ಅಂದಿನದಕ್ಕೂ ಎಷ್ಟೋ ಹೆಚ್ಚು ಕಡಿಮೆಯಾಗಿ ಹೋಯಿತು. ಮುಂಚೆ ಗದ್ದಲವೂ ಬೊಬ್ಬಾಟವೂ ಬೈಗಳೂ ಜಗಳವೂ ಹೊಡದಾಟವೂ ಅಲ್ಲದೆ ಪ್ರೀತಿಭಾವ ಸಮಾಧಾನದ್ದು ಮಾತು ಒಂದಾದರೂ ಅವರ ತುಟಿಗಳನ್ನು ದಾಟುತ್ತಿದ್ದಿಲ್ಲಾ, ಮನೆಯಲ್ಲೆಲ್ಲಾ ಕೇಳುತ್ತಿದ್ದಿಲ್ಲಾ. ಅಂದು ಪ್ರೀತಿಭಾವದ ಮಾತು ಅಲ್ಲದೆ ಯಾವ ಬಗೆಯಲ್ಲ್ಯಾದರೂ ಮನಸ್ಸು ನೋಯಿಸಿ, ಜಗಳಕ್ಕೆ ಆಸ್ಪದವಾಗುವ ಮಾತು ಇನ್ನು ಕೇಳೋಣವಾಗಲಿಲ್ಲಾ, ಆಡೋಣವೂ ಆಗಲಿಲ್ಲಾ. ಹಾಗೆ ನಡೆಯುತ್ತಾ ಬರುವಲ್ಲಿ ಗಂಡ ಹೆಂಡರಿಬ್ಬರಿಗೆ ಸಮಾಧಾನದ ಮತ್ತು ಪ್ರೀತಿಯ ರುಚಿ ಹತ್ತಿ, ಮೊದಲು ಇರದ ಸುಖ ಸಂತೋಷ ಆದ್ದರಿಂದ ಇಬ್ಬರಿಗೆ ಒಂದು ತರದ ಪಶ್ಚಾತ್ತಾಪ ಬಹಳವಾಗಿ ಹಿಡಿದು ಹೋಯಿತು: ಅಂದರೆ ಕೊಯಿಲರ್ ತಾನು ಮೊದಲು ಬೈಗಳನ್ನೂ ಶಾಪಗಳನ್ನೂ ಹಾಕುವದಕ್ಕೂ ವಿವೇಕವೂ ತಾಳ್ಮೆಯೂ ಇಲ್ಲದೆ ಹೊಡೆಯುತ್ತಿದ್ದದಕ್ಕೂ ಬದಲಾಗಿ ಹೆಚ್ಚು ತಾಳ್ಮೆಯಲ್ಲಿಯೂ ಪ್ರೀತಿಭಾವದಲ್ಲಿಯೂ ಹೆಂಡತಿಗೂ ಮಕ್ಕಳಿಗೂ ನಡಿಸಿದ್ದಾದರೆ, ತಾವು ಮೊದಲಿನಲ್ಲಿಯೂ ತಕ್ಕಷ್ಟು ಸುಖದಲ್ಲಿ ಬದುಕ ಬಹುದಿತ್ತು ಎಂದು ತಿಳುಕೊಂಡು, ತಾನು ಆ ಪ್ರಕಾರವಾಗಿ ನಡಿಸದೆ, ಮನೆಗೆ ಒಂದು ಮಾರಿಯೇ ಎಂಬ ಹಾಗೆ ಇದ್ದದಕ್ಕೆ ಬಹಳ ಪಶ್ಚಾತ್ತಾಪ ಪಟ್ಟನು. ಅವನ ಹೆಂಡತಿಯೂ ತಾನು ಮೊದಲಿನಲ್ಲಿ ತಕ್ಕ ವಿಧೇಯತೆಯಲ್ಲಿ ನಡಕೊಳ್ಳದೆ, ಅವನ ಕೋಪವನ್ನು ಬಹುಶಾ ಎಬ್ಬಿಸುತ್ತಾ ಬಂದದರಿಂದ ತನಗೂ ಗಂಡನಿಗೂ ಮಕ್ಕಳಿಗೂ ಬಹಳ ಕೇಡೂ ದುಃಖವೂ ಒದಗಿ ಬಂತೆಂದು ತಿಳಿದು, ತಾನು ಆ ಕೇಡನ್ನು ತಪ್ಪಿಸುವ ಹಾಗೆ ನಡಕೊಳ್ಳದ್ದಕ್ಕೆ ಪಶ್ಚಾತ್ತಾಪ ಪಟ್ಟಳು. ಹೀಗಾಗಿ ಇಬ್ಬರಿಗೆ ಬಹಳ ಒಳ್ಳೇ ಅನುಭವವಾಗಿ, ತಿಳುವಳಿಕೆ ಸಹ ಆಗಿ, ಒಳ್ಳೇ ಪ್ರಯೋಜನವಾಯಿತು. ಆದರೆ ಮಕ್ಕಳಿಗೂ ಬಹಳ ಒಳ್ಳೇ ಲಾಭವಾಯಿತು, ಯಾಕಂದರೆ ತಂದೆತಾಯಿಗಳಿಬ್ಬರು ಅಂದು ಇಟ್ಟ ಮಾದರಿಯನ್ನು ಅವರು ನೋಡಿ, ಅನುಸರಿಸುವವರಾದ್ದರಿಂದ ಅವರ ನಡೆನುಡಿಯೂ ಮೊದಲಿನದಕ್ಕಿಂತ ಬಹು ಚಲೋದಾಗಿ ನೀತವಾಯಿತು. ಕೊಯಿಲರನಿಗೆ ತನ್ನ ಮನೆಯಲ್ಲಿ ಅಮೇರಿಕದಲ್ಲಿ ಇದ್ದಷ್ಟು ಒಳ್ಳೇ ಮೆತ್ತಗಾದ ಹಾಸಿಗೆ ಇದ್ದಿಲ್ಲವಾದರೂ ಮನಸ್ಸಾಕ್ಷಿಯ ತಗಾದೆ ಪೀಡೆಗಳು ನಿಂತು ಹೋಗಿದ್ದ ಕಾರಣ ಮೊದಲು ಎಂದಿಗಾದರೂ ಬೀಳದಷ್ಟು ಸುಖದ ನಿದ್ರೆ ರಾತ್ರಿ ರಾತ್ರಿ ಮಾಡಲಿಕ್ಕಾಯಿತು. ತನ್ನ ಮನೆಯನ್ನು ತಿರಿಗಿ ಬಿಟ್ಟು ಹೋಗಲಿಕ್ಕೆ ಏನೂ ಕಾರಣ ಕಾಣದಿದ್ದದಾದರೆ, ಅವನ ಸಂತೋಷವು ಮತ್ತಷ್ಟಾಗುತ್ತಿತ್ತು; ಆದರೆ ತನಗೆ ತಪ್ಪದ ಕರ್ಮಫಲವನ್ನು ತಿನ್ನಲಿಕ್ಕಾಗಿ ಜೈಲಿಗೆ ಹೋಗ ಬೇಕಾಗುವದು ಎಂಬುವ ನಿತ್ಯ ನೆನಪು ಸಂತೋಷವನ್ನು ಹೆಚ್ಚಿಸದೆ, ತಕ್ಕಷ್ಟು ಅಣಗಿಸುವಂಥಾದಾಯಿತು.

ಕೊಯಿಲರ್ ನಾಲ್ಕೈದು ದಿವಸವನ್ನು ತನ್ನವರ ಮಧ್ಯದಲ್ಲಿ ಬಂದು ಕಳದ ಮೇಲೆ ಒಂದಾನೊಂದು ದಿನ ಪ್ರಾತಃಕಾಲದಲ್ಲಿ ಒಬ್ಬ ಪೊಲೀಸ್ ಪ್ಯಾದೆ ಅವನ ಮನೆಗೆ ಬಂದು, ಅವನಿಗೆ ಫಿತುವೆಯ ಹುಕುಮ್ ಮುಟ್ಟಿಸಿ ಕೊಟ್ಟನು. ಆ ಹುಕುಮ್ ನೋಡಿ, ತನಗೆ ಐದು ವರುಷ ಕಾಮಗಿರಿಯಾಯಿತೆಂದು ತಿಳುಕೊಂಡನು. ಅದಕ್ಕೆ ಅವನ ಹೆಂಡತಿ ಮಕ್ಕಳು ಮಹಾ ವ್ಯಾಕುಲ ಪಟ್ಟರು. ಅವನೂ ಕೇವಲ ದುಃಖಾಕ್ರಾಂತನಾಗಿ ಹೋದನು. ಆದರೂ ಕಡೆಗೆ ಮನಸ್ಸು ಬಿಗಿಹಿಡಿದು, ಹೆಂಡತಿ ಮಕ್ಕಳನ್ನು ಸಂತೈಸಿ, ತನ್ನ ಹುಡುಗನನ್ನು ಕೈ ಹಿಡಿದು ಕೊಂಡು ಹೊರಟು,

ಆ ಪೊಲೀಸ್ ಪ್ಯಾದೆಯ ಹಿಂದೆ ಕ.... ಎಂಬಲ್ಲಿಗೆ ಹೋದನು. ಕೊಯಿಲರ್ ತಾನೇ ಬಂದು, ತನ್ನ ಅಪರಾಧವನ್ನು ಅರಿಕೆ ಮಾಡಿದ್ದರಿಂದ ಪೊಲೀಸ್ ಪ್ಯಾದೆ ಅವನನ್ನು ಕೈದು ಮಾಡಿ ಜೈಲಿಗೆ ತಕ್ಕೊಂಡು ಹೋಗಲಿಲ್ಲಾ. ಅವನಿಗೆ ಅಷ್ಟು ನಾಚಿಕೆಯಾಗದ ಹಾಗೆ ತಾನಾಗಿ ಜೈಲಿಗೆ ಬರಲಿಕ್ಕೆ ಅಪ್ಪಣೆಯಾಯಿತು. ತನ್ನ ಮಗನನ್ನು ಮೊದಲು ಮಾತಾಡಿ ನಿಶ್ಚೈಸಿದಂತೆ ತನ್ನ ಸಂಬಂಧಿಕನೊಬ್ಬನ ಮನೆಯಲ್ಲಿ ತಂದಿರಿಸಿ, ಅವನು ಅಲ್ಲಿಂದ ತಾನೇ ಜೈಲಿಗೆ ಹೋಗಿ, ತನ್ನನ್ನು ಒಪ್ಪಿಸಿ ಕೊಟ್ಟನು. ಹೆಂಡತಿಯ ಹತ್ತರ ಹುಡುಗಿಯನ್ನು ಬಿಟ್ಟು ಬಂದನು; ಆದರೆ ಅವಳು ಇನ್ನು ಸ್ವಲ್ಪ ಬೆಳೆದ ಮೇಲೆ ಒಳ್ಳೇ ಮನೆತನದವರಲ್ಲಿ ಚಾಕ್ರಿಯವಳಾಗುವ ಹಾಗೆ ಜೈಲಿಗೆ ಹೋಗುವ ಮೊದಲು ಮಾತಾಡಿ, ಕರಾರು ಮಾಡಿ ಬಂದಿದ್ದನು.

ಬಂದಿಖಾನೆಯಲ್ಲಿ ಕೊಯಿಲರ್ ಬಹು ಸಾಧುವಾಗಿ ವಿನಯದಲ್ಲಿ ನಡಕೊಂಡು, ಅಪ್ಪಣೆಯಾದ ಕೆಲಸವನ್ನೆಲ್ಲಾ ಸುಸ್ತಿಯಿಲ್ಲದೆ ನಂಬಿಕೆಯಿಂದ ಮಾಡುತ್ತಾ ಬಂದನು. ಬಂದಿವಾನನಾಗಿರಲಿಕ್ಕೆ ಅವನ ಮನಸ್ಸಿನಲ್ಲಿ ಎಷ್ಟೋ ದುಃಖವಿದ್ದದಾದರೂ, ಆ ಶಿಕ್ಷೆ ತನ್ನ ಅನ್ಯಾಯಕ್ಕೆ ತಕ್ಕಂಥಾದು ಎಂದು ತಿಳುಕೊಂಡು, ನಮ್ರನಾಗಿ, ತನ್ನ ಮೇಲಿದ್ದ ಕಾವಲುಗಾರ ಮೊದಲಾದವರಿಗೆ ಎಲ್ಲಾ ವಿಷಯದಲ್ಲಿ ಮೆಚ್ಚಿಸುತ್ತಾ ಬಂದದಲ್ಲದೆ ಇತರ ಬಂದಿವಾನರಲ್ಲಿ ಕೆಲವರಿಗಾದರೂ ಉಪಕಾರಕ್ಕೂ ಬಹು ಪ್ರಯೋಜನಕ್ಕೂ ಕಾರಣನಾದನು; ಯಾಕಂದರೆ ಅವನ ಸಾಧುಭಾವವನ್ನೂ ಭಕ್ತಿಯನ್ನೂ ನೀತಿಯನ್ನೂ ನೋಡಿ, ಅವನ ಒಳ್ಳೇ ಮಾತುಗಳನ್ನು ಕೇಳಿ, ಕೆಲವರಾದರೂ ತಿದ್ದುಪಾಟು ಆದರು. ಹೀಗಾಗಲಾಗಿ ಅವನು ಕಳ್ಳರ ಲೆಖ್ಖದಲ್ಲಿ ಸೇರಿದವನಾಗಿದ್ದರೂ, ಆತನು ಇನ್ನು ಕಳ್ಳನಾಗಿರದೆ, ನೀತಿಯ ಬೋಧಕನಂತೆ ಆಗಿದ್ದನು. ಅನೇಕಾವರ್ತಿ ಅವನು ಇತರರಿಗೆ ಬುದ್ಧಿ ಹೇಳುವದಾಯಿತು. ದುಃಖಿತರನ್ನು ಆದರಿಸುತ್ತಿದ್ದನು. ಯೇಸು ಕ್ರಿಸ್ತನು ನನಗೊಂದು ಮಹಾ ದೊಡ್ಡ ಹೊರೆ ತಪ್ಪಿಸಿದ್ದಾನೆ; ನೀವು ಸಹ ಆತನನ್ನು ಆಶ್ರಯಿಸಿ ಕೊಳ್ಳಿರಿ! ತನ್ನನ್ನು ಹುಡುಕುವ ಕಡು ಪಾಪಿಗಳನ್ನಾದರೂ ಆತನು ಕರುಣಿಸಿ ಸೇರಿಸಿ ಕೊಳ್ಳುತ್ತಾನೆ. ಇದನ್ನು ನಾನು ಅನುಭವದಿಂದಲೇ ಚನ್ನಾಗಿ ಬಲ್ಲಾದವನಾಗಿದ್ಧೇನೆ; ಆತನ ಕೃಪೆಯೂ ಸಹಾಯವೂ ಇಲ್ಲದೆ ಯಾರಾದರೂ, ಎಷ್ಟೋ ನೀತಿವಂತರಾದರೂ, ಸ್ವರ್ಗವನ್ನು ಪಡಕೊಳ್ಳಲಿಕ್ಕೆ ಕೂಡದು ಎಂಬದಾಗಿ ಅವನು ಅನೇಕರಿಗೆ ಹೇಳಿ ಸಾಕ್ಷಿ ಕೊಡುತ್ತಿದ್ದನು. ಪಾಪಿಗಳಿಗೆ ಭಯವನ್ನು ಹುಟ್ಟಿಸಿ ಹೆದರಿಸ ತಕ್ಕ ವಾಕ್ಯಗಳನ್ನೂ, ಧೈರ್ಯ ಹುಟ್ಟಿಸಿ ಆದರಿಸುವ ವಾಕ್ಯಗಳನ್ನೂ ಬೈಬಲಲ್ಲಿ ಓದುತ್ತಾ ಕೇಳ ಮನಸ್ಸಿದ್ದ ಬಂದಿವಾನರಿಗೆ ಬಹಳ ಉಪಕಾರ ಮಾಡುವವನಾದನು. ಅವನ ಮಗನಿದ್ದ ಸಂಬಂಧಿಕರು ಹುಡುಗನಿಗೋಸ್ಕರ ಚನ್ನಾಗಿ ಚಿಂತಿಸಿ, ಅವನ ಹಿತಕ್ಕೆ ಕೈಕೊಟ್ಟು, ಅವನನ್ನು ಶಾಲೆಗೆ ಕಳುಹಿಸುತ್ತಾ ಕೆಲಸ ಸಹ ಮಾಡಿಸಿ ಕಲಿಸುತ್ತಾ ಬಂದರು. ಅವನು ಆದಿತ್ಯವಾರ ಆದಿತ್ಯವಾರ ತನ್ನ ತಂದೆಯನ್ನು ನೋಡಲಿಕ್ಕಾಗಿ ಜೈಲಿಗೆ ಬಂದು ಹೋಗಲಿಕ್ಕೆ ಅಪ್ಪಣೆ ಶಿಕ್ಕಿತು. ಜೈಲು ಹುಡುಗನಿಗೆ ಬಹು ಭಯಂಕರವೆಂದು ಕಂಡರೂ, ತಂದೆಯ ಪ್ರೀತಿಗಾಗಿಯೂ ಸಂತೋಷಕ್ಕಾಗಿಯೂ ತಪ್ಪದೆ ಬಂದು ಹೋಗುತ್ತಿದ್ದನು. ಅವನ ತಂದೇ ಮೇಲೆ ಬಹು ದಯಾಭಾವವನ್ನು ಇಟ್ಟಿದ್ದ ಜೈಲರನು ಸಹ ಅವನನ್ನು ಪ್ರೀತಿಸಿ, ಅವನಿಗೆ ಆಗಿಂದಾಗ್ಯೆ ಏನಾದರೂ ಕೊಟ್ಟು ಸಂತೋಷ ಪಡಿಸುತ್ತಿದ್ದನು. ಅವನ ತಂದೆ ಸಹ ಕಟ್ಟಳೆಯಾಗಿದ್ದಷ್ಟು ಕೆಲಸವನ್ನು ಮಾತ್ರವಲ್ಲದೆ ಹೆಚ್ಚು ಮಾಡಿ, ನಾಲ್ಕೈದು ದುಡ್ಡು ದುಡಿದು ಕೊಂಡು, ತನ್ನ ಮಗನಿಗೆ ಕೊಡ ಶಕ್ತನಾದನು. ಮಗನು ತಂದೆಗೆ—"ಅಯ್ಯಯ್ಯೋ! ನಿಮ್ಮ ಆಹಾರವು ಎಷ್ಟೋ ಅಧಮ ತರದ್ದು, ನಿಮ್ಮ ಕೊಠಡಿ ಎಷ್ಟೋ ತಂಪೂ ಮಬ್ಬೂ" ಎಂದು ದುಃಖಿಸಿ ಹೇಳಿದಲ್ಲಿ ಅವನು ಹುಡುಗನನ್ನು ಸಂತೈಸಿ, ಘಿತುವೆಯ ಸಮಯವು ತೀರಿ, ತಾವಿಬ್ಬರು ಕೂಡಿ ಮನೆಗೆ ಹೋಗಿ ಸೇರುವ ಸಂತೋಷವನ್ನು ವರ್ಣಿ

ಸುವನು. ಆದರೂ ಇತರರಿಗೆ ಕಾಣದಿದ್ದರೂ, ಕೊಯಿಲರನ ಮನಸ್ಸಿನಲ್ಲಿ ತನ್ನವಸ್ಥೆಗೆ ಅನೇಕಾವರ್ತಿ ಬಹು ಶೋಕವು ಹಿಡಿದು ಹೋಗುತ್ತಿತ್ತು. ತನ್ನ ಎದೆಗುಂದಿ, ನಿರಾಶೆ ಹಿಡಿದು ಹೋಗದ ಹಾಗೆ ಗೀತ ಪುಸ್ತಕವನ್ನು ತೆಗೆದು, ಗೀತಗಳನ್ನು ಓದುವನು, ರಾಗ ಸಹ ಮಾಡುವನು. ಪರಮಾರ್ಥಕ್ಕೆ ಮುಖ್ಯ ವಾಗಿ ಅವನ ಮನಸ್ಸು ಕೈದಿನಲ್ಲಿ ಹತ್ತುವಂಥಾದಾಯಿತು. ಪ್ರಪಂಚವು, ಪ್ರಪಂಚದ ಸುಖಭೋಗ ಗಳು ಅವನಿಗೆ ದೂರವಾಗಿ, ಮರತು ಹೋಗುತ್ತಾ, ಒಳ್ಳೇ ವೈರಾಗ್ಯವು ಹುಟ್ಟಿ ಹೆಚ್ಚುತ್ತಾ ಬರುವ ದಾಯಿತು. ಆದರೂ ಬಿಡುಗಡೆಯ ಸಮಯವನ್ನು ಕಾಂಕ್ಷಿಸುತ್ತಾ ತಾನು ತಿರಿಗಿ ತನ್ನ ಹೆಂಡತಿ ಮ ಕ್ಕಳ ಸಹವಾಸ ಮಾಡಲಿಕ್ಕೆ ಕೂಡುವದಾದರೆ, ತಾನು ಅವರಿಗೆ ಹ್ಯಾಗೆ ನಡಿಸಿ, ಪ್ರೀತಿ ಮಾಡಿ, ಹಿತ ವನ್ನು ಚಿಂತಿಸಿ, ಮೇಲಿಗೆ ಕೈಕೊಡುವ ವಿಷಯದಲ್ಲಿ ಹೆಚ್ಚಿನ ಆಲೋಚನೆ ಮಾಡುತ್ತಾ ಬಂದನು.

ಒಂದಾನೊಂದು ದಿನ ಅವನು ಬಂದ ಮಗನಿಗೆ ತನಗಿನ್ನು ನಾಲ್ಕೇ ತಿಂಗಳುಂಟು ಎಂದು ಹೇಳಿ ತಿಳಿಸಿದ ಮೇಲೆ ಹುಡುಗನು ದಿವಸಗಳನ್ನು ಬಹಳ ಜಾಗ್ರತೆಯಾಗಿ ಎಣಿಕೆ ಮಾಡುತ್ತಾ ಬಂದನು. ಆದರೆ ಇಷ್ಟು ಮನಸ್ಸು ಕೊಟ್ಟು ಲೆಖ್ಖ ಮಾಡುವವನಿಗೆ ಬಿಡುಗಡೆಯ ದಿವಸ ಮೂಡಿ ಬರಲಿಕ್ಕೆ ಎಷ್ಟೋ ವಿಲಂಬವಾಗುತ್ತದಕಟಾ! ಎಂಬದಾಗಿ ಹಂಬಲಿಕೆ ಹೆಚ್ಚಿತು. ಆದರೆ ಎರಡು ತಿಂಗಳು ಗತಿಸಿ ಹೋಗಿ, ಇನ್ನು ಎರಡು ಮಾತ್ರವೇ ಉಳಿದಿರುವಾಗ್ಯೆ ಕೊಯಿಲರನಿಗೆ ಒಳ್ಳೇ ನಡತೆಯ ಕಾರಣದಿಂದ ಎರಡು ತಿಂಗಳು ಮಾಫು ಮಾಡಲಾಯಿತೆಂಬ ಹುಕುಮ್ ಮುಟ್ಟಿತು. ಈ ಹುಕುಮ್ ತಲಪಿದ ಕೂಡಲೇ ಅವನು ಬಿಡುಗಡೆಯಾಗಿ, ಜೈಲಿನಿಂದ ಹೊರಟು, ತನ್ನ ಮಗನು ಇದ್ದ ಮನೆಗೆ ಹೋದನು. ಎರಡು ತಿಂಗಳು ಮಾಫಾದ ಸಂಗತಿ ತಿಳಿಯದೆ ಇದ್ದ ಹುಡುಗನು ಅಪ್ಪನು ಬಂದದನ್ನು ನೋಡಿ, ಮಹಾ ಸಂತೋಷ ಪಟ್ಟನು. ಆದರೆ ತನ್ನೂರಿಗೆ ವಾಪಸು ಹೋಗಲಿಕ್ಕೆ ಕೊಯಿಲರನಿಗೆ ಲಜ್ಜೆಯಾಗಿ ಧೈರ್ಯ ಸಾಲಲಿಲ್ಲವಾದ್ದರಿಂದ ತಾನು ಬಂದಿವಾನನಾಗಿದ್ದ ಪರ ಊರಿನಲ್ಲಿ ಕೆಲಸ ಹುಡುಕಿದನು. ಅವನಿಗೆ ಕೆಲಸವು ಶಿಕ್ಕಿದ ಮೇಲೆ ತನ್ನ ಹೆಂಡತಿಯನ್ನು ತನ್ನಲ್ಲಿಗೆ ಕರಿಸಿದನು. ಇಬ್ಬರೂ ಬಾಡಿಗೆಗೆ ಮಾಡಿ ಕೊಂಡ ಬಿಡಾರದಲ್ಲಿ ಬಹು ಒಕ್ಕಟ್ಟಿನಲ್ಲಿಯೂ ನೀತಿಯಲ್ಲಿಯೂ ಬದುಕಿದರು. ಅಷ್ಟರಲ್ಲಿ ಬಡಿಗೇ ಕೆಲಸವನ್ನು ಕಲಿತು ಕೊಂಡ ಮಗನು ತನ್ನ ಯಜಮಾನನ ಮನೆಯಲ್ಲಿ ಇದ್ದನು.

ಬಂದಿಖಾನೆಯನ್ನು ಬಿಟ್ಟು ಬಂದ ಐದನೇ ವರುಷದಲ್ಲಿ ಅವನು ತನ್ನ ಕೆಲಸದಲ್ಲಿ ಸಂಪಾದಿಸಿ ಉಳಿಸಿ ಕೊಂಡ ಹಣದಿಂದ ಆ ಊರಿನ ಒಂದು ಮೂಲೆಯಲ್ಲಿ ಒಂದು ಚಿಕ್ಕ ಮನೆಯನ್ನು ಕ್ರಯಕ್ಕೆ ತೆಗದು ಕೊಂಡನು. ಆ ಮನೆಯಲ್ಲಿ ಕುಲುಮೆಯನ್ನಿಕ್ಕಿ, ತನ್ನ ಕಸುಬನ್ನು ಖಾಸಗತೀ ಲೆಖ್ಖದಲ್ಲಿ ಸಾಗಿ ಸುವವನಾದನು. ಮನೆಯಲ್ಲೆಲ್ಲಾ ಸಮಾಧಾನ ಒಕ್ಕಟ್ಟು ಪ್ರೀತಿಗಳ ವಾಸನೆ ತುಂಬಿತ್ತು. ಸ್ವರ್ಗ ಪಡ ಕೊಳ್ಳ ಬೇಕೆಂಬದೇ ಕೊಯಿಲರನ ಮುಖ್ಯ ಆಶೆಯೂ ಸಾಧನೆಯೂ ಆಗಿತ್ತೆಂದು ಅವನ ಎಲ್ಲಾ ನಡೆನುಡಿಯಿಂದ ತಿಳುಕೊಳ್ಳ ಬಹುದಿತ್ತು. ಅವನ ಹೆಂಡತಿ ಜಾಡ್ಯದಲ್ಲಿ ಬಿದ್ದಳು. ಅವನಿಗೆ ಲಾಳಾ ಕಟ್ಟುವ ಸಮಯದಲ್ಲಿ ಒಂದು ಕುದುರೆ ಲತ್ತೆ ಹಾಕಿದ್ದರಿಂದ ಅವನದೊಂದು ಕಾಲು ಕುಂಟಾಗಿ ಹೋ ಯಿತು. ಅವನ ಮಗನು ಒಂದಾನೊಂದು ದಿವಸ ಹೊಸ್ತಾಗಿ ಕಟ್ಟೋಣಾದ ಮನೆಯ ಮಾಳಿಗೆ ಯಿಂದ ಜಾರಿ ಬಿದ್ದದರಿಂದ, ಅವನಿಗೆ ಬಹಳ ಜಖಮಾಗಿ, ಒಂದು ಕಾಲು ಮುರಿದು ಹೋದ ವಿಪತ್ತು ಸಹ ಸಂಭವಿಸಿತು. ಸುಮಾರು ದಿವಸ ಅವನು ಹಾಸಿಗೆಯಿಂದ ಏಳಲಾರದೆ ಬಿದ್ದಿದ್ದನು. ಆ ಸಮ ಯದಲ್ಲಿ ಸಂಪಾದನೆಗೆ ವಿಘ್ನವು ಒದಗಿ ಬಂದದಲ್ಲದೆ, ಮೊದಲು ಸಂಪಾದಿಸಿ ಇಟ್ಟು ಕೊಂಡಿದ್ದ ಹಣವು ಖರ್ಚಾಗಿ ಹೋಯಿತು. ಅಷ್ಟಾಪತ್ತು ವಿಪತ್ತು ಬಿದ್ದರೂ, ಕೊಯಿಲರ್ ತಾಳ್ಮೆಯನ್ನೂ ಸಂತುಷ್ಟ ವಾಗಿದ್ದ ಮನಸ್ಸನ್ನೂ ಕಳಕೊಳ್ಳಲಿಲ್ಲಾ. ಮನೆಯೆಲ್ಲಾ ನಿರ್ಮಲವಾಗಿಯೂ ಆಯಕಟ್ಟಾಗಿಯೂ ಇರ ಬೇಕೆಂಬ ತಾತ್ಪರ್ಯವು ಹೆಚ್ಚಿತ್ತು. ಅವನ ಹೆಂಡತಿಯಲ್ಲಿ ಆ ತಾತ್ಪರ್ಯವು ಬಹಳ ಕಡಿಮೆ

ಯಾಗಿತ್ತು. ದುಸ್ತುಗಳಾಗಲಿ ಮನೆಯ ಸಾಮಾನು ಮೊದಲಾದ್ದು ಆಗಲಿ ಮಾಸಿ ಹೋದದು ಅವಳಿಗೆ ಗೋಚರಿಸಿ, ಮೈಲಿಗೆ ತೊಳೆಯುವ ಬುದ್ಧಿ ಬರ ಬೇಕಾದರೆ, ಮೈಲಿಗೆ ಒಂದಿಷ್ಟು ಅಲ್ಲಾ, ಬಹಳವೇ ಆಗಿ, ದುರ್ಗಂಧವು ಬಡಿಯುವ ಸಂಗತಿಯಾಗ ಬೇಕು. ಅಂಥಾ ಸ್ವಭಾವದವಳು ಜಾಡ್ಯದಲ್ಲಿ ಬಿದ್ದ ಮೇಲೆ ಇನ್ನು ಹೆಚ್ಚು ಹೇಸಿಗೆಯವಳಾಗಿ ಹೋದದು ಆಶ್ಚರ್ಯವಲ್ಲಾ. ಆದರೆ ಅವನ ಬುದ್ಧಿಗೂ ಅವಳದಕ್ಕೂ ಎಷ್ಟೋ ಹೆಚ್ಚುಕಡಿಮೆ ಇದ್ದದಾದರೂ, ಅವನು ಬಹು ಜಾಗ್ರತೆಯಲ್ಲಿಯೂ ಸೈರಣೆಯಲ್ಲಿಯೂ ನಡಕೊಳ್ಳುತ್ತಾ ನಡಿಸುತ್ತಾ ಬಂದದರಿಂದ ಸಮಾಧಾನವು ತಪ್ಪಲಿಲ್ಲಾ. ಅವನಿಗೆ ದೇವರ ಸಂಗಡ ಸಮಾಧಾನವಿದ್ದದರಿಂದ ಮನೆಯ ಸಮಾಧಾನವನ್ನು ಕಾಪಾಡಲಿಕ್ಕೆ ತಕ್ಕವನಾಗಿದ್ದನು. ದೇವರು ತನ್ನನ್ನು ಕರುಣಿಸಿ, ಪ್ರೀತಿಸಿ, ಶೇರಿಸಿ ಕೊಂಡು, ಆಪತ್ತು ವಿಪತ್ತುಗಳನ್ನಾದರೂ ತನ್ನ ಮೇಲಿಗೆ ಕೈಕೂಡಿ ಬರ ಮಾಡುವಾತನು ಎಂಬುವ ನಂಬಿಕೆಯಲ್ಲಿ ಮತ್ತು ಈ ನಂಬಿಕೆಗೆ ತಕ್ಕ ಅನುಭವದಲ್ಲಿ ಅವನು ಬಹಳ ಭಾಗ್ಯವಂತನಾಗಿದ್ದನು. ದುಃಖವೆಂಬದು ಅವನಿಗೆ ಅಂದಿನಿಂದ ದುಃಖವೆಂತ ಇನ್ನು ಕಾಣಲಿಲ್ಲಾ, ಯಾಕಂದರೆ ಅವನು ಅಂದಿನ ದುಃಖವನ್ನು ಮೊದಲಿನ ದುಃಖಕ್ಕೆ ಸರಿ ನೋಡಿದಲ್ಲಿ ಮಾತ್ರವಲ್ಲಾ, ಅದನ್ನು ಮೊದಲಿನ ಸುಖಕ್ಕಾದರೂ ಸರಿ ನೋಡಿದಲ್ಲಿಯೂ ಅದು ದುಃಖವೆಂತ ಕಾಣದೆ, ಸುಖವೇ ಬಹು ಸುಖವೇ ಎಂತ ಕಾಣುವದಾಯಿತು. ಹೊರಲಿಕ್ಕೆ ಆವಾಗಲೂ ಒಂದು ಹೊರೆ ಇತ್ತು, ಹೊರೆ ತಪ್ಪಲಿಲ್ಲಾ; ಆದರೆ ಹೊರಲಿಕ್ಕೆ ಮೊದಲು ಇದ್ದಿಲ್ಲದ ಶಕ್ತಿ ಅಂದಿನಿಂದ ಅವನಿಗೆ ತಪ್ಪದೆ ಇತ್ತು. ತನ್ನ ಮಕ್ಕಳಲ್ಲಿ ಅವನಿಗೆ ದಿನ ದಿನ ಸಂತೋಷ ಪಡಲಿಕ್ಕೆ ಕಾರಣವಾಯಿತು. ಬಹಳ ಪ್ರೀತಿಯಿಂದ ಅವರು ಅಪ್ಪನಿಗೆ ಹೊಂದಿ ಕೊಂಡಿದ್ದರು. ಅವನಿಗೆ ಅವರ ಮೇಲೆ ಬಹಳ ವಾತ್ಸಲ್ಯವಿತ್ತು. ಅವರಿಗೆ ಒಳ್ಳೇ ಬೋಧನೆ ಕೊಡುತ್ತಾ ಭಕ್ತಿಮಾರ್ಗದಲ್ಲಿ ನಡಿಸುತ್ತಾ ಬಂದನು. ದೇವರು ಅವರನ್ನು ಪಾಪಕ್ಕೂ ಕೇಡಿಗೂ ತಪ್ಪಿಸುತ್ತಾ ನೀತಿಭಕ್ತಿಗಳಲ್ಲಿ ಹೆಚ್ಚಿಸುತ್ತಾ ಕಾಪಾಡುತ್ತಾ ಬರ ಬೇಕೆಂಬದಾಗಿ ಅವನು ಅವರಿಗೋಸ್ಕರ ದಿನಾಲು ಪ್ರಾರ್ಥನೆ ಮಾಡುತ್ತಿದ್ದನು. ಮುಪ್ಪಾಗಿ ತನ್ನ ಕಸುಬನ್ನು ಇನ್ನು ಸಾಗಿಸುವ ಸಾಮರ್ಥ್ಯವಿಲ್ಲದ ಸಮಯದಲ್ಲಾದರೂ ಅವನು ಕೂತು ಕೊಂಡು, ಮನೆಯವರಿಗೆ ಬೈಬಲಲ್ಲಿ ಓದಿ ಬೋಧಿಸುವದು ದಿನದ ಕಟ್ಟಳೆಯಾಗಿತ್ತು. ಅವನ ಮಗನು ಬಹಳ ಸುಶೀಲವತಿಯಾಗಿದ್ದ ಒಬ್ಬ ಕನ್ಯೆಯನ್ನು ಮದುವೆ ಮಾಡಿ ಕೊಂಡನು. ಮಗಳು ಒಳ್ಳೇ ಭಕ್ತಿಯೂ ಹೆಸರುವಾಶಿಯೂ ಆದ ಮನೆತನದವರಲ್ಲಿ ಚಾಕ್ರಿಯವಳಾಗಿದ್ದು, ಆದಿತ್ಯವಾರ ಆದಿತ್ಯವಾರಕ್ಕೆ ತಂದೆತಾಯಿಗಳನ್ನು ನೋಡಲಿಕ್ಕಾಗಿ ಬಂದು ಹೋಗುವಳು. ಮೊಮ್ಮಗನು ಹುಟ್ಟಿ ಬಹು ಕ್ಷೇಮದಲ್ಲಿ ಬೆಳೆಯುತ್ತಾ ಬಂದ ಸಂತೋಷವು ಕೊಯಿಲರನಿಗೆ ಆಯಿತು. ತನ್ನ ಅವಸಾನವನ್ನು ನಿರ್ಭಯವಾಗಿ ಎದುರು ನೋಡಿ, ಪರವನ್ನೈದಲಿಕ್ಕೆ ಕಾಂಕ್ಷೆಯುಳ್ಳವನಾಗಿ, ಕಡೇ ಘಳಿಗೆ ಬಂದಾಗ, ಬಹು ಸಂತೋಷದಲ್ಲಿ ತೀರಿ ಕೊಂಡನು.

"ಪಾಪದಲ್ಲಿ ತಾಪ ತಪ್ಪದು" ಎಂಬ ಮಾತಿಗೆ ಹ್ಯಾಗೋ ಹಾಗೆ ಇನ್ನೊಂದು ಮಾತಿಗೆ ಕೊಯಿಲರನ ಚರಿತ್ರವು ಒಂದು ಒಳ್ಳೇ ದೃಷ್ಟಾಂತವೇ. ಈ ಮಾತು ಏನಂದರೆ: "ನಾವು ನಮ್ಮ ಪಾಪಗಳನ್ನು ಅರಿಕೆ ಮಾಡಿದರೆ, ಆತನು ನಮಗೆ ಪಾಪಗಳನ್ನು ಮನ್ನಿಸಿ, ಎಲ್ಲಾ ಅನೀತಿಯಿಂದ ನಮ್ಮನ್ನು ಶುದ್ಧ ಮಾಡುವ ಹಾಗೆ ನಂಬಿಕೆಯೂ ನೀತಿಯೂ ಉಳ್ಳಾತನಾಗಿದ್ದಾನೆ." ೧ ಯೋಹಾ. ೧, ೯. ಮತ್ತು: "ಪಾಪಕ್ಕಾಗಿಯೇ ಆದಂಥಾ, ದೇವರಿಗೆ ಅನುಕೂಲವಾದಂಥಾ ದುಃಖವು ರಕ್ಷಣೆ ಪಡಕೊಳ್ಳುವ ಬಗ್ಗೆ ಎಂದೂ ಪಶ್ಚಾತ್ತಾಪಕ್ಕೆ ಕಾರಣವಾಗದ ಮಾನಸಾಂತರವನ್ನು ಹುಟ್ಟಿಸುತ್ತದೆ." ೨ ಕೊರಿ. ೭, ೧೦.

ವಿವಿಧ ವರ್ತಮಾನಗಳು.

ಚರ್ಚ್ ಮಿಶ್ಯನೆರಿ ಸಂಘದವರು ಅಫ್ರಿಕದ ಮಧ್ಯಭಾಗದಲ್ಲಿ ಹೊಸ ಮಿಶ್ಯನ ಸ್ಥಾಪಿಸುವದಕ್ಕೆ ಕಳುಹಿಸಿದ ಮಿಶ್ಯನೆರಿಗಳನ್ನೂ ಅವರ ಸಂಗಡ ಬೇರೊಬ್ಬರನ್ನೂ ಅಲ್ಲಿಯ ಕಾಡ ಜನರು ಕೊಂದು ಹಾಕಿದರು. ಆ ಪ್ರಾಂತ್ಯಾಂತರದಲ್ಲಿ ಮೊದಲು ಸಂಚಾರ ಮಾಡಿದ ಸ್ಟೆನ್‌ಲಿ ಎಂಬವನು ಆ ಜನರ ಸಂಗಡ ಜಗಳ ಮಾಡಿ, ಅವರಲ್ಲಿ ಹೇರಳ ಮಂದಿಯನ್ನು ಕೊಂದು ಹಾಕಿದ್ದನಂತೆ. ಈ ಹಗೆ ಮನಸ್ಸಿನಲ್ಲಿಟ್ಟು ಕೊಂಡು, ಮಿಶ್ಯನೆರಿಗಳು ಬಂದಿದ್ಧಾರೆಂಬ ವರ್ತಮಾನ ಹಬ್ಬಿದಾಗ ಆ ಕಾಡವರು ಒಟ್ಟು ಕೂಡಿ ಅವರನ್ನು ಹತ ಮಾಡಿದರು. ಆ ಮಿಶ್ಯನೆರಿಗಳೂ ಅವರ ಸಂಗಡ ಇದ್ದವರೂ ಆ ಜನರ ಮೇಲೆ ಕೈ ಹಾಕಲಿಲ್ಲಾ. ಇದು ಬಹಳ ಒಳ್ಳೇದಾಯಿತು.

ಬ್ರಹ್ಮ ದೇಶದ ಅರಸನ ಸಹೋದರನ ಮಗನು ಒಬ್ಬನು ರಾಜಕೀಯ ಸೆರೆಯವನಾಗಿ, ಕಣ್ಣಾನೂರಿನಲ್ಲಿ ಕೆಲ ವರುಷಗಳಿಂದ ಇರುವಂಥವನು ತಾರೀಕು ೨೦ನೇ ಮಾರ್ಚ್ ಆದಿತ್ಯವಾರ ದಿನ ಅಲ್ಲಿಯ ಚಾಪಲನ್ ಪಾದ್ರಿಯವರಿಂದ ಸಾಯಂಕಾಲದ ಪ್ರಾರ್ಥನೆಗೆ ಕೂಡಿ ಬಂದವರ ಮುಂದೆ ಸ್ನಾನ ಹೊಂದಿದನು.

ಹಿಂದುಸ್ಥಾನದಲ್ಲಿ ಚರ್ಚ್‌ಮಿಶ್ಯನ ಸಂಘದವರದು ಬಹಳ ದೊಡ್ಡ ಕೆಲಸವು ನಡದಿರುತ್ತದೆ. ಅವರ ೭೩ ಠಾಣ್ಯಗಳಲ್ಲಿ ೧೨೦ ಯೂರೋಪಿಯನ್ ಮಿಶ್ಯನೆರಿಗಳು, ೬೫ ದೇಶೀಯ ಉಪದೇಶಕರು, ೨,೪೦೦ ದೇಶೀಯ ಉಪಾಧ್ಯಾಯರು, ೪೩,೦೦೦ ವಿದ್ಯಾರ್ಥಿಗಳು, ಸಭೆಗಳಲ್ಲಿ ೭೮,೦೦೦ ಕ್ರೈಸ್ತರೂ ಇದ್ಧಾರೆ. ಗತ ವರ್ಷದಲ್ಲಿ ೧,೨೩೦ ಮಂದಿಗೆ ಸ್ನಾನವಾಯಿತು. ಮಿಶ್ಯನ ಕೆಲಸವು ಈ ದೇಶದಲ್ಲಿ ೧೪ ಬೇರೆ ಬೇರೆ ಭಾಷೆಗಳಲ್ಲಿ ನಡಿಯುತ್ತದೆ.

ಅಮೇರಿಕದ ನ್ಯೂ ಇಂಗ್ಲಂಡ ಪ್ರಾಂತದಲ್ಲಿ ಕಿವಡ ಮೂಕ ಜನರಿಗೆ ಧರ್ಮೋಪದೇಶ ಮಾಡುವದಕ್ಕೆ ಸಾಮುವೇಲ್ ರೋ ಎಂಬ ಒಬ್ಬ ಕಿವಡ ಮೂಕನನ್ನ ದೀಕ್ಷೆಪೂರ್ವಕವಾಗಿ ಉಪದೇಶಕನಾಗಿ ನೇಮಿಸಲಾಯಿತು. ಅವನು ಕೈಸನ್ನೆ ಭಾಷೆಯಿಂದ ಬೋಧನೆ ಮಾಡುತ್ತಾನೆ.

೫ ವರುಷಗಳ ಹಿಂದೆ ಕ್ರೈಸ್ತನಾದ ಮಾನೊಕ್‌ಜೀ ಮೋದಿ ಎಂಬ ಮುಂಬಯಿ ಪ್ರಶಸ್ತ ಗೃಹಸ್ಥನೊಬ್ಬನು ಸುವಾರ್ತಾಪ್ರಸಂಗೋದ್ಯೋಗಕ್ಕೆ ತಾನು ಇನ್ನೂ ತರಬೇತು ಆಗ ಬೇಕೆಂಬ ಮನಸ್ಸಿನಿಂದ ವಿಲಾಯತಿಗೆ ಹೋಗಿ, ಲಂಡನನಗರದೊಂದು ಶಾಲೆಯಲ್ಲಿ ನಿಂತು, ಕಲಿತು, ಸ್ವದೇಶಕ್ಕೆ ತಿರಿಗಿ ಬಂದು, ಈಗ ಅತ್ಯಾಸಕ್ತಿಯಿಂದ ಸುವಾರ್ತೆ ಪ್ರಸಂಗಿಸ ತೊಡಗಿದ್ಧಾನೆ. ಪಾರ್ಶಿಯರು ಬಹು ಸಮೂಹವಾಗಿ ಅವನನ್ನು ಕೇಳುತ್ತಾರೆ.

ಹಿಮಾಲಯದಲ್ಲಿ ಆಲಮೋರಾ ಎಂಬಲ್ಲಿ ಲಂಡನ ಮಿಶ್ಯನಿನವರು ಕುಷ್ಠರೋಗಿಗಳ ವಾಸ್ತವ್ಯಕ್ಕಾಗಿ ಒಂದು ಮನೆ ಕಟ್ಟಿಸಿದ್ಧಾರೆ. ಅದರಲ್ಲಿ ೬೩ ರೋಗಿಗಳಿದ್ಧಾರೆ. ಅವರಿಗೆ ಉತ್ಕೃಷ್ಟ ರೀತಿಯಿಂದ ಅಲ್ಲಿ ಆರೈಕೆ ಮಾಡೋಣಾಗುತ್ತದೆ. ಅವರಲ್ಲಿ ೭೭ ಮಂದಿ ಕ್ರೈಸ್ತರಿದ್ಧಾರೆ. ಕಳದ ವರ್ಷ ೨೫ ಮಂದಿಗೆ ಸ್ನಾನವಾಯಿತು.

ಇಂಗ್ಲಿಷ ಸರಕಾರದ ವಕೀಲ ಮಿ. ಲೆಅರ್ಡ್ ಇವರ ವಿನಂತಿಯ ಮೇರೆಗೆ ಸುಲ್ತಾನನು ತುರ್ಕಿಸ್ಥಾನದಲ್ಲಿಯ ಪ್ರೊತೆಸ್ತಂತ ಕ್ರೈಸ್ತರಿಗೆ ಇತರ ಸಭೆಗಳಿಗಿರುವಂತೆ ಹಕ್ಕನ್ನೂ ಸರಕಾರದ ಆಶ್ರಯವನ್ನೂ ಕೊಟ್ಟಿದ್ಧಾನೆ.

ಇಂಗ್ಲಾಂಡಿನಲ್ಲಿ ಬಿಶೊಪರ (ಅಧ್ಯಕ್ಷರ) ದೊಡ್ಡ ಸಭೆ ನೆರದು ಬರುವಂಥಾದ್ದು ಅದೆ.

ರೋಮನ ಸಭೆಯ ಕೆಲ ಆಚಾರಗಳು ಯಾವ ಯಾವ ಕಾಲದಲ್ಲಿ ಉತ್ಪನ್ನವಾದವು ಅಂದರೆ—ಪವಿತ್ರ ನೀರು ತಳಿಸುವದು ೧೨೦ನೆ ವರ್ಷದಲ್ಲಿ; ದೇಹದಂಡನೆ (ಪುಣ್ಯಸಾಧನೆಗಾಗಿ) ೧೫೭ನೆಯಲ್ಲಿ; ಸನ್ಯಾಸಿವ್ರತ ೩೪೮ನೆಯಲ್ಲಿ; ಲತೀನ ಮಿಸಾಸು ೩೯೪ನೆಯಲ್ಲಿ; ಅಂತಸ್ತೈಲಾಭಿ

ಷೇಕ ೫೫೦ನೆಯಲ್ಲಿ; ಪುರ್ಗಾತೋರಿ ಎಂಬ ಉತ್ತರಿಸುವ ಸ್ಥಳ ಉಂಟೆಂಬದು ೫೯ನೆಯಲ್ಲಿ; ಕನ್ಯೆ ಮರೀಯಳಿಗೂ ಸಾಂತರಿಗೂ ಪ್ರಾರ್ಥನೆ ಮಾಡುವದು ೭೧೫ನೆಯಲ್ಲಿ; ಪೋಪನ ಪಾದಕ್ಕೆ ಮುದ್ದಿಡುವದು ೮೦೯ನೆಯಲ್ಲಿ; ಮೃತ ಪಟ್ಟ ಭಕ್ತರನ್ನು ಸಾಂತರು ಮಾಡುವದು ೯೯೩ನೆಯಲ್ಲಿ; ಘಂಟೆಗಳ ಸ್ನಾನ ೧೦೦೦ನೆಯಲ್ಲಿ; ಪ್ರೀಸ್ತರ ಅವಿವಾಹಿತ್ವ ೧೦೧೫ನೆಯಲ್ಲಿ; ಇಂದಲ್‌ಜೆನ್ಸ್ ಎಂಬ ಪಾಪಕ್ಷಮೆ ಚೀಟು ೧೧೧೯ನೆಯಲ್ಲಿ; ಮಿಸಾಸ ಯಾಗ ೧೨೦೦ನೆಯಲ್ಲಿ; ಪಾಷಂಡಿಗಳೆಂದೆನ್ನಿಸಿ ಕೊಂಡವರನ್ನು ಹಿಡಿದು ಹಿಂಸಿಸುವ ಇನ್‌ಕ್ವಿಸಿಶನ್ ಎಂಬ ಸಂಘ ೧೨೦೪ನೆಯಲ್ಲಿ; ಪ್ರೀಸ್ತನ ಕಿವಿಯಲ್ಲಿ ಪಾಪಗಳನ್ನು ಸ್ವೀಕರಿಸುವದು ೧೨೧೫ನೆಯಲ್ಲಿ; ಪೋಪನ ದೋಷರಾಹಿತ್ಯವು ೧೮೭೦ನೆಯಲ್ಲಿ.

ಏಪ್ರಿಲ್ ೨೮ರಲ್ಲು ರಾತ್ರಿ ಮಂಗಳೂರಿನಲ್ಲಿ ಮಹಾ ಗುಡುಗು ಮಿಂಚು ಸಮೇತ ಮಳೆ ಬಂದು, ಎರಡು ಮೂರು ಸ್ಥಳಗಳಲ್ಲಿ ಸಿಡಿಲು ಬಿದ್ದು, ಕೆಲವು ಜನರು ಸತ್ತು ಹೋದರು.

ಹೊಸ ಲೈಸನ್ಸ್ ಟೆಕ್ಸ್ ಎಂಬ ತೆರಿಗೆಯ ವಿಷಯವಾದ ಕಾಯಿದೆ ಮೇರೆಗೆ ಸುರತಿನ ಕಲೆಕಟರು ಊರಲ್ಲಿರುವ ಸರ್ವ ಉದ್ದಿಮೇ ವ್ಯಾಪಾರ ಮಾಡುವವರಿಗೆ ತಮ್ಮ ಉದ್ದಿಮೇ ಪ್ರಾಪ್ತಿ ಬರಕೊಡ ಬೇಕೆಂತಾ ಪತ್ರ ಕಳುಹಿಸಿದ್ದಲ್ಲಿ ಆ ಜನರು ಅಪ್ಪಣೆ ಮೇರೆಗೆ ನಡಕೊಳ್ಳದೆ ಎಲ್ಲಾ ಅಂಗಡಿಗಳನ್ನು ಮುಚ್ಚಿ ಬಿಟ್ಟರು. ಮತ್ತು ೧೦-೧೫ ಸಾವಿರ ಜನರು ಕೂಡಿ ದಂಗೆ ಮಾಡಲಿಕ್ಕೆ ಪ್ರಾರಂಭಿಸಿದರು. ಅವರಿಗೆ ಮಾತುಭಾರಿ ಗೃಹಸ್ಥರಿಂದ ಹೇಳಿಸಿದರೂ, ಸರಕಾರ ಉದ್ಯೋಗಸ್ಥರ ಹುಕುಮಿಗೆ ಮಾನ್ಯ ಮಾಡ ಬೇಕೆಂದು ಹೇಳಿದರೂ, ಪ್ರಯೋಜನವಾಗದೆ ಹೋದ ಮೇಲೆ, ಮೆಜಿಸ್ತ್ರೇಟರು ಶಿಪಾಯರನ್ನು ಕಳುಹಿಸಲಾಗಿ, ಆ ಶಿಪಾಯರು ದಂಗೆಖೋರರ ಮೇಲೆ ಗೋಲಿ ಹಾರಿಸಿದರು. ಆಗ್ಯೆ ಗುಂಡಿನ ಏಟಿನಿಂದ ಇಬ್ಬರು ಸತ್ತು ಹೋಗಿ, ಕೆಲವರಿಗೆ ಘಾಯವಾಯಿತು. ಸರಕಾರ ಉದ್ಯೋಗಸ್ಥರಲ್ಲಿ ಸಹಾ ಕೆಲವರು ಹೆಚ್ಚು ಕಡಿಮೆ ಘಾಯ ಪಟ್ಟರು. ಅನಂತರ ಶಾಂತಿಯಾದ ಮೇಲೆ ದಂಗೆಖೋರರಲ್ಲಿ ಹಿಡಿದ ಕೆಲವರನ್ನು ವಿಚಾರಿಸಿ, ಆರು ಮಂದಿಗೆ ಕಪ್ಪು ನೀರಿನ ಶಿಕ್ಷೆ ಕೊಡೋಣವಾಯಿತು,

ಪ್ರಖ್ಯಾತ ಜಗನ್ನಾಥ ದೇವಸ್ಥಾನದ ಮುಖ್ಯಸ್ಥನಾಗಿದ್ದು ಮಹಾಪುಣ್ಯಮೂರ್ತಿಯೆಂದೂ ದೇವತಾವತಾರವೆಂದೂ ಅನ್ನಿಸಿ ಕೊಳ್ಳುವ ಪುರೀ ಮಹಾರಾಜನು ಒಬ್ಬ ಗೋಸಾವಿಯನ್ನು ಹಗೆ ತೀರಿಸಿ ಕೊಳ್ಳುವ ಬಗ್ಯೆ ಮನೆಗೆ ಕರಿಸಿ, ಅವನನ್ನು ಅತಿ ಕ್ರೂರವಾಗಿ ಪೀಡಿಸಿ, ಕಡೆಗೆ ಹೊರಗೆ ಬೀದಿಯಲ್ಲಿ ಹಾಕಿಸಿದನು. ಪೊಲೀಸಿನವರು ಅವನನ್ನು ಎತ್ತಿ ಕೊಂಡು ಆಸ್ಪತ್ರಿಗೆ ವೈಯಲಾಗಿ ಅಲ್ಲಿ ಅವನು ೧೫ ದಿವಸಗಳನಂತರ ಪ್ರಾಣ ಬಿಟ್ಟನು. ಈ ಸಂಗತಿ ಸರಕಾರದವರು ವಿಚಾರಿಸಿ, ತಪ್ಪು ಸ್ಥಾಪಿಸಿ, ಆ ಮಹಾರಾಜನನ್ನು ಕಪ್ಪು ನೀರಿನ ಮೇಲೆ ಕಳುಹಿಸಿ ಕೊಟ್ಟರು.

ಪೊರ್ತುಗೀಸ್ ಗೋವೆಯವರು ತೆರಿಗೆಯ ಕಾರಣದಿಂದ ಕಾಟಕಾಯಿ ಮಾಡ ಬೇಕೆಂದಿದ್ಧಾರೆ. ಸರಕಾರದವರು ನೇಮಿಸಿದ ತೆರಿಗೆ ಈ ರೀತಿಯಿಂದ ಪರಿಹರಿಸಿ ಕೊಳ್ಳಲಿಕ್ಕೆ ನೋಡುವದರಿಂದ, ಗೋವೆಯವರು ತಮ್ಮ ಕಾರ್ಯ ಅಕಾರ್ಯ ಮಾಡಿ ಕೊಳ್ಳುವರು.

ಹಿಮಾಲಯ ಪರ್ವತಗಳಿಗಾಚೆ ಕಾಶ್ಮೀರಕ್ಕೆ ಉತ್ತರದಲ್ಲಿ ಕಾಸ್ಗಾರ ಎಂತ ಒಂದು ರಾಜ್ಯವದೆ. ಈ ರಾಜ್ಯವು ಚೀನಿಗೆ ಸೇರಿದ್ದಾಗಿ, ಚೀನಿ ಮಹಾರಾಜನು ನೇಮಿಸಿದ ದೊರೆಗಳು ಆಳುವಂಥಾದ್ದಾಗಿತ್ತು. ಆದರೆ ಕಾಸ್ಗಾರು ಚೀನಿಗೆ ಬಹಳ ದೂರವಾದ್ದರಿಂದ ಯಾಕೊಬ್ ಬೇಗ ಎಂಬ ಮುಸಲ್ಮಾನನು ರಾಜ್ಯಭಾರ ಅಪಹರಿಸಿ ಕೊಂಡು, ತಾನೇ ಅದಕ್ಕೆ ದೊರೆಯಾಗಿ ಅಮೀರ್ ಎಂತ ಹೆಸರಿಟ್ಟು ಕೊಂಡು ಆಳುವವನಾದನು. ಚೀನಿ ಮಹಾರಾಜನು ಈ ಅಪಹಾರಿಯನ್ನು ಜಯಿಸುವದಕ್ಕೆ ದಂಡು ಕೊಟ್ಟು ಕಳುಹಿಸಿದನು, ಸರಿ. ಆದರೆ ಆ ದಂಡನ್ನು ಯಾಕೋಬನು ಸೋಲಿಸಿದನು. ಹೀ

ಗಿರುವಾಗ್ಯೆ ಯಾಕೋಬ ಬೇಗನು ಕಳೆದ ವರುಷ ತೀರಿ ಹೋದನು. ಅವನ ಪಟ್ಟಕ್ಕೆ ಬಂದ ಅವನ ಮಗ ಬೇಗಕುಲಿಬೇಗ ಎಂಬವನು ಅಪ್ಪನಷ್ಟು ಬುದ್ಧಿಶಾಲಿಯಲ್ಲದೆ ಹಾಗೂ ಹೀಗೂ ರಾಜ್ಯದ ಆಡಳಿತೆ ಮಾಡುತ್ತಿರುವಾಗ, ಚೀನಿ ಮಹಾರಾಜನು ಕಳುಹಿಸಿದ ಎರಡನೇ ದೊಡ್ಡ ಸೈನ್ಯವು ಅಲ್ಲಿಗೆ ಬಂದು, ತಲಪಿ, ಯುದ್ಧ ಮಾಡಿ, ಕಾಸ್ಗಾರನ್ನು ಹಿಡಿದರು. ಬೇಗಕುಲಿಬೇಗನು ರಾಜ್ಯ ಬಿಟ್ಟು ಪಲಾಯನ ಮಾಡಿ, ರುಸ್ಯರ ಪ್ರಾಂತವನ್ನು ಹೊಕ್ಕನು. ಈಗ ಪುನಶ್ಚ ಕಾಸ್ಗಾರ ಶೀಮೆ ಚೀನಿ ಮಹಾರಾಜ್ಯಕ್ಕೆ ಶೇರಿಯದೆ.

ಕತ್ತಿಯಾವಾಡದ ಜುನಾಗಡ ಶೀಮೆಯಲ್ಲಿ ದುಷ್ಕಾಲದ ದೆಶೆಯಿಂದ ಹೊಟ್ಟೆಗಿಲ್ಲದೆ ಧಾವತಿ ಪಡುವ ತುಂಟರು ಕೂಡಿ ಕೊಂಡು, ಸುತ್ತಮುತ್ತಲಿನ ಹಳ್ಳಿಗಳನ್ನು ದೌಡುದಾಳಿ ಮಾಡಲಿಕ್ಕೆ ಹತ್ತಿದ್ಧಾರೆ. ಅವರ ಸಂಖ್ಯೆ ದಿನೆ ದಿನೆ ಬೆಳೆಯುತ್ತದೆ.

ಮದ್ರಾಸ ಸಂಸ್ಥಾನದ ಕೆಲ ಕಡೆಗಳಲ್ಲಿ ಮುಖ್ಯತಾ ತಿನ್ನೆವೆಲ್ಲಿಯಲ್ಲಿ, ಮಿಡಿತೆಗಳ ರಾಶಿ ಬಂದು ಹಾವಳಿ ಮಾಡಲಿಕ್ಕೆ ಹತ್ತಿದವು. ಅವು ನೀಲಗಿರಿಯ ಉತ್ತಕಮಂಡದಲ್ಲಿಯೂ ಸೋಲಾಪುರಕ್ಕೆ ದಕ್ಷಿಣದಲ್ಲಿ ಜಮಖಂಡಿಯಲ್ಲಿಯೂ ಸಹ ಕಾಣಿಸಿ ಕೊಂಡಿದ್ಧಾವಂತೆ. ಇನ್ನು ಯಾವ ಯಾವ ಕಡೆಗೆ ಹೋಗಿ ಹಾವಳಿ ಮಾಡುತ್ತವೋ ಏನೋ?

ಹಿಂದುಸ್ಥಾನದ ಮುಸಲ್ಮಾನರು ತುರ್ಕಿಸ್ಥಾನದಲ್ಲಿಯ ಯುದ್ಧದಲ್ಲಿ ಘಾಯ ಪಟ್ಟ ಅಸ್ವಸ್ಥವಾದ ಶಿಪಾಯರ ಸಹಾಯಾರ್ಥವಾಗಿ ೧೩ ಲಕ್ಷ ರೂಪಾಯಿ ಕಳುಹಿಸಿ ಕೊಟ್ಟಿದ್ಧಾರೆ, ಈ ಹಣ ಹ್ಯಾಗೆ ಖರ್ಚಾಯಿತು ಎಂಬ ವಿಷಯದಲ್ಲಿ ದಾತೃಗಳಿಗೆ ಏನೊಂದು ವರ್ತಮಾನವಿಲ್ಲಾ.

ಈ ದೇಶದಲ್ಲಿ ವರುಷಂಪ್ರತಿಯಲ್ಲು ಹೇರಳ ಮಂದಿ ಕಾಡ ಮೃಗಗಳಿಂದ ನಾಶನವಾಗುತ್ತಾರೆ. ೧೮೭೬ನೇ ಇಸವಿಯಲ್ಲಿ ನಿದಾನ ಪಕ್ಷಕ್ಕೆ ೧೭,೦೦೦ ಮನುಷ್ಯರೂ, ೩,೦೦೦ ದನಕರುಗಳೂ ಸರ್ಪದಂಶ ಮಾತ್ರದಿಂದಲೇ ಸತ್ತು ಹೋದರು. ಮತ್ತು ಅಂದಾಜು ಲೆಖ್ಖದ ಮೇಲೆ ದರ ವರ್ಷಕ್ಕೆ ೨೦,೦೦೦ ಮನುಷ್ಯರೂ, ೫೦,೦೦೦ ಪಶುಗಳೂ ಸರ್ಪಗಳಿಂದಲೂ ಕಾಡು ಮೃಗಗಳಿಂದಲೂ ಸಾಯುವದುಂಟೆಂದು ಹೇಳುತ್ತಾರೆ. ಹೇರಳ ಮನುಷ್ಯರು ವಿಷಜಂತುಗಳಿಗೆ ಆಹುತಿಯಾಗಿ, ಪಶ್ವಾದಿಗಳು ಕಾಡಮೃಗಗಳಿಗೆ ಆಹುತಿಯಾಗುತ್ತವೆ. ವೈದ್ಯರು ಸರ್ಪದಂಶಕ್ಕೆ ಚಿಕಿತ್ಸೆ ಶೋಧನೆ ಮಾಡುತ್ತಾ ಇದ್ಧಾರೆ, ಈ ವರೆಗೆ ಶಿಕ್ಕಲಿಲ್ಲಾ. ಸದ್ಯಕ್ಕೆ ಕೆಳಗೆ ಬರದ ಚಿಕಿತ್ಸೆಯೇ ಫಲಿತವಾಗುವಂಥಾದ್ದು —ಸರ್ಪ ಕಚ್ಚಿದ ಅಂಗಕ್ಕೆ ಘಾಯದ ಮೇಲ್ಗಡೆ ಬಿಮ್ಮಗೆ ಎರಡು ಕಟ್ಟು ಹಾಕಿ, ಹಲ್ಲು ಒಳಗೆ ತಾಗಿದ ಮಾಂಸವನ್ನು ಕೊಯಿದು, ಅಲ್ಲಿಗೆ ಬರೆ ಹಾಕ ಬೇಕು, ಹೊಟ್ಟೆಯೊಳಗೆ ಬ್ರಾಂಡಿಯಾಗಲಿ ಅಮ್ಮೋನಿಯವನ್ನಾಗಲಿ ಕೊಡ ಬೇಕು. ಈ ಚಿಕಿತ್ಸೆ ಮಾಡುವದಕ್ಕಾದರೂ ಬಹು ಘಟ್ಟಿಗ ವೈದ್ಯನು ಬೇಕು, ಅನೇಕ ಪಕ್ಷಗಳಲ್ಲಿ ವೈದ್ಯನ ಸಹಾಯ ಶಿಕ್ಕುವ ಮೊದಲು ರೋಗಿ ಸಾಯುವದೂ ಉಂಟು.

ಗ್ರೇಟ್ ಬ್ರಿಟನ್ ರಾಜ್ಯದಲ್ಲಿ ೧,೭೮೩ ವರ್ತಮಾನಪತ್ರಗಳು ಛಾಪೆಯಾಗುತ್ತವೆ.

ಇಂಗ್ಲಾಂಡಿನಲ್ಲಿ ಮದ್ಯಪ್ರಾಶನೆಗೆ ಮಾತ್ರ ವರ್ಷ ಒಂದಕ್ಕೆ ೧೪೦,೦೦೦,೦೦೦ ರೂಪಾಯಿ ಖರ್ಚಾಗುತ್ತವಂತೆ. ಇಷ್ಟು ಹಣದ ಬಡ್ಡಿಗೆ ಜನರ ನೀತಿಮಾರ್ಗ ಸಚ್ಛಾರ್ಯ ಮಾನ ಮರ್ಯಾದೆ ಎಷ್ಟು ನಷ್ಟವಾಗುವದೆಂದು ಓದುವವರು ಗ್ರಹಿಸುವರು.

ಚಕ್ರವರ್ತಿನಿಯವರ ಮೂರನೆ ಕುಮಾರರು ಪ್ರಿನ್ಸ್ ಆರ್ಥರ್ ಡ್ಯೂಕ್ ಒಫ್ ಕನಾಟ್ ಇವರಿಗೆ ಜರ್ಮನಿಯ ಪ್ರಿನ್ಸ್ ಫ್ರಿದರಿಕ್ ಇವರ ಕುಮಾರ್ತೆಯನ್ನು ಪಾಣಿಗ್ರಹಣವಾಗುವದಕ್ಕೆ ನಿಶ್ಚಯವಾಗಿದೆ.

ಪರಿಸ್ ಪಟ್ಣದಲ್ಲಿ ಪೃಥ್ವಿಯ ಮೇಲಿರುವ ಯಾವತ್ತು ಅಪೂರ್ವ ವಿಚಿತ್ರ ವಸ್ತುಗಳನ್ನು ಸಂಗ್ರಹಿಸಿ ತೋರಿಸೋಣಾಗುವ ಪ್ರದರ್ಶನಕ್ಕೆ ಮಹಾ ಪರುಠವಣೆಯಿಂದ ಸಮಾರಂಭವಾಯಿತು;

ಆ ಸಮಾರಂಭದ ವೇಳೆಯಲ್ಲಿ ಪ್ರಿನ್ಸ್ ಒಫ್ ವೇಲ್ಸ್ ಯುವರಾಜರು ಅಲ್ಲಿದ್ದರು.

ಮಹಾರಾಣಿಯವರದನ್ನಿಸಿ ಕೊಂಡ 'ಯಿಂಡೈಸ್' ಎಂಬದೊಂದು ಮಹಾ ನಾವೆ ಇತ್ತಲಾಗೆ ಪಶ್ಚಿಮ ಇಂದಿಯಗಳೆಂಬ ದ್ವೀಪಗಳ ಪ್ರಾಂತ್ಯದಿಂದ ಹೊರಟು ಸ್ವದೇಶಕ್ಕೆ ತಿರಿಗಿ ಬರುವ ದಾರಿಯಲ್ಲಿ ಬಂಡೆಗಳಿಗೆ ಬಡದು, ಮುಣಾಗಿ ಹೋದ ಸಮ್ಮಂಧ ಇಂಗ್ಲಾಂಡಿನ ಸಾವಿರಾರು ಕುಟುಂಬಗಳಿಗೆ ಮಹಾ ದುಃಖಾಸ್ಪದವಾಗುವದಾಯಿತು. ಆ ನಾವೆಯಲ್ಲಿದ್ದ ಮುನ್ನೂರು ಜನರೊಳಗೆ ಬಹು ಮಂದಿ ಯೌವನ ಪ್ರಾಯದವರಾಗಿದ್ದರು. ಅಂದು ಸಬ್ಬತು ದಿನವಾಗಿತ್ತು. ಆ ಹೊತ್ತು ಎಷ್ಟೋ ಮಂದಿ ಹಡಗದಲ್ಲಿ ದೇವಾರಾಧನೆ ಮಾಡುತ್ತಲಿದ್ದಾರು. ಎಷ್ಟೋ ಜನರು ತಮ್ಮ ಸ್ವದೇಶಕ್ಕೆ ಸಮೀಪವಾದೆವೆಂಬ ಹರುಷದಿಂದ ತುದಿಗಾಲ ಮೇಲೆ ಇದ್ದರೇನೋ? ಹೀಗೆ ಎಲ್ಲಾ ನಿಶ್ಚಿಂತವಾಗಿ ನಡಿಯುವಲ್ಲಿ, ಕೆಲವು ನಿಮಿಷಗಳೊಳಗೆ ಹಡಗವು ಅದರೊಳಗಣ ಜನರು ಸಹಿತವಾಗಿ ಅದೃಶ್ಯವಾಗಿ, ಸಮುದ್ರದ ಅಗಾಧದೊಳಗೆ ಆಚ್ಛಾಧಿತವಾದರು. ಮನುಷ್ಯನ ಬಾಳ್ವೆ ಎಷ್ಟು ಕ್ಷಣಿಕ ಎಂಬದಕ್ಕೆ ಇದೊಂದು ಮಹತ್ತಾದ ದೃಷ್ಟಾಂತವಾಗಿರುತ್ತದೆ.

ಸುರ್ಯ ದೇಶಲ್ಲಿ ಪ್ರಜೆಗಳಿಗೆ ಏನೂ ಸಮಾಧಾನವಿಲ್ಲ. ಅವರು ತುರ್ಕರ ಆಳುವಿಕೆಗೆ ಬೇಸತ್ತು, ತಮ್ಮ ಶೀಮೆ ಐಗುಪ್ತಕ್ಕೆ ಕೂಡಿಸ ಬೇಕೆಂಬ ತಾತ್ಪರ್ಯದಿಂದ ಅಲ್ಲಲ್ಲಿ ರಹಸ್ಯವಾಗಿ ಕೂಟ ಕೂಡಿ, ಪಂಚಾಯತಿಕೆ ಮಾಡುತ್ತಾ ಇದ್ದಾರೆ.

ಬುಲ್ಗಾರ್ಯದ ಮುಸಲ್ಮಾನ ಪ್ರಜೆಗಳು ರುಸ್ಯರ ಮೇಲೆಯೂ ಕ್ರೈಸ್ತ ಬುಲ್ಗಾರ್ಯದವರ ಮೇಲೆಯೂ ಕಾಟಕಾಯಿ ಮಾಡಲಿಕ್ಕೆ ಎದ್ದಿದ್ದಾರೆ, ಮತ್ತು ಕಾಟಕಾಯಿಯವರ ದೊಂಬಿ ಹೆಚ್ಚುತ್ತಾ ಬರುತ್ತದೆ. ಬುಲ್ಗಾರ್ಯದವರು ಮುನ್ನೂರು ವರ್ಷಗಳಿಂದ ಮುಸಲ್ಮಾನರಿಗೆ ಅಧೀನರಾಗಿದ್ದು, ಅವರ ಉಪದ್ರವ ತಾಳಿ ತಾಳಿ ಸಾಕಾಗಿ, ಈಗ ತಮ್ಮ ಕೈಗೆ ಅಧಿಕಾರ ಶಿಕ್ಕಿದಾಕ್ಷಣ ಅವರಿಗೆ ಪ್ರತೀಕಾರ ಮಾಡಲಿಕ್ಕೆ ಆರಂಭಿಸಿದರು. ಕಾಟಕಾಯಿಗೆ ಕಾರಣ ಇದೇ. ಈಗ ಪುನಶ್ಚ ರುಸ್ಯರ ಮೇಲೆಯೂ ಬುಲ್ಗಾರ್ಯದವರ ಮೇಲೆಯೂ ಮುಸಲ್ಮಾನರು ಮುಯ್ಯಿ ತೀರಿಸಿ ಕೊಳ್ಳುತ್ತಾರೆ. ರುಸ್ಯರು ತಮ್ಮ ಯಾವತ್ತೂ ದಳವನ್ನು ಕೊನ್ಸ್ತಂತಿನೋಪೊಲಿ ಬಳಿಯು ಒಟ್ಟೈಸಿ ಕೋಪಾವೇಶರಾದ ಮುಸಲ್ಮಾನ ಪ್ರಜೆಗಳನ್ನು ಅಣಗಿಸುವದಕ್ಕೆ ತಕ್ಕಷ್ಟು ಸೈನ್ಯ ಅಲ್ಲಿಡದ್ದು ತಪ್ಪು.

ಯುದ್ಧದ ವಿಷಯದಲ್ಲಿ ಏನು ಹೇಳೋಣ? ಇಂಗ್ಲಿಷರು ಬಹು ಜಾಗ್ರತೆಯಿಂದ ಯುದ್ಧಕ್ಕೆ ಬೇಕಾದ ಸರ್ವ ಸನ್ನಾಹ ಮಾಡುತ್ತಲೇ ಇದ್ದಾರೆ. ವಿಲಾಯತಿಯಿಂದ ಬಂದ ಅಪ್ಪಣೆ ಮೇರೆಗೆ ಹಿಂದುಸ್ಥಾನದಿಂದ ಕೆಲವು ಸೈನ್ಯಗಳನ್ನು ಮಧ್ಯ ಸಮುದ್ರದಲ್ಲಿರುವ ಮಾಲ್ತ ದ್ವೀಪಕ್ಕೆ ಕಳುಹಿಸೋಣವಾಯಿತು. ಯುದ್ಧದ ಪ್ರಸಂಗ ಬಿದ್ದಲ್ಲಿ ಅಮೇರಿಕದಲ್ಲಿ ಕನಡ ಎಂಬ ಸಂಸ್ಥಾನದವರೂ ಗಿಯಾನಾ ಎಂಬ ಶೀಮೆಯವರೂ ಇಂಗ್ಲಿಷರಿಗೆ ದಳವನ್ನು ಕೊಟ್ಟು ಸಹಾಯ ಮಾಡುವದಕ್ಕೆ ಪೂರ್ಣ ಸಿದ್ಧವಾಗಿದ್ದಾರೆ. ಕಾರ್ಯ ಹೀಗಿದ್ದಾಗ್ಯೂ, ಯುದ್ಧವಾಗುವದೆಂಬ ಮಾತು ಈ ವರೆಗೂ ಮೋದಂಡವೇ. ರುಸ್ಯರಿಗೂ ಇಂಗ್ಲಿಷರಿಗೂ ಯಾವ ಪ್ರಸ್ತಾಪವನ್ನು ಕುರಿತು ವಾಘಾಟವದೆಯೋ ಆ ಪ್ರಸ್ತಾಪಕ್ಕೆ ವಿವೇಕದಿಂದ ಕಡೆ ಮಾಡುವದಕ್ಕೋಸ್ಕರ ವಿಲಾಯತಿಯ ಪ್ರಮುಖ ರಾಜ್ಯಗಳಿಂದ ಪ್ರತಿನಿಧಿಗಳ ಮಂಡಲಿ ನೆರದು ಬಂದು, ಪಂಚಾಯತಿಕೆ ಮಾಡುವರು. ಈ ಮಂಡಲಿ ನೆರದು ಬರುವ ಮುಂಚೆ ಸರ್ವ ಸರಕಾರಗಳು ಪರಸ್ಪರ ಪತ್ರವ್ಯವಹಾರ ಮಾಡಿ, ಒಬ್ಬೊಬ್ಬರ ಹೇಳಿಕೆ ತಿಳಿದು ಕೊಳ್ಳ ಬೇಕೆಂತ ಸರ್ವ ಸಮ್ಮತಿ ಉಂಟಾಗಿ, ಅದೇ ಮೇರೆಗೆ ಪತ್ರವ್ಯವಹಾರ ನಡಿಯುವಂಥಾದ್ದು ಅದೆ. ಪ್ರತಿನಿಧಿಗಳು ಎಲ್ಲಿ ಕೂಡಿ ಬರುವರು, ಲಂಡನಿನಲ್ಲಿಯೋ? ಬೇರೊಂದು ಪಟ್ಣದಲ್ಲಿಯೋ? ಎಂಬದು ಇನ್ನೂ ಖಂಡಿತವಾಗಿ ಹೇಳ ಕೂಡದು.

Printed at the Basel Mission Press, Mangalore.

ಕ್ರೈಸ್ತಸಭಾಪತ್ರ

ಪುಸ್ತಕ ೧೧. JULY 1878. ಅಂಕೆ ೧.

ಅಡಕವು: ಸದ್ಗತಿಗೆ ಮಾರ್ಗವು—ದ್ರಾಕ್ಷೆ ಬಳ್ಳಿಯನ್ನು ಕೆಡಿಸುವ ಚಿಕ್ಕ ನರಿಗಳು—ದುಸ್ಸಹವಾಸ—ಮಹಾ ಪ್ರಾತಃಣವು—ಒಂದು ಲೇಖನ—ವಿವಿಧ ವರ್ತಮಾನಗಳು.

ಸದ್ಗತಿಗೆ ಮಾರ್ಗವು.

ವಿಶ್ವಾಸಿಸಿ ಸ್ನಾನ ಹೊಂದಿದವನು ರಕ್ಷಿಸಲ್ಪಡುವನು; ಆದರೆ ವಿಶ್ವಾಸಿಸದವನು ನ್ಯಾಯತೀರ್ಪಿಗೊಳಗಾಗುವನು. ಮಾರ್ಕ. ೧೬, ೧೬.

ಮನುಷ್ಯನು ಹುಟ್ಟುವಾಗಲೇ ಒಂದು ಮೃಗದ ಮರಿಯಂತಾಗಿ, ಏನೂ ತಿಳಿಯದೆ, ಕೇವಲ ಬುದ್ಧಿಹೀನನಾಗಿದ್ದಾನೆ. ಮತ್ತು ಬುದ್ಧಿವಿಕಾಸವೂ ಜ್ಞಾನೋದಯವೂ ಆಗಲಿಕ್ಕೆ ತಕ್ಕಾದ್ದನ್ನು ಕೇಳಲಿಕ್ಕೂ ನೋಡಲಿಕ್ಕೂ ಕಲಿತು ಕೊಳ್ಳಲಿಕ್ಕೂ ಅವನಿಗೆ ಅನುಕೂಲವೇನೂ ದೊರಕದೆ, ಬುದ್ಧಿವಿಕಾಸವೂ ಜ್ಞಾನೋದಯವೂ ಆಗದೆ ಹೋದರೆ, ಅವನು ಬೆಳದ ಮೇಲೆಯೂ ಪಶುವಿನಂತೆ ಮೂಢಾತ್ಮನಾಗಿಯೇ ಉಳಿದಾನು. ಆದರೆ ಮನುಷ್ಯನು ಹುಟ್ಟು ಅಜ್ಞಾನಾಂಧನಾಗಿರುವದಲ್ಲದೆ, ಮೋಹಾಂಧನೂ ಮದಾಂಧನೂ ಆಗಿ, ಮಿಥ್ಯಾಲೋಚನೆಗಳಿಂದಲೂ ಅಬದ್ಧಭಾವನೆಗಳಿಂದಲೂ ತುಂಬಿ ಹೋಗಿ, ಮಾಯಾಧೀನನೂ ಆಗಿದ್ದಾನೆ. ಅವನು ಅಂಥವನೇ ಆಗಿರುವ ಕಾರಣದಿಂದ ಅವನಲ್ಲಿ ಅನೇಕ ಕಾಮುಭಾವಗಳೂ ದುರಾಶೆಗಳೂ ಹುಟ್ಟುತ್ತಾ ವ್ಯಾಪರಿಸುತ್ತಾ ಇದ್ದಾವೆ. ಇವುಗಳ ಮೂಲವಾಗಿ ಹುಟ್ಟುಮೂರ್ಖನೂ ಹುಟ್ಟುಪಾಪಿಯೂ ಆಗಿರುವ ಮನುಷ್ಯನು ನೀತಿಮತಿಗೆಟ್ಟು, ಶತಮೂರ್ಖನೂ ಪರಮಪಾತಕಿಯೂ ಆಗಿ ಹೋಗುವನು. ದೇವರು ಈ ಅವಸ್ಥೆಯವನನ್ನು ಅವನ ಅರಿವೂ ಸಮ್ಮತಿಯೂ ಇಲ್ಲದೆ, ಬಲಾತ್ಕಾರದಿಂದಲೇ ಎಂಬಂತೆ ಬೇರ್ಪಡಿಸುವದಾದರೆ, ಮನುಷ್ಯನ ಸ್ವಭಾವಕ್ಕಾಗಲಿ ಜನ್ಮೋದ್ದಿಶ್ಯಕ್ಕಾಗಲಿ ಒಪ್ಪದಂಥಾ ಅನುಕೂಲವಾಗದಂಥಾ ಕೆಲಸವು ಆದೀತು. ಅದು ಆಗದ್ದು; ಆದ್ದರಿಂದ ಸ್ವಬುದ್ಧಿಯಿಂದ ಸ್ವತಂತ್ರನಾಗಿ, ಇಚ್ಛಕ ಪಿಶಾಚನ ಮಾತನ್ನು ಕೇಳಿ, ನಂಬಿಕೊಂಡು, ಪತಿತನಾಗಿ, ನೀತಿಗತಿಗೆಟ್ಟ ಮನುಷ್ಯನು ಬಲಾತ್ಕಾರವಿಲ್ಲದೆ, ಸ್ವಂತ ಇಚ್ಛೆಯಿಂದ ಈಗ ದೇವರ ವಾಕ್ಯವನ್ನು ಕೇಳಿ, ನಂಬಿಕೊಂಡು, ಪರಿಣಮಿಸಿ, ತಿರಿಗಿ ಸದ್ಗತಿಯನ್ನು ಪಡಕೊಳ್ಳಬೇಕು. ಸದ್ಗತಿಗೆ ಇತರವಾದ ಮಾರ್ಗವು ಇಲ್ಲವೇ ಇಲ್ಲಾ.

ಮನುಷ್ಯನು ವಿಶ್ವಾಸವಿಟ್ಟು ಅಂಗೀಕಾರ ಮಾಡ ತಕ್ಕಂಥಾ ದೇವರ ವಾಕ್ಯವು ರಕ್ಷಣೆಗೋಸ್ಕರವಾದ್ದಾಗಿ ಸುಗತಿಪ್ರಾಪ್ತಿಗೆ ಉಪಯುಕ್ತವಾಗಿರುವದರಿಂದ ಅದು ಸುವಾರ್ತೆ ಅಂದರೆ ಶುಭಸಮಾಚಾರ ಎಂದೆನ್ನಿಸಿ ಕೊಳ್ಳುತ್ತದೆ. ಈ ವಾಕ್ಯವು ಅಂಥಾದಾಗಿ ಸರ್ವರಿಗೆ ತಕ್ಕದಾಗಿರುವದ

ರಿಂದ ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಅಪ್ಪಣೆ ಕೊಟ್ಟು ಹೇಳಿದ್ದೇನಂದರೆ: “ಸಮಸ್ತ ಲೋಕಕ್ಕೆ
ಹೋಗಿ, ಸಮಸ್ತ ಸೃಷ್ಟಿಗೆ ಸುವಾರ್ತೆಯನ್ನು ಪ್ರಸಂಗಿಸಿರಿ! ವಿಶ್ವಾಸಿಸಿ ಸ್ನಾನ ಹೊಂದಿದವನು ರಕ್ಷಿ
ಸಲ್ಪಡುವನು; ಆದರೆ ವಿಶ್ವಾಸಿಸದವನು ನ್ಯಾಯತೀರ್ಪಿಗೊಳಗಾಗುವನು.” ಸುವಾರ್ತೆ ಶುಭವಾ
ರ್ತೆಯಾಗಿ, ಸವಿಯೂ ಮಧುರವೂ ಮನೋಹರವೂ ಆಗಿದೆ. ಪವಿತ್ರಾತ್ಮನು ಮನುಷ್ಯನಿಗೆ ಅನು
ಭವಕ್ಕೆ ತಂದು ಕೊಡುವಂಥಾ, ಕ್ರಿಸ್ತ ಯೇಸುವಿನಲ್ಲಿ ಮೂರ್ತಿಮತ್ತಾಗಿಯೂ ಸಂಗ್ರಹವಾಗಿಯೂ
ಇರುವಂಥಾ, ದೇವರ ದಯಾರಸವು ಸುವಾರ್ತೆ ಎಂಬ ದಿವ್ಯ ಕಲಶದಲ್ಲಿ ಬಡಿಸೋಣಾಗುತ್ತದೆ.
ಈ ಕಲಶವನ್ನು ತೆಗೆದು ಕೊಂಡು, ಅದರಲ್ಲಿ ತುಂಬಿರುವ ದಯಾರಸವನ್ನು ಸೇವಿಸಿ ಪಾನ ಮಾಡಿದ
ರಾಯಿತು. ವಿಶ್ವಾಸವಿಡುವದು ಈ ದಯಾರಸವನ್ನು ಪಾನ ಮಾಡುವದಾಗಿದೆ. ಸುವಾ
ರ್ತೆಯನ್ನು ನಂಬಿ, ಅಂಗೀಕಾರ ಮಾಡುವದರಲ್ಲಿ ಅಜ್ಞಾನ, ಮದ ಮೊದಲಾದ ಅಂಧಕಾರವು ಪರಿ
ಹಾರವಾಗಿ, ಮಿಥ್ಯಾಲೋಚನೆಗಳೂ ಅಬದ್ಧ ಭಾವನೆಗಳೂ ಬಿಟ್ಟು ಹೋಗಿ, ಮಾಯಾಮಲವೂ
ದುರಾಶೆಗಳ ಹಾಗೂ ಸಂಶಯಾದಿಗಳ ವಾಸನೆಯೂ ಇಲ್ಲದೆ ಹೋಗಿ, ಹೃದ್ಶುದ್ಧಿ ಪ್ರಾಪ್ತಿಯಾ
ಗುತ್ತದೆ. ಹೀಗೆ ಶುದ್ಧವಾದ ಹೃದಯದಲ್ಲಿ ಸತ್ಯಜ್ಞಾನ, ಭಕ್ತಿ, ನೀತಿ, ದೃಢತ್ವ, ಶಾಂತಿ, ಸಂತೋ
ಷ, ಧೈರ್ಯ, ನಯ ತುಂಬಿ ಹೋಗಿ ಶೋಭಿಸುವಂಥಾದಾಗುತ್ತದೆ. ಸುವಾರ್ತೆಯನ್ನು ನಂಬಿ
ಕೊಂಡು ಅಂಗೀಕಾರ ಮಾಡುವವರಲ್ಲಿ ಅದು ನೆರವೇರಿ, ಮಹಾ ಶುಭಕಾರ್ಯಕ್ಕೆ ಮೂಲ
ವಾಗುತ್ತದೆ—ಸುವಾರ್ತೆಯು ಮೂಲವಾಗಿ ಮನುಷ್ಯನಿಗೆ ಪ್ರಾಪ್ತಿಸುವಂಥಾದು “ರಕ್ಷಣೆ” ಎನ್ನಿಸಿ
ಕೊಳ್ಳುತ್ತದೆ. ರಕ್ಷಣೆಯಂದರೆ ಪಾಪದಿಂದಲೂ ಪಾಪದ ಫಲವಾಗಿರುವ ಶಾಪ ಬಾಧೆ ಮರಣ
ನರಕಗಳಿಂದಲೂ ಬಿಡುಗಡೆಯಾಗಿ, ಸ್ವರ್ಗರಾಜ್ಯದಲ್ಲಿ ಸೇರಿ, ಶಾಶ್ವತ ಪದವಿಗೆ ಬಾಧ್ಯಸ್ಥನಾಗಿ, ಪರ
ಮಾನಂದದಲ್ಲಿ ಸದಾಕಾಲ ಬದುಕುವದು. ವಿಶ್ವಾಸವಿಡುತ್ತಲೇ ರಕ್ಷಣೆ ತೊಡಗುತ್ತದೆ; ಆದರೆ ಕೈವ
ಲ್ಯದಲ್ಲಿ ಪರಿಪೂರ್ಣವಾಗುತ್ತದೆ. ವಿಶ್ವಾಸವು ದೇವರ ಚಿತ್ತಕ್ಕೂ ಬುದ್ಧಿಗೂ ವಾಕ್ಯಕ್ಕೂ ಮಾ
ರ್ಗಕ್ಕೂ ಒಡಂಬಡುವಂಥಾದಾಗಿ, ಮನುಷ್ಯನನ್ನು ದೇವರ ಸಂಸರ್ಗಕ್ಕೆ ಹವಣಿಸಿ, ಅನುಗೈಯಿಸಿ,
ಸಿದ್ಧ ಮಾಡಿ, ಶಾಶ್ವತ ಜೀವಪ್ರಾಪ್ತಿಗೆ ತಕ್ಕವನಾಗ ಮಾಡುವಂಥಾದಾಗಿದೆ. ಆದರೆ ವಿಶ್ವಾಸದ
ಜತೆಯಲ್ಲಿ ಸ್ನಾನವೂ ಬೇಕು. ಸ್ನಾನವನ್ನು ಹೊಂದಲಿಕ್ಕೆ ಕ್ರಿಸ್ತನ ಅಪ್ಪಣೆಯೇ ಒಂದು ಕಾರಣ.
ಸ್ನಾನವು ಒಂದು ಸಂಸ್ಕಾರ, ಅಂದರೆ ಮನುಷ್ಯನು ಮಾಡ ಅಥವಾ ಮಾಡಿಸಿ ಕೊಳ್ಳ ತಕ್ಕಂಥಾ
ಒಂದು ಒಳ್ಳೇ ಕ್ರಿಯೆ ಆಗಿದೆ. ಈ ಕ್ರಿಯೆಯನ್ನು ಮಾಡಿಸಿ ಕೊಳ್ಳುವವರು ಕ್ರಿಸ್ತಭಕ್ತರ ಮುದ್ರೆ
ಯನ್ನು ಇಡಿಸಿ ಕೊಂಡು, ವಿಶ್ವಾಸಿಗಳ ಲೆಖ್ಖಕ್ಕೆ, ಕ್ರೈಸ್ತಸಭೆಗೆ ಸೇರಿ, ಸಭಾಪತಿಯಾದ ಕ್ರಿಸ್ತನನ್ನು
ತಮ್ಮ ಗುರು, ತಮ್ಮ ದೇವರು, ತಮ್ಮ ಗತಿ ಎಂದು ಬಹಿರಂಗವಾಗಿಯೂ ಅರಿಕೆ ಮಾಡುವರು.
ಆದರೆ ಸ್ನಾನವು ಒಂದು ಸಂಸ್ಕಾರವು ಆಗಿರುವದಲ್ಲದೆ, ಒಂದು ಪ್ರಸಾದವೂ ಆಗಿರುತ್ತದೆ,
ಯಾಕಂದರೆ ಸ್ನಾನದಲ್ಲಿ ಒಂದು ಅಂಗೀಕಾರವೂ ಆಗುತ್ತದೆ, ಅಂದರೆ ದೇವರು ಸ್ನಾನ ಹೊಂದು
ವವನನ್ನು ಅಂಗೀಕರಿಸಿ ಕೊಳ್ಳುತ್ತಾನೆ, ಮತ್ತು ಸ್ನಾನ ಹೊಂದುವವನು ದೇವರನ್ನು, ದೇವರ ಕೈ
ಯಿಂದ ಒಂದು ವರವನ್ನೂ ಆತ್ಮಿಕ ಉಡುಗೆರೆಗಳನ್ನೂ ಶಕ್ತಿಗಳನ್ನೂ ಅಂಗೀಕಾರ ಮಾಡಿ, ಹೊಂದು
ತ್ತಾನೆ. ಹೀಗಿರಲಾಗಿ ಸ್ನಾನದಲ್ಲಿ ಮನುಷ್ಯನ ಕ್ರಿಯೆ ಕಾಣುವಷ್ಟಕ್ಕೆ ಆದೊಂದು ಸಂಸ್ಕಾರವೆಂ
ಧೇಳ ಬಹುದು. ಆದರೆ ದಿವ್ಯ ವರಪ್ರದಾನವು ಅದರ ವಿಶೇಷವಾಗಿರುವಷ್ಟಕ್ಕೆ ಅದು ಸಂಸ್ಕಾರವನ್ನು
ಮೀರಿ ಹೋಗಿ, ಒಂದು ವರಪ್ರಸಾದವೇ ಆಗಿರುತ್ತದೆ. ಹೀಗಿರಲಾಗಿ ಸ್ನಾನಕ್ಕಿಂತ ವಿಶ್ವಾಸವೇ
ಅವಶ್ಯ, ಯಾಕಂದರೆ ವಿಶ್ವಾಸ ಇಲ್ಲದವರಿಗೆ ಸ್ನಾನವು ವರಪ್ರಸಾದವಾಗದೆ, ಒಂದು ಬರೇ ಆಚಾರ
ವಾಗಿ ಹೋಗುವದು. ಸುವಾರ್ತೆಯನ್ನು ನಂಬಿ ಕೊಳ್ಳದವನು ಕಾಮ ಮದ ಮೊದಲಾದ ಅಂಧ

ಕಾರ ಪಾಶಗಳಲ್ಲಿ ಶಿಕ್ಕಿ ಕೊಂಡು, ಬಿಡುಗಡೆಯಾಗದೆ, ದುರಾಶೆಗಳನ್ನೂ ದುರಾಲೋಚನೆಗಳನ್ನೂ ಅಬದ್ಧಗಳನ್ನೂ ದೇವದ್ರೋಹಭಾವನೆಗಳನ್ನೂ ಬಿಟ್ಟು ಬಿಡಲಾರದೆ; ದಿನ ಹೋಗುತ್ತಾ ಹೋಗುತ್ತಾ ಇರುವಷ್ಟಕ್ಕೆ ಪಾತಕಿಯಾಗುತ್ತಾ ಬಂದು, ಪರಮನರಕಕ್ಕೆ ಪಾತ್ರನಾಗಿ ಹೋಗುವನು.

ದ್ರಾಕ್ಷೆ ಬಳ್ಳಿಯನ್ನು ಕೆಡಿಸುವ ಚಿಕ್ಕ ನರಿಗಳು.

ಸೊಲೊಮೋನನ ಗೀತ. ೨, ೧೫.

೧. "ಮುಂದಕ್ಕೆ ನೋಡುವಾ" ಎಂಬದು ಒಂದು ಚಿಕ್ಕ ನರಿ; ನೀವು ಇದನ್ನು ಬೆನ್ನಾಡಿ ಹಿಡಿಯಲಿಕ್ಕೆ ಹೋದರೆ, "ಎಂದಿಗೂ ಇಲ್ಲಾ" ಎಂಬ ಆದರ ಬಿಲ ನಿಮಗೆ ಶಿಕ್ಕುವದು.

೨. "ನಾನು ಮಾಡಲಾರೆ" ಎಂಬ ಈ ಚಿಕ್ಕ ನರಿಯ ಬೆನ್ನ ಹಿಂದೆ "ನಾನು ಮಾಡುತ್ತೇನೆ" ಎಂಬ ಚಿಕ್ಕ ಪ್ರಾಣಿಯನ್ನು ಅಟ್ಟಿದರೆ, ಅದು ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವದು.

೩. "ಪ್ರಯತ್ನ ಮಾಡಿ ಪುರುಷಾರ್ಥವಿಲ್ಲಾ." ಈ ಚಿಕ್ಕ ನರಿ ಪ್ರಕಟವಾಗಿರುವ ಕೆಡಕನಿಗಿಂತಲೂ ಹೆಚ್ಚಾಗಿ ಅನೇಕ ದ್ರಾಕ್ಷೆಬಳ್ಳಿಗಳ ಫಲಗಳ ನಾಶನ ಮಾಡಿಯದೆ.

೪. "ನಾನು ಮರತೆ." ಈ ನರಿ ಮಹಾ ಕಪಟವುಳ್ಳದ್ದು, ಹೆದರಿಸುವಂಥಾದ್ದು. ಮೆಲ್ಲಗೆ ಕದ್ದು ಒಳಗೆ ಬಂದು ಕೈಗೆ ಶಿಕ್ಕುವದು ಕ್ವಚಿತ್ತು.

೫. "ಚಿಂತೆ ಇಲ್ಲಾ." ಈ ನರಿ ಎಂಥೆಂಥಾ ಹಾವಳಿ ಮಾಡಿಯದೆ!

೬. "ಹೀಗಲ್ಲೇನು" ಅಥವಾ "ಯಾಕಾಗವಲ್ಲದು." ಇದು ಆರನೆ ನರಿ. ಈ ಚಿಕ್ಕ ನರಿಗಳು ನಿನ್ನ ದ್ರಾಕ್ಷೆ ತೋಟದೊಳಗೆ ಹೊಕ್ಕು ಕೆಡಿಸದ ಹಾಗೆ ನೋಡಿಕೋ.

ದುಸ್ಸಹವಾಸ.

ದೇವಭಕ್ತಿಯುಳ್ಳ ಒಬ್ಬ ಗೃಹಸ್ಥನಿಗೆ ಇಬ್ಬರು ಕುಮಾರರೂ ಒಬ್ಬ ಕುಮಾರ್ತೆಯೂ ಇದ್ದರು. ಈ ಹುಡುಗರು ಬೆಳದು, ಪೇಟೆಯ ಬೀದಿಗಳಲ್ಲಿ ಓಡ್ಯಾಡಿ ಹೊತ್ತು ಕಳೆಯುವ ಹುಡುಗರ ಸಂಗಡ ಆಡುತ್ತಾ ಕೆಟ್ಟು ಹೋಗ ಬಾರದೆಂತ, ದೇವಭಕ್ತನಾದ ಅವರ ಅಜ್ಜನು ಬಹು ತಾತ್ಪರ್ಯವಿಟ್ಟು, ಯಾವಾಗಲೂ ಅವರ ಹತ್ತರ ಬಹಳ ಮಮತೆಯಿಂದ ಮಾತಾಡಿ, ಅವರಿಗೆ ಅನೇಕ ನೀತೀ ಮಾತುಗಳನ್ನು ಹೇಳುತ್ತಾ ಅವರ ಸಂಗಡ ಆಡುತ್ತಾ ಬಂಧದರಿಂದ ಆ ಹುಡುಗರು ಸಹ ಅವನನ್ನು ಬಿಟ್ಟು ಹೋಗದೆ, ಅವನನ್ನೂ ಹೆತ್ತವರನ್ನೂ ಸನ್ಮಾನಿಸುತ್ತಾ ಪ್ರೀತಿಸುತ್ತಾ ಸಂತೋಷ ಪಡುತ್ತಾ ಇದ್ದರು.

ಹೀಗಿರಲಾಗಿ ಒಂದಾನೊಂದು ದಿನ ಅವರ ಅಜ್ಜ ಅವರನ್ನು ಕರದು, "ನನ್ನ ಪ್ರಿಯ ಮಕ್ಕಳೇ! ನಾನು ಮುದುಕ, ಇನ್ನು ಬಹು ದಿನ ಬದುಕಲಾರೆ; ನಾನು ಬೇಗ ಸತ್ತು, ನನ್ನ ರಕ್ಷಕನಾದ ಯೇಸುವಿನ ಬಳಿಗೆ ಹೋಗುವೆನು. ನಾನು ನಿಮ್ಮನ್ನು ಪ್ರೀತಿಸಿದ್ದನ್ನು ನೀವು ಒಮ್ಮೆಯಾದರೂ ಮರಿಯದ ಹಾಗೆ ನಿಮಗೆ ಒಂದು ಗುರುತನ್ನು ಕೊಡುತ್ತೇನೆ" ಎಂದು ಹೇಳಿ ಪೆಟ್ಟಗೆಯನ್ನು ತೆರೆದು, ಅದರಿಂದ ರೂಪಾಯಿಯಂಥ ಮೂರು ಬೆಳ್ಳಿಯ ಬಿಲ್ಲೆಗಳನ್ನು ತೆಗೆದು, ಮೂವರಿಗೆ ಒಂದೊಂದನ್ನು ಕೊಟ್ಟನು. ಅವುಗಳ ಹಿಂಭಾಗದಲ್ಲಿ ಅಜ್ಜನ ರೂಪವು ಮುಂಭಾಗದಲ್ಲಿ ಸದ್ವೇದರೂಪವು ಕಾಣಿಸಿ ಇತ್ತು. ಈ ಎರಡು ರೂಪಗಳನ್ನು ಅಜ್ಜನು ಹುಡುಗರಿಗೆ ತೋರಿಸಿ, "ನೀವು ಇವುಗಳನ್ನು ನೋಡುವಷ್ಟು ಸಾರಿ ನಾನು ನಿಮ್ಮನ್ನು ಪ್ರೀತಿಸಿದ್ದನ್ನೂ, ದೇವರ ವಾಕ್ಯದ ಪ್ರಕಾರ ನಿಮಗೆ ಹೇಳಿದ ಬುದ್ಧಿ ಮಾತುಗಳನ್ನೂ ಜ್ಞಾಪಕ ಮಾಡಿ ಕೊಳ್ಳಿರಿ" ಎಂದು ಹೇಳಿ, ಅವರನ್ನು ಮುದ್ದಿಟ್ಟು, ಆಶೀರ್ವದಿಸಿದನು. ಆ ಹುಡುಗರಲ್ಲಿ ಒಬ್ಬನ ಹೆಸರು ಸುಗಂಧಿ ಎಂಬದು. ಆ ಹುಡುಗರು ಇದ್ದ ನೆರೆಹೊರೆ

ಯಲ್ಲಿ ಐಶ್ವರ್ಯವಂತನಾದ ಒಬ್ಬ ಮನುಷ್ಯನಿಗೆ ಬಹಳ ಪೋಕರಿಯೂ ಅವಿಧೇಯನೂ ಆಗಿದ್ದ ಮೋಷಕನೆಂಬ ಮಗನಿದ್ದನು. ಈ ಹುಡುಗನು ಬೇರೆ ಹುಡುಗರ ಸಂಗಡ ಝುಗಳಾಡುವದರಲ್ಲಿಯೂ ನಾನಾ ತಂಟೆಗಿಂಟೆಗಳನ್ನು ನಡಿಸುವದರಲ್ಲಿಯೂ ಕಸಕೊಳ್ಳುವದರಲ್ಲಿಯೂ ಬಹಳ ಜಾಣನೂ ಘಟ್ಟಿಗನೂ ಆಗಿದ್ದನು. ಆದರೂ ತನ್ನ ತಂದೆಯೂ ಉಳಕಿಯವರೂ ಅವ ಚಲೋ ಹುಡುಗ ಎಂತ ಹೇಳುವ ಹಾಗೆ ಯುಕ್ತಿಯಿಂದ ನಡಕೊಳ್ಳುತ್ತಿದ್ದನು. ಇವನೊಂದಿಗೆ ಸುಗಂಧಿಗೆ ಸ್ನೇಹ ಬಿತ್ತು. ಮೋಷಕನ ಹದಿನಾಲ್ಕನೇ ಜನ್ಮದಿನವು ಬಂದಾಗ ಅವನು ತನ್ನ ತಂದೆಯ ಸಮ್ಮತಿಯಿಂದ ನಾಲ್ವತ್ತು ಮಂದಿ ಹುಡುಗರಿಗೆ ಒಂದೂಟ ಸಿದ್ಧ ಮಾಡಿಸಿ, ಅದಕ್ಕೆ ಸುಗಂಧಿಯನ್ನೂ ಚೀಟು ಬರದು ಕಳುಹಿಸಿ ಕರದನು. ಸುಗಂಧಿ ಆ ಚೀಟನ್ನು ಓದಿ, ಅಜ್ಜನು ಕೊಟ್ಟ ಮುದ್ರೆಯನ್ನು ತಕ್ಕೊಂಡು, ಹೇಳಿದ ಹೊತ್ತಿಗೆ ಆ ಹುಡುಗನ ಮನೆಗೆ ಊಟಕ್ಕೆ ಹೋದನು.

ಆ ಊಟ ಆದನಂತರ ಮೋಷಕನು ತನ್ನ ಗೆಳೆಯರೊಂದಿಗೆ ನೆರೆಯೂರಿನ ಒಂದು ತೋಪಿನಲ್ಲಿ ತಿರುಗಾಡುವದಕ್ಕೂ ಆಡುವದಕ್ಕೂ ತನ್ನ ತಂದೇ ಹತ್ತರ ಅಪ್ಪಣೆ ಕೇಳಿ ಕೊಂಡನು. ಹೋಗ ಬಹುದು, ಆದರೆ ಅಲ್ಲಿ ನೆರೆದಿದ್ದ ಸಂತೆಗೆ ಹೋಗ ಬಾರದು ಎಂದು ಅವನ ತಂದೆ ಅಪ್ಪಣೆ ಕೊಟ್ಟನು. ಈ ಅಪ್ಪಣೆಯನ್ನು ಹುಡುಗರೆಲ್ಲರೂ ಕೇಳಿದರು. ಅವರೆಲ್ಲರೂ ಮೋಷಕನೊಡನೆ ಹೊರಟು, ತೋಪಿಗೆ ಬಂದಾಗ ಅವನು: "ಗೆಳೆಯರೇ, ಸಂತೆಗೆ ಹೋಗೋಣ, ಬನ್ನಿ!" ಎಂದು ಕರೆದನು. "ಏನಪ್ಪಾ! ಸಂತೆಗೆ ಹೋಗ ಬಾರದೆಂದು ನಿನ್ನಪ್ಪ ಹೇಳಿದರಲ್ಲಾ!" ಎಂದು ಸುಗಂಧಿ ಹೇಳಿದರೂ, ಯಾರೂ ಆ ಅಪ್ಪಣೆಯನ್ನು ಲಕ್ಷ್ಯಕ್ಕೆ ತಾರದೆ ಅಲ್ಲಿಗೆ ಹೋದರು. ತಾನೊಬ್ಬನೇ ಹೋಗದೆ ಅಲ್ಲಿ ಒಂಟಿಗನಾಗಿ ನಿಲ್ಲಲಿಕ್ಕೆ ಸುಗಂಧಿಗೆ ಕಷ್ಟವೆಂತ ಕಂಡದರಿಂದ, ಅವನು ಸಹಾ ಹೋದನು. ಸಂತೆಯಲ್ಲಿ ಅವರು ಆಯಾ ಸರಕುಗಳನ್ನು ನೋಡುತ್ತಾ ತಿರುಗಾಡುತ್ತಿರುವಾಗ್ಯೆ ಒಬ್ಬ ಅಂಗಡಿಗಾರನ ಬಳಿಯಲ್ಲಿ ಆಡುವದಕ್ಕೆ ಮಾಡಿದ್ದ ಇಸ್ಪೇಟು ಕಾಗದಗಳ ಪೆಟ್ಟಿಗೆಯನ್ನು ಕಂಡು, ಅದರ ಕ್ರಯವೇನೆಂದು ಕೇಳಿದ್ದಕ್ಕೆ ಆ ವ್ಯಾಪಾರಿ ಹೆಚ್ಚಿನ ಕ್ರಯ ಹೇಳಿದ್ದರಿಂದ, ವಾಪಸು ಕೊಟ್ಟು ಬಿಟ್ಟರು. ಆದರೂ ಮೋಷಕನು ಅದರ ಮೇಲೆ ಆಶೆ ಇಟ್ಟು, ಯಾರಿಗೂ ಕಾಣದ ಹಾಗೆ ಉಪಾಯದಿಂದ ಹೋಗಿ, ಅದನ್ನು ಎತ್ತಿ ಹಾಕಿ ಅಡಗಿಸಿ ಕೊಂಡನು. ಸ್ವಲ್ಪ ಹೊತ್ತಿನ ಮೇಲೆ ವ್ಯಾಪಾರಿ ಅದನ್ನು ಕಾಣದ್ದರಿಂದ, ಆ ಹುಡುಗರಲ್ಲಿ ಒಬ್ಬನು ಅದನ್ನು ಎತ್ತಿ ಹಾಕಿರ ಬೇಕೆಂದು ನಿಶ್ಚಯಿಸಿ ಕೊಂಡು, ಒಬ್ಬ ಕೋಲ್ಕಾರನನ್ನು ಕರೆದು, ಆ ಹುಡುಗರನ್ನೆಲ್ಲಾ ಹಿಡಿಸಿ, ತನಿಖಿ ಮಾಡಿಸಿದಾಗ, ಮೋಷಕನು ಈಗ ಮೋಸವಾಗಲಿಕ್ಕೆ ಸಾಕು ಎಂತ ಭಯ ಪಟ್ಟು, ತನ್ನ ಬದೀಲಿ ನಿಂತು ಕೊಂಡಿದ್ದ ಸುಗಂಧಿಯ ಮೇಲಂಗಿಯ ಕಿಶೆಯಲ್ಲಿ ಅದನ್ನು ಮೆಲ್ಲಗೆ ಶೇರಿಸಿ ಬಿಟ್ಟನು. ಕೋಲ್ಕಾರನು ಮೋಷಕನನ್ನು ಝುಡ್ತಿ ಮಾಡಿದನಂತರ ಸುಗಂಧಿಯನ್ನೂ ಝುಡ್ತಿ ಮಾಡಲಾಗಿ ಇವನಲ್ಲಿ ಕಳವಾದ ಅಂಡೆ ಶಿಕ್ಕಿತು. ಸುಗಂಧಿ ಮೊದಲು ಅದರ ಕ್ರಯ ಕೇಳಿದ್ದರಿಂದ ಬಾಯಿ ಬಾರದವನಾಗಿ ನಿಲ್ಲ ಬೇಕಾಯಿತು. ಅವನ ಅಜ್ಜಿ ಕೊಟ್ಟ ಮುದ್ರೆಯನ್ನು ಕೋಲ್ಕಾರನು ತಕ್ಕೊಂಡು, ಎಲ್ಲರಿಗೆ ತೋರಿಸಲಾಗಿ, ದುಷ್ಟರನ್ನೊಡಗೂಡುವವರಿಗೆ ಕಷ್ಟ ತಪ್ಪದು ಎಂಬದಾಗಿ ಅಜ್ಜನು ಹೇಳಿ ಎಚ್ಚರಿಸಿ ಬೋಧಿಸಿದ ಮಾತುಗಳನ್ನು ಜ್ಞಾಪಕ ಮಾಡಿ ಕೊಂಡು, ಮಹಾ ಶಬ್ದದಿಂದ ಅತ್ತು: "ನಾನು ಅದನ್ನು ತೆಗಿಯಲಿಲ್ಲ, ನಾನು ತೆಗಿಯಲಿಲ್ಲಾ!" ಎಂತ ದೃಢವಾಗಿಯೂ ಘಟ್ಟಿಯಾಗಿಯೂ ಹೇಳಿದರೂ, ಯಾರೂ ನಂಬಲಿಲ್ಲ. ವ್ಯಾಪಾರಿಯೂ ಕೋಲ್ಕಾರನೂ ಸುಗಂಧಿಯನ್ನು ಹಿಡುಕೊಂಡು, "ಹುಡುಗರೇ! ಈ ಹುಡುಗನನ್ನು ನಾವು ಕಚೇರಿಗೆ ತಕ್ಕೊಂಡು ಹೋಗುತ್ತೇವೆ; ನೀವೂ ಬರ ಬೇಕು" ಎಂದು ಹೇಳಿದಾಗ, ಮೋಷಕನು "ಅದು ನಮಗೇನು? ನಾವು ಸಹ ಕಳ್ಳರೋ? ನಮ್ಮ ಚೀಲಗಳಲ್ಲಿ ಕಳವಾದ ಸಾಮಾನು ಶಿಕ್ಕಿತೋ? ನಾವು

ನಮ್ಮ ಮನೆಗಳಿಗೆ ಹೋಗುತ್ತೇವೆ" ಎಂದು ಹೇಳಿ, ಉಳಿದವರನ್ನೂ ಹೋಗ ಕರಕೊಂಡನು. ಸುಗಂಧಿ ಒಬ್ಬನೇ ಉಳಿಯ ಬೇಕಾದ್ದರಿಂದ ಬಹಳ ಭಯದಿಂದ ನಡುಗಿ, "ನಾನು ಅದನ್ನು ತೆಗೆಯಲಿಲ್ಲ" ಎಂತ ಬೊಬ್ಬಿಟ್ಟು ಅತ್ತನು. ಅವನ ಗುಣವನ್ನು ಅರಿತ ಬೇರೆ ಹುಡುಗರೆಲ್ಲರೂ ಕೂಡಿ ಬಂದು, ವ್ಯಾಪಾರಿಗೂ ಕೋಲ್ಕಾರನಿಗೂ "ಇವನು ಕಳ್ಳನಲ್ಲ, ಸಮೀಪವಾದ ಗ್ರಾಮದಲ್ಲಿ ಇರುವ ಇವನ ಅಪ್ಪನೂ ಅಜ್ಜನೂ ಒಳ್ಳೇ ಮರ್ಯಾದಸ್ಥರಾಗಿರುತ್ತಾರೆ. ಆ ಕಾಗದಗಳ ಅಂಡೆ ಇವನ ಕಿಶೆಯಲ್ಲಿ ಶಿಕ್ಕಿದ್ದು ಬಹು ಆಶ್ಚರ್ಯವೇ. ಇವನು ಕಳ್ಳನಲ್ಲ. ಆದರೆ ಈಗ ಹ್ಯಾಗಿದ್ದರೂ ಚಿಂತೆ ಇಲ್ಲಾ, ನಾವೆಲ್ಲರೂ ಕೂಡಿ ಹಣ ಕೊಡುತ್ತೇವೆ, ಇವನನ್ನು ಬಿಡಿರಿ" ಎಂದು ಬಹು ವಿನಯಪೂರ್ವಕವಾಗಿ ಬೇಡಿಕೊಂಡರು. ಆದರೆ ಮೋಷಕನು ಏನೂ ಮಾತಾಡದೆ ಸುಮ್ಮನೆ ನಿಂತಿದ್ದನು. ಹುಡುಗರೆಲ್ಲರು ಕೂಡಿಸಿದ ಹಣವು ಸುಗಂಧಿಯ ಕೈಯಲ್ಲಿದ್ದ ಮುದ್ರೆಯ ಕ್ರಯಕ್ಕೆ ಸರಿಸಮಾನವಲ್ಲದ್ದರಿಂದ ವ್ಯಾಪಾರಿ ಮುದ್ರೆಯನ್ನು ತಕ್ಕೊಂಡು, ಹಣವನ್ನು ವಾಪಸು ಕೊಟ್ಟು, ಎಲ್ಲರ ವಿಷಯ ಸಂಶಯ ಪಡ ಕಾರಣವಾದ್ದರಿಂದ ಅವರಲ್ಲಿ ಕೆಲವರನ್ನು ಹೊಡದು ಕಳುಹಿಸಿ ಬಿಟ್ಟರು. ತರುವಾಯ ಹುಡುಗರು ತಮ್ಮ ತಮ್ಮ ಮನೆಗಳಿಗೆ ಹೋದರು. (ಮುಂದೆ ಸಾಗಿಸಲ್ಪಡುವದು.)

ಮಹಾ ಔತಣವು.

ನಾವು ದೊಡ್ಡ ಔತಣಕ್ಕೆ ಕರಿಸಿ ಕೊಂಡರೆ, ಆ ಔತಣದ ವಿಷಯ ಕೂಲಂಕುಶ ವರ್ತಮಾನ ಗೊತ್ತು ಮಾಡಿ ಕೊಳ್ಳಲಿಕ್ಕೆ ನಮ್ಮೊಳಗೆ ಅಪೇಕ್ಷೆ ಉಂಟಾಗಿ, ಆ ಔತಣದಲ್ಲಿ ಯಾರ್ಯಾರು ಇದ್ದಾರೆ? ಏನೇನು ಸಿದ್ಧ ಮಾಡಿದ್ದಾರೆ? ಹೋಗ ಬೇಕೋ ಹ್ಯಾಗೆ? ಏನು ಸಿದ್ಧ ಮಾಡಿ ಕೊಂಡು ಹೋಗೋಣ? ಎಂಬ ವಿಚಾರಗಳು ಹುಟ್ಟದೆ ಹೋಗವು.

ಸತ್ಯವೇದವು ಒಂದು ದೊಡ್ಡ ಔತಣದ ವಿಷಯವಾಗಿ ನಮಗೆ ತಿಳಿಸಿ, ನಮ್ಮನ್ನು ಅದಕ್ಕೆ ಬರಬೇಕೆಂದು ಕರಿಯುತ್ತದೆ. ಕೆಳಗೆ ಬರದ ಕೆಲ ಪ್ರಶ್ನೋತ್ತರಗಳು ಓದುವವರಲ್ಲಿ ಆ ಔತಣದ ವಿಷಯ ಮಂದಟ್ಟವನ್ನು ಹುಟ್ಟಿಸಿ, ಜಾಪ್ಯವಿಲ್ಲದೆ ಆ ಔತಣಕ್ಕೆ ಹೋಗುವದಕ್ಕೆ ಉತ್ತೇಜನವನ್ನು ಕೊಡುವವು.

೧. ಆ ಔತಣವು ಎಂಥಾದ್ದು?

ಉತ್ತರ: ಒಬ್ಬ ಅರಸನು ತನ್ನ ಮಗನಿಗೆ ಮದಿವೆ ಮಾಡಿದನು. ಮತ್ತಾ. ೨೨, ೨.

೨. ಆ ಔತಣವು ಎಲ್ಲಿ ಆಗುವದು?

ಉ. ದೇವರ ರಾಜ್ಯದಲ್ಲಿ ರೊಟ್ಟಿ ತಿನ್ನುವವನು ಭಾಗ್ಯವಂತನು. ಲೂಕ. ೧೪, ೧೫.

೩. ಅದು ಯಾರ ಮೇಜಿನ ಮೇಲೆ ಆಗುವದು?

ಉ. ನೀವು ನನ್ನ ರಾಜ್ಯದಲ್ಲಿ ನನ್ನ ಮೇಜಿನ ಹತ್ತರ ಉಂಡು ಕುಡಿಯುವಿರಿ. ಲೂಕ. ೨೨, ೩೦.

೪. ಅದು ಆಗುವದು ಯಾವಾಗ?

ಉ. ಆ ದಿವಸವೂ ಘಳಿಗೆಯೂ ಯಾರಿಗೂ ತಿಳಿಯದು. ಎಚ್ಚರಿಕೆಯಾಗಿರ್ರಿ, ಯಾಕಂದರೆ ನಿಮ್ಮ ಕರ್ತನು ಬರುವ ಘಳಿಗೆ ಯಾವದೆಂದು ಅರಿಯರಿ. ಮತ್ತಾ. ೨೪, ೩೬. ೪೨.

೫. ಆ ಔತಣಕ್ಕೆ ಹೋಗುವದಕ್ಕೆ ಅದು ಅಷ್ಟು ವಿಶೇಷವೋ?

ಉ. ಕುರಿಮರಿಯ ಮದಿವೆಯ ಔತಣಕ್ಕೆ ಕರಿಯಲ್ಪಟ್ಟವರು ಭಾಗ್ಯವಂತರು. ಪ್ರಕ. ೧೯, ೯.

೬. ಆ ಔತಣಕ್ಕಾಗಿ ಅರಸನಿಗೆ ಏನು ಖರ್ಚಾಯಿತು?

ಉ. ಲಯವಾಗುವ ಬೆಳ್ಳಿಯೂ ಭಂಗಾರವೂ ಅಲ್ಲಾ, ಅಮೂಲ್ಯವಾದ ಕ್ರಿಸ್ತನ ರಕ್ತವೇ. ೧ ಪೇತ್ರ. ೧, ೧೮. ೧೯.

೭. ಆ ಔತಣಕ್ಕೆ ಎಲ್ಲರೂ ಹೋಗ ಬಹುದೋ?

ಉ. ಎಲೋ ನೀರಡಿಕೆಯುಳ್ಳವರೇ, ನೀರಿನ ಬಳಿಗೆ ಬನ್ನಿ, ಹಣವಿಲ್ಲದವನು ಸಹ; ಬಂದು, ಕೊಂಡು ಕೊಂಡು ಉಣ್ಣಿರಿ; ಹೌದು, ಬನ್ನಿ, ಹಣವಿಲ್ಲದೆ ಕ್ರಯವಿಲ್ಲದೆ ದ್ರಾಕ್ಷೆರಸವನ್ನೂ ಹಾಲನ್ನೂ ಕೊಂಡು ಕೊಳ್ಳಿರಿ. ಯೆಶಾ. ೫೫, ೧.

೮. ನನಗೆ ತೃಪ್ತಿಯಾಗುವದೋ?

ಉ. ನಿನ್ನ ಮನೆಯ ಪರಿಪೂರ್ಣತೆಯಿಂದ ತೃಪ್ತಿಯಾಗುವರು; ನಿನ್ನ ಸಂಭ್ರಮದ ನದಿಯಿಂದ ಅವರಿಗೆ ಕುಡಿಯ ಕೊಡುವಿ. ಕೀರ್ತ. ೩೬, ೮.

೯. ಅಲ್ಲಿ ನಮಗೆ ಸುಖವಾಗುವದೋ?

ಉ. ಅವರಿಗೆ ಹಶಿವೆಯಾದರೂ ದಾಹವಾದರೂ ಆಗದೆ, ಸೂರ್ಯನ ಬಿಸಿಲಾದರೂ ಯಾವ ಕಾವಾದರೂ ತಗಲದೆ ಇರುವದು. ಪ್ರಕ. ೭, ೧೬.

೧೦. ನಮಗೆ ರೋಗಾದಿಗಳು ಸಂಭವಿಸುವವೋ?

ಉ. ನಿವಾಸಿಯು, ನನಗೆ ರೋಗವಾಯಿತೆಂದು ಹೇಳುವದಿಲ್ಲಾ. ಮರಣವು ಇನ್ನು ಇರುವದಿಲ್ಲಾ; ಕಷ್ಟವು ಇನ್ನು ಇರುವದಿಲ್ಲ. ಯೆಶಾ. ೩೩, ೨೪. ಪ್ರಕ. ೨೧, ೪.

೧೧. ಅಲ್ಲಿ ಅಳುವಿಕೆ ಇರುವದೋ?

ಉ. ದೇವರು ಕಣ್ಣೀರೆಲ್ಲಾ ಅವರ ಕಣ್ಣುಗಳಿಂದ ಒರಸುವನು; ಗೋಳಾಟವೂ ಅಳುವಿಕೆಯೂ ಇನ್ನು ಇರುವದಿಲ್ಲಾ. ಪ್ರಕ. ೨೧, ೪.

೧೨. ಅಲ್ಲಿ ಸ್ವರಗಾಯನವೋ? ಸಾಹಿತ್ಯಗಾಯನವೋ?

ಉ. ಅನೇಕ ನೀರುಗಳ ಶಬ್ದದ ಹಾಗೆಯೂ ದೊಡ್ಡ ಗುಡುಗಿನ ಶಬ್ದದ ಹಾಗೆಯೂ ಶಬ್ದವನ್ನು ಕೇಳಿದೆನು; ಮತ್ತು ತಮ್ಮ ವೀಣೆಗಳನ್ನು ನುಡಿಸುವ ವೀಣೆಗಾರರ ಶಬ್ದವನ್ನು ಕೇಳಿದೆನು. ಪ್ರಕ. ೧೪, ೨.

೧೩. ಬಂದ ಅತಿಥಿಗಳ ಗುಣ ಸ್ವಭಾವ ಎಂಥಾದ್ದು?

ಉ. ಅವರ ಬಾಯಿಯಲ್ಲಿ ಮೋಸವು ಶಿಕ್ಕಲಿಲ್ಲಾ; ಹ್ಯಾಗಂದರೆ ಅವರು ದೇವರ ಸಿಂಹಾಸನದ ಮುಂದೆ ನಿಷ್ಕಳಂಕರಾಗಿದ್ಧಾರೆ. ಪ್ರಕ. ೧೪, ೫.

೧೪. ಅತಿಥಿಗಳ ವಸ್ತ್ರಭೂಷಣ ಎಂಥಾದ್ದು?

ಉ. ಅವರು ಬಿಳೀ ವಸ್ತ್ರಗಳನ್ನು ಧರಿಸಿ ಕೊಂಡು, ತಮ್ಮ ತಲೆಗಳ ಮೇಲೆ ಚಿನ್ನದ ಕಿರೀಟ ಉಂಟಾದವರಾಗಿದ್ದರು. ಅವರು ಬಿಳೀ ಅಂಗಿಗಳನ್ನು ತೊಟ್ಟು ಕೊಂಡವರಾಗಿ, ತಮ್ಮ ಕೈಗಳಲ್ಲಿ ಖರ್ಜೂರದ ಕೊಂಬೆಗಳನ್ನು ಹಿಡುಕೊಂಡಿದ್ದರು. ಪ್ರಕ. ೪, ೪. ೭, ೯.

೧೫. ಆ ಅಂಗಿಗಳು ಅವರಿಗೆ ಎಲ್ಲಿಂದ ದೊರಕಿದವು?

ಉ. ಅವರಲ್ಲಿ ಒಬ್ಬೊಬ್ಬನಿಗೆ ಬಿಳೀ ಅಂಗಿಗಳು ಕೊಡಲ್ಪಟ್ಟವು. ಪ್ರಕ. ೬, ೧೧.

೧೬. ಅರಸನು ಯಾರನ್ನು ಕರಿಯುತ್ತಾನೆ?

ಉ. ಬೇಕಾದವನು ಜೀವದ ನೀರನ್ನು ಉಚಿತವಾಗಿ ತಕ್ಕೊಳ್ಳಲಿ. ಪ್ರಕ. ೨೨, ೧೭.

೧೭. ನಾನು ಯಾರನ್ನಾದರೂ ಸಂಗಾತ ಕರಕೊಂಡು ಹೋಗ ಬಹುದೋ?

ಉ. ನೀನು ಹಾದಿಗಳಿಗೂ ಬೇಲಿಗಳಿಗೂ ಹೋಗಿ, ನನ್ನ ಮನೆ ತುಂಬುವ ಹಾಗೆ ಒಳಗೆ ಬರುವದಕ್ಕೆ ಅವರನ್ನು ಬಲವಂತ ಮಾಡು. ಲೂಕ. ೧೪, ೨೩.

೧೮. ನನಗೂ ಅಲ್ಲಿ ಜಾಗ ಶಿಕ್ಕುವದೋ?

ಉ. ನನ್ನ ತಂದೆಯ ಮನೆಯಲ್ಲಿ ಅನೇಕ ನಿವಾಸಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳಿ ಇದ್ದೆನು; ನಿಮಗೆ ಸ್ಥಳವನ್ನು ಸಿದ್ಧ ಮಾಡ ಹೋಗುತ್ತೇನೆ. ಯೋಹಾ. ೧೪, ೨.

೧೯. ನನ್ನನ್ನು ಅವನು ಅಂಗೀಕರಿಸುವದು ನಿಶ್ಚಯವೋ?

ಉ. ನನ್ನ ಬಳಿಗೆ ಬರುವವನನ್ನು ನಾನು ಹೊರಗೆ ಹಾಕುವದಿಲ್ಲಾ. ಯೋಹಾ. ೬, ೩೭.

೨೦. ನಾನು ಈಗಲೇ ಸಿದ್ಧವಾಗಿರಲೋ?

ಉ. ಮದಲಿಂಗನು ಬಂದನು, ಸಿದ್ಧವಾದವರು ಅವನ ಸಂಗಡ ಮದುವೆಗೆ ಪ್ರವೇಶಿಸಿದರು. ಆಗ ಬಾಗಲು ಮುಚ್ಚಲ್ಪಟ್ಟಿತು. ಮಿಕ್ಕಾದವರು ಬಂದು ಕರ್ತನೇ, ಕರ್ತನೇ, ನಮಗೆ ತೆರೆ, ಅಂದರು. ಅವನು ಪ್ರತ್ಯುತ್ತರವಾಗಿ ನಿಮ್ಮನ್ನು ಅರಿಯೆನು, ಅಂದನು. ಮತ್ತಾ. ೨೫, ೧೦.

೨೧. ಈಗಲೇ ನಿಶ್ಚಯ ಮಾಡುವದು ಅಗತ್ಯವೋ?

ಉ. ಇಗೋ, ಈಗಲೇ ಒಳ್ಳೇ ಸಮಯವು; ಇಗೋ, ಈಗಲೇ ರಕ್ಷಣೆಯ ದಿನವು. ೨ ಕೊರಿ. ೬, ೨.

೨೨. ಅಲ್ಲಿಗೆ ಅನೇಕರು ಬರುವರೋ?

ಉ. ನಾನು ನೋಡಲಾಗಿ ಇಗೋ, ಯಾರೂ ಎಣಿಸಲಾರದ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಕುರಿಮರಿಯ ಮುಂದೆಯೂ ನಿಂತಿತು. ಪ್ರಕ. ೭, ೯.

೨೩. ಈ ಸಮೂಹದಲ್ಲಿ ಯಾರು ಯಾರು ಇದ್ದಾರೆ?

ಉ. ದೂತರ ಸಹಸ್ರಸಹಸ್ರಗಳೂ ಚೊಚ್ಚಲವರ ಸರ್ವಸಂಘವೂ ಸಭೆಯೂ ಸಂಪೂರ್ಣ ಮಾಡಲ್ಪಟ್ಟ ನೀತಿವಂತರ ಆತ್ಮಗಳೂ. ಇಬ್ರಿ. ೧೨, ೨೨. ೨೩.

೨೪. ನಾವು ಅಲ್ಲಿ ಪರರ ಹಾಗೆ ಇರುವೆವೋ?

ಉ. ಇನ್ನು ಅನ್ಯರೂ ಪರವಾಸಿಗಳೂ ಅಲ್ಲಾ; ಪರಿಶುದ್ಧರ ಸಂಗಡ ಪಟ್ಟಣವಾಸಿಗಳೂ ದೇವರ ಮನೆತನದವರೂ ಆಗಿದ್ಧೀರಿ. ಎಫೆ. ೨, ೧೯.

ಮಂಗಳೂರು, ೨೯ನೇ ಮೇ ೧೮೭೮.

ಬಾಸೆಲ್ ಮಿಶ್ಯನ್ ಪುಸ್ತಕಶಾಲಾಕರ್ತರಿಗೆ

ಅಯ್ಯಾ,

ಈ ವರೆಗೆ ಪ್ರಕಟಿಸೋಣಾಗುತ್ತಿದ್ದ ಸಭಾಪತ್ರಗಳಲ್ಲಿ (ಸಾಧಾರಣವಾಗಿ ಅಲ್ಲವಾದರೂ) ಆಗಾಗ್ಯೆ ಮಿಶ್ಯನೆರಿಗಳು ಕನ್ನಡ ಜಿಲ್ಲೆಯಿಂದ ಹೊರಟು (ವಿಲಾಯತಿಗೆ) ಹೋದಂಥ, ಹಾಗೂ ಅಲ್ಲಿಂದ ತಿರಿಗಿ ಬಂದಂಥ ವರ್ತಮಾನವು ಪ್ರಕಟಿಸೋಣವಾಗುತ್ತಿತ್ತು; ಆದರೆ ಈ ಸಾರಿ ಹಾಗಾಗದ್ದರಿಂದ, ಕಳೆದ ಏಪ್ರಿಲ್ ತಿಂಗಳಲ್ಲಿ ವಿಲಾಯತಿಗೆ ಹೊರಟು ಹೋದವರ ವರ್ತಮಾನವನ್ನು ಕೆಳಗೆ ಬರಿಯು ಮನಸ್ಸಾಗಿದ್ಧೇನೆ.

ಈ ಸಾರಿ, ಅಂದರೆ ಕಳೆದ ಏಪ್ರಿಲ್ ತಿಂಗಳ ೨೩ನೇ ತಾರೀಕಿನಲ್ಲಿ ಕನ್ನಡ ಜಿಲ್ಲೆಯಿಂದ, ಮಂಗಳೂರ ಸಭಾಪಾಲಕರಾಗಿದ್ದ ಘನ ವಾಲ್ಸ್ ಧೊರೆಗಳೂ (ಕುಟುಂಬದೊಂದಿಗೆ), ಮುಲ್ಕಿಯಿಂದ ಘನ ಡ್ಯೆಮಲ್‍ಹೂಬರ್ ಧೊರೆಸಾನಿಯೂ, ಕೊಡಗು ಶೀಮೆಯಿಂದ ಮಡಿಕೇರಿ ಮಿಶ್ಯನ್‍ಕಾರ್ಖಾನಾ ಕರ್ತರಾದ ಮಿಲ್ಲರ್ ಧೊರೆಗಳೂ ಸಾನಿಯೂ, ಕೊಲೊಂಬೋ ಮಾರ್ಗವಾಗಿ ಶೀಮೆಗೆ ಹೋಗಮಿಕ್ಕಾಗಿ ಮಂಗಳೂರಿಂದ ಹೊರಟರು; ಇವರೊಂದಿಗೆ ಘನ ಬೆರ್ಗ್‍ಫೆಲ್ದ್ ಧೊರೆಗಳ ಮಗಳೂ, ಫ್ರೈದರರ್ ಧೊರೆಯ ಮಗನೂ ಘನ ಕೌಂಡಿಣ್ಯ ಧೊರೆಯ ಮಗನೂ, ಸ್ಟೋಕ್ಸ ಧೊರೆಯ ಮಗಳೂ ಇದ್ದರು; ಮಂಗಳೂರಿನಿಂದ ಹೋದ ಈ ಚಿಕ್ಕ ಗುಂಪಿನೊಂದಿಗೆ ಮಲಯಾಳ ಜಿಲ್ಲೆಯ ತಲಚೇರಿಯಲ್ಲಿಯ ಘನ ಮಿಲ್ಲರ್ ಧೊರೆಯೂ (ಕುಟುಂಬದೊಂದಿಗೆ) ಕೂಡಿ ಕೊಂಡರೆಂಬ ವರ್ತಮಾನ ಉಂಟು.

೧೮೭೫ನೇ ಇಸವಿ ಏಪ್ರಿಲ್ ತಿಂಗಳ ೯ನೇ ತಾರೀಕಿನಲ್ಲಿ ಘನ ಬ್ರೀಗೆಲ್ ಧೊರೆಗಳವರು ಇಲ್ಲಿಂದ ವಿಲಾಯತಿಗೆ ಹೊರಟು ಹೋದ ವರ್ತಮಾನವು ಪ್ರಕಟಿಸೋಣಾದ ಸಭಾಪತ್ರದಲ್ಲಿ ಅವರ ಉತ್ತರಾಧಿಕಾರಿಯಾಗಿ ಘನ ವಾಲ್ಸ್ ಧೊರೆಗಳು ನೇಮಕವಾದರೆಂಬ ಸೂಚನೆಯನ್ನು ಸಭಾಪತ್ರ ಚಂದಾದಾರರು ಓದಿರುವರು. ವಾಲ್ಸ್ ಧೊರೆಗಳವರು ಸಭಾಪಾಲನೋದ್ಯೋಗವನ್ನು ನೋಡುತ್ತಿರುವಲ್ಲಿ ಸಭಾಪತ್ರಕರ್ತರಾಗಿದ್ದರೆಂಬದೂ ಸ. ಪ. ಚಂದಾದಾರರಿಗೆ ಗೊತ್ತಿದ್ದೀತು. ವಿಲಾಯತಿಯಿಂದ ಸಹಾ ಅವರು ಸದರೀ ಪತ್ರದ ಕೆಲಸವನ್ನು ನಡಿಸುತ್ತಿರ ಮನಸ್ಸಾಗಿದ್ಧಾರಂತೆ. ಇವರು ಏಪ್ರಿಲ್ ತಿಂಗಳ ೨೨ನೇ ತಾರೀಕು ಉತ್ಥಾನೋತ್ಸವದ ಪ್ರಾತಃಕಾಲ ಇಲ್ಲಿ ಕಡೇ ಪ್ರಸಂಗ ಮಾಡಿ, ನಮ್ಮ ಸಭೆಗೆ ವಂದನೆ ಹೇಳಿದರು; ಸದರೀ ಪ್ರಸಂಗದಲ್ಲಿ ಬ್ರೀಗೆಲ್ ಧೊರೆಗಳ ಕಡೇ ಪ್ರಸಂಗದ ಒಂದು ಮಾತಿಗೆ ತಾಗುವಂಥಾದ್ದೊಂದು ಮಾತು ಹೇಳಿದರು; ಅದೇನಂದರೆ: ಬ್ರೀಗೆಲ್ ಧೊರೆಗಳು ವಿಲಾಯತಿಗೆ ಹೋಗುವಾಗ್ಯೆ ಅವರ ಪ್ರಸಂಗವು ವಿಶ್ವಾಸವನ್ನು ಕುರಿತಾಗಿತ್ತು; ಈ ಹೊತ್ತು ಸಹಾ ಅದೇ, ಅಂದರೆ "ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡ ಬೇಕೆಂಬದೇ." ಇವರ ಕಡೇ ಪ್ರಗಂಗವನ್ನು ವಿವರವಾಗಿ ಕೇಳ ಅಪೇಕ್ಷಿಸುವವರು ಯಾರಾದರೂ ಇದ್ದರೆ, ಅಂಥವರ ಅಪೇಕ್ಷೆಯನ್ನು ಮೇಲ್‌ಶಾಲಾ ವಿದ್ಯಾರ್ಥಿಗಳು ನಡಿಸಿ ಕೊಡಲಿಕ್ಕೆ ಸಾಕು.

ಬ್ರೀಗೆಲ್ ಧೊರೆಗಳು ಹೊರಟು ಹೋಗುವಾಗ ಹ್ಯಾಗೋ ಹಾಗೆಯೇ ವಾಲ್ಸ್ ಧೊರೆಗಳು ಹೋಗುವಾಗ ಸಹಾ ನಮ್ಮ ಸಭೆಯವರು ತಮಗೆ ಪುರ್ಸತ್ತು ಶಿಕ್ಕಿದ ಹಾಗೆ ತಮ್ಮ ಬೋಧಕನನ್ನು ಕಂಡು, ಮಾತನಾಡಿ, ಕಡೇ ವಂದನೆ ಹೇಳ ಹೋಗಿದ್ದಲ್ಲಿ ಶಾಂತಿಸಂಗೀತಸಮಾಜದವರೂ ಮೇಲ್‌ಶಾಲಾ ವಿದ್ಯಾರ್ಥಿಗಳೂ ತಮ್ಮ ಸಂಗೀತದೊಂದಿಗೆ ಅವರಲ್ಲಿಗೆ ಹೋಗಿ, ಅವರಿಂದ ಅಪ್ಪಣೆ ಕೇಳಿ ಕೊಂಡರು. ಅಷ್ಟರಲ್ಲಿ ವಾಲ್ಸ್ ಧೊರೆ ಸಹಾ ಮಿಶ್ಯನಿನ ಬೇರೆ ಬೇರೆ ಕಾರ್ಖಾನೆಗಳಿಗೆ ಹೋಗಿ, ಅಲ್ಲಿದ್ದ ಸಭೆಯವರನ್ನು ಕಂಡು, ವಂದನೆ ಹೇಳಿ, ಅಪ್ಪಣೆ ತಕ್ಕೊಂಡ ಕಡೆಗೆ ಏಪ್ರಿಲ್ ತಿಂಗಳ ೨೩ನೇ ತಾರೀಕು ಪ್ರಾತಃಕಾಲ ಶುಮಾರು ೧೦ ಘಂಟೆ ಹೊತ್ತಿಗೆ, ಹಿಂದೆ ಹೇಳಿದ ಇತರರ ಸಂಗಡ, ಮಂಗಳೂರನ್ನು ಬಿಟ್ಟು ಹೊರಟರು.

ಇವರೆಲ್ಲರೂ ಇಲ್ಲಿಂದ ಕೊಲೊಂಬೊಗೆ ಹೋಗಿ, ಅಲ್ಲಿಂದ ಆದೆನ್ ಮಾರ್ಗವಾಗಿ ಇದೇ ತಿಂಗಳ ೨೯ನೇ ತಾರೀಕಿನಲ್ಲಿ ಲಂಡನಿಗೆ ಮುಟ್ಟಿದರೆಂಬ ವರ್ತಮಾನ ಉಂಟು.

ಈ ಮೇಲೆ ಹೇಳಿದ ವರ್ತಮಾನವು ಚಂದಾದಾರರಿಗೆ ಸಭಾಪತ್ರದಿಂದ ಗೊತ್ತಾಗುವ ಮೊದಲು ತಮ್ಮೂರಿಗೆ ಹೊರಟಂಥ ಮೇಲೆ ಹೇಳಿದವರು ತಮ್ಮ ಯಾತ್ರೆಯನ್ನು ಮುಗಿಸಿರುವರು.

ಮಂಗಳೂರಿನ ಸಭಾಪಾಲನೋದ್ಯೋಗಕ್ಕೆ ಘನ ಮೆಸ್ನರ್ ಧೊರೆಳವರು ನೇಮಿಸಲ್ಪಟ್ಟಿದ್ಧಾರೆ. ಮಿಲ್ಲರ್ ಧೊರೆಯ ಬದಲಿಗೆ ಫೈಲ್ ಧೊರೆ ಮಡಿಕೇರಿಗೆ ಹೋಗಿದ್ಧಾರೆ; ಇವರ ಬದಲಿಗೆ ಕೆಲವು ತಿಂಗಳ ಹಿಂದೆ ವಿಲಾಯತಿಯಿಂದ ಆಲ್ಟೆನ್‌ಮಿಲ್ಲರ್ ಧೊರೆಯೂ, ಇತ್ಲಾಗೆ ಮೇಲ್ ಶೀಮೆಗೆ ಹೋದ ನಮ್ಮ ಪುಸ್ತಕಶಾಲೆಯಲ್ಲಿದ್ದ ಬುರ್ಕರ್ದ್ ಧೊರೆಯ ಬದಲಿಗೆ ಕ್ರಪ್ಪ್ ಧೊರೆಯೂ (ವಿಲಾಯತಿಯಿಂದ) ಬಂದಿರುತ್ತಾರೆ.

ಅಯ್ಯಾ, ಬರಿಯ ಬೇಕೆಂತ ನೆನಸಿದ್ದಕ್ಕಿಂತ ಹೆಚ್ಚು ಬರಿಯೋಣಾಯಿತು; ಆದ್ದರಿಂದ ಕ್ಷಮಿಸ ಬೇಕೆಂತ ಬೇಡಿ ಕೊಳ್ಳುವ

ಸ. ಪ. ಪಾುಕಿನ ಚಂದಾದಾರನಾದ

Sol-Fa.

ವಿವಿಧ ವರ್ತಮಾನಗಳು.

ದಕ್ಷಿಣ ಕನ್ನಡ ಜಿಲ್ಲೆಯ ಬಾಸೆಲ್ ಮಿಶ್ಯನಿನ ಉಪದೇಶಕರು ವಿದ್ಯಾವರ್ಧನೆಗಾಗಿ ವರುಷಂಪ್ರತಿ ಮಂಗಳೂರಿಗೆ ಕೂಡಿ ಬರುವದುಂಟಷ್ಟೇ. ಈ ಸಂಬಂಧದಲ್ಲಿ ಈ ವರುಷ ಉಪದೇಶಕರು "ಹೊಸ ಒಡಂಬಡಿಕೆಯಲ್ಲಿ ಪರಿಶುದ್ಧಾತ್ಮನನ್ನು ಹೊಂದುವದು ಹ್ಯಾಗದೆ?" ಎಂಬ ಪ್ರಸ್ತಾಪದ ಮೇಲೆ ಪ್ರಬಂಧವನ್ನು ಬರದು ತರ ಬೇಕೆಂತ ಅಪ್ಪಣೆಯಾಗಿದೆ. ಈ ಪ್ರಬಂಧಗಳು ಅಗೊಸ್ತು ತಿಂಗಳ ಅಂತ್ಯದಲ್ಲಿ ಮಂಗಳೂರಿಗೆ ತಲಪ ಬೇಕು. ಎಲ್ಲರೂ ಕೂಡಿ ಬರುವ ತಿಂಗಳೂ ತಾರೀಕೂ ಮುಂದೆ ತಿಳಿಸೋಣಾದೀತು.

ಮಂಗಳೂರ ಮೇಲ್ ಶಾಲೆಯಲ್ಲಿ ಅಭ್ಯಾಸ ತೀರಿಸಿದ ಇಬ್ಬರು ವಿದ್ಯಾರ್ಥಿಗಳನ್ನು ಹಸ್ತಮಸ್ತಕಪುರಸ್ಸರವಾಗಿ ಆಶೀರ್ವಾದ ಕೊಟ್ಟು ಉಪದೇಶಕೋದ್ಯೋಗಕ್ಕೆ ನೇಮಿಸಲಾಯಿತು. ಇದಕ್ಕೆ ಕೆಲ ದಿವಸಗಳ ಕೆಳಗೆ ಉಡುಪಿಯಲ್ಲಿ ಅನೇಕ ವರುಷಗಳು ಉಪಾಧ್ಯಾಯನಾಗಿದ್ದ ಒಬ್ಬನನ್ನು ಸುವಾರ್ತಿಕೋದ್ಯೋಗಕ್ಕೆ ನೇಮಿಸಲಾಯಿತು.

ಉಡುಪಿಗೆ ಹತ್ತರ ಗುಡ್ಡೆ ಎಂಬ ಗ್ರಾಮದಲ್ಲಿ ಪುನರುತ್ಥಾನದ ಆದಿತ್ಯವಾರ ದಿನ ಘನ ಒತ್ತಿ ಅಯ್ಯನವರು ಹದಿನೈದು ಮಂದಿಗೆ ಸ್ನಾನ ಕೊಟ್ಟರು.

೧೮೭೭ನೇ ವರ್ಷದ ಬಾಸೆಲ್ ಮಿಶ್ಯನಿನ ರಿಪೋರ್ಟು (ವರ್ಷಚರ್ಯೆವಹಿ) ಛಾಪಿಸಿ, ಸಿದ್ಧವಾಗಿದೆ. ಅದರಲ್ಲಿಯ ಆಯಾ ವಿಷಯಗಳು ಸಭಾಪತ್ರಪಾಠಕರ ಪ್ರಯೋಜನಾರ್ಥವಾಗಿ ಮುಂದಿನ ಅಂಕೆಯಲ್ಲಿ ಪ್ರಸ್ತಾಪಿಸಲಾದಾವು.

ನಮ್ಮ ಸಂಸ್ಥಾನದಲ್ಲಿ ಒಂದು ಕಡೆಯಲ್ಲಿ ಒಬ್ಬ ಮಿಶ್ಯನೆರಿ ಉಪದೇಶಕನಿಗಾಗಿ ಒಂದು ಮನೆ ಕಟ್ಟಿಸುತ್ತಿದ್ದರು. ಕಲ್ಲುಗಳು ಬೇಕಾದವು. ಆಗ್ಯೆ ಆ ಮಿಶ್ಯನೆರಿಯವರು ಆ ಗ್ರಾಮದವರಿಗೆ, ನಿಮ್ಮ ದೇವಸ್ಥಾನ ಕೆಡವಿ, ಅದರ ಕಲ್ಲು ಈ ಮನೆ ಕಟ್ಟುವದಕ್ಕೆ ಕೊಡುತ್ತೀರೋ? ಎಂತ ವಿಚಾರಿಸಿದಾಗ್ಯೆ ಆ ಜನರು ಒಡಂಬಟ್ಟರು. ಆ ದೇವಸ್ಥಾನದ ಕಲ್ಲುಗಳಿಂದಲೇ ಉಪದೇಶಕನ ಮನೆ ಕಟ್ಟುತ್ತಾರೆ. ಒಂದು ದಿನ ಅಲ್ಲಾ ಒಂದು ದಿನ ಇದೇ ಪ್ರಕಾರ ಹಿಂದು ದೇಶದಲ್ಲೆಲ್ಲಿಯೂ ಸಂಭವಿಸುವದೆಂಬದಕ್ಕೆ ಮೇಲೆ ಹೇಳಿದ್ದು ಗುರ್ತು ಪ್ರವಾದನೆಯೂ ಆಗಿರುತ್ತದೆ. ಅತ್ಯುತ್ತಮವೂ ಮಹಾ ಬಲವುಳ್ಳದ್ದೂ ಆಗಿರುವ ಕ್ರೈಸ್ತ ಧರ್ಮವು ಈ ದೇಶದ ಸರ್ವ ಧರ್ಮಗಳನ್ನು ಕೆಡವಿ ಅವುಗಳ ಸ್ಥಾನದಲ್ಲಿ ತಾನೇ ಪ್ರಬಲ ಪಡುವದು.

ಉತ್ತರದಲ್ಲಿ ಬರೆಲ್ಲಿ ಎಂಬಲ್ಲಿಯ ಅನಾಥ ಹುಡುಗಿಯರ ಶಾಲೆಯಲ್ಲಿ ಧರ್ಮ ಸಂಜೀವನವಾಗುವಂಥಾದ್ದಾಯಿತು. ಅನೇಕ ಹುಡುಗಿಯರು ತಮ್ಮ ಆತ್ಮರಕ್ಷಣೆಯ ವಿಷಯದಲ್ಲಿ ಬಹು ಚಿಂತೆಗೊಂಡು ಪ್ರಾರ್ಥನೆ ಮಾಡುವವರಾದರು. ಮತ್ತು ಕಡೆಗೆ ಕ್ರಿಸ್ತನ ಮುಖಾಂತರ ಅವರ ಅಂತಃಕರಣದೊಳಗೆ ಶಾಂತಿ ಪ್ರಾಪ್ತಿಯಾಯಿತು.

ಸೊಲಾಪುರ ಜಿಲ್ಲೆಯಲ್ಲಿ ವಾಂತಿಭೇದಿಯ ಉಪದ್ರವು ಬಹಳವಾಗಿ, ಹೆಚ್ಚು ಕಡಿಮೆ ಒಂದು ಸಾವಿರ ಜನರು ಅದರಿಂದ ಬಿದ್ದುಹೋದರು. ಅದೇ ಜಿಲ್ಲೆಯಲ್ಲಿ ದುಷ್ಕಾಲವು ಪರಿಹಾರವಾಗಲಿಲ್ಲಾ; ಜನರು ಒಂದು ತರದ ಕಾಡ ಧಾನ್ಯ ತಿಂದು ಕಾಲಕ್ಷೇಪ ಮಾಡುತ್ತಾರೆ. ಈ ಧಾನ್ಯ ಶರೀರಕ್ಕೆ ಪುಷ್ಟಿ ಕೊಡುವಂಥಾದ್ದಾಗಿ, ಜನರು ಅದನ್ನು ತಿಂದು ಚನ್ನಾಗಿರುತ್ತಾರಂತೆ.

ದಕ್ಷಿಣ ಮಹಾರಾಷ್ಟ್ರದಲ್ಲಿಯೂ ಧಾನ್ಯದವಸದ ಧಾರಣೆ ಇಳಿಯದೆ ಏರುತ್ತಾ ಬರುತ್ತದೆಂತ ಕೇಳುತ್ತೇವೆ.

ಮಧುರೆ ಜಿಲ್ಲೆಯಲ್ಲಿಯೂ ಪೈರು ಚಲೋದಾದೀತೆಂತ ಆಶೆ ಮಾಡಿದ್ದು ವ್ಯರ್ಥವಾಗಿ, ಬಡ ಜನರು ಧಾನ್ಯಕಾಳಿಲ್ಲದೆ ಕಾಡಿನಲ್ಲಿ ತಿರುಗಾಡುತ್ತಾ, ತೃಣ ಧಾನ್ಯ ಬಿದುರಿನ ಧಾನ್ಯ ತಿಂದು ಕಾಲಕ್ಷೇಪ ಮಾಡುವವರಾಗಿದ್ದಾರೆ. ಅಲ್ಲಿಯ ಕ್ರೈಸ್ತರು ಇವೇ ಧಾನ್ಯಗಳನ್ನು ಆದಿತ್ಯವಾರ ದೇವಾ

ಲಯಕ್ಕೆ ಕಾಣಿಕೆಯಾಗಿ ತರುತ್ತಾರೆ. ಅವರು ಇಂಥಾ ದರಿದ್ರಾವಸ್ಥೆಯೊಳಗೆ ಬಿದ್ದವರಾದರೂ, ಸತ್ಕ್ರಿಯೆಯನ್ನೂ ಧರ್ಮವನ್ನೂ ಮರತು ಹೋಗ ಬೇಡಿರೆಂಬ ವಚನವನ್ನು ಅನುಸರಿಸುವದು ಸರ್ವರೂ ಧ್ಯಾನಕ್ಕೆ ತರ ತಕ್ಕದ್ದಾಗಿದೆ.

ದಕ್ಷಿಣ ಹಿಂದುಸ್ಥಾನದ ಆಯಾ ಪ್ರಾಂತಗಳಲ್ಲಿ ಬಂದ ಅಸಂಖ್ಯ ಮಿಡಿತೆಗಳು ದೇವತಾವತಾರವೆಂದು ಮೂಢ ಜನರು ನೆನಸುತ್ತಾರಂತೆ. ಒಂದೆರಡು ಕಡೆಗಳಲ್ಲಿ ಅವು ಭೂಮಿಗಿಳಿದಾಗ ಜನರು ಬಹು ಭಕ್ತಿಯಿಂದ: "ಸ್ವಾಮಿಾ, ನಮ್ಮನ್ನು ಕರುಣೆ ಮಾಡಿರಿ!" ಎಂತ ಪ್ರಾರ್ಥನೆ ಮಾಡಿದರು. ಆ ಮಿಡಿತೆಗಳ ಮೈಯ ಮೇಲಣ ಗುರುತುಗಳು ತ್ರಿನಾಮಿಗಳು ಹಣೆಯಲ್ಲಿ ಹಾಕುವ ನಾಮದಂತಿದ್ದು, ವಿಷ್ಣುವಿನ ತ್ರಿಶೂಲಕ್ಕೆ ಹೋಲುವದರಿಂದ ಅವು ವಿಷ್ಣುವಿನ ದೂತರೆಂದು ವೈಷ್ಣವರು ನೆನಸುತ್ತಾರೆ. ಅಯ್ಯೋ, ಇಂಥಾ ಮೂಢಭಕ್ತಿ ಮೂಢ ವಿಶ್ವಾಸ ಈ ದೇಶದಿಂದ ಹೋಗುವ ಕಾಲ ಯಾವಾಗ ಬಂದೀತು!

ಗೋವೆಯಲ್ಲಿ ಒಂದು ಪ್ರಕಾರದ ಜ್ವರ ಬಹುಶಾ ಪ್ರಬಲವಾಗಿ, ಅದರಿಂದ ಕೆಲ ದೊಡ್ಡ ಉದ್ಯೋಗಸ್ಥರೂ ಹಾಂಗೂ ಅಲ್ಲಿಯ ಗವರ್ನರ್ ಜೆನರಲ್ ವಾಯಕೌಂಟ್ ಸರ್ ಜಿ. ಆ. ಡಿಸೋಜಾ ಧೊರೆಗಳೂ ಮರಣ ಪಟ್ಟರು. ಈ ಧೊರೆ ಪೊರ್ತುಗಾಲಿನಿಂದ ಬಂದು ಬಹಳ ಕಾಲವಾಗಿದ್ದಿಲ್ಲಾ.

ಅಹಮದನಗರದಲ್ಲಿ ಪಟ್ಟಣದ ಹೊರಗೆ ಒಂದು ವಿಸ್ತಾರವಾದ ಚಪ್ಪರದಲ್ಲಿ ನಾಟಕವಾಗುತ್ತಿರುವಾಗ್ಯೆ ಮಧ್ಯರಾತ್ರಿ ವೇಳೈಗೆ ಚಪ್ಪರಕ್ಕೆ ಏಕಾಏಕಿ ಬೆಂಕಿ ಹಿಡಿಯಿತು. ಒಳಗೆ ಹೇರಳ ಜನ ಕೂಡಿ ಇದ್ದರು. ಚಪ್ಪರಕ್ಕೆ ಒಂದೇ ಬಾಗಲ ಇದ್ದದರಿಂದ ಹೊರಗೆ ಹೋಗುವದಕ್ಕೆ ಪ್ರಯತ್ನ ಮಾಡುವಾಗ ಜನರಿಗೆ ಎಂಥಾ ಅವಸ್ಥೆಯಾಯಿತೆಂಬದು ಹೇಳಲಳವಲ್ಲಾ, ಮೂರು ನಿಮಿಷದೊಳಗೆ ಇಡೀ ಮಂಟಪ ಸುಟ್ಟು ಹೋಯಿತು. ಬೆಂಕಿಯೊಳಗಿಂದ ಜನರನ್ನು ಎಳದು ತೆಗದಾಗ ಹೆಚ್ಚು ಕಡಿಮೆ ೩೬ ಮಂದಿ ಹೆಣಗಳಾಗಿ ಹೋಗಿದ್ದರು. ೫೦-೬೦ ಜನರು ಕರಿದು ಹೋಗಿದ್ದರು. ಇವರಲ್ಲಿಯೂ ಕೆಲವರು ಆಸ್ಪತ್ರಿಗೆ ತಂದ ಮೇಲೆ ಜೀವ ಬಿಟ್ಟರು.

ಕೊಚ್ಚಿಯಲ್ಲಿ ಒಬ್ಬ ಗೃಹಸ್ಥನು ತನ್ನ ಮನೆಯಲ್ಲಿ ನಾಟಕ ಮಾಡಿಸಿದನು; ಆ ನಾಟಕದವರು ರುಸ್ಯರಿಗೂ ತುರ್ಕರಿಗೂ ಆದ ಯುದ್ಧವನ್ನು, ಆ ಯುದ್ಧದಲ್ಲಿ ರುಸ್ಯರು ತುರ್ಕರನ್ನು ಹ್ಯಾಗೆ ಪರಾಭವ ಮಾಡಿದರೆಂಬದನ್ನು ಉತ್ಕೃಷ್ಟ ರೀತಿಯಿಂದ ತೋರಿಸಿದರು. ಈ ನಾಟಕವು ಮಾಪಿಳ್ಳೆಯರ ಮನಸ್ಸಿಗೆ ಕೇವಲ ಒಪ್ಪದ್ದರಿಂದ, ಅವರು ಮನೆಯ ಯಜಮಾನನ ಬಳಿಗೆ ಹೋಗಿ, ಆಟವನ್ನು ನಿಲ್ಲಿಸ ಬೇಕೆಂದು ಹೇಳಲಾಗಿ, ಆತನು ಅವರ ಮಾತು ಮನಸ್ಸಿಗೆ ತರಲಿಲ್ಲಾ. ಆಗ್ಯೆ ಆ ಮಾಪಿಳ್ಳೆಯರು ನಾಟಕದವರು ಆಡುತ್ತಿದ್ದಲ್ಲಿಗೆ ಹೋಗಿ, ಅವರ ಮೇಲೆ ಕೈ ಹಾಕಿ, ಪೆಟ್ಟು ಹೊಡದು, ಪುಂಡಾಟಿಕೆ ನಡಿಸಿದರು. ಅದರಿಂದ ಈ ತಂಟೆಗಾರರ ಮೇಲೆ ನ್ಯಾಯ ಪ್ರಕಾರ ಫಿರ್ಯಾದು ಆಗಲಾಗಿ, ಮೆಜಿಸ್ಟ್ರೇಟರು ತಪ್ಪುಗಾರರಲ್ಲಿ ಇಬ್ಬರಿಗೆ ಕಠಿಣ ಕಾಮುಗಿರಿ ಕೈದು ಶಿಕ್ಷೆ ಕೊಟ್ಟರು. ಈ ಸಂಗತಿಯಿಂದಲೂ ಬೇರೆ ಬೇರೆ ಕಡೆಗಳಲ್ಲಿ ಮುಸಲ್ಮಾನರು ವಂತಿಗೆ ಮಾಡಿ ಯಥೇಷ್ಟ ಹಣವನ್ನು ಯುದ್ಧದಲ್ಲಿ ಘಾಯ ಪಟ್ಟ ತುರ್ಕ ಶಿಪಾಯರ ಸಹಾಯಾರ್ಥವಾಗಿ ಕಳುಹಿಸಿ ಕೊಟ್ಟದ್ದರಿಂದಲೂ, ಈ ದೇಶದ ಮುಸಲ್ಮಾನರಿಗೆ ತುರ್ಕಿಸ್ಥಾನದ ರಾಜ್ಯದ ವಿಷಯವಾಗಿ ಎಷ್ಟು ಅಭಿಮಾನ ಉಂಟೆಂಬದು ಕಂಡು ಬರುತ್ತದೆ.

ತುತಿಕೊರಿನ್ ಎಂಬಲ್ಲಿ ಒಬ್ಬ ಮುಸಲ್ಮಾನರವನು ದಾರಿಯ ಮೇಲೆ ಜಲ್ಲಿ ಕಲ್ಲುಗಳನ್ನು ಹೊಡದು ಕುಂದ್ರಿಸುವದಕ್ಕೆ ಸ್ವಕಲ್ಪನೆಯಿಂದಲೇ ಒಂದು ಯಂತ್ರ ಮಾಡಿದ್ದಾನೆ. ಅದರಿಂದ ಒಂದು ದಿವಸಕ್ಕೆ ಅರ್ಧ ಮೈಲು ದಾರಿ ಸಿದ್ಧವಾಗಿ ತಿಂಗಳಿಗೆ ೩,೦೦೦ ರೂಪಾಯಿ ಖರ್ಚು ಕಡಿಮೆಯಾದೀತಂತೆ.

ಮೈಸೂರ ಮಹಾರಾಜರವರಿಗೆ ಸದ್ಯಾ ವಿವಾಹವಾಗುವಂಥಾದ್ದು ಅದೆ. ಈ ಬಗ್ಯೆ ಎರಡು ಲಕ್ಷ

ರೂಪಾಯಿಗಿಂತ ಹೆಚ್ಚು ಖರ್ಚು ಮಾಡ ಬಾರದೆಂತ ನಿಷ್ಕರ್ಷೆ ಆಗಿದೆ. ಮಾಜೀ ಮಹಾರಾಜರವರ ಲಗ್ನಕ್ಕೆ ೭೨ ಲಕ್ಷ ರೂಪಾಯಿ ಖರ್ಚಾಗಿದ್ದವಂತೆ.

ಕಲ್ಕತ್ತದಲ್ಲಿ ಬಾಬು ಕೇಶವ ಚಂದ್ರ ಇವರು ತಮ್ಮ ಕನ್ಯೆಯನ್ನು ಕುಚ್‌ಬೆಹಾರಿನ ಮಹಾರಾಜರಿಗೆ ಲಗ್ನ ಮಾಡಿ ಕೊಟ್ಟದ್ದರಿಂದ ವಿಕಲ್ಪಗೊಂಡ ಬ್ರಹ್ಮಸಮಾಜದವರು ಇಂಥಾ ಅನಾಚಾರಗಳಿಗೆ ಸಮ್ಮತಿ ಕೊಡುವಂಥಾ ಸಮಾಜದಲ್ಲಿ ತಾವು ಇರತೊಲ್ಲೆವೆಂದು ಹೇಳಿ, ವಿಂಗಡವಾಗಿ, ಹೊಸದೊಂದು ಸಮಾಜವನ್ನು ಏರ್ಪಡಿಸಿ, ಅದಕ್ಕೆ ಸುಧಾರಣೀಬ್ರಹ್ಮಸಮಾಜವೆಂತ ನೂತನ ಹೆಸರಿಟ್ಟಿದ್ಧಾರೆ.

ಕಲ್ಕತ್ತದಲ್ಲಿ ಬಾಬು ಕಾಲಿಕಿಸನ್ ಎಂಬ ಒಬ್ಬ ಬಂಗಾಳಿ ಗೃಹಸ್ಥನು ತನ್ನ ಕನ್ಯೆಗೆ ಮದಿವೆ ಮಾಡಿ ಕೊಡುವಾಗ್ಯೆ ಆಸ್ಪತ್ರಿಗಳು ವಿದ್ಯಾಲಯಗಳು ಮುಂತಾದ ಪರೋಪಕಾರಿಕ ಕಾರ್ಯಗಳಿಗೆ ೫೩ ಸಾವಿರ ರೂಪಾಯಿ ಹಂಚಿ ಕೊಟ್ಟನು.

ಅರಬಸ್ಥಾನದಲ್ಲಿ ಒಂದು ಪ್ರಕಾರದ ಗಿಡವದೆ; ಅದು ಸುಮಾರು ನಾಲ್ಕಂಗುಲದಿಂದ ನಾಲ್ಕಡಿಗಳವರೆಗೆ ಬೆಳಿಯುತ್ತದೆ. ಆ ಗಿಡದ ಬೀಜ ಅರೆದು ಒಬ್ಬನಿಗೆ ಕುಡಿಸಿದರೆ, ಅವನು ಕುಣಿಯುವದಕ್ಕೂ ನಗುವದಕ್ಕೂ ಹಾರುವದಕ್ಕೂ ಇನ್ನೂ ಅನೇಕ ಪ್ರಕಾರದ ಮಂಗಚೇಷ್ಟೆಗಳನ್ನು ಮಾಡುವದಕ್ಕೂ ಪ್ರಾರಂಭಿಸುತ್ತಾನೆ. ಆ ಬೀಜಗಳ ಅಮಲು ಸುಮಾರು ಒಂದು ತಾಸು ವರೆಗೆ ಇರುತ್ತದೆ. ಮತ್ತು ಆ ಮನುಷ್ಯನಿಗೆ ತಾನು ಮಾಡಿದ ಚೇಷ್ಟೆಗಳ ನೆನಪು ಇರುವದಿಲ್ಲಾ.

ಬರುವ ಅಕ್ಟೋಬರ ತಿಂಗಳಲ್ಲಿ ೨೧ನೇ ತಾರೀಕಿನಿಂದ ೨೬ನೇ ಪರಿಯಂತರ ಲಂಡನಿನಲ್ಲಿ ಮಹಾ ಮಿಶ್ಯನೆರಿಗಳ ಮಂಡಲಿ ನೆರದು ಬರುವಂಥಾದ್ದು ಅದೆ. ಅದರಲ್ಲಿ ಪೃಥ್ವಿಯ ಮೇಲಣ ಸರ್ವ ಪ್ರದೇಶಗಳಲ್ಲಿ ಮಿಶ್ಯನ ಕಾರ್ಯವು ಎಷ್ಟು ಆಯಿತು? ಸದ್ಯಾ ಹ್ಯಾಗೆ ನಡಿಯುತ್ತದೆ? ಮುಂದೆ ಧರ್ಮಪ್ರಸಾರವು ಆಗುವ ವಿಷಯ ನಿರೀಕ್ಷೆ ಎಷ್ಟು ಅದೆ? ಇತ್ಯಾದಿ ಪ್ರಸ್ತಾಪಗಳ ವಿಚಾರ ನಡಿಯುವದು.

ಲಂಡನಿನಲ್ಲಿ ಒಬ್ಬ ವಯೋವೃದ್ಧ ಭಿಕ್ಷಕನು ತೀರಿ ಕೊಂಡನು; ಆವಾಗ್ಯೆ ಅವನ ಕಿರಕುಳ ಸಾಮಾನು ಶೋಧನೆ ಮಾಡುವಾಗ ತಲೆಗಿಂಬಿನಲ್ಲಿ ಆರು ಲಕ್ಷ ರೂಪಾಯಿ ನೋಟೂ ಮರಣಪತ್ರಿಕೆಯೂ ಶಿಕ್ಕಿದವು. ಆ ಮರಣಪತ್ರಿಕೆಯಲ್ಲಿ ಅವನು ಅಲ್ಲಿಯ ಎರಡು ಔಷಧಶಾಲೆಗಳಿಗೆ ಮೂರು ಮೂರು ಲಕ್ಷ ರೂಪಾಯಿ ಕೊಡ ಬೇಕೆಂತ ಬರದಿಟ್ಟಿದ್ದನು.

ಅಮೇರಿಕದಲ್ಲಿ ಯೂನೈಟೆಡ್ ಸ್ಟೇಟ್ಸ್ ಶೀಮೆಯಲ್ಲಿ ಪೀತರ್ಸ್‌ಬರ್ಗ ಎಂತ ಒಂದು ಪಟ್ಣವದೆ. ಅಲ್ಲಿಯ ಕಬ್ಬಿಣದ ಕಾರಖಾನೆಯಲ್ಲಿ ಬಹು ತೆಳ್ಳಗಾದ ಕಬ್ಬಿಣದ ತಗಡು ಮಾಡುತ್ತಾರೆ. ಅಂಥಾ ೨,೦೦೦ ತಗಡುಗಳನ್ನು ಒಂದರ ಮೇಲೊಂದು ಇಟ್ಟರೆ, ಒಂದು ಅಂಗುಲ ಮಾತ್ರ ದಪ್ಪವಾಗುವದು.

ಅದೇ ಯೂನೈಟೆಡ್ ಸ್ಟೇಟ್ಸ್ ಶೀಮೆಯಲ್ಲಿ ಪೋಸ್ಟ ಮಾಸ್ಟರ (ಟಪ್ಪಾಲ್ ಉದ್ಯೋಗದ) ಕೆಲಸದಲ್ಲಿ ೭೨ ಮಂದಿ ಸ್ತ್ರೀಯರಿದ್ಧಾರೆ. ಇವರು ತಮ್ಮ ಕೆಲಸ ಮಹಾ ಜಾಗ್ರತೆಯಿಂದ ಮಾಡುತ್ತಾರೆ. ಒಂದು ಸ್ಥಳದಲ್ಲಿ ಅಂಥಾ ಒಬ್ಬಾಕಿಯ ಕೈಕೆಳಗಿನಿಂದ ಸರಕಾರದ್ದೂ ಹಾಂಗೂ ಜನರದ್ದೂ ಒಟ್ಟಿಗೆ ಎಂಭತ್ತು ಲಕ್ಷ ರೂಪಾಯಿ ಹೋದವು ಬಂದವು; ಪರಂತು ಅದರಲ್ಲಿ ಒಂದು ಪೈಯಾದರೂ ಕಡಿಮೆಯಾಗಲಿಲ್ಲಾ, ಅಥವಾ ಇತ್ತಲಾಗಿನದು ಅತ್ತಲಾಗೆ ಆಗಲಿಲ್ಲಾ.

ಒಂದು ಹೊಗೆಹಡಗು ದಕ್ಷಿಣ ಮಹಾಸಾಗರದ ಕಡೆಗೆ ಹೋಗಿತ್ತು; ಆಗ್ಯೆ ಅದರ ಯಜಮಾನನೂ ಕಲಾಶಿಗಳೂ ನ್ಯೂಜೀಲಂದ್ ದ್ವೀಪದಿಂದ ಸ್ವಲ್ಪ ದೂರದಲ್ಲಿ ಮಹಾ ದೊಡ್ಡದೊಂದು ಸಮುದ್ರಸರ್ಪವನ್ನು ಕಂಡರು. ನೀರಿನ ಮೇಲೆ ದೃಷ್ಟಿಗೆ ಬಿದ್ದ ಅದರ ಶರೀರವು ಇಪ್ಪತ್ತು ಮೊಳ ಉದ್ದವಾಗಿತ್ತು ಎಂತ ಅವರು ಹೇಳುತ್ತಾರೆ.

ದಕ್ಷಿಣ ಅಮೇರಿಕದಲ್ಲಿ ವೆನೆಜುವೇಲ ಸಂ

ಸ್ಥಾನದಲ್ಲಿ ಇತ್ತಲಾಗೆ ಮಹಾ ಭೂಕಂಪವಾಗಿ, ೬೦೦ಕ್ಕಿಂತ ಹೆಚ್ಚು ಜನರು ಮೃತವಾದರು.

ದಕ್ಷಿಣ ಇತಾಲ್ಯದಲ್ಲಿ ಬ್ರಿಂಡಿಸಿ ಪಟ್ಣಕ್ಕೆ ೧೪೦ ಮೈಲು ದೂರದಲ್ಲಿ ಸಿಪುಂತುಮ್ ಎಂಬ ಪುರಾತನ ಪಟ್ಣ ಕಂಡು ಕೊಂಡರು. ಆ ಪಟ್ಣವಿದ್ದ ಜಾಗ ತಗ್ಗು ಹುದಿಲೂ ಆದದರಿಂದ ನಿವಾಸಿಗಳು ಅದನ್ನು ಬಿಟ್ಟು ಸ್ವಲ್ಪ ದೂರ ಕ್ಷೇಮಕ್ಕೆ ಹಿತವಾದ ಕಡೆಯಲ್ಲಿ ಊರು ಕಟ್ಟಿದರು. ಹೀಗೆ ಆ ಪಟ್ಣ ಉಸುಬೂ ಮಣ್ಣೂ ಮೇಲೆ ಮೇಲೆ ಬಿದ್ದು, ಹುಗಿದು ಹೋಯಿತು. ಈಗಿನ ನೆಲದಿಂದ ಇಪ್ಪತ್ತು ಅಡಿಗಳ ಕೆಳಗೆ ಅದು ಅದೆ. ಅದನ್ನು ಅಗದು ನೋಡಿ ಶೋಧನೆ ಮಾಡಬೇಕೆಂಬದಾಗಿ ಇತಾಲ್ಯ ಸರಕಾರದವರು ಅಪ್ಪಣೆ ಮಾಡಿದ್ಧಾರೆ.

ಜರ್ಮನಿ ಮಹಾರಾಜರು ರಥದಲ್ಲಿ ಕೂತು ತಿರುಗಾಡಲಿಕ್ಕೆ ಹೋದಾಗ್ಯೆ ಒಬ್ಬ ದುಷ್ಮಾನನು ಅವರನ್ನು ಗುಂಡು ಹೊಡದು ಕೊಲ್ಲಲಿಕ್ಕೆ ಪ್ರಯತ್ನ ಮಾಡಿದನು. ಈ ಸಾರಿ ಅವರಿಗೆ ತಾಗಲಿಲ್ಲಾ; ಎರಡನೇ ಸಾರಿ ಅವರು ಅದೇ ರೀತಿ ತಿರುಗಾಡಲಿಕ್ಕೆ ಹೋದಾಗ್ಯೆ ಇನ್ನೊಬ್ಬ ದುಷ್ಮಾನನು ಅವರ ಜೀವ ತೆಗಿಯುವದಕ್ಕೋಸ್ಕರ ಕೋವಿ ಹೊಡಿಯಲಾಗಿ ಬಾರು ಮಾಡಿದ ಚೆರೆಗಳು ತಾಗಿ ಸ್ವಲ್ಪ ಘಾಯವಾಯಿತು. ಎರಡು ಸರ್ತಿಯೂ ಆ ಘಾತಕರನ್ನು ತತ್‌ಕ್ಷಣವೇ ಹಿಡಿದು ವಿಚಾರಣೆ ಮಾಡಲಾಗಿ, ಅವರಿಬ್ಬರೂ ಸೋಶಲಿಸ್ಟ್ ಎಂಬ ಒಂದು ಪಕ್ಷದವರೆಂದು ತಿಳಿದು ಬಂತು. ಈ ಪಕ್ಷದವರು ಜರ್ಮನಿ ರುಸ್ಯ ದೇಶಗಳಲ್ಲಿ ಬಲಗೊಳ್ಳುತ್ತಾ ಅಮೇರಿಕದಲ್ಲಿಯೂ ನುಗ್ಗಿದ್ಧಾರೆ. ಈ ಸೋಶಲಿಷ್ಟರು ಸದ್ಧರ್ಮಕ್ಕೂ ನೀತಿಮಾರ್ಗಕ್ಕೂ ಸರಕಾರಕ್ಕೂ ಕಡು ವೈರಿಗಳಾಗಿ, ಅವುಗಳನ್ನು ತಳ್ಳುವವರು; ಅವರ ಮತ ನಾಸ್ತಿಕತ್ವ; ತಮ್ಮ ಶ್ಮಶಾನಭೂಮಿಯ ಹೆಬ್ಬಾಗಲ ಮೇಲೆ ಮುಂದಿನ ಲೋಕವಿಲ್ಲಾ, ಇನ್ನು ಮುಂದೆ ಭೇಟಿಯಾಗುವದೂ ಇಲ್ಲವೆಂದು ಬರದಿಡುವದು; ಯಾರೂ ತನ್ನ ಆಸ್ತಿ ತನ್ನದೆಂದು ಹೇಳ ಬಾರದೆಂಬ ಸೂತ್ರ ಮಾಡಿಕೊಂಡು, ಬೇಕಾದರೆ, ಬಡವರಿಗೆ ಕೊಡುವದಕ್ಕೆ ಧನವಂತರನ್ನು ಸುಲುಕೊಳ್ಳ ಬಹುದು; ಮನುಷ್ಯರೊಳಗಿರುವ ಸ್ಥಾನ ತಾರತಮ್ಯಗಳನ್ನೂ ಧೊರೆತನಗಳನ್ನೂ ಪೂರ್ಣ ಪಲ್ಲಟ ಮಾಡಿ ಅಳಿಸಿ ಬಿಡಬೇಕು, ಇದೇ ಅವರ ದುರ್ಮತ.

ರುಸ್ಯರಿಗೂ ತುರ್ಕರಿಗೂ ಆದ ಯುದ್ಧ ನಿಂತಿತು ಖರೆ, ಆದರೆ ಶಿಪಾಯರು ಆಹುತಿಯಾಗುವದು ನಿಲ್ಲಲಿಲ್ಲಾ. ಎರ್ಜೆರೂಮ್ ಪಟ್ಣವನ್ನು ತುರ್ಕರು ಬಿಟ್ಟು ಕೊಟ್ಟಂದಿನಿಂದ ಹದಿಮೂರು ಸಾವಿರ ಘಾಯ ಪಟ್ಟು ಅಸ್ವಸ್ಥವಾದ ತುರ್ಕರು ಸತ್ತು ಹೋದರು. ರುಸ್ಯರು ಅಲ್ಲಿಗೆ ಬಂದಂದಿನಿಂದ ಅದೇ ರೀತಿಯಲ್ಲಿ ೨೧ ಸಾವಿರ ಶಿಪಾಯರನ್ನು ಕಳಕೊಂಡರು.

ಯುದ್ಧದ ವಿಷಯದಲ್ಲಿ ಹೆಚ್ಚಿಗೆ ಏನಾದರೂ ಪ್ರಸ್ತಾಪಿಸೋಣ ಅವಶ್ಯವಿಲ್ಲಾ. ಕಳದ ಅಂಕೆಯಲ್ಲಿ ರಾಜಸಭೆ ನೆರದು, ಪಂಚಾಯತಿಕೆ ಮಾಡುವರೆಂತ ಹೇಳಿದ ಮೇರೆಗೆ ಬೆರ್ಲಿನ್ ಪಟ್ಣದಲ್ಲಿ ಜೂನ ತಿಂಗಳ ತಾರೀಕು ೧೩ಲ್ಲು ವಿಲಾಯತಿ ಅರಸರ ಕಡೆಯಿಂದ ಕಳುಹಿಸಿ ಕೊಂಡು ಬರುವ ಪ್ರತಿನಿಧಿಗಳ ಸಭೆ ನೆರದು ಬರುವಂಥಾದ್ದು ಅದೆ. ರುಸ್ಯರು ಸಾನ್ ಸ್ತೇಫಾನೊ ಎಂಬಲ್ಲಿ ತುರ್ಕರ ಸಂಗಡ ಮಾಡಿದ ಕೌಲಿನ ಒಂದೊಂದು ಶರ್ತವನ್ನು ಆ ಸಭೆಯು ಆಲೋಚಿಸುವದಕ್ಕೆ ರುಸ್ಯರೂ ಒಪ್ಪಿದ್ಧಾರೆ. ಪ್ರಿನ್ಸ್ ಬಿಸ್ಮರ್ಕ್ ಇವರು ಈ ಸಭೆಯ ಅಗ್ರೇಸರರಾಗಿರುವರು. ಇಂಗ್ಲಾಂಡಿನಿಂದ ಲಾರ್ಡ್ ಬೀಕನ್ಸ್‌ಫೀಲ್ಡ್, ಲಾರ್ಡ್ ಸಾಲಿಸ್‌ಬರಿ, ಲಾರ್ಡ್ ಒದೊರೆಸ್ಸೆಲ್, ರುಸ್ಯರ ಕಡೆಯಿಂದ ಕೌಂಟ್ ಶುವೆಲೊಫ್ ಮತ್ತು ಕೌಂಟ್ ಗೊರ್ಚ್ಯಾಕೊಫ್, ಓಸ್ಟ್ರಿಯರ ಕಡೆಯಿಂದ ಕೌಂಟ್ ಅಂದ್ರಾಸಿ, ತುರ್ಕರ ಕಡೆಯಿಂದ ಸಫೆತ್ ಪಾಶಾ, ಸದಿಕ್ ಪಾಶಾ, ಇವರು ಹೋಗುವರು. ಹೀಗಿರುವದರಿಂದ ಇಂಗ್ಲಾಂಡಿನಲ್ಲಿ ಯುದ್ಧಸನ್ನಾಹದ ಕೆಲಸವನ್ನು ಸಡ್ಲು ಬಿಟ್ಟಿದ್ಧಾರೆ.

Printed at the Basel Mission Press, Mangalore.

ಕ್ರೈಸ್ತ ಸಭಾ ಪತ್ರ

ಪುಸ್ತಕ ೧೧. **AUGUST 1878.** ಅಂಕೆ ೨.

ಅಡಕವು: ದೇವರ ನೀತಿ ರೀತಿ ಮಾರ್ಗಗಳು ಹ್ಯಾಗೆ?—ದುಸ್ಸಹವಾಸ—ದೇವರ ಸೇವೆ—ಬಾಸಲ್ ಮಿಶ್ಯನ ರಿಪೋರ್ಟ್: ೧೮೭೭ನೇ ವರುಷಕ್ಕೆ—ವಿವಿಧ ವರ್ತಮಾನಗಳು.

ದೇವರ ನೀತಿ ರೀತಿ ಮಾರ್ಗಗಳು ಹ್ಯಾಗೆ?

ಮುದುಕ ಕ್ರೈಸ್ತ ಸನ್ಯಾಸಿಯೊಬ್ಬನು ಒಂದಾನೊಂದು ದಿವಸ ತನ್ನ ಚಾಪೇ ಮೇಲೆ ಬಿದ್ದು ಕೊಂಡು, ಈ ಲೋಕದ ನಡಾವಳಿಯನ್ನು ಕುರಿತು ಆಲೋಚನೆ ಮಾಡುವವನಾಗಿ, ಬಹು ಯೋಚನೆ ಮಾಡಿ, ಮಾಡಿ, ಕಡೆಗೆ ಅಂದು ಕೊಂಡದೇನಂದರೆ: "ಈ ಸಂಸಾರದಲ್ಲಿ ನಾನು ಬಹಳ ದಿವಸ ಬದುಕಿದವನು. ನನ್ನ ಅನುಭವವು ಇಷ್ಟಿಷ್ಟೆಂತಲ್ಲಾ; ಆದರೆ ನಾನು ಮಾಡಿದಷ್ಟು ಅನುಭವವನ್ನೂ ದಿನಕಟ್ಟಳೆಯಾಗಿ ನಡೆಯುವಂಥಾದನ್ನೂ ವಿಚಾರಿಸಿ ನೋಡಿದರೆ, ನನಗೇನೂ ನೆಟ್ಟಗೆ ಕಾಣವಲ್ಲದು; ದೇವರ ನೀತಿ ರೀತಿ ಮಾರ್ಗಗಳು ಸರಿಯಲ್ಲವೆಂದು ಹೇಳ ಬೇಕಾಗುತ್ತದೆ. ದುಷ್ಟರು ಸುಖದಲ್ಲಿ ಬದುಕುತ್ತಾ ಮದದಾನೆಗಳಂತೆ ಸೊಕ್ಕಿ ಇರುವಾಗ್ಯೆ ನೀತಿವಂತರು ದುಃಖದಲ್ಲಿ ಮುಳುಗಿ, ಸತ್ತ ಲೆಖ್ಖದಲ್ಲಿ ಇರುವಂಥಾದೂ, ಭಕ್ತರು ಭಕ್ತಿಹೀನರ ಅಪಹಾಸ್ಯಗಳಿಗೆ ಗುರಿಯಾಗಿರುವಂಥಾದೂ, ಸಾಧು ಜನರು ಧನಮದ ವಿದ್ಯಾಮದ ಪ್ರಾಯಮದ ಎಂಬೀ ಮೊದಲಾದ ಮದಗಳಿಂದ ತುಂಬಿ ಹೋದವರ ದರ್ಪ ಬಲಾತ್ಕಾರಾದಿಗಳನ್ನು ಸೈರಿಸುವಂಥಾದೂ ನ್ಯಾಯವೋ? ಅನ್ಯಾಯವೇ ಎಂದು ಕಾಣುತ್ತದಲ್ಲಾ!" ಈ ಬಗೆಯ ಯೋಚನೆಗಳಲ್ಲಿ ಮುಳುಗಿ ಅವನು ನಿದ್ದೆ ಬಿದ್ದು, ಒಂದು ಕನಸು ಕಂಡನು; ಹ್ಯಾಗಂದರೆ: "ಮುದುಕಾ! ಎದ್ದು, ನನ್ನ ಸಂಗಡ ಬಾ! ದೇವರ ನೀತಿ ರೀತಿ ಮಾರ್ಗಗಳನ್ನು ನಿನಗೆ ತೋರಿಸುತ್ತೇನೆ" ಎಂದು ಕರೆದವನೊಬ್ಬನ ಶಬ್ದವನ್ನು ಕೇಳಿದನು. ಆ ಶಬ್ದವನ್ನು ಕೇಳಿ, ಮುದುಕನು ತೀವ್ರವಾಗಿ ಎದ್ದು, ತನ್ನ ಕೋಲನ್ನು ಹಿಡಿದು ಕೊಂಡು, ಕರೆದಾತನ ಜೊತೆಯಾಗಿ ಪ್ರಯಾಣಕ್ಕೆ ಹೊರಟನು. ಅವರಿಬ್ಬರು ಆ ಹಗಲು ಸಂಚಾರ ಮಾಡಿ, ಸಾಯಂಕಾಲದಲ್ಲಿ ತಾವು ಕಂಡ ಒಂದು ಮನೆಯನ್ನು ಶೇರಿ, ರಾತ್ರಿ ಉಳುಕೊಳ್ಳಲಿಕ್ಕೆ ಬಿಡಾರವನ್ನು ಬೇಡಿ ಕೊಂಡರು. ಮನೆಯ ಯಜಮಾನನು ಬಹು ಸಂತೋಷದಲ್ಲಿ ಅವರಿಗೆ ವಂದಿಸಿ, ಆಸನ ಕೊಟ್ಟು, ಊಟ ಉಪಚಾರಾದಿಗಳನ್ನು ಮಾಡಿಸಿ, ಬಹು ಸ್ನೇಹಭಾವದಿಂದ ಅವರ ಸಂಗಡ ಮಾತಾಡಿ, ತನ್ನ ಒಬ್ಬ ವೈರಿ ತನಗೆ ಸಮಾಧಾನವಾಗಿ, ಸ್ನೇಹಕ್ಕೆ ಒಂದು ಚಿನ್ನದ ಪಾತ್ರವನ್ನು ಕೊಟ್ಟ ಸಂಗತಿ ಮೊದಲಾದ ಸಮಾಚಾರಗಳನ್ನು ಸಹ ತಿಳಿಸಿದ ಮೇಲೆ ಮನೆಯವರೂ ಹಾದಿಗರಿಬ್ಬರೂ ಮಲಗಿ ಕೊಂಡು, ಸಾ

ಖ್ಯದ ನಿದ್ರೆ ಹೊಂದಿದರು. ಮರು ದಿವಸ ಆ ಹಾದಿಗರು ನಸಿಕ್ಕೆ ಎದ್ದು, ಹೊರಟು ಹೋಗಲಿಕ್ಕಿದ್ದಾಗ ಆ ನಾಯಕನಾದವನು ಆ ಚಿನ್ನದ ಪಾತ್ರೆಯನ್ನು ಎತ್ತಿ ಕೊಂಡು ಹೋದನು. ಆ ಮನೆಯವರ ಉಪಚಾರಕ್ಕೆ ಅವನು ಅಂಥಾ ಅಪಕಾರ ಮಾಡಿದ್ದನ್ನು ನೋಡಿ, ಮುದುಕನು ಬಹಳ ಶಿಟ್ಟು ಮಾಡಿ, ಗದರಿಸಿದ್ದಕ್ಕೆ ಅವನು—"ಸುಮ್ಮನಿರು! ಶಿಟ್ಟು ಮಾಡ ಬೇಡಾ! ದೇವರ ನೀತಿ ರೀತಿ ಮಾರ್ಗಗಳು ಹೀಗೆಯೇ" ಎಂಥೇಳಿದನು. ಅಲ್ಲಿಂದ ಅವರು ಮುಂದಕ್ಕೆ ನಡೆದು, ಸಾಯಂಕಾಲವಾದಾಗ ಒಬ್ಬ ಲೋಭಿಯ ಮನೆಗೆ ಹೋಗಿ ಬಿಡಾರವನ್ನು ಬೇಡಿ ಕೊಂಡರು; ಆದರೆ ಆ ಲೋಭಿ ಅವರನ್ನು ಶೇರಿಸಿ ಕೊಳ್ಳಲೊಲ್ಲದೆ, ಹೋಗಿ ಹೋಗಿರೆಂದು ನಾಲ್ಕು ಬೈಗಳನ್ನು ಸಹ ಹಾಕಿ, ಅಪಮಾನದಿಂದ ಕಳುಹಿಸಿದನು. ಅವರು ತಮ್ಮ ಕಾಲಿಗೆ ಹತ್ತಿ ಕೊಂಡಿದ್ದ ಧೂಳನ್ನು ಅವನೆದುರಿನಲ್ಲಿ ಝಾಡಿಸಿ ಬಿಟ್ಟು ಹೋದರು. ಆದರೆ ಹೋಗಲಿಕ್ಕಿದ್ದಾಗಲೇ ನಾಯಕನಾದವನು ಆ ಲೋಭಿಯ ಹತ್ತರ ತಿರುಗಿ ಕೊಂಡು, ಅವನ ಕೈಯಲ್ಲಿ ಎತ್ತಿ ಕೊಂಡು ಬಂದಂಥಾ ಚಿನ್ನದ ಪಾತ್ರೆಯನ್ನು ಕೊಟ್ಟು ಬಿಟ್ಟು ಬಂದನು. ಮುದುಕನು ಇದನ್ನು ನೋಡಿ, ಮಹಾ ಆಶ್ಚರ್ಯ ಪಟ್ಟು, "ನೀನು ಇಷ್ಟು ವಿಪರೀತವಾಗಿ ನಡಕೊಳ್ಳುವ ಬುದ್ಧಿ ಎಂಥಾದು?" ಎಂದು ಕೇಳಿದ್ದಕ್ಕೆ ಅವನು—"ಹಾಗೆ ಕೇಳ ಬೇಡಪ್ಪಾ! ದೇವರ ನೀತಿ ರೀತಿ ಮಾರ್ಗಗಳು ಹಾಗೆಯೇ" ಎಂದು ಉತ್ತರ ಕೊಟ್ಟನು. ಮುಂದಕ್ಕೆ ನಡದು, ಅವರು ಬಹು ಒಳ್ಳೇ ಸಜ್ಜನರ ಮನೆಗೆ ಶೇರಿದರು. ಆ ಮನೆಯವರು ಅವರಿಗೆ ಬಹಳ ಪ್ರೀತಿ ತೋರಿಸಿ ಉಪಚರಿಸಿದರು. ಆದರೆ ಆ ಮನೆಯ ಯಜಮಾನನು ಬಹು ದುಃಖದಲ್ಲಿದ್ದು, ತಾನು ಎಷ್ಟೋ ಪೇಚಾಟ ಮಾಡಿ, ಪ್ರಯತ್ನವಿಟ್ಟು ಸಂಪಾದಿಸಿ ಕೊಂಡರೂ, ತನ್ನ ಕಷ್ಟಾರ್ಜಿತವು ಜೀವನಕ್ಕೆ ಸಾಲದೆ, ಬಹಳ ಸಾಲವಾಗಿ, ತನ್ನ ಸಣ್ಣ ಮನೆಯಲ್ಲದೆ ಏನೂ ಉಳಿಯದ ಅವಸ್ಥೆಯನ್ನು ಚಿಂತಾಕ್ರಾಂತನಾಗಿ ತಿಳಿಸಿ ಅರಿಕೆ ಮಾಡಿದಲ್ಲಿ ನಾಯಕನಾದವನು ಅವನನ್ನು ಸಂತೈಸಿ, ದೇವರು ಸಹಾಯ ಮಾಡ್ಯಾನು ಎಂದು ಧೈರ್ಯ ಪಡಿಸಿದನು. ಆದರೆ ಮರು ದಿನದ ಹೊತ್ತಾರೆ ಇಬ್ಬರು ಹೊರಟು ಹೋಗುವಾಗ್ಯೆ ಅವನು ಆ ಮನೆಗೆ ಬೆಂಕಿ ಹಚ್ಚಿ ಬಿಟ್ಟನು. ಮನೆ ಸುಟ್ಟು ಹೋಯಿತು. ಅದನ್ನು ಆ ಮುದುಕನು ನೋಡಿ, ಆ ಮನೆಯವರ ಉಪಕಾರಕ್ಕೆ ಪ್ರತಿಯಾಗಿ ಅಂಥ ಅಪಕಾರವನ್ನು ಮಾಡಿದವನು ಮಹಾ ಪಾತಕಿ ಸರಿ ಎಂದು ಬಹು ಘಾಬರಿ ಹಿಡಿದು, ತನ್ನ ಸಂಗಡಿಗನನ್ನು ತೊಲಗಿ ಹೋಗ ಬೇಕೆಂದಾದನು. ಆದರೆ ಅವನು—"ಅವಸರ ಬೇಡಪ್ಪಾ! ತಡೆ! ದೇವರ ನೀತಿ ರೀತಿ ಮಾರ್ಗಗಳು ಹಾಗೆಯೇ" ಎಂಥೇಳಿದ್ದಕ್ಕೆ ಇಬ್ಬರು ತಿರಿಗಿ ಜತೆಯಾಗಿ ಮುಂದಕ್ಕೆ ನಡೆದರು. ದಾರಿಯಲ್ಲಿ ಕಂಡ ಮತ್ತೊಂದು ಮನೆಯನ್ನು ಶೇರಿದಲ್ಲಿ ಅವರಿಗೆ ಒಳ್ಳೇ ಸತ್ಕಾರವಾಯಿತು. ಆದರೂ ಆ ಮನೆಯ ಗೃಹಸ್ಥನು ಅವರ ಹತ್ತರ ಹೆಚ್ಚಿನದೇನೂ ಮಾತಾಡದೆ, ಕಳೆಗುಂದಿದವನಾಗಿ, ತನ್ನ ಒಬ್ಬನೇ ಸಣ್ಣ ಮಗನ ಸಂಗಡ ಬಹು ಮಮತೆಯಲ್ಲಿ ಮಾತಾಡಿ, ಆಡಿ, ಹೊತ್ತು ಕಳದನು. ಅವರು ತಿರಿಗಿ ಹೊರಡ ಬೇಕೆಂದು ಎದ್ದ ಸಮಯದಲ್ಲಿ ಮಾತ್ರ ಆ ಗೃಹಸ್ಥನು ಅವರ ಮುಂದೆ ಬಂದು ಅವರಿಗೆ—"ಮುಂದಿನ ದಾರಿಯನ್ನು ಕಂಡು, ತಪ್ಪದೆ ಹಿಡಿದು ಹೋಗಲಿಕ್ಕೆ ಪ್ರಯಾಸವೇ; ನಾನು ಮನೆಯನ್ನು ಬಿಟ್ಟು ದಾರಿಯನ್ನು ತೋರಿಸಿ ಕೊಡಲಿಕ್ಕೆ ಸಂದರ್ಭವಿಲ್ಲದ ಕಾರಣ ಮಗನನ್ನು ಸಂಗಡ ಕಳುಹಿಸುತ್ತೇನೆ; ಅವನು ನಿಮಗೆ ದಾರಿ ತೋರಿಸಿ, ಅವಘಡವಾದ ಜಾಗಗಳಲ್ಲಿ ನಿಮ್ಮನ್ನು ದಾಟಿಸಿ ಬರಲಿ!" ಎಂಥೇಳಿ, ಮಗನನ್ನು ಸಂಗಡ ಕಳುಹಿಸಿದನು. ಅವರು ನಡೆದು, ಒಂದು ದೊಡ್ಡ ಡೊಂಗರಕ್ಕೆ ಕಟ್ಟಿದ್ದ ಸೇತುವೆಗೆ ಮುಟ್ಟಿದರು. ಆ ಹುಡುಗನು ಇಬ್ಬರ ಮುಂದಾಗಿ ಆ ಸೇತುವೆಯನ್ನು ಹಾದು ಹೋಗಲಿಕ್ಕೆ ನಡೆದನು. ಅವನ ಬೆನ್ನಿನಲ್ಲೇ ಆ ನಾಯಕನಾದವನು ನಡೆದು ಬಂದನು. ಅವರು ಸೇತುವೆಯ ನಡುವೆಗೆ ಮುಟ್ಟಿ ಬಂದಾಗ ಆ ನಾಯಕನು ಫಕ್ಕನೆ ಹುಡುಗನನ್ನು ಹಿಡಿದು, ಡೊಂಗರದಲ್ಲಿ ನೂಕಿ

ಬಿಟ್ಟನು, ಬೀಳುವಾಗ್ಯೆ ಒಂದು ಕೂಗು ಬಿಟ್ಟು, ಮುಳಿಗಿ ಸತ್ತನು. ಈ ಕರ್ಮವನ್ನು ನೋಡಿ ಆ ಮುದುಕನು ಮಹಾ ಕೋಪಾವೇಶದಿಂದ ತನ್ನ ಸಂಗಡಿಗನ ಮೇಲೆ ಬಿದ್ದು—"ನೀನು ವೇಷ ಧರಿಸಿ ಕೊಂಡು ಬಂದ ಸಾಕ್ಷಾತ್ ಸೈತಾನನೇ ಸೈ! ತೊಲತೊಲಗು! ದೇವರ ನೀತಿ ರೀತಿ ಮಾರ್ಗಗಳು ಹಾಗೆಯೋ? ಅವು ಹಾಗಲ್ಲವೇ ಅಲ್ಲಾ! ನಿನ್ನ ಸಂಗಡ ಇನ್ನು ಒಂದು ಹೆಜ್ಜೆಯಾದರೂ ಹೋಗ ಬಾರದು!" ಎಂಥೇಳಿ, ಹಿಂದಕ್ಕೆ ಹೋಗ ತೊಡಗಲು, ಅವನ ಸಂಗಡಿಗನು ರೂಪಾಂತರವಾಗಿ, ದಿವ್ಯ ಪ್ರಕಾಶವುಳ್ಳ ದೇವದೂತನ ಹಾಗೆ ಕಾಣಿಸಿ ಕೊಂಡು, ಅವನ ಮುಂದೆ ನಿಂತು ಕೊಂಡು, ಹೇಳಿದ್ದೇನಂದರೆ: "ನೀನು ಈ ವರೆಗೆ ನೋಡಿ ಯಾತಕ್ಕೆಂತ ತಿಳಿಯಲಾರದೆ ಹೋದ ಕಾರ್ಯಗಳ ಮರ್ಮವನ್ನು ನಿನಗೆ ಈಗ ತಿಳಿಸುತ್ತೇನೆ; ಕೇಳು! ಮೊದಲನೇ ಮನೆಯಲ್ಲಿ ನಾನು ಒಂದು ಚಿನ್ನದ ಪಾತ್ರೆಯನ್ನು ಎತ್ತಿಕೊಂಡು ಬಂದೆನಲ್ಲಾ! ಅದು ಆ ಮನೆಯುವರ ಉಪಕಾರಕ್ಕೆ ಪ್ರತಿಯಾಗಿ ಅಪಕಾರವೇ ಎಂದು ನೀನು ನೆನಸಿ ಕೊಂಡಿ. ಆ ಪಾತ್ರೆಯನ್ನು ನಾನು ನಮಗೆ ಅಪಕಾರವನ್ನೇ ಮಾಡಿದ ಲೋಭಿಗೆ ಕೊಟ್ಟದ್ದಕ್ಕೆ ಆಶ್ಚರ್ಯ ಪಟ್ಟೆಯಲ್ಲಾ! ಇದರ ನ್ಯಾಯವನ್ನು ಈಗ ಹೇಳುತ್ತೇನೆ: ಆ ಪಾತ್ರೆಯಲ್ಲಿ ವಿಷವಿತ್ತು; ಆ ಗೃಹಸ್ಥನ ವೈರಿ ಅದನ್ನು ಕಪಟದಿಂದಲೇ ಕೊಟ್ಟದ್ದನು. ಆ ಗೃಹಸ್ಥನು ಅದನ್ನು ಬಳಿಸಿದ್ದಾದರೆ, ಸತ್ತು ಹೋಗುತ್ತಿದ್ದನು; ಅವನಂಥಾ ಸಜ್ಜನ ಹಾಗೆ ಸಾಯ ಬಾರದು: ಆ ಲೋಭಿಯಂಥವನು ಹಾಗೆ ಸತ್ತು ಹೋಗಲಿಕ್ಕೆ ಪಾತ್ರನಾಗಿರುವದರಿಂದ, ಆ ಪಾತ್ರೆಯನ್ನು ಅವನಿಗೆ ತಪ್ಪಿಸಿ, ಈತನಿಗೆ ಕೊಟ್ಟು ಬಿಟ್ಟೆ. ಅನ್ಯಾಯವಾಯಿತೋ? ಮೂರನೆಯವನ ಮನೆ ಸುಟ್ಟು ಹೋದದು ದೊಡ್ಡ ಪೆಟ್ಟು ಎಂದು ಕಂಡಿತು. ಆದರೆ ಆ ಬಡವನಿಗೆ ಅದೊಂದು ಪೆಟ್ಟಾಗದೆ ಮಹೋಪಕಾರವೇ ಆಯಿತು, ಯಾಕಂದರೆ ಅವನು ಸುಟ್ಟ ಮನೆಯ ಭಸ್ಮ ಕಸವನ್ನು ತೆಗೆದು ಹಾಕ ಬೇಕಾಯಿತು. ಅಗಿಯುವಾಗ ಅವನಿಗೆ ಮನೆಯ ಅಡಿಯಲ್ಲಿ ಅಡಗಿದ್ದ ಒಂದು ದ್ರವ್ಯ ಶಿಕ್ಕಿತು; ಆ ದ್ರವ್ಯದಿಂದ ಅವನು ತನಗೊಂದು ಹೊಸ ಮನೆಯನ್ನು ಕಟ್ಟಿಸಿ ಕೊಂಡದಲ್ಲದೆ ತನ್ನ ಸಾಲಗಳನ್ನು ತೀರಿಸಿ, ನಿಶ್ಚಿಂತೆಯಲ್ಲಿ ಬದುಕ ಬಹುದಾಯಿತು. ಆ ನಾಲ್ಕನೆಯುವನು ಒಂದು ಕೊಲೆಪಾತಕಕ್ಕೆ ಗುರಿಯಾದವನು. ತನ್ನ ಮಗನನ್ನು ಕಳಕೊಂಡದರಿಂದ ಅವನು ಮಾನಸಾಂತರ ಪಟ್ಟು, ದೇವರ ಕ್ಷಮಾದಯವನ್ನು ಪಡಕೊಳ್ಳಲಿಕ್ಕೆ ಅನುಕೂಲವನ್ನು ಹೊಂದಿದನು. ಮತ್ತು ಅವನ ಮಗನಿಗೂ ಬಹಳ ಉಪಕಾರವಾಯಿತು. ತಂದೆಯ ಸಹವಾಸದೋಷದಿಂದ ಅವನಿಗೆ ಬಹಳ ಕೇಡು ಒದಗಿ ಬರುತ್ತಿತ್ತು; ಆದರೆ ಚಿಕ್ಕ ಪ್ರಾಯದಲ್ಲಿ ತೀರಿ ಹೋದವನು ಆ ಕೇಡಿಗೆಲ್ಲಾ ತಪ್ಪಿಸಿ ಕೊಂಡು, ದೇವರ ಆಶ್ರಯದಲ್ಲಿ ಶೇರಿದನು." ಇಷ್ಟು ಹೇಳಿ, ತಿಳಿಸಿ, ಆ ದೂತನು ಕಾಣದೆ ಹೋದನು.

ಆ ಮುದುಕನು ನಿದ್ರೆ ತಿಳಿದು, ತನ್ನ ಕನಸಿನ ವಿಷಯದಲ್ಲಿ ಯೋಚನೆ ಮಾಡಿದಲ್ಲಿ ದೇವರ ನೀತಿ ರೀತಿ ಮಾರ್ಗಗಳು ಹ್ಯಾಗೆಂತಲೂ ಯಾತಕ್ಕೆಂತಲೂ ತತ್ಕಾಲದಲ್ಲಿ ತಿಳಿಯದೆ ಹೋದರೂ, ಅವು ಹ್ಯಾಗೂ ಒಳ್ಳೇವೂ ಸರಿಯಾದಂಥಾವೂ ಎಂದು ನಂಬಿ ಕೊಂಡು, ಆ ವಿಷಯವಾದ ಅನುಮಾನವನ್ನು ಅಂದಿನಿಂದ ಬಿಟ್ಟು ಬಿಟ್ಟನು.

"ನಾನು ಮಾಡುವಂಥಾದು ಈಗ ನಿನಗೆ ತಿಳಿಯುವದಿಲ್ಲಾ; ಆದರೆ ಇನ್ನು ಮೇಲೆ ಅದು ತಿಳಿಯುವದು." ಯೋಹಾ. ೧೩, ೭.

"ದೇವರನ್ನು ಪ್ರೀತಿ ಮಾಡುವವರಿಗೆ ಎಲ್ಲವೂ ಮೇಲಿಗೆ ಕೈಕೂಡಿ ಬರುತ್ತದೆಂದು ಬಲ್ಲೆವು." ರೋಮಾ. ೮, ೨೮.

"ಸರ್ವಶಕ್ತನೂ ಸರ್ವಕರ್ತನೂ ಆಗಿರುವ ದೇವರೇ! ನಿನ್ನ ಕ್ರಿಯೆಗಳು ದೊಡ್ಡವೂ ಆಶ್ಚರ್ಯ

ದವೂ ಆಗಿವೆ. ನಿನ್ನ ಮಾರ್ಗಗಳು ನೀತಿಯೂ ಸತ್ಯವೂ ಆಗಿವೆ. ಪವಿತ್ರರ ಈಶಾ! ಕರ್ತಾ! ನಿನಗೆ ಭಯ ಪಡದೆ, ನಿನ್ನ ಹೆಸರನ್ನು ಮಹಿಮೆ ಪಡಿಸದೆ ಇರುವವರ್ಯಾರು?" ಪ್ರಕ. ೧೫, ೩. ೪.

ದುಸ್ಸಹವಾಸ.

(೫ನೇ ಪಾನಿನಿಂದ ಮುಂದೆ.)

ಮಾರಣೆ ದಿನ ಮುಂಜಾನೆ ಸುಗಂಧಿ ತನ್ನ ಅಜ್ಜನನ್ನು ಕಂಡು, "ನೀವು ಕೊಟ್ಟ ಮುದ್ರೆ ಕಳದು ಹೋಯಿತು" ಎಂದು ಅಳುತ್ತಾ ಹೇಳಲು, "ಹೌದು, ನೀನು ನಿನ್ನೆ ದುಷ್ಟರನ್ನೊಡಗೂಡಿ ಕೊಂಡದರಿಂದ ಈ ನಷ್ಟವು ನಿನಗಾಯಿತು; ನಾನು ಮೊದಲೇ ನಿನಗೆ ಹೇಳಲಿಲ್ಲವೋ? ಇನ್ನಾದರೂ ಜಾಗ್ರತೆಯಾಗಿರು" ಎಂದು ಹೇಳಿದನು. ಆಗ ಸುಗಂಧಿಯು ತನಗಾದ ನಷ್ಟವನ್ನೂ ಅಪಮಾನವನ್ನೂ ನೆನಸಿ ಕೊಂಡು ದುಃಖ ಪಟ್ಟರೂ, ನಡದ ಸಂಗತಿಯನ್ನು ಮನೆಯಲ್ಲಿ ಯಾರಿಗೂ ತಿಳಿಸಲಿಲ್ಲ. ನೆರೆ ಗ್ರಾಮದ ಒಬ್ಬ ಹುಡುಗಿ ಬಂದು ಸುಗಂಧಿಯ ಸಹೋದರಿಯ ಕೂಡ ಆಡುತ್ತಿದ್ದಳು. ಒಂದು ದಿನ ಸುಗಂಧಿಯ ತಂಗಿ ತನ್ನ ಆಟದ ಸಾಮಾನುಗಳನ್ನೂ ಅಜ್ಜನು ಕೊಟ್ಟ ಬೆಳ್ಳೀ ಮುದ್ರೆಯನ್ನೂ ಅವಳಿಗೆ ತೋರಿಸಿದಾಗ, ಆ ಎರಡನೆಯವಳು ಅಂಥಾದೊಂದು ಬೆಳ್ಳೀ ಮುದ್ರೆ ನನಗೂ ಉಂಟೆಂದು ಹೇಳಿದ್ದನ್ನು ಸುಗಂಧಿಯ ಅಜ್ಜ ಕೇಳಿ, "ನೀನು ಅದನ್ನು ತಂದು ನನಗೆ ತೋರಿಸು" ಎಂದು ಹೇಳಿದನು. ಮಾರಣೆ ದಿನ ಆ ಹುಡುಗಿ ಅದನ್ನು ತಂದು ತೋರಿಸಿದಳು. ಅಜ್ಜನು ಅದನ್ನು ಕಂಡಾಗ, ಇದು ತಾನು ಸುಗಂಧಿಗೆ ಕೊಟ್ಟ ಬೆಳ್ಳೀ ಮುದ್ರೆ ಎಂದು ತಿಳಿದು ಕೊಂಡು, ಸುಗಂಧಿಯನ್ನೂ ಮುದ್ರೆಯನ್ನು ತಂದ ಹುಡುಗಿಯನ್ನೂ ಕರಕೊಂಡು, ಅವಳ ತಂದೆಯ ಬಳಿಗೆ ಹೋಗಿ, ಅದು ಹ್ಯಾಗೆ ಶಿಕ್ಕಿತೆಂದು ವಿಚಾರಿಸಲು, ಅವನು "ಕಳದ ವರುಷದಲ್ಲಿ ಇಲ್ಲಿಯ ಸಂತೆಗೆ ಬಂದ ಒಬ್ಬ ವ್ಯಾಪಾರಿಯ ಕೈಯಿಂದ ಅದನ್ನು ಕೊಂಡು ಕೊಂಡಿದ್ದೇನೆ. ಆ ವ್ಯಾಪಾರಿ ತನ್ನ ಸರಕನ್ನು ಕದ್ದ ಹುಡುಗನಿಂದ ಅದನ್ನು ತಕ್ಕೊಂಡಿದ್ದನು ಎಂದು ಹೇಳಿದನು." ಆಗ ಸುಗಂಧಿಯ ಅಜ್ಜನು "ಈ ಹುಡುಗ ಅದನ್ನು ಆಶಿಸಿ ಕೇಳುತ್ತಾನೆ; ಅದಕ್ಕೆ ನೀವು ಕೊಟ್ಟ ಕ್ರಯ ನಿಮಗೆ ಕೊಟ್ಟರೆ, ಕೊಡುತ್ತೀರೋ?" ಎಂದು ಕೇಳಲು, ಆ ಹುಡುಗಿಯೂ ಅವಳ ತಂದೆಯೂ ಒಪ್ಪಿ ಕೊಂಡರು. ಹಣ ಕೊಟ್ಟು ಮುದ್ರೆಯನ್ನು ಬಿಡಿಸಿ ಕೊಂಡು, ಮನೆಗೆ ಬರುವ ದಾರಿಯಲ್ಲಿ ಸುಗಂಧಿಯ ಅಜ್ಜನು—"ಅವನು ಹೇಳಿದ್ದನ್ನು ನೀನು ಕೇಳಿದಿಯಾ? ನೀನು ಅದನ್ನು ಕಳಕೊಂಡ ಪೂರ್ವೋತ್ತರ ಹ್ಯಾಗೆಂದು ಕೇಳಿದಾಗ, ಸುಗಂಧಿ ತನಗಾದ ಕಷ್ಟ ಅಪಮಾನಗಳನ್ನು ಎಲ್ಲಾ ಮಾಜದೆ ಅರಿಕೆ ಮಾಡಿದನು. ಅದೆಲ್ಲಾ ದುಷ್ಟರ ಸಂಗದಿಂದ ಬಂದ ಫಲವೆಂದು ಹೇಳುತ್ತಾ ಅಳುತ್ತಾ ಅಜ್ಜನೊಂದಿಗೆ ಮುನ್ನಡದು ಮನೆಗೆ ಬಂದನು. ಅಂದಿನಿಂದ ದುಷ್ಟ ಹುಡುಗರ ಗೊಡವೆಗೆ ಹೋಗದೆ, ಬೆಳ್ಳೀ ಮುದ್ರೆ ತಿರಿಗಿ ಶಿಕ್ಕಿದ್ದಕ್ಕೆ ಸಂತೋಷಪಟ್ಟು, ಅಜ್ಜನ ಬುದ್ಧೀ ಮಾತಿಗನುಸಾರವಾಗಿ ನಡಕೊಂಡನು.

ಕೆಲವು ದಿನಗಳಾದನಂತರ ಮೋಷಕನು ತನ್ನ ಸ್ನೇಹಿತನಾದ ಒಬ್ಬ ಹುಡುಗನೊಂದಿಗೆ ಒಂದು ತೋಟಕ್ಕೆ ಹೋಗಿ, ಒಂದು ಮರವನ್ನೇರಿ ಹಣ್ಣುಗಳನ್ನು ಕಿತ್ತು ಕೊಳ್ಳುವಾಗ, ತೋಟಗಾರನು ಕೇಳಿ, "ಯಾರಲ್ಲಿ? ಕಳ್ಳರು ಬಂದು ಮರ ಹತ್ತಿದ್ದಾರೋ?" ಎಂದು ಒದರಿ, ಓಡಿ ಬರುವಾಗ್ಯೆ ಆ ಎರಡನೇ ಹುಡುಗ ಬೇಗ ಇಳಿದು ಓಡಿ ಹೋದನು. ಮೋಷಕನು ಇಳಿಯುವಾಗ ಒಂದು ಚಿಕ್ಕ ಕೊಂಬೆಯನ್ನು ಹಿಡಿದ್ದರಿಂದ ಅದು ಮುರಿದು ಹೋಗಲು, ಕೆಳಗೆ ಬಿದ್ದು, ಕಾಲು ಮುರಿದು ಕೊಂಡನು. ತೋಟಗಾರನು ಅವನ ಗುರುತರಿತು, ಅವನ ಸುದ್ದಿಯನ್ನು ಅವನ ತಂದೆಯ ಮನೆಯಲ್ಲಿ ತಿಳಿಸಿದನು.

ಅವನ ತಂದೆ ಅವನನ್ನು ಮನೆಗೆ ತಂದು ಹಾಕಿ, ಅವನಿಗೆ ಔಷಧಗಳನ್ನು ಮಾಡಿಸಿದರೂ, ಹುಡುಗನು ಗುಣವಾಗದೆ ಬಿದ್ದಿರ ಬೇಕಾಯಿತು. ಆ ಸಮಯದಲ್ಲಿ ಅವನು ತಾನು ಆ ವರೆಗೆ ಮಾಡಿದ ಪಾಪಗಳನ್ನು ಜ್ಞಾಪಕ ಮಾಡಿ ಕೊಂಡು, ಮುರಿದ ಅಂಗ ಕೊಟ್ಟ ನೋವಲ್ಲದೆ, ಮನೋವ್ಯಥೆಯನ್ನೂ ಪಡುತ್ತಿದ್ದನು. ಅದನ್ನು ಮರೆ ಮಾಡಲಾರದೆ ಸುಗಂಧಿಯನ್ನೂ ಅವನ ಅಜ್ಜನನ್ನೂ ಕರಿಸಿ, ಆ ಕಳ್ಳತನದ ಆ ಸಂಗತಿಯನ್ನು ಅರಿಕೆ ಮಾಡಿ, ನಿರಪರಾಧಿಯಾಗಿದ್ದ ಸುಗಂಧಿಗೆ ಸುಮ್ಮನೆ ತಪ್ಪು ಹೊರಿಸಿದಕ್ಕಾಗಿ ಕಣ್ಣೀರಿಟ್ಟು, ಕ್ಷಮೆ ಬೇಡಿ ಕೊಂಡನು. ಸುಗಂಧಿಯ ಅಜ್ಜನು ಅವನಿಗೆ ದೇವರ ವಾಕ್ಯದ ವಚನಗಳನ್ನು ಹೇಳಿ, ಆದರಿಸಿ, ಶಾಂತಿ ಪಡಿಸಿದನು. ಆದರೆ ಮುರಿದ ಕಾಲು ಗುಣವಾಗದ್ದರಿಂದ, ಕುಂಟನಾಗಿಯೇ ಇದ್ದನು. ತರುವಾಯ ಅವನು ಒಳ್ಳೆಯವನೂ ದೇವಭಕ್ತನೂ ಆಗಿ, ತೀರಿಕೊಂಡನು.

ಅಂತ್ಯ ಲೇಸಾಗಿದ್ದರೆ ಎಲ್ಲಾ ಲೇಸೇ ಎಂಬ ನೀತಿಮಾತು ಉಂಟು. ಹಾಗಾದರೆ ಮನುಷ್ಯನು ಮಾರ್ಗದಲ್ಲಿರುವಾಗಲೇ ಸುಳ್ಳನ್ನು ತಳ್ಳಿ ಬಿಟ್ಟು, ಸತ್ಯವನ್ನೇ ಆಡುತ್ತಾ ಕದ್ದವನು ಇನ್ನು ಕದಿಯದೆ, ಕೈಗಳಿಂದ ಒಳ್ಳೇ ಕೆಲಸ ಮಾಡುತ್ತಾ ಅಂತಃಸಾಕ್ಷಿಯಾಗಿರುವ ಮನಸ್ಸಾಕ್ಷಿಯನ್ನು ಎದುರಿಸದೆ, ಒಳ್ಳೇದನ್ನೇ ಹಿಂಡಟ್ಟ ಬೇಕು. ಪ್ರತ್ಯೇಕವಾಗಿ ಕೆಟ್ಟದಕ್ಕೆ ಪ್ರೇರೇಪಿಸುವ ದುಷ್ಟರ ಹೆಜ್ಜೆಗಳಲ್ಲಿ ನಡಿಯಲಾಗದು, "ದುರ್ಜನಂ ದೂರ ವರ್ಜಯೇತ್" ಎಂಬ ವಚನವನ್ನು ನೆನಪಿನಲ್ಲಿಟ್ಟು ಕೊಂಡು, ಅವರು ಅಂಬನ್ನೆಸೆಯುವಾಗ ಅಡಗಿ ಕೊಳ್ಳಲೂ, ಬಲೆ ಬೀಸುವಾಗ ಸಮೀಪಿಸಲೂ ಬಾರದು. ಶಿಕ್ಕಿ ಬಿದ್ದರೆ ಕಷ್ಟವೇ ತಪ್ಪದು. ಯಾಕಂದರೆ ದುರ್ಜನರ ಆಲೋಚನೆ ಕೆಡಿಸ ಬೇಕೆಂಬುವದೇ, ಅವರ ತುಟಿಗಳು ಮಾತಾಡುವಂಥಾದು ವಂಚನೆಯೇ. ನಿನ್ನ ಯೌವನ ದಿವಸಗಳಲ್ಲಿ ನಿನ್ನ ಸೃಷ್ಟಿಕರ್ತನನ್ನು ಜ್ಞಾಪಕ ಮಾಡಿಕೋ. ಮಕ್ಕಳೇ, ನಿಮ್ಮ ಹೆತ್ತವರಿಗೆ ಕರ್ತನಲ್ಲಿ ವಿಧೇಯರಾಗಿರ್ರಿ. ನಿಮ್ಮನ್ನು ನಡಿಸುವವರನ್ನು ಅನುಸರಿಸಿರಿ. ತಂದೆಗೆ ಗೇಲಿ ಮಾಡಿ ತಾಯಿಯನ್ನು ಓಡಿಸುವವನ ಕಣ್ಣುಗಳನ್ನು ತಗ್ಗಿನ ಕಾಗೆಗಳು ಕಿತ್ತು, ಹದ್ದಿನ ಮರಿಗಳು ತಿನ್ನುವವು. ಜ್ಞಾನದ ಬುಡವು ದೇವರ ಭಯವೇ, ಇಗೋ, ಕರ್ತನ ಭಯವು ಜ್ಞಾನವೇ. ಕೇಡನ್ನು ಬಿಟ್ಟು ತೊಲಗುವದೇ ವಿವೇಕವು. ಜ್ಞಾನಿಯಾದ ಮಗನು ತಂದೆಯನ್ನು ಸಂತೋಷ ಪಡಿಸುತ್ತಾನೆ. ಮೂಢನಾದ ಮಗನು ತಾಯಿಗೆ ದುಃಖವೇ. ಜೀವವನ್ನು ಪ್ರೀತಿ ಮಾಡಿ, ಒಳ್ಳೇ ದಿವಸಗಳನ್ನು ನೋಡ ಬೇಕೆಂದಿರುವವನ್ಯಾರು? ತನ್ನ ನಾಲಿಗೆಯನ್ನು ಕೇಡಾಡದ ಹಾಗೆಯೂ, ತನ್ನ ತುಟಿಗಳನ್ನು ಮೋಸ ಮಾತಾಡದ ಹಾಗೆಯೂ ನಿಲ್ಲಿಸಿ, ಕೆಟ್ಟದರಿಂದ ತೊಲಗಿ ಹೋಗಿ, ದುರ್ಮಾರ್ಗದಿಂದ ತನ್ನ ಪಾದಗಳನ್ನು ಕಾಪಾಡುವವನೇ.

ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿ ಕೊಂಡರೂ, ತನ್ನ ಪ್ರಾಣನಷ್ಟ ಪಟ್ಟರೆ, ಅವನಿಗೆ ಪ್ರಯೋಜನವೇನು? ತನ್ನ ಪ್ರಾಣಕ್ಕೆ ಬದಲಾಗಿ ಮನುಷ್ಯನು ಕೊಡ ತಕ್ಕದ್ದೇನು?

ಸಾಕೆಂಬುವ ಮನಸ್ಸಿನ ಸಹಿತವಾದ ಭಕ್ತಿ ದೊಡ್ಡ ಲಾಭವಾಗಿದೆ. ವಿಶ್ವಾಸದಿಂದಲ್ಲದೆ, ಯಾರೂ ದೇವರನ್ನು ಮೆಚ್ಚಿಸಲಾರನು.

ಅವನಲ್ಲಿ ವಿಶ್ವಾಸವನ್ನಿಡುವವರೆಲ್ಲರು ನಾಶವಾಗದೆ, ನಿತ್ಯಜೀವವನ್ನು ಹೊಂದುವ ಬಗ್ಯೆ, ದೇವರು ತನ್ನ ಒಬ್ಬನೇ ಮಗನನ್ನು ಕೊಡುವ ಹಾಗೆ ಲೋಕವನ್ನು ಅಷ್ಟು ಪ್ರೀತಿ ಮಾಡಿದನು.

ದೇವರ ಸೇವೆ.

ನಮ್ಮ ಕೈಯಲ್ಲಿ ಯಾವದು ಅದೆಯೋ ಅದರಿಂದಲೇ ನಾವು ದೇವರ ಸೇವೆ ಮಾಡಿದರೆ, ಮಹಾ ದೊಡ್ಡ ಕಾರ್ಯಗಳು ಆಗ ಬಹುದು. ಮೋಶೆ ಮಿದಿಯಾನಿನಲ್ಲಿ ತನ್ನ ಮಾವ ಎತ್ರೋನನ ಕುರಿಗ

ಳನ್ನು ಮೇಯಿಸುತ್ತಿದ್ದನು. ದೇವರು ಅವನನ್ನು ಇಸ್ರಯೇಲ್ಯರನ್ನು ಐಗುಪ್ತದಿಂದ ಉದ್ಧರಿಸಲಿಕ್ಕೆ ಕಳುಹಿಸ ಬೇಕೆಂದಿದ್ದಾಗ ಅವನು ಒಲ್ಲದೆ ಹಿಂಜಾರಿದ್ದು ಆಶ್ಚರ್ಯವಲ್ಲಾ, ಕುರಿಗಳನ್ನು ಹೊಡ ಕೊಂಡು ಹೋಗಲಿಕ್ಕೆ ಕೈಯಲ್ಲಿದ್ದ ಒಂದು ಕೋಲಿನ ಹೊರ್ತು ಅವನ ಹತ್ತರ ಏನಿತ್ತು? ಮೇಯಿ ಸುತ್ತಿದ್ದ ಕುರಿಗಳಲ್ಲಿ ಒಂದು ಮರಿಯಾದರೂ ಅವನದಾಗಿರಲಿಲ್ಲ. ಆಗ್ಯೆ ದೇವರು ಅವನಿಗೆ ಹೇಳಿ ದನು: "ನಿನ್ನ ಕೈಯಲ್ಲಿ ಇರುವಂಥಾದ್ದು ಏನು? ಈ ಕೋಲಿನಿಂದ ನೀನು ಇಸ್ರಯೇಲನ್ನು ಉದ್ಧರಿ ಸುವಿ." ದೇವರು ಹೇಳಿದ ಹಾಗೆಯೇ ಆಯಿತು.

"ಷಂಗಾರನೇ, ನಿನ್ನ ಕೈಯಲ್ಲಿರುವಂಥಾದ್ದು ಏನು?"

"ಎತ್ತುಗಳನ್ನು ಹೊಡೆಯುವ ಮುಳ್ಳಿನ ಕೋಲು"—ದೇವರ ಸೇವೆಗೆ ಅದನ್ನು ಉಪಯೋಗಿಸ ಲಾಗಿ ಷಂಗರಕೋಲಿನಿಂದ ಫಿಲಿಷ್ಟ್ಯರ ದಳವು ಪರಾಜಯ ಪಟ್ಟಿತು.

"ದಾವೀದನೇ, ನಿನ್ನ ಕೈಯಲ್ಲಿರುವಂಥಾದ್ದು ಏನು?"

"ನನ್ನ ಕುರಿಗಳನ್ನು ಹಿಡಕೊಂಡು ಹೋಗುವ ತೋಳಗಳಿಗೆ ಎಸೆಯುವ ಕವಣೆ".—ಈ ಕವಣೆ ಯಿಂದಲೇ ದೊಡ್ಡ ಸೈನ್ಯವು ಸಹಾ ಎದುರಿಸಲಿಕ್ಕೆ ಅಂಜಿದ ಗೋಲ್ಯಾಥನನ್ನು ದಾವೀದನು ಕೊಂದನು.

"ಎಲಾ ಶಿಷ್ಯನೇ, ನಿನ್ನ ಕೈಯಲ್ಲಿರುವಂಥಾದ್ದು ಏನು?"

"ಐದು ಜವೇ ಗೋಧಿ ರೊಟ್ಟಿಗಳೂ ಎರಡು ಮೀನುಗಳೂ." "ಅವನ್ನು ನನ್ನ ಬಳಿಗೆ ತಾ; ದೇವರಿಗೆ ಕೊಡು."—ಅವುಗಳಿಂದ ಮಹಾ ಸಮೂಹಕ್ಕೆ ತೃಪ್ತಿಯಾಯಿತು.

"ವಿಧವೆಯೇ, ನಿನ್ನ ಕೈಯಲ್ಲಿರುವಂಥಾದ್ದು ಏನು?"

"ಎರಡು ಕಾಸು". ಅವನ್ನು ದೇವರಿಗೆ ಕೊಡು, ನಿನ್ನ ಐಶ್ವರ್ಯದ ಕೀರ್ತಿ ಸರ್ವ ಲೋಕದಲ್ಲಿ ಹಬ್ಬುತ್ತದೆ.

"ಆಳುವ ಹೆಣ್ಣುಮಗಳೇ, ನಿನ್ನ ಕೈಯಲ್ಲಿ ಏನದೆ?"

"ಪರಿಮಳ ತೈಲದ ಭರಣಿ."—ಅದನ್ನು ದೇವರಿಗೆ ಕೊಡು, ಅದನ್ನು ಒಡದು ರಕ್ಷಕನ ತಲೆಯ ಮೇಲೆ ಹೊಯ್ಯು; ಅದರ ಸುವಾಸನೆ ಈ ವರೆಗೂ ಸಭೆಯಲ್ಲಿ ಸುಗಂಧವಾಗಿದೆ.

"ದೊರ್ಕಳೇ, ನಿನ್ನ ಕೈಯಲ್ಲಿ ಏನದೆ?"

"ಏನಿಲ್ಲಾ, ಒಂದು ಸೂಜಿ."—ದೇವರ ಸೇವೆಗೆ ಉಪಯೋಗಿಸು; ಆ ಅಂಗಿಗಳೂ ವಸ್ತ್ರಗಳೂ ಈ ವರೆಗೂ ಹೆಚ್ಚುತ್ತಾ ವಸ್ತ್ರಹೀನರಿಗೆ ಉಡಲಿಕ್ಕೆ ಆಗುತ್ತಾ ಅವೆ.

ನೀನು ಸಾವಕಾರನಾಗಿದ್ದರೇನು, ಉದ್ದಿಮೆಯವನಾಗಿದ್ದರೇನು, ವಿದ್ಯಾರ್ಥಿಯಾಗಿದ್ದರೇನು, ಗೇಯುವವನಾಗಿದ್ದರೇನು, ಹೊಲಿಯುವಾಕೆಯಾಗಿದ್ದರೇನು, ಯಾರಾಗಿದ್ದರೇನು, ನಿನ್ನ ನಿನ್ನ ಕೆಲ ಸದಲ್ಲಿ ನೀನು ದೇವರ ಚಾಕರಿ ಮಾಡ ಬೇಕು. ನಿನಗೆ ಉದ್ದಿಮೆಯದೆ, ದೇವರ ಸೇವೆಗೆ ಉಪ ಯೋಗ ಮಾಡು; ಅದರಲ್ಲಿ ಕೆಡಕು ಒಳನುಗ್ಗದ ಹಾಗೆ ನೋಡಿಕೋ; ನ್ಯಾಯವಾದ ಸಂಬಳ ಕೊಡು; ಬಹಳ ಮಾತುಗಳಿಂದಲ್ಲಾ, ಪರಲೋಕದಲ್ಲಿರುವ ನಿನ್ನ ಯಜಮಾನನಂತೆ ಒಳ್ಳೇದನ್ನು ಮಾಡುವದರಿಂದಲೇ ನಿನ್ನ ಕೈಕೆಳಗಿರುವವರಿಗೆ ಪ್ರಸಂಗ ಮಾಡು.

ಬಾಸಲ್ ಮಿಶ್ಯನ ರಿಪೋರ್ಟ್: ೧೮೭೭ನೇ ವರುಷಕ್ಕೆ.

ಈ ವರುಷ ಮೂರ್ತಿಪೂಜಕರೊಳಗಿಂದ ಬಂದು ಸ್ನಾನ ಹೊಂದಿದವರು ೨೯೧ ಮಂದಿ, ಆದರೆ ಸಭೆಯವರ ಸಂತಾನವೃದ್ಧಿ ೧೩೩ ಮಾತ್ರವೇ; ಹಿಂದಿನ ವರುಷಗಳಲ್ಲಿ ಹೊರಗಿನವರು ಬಂದು ಶೇ ರುವದು ಬಿಟ್ಟು, ಜನನದಿಂದಲೇ ಸಭೆಯು ವೃದ್ಧಿ ಅಧಿಕವಾಗುತ್ತಿತ್ತು. ಮತ್ತು ಈ ವರುಷ ಮರಣ

ವಾದದ್ದು ೩೧೦; ಜನನವಾದದ್ದು ೨೪೮: ಇನ್ನೂ ಬಹಿಷ್ಕರಣದಿಂದ ನಷ್ಟವಾದದ್ದು ೮೭ ಆಗುವದಾಯಿತು. ಮುಖ್ಯತಾ ದುಷ್ಕಾಲ ಬಿದ್ದ ಪ್ರದೇಶಗಳಲ್ಲಿ ಜನನಕ್ಕಿಂತ ಮರಣವಾದದ್ದು ನಾಲ್ಕು ಪಾಲು ಹೆಚ್ಚಾಯಿತು. ಮುಲ್ಕಿ, ಉಡಪಿ, ಆನಂದಪುರ, ಕಣ್ಣಾನೂರು, ತಲಚೇರಿ, ಚೊಂಬಾಲ, ಕೇತೆ ಈ ಪ್ರದೇಶಗಳಲ್ಲಿ ಸಹ ಸಹಜ ಜನನಕ್ಕಿಂತ ಮರಣವಾದದ್ದು ಅಧಿಕವಾಯಿತು. ಮಂಗಳೂರು, ಮುಲ್ಕಿ, ಉಡಪಿ, ಆನಂದಪುರ, ಧಾರವಾಡ, ಹುಬ್ಬಳ್ಳಿ, ಕಲ್ಲಿಕೋಟೆ, ಪಾಲಕಾಡು ಈ ಊರುಗಳಲ್ಲಿ ಬಹಿಷ್ಕರಣ ಮಾಡ ಬೇಕಾದದ್ದು ಅಧಿಕವಾಯಿತು. ಮತ್ತು ಉಡಪಿಯಲ್ಲಿ ಎಷ್ಟೋ ಜನರು ಪುನಹಾ ಪೂರ್ವ ಮತಕ್ಕೆ ಹೋಗಿ ಬಿಟ್ಟರು. ಕೆಲ ವರುಷಗಳಿಂದ ತುಳು ಶೀಮೆಯಲ್ಲಿ ದರ ವರುಷಕ್ಕೆ ಬಹಳ ಜನರು ಸ್ನಾನ ಹೊಂದಿ, ಸಭೆಗೆ ಶೇರುತ್ತಿದ್ದರು; ಅಂಥವರು ಈ ವರುಷ ಬಹಳ ಕಡಿಮೆ; ಮುಲ್ಕಿಯಲ್ಲಿ ಆರು ಮಂದಿಗೆ ಸ್ನಾನವಾಗಿ, ಕೆಲ ಕುಟುಂಬಗಳು ಉಪದೇಶ ಹೊಂದುತ್ತಾ ಇದ್ದಾರೆ. ಉಡಪಿಯಲ್ಲಿ ಕೆಲವರು ಶೇರಿದರೂ, ಒಬ್ಬನಿಗೆ ಮಾತ್ರ ಸ್ನಾನವಾಯಿತು. ಕಾರ್ಕಳದಲ್ಲಿ ಕೆಲವರಿಗೆ ಸ್ನಾನವಾಗಿ, ಹೊಸತಾಗಿ ಒಂದು ಹಳ್ಳಿಗೆ ಪ್ರವೇಶ ದೊರಕಿಯದೆ. ತಲಚೇರಿಗೆ ಶೇರಿದ ಅಂಜರಕಂಡಿಯಲ್ಲಿ ಮಿಶ್ಯನ ಕಾರ್ಯವು ಸ್ವಲ್ಪ ಹೆಚ್ಚು ವರ್ಧನೆಯಾಗಿ, ಅಲ್ಲಿ ಒಂದು ಮನೆ ಮಾಡಿ, ಉಪದೇಶಕನನ್ನು ಇಡುವ ಹಾಗಾಯಿತು. ಕಲ್ಲಿಕೋಟೆಯಲ್ಲಿ ಬಂದವರಲ್ಲಿ ಅನೇಕರು ಆತ್ಮಲಾಭ ಅಪೇಕ್ಷಿಸುವವರಾಗಿರದೆ, ಹೋಗಿ ಬಿಟ್ಟ ಕಾರಣ ಕೆಲವರಿಗೆ ಮಾತ್ರ ಸ್ನಾನ ಕೊಡ ಬಹುದಾಯಿತು. ಕೋತಗಿರಿಯಲ್ಲಿ ಇಬ್ಬರು ಮೂರ್ತಿಪೂಜಕರೂ ಇಬ್ಬರು ಕಥೋಲಿಕರೂ ಶೇರಿದರು. ಹೀಗೆ ನೋಡಿದರೆ ಮಡಿಕೇರಿ ಕುಂದಾಪುರ ಈ ಎರಡು ಠಾಣೆಗಳ ಹೊರ್ತು, ಉಳಿದ ಎಲ್ಲಾ ಠಾಣೆಗಳಲ್ಲಿ ಕೆಲವರಾದರೂ ಸಭೆಗೆ ಶೇರಿದವರಾದರು ಎಂತ ಕಾಣುತ್ತದೆ. ಇನ್ನೂ ದಕ್ಷಿಣ ಮಹಾರಾಷ್ಟ್ರದಲ್ಲಿ ೧೧೦೪ ಮಂದಿ ಉಳಕಿ ಠಾಣ್ಯಗಳಲ್ಲಿ ೨೭೦ ಮಂದಿ ಉಪದೇಶಾರ್ಥವಾಗಿಯೂ ಪರೀಕ್ಷಾರ್ಥವಾಗಿಯೂ ಉಳದಿರುತ್ತಾರೆ.

ದಕ್ಷಿಣ ಮಹಾರಾಷ್ಟ್ರ, ದಕ್ಷಿಣ ಕನ್ನಡ, ಮಲಯಾಳ, ನೀಲಗಿರಿ, ಕೊಡಗು ಈ ಶೀಮೆಗಳಲ್ಲಿ ಮಿಶ್ಯನಿಗೆ ಇಪ್ಪತ್ತು ಮುಖ್ಯ ಠಾಣ್ಯಗಳು ಅವೆ. ಕ್ರೈಸ್ತರು ವಾಸ ಮಾಡುವ ಗ್ರಾಮಗಳು ೮೪, ಇವುಗಳಲ್ಲಿ ೬೦೩೭ ಕ್ರೈಸ್ತರು ಇದ್ದಾರೆ. ಗುಳೇದಗುಡ್ಡ, ಬೆಟ್ಟಿಗೇರಿ, ಮುಷ್ಟಿಗೇರಿ, ಕಟ್ಟನಳ್ಳಿ, ಶಾಗೋಟಿ ಈ ಊರುಗಳಲ್ಲಿ ಹೊಸ ದೇವಾಲಯಗಳು ಕಟ್ಟೋಣಾಗುತ್ತವೆ. ಎಲ್ಲಾ ಸಭೆಗಳವರಿಗೂ ದುಷ್ಕಾಲದಲ್ಲಿ ತಮ್ಮ ಕುಟುಂಬ ಸಂರಕ್ಷಣೆ ಮಾಡುವದು ಮಹಾ ಪ್ರಯಾಸವಾಯಿತು. ಸಮುದ್ರ ತೀರದ ಪ್ರದೇಶಗಳಲ್ಲಿರುವವರಿಗಾದರೂ ಕ್ಷಾಮದ ಪೆಟ್ಟು ತಾಗುವಂಥಾದ್ದಾದ್ದರಿಂದ, ಸಹಾಯಾರ್ಥವಾಗಿ ಜರ್ಮನಿಯಿಂದ ಬಂದ ಹಣದಿಂದಲೂ ಹಾಂಗೂ ಮದ್ರಾಸಿನಿಂದ ಬಂದ ಹಣದಿಂದಲೂ ಸ್ವಲ್ಪವಾಗಿ ಸಹಾಯ ಮಾಡುವದು ಅವಶ್ಯವಾಯಿತು. ವಾಂತಿಭೇದಿಯಿಂದ, ಶಿಡುಬಿನಿಂದ, ಜ್ವರದಿಂದ ಬಹುತೇಕ ಮಂದಿ ಬಿದ್ದು ಹೋದರು. ಒಂದು ಸಭೆಯವರು ವಾಂತಿಭೇದಿ ಉಂಟಾದವರಿಗೆ ಏನೂ ಅಂಜದೆ, ಅನ್ನಪಾನ ನಡಿಸುವದಕ್ಕೆ ಹೋಗುವವರಾದ್ದರಿಂದ ಅನ್ಯ ಜನರು ಸಹ ಸಭೆಯನ್ನು ಶೇರುವದಕ್ಕೆ ಮನಸ್ಸು ಮಾಡುವವರಾದರು.

ದುಷ್ಕಾಲ ಬಿದ್ದ ಪ್ರದೇಶಗಳಲ್ಲಿ ಮಿಶ್ಯನ ಕೆಲಸವು ವರ್ಧನೆಯಾದ್ದರ ಪ್ರಸ್ತಾಪವು ರಿಪೋರ್ಟಿನಲ್ಲಿ ಬಹು ವಿವರವಾಗಿ ಅದೆ. ದುಷ್ಕಾಲದ ಕುರುಹುಗಳು ಕಂಡು ಬರುವಾಗಲೇ ಅದರಲ್ಲಿ ನಿಭಾಯಿಸುವದಕ್ಕೆ ಮಿಶ್ಯನಿನವರು ಸನ್ನಾಹ ಮಾಡಲಾರಂಭಿಸಿದರು. ೧೮೭೬ನೇ ಇಸವಿಯ ಅಂತ್ಯದಲ್ಲೆ ೨೦೦ ಹುಡುಗರನ್ನು ತೆಗದು ಕೊಳ್ಳುವದಕ್ಕೂ, ಸಭೆಯವರಿಗೆ ಜೀವನೋಪಾಯವಾಗುವಂತೆ ತಕ್ಕ ಉದ್ದಿಮೆಗಳು ಇರುವದಕ್ಕೂ ಆಲೋಚನೆ ಮಾಡಲಾಯಿತು. ಮತ್ತು ಅಕ್ಕಿ ತಳಧಾರಣೆಯಲ್ಲಿಯೇ ಜನರಿಗೆ ಒದಗಿಸಿ ಕೊಡಲಾಯಿತು. ಅಲ್ಲಿಯ ಮಿಶ್ಯನೆರಿಗಳಿಗೂ ಸಹಾ

ಯಾರ್ಥಕ ಕೆಲಸಗಳ ಮೇಲ್ವಿಚಾರಣೆ ಮಾಡೋಣ, ಅನಾಥ ಹುಡುಗರನ್ನು ಸಾಲೆಗಳಲ್ಲಿ ಶೇರಿಸಿ ಕೊಳ್ಳೋಣ, ಧರ್ಮ ಹಂಚೋಣ ಇವೇ ಮುಖ್ಯ ಜಂಬರಗಳಾಗಿದ್ದವು. ದುರ್ಭಿಕ್ಷಕಾಲದಲ್ಲಿ ಅನೇಕ ವರ್ಷಗಳಿಂದ ಶುಭ ವರ್ತಮಾನ ತಿಳಿದವರಾದಾಗ್ಯೂ, ಸ್ವಧರ್ಮ ಬಿಡಲೊಲ್ಲದವರು ಬಂದು ಸಭೆಗೆ ಶೇರುವವರಾದರು. ಬಹುತೇಕ ಜನರು ಜೀವನಕ್ಕೇನೂ ಮಾರ್ಗ ಕಾಣದೆ, ಮೊದಲು ಎಂದೂ ಕೂಲಿ ಕೆಲಸ ಮಾಡದವರಾದಾಗ್ಯೂ ಒಪ್ಪಿ ಮಾಡಿದರು. ಬರಗಾಲ ಹೆಚ್ಚುತ್ತಾ ಬರುವಾಗ ಸಾವಿರಾರು ಜನರು ಬಂಗಲೆಗೆ ಬಂದು, ಭಿಕ್ಷೆ ಶಿಕ್ಕಿದ್ದು ಸಾಕೆಂದೆಣಿಸದೆ, ತಮ್ಮನ್ನು ಸಹಾಯಾರ್ಥಕ ಕೆಲಸಗಳಲ್ಲಿ ಶೇರಿಸಿ ಕೊಳ್ಳ ಬೇಕು, ನಾವು ಕ್ರೈಸ್ತರಾಗುತ್ತೇವೆ, ನಮ್ಮ ಮೂರ್ತಿಗಳು ಈ ಕಷ್ಟಕಾಲದಲ್ಲಿ ನಮಗೇನೂ ಕೊಡುವದಿಲ್ಲಾ ಎಂದು ಬಹು ತರವಾಗಿ ಬೇಡಿ ಕೊಳ್ಳುವಾಗ ಯಾರ ಮನಸ್ಸು ತಡಿಯುವದು? ಎಲ್ಲರನ್ನು ಶೇರಿಸಿ ಕೊಳ್ಳುವದು ಆಗದಿದ್ದರೂ, ನಾವು ಕ್ರೈಸ್ತರಾಗುತ್ತೇವೆಂತ ಮನಃಪೂರ್ವಕವಾಗಿ ಹೇಳುವವರನ್ನಾದರೂ ಶೇರಿಸಿ ಕೊಳ್ಳುವದು ಅವಶ್ಯ ಬಿತ್ತು. ಹೀಗೆ ಶೇರಿಸಿ ಕೊಂಡವರನ್ನು ಮಿಶ್ಯನೆರಿಗಳು ಬೇರೆ ಬೇರೆ ಕೆಲಸಗಳಲ್ಲಿಟ್ಟು, ಕೆಲಸ ಮಾಡಿಸಿ, ಅವರಿಗೆ ಅನ್ನಾಹಾರ ನಡಿಸಿದರು. ಕೆರೆಗಳು, ಭಾವಿಗಳು, ಮನೆಗಳು, ದೇವಾಲಯಗಳು, ಗೋಡೆಗಳು ಈ ಬಡ ಜನರ ಕೆಲಸದ ಗುರುತುಗಳಾಗಿ ಉಳಿದವೆ. ರೋಗಿಗಳು, ಮುದುಕರು ಮುಂತಾದವರಿಗೆ ಭಿಕ್ಷೆ ಕೊಟ್ಟು ಪರಾಂಬರಿಸ ಬೇಕಾಯಿತು. ರೋಗಾದಿಗಳು ಸಹ ಪ್ರಬಲಗೊಂಡು, ಗುಳೇದಗುಡ್ಡ, ಬೆಟ್ಟಗೇರಿ, ಹುಬ್ಬಳ್ಳಿಯಲ್ಲಿ ಹೆಚ್ಚು ಕಡಿಮೆ ೧೬೦ ಜನರು ತೀರಿ ಕೊಂಡರು. ಅನೇಕರು ಸಾಯುವ ಮೊದಲು ತಮಗೆ ಸ್ನಾನ ಕೊಡ ಬೇಕೆಂದು ಅಪೇಕ್ಷಿಸಿದರು. ಈ ಅಪೇಕ್ಷೆ ಮನಃಪೂರ್ವಕವಾಗಿದ್ದಲ್ಲಿ, ಅನುಕೂಲಿಸಲಾಯಿತು. ಸಹಾಯಾರ್ಥಕವಾಗಿ ಬರುವವರು ದಿವಸ ದಿವಸಕ್ಕೆ ಹೆಚ್ಚುತ್ತಾ, ಕಡೆಗೆ ಗುಳೇದಗುಡ್ಡದಲ್ಲಿ ೨೦೦, ಬೆಟ್ಟಗೇರಿಯಲ್ಲಿ ೫೦೦, ಹುಬ್ಬಳ್ಳಿಯಲ್ಲಿ ೪೦೦, ಧಾರವಾಡದಲ್ಲಿ ೫೦ ಜನರು ಸಹಾಯಾರ್ಥಕ ಕೆಲಸಗಳಲ್ಲಿದ್ದರು. ಹೀಗಿರುತ್ತಾ ದುಷ್ಕಾಲ ತೀರುವ ಮೊದಲು ಕೈಯಲ್ಲಿದ್ದ ಹಣವೆಲ್ಲಾ ಮುಗಿದು ಹೋಗುವದೇನೋ ಎಂಬ ಭಯದಿಂದ ಖರ್ಚು ಕಡಿಮೆ ಮಾಡುವ ಬಗ್ಗೆ ಒಂದೆರಡು ಠಾಣ್ಯಾಗಳವರು ಜನರಲ್ಲಿ ಕೆಲವರನ್ನು ಹಿಂದೆ ಕಳುಹಿಸಿ ಬಿಟ್ಟರು. ಬೇರೆ ಠಾಣ್ಯಾಗಳವರು ಹಾಗೆ ಮಾಡ ಮನಸ್ಸಿಲ್ಲದೆ, ಹೊಸಬರನ್ನು ಶೇರಿಸಿ ಕೊಳ್ಳುವದನ್ನು ನಿಲ್ಲಿಸಿದರು. ಇದು ಸಹ ಕೆಲವು ಸರ್ತಿ ಬಹು ಪ್ರಯಾಸವಾಗಿ ತೋರಿತು. ಆದರೂ ಮಿಶ್ಯನೆರಿಗಳು ಎಷ್ಟು ಮಂದಿಯನ್ನು ಇಟ್ಟು ಕೊಂಡರೋ, ಅಷ್ಟು ಮಂದಿಯ ಖರ್ಚು ನಡಿಸುವದಕ್ಕೆ ಹಣ ಸಾಕಾಯಿತು. ದುಷ್ಕಾಲದ ಬಾಧೆ ತಕ್ಕ ಮಟ್ಟಿಗೆ ಪರಿಹಾರವಾಗಿ, ಜನರನ್ನು ಅವರವರ ಊರುಗಳಿಗೆ ಕಳುಹಿಸ ಬೇಕಾದಾಗ, ಇನ್ನು ಮುಂದಿನ ಪ್ರಯೋಜನಕ್ಕಾಗಿ ಒಂದಿಷ್ಟು ಹಣ ಮಿಕ್ಕಿತು.

ಜನರನ್ನು ಸಹಾಯಾರ್ಥಕ ಕೆಲಸಗಳಲ್ಲಿ ಶೇರಿಸಿ ಕೊಳ್ಳುವಾಗ, ಮಕ್ಕಳನ್ನು ಅನಾಥಶಾಲೆಗಳಲ್ಲಿ ಕೂಡಿಸಿ ಕೊಳ್ಳೋಣವಾಯಿತು. ಆರಂಭದಲ್ಲಿ ತಾಯಿ ತಂದೆಗಳು ಮಕ್ಕಳನ್ನು ಕೊಡಲಿಕ್ಕೆ ಒಂದಿಷ್ಟಾದರೂ ಮನಸ್ಸು ಮಾಡಲಿಲ್ಲಾ. ಬರ ಬರುತ್ತಾ ಮಿಶ್ಯನಿನಲ್ಲಿ ಮಕ್ಕಳಿಗೆ ಚಲೋ ಆರೈಕೆ ಮಾಡುತ್ತಾರೆಂಬದು ಸುದ್ದಿಯಾದಾಗಲೇ ಬಹುತೇಕ ಜನರು ಮಕ್ಕಳನ್ನು ತಂದು ಕೊಟ್ಟರು. ಯಾವ ಪಕ್ಷದಲ್ಲಿಯೂ ಮಕ್ಕಳನ್ನು ಬೆಲೆ ಕೊಟ್ಟು ಕೊಳ್ಳೋಣವಾಗಲಿಲ್ಲಾ. ಕೆಲವು ಜನ ಕದ್ದು ತಂದು ಕೊಟ್ಟ ಮಕ್ಕಳನ್ನು ಬಾಧ್ಯಸ್ಥರು ಬಂದು ಕೇಳಿದಾಗ, ಬಿಟ್ಟು ಕೊಡ ಬೇಕಾಯಿತು. ಸ್ವೀಕರಿಸಿ ಕೊಂಡ ಮಕ್ಕಳು ಅನೇಕ ದಿವಸಗಳು ಅನ್ನಾಹಾರವಿಲ್ಲದೆ, ಕಂಡದ್ದೆಲ್ಲಾ ತಿಂದು, ಪ್ರಕೃತಿ ಕೆಡಿಸಿ ಕೊಂಡವರಾಗಿದ್ದ ಕಾರಣ ಅನೇಕವು ತೀರಿ ಹೋದವು. ಬಹು ಸೂಕ್ಷ್ಮವಾದ ಅನುಪಾನ ನಡಿಸೋಣದರಿಂದಲೂ ಏನೂ ಪುರುಷಾರ್ಥವಾಗಲಿಲ್ಲಾ. ಹುಬ್ಬಳ್ಳಿಯಲ್ಲಿಯೂ ಬೆಟ್ಟಗೇರಿಯಲ್ಲಿಯೂ ಇದ್ದ ಅನಾಥಶಾಲೆಗಳಲ್ಲಿ

೭೬ ಹುಡುಗರೂ, ೫೦ ಹುಡುಗಿಯರೂ, ಗುಳೇದಗುಡ್ಡದಲ್ಲಿ ಧಾರವಾಡದಲ್ಲಿ ಹೊಸತಾಗಿ ಇಟ್ಟ ಶಾಲೆಗಳಲ್ಲಿ ೭೫ ಹುಡುಗರೂ, ೫೦ ಹುಡುಗಿಯರೂ ಇದ್ಧಾರೆ. ಮಿಶ್ಯನಿನ ಆಶ್ರಯ ಹೊಕ್ಕವರಿಗೆಲ್ಲಾ ಕ್ರಮವಾಗಿ ದೇವರ ವಾಕ್ಯದ ಬೋಧನೆ ಕೊಡೋಣಾಗುತ್ತದೆ; ತಕ್ಕಷ್ಟು ಮಂದಿ ದೇವರ ವಾಕ್ಯದ ಜ್ಞಾನ ಹೆಚ್ಚು ಕಡಿಮೆಯಾಗಿ ಮಾಡಿ ಕೊಂಡಿದ್ಧಾರೆ. ಯೋಗ್ಯವೆಂದು ಕಾಣಲ್ಪಟ್ಟವರಿಗೆ ಸ್ನಾನ ಕೊಡೋಣವಾಯಿತು. ಮತ್ತು ಅನೇಕರು ತಮಗೂ ಸ್ನಾನವಾಗ ಬೇಕೆಂದು ಅಪೇಕ್ಷೆ ಮಾಡುತ್ತಾರೆ. ಕೆಲವರಲ್ಲಿ ಲೌಕೀಕ ಆಶೆಯೇ ದೊಡ್ಡದಾಗಿ ಕಾಣುತ್ತದೆ; ಮತ್ತು ಕೆಲವರು ಬೇರೆ ಜೀವನೋಪಾಯ ಶಿಕ್ಕಿದಾಗಲೇ ತಮ್ಮ ಇಷ್ಟೆಯಿಂದಲೇ ಹೋಗಿ ಬಿಟ್ಟರು. ಇನ್ನು ಕೆಲವರಿಗೆ ಸಹಾಯಾಂಶ ಕೊಡುವದು ನಿಲ್ಲಿಸಿದರೆ, ನಿಂತಾರೋ ಹೋಗಿ ಬಿಟ್ಟಾರೋ ಎಂಬದು ಗೊತ್ತಾಗುವ ವರೆಗೆ ಸ್ನಾನ ಕೊಡದೆ ಉಳಿಸ ಬೇಕಾಯಿತು. ಆದರೂ ಒಟ್ಟಾರೆ ನೋಡಿದರೆ, ಜಾಗ್ರತೆಯಾಗಿ ಉಪದೇಶ ಮಾಡುವದರಿಂದಲೂ ಸನ್ಮಾರ್ಗದಲ್ಲಿ ನಡಿಸುವದರಿಂದಲೂ ಆ ಕಡೆಯಲ್ಲಿ ದೇವರ ಮಹಿಮೆಗೆ ಅನೇಕ ಸಭೆಗಳು ಉಂಟಾಗುವವೆಂಬ ಭರವಸವದೆ.

ಶಾಲಾಸಂಬಂಧ ನೋಡಿದರೆ, ಅನಾಥಶಾಲೆಗಳಲ್ಲಿ ಹುಡುಗರು ೨೬೬, ಹುಡುಗಿಯರು ೨೭೧; ಸಭಾಶಾಲೆಗಳಲ್ಲಿ ಹುಡುಗರು ೫೨೮, ಹುಡುಗಿಯರು ೩೮೬; ಇಂಗ್ಲಿಷ ಶಾಲೆಗಳಲ್ಲಿ ವಿದ್ಯಾರ್ಥಿಗಳು ೪೬೫. ದೇಶಭಾಷೆಶಾಲೆಗಳಲ್ಲಿ ಅನ್ಯ ಹುಡುಗರು ೫೫೬, ಹುಡುಗಿಯರು ೯೫. ಮೇಲಶಾಲೆಯಲ್ಲಿ ವಿದ್ಯಾರ್ಥಿಗಳು ೨೨, ಮಧ್ಯಶಾಲೆಗಳಲ್ಲಿ ೫೯, ಶಿಕ್ಷಕಶಾಲೆಯಲ್ಲಿ ೧೦.

ಮಿಶ್ಯನೆರಿಗಳು ೬೩ ಮಂದಿ ಇದ್ಧಾರೆ. ಇವರಲ್ಲಿ ಬೋಧಕರಾಗಿರುವವರು ೪೫ ಮಂದಿ ಸಭಾಪಾಲನೆಯಲ್ಲಿ ಶಾಲೆಗಳ ಪರಾಂಬರಿಕೆಯಲ್ಲಿ ಅನ್ಯರೊಳಗೆ ಪ್ರಸಂಗ ಮಾಡುವ ಕೆಲಸದಲ್ಲಿದ್ಧಾರೆ. ಉಳಿದ ೧೮ ಮಂದಿ ಶಾಲೆಗಳ ಪಾರುಪತ್ಯದ ಮೇಲೆಯೂ, ಬೇರೆ ಬೇರೆ ಕಾರ್ಖಾನೆಗಳ ಮೇಲೆಯೂ ಇದ್ಧಾರೆ. ಈ ವರುಷ ವಿಲಾಯತಿಗೆ ಎಷ್ಟು ಮಂದಿ ಹೋದರು, ವಿಲಾಯತಿಯಿಂದ ಎಷ್ಟು ಮಂದಿ ಬಂದರು ಎಂಬದು ಆಗ್ಯಾಗ್ಯೆ ಈ ಪತ್ರದಲ್ಲಿ ಪ್ರಸ್ತಾಪಿಸಲಾದ್ದರಿಂದ, ಪುನರಪಿ ಬರಿಯುವದು ಅವಶ್ಯವಿಲ್ಲಾ. ಗುಳೇದಗುಡ್ಡದಲ್ಲಿ ಘನ ವೈಗ್ಲೆ ಅಯ್ಯನವರು ದುಷ್ಕಾಲಸಂಬಂಧವಾಗಿ ಬಹಳ ಶ್ರಮ ತೆಗದು ಕೊಂಡು, ಪರೋಪಕಾರದ ಕೆಲಸದಲ್ಲಿಯೇ ತಮ್ಮ ಪ್ರಾಣಾರ್ಪಣೆ ಮಾಡಿದ್ದು ವಾಚಕರಿಗೆ ಗೊತ್ತದೆ.* ಅದೊಲ್ಫ ಕ್ರಿಸ್ತಸರಸಿನ್ ಧೊರೆ, ೧೮೪೦ನೇ ಇಸವಿಯಿಂದ ನಮ್ಮ ಮಿಶ್ಯನ ಸಂಘದಲ್ಲಿ ಒಬ್ಬರಾಗಿದ್ದು, ೧೮೫೪ನೇ ಇಸವಿಯಿಂದ ಸಂಘಸ್ಥವಿರ ಸ್ಥಾನದಲ್ಲಿದ್ದವರು ಕಳೆದ ಅಕ್ಟೋಬರ ತಿಂಗಳಲ್ಲು ತೀರಿಕೊಂಡರು. ಅವರ ಬದಲಿಗೆ ಆ ಸ್ಥಾನದಲ್ಲಿ ಘನ ರಿಗ್ಗನಬಾಕ ಧೊರೆ ಇದ್ಧಾರೆ.

ದೇಶೀಯ ಬೋಧಕರು ೬ ಮಂದಿ; ಉಪದೇಶಿಗಳು ೭೬ ಮಂದಿ ಇದ್ಧಾರೆ. ದಕ್ಷಿಣ ಮಹಾರಾಷ್ಟ್ರಕ್ಕೆ ಕಳುಹಿಸಲ್ಪಟ್ಟ ನಾಲ್ಕು ಮಂದಿಗಳಲ್ಲಿ ಒಬ್ಬನು ಆ ಶೀಮೆ ತಡಿಯಲಾರದೆ, ಅಸ್ವಸ್ಥವಾದ್ದರಿಂದ, ಅವನನ್ನು ಸ್ವದೇಶಕ್ಕೆ ಕರಿಸಿಕೊಳ್ಳಲಾಯಿತು. ಮಲೆಬಾರದಲ್ಲಿ ಒಬ್ಬ ಉಪದೇಶಕನು ತಿರುವಾಂಕೋಡಿನಲ್ಲಿಯ "ಆರು ವರ್ಷಗಳ ಪಕ್ಷದವರು" ಎಂಬವರ ಉಪದೇಶಕ್ಕೆ ನಂಬಿ, ನಮ್ಮ ಮಿಶ್ಯನೆರಿಗಳನ್ನು ಕುರುಡರನ್ನು ನಡಿಸುವ ಕುರುಡರೆಂದು ತಿರಸ್ಕರಿಸಿ, ಕರ್ತನ ಬರೋಣದ ವಿಷಯವಾದ ಪ್ರವಾದನೆಗಳು ಫಲಾನಿ ದಿವಸ ಈಡೇರುವದೆಂದು, ಅವರನ್ನು ನಂಬಿಸ ನೋಡಿ, ಸಾಧ್ಯವಾಗದೆ, ಕಡೆಗೆ ಯಾರಿಗೂ ಹೇಳದೆ, ಕುಟುಂಬವನ್ನು ಬಿಟ್ಟು, ಆ ಪಕ್ಷದವರಿಗೆ ಕೂಡಿ ಕೊಂಡನು. ಆದರೆ ಕೆಲವು

* ಇವರ ವೃತ್ತಾಂತವು ಗುಳೇದಗುಡ್ಡದಿಂದ ಒಬ್ಬರು ಬರದು ಕಳುಹಿಸಿದಂಥಾದ್ದು ಮುಂದಿನ ಅಂಕೆಯಲ್ಲಿ ಪ್ರಕಟಿಸಲಾದೀತು.

ತಿಂಗಳನಂತರ ತಪ್ಪು ತಿಳಿದು, ಪುನಃ ಸ್ವಸ್ಥನಾಗಿ, ತಿರಿಗಿ ಬಂದು, ಮಿಶ್ಯನೆರಿಗಳನ್ನು ತನ್ನ ತಪ್ಪು ಪಾಲಿಸ ಬೇಕೆಂದು, ಬೇಡಿ ಕೊಂಡನು.

ಮಂಗಳೂರಿನಲ್ಲಿ, ಕಣ್ಣಾನೂರಿನಲ್ಲಿ, ಕಲ್ಲಿಕೋಟೆಯಲ್ಲಿ ಕ್ರೈಸ್ತಸಹಾಯಾರ್ಥವಾಗಿಟ್ಟ ಬೇರೆ ಬೇರೆ ಕಾರ್ಖಾನೆಗಳಲ್ಲಿ ೬೩೫ ಮಂದಿಗೆ ಜೀವನೋಪಾಯಕ್ಕೆ ಕೆಲಸ ದೊರಕುತ್ತದೆ. ಕಾರ್ಖಾನೆಗಳ ಮೇಲೆ ೧೬ ಮಂದಿ ಯುರೋಪಿಯನ್ ಯಜಮಾನರು ಇದ್ದಾರೆ. ಕೆಲಸ ಮಾಡುವವರಿಗೆ ಅಟ್ಟಹಾಸ ಮಾಡುವದಕ್ಕೆ ತಕ್ಕಷ್ಟು ಸಂಪಾದನೆಯಾಗುವದಿಲ್ಲಾ ಖರೆ, ಆದರೆ ಮೊದಲು ಸ್ಥಿರತ್ವದಿಂದಲೂ, ಕ್ರಮವಾಗಿಯೂ ಕೆಲಸ ಮಾಡಿ ಅಭ್ಯಾಸವಿಲ್ಲದ ಅನೇಕರು ಅಷ್ಟುಂತರಾಗಿ, ಜೀವನ ಮಾಡಲೂ, ಆಪತ್ಕಾಲದ ಉದ್ದಿಶ್ಯವಾಗಿ ಒಂದಿಷ್ಟು ಉಳಿಸಲೂ ಕಲಿತು ಕೊಂಡಿದ್ದಾರೆ. ಕೇವಲ ದರಿದ್ರಾವಸ್ಥೆಯಿಂದ ಅನೇಕರು ಮೇಲಕ್ಕೆ ಬಂದು, ಸ್ವಂತ ಮನೆ, ಹಿತ್ತಲ ಮಾಡಿ ಕೊಂಡಿದ್ದಾರೆ. ಹೆಚ್ಚಾದವರು ಸ್ವಲ್ಪ ಕಾಲದಿಂದ ಮಾತ್ರವೇ ಉತ್ತಮ ಸ್ಥಿತಿಗೆ ಬಂದವರಾಗಿ, ತಮಗೆ ಯಾರ ಉದ್ದಿಮೆಯಿಂದ ಆರಾಮ ಉಂಟಾಯಿತೋ ಅದೇ ಉದ್ದಿಮೆ ತಮ್ಮ ಮಕ್ಕಳು ಮಾಡುವದರಲ್ಲಿ ಸಮಾಧಾನ ಪಡದೆ, ಅವರನ್ನು ಇನ್ನು ದೊಡ್ಡ ಸ್ಥಿತಿಗೆ ಎತ್ತ ಬೇಕೆಂಬ ಭಾವ ಹಿಡುಕೊಂಡಿದ್ದಾರೆ. ಆದರೆ ನಿಂತಲ್ಲೇ ಕಾಲು ನೀಡಿದರೆ ಬೀಳ ಬೇಕೆಂಬದು ಅಂಥವರು ಬಹುಶಾ ಅನುಭವ ಮಾಡ ಬೇಕಾಗುತ್ತದೆ. ಹೀಗಿದ್ದರೂ ಅನೇಕ ಸಭೆಗಳಲ್ಲಿ ಒಕ್ಕಲುತನ ಮಾಡುವವರು ಹೆಚ್ಚುತ್ತಾ ಬರುತ್ತಾರೆ. ಕೆಲವರು ಮಿಶ್ಯನ ಭೂಮಿ ಸಾಗುವಳಿ ಮಾಡುತ್ತಾರೆ; ಬೇರೊಬ್ಬರು ಜೀವನದ ವಿಷಯದಲ್ಲಿ ಮಿಶ್ಯನಿನ ಮೇಲೆ ಏನೂ ಭಾರ ಹಾಕುವದಿಲ್ಲಾ. ಮತ್ತು ವ್ಯವಸಾಯದ ಕೆಲಸ ಬಿಟ್ಟು, ಬೇರೇನಾದರೂ ಚಾಕ್ರಿ ಮಾಡುವದಕ್ಕೆ ಮಿಶ್ಯನೆರಿಗಳು ಯಾರಿಗೂ ಉತ್ತೇಜ ಕೊಡುವದಿಲ್ಲಾ.

ಅಫ್ರಿಕದಲ್ಲಿಯ ಚೀನದಲ್ಲಿಯ ಮಿಶ್ಯನ್ ಪ್ರವೃತ್ತಿಯ ವಿವರ ಬರುವ ಅಂಕೆಯಲ್ಲಿ ಪ್ರಸ್ತಾಪಿಸಲಾದೀತು.

ವಿವಿಧ ವರ್ತಮಾನಗಳು.

ಮೊದಲು ಮಲೆಬಾರಿನ ಮಾಹಿ ಊರಿನವರಾಗಿದ್ದು, ಈಗ ಮುಂಬಾಯಿಯಲ್ಲಿರುವ ಒಬ್ಬ ಕ್ರೈಸ್ತಸಹೋದರನಿಗೆ ಮಾಹಿಗೆ ಸಮೀಪ ಚೊಂಬಾಳದಲ್ಲಿರುವ ಘನ ವಾಲ್ಟರ್ ಅಯ್ಯನವರು ಒಂದು ಕಾಗದ ಬರದಿದ್ದಾರೆ. ಅದರಲ್ಲಿ "ನಿಮ್ಮ ತಾಯಮ್ಮನವರು ಮುದಿ ಪ್ರಾಯದಲ್ಲಿ ಕ್ರೈಸ್ತರಾದದ್ದು ಕೇಳಿ, ನಿಮಗೆ ಸಂತೋಷವಾಗಿದ್ದೀತು. ನಾನು ಅವರಿಗೆ ಉಪದೇಶ ಕೊಟ್ಟು ತೀರಿಸಿ, ಸದ್ಯಾ ಸ್ನಾನ ಕೊಡ ಬೇಕೆಂದಿದ್ದೇನೆ. ಕ್ರೈಸ್ತಸಭೆಯವಳಾಗುವದಕ್ಕೆ ಆಕೆಗೂ ಬಹಳ ಮನಸ್ಸದೆ. ಆಕೆಯ ಹೊರ್ತು ಇನ್ನು ಕೆಲವರು ಬೋಧನೆ ಹೊಂದಿದ್ದಾರೆ. ಅವರಿಗೂ ನಿಮ್ಮ ತಾಯಿಯ ಸಂಗಡ ಸ್ನಾನ ಕೊಡುವೆನು....ಇಲ್ಲಿ ಚೊಂಬಾಳದಲ್ಲಿ ಉಪದೇಶ ಹೊಂದುವವರು ೭ ಮಂದಿ ಇದ್ದಾರೆ. ಕೆಲ ವಾರಗಳ ಹಿಂದೆ ಒಬ್ಬ ಯೌವನಸ್ಥನಿಗೆ ಸ್ನಾನ ಕೊಟ್ಟೆ. ಅವನೀಗ ತಲಚೇರಿ ಶಾಲೆಯಲ್ಲಿದ್ದಾನೆ. ಮಾಹಿಯಲ್ಲಿ ಒಂದು ಪ್ರಾರ್ಥನಾಲಯ ಕಟ್ಟುವ ಬಗ್ಯೆ ಅಪ್ಪಣೆಯಾಗ ಬೇಕೆಂತಾ, ನಾನು ಮಾಹಿಯ ಗವರ್ನರ್ ಧೊರೆಗೆ ಬರಕೊಂಡಿದ್ದೇನೆ. ಒಂದೆರಡು ತಿಂಗಳಲ್ಲಿ ಪರೀಸಿನಿಂದ ಉತ್ತರ ಬರುವದು. ನಮ್ಮ ಚೊಂಬಾಳದ ಹುಡುಗಿಯರ ಶಾಲೆಯಲ್ಲಿ ೬೫ ಹುಡುಗಿಯರಿದ್ದಾರೆ. ಮಿಶ್ಯನಿನಿಂದ ೫೦ ಮಂದಿಗೆ ಮಾತ್ರ ಖರ್ಚು ಸಿಕ್ಕುತ್ತದೆ. ಅಕ್ಕಿಯ ಧಾರಣೆ ಇನ್ನು ತಗ್ಗದೆ ಇರುವದರಿಂದ ಕಷ್ಟವಾಗಿದೆ. ಹಣವೂ ಕಡಿಮೆಯಾಗಿದೆ. ಆದರೂ ಕರ್ತನು ನಮ್ಮ ಬಳಿಗೆ ಕಳುಹಿಸುವವರಿಗೆ ಕರ್ತನು ತಾನೇ ಖರ್ಚು ನಡಿಸುವನೆಂಬ ಭರವಸದಿಂದ ಕ್ರೈಸ್ತರಾಗ ಬೇಕೆಂ

ಬದಾಗಿ ನಮ್ಮ ಬಳಿಗೆ ಬರುವ ಹುಡುಗಿಯರಿಗೆ ನಾನು ಬಾಗಲು ಮುಚ್ಚುವದಿಲ್ಲಾ. ನಮ್ಮ ಬಡ ಕ್ರೈಸ್ತರಿಗೆ ಇನ್ನು ದುಷ್ಕಾಲದ ಬಾಧೆ ಪರಿಹಾರವಾಗದಿರುವದರಿಂದ, ಕೆಲಸವಿಲ್ಲದವರಿಗೆ ಸಹಾಯಾರ್ಥಕ ಪ್ರವೃತ್ತಿಗಳಲ್ಲಿ ಕೆಲಸ ಕೊಡಿಸಬೇಕಾಗುತ್ತದೆ. ಇದಕ್ಕೂ ಹಣ ಕಮ್ಮಿಯಾಗಿದೆ. ನೀವಾಗಲಿ ನಿಮ್ಮ ಸ್ನೇಹಿತರಾಗಲಿ ನಮಗೇನಾದರೂ ಸಹಾಯಾರ್ಥವಾಗಿ ಕೊಟ್ಟು ಕಳುಹಿಸಿದರೆ, ನಿಮ್ಮ ಉಪಕಾರಸ್ಮರಣೆ ಮಾಡುವೆವು" ಎಂಬದಾಗಿ ಅದೆ.

ಮದ್ರಾಸಿನಲ್ಲಿ ಚರ್ಚ ಮಿಶ್ಯನಿನವರಾದ ರೆ. ಮಿ. ಸತ್ಯನಾಥನ್ ಇವರು ಕುಟುಂಬ ಸಮೇತವಾಗಿ ವಿಲಾಯತಿಗೆ ಹೋಗಿದ್ಧಾರೆ; ಇದು ನಮ್ಮ ವಾಚಕರಿಗೆ ಗೊತ್ತಿರುವದು; ಅವರು ಚರ್ಚ ಮಿಶ್ಯನೆರಿ ಸಂಘದ ದೊಡ್ಡ ವಾರ್ಷಿಕ ಸಭೆ ಲಂಡನಿನಲ್ಲಿ ನೆರದು ಬಂದ ಪ್ರಸಂಗದಲ್ಲಿ ಇಂಗ್ಲಿಷಿನಲ್ಲಿ ಭಾಷಣ ಮಾಡಿ, ಮದ್ರಾಸಿನಲ್ಲಿಯ ಸುವಾರ್ತೆ ಪ್ರಸಾರಣದ, ತಾವು ಧರ್ಮಾಂತರ ಮಾಡಿದ, ತಮ್ಮ ಮತ್ತು ತಮ್ಮ ಸಹಧರ್ಮಿಣಿಯ ಕೆಲಸದ ವಿವರ ಹೇಳಿದ ಮೇಲೆ ತಮ್ಮ ಕಡೆಯ ಮಿಶ್ಯನಿಗೆ ಸಹಾಯ ಮಾಡಬೇಕೆಂತ, ನೆರದು ಬಂದವರ ಮುಂದೆ ವಿನಂತಿ ಮಾಡಿದರು. ಅವರ ಭಾಷಣವಾದ ಮೇಲೆ, ಆ ಸಭೆಗೆ ಬಂದಿದ್ದ ಒಬ್ಬ ಉದಾರಿಣಿ ಸ್ತ್ರೀ ಹತ್ತು ಸಾವಿರ ರೂಪಾಯಿ ಕಾಣಿಕೆ ಮಾಡಿದಳು.

ತಿನ್ನವೆಲ್ಲಿ ಪ್ರಾಂತ್ಯಾಂತರದಲ್ಲಿ ಎಸ್. ಪೀ. ಜಿ. ಮಿಶ್ಯನಿನ ಸಂಬಂಧದಿಂದ ಸಾವಿರಗಟ್ಲೆ ಜನರು ಕ್ರೈಸ್ತರಾಗಿದ್ಧಾರೆ. ಅನೇಕ ಊರುಗಳೇ ಕ್ರೈಸ್ತರವಾಗಿವೆ. ಇತ್ತಲಾಗೆ ಏಳೆಂಟು ತಿಂಗಳಲ್ಲಿ ೧೭,೦೦೦ ಜನರು ಕ್ರೈಸ್ತರಾಗ ಬೇಕೆಂಬ ತಾತ್ಪರ್ಯದಿಂದ ಅವರ ಬಳಿಗೆ ಬಂದು, ಉಪದೇಶ ತಕ್ಕೊಳ್ಳುತ್ತಾರೆ. ಈ ಕೆಲಸದ ಪ್ರಸಾರವು ಉತ್ತರೋತ್ತರ ಅಧಿಕವಾಗುತ್ತಾ ಅದೆ. ಎಷ್ಟೋ ಊರುಗಳಲ್ಲಿ ಜನರು ಮೂರ್ತಿಪೂಜೆ ಬಿಟ್ಟುಬಿಟ್ಟು, ಕ್ರೈಸ್ತಧರ್ಮ ಸ್ವೀಕರಿಸುವದಕ್ಕೆ ಮನಸ್ಸು ತೋರಿಸುತ್ತಾರೆ. ಈ ಉದ್ದಿಶ್ಯವಾಗಿ ಜೂನ್ ೧೦ರಲ್ಲಿ ದೇವರ ಉಪಕಾರ ಸ್ತುತಿ ಮಾಡ ಬೇಕೆಂತಾ ಅಲ್ಲಿಯ ಬಿಶೊಪ ಡಾ. ಕಾಲ್ಡವೆಲ್ ಇವರು ಸರ್ವ ಕ್ರೈಸ್ತರಿಗೆ ಸೂಚನೆ ಕೊಟ್ಟಿದ್ದರು.

ಅಫ್ರಿಕದ ಮಧ್ಯಪ್ರದೇಶಕ್ಕೆ ಚರ್ಚ ಮಿಶ್ಯನ ಸಂಘದವರು ಕಳುಹಿಸಿದ ಮಿಶ್ಯನೆರಿಗಳನ್ನು ಅಲ್ಲಿಯ ಕಾಡ ಜನರು ಕೊಂದು ಹಾಕಿದ ಕಾರಣ ಆ ಸಂಘದವರು ಅಲ್ಲಿ ಮಿಶ್ಯನ್ ಸ್ಥಾಪನೆ ಮಾಡಬೇಕೆಂಬ ಸಂಕಲ್ಪ ಬಿಡದೆ, ಇನ್ನೂ ಮಿಶ್ಯನೆರಿಗಳನ್ನು ಕಳುಹಿಸ ಬೇಕೆಂದಿದ್ಧಾರೆ. ಮಿಶ್ಯನ ಕೆಲಸದ ಮೇಲೆ ಅಲ್ಲಿಗೆ ಹೋಗಲಿಕ್ಕೆ ಅನೇಕ ಯೌವನಸ್ಥರು ಸಿದ್ಧವಾಗಿದ್ಧಾರೆ. ಗ್ರೇಟ ಬ್ರಿಟನಿನ ವಿಲಾಯತಿಯ ಬೇರೆ ರಾಜ್ಯಗಳ ಅಮೇರಿಕದ ಮಿಶ್ಯನ ಸಂಘಗಳವರು ಮಧ್ಯ ಅಫ್ರಿಕದಲ್ಲಿ ಅದರ ಪೂರ್ವಪಶ್ಚಿಮತೀರದಲ್ಲಿ ಮಿಶ್ಯನ ಸ್ಥಾಪನೆ ಮಾಡಬೇಕೆಂಬ ಆಲೋಚನೆಯಲ್ಲಿದ್ಧಾರೆ. ಬಹುತೇಕ ಉದಾರ ಗೃಹಸ್ಥರು ಈ ಕಾರ್ಯಕ್ಕೆ ಪುಷ್ಕಳ ಹಣ ಕೊಡುತ್ತಾರೆ.

ಈ ದೇಶದ ಚರ್ಚ ಮಿಶ್ಯನಿಗೆ ಇಂಗ್ಲಾಂಡಿನ ಚರ್ಚ ಮಿಶ್ಯನೆರಿ ಸಂಘದವರು ಒಂದು ಪತ್ರ ಕಳುಹಿಸಿ, ಅದರಲ್ಲಿ ತಮ್ಮ ಯಾವ ಶಾಲೆಗಳಲ್ಲಿ ಕ್ರೈಸ್ತ ಉಪಾಧ್ಯಾಯರು, ನಿದಾನ ಪಕ್ಷಕ್ಕೆ ಕ್ರೈಸ್ತ ಹಿರೇ ಉಪಾಧ್ಯಾಯನಾದರೂ ಇರುವದಿಲ್ಲವೋ ಆ ಶಾಲೆಗಳನ್ನೆಲ್ಲಾ ಬಂದು ಮಾಡ ಬೇಕೆಂತ ತಿಳಿಸಿದ್ಧಾರೆ. ಅಮೇರಿಕನ ಮಿಶ್ಯನಿನವರು ೨೫ ವರುಷಗಳ ಹಿಂದೆ ಈ ಅಪ್ಪಣೆ ಏರ್ಪಡಿಸಿ, ಅದರ ಮೇರೆಗೆ ಈ ವರೆಗೆ ನಡಿಯುತ್ತಾ ಬರುತ್ತಾರೆ.

ಸ್ವಲ್ಪ ದಿವಸಗಳ ಕೆಳಗೆ ಮುಂಬಾಯಿಯ ಒಂದು ಆಸ್ಪತ್ರಿಯಲ್ಲಿ ಒಬ್ಬಾಕಿ ನಾಗರ ಬ್ರಾಹ್ಮಣಿ ತೀರಿ ಕೊಂಡಳು. ದುಃಖಕರವಾದಂಥಾ ಅವಳ ಪೂರ್ವೋತ್ತರವು ಹ್ಯಾಗಂದರೆ: ಸುಮಾರು ೧೨ ವರುಷಗಳ ಮೊದಲು, ಅಂದರೆ ಆ ಹೆಣ್ಣು ಮಗಳು ಹತ್ತು ವರುಷದಾಕಿಯಾಗಿದ್ದಾಗ, ಅವಳನ್ನು ಒಬ್ಬ ತರುಣನಿಗೆ ಲಗ್ನ ಮಾಡಿ ಕೊಡಲಾಯಿತು. ಕೆಲವು ಕಾಲದ ಮೇಲೆ ಅವನು ಸಂಸಾರ ಹೇಯವೆಂದು, ಬೈರಾಗಿಯಾದನು.

ಅವನಿಗೆ ಮೊದಲೇ ಲಗ್ನವಾಗಲಿಕ್ಕೆ ಮನಸ್ಸಿರಲಿಲ್ಲವಂತೆ, ಆದರೆ ಹಿರಿಯರು ಸರ್ವಸನ್ನಾಹ ಮಾಡಿ, ವತ್ತಾಯದಿಂದ ಮದಿವೆ ಮಾಡಿಸಿ ಬಿಟ್ಟರು. ಅವನು ಕಡು ಬೈರಾಗಿ ವ್ರತ ಮಾಡದೆ ಮನಸ್ಸಿದ್ದಾಗ ಆ ವ್ರತ ಬಿಟ್ಟು ಮನೆಗೆ ಬರುವಂತೆ ಮಾತ್ರ ಬೈರಾಗಿಯಾದನು. ಆ ವೇಳೆಗೆ ಅವನ ಹೆಂಡತಿ ಪ್ರೌಢ ಸ್ಥಿತಿಗೆ ಬಂದಿರಲಿಲ್ಲಾ. ಬಂದ ಮೇಲೆ ಅವಳು ತನ್ನ ಗಂಡನು ಮನೆಗೆ ಬಂದು, ಸಂಸಾರ ಮಾಡ ಬೇಕೆಂದು, ಸ್ನೇಹಿತರ ಕಡೆಯಿಂದಲೂ ಮತ್ತೊಬ್ಬರ ಕಡೆಯಿಂದಲೂ ಅವನಿಗೆ ಬಹು ತರವಾಗಿ ಹೇಳಿಸಿದಳು. ಆವಾಗ್ಯೆ ಅವನು ಆರು ತಿಂಗಳ ಮೇಲೆ ಬರುತ್ತೇನೆ, ವರುಷದ ಮೇಲೆ ಬರುತ್ತೇನೆಂತ ಪ್ರತಿ ಸರ್ತಿ ಉಡಾಪಿ ಉತ್ತರ ಕೊಡುತ್ತಾ ಬಂದನು. ಒಂದಾವರ್ತಿ ಅವನು ಝೋಪಡಿ ಮಾಡಿಕೊಂಡಿದ್ದಲ್ಲಿಗೆ ಅವಳು ಬಂದಾಗ, ಅವನು ಕಣ್ಣು ತಪ್ಪಿಸಿ, ಓಡಿ ಹೋದನು. ಅವಳ ಬಂಧುಬಳಗದವರು ಅವಳನ್ನು ಬಹಳ ಪ್ರೀತಿಯಿಂದ ಪರಾಂಬರಿಸುತ್ತಿದ್ದರು, ಯಾವ ಬಗೆಯಲ್ಲು ಅನ್ನವಸ್ತ್ರಕ್ಕೆ ಕಮ್ಮಿ ಇರಲಿಲ್ಲಾ, ಆದರೂ ಪತಿಯಿಲ್ಲದೆ ಅವಳಿಗೆ ಯಾವದೂ ಶೀಯಾಗಿ ಕಾಣಿಸವಲ್ಲದು. ಹೀಗೆ ೮ ವರುಷಗಳು ಕಳೆದವು. ಆ ಬಡವೆ ಧೈರ್ಯ ಹಿಡಿಯಲಿಕ್ಕೆ ಆಗುವ ವರೆಗೆ ಹಿಡಿದಳು. ಕಡೆಗೆ ಅವಳ ಆಶೆ ನಿರಾಶೆಯಾಗಲಾಗಿ, ಧೈರ್ಯ ಹಿಡಿಯಲಾರದೆ, ಸ್ವಘಾತ ಮಾಡಲಿಕ್ಕೆ ಭಾವಿಗೆ ಹಾರಿದಳು. ಅದರಿಂದಲೂ ಜನರು ಅವಳನ್ನು ಎತ್ತಿ ತೆಗದರು. ಎರಡನೇ ಸಾರಿ ಅಫೀಮು ತಂದಿಟ್ಟಳು. ಅವಳ ಕಡೆಯವರಿಗೆ ಅದು ತಿಳಿದು ಬಂದಾಗಲೇ ಅವರು ತಿನ್ನಲಿಕ್ಕೆ ಬಿಡಲಿಲ್ಲಾ. ಮೂರನೇ ಸಾರಿಗೆ ಅವಳು ಮತ್ತೂ ಬಹು ಗುಪ್ತವಾಗಿ ಅಫೀಮು ತಂದು, ತಿಂದು ಬಿಟ್ಟಳು. ಸ್ವಲ್ಪ ಹೊತ್ತಿನ ಮೇಲೆ ಅಫೀಮಿನ ಅಮಲು ಏರಿ, ವಿಷಮವಾದಾಗ, ಅವಳ ಅವಸ್ಥೆ ನೋಡಿ, ಮನೆಯವರೂ ಬೇರೊಬ್ಬರೂ ಬಂದು, ನಾನಾ ಪ್ರಕಾರವಾಗಿ ಕೇಳಿದರೂ, ಆಕೆ ಯಾರಿಗೂ ಏನೂ ಹೇಳಲಿಲ್ಲಾ. ಕಡೆಗೆ ಅವಳ ಚಿನ್ಹೆ ತಿಳಿದು, ಇವಳು ಅಫೀಮು ತಿಂದಿರ ಬಹುದೆಂದು ಕೆಲವರಿಗೆ ಅನುಮಾನವಾಗಲಾಗಿ, ಅವಳನ್ನು ತತ್‌ಕ್ಷಣವೇ ಆಸ್ಪತ್ರಿಗೆ ವೈದರು. ವೈದ್ಯರು ಔಷಧೋಪಚಾರ ಮಾಡುವಾಗ, ಅವಳು, ನನಗೇನೂ ಬೇಡ, ನನ್ನ ಗಂಡನ ಬಳಿಗೆ ನನ್ನನ್ನು ವೈಯಿರಿ ಎಂದು ಹೇಳಿ, ಗುಜರಾಥಿಯಲ್ಲಿ ಬರದ ಒಂದು ಚೀಟು ಅವರ ಕೈಗೆ ಕೊಟ್ಟಳು. ಅದರಲ್ಲಿ "ನನ್ನ ಅತ್ತಿಗೆ, ನನ್ನ ಆಪ್ತರು, ನನ್ನ ಅಜ್ಜ, ನನ್ನ ಪರಾಂಬರಿಕೆ ಚನ್ನಾಗಿ ಮಾಡಿದ್ಧಾರೆ, ನನಗೆ ಶುಭವಾಗುವ ಹಾಗೆ ಪ್ರಯತ್ನ ಮಾಡಿದ್ಧಾರೆ, ನಾನು ಅವರ ಉಪಕಾರ ನೆನಸುತ್ತೇನೆ, ಈಗ ನಾನು ನನ್ನ ಖುಶಿಯಿಂದ ಸಾಯುತ್ತೇನೆ, ಈ ಅಪರಾಧ ಯಾರ ಕಡೆಗೂ ಇಲ್ಲಾ; ನನ್ನ ಒಡಕು ಹಣೆಬರಹದ ಕಡೆಗೆ ಅದೆ" ಎಂತ ಬರದಿತ್ತು. ಆಸ್ಪತ್ರಿಯಲ್ಲಿ ಅವಳಿಗೆ ಹಿಡಿದ ವಿಷ ಇಳಿಸುವದಕ್ಕೆ ಮಾಡಿದ ಉಪಚಾರಗಳೆಲ್ಲಾ ನಿಷ್ಫಲವಾಗಿ, ಅವಳು ತೀರಿ ಕೊಂಡಳು. ಇವಳ ವಿಚಾರಣೆ ನಡಿಯುವಾಗ್ಯೆ ಅವಳ ಗಂಡನ್ನ ಪಹರೆಯಲ್ಲಿ ಡೋಣಾಗಿತ್ತು. ಅವಳು ವಿಷ ತಿಂದು ಆತ್ಮಹತ್ಯ ಮಾಡಿ ಕೊಂಡಳೆಂದು, ಠರಾವು ಆದ ಮೇಲೆ ಅವನನ್ನು ಬಿಟ್ಟರು.

ಸಿಂಧಹೈದರಾಬಾದಿನಲ್ಲಿ ಒಬ್ಬ ಹಿಂದು ಶಿಪಾಯಿ ತಾನು ಇಟ್ಟುಕೊಂಡ ಹೆಂಗಸಿನ ಮೇಲೆ ಸಿಟ್ಟಾಗಿ, ಕೈಯಲ್ಲಿ ಒಂದು ಕೋವಿ, ೮೦ ತೋಟಿಗಳು, ೩೦ ಗುಂಡುಗಳು ತಕ್ಕೊಂಡು, ಮೊದಲು ಆ ಹೆಂಗಸನ್ನು ಕೊಂದು, ಅನಂತರ ಬೀದಿ ಹಿಡಿದು ಹೋಗಿ, ಕಂಡ ಕಂಡವರಿಗೆಲ್ಲಾ ಗುಂಡು ಹಾಕಿ ಹೊಡೆಯುತ್ತಾ, ಸುಮಾರು ಹನ್ನೆರಡು ಮಂದಿಯನ್ನು ಹತ ಮಾಡಿದನು. ಕಡೆಗೆ ಅವನ ದಂಡಿನ ಸರದಾರನು ಅವನಿಗೆ ಗುಂಡು ಹಾಕಿ, ಹೊಡದು, ಹಿಡಿದನಂತರ ಕೆಲವು ತಾಸುಗಳ ಮೇಲೆ ಜೀವ ಬಿಟ್ಟನು. ಆ ಸರದಾರನು ಅವನನ್ನು ಹಿಡಿಯದಿದ್ದರೆ, ಇನ್ನೆಷ್ಟು ಮಂದಿಯ ಪ್ರಾಣ ತೆಗಿಯುತ್ತಿದ್ದನೋ ಏನೋ?

ಅಹ್ಮದಾಬಾದಿನ ನೆರಿಯಾದ ಎಂಬಲ್ಲಿ ಕೆಲ

ವು ಹುಡುಗರು ರಾಮದೇವನ ಒಂದು ದೇವಸ್ಥಾನದ ಬಳಿಯ ಆಡುತ್ತಾ, ಆಡುತ್ತಾ, ಆ ದೇವಸ್ಥಾನದೊಳಗೆ ಹೋಗಲಾಗಿ, ಅಲ್ಲಿ ಒಬ್ಬ ಗೋಸಾಯಿ ಕೂತಿದ್ದನು. ಇವನು ಆ ಹುಡುಗರಿಗೆ ದೀಪ ಹಚ್ಚಿರಿ ಎಂದು ಹೇಳಲಾಗಿ, ಅವರು ಇನ್ನೂ ಬೆಳಕದೆ, ಇಷ್ಟು ಬೇಗ ದೀಪ ಹಚ್ಚುವದು ಯಾಕೆ? ಅಂತೆಂದರು. ಆಗ್ಯೆ ಆ ಗೋಸಾವಿ ಒಮ್ಮಿಂದೊಮ್ಮೆ ಶಿಟ್ಟಿಗೆದ್ದು, ಒಬ್ಬ ಹುಡುಗನನ್ನು ಹಿಡಿದು, ತನ್ನ ಕೈಯಲ್ಲಿದ್ದ ಕತ್ತಿಯಿಂದ ಅವನ ಕೊರಳು ಕೊಯ್ಯಲಿಕ್ಕೆ ಮಾಡಿ, ಕಡೆಗೆ ಕತ್ತಿಯನ್ನು ಕಿರುಹೊಟ್ಟೆಯೊಳಗೆ ಹಾಕಿ, ಶೀಳಿ, ಕರುಳು ಹೊರಗೆ ತೆಗದು, ತಿನ್ನಲಿಕ್ಕೆ ಹತ್ತಿದನು. ಹತ್ತರವಿದ್ದ ಹುಡುಗರು ಭಯಭ್ರಾಂತಿಯಿಂದ ಏನೂ ಸಹಾಯ ಮಾಡಲಾರದೆ, ಹೊರಗೆ ಓಡಿ ಹೋಗಿ, ಬೊಬ್ಬೆ ಹಾಕಿದರು. ಕೂಗು ಕೇಳಿ, ಒಬ್ಬ ಶಿಪಾಯಿಯೂ ಇನ್ನು ಕೆಲವರೂ ಓಡಿ ಬಂದು, ನೋಡ ಕೂಡದ ಈ ಭಯಂಕರ ನೋಡಿ, ಆ ಕೊಲೆಗಾರನನ್ನು ಹಿಡಿದರು. ಆದರೆ ಅವನ ಕೈಯಲ್ಲಿಯೂ ಬಾಯಿಯಲ್ಲಿಯೂ ಇದ್ದ ಕರುಳು ಅವನಿಂದ ತೆಗಿಯುವದು ಅವರಿಗೆ ಪ್ರಯಾಸವಾಯಿತು. ಆ ಹುಡುಗನನ್ನು ಆಸ್ಪತ್ರಿಗೆ ವೈದರು; ಅಲ್ಲಿ ಅವನು ಅತಿವೇದನೆಯಿಂದ ಪ್ರಾಣ ಬಿಟ್ಟನು. ಗೋಸಾವಿಯನ್ನು ವಿಚಾರಿಸಲಾಗಿ, ಅವನು ರಾಮದೇವರು ನನಗೆ ಈ ಕೃತ್ಯ ಮಾಡುವದಕ್ಕೆ ಬುದ್ಧಿ ಕೊಟ್ಟರು; ನಾನು ಮಾಡಿದೆ; ನಾನು ಕೊಂದ ಹುಡುಗ ರಾಮದೇವರ ವೈರಿ, ಇನ್ನೂ ನನಗೆ ಒಬ್ಬ ಪೋರ ಶಿಕ್ಕಿ, ಅವನು ರಾವಣನೆಂದು ನನಗೆ ತಿಳಿದರೆ, ಅವನನ್ನು ಕೊಲ್ಲುವದಕ್ಕೆ ನನಗೆ ಅಪ್ಪಣೆಯಾಗಿದೆ. ನಾನು ರಾಮಾನಂದಿಪಂಥರವ, ರಾಮದೇವನ ಚಾಕರಿ ಮಾಡುತ್ತಾ ಊರಿಂದೂರು ಸಂಚರಿಸುವವನೆಂದು ವಾಗ್ಮೂಲಿ ಕೊಟ್ಟನಂತೆ.

ಭೋಪಾಳದ ಬೀಗಮು ಸಾಹೇಬರು ತಮ್ಮ ಶೀಮೆಯಲ್ಲಿ ಏರ್ಪಡಿಸಿದ ಕಾಯಿದೆ ಏನಂದರೆ: ತಮ್ಮ ಮಕ್ಕಳ ಮೈಯ ಮೇಲೆ ಆಭರಣಗಳನ್ನು ಹಾಕಿ, ಅವರನ್ನು ಕಾಯುವದಕ್ಕೆ ತಕ್ಕ ಜಾಗ್ರತೆ ಇಡದಿದ್ದರೆ, ಬಹಳ ಅನರ್ಥಕ್ಕೆ ಕಾರಣವಾಗುವದರಿಂದ, ಮೈಯ ಮೇಲೆ ಆಭರಣಗಳಿರುವ ಮಕ್ಕಳು ಹತ್ತರ ಕಾವಲಿಗೆ ಯಾರೂ ಇಲ್ಲದೆ ಬೀದಿಗಳಲ್ಲಿ ಶಿಕ್ಕಿದರೆ, ಸರಕಾರದವರು ಆ ಆಭರಣಗಳನ್ನು ಮುಟ್ಟುಗೋಲು ಮಾಡ ಬೇಕು. ಇಂಥಾ ಕಾಯಿದೆ ಒಳ್ಳೇದೆಂಬದಕ್ಕೆ ಸಂದೇಹವಿಲ್ಲಾ.

ಹಿಮಾಲಯಗಳಿಗಾಚೆ ಇರುವ ಥಿಬೆಟ ದೇಶದಲ್ಲಿ ದುಷ್ಕಾಲವಾಗಿ, ಧಾನ್ಯದವಸ ಮೊದಲಿಗಿಂತ ಇಮ್ಮಡಿ ಪ್ರಿಯವಾಗಿ ಹೋಗಿವೆ. ಅದೇ ಪ್ರಕಾರ ಕಳದ ಹಿಮಕಾಲದಲ್ಲಿ ಮಧ್ಯ ಆಸ್ಯದ ಪ್ರದೇಶಗಳಲ್ಲಿ ಅತಿಶಯ ಹಿಮ ಬಿದ್ದ ಕಾರಣ ಬುಖಾರಾ ಮೆರ್ವ ಈ ಸಂಸ್ಥಾನಗಳಲ್ಲಿ ಮಹಾ ಕ್ಷಾಮಕಾಲ ಬಂದದೆ.

ಬರ್ಮ ದೇಶದ ಅರಕಾನ್ ಪ್ರಾಂತದಲ್ಲಿಯ ಕ್ಯುಕೈಪೂಪರಗಣೆಯಲ್ಲಿ ಒಂದು ಹಳ್ಳಿಯ ಹೊಲದಲ್ಲಿ ನೆಲ ಏಕಾಏಕಿ ಇನ್ನೂರು ಅಡಿ ಬೆಳದು, ಅಲ್ಲಿ ಒಂದು ಸಣ್ಣ ಗುಡ್ಡ ಆಯಿತು. ಈ ತರದ ಉತ್ಪಾತಗಳು ಬರ್ಮ ದೇಶದ ನೆರೆಯಲ್ಲಿರುವ ಜ್ವಾಲಾಗರ್ಭಭೂಮಿಯ ಯೋಗದಿಂದ ಉಂಟಾಗುತ್ತವಂತೆ.

ಮುಸಲ್ಮಾನರ ರಾಜ್ಯದಲ್ಲಿ ಪ್ರಜೆಗಳಿಗೆ ಮತ ಸಂಬಂಧವಾಗಿ ಸ್ವತಂತ್ರವಿಲ್ಲಾ ಎಂಬದಕ್ಕೆ ಒಂದು ಉದಾಹರಣೆ ಇತ್ತಲಾಗೆ ಐಗುಪ್ತ ದೇಶದಲ್ಲಿ ಸಂಭವಿಸಿತು. ಅಲ್ಲಿ ಮೇಲ ಕೋರ್ಟಿನ ಉದ್ಯೋಗಸ್ಥನಾಗಿರುವವನ ಮಗನು ಅಮೇರಿಕನ ಮಿಶ್ಯನೆರಿಗಳ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಅದೇ ಶಾಲೆಯಲ್ಲಿ ಉಪಾಧ್ಯಾಯನಾಗಿದ್ದನು. ಇವನು ಸತ್ಯವೇದವನ್ನೂ ಇತರ ಪುಸ್ತಕಗಳನ್ನೂ ಓದಿ, ಕ್ರೈಸ್ತ ಧರ್ಮವೇ ಸತ್ಯಧರ್ಮವೆಂದು ನಂಬಿ, ಮಿಶ್ಯನ ಬಂಗಲೆಗೆ ಬಂದು, ಸ್ನಾನಸಂಸ್ಕಾರ ಹೊಂದಿದನು. ಇದಾಗಿ ಸ್ವಲ್ಪ ಸಮಯದಲ್ಲಿ ಅವನ ಕಡೆಯವರು ಬಂದು, ಬಲೋದ್ಬಂದಿಯಿಂದ ಅವನನ್ನು ತಂದೆಯ ಮನೆಗೆ ವೈದರು. ಅಲ್ಲಿ, ನೀನು ಕ್ರೈಸ್ತಧರ್ಮವನ್ನು ತ್ಯಾಗ ಮಾಡದಿದ್ದರೆ, ನಿನ್ನ ಜೀವ ತೆಗಿಯು

ತ್ತೇವೆಂತಾ, ದಿನೇ ದಿನೇ ನಾನಾ ಪ್ರಯತ್ನ ಮಾಡಿದರೂ, ನಿಷ್ಫಲವಾಗಲಾಗಿ, ಕಡೆಗೆ, ನೀನು ಮನಸ್ಸಿನಲ್ಲಿ ಬೇಕಾದದ್ದು ನಂಬು, ಬಾಯಿಯಿಂದ ಮಾತ್ರ ಮೊಹಮ್ಮದಿ ಧರ್ಮವನ್ನು ಉಚ್ಚರಿಸಿದರೆ ಸಾಕೆಂದು ಅವನಿಗೆ ಹೇಳಿ, ಅವನಿಂದ ಹಾಗೆ ಹೇಳಿಸಿದರು. ಆದರೂ ಅವನ ಮನಸ್ಸು ಕ್ರೈಸ್ತತ್ವದ ಮೇಲೆಯೇ ಅದೆ ಎಂದು ಅವನ ತಾಯಿಯೂ ನೆಂಟರಿಷ್ಟರೂ ತಿಳುಕೊಂಡು, ಅವನ ಜೀವಕ್ಕೇನಾದರೂ ಹಾನಿ ಬಾರದೆ ಇರದೆಂತಾ ನೆನಸಿ, ಎಲ್ಲಿಗಾದರೂ ಓಡಿ ಹೋಗೆಂದು ಅವನಿಗೆ ಹೇಳಿ ಕೊಟ್ಟರು. ಹಾಗೆಯೇ ಅವನು ಬದಲು ವೇಷ ಹಾಕಿಕೊಂಡು, ಪುನಹಾ ಮಿಶ್ಯನ ಬಂಗಲೆಗೆ ಬಂದು, ಅಲ್ಲಿರುವದೂ ಭಯಕ್ಕೆ ಕಾರಣವೆಂದು, ಸ್ಕೊತ್ಲಾಂದಿಗೆ ಹೋಗಿ ಶೇರಿ ಕೊಂಡಿದ್ಧಾನೆ.

ಉತ್ತರದಲ್ಲಿ ರಾಜಕೋಟೆ ಎಂಬಲ್ಲಿ ಸಂಭಾವಿತ ಮನೆತನದ ಒಬ್ಬ ಯೌವನಸ್ಥನು ಕ್ರೈಸ್ತಧರ್ಮವನ್ನು ಚನ್ನಾಗಿ ಶೋಧನೆ ಮಾಡಿ, ಅದರ ಸತ್ಯತ್ವ ತಿಳಿದ ಮೇಲೆ, ಮಿಶ್ಯನ ಬಂಗಲೆಗೆ ಬಂದು, ತನ್ನ ಅಭಿಪ್ರಾಯ ಅಲ್ಲಿಯ ಮಿಶ್ಯನೆರಿಗೆ ತಿಳಿಸಿದನು. ಅವರು, ಇವನು ಯೋಗ್ಯ ರೀತಿಯಿಂದ ಕ್ರೈಸ್ತನಾಗುತ್ತಾನೆಂತ ತಿಳಿದ ಮೇಲೆ ಅವನಿಗೆ ಸ್ನಾನಸಂಸ್ಕಾರ ಮಾಡಿದರು. ಈ ವರ್ತಮಾನ ಊರೊಳಗೆ ಹಬ್ಬಿದಾಗಲೇ ಜನರು ಗುಂಪುಗುಂಪಾಗಿ ಮಿಶ್ಯನ ಬಂಗಲೆಗೆ ಬಂದು, ಆ ಯೌವನಸ್ಥನನ್ನು ಬೈಯಲಿಕ್ಕಿದ್ದಾಗ, ಅಷ್ಟರಲ್ಲಿ ಪೊಲೀಸಿನವರು ಬಂದು, ಜನರನ್ನು ಚಲ್ಲಾಪಿಲ್ಲಿ ಮಾಡಿದರು. ಆ ಯೌವನಸ್ಥನ ಕಡೆಯವರು ಆ ಊರಿಗೆ ದೊರೆಯಾಗಿರುವ ಠಾಕೂರು ಸಾಹೇಬರ ಮುಂದೆ ಫಿರ್ಯಾದು ತರಲಾಗಿ, ಅವರು ಮಿಶ್ಯನೆರಿಯನ್ನೂ ಆ ಯೌವನಸ್ಥನನ್ನೂ ದರಬಾರಿಗೆ ಕರಿಸಿ ವಿಚಾರಿಸಿ, ಆ ಯೌವನಸ್ಥನ ತಾಯಿ ತಂದೆಗಳಿಗೂ ಇತರರಿಗೂ ಅವನನ್ನು ಒಡಂಬಡಿಸಿ, ಮನೆಗೆ ಕರಕೊಂಡು ಹೋಗುವಂತೆ ಮಾತಾಡಲಿಕ್ಕೆ ಒಳ್ಳೇ ಫುರ್ಸತ್ತು ಕೊಟ್ಟರು. ಆದರೆ ಅವನು ತನ್ನ ದೃಢ ನಿಶ್ಚಯ ಬಿಡದವನಾದ್ದರಿಂದ ಇವನು ಪ್ರಾಯಪ್ರಬುದ್ಧನಾಗಿ, ತನ್ನ ಮನಃಸಂಕಲ್ಪಕ್ಕೆ ಅನುಸಾರವಾಗಿ ನಡಕೊಳ್ಳಲಿಕ್ಕೆ ಶಕ್ತನಾಗಿದ್ಧಾನೆ, ಆದ್ದರಿಂದ ನಮ್ಮ ದರಬಾರು ಅವನಿಗೆ ಪ್ರತಿಬಂಧ ಮಾಡ ಕೂಡದೆಂತ, ತೀರ್ಪು ಮಾಡಿದರು. ಹಿಂದುಸಂಸ್ಥಾನದಿಂದ ಧರ್ಮಸಂಬಂಧ ಕಾರ್ಯದಲ್ಲಿ ಇಂಥಾ ನಿಷ್ಪಕ್ಷಪಾತ ನ್ಯಾಯತೀರ್ಪು ಉಂಟಾದದ್ದು ಇದು ಮೊದಲನೇದು. ಐಗುಪ್ತದಲ್ಲಿ ಸಂಭವಿಸಿದಂಥಾ ಮತ್ತು ರಾಜಕೋಟೆಯಲ್ಲಿ ಸಂಭವಿಸಿದಂಥಾ ಈ ಎರಡು ಸಂಗತಿಗಳಲ್ಲಿ ಎಂಥಾ ಅಂತರವದೆ!

ಲೋಕದಲ್ಲಿರುವ ಎಲ್ಲಾ ಸೇತುವೆಗಳಲ್ಲಿ ದೊಡ್ಡದು ಹಿಂದುಸ್ಥಾನದಲ್ಲಿ ಅದೆ. ಅದು ಪಂಜಾಬ ಶೀಮೆಯಲ್ಲಿ ಚೆನಾಬ್ (ಚಂದ್ರಭಾಗಾ) ನದಿಯ ಮೇಲೆ ಹೊಗೆಭಂಡಿ ಓಡುವದಕ್ಕೆ ಕಟ್ಟಿದ್ದಾಗಿರುತ್ತದೆ. ಈ ಸೇತುವೆಯ ಉದ್ದ ೯,೩೦೦ ಅಡಿ; ಕಮಾನುಗಳು ೬೪, ಒಂದೊಂದು ಕಮಾನು ೧೪೨ ಅಡಿ ಅಗಲವಾಗಿದೆ. ೯,೦೦೦ ಟನ್ ಭಾರವಾದ ಕಬ್ಬಿಣ ಜಂತಿಗಳನ್ನು ಅದಕ್ಕೆ ಶೇರಿಸಿದ್ಧಾರೆ. ಸೇತುವೆಯ ಒಂದೊಂದು ಕಬ್ಬಿಣದ ಸ್ತಂಭವನ್ನು ನೆಲದ ಕೆಳಗೆ ೭೦ ಅಡಿ ಆಳದಲ್ಲಿ ಹುಗದಿದ್ಧಾರೆ. ಖರ್ಚು ಎಷ್ಟಾಗಿರ ಬಹುದೆಂತ ಹೇಳ ಕೂಡದು, ಬುನಾದಿಯ ಕೆಲಸಕ್ಕೆ ಮಾತ್ರ ೪೧ ಲಕ್ಷ ರೂಪಾಯಿ ತಾಗಿದವು. ಈ ಅದ್ಭುತದಂಥಾ ಕೆಲಸ ಬಹು ಸ್ವಲ್ಪ ಸಮಯದಲ್ಲಿ ಅಂದರೆ ನಾಲ್ಕು ವರ್ಷದಲ್ಲಿ ಕಟ್ಟಿ ತೀರಿಸಲಾದದ್ದು ಮಹಾ ಆಶ್ಚರ್ಯವಾಗಿದೆ. ನಮ್ಮ ವಿಕ್ಟೋರಿಯ ಚಕ್ರವರ್ತಿನಿಯವರುಗಳ ಕಾಲದಲ್ಲಿ ಉಂಟಾದ ಸಕಲ ಕಟ್ಟುವಿಕೆಗಳಲ್ಲಿ ಈ ಸೇತುವೆಗೆ ಸಮಾನವಾದದ್ದು ಬೇರೊಂದಿಲ್ಲಾ.

ಸ್ಪೇನಿನ ಅರಸನ ರಾಣಿ ಜ್ವರದಿಂದ ಅಸ್ವಸ್ಥವಿದ್ದವರು ಜೂನ ೨೬ರಲ್ಲು ಮರಣ ಪಟ್ಟರು. ಹಾಗೂ ಹನೋವರ ದೇಶದ ಮಾಜಿ ಅರಸರು ಜೂನ ೧೨ರಲ್ಲು ಮರಣ ಪಟ್ಟರು.

ಇಂಗ್ಲಾಂಡಿನಲ್ಲಿ ಅತಿಶಯ ಮಳೆ ಬಿದ್ದ ಕಾರಣ ಪೈರು ಕೆಡುವಂಥಾದ್ದಾದ್ದರಿಂದ ಈ ವರುಷ

ಬೆಳೆ ಕಡಿಮೆಯಾದೀತೆಂತ ಭಯವಿದ್ದದ್ದು ತಕ್ಕಷ್ಟು ಪರಿಹಾರವಾಗಿದೆ. ಆದರೂ ಯೂರೋಪ ಖಂಡದ ಬಹುತೇಕ ಖಂಡಗಳಲ್ಲಿ ಒಳ್ಳೇ ಬೆಳೆಯಾದೀತೆಂತ ಚಿನ್ಹೆಗಳು ಕಾಣುತ್ತವೆ.

ಪೋಪ ೧೩ನೆ ಲೆಯೋ ಇವರ ಶರೀರಪ್ರಕೃತಿಗೆ ಆರಾಮವಿಲ್ಲವಂತೆ; ಮತ್ತು ಅವರು ಆಲೋಚಿಸಿದ ತಿದ್ದುಪಾಟಿನ ಸಂಬಂಧದ ಪ್ರವೃತ್ತಿ ಸಿದ್ಧಿಯಾಗುವದಕ್ಕೆ ಬಿಡ ಬಾರದೆಂದು, ಜನರು ರಹಸ್ಯ ಕೂಟಗಳನ್ನು ಮಾಡುವದರಿಂದ ಅವರ ಮನಸ್ಸು ಪಲ್ಲಟವಾಗಿ, ಅವರು ತಮ್ಮ ಗದ್ದಿಗೆ ತ್ಯಜಿಸ ಬೇಕೆಂಬ ವಿಚಾರದಲ್ಲಿದ್ದಾರಂತೆ.

ಕ್ರುಪ್ಪ ಎಂಬ ಫಿರಂಗಿಗಳು ಈ ಕಾಲದ ಯುದ್ಧದಲ್ಲಿ ಪ್ರಖ್ಯಾತಿಗೆ ಬಂದವೆ. ಅವುಗಳನ್ನು ಸಂಕಲ್ಪಿಸಿದವನ ಹೆಸರೇ ಆ ಫಿರಂಗಿಗಳಿಗೆ ರೂಢಿಯಾಯಿತು. ಈ ಫಿರಂಗಿಗಳನ್ನು ಪ್ರುಸ್ಯರಾಜ್ಯದಲ್ಲಿ ಒಂದು ಮಹಾ ಕಾರಖಾನೆಯಲ್ಲಿ ಮಾಡುತ್ತಾರೆ. ಆ ಕಾರಖಾನೆಯ ಪೂರ್ವೋತ್ತರವೇನಂದರೆ— ಅದರಲ್ಲಿ ೮೫೦೦೦ ಜನರು ಕೆಲಸದಲ್ಲಿದ್ಧಾರೆ; ಕಾರಖಾನೆಯ ಒಟ್ಟು ಸ್ಥಳ ೧೦೦೦ ಎಕ್ಕರೆ; ೭೫ ಎಕ್ಕರೆಯಲ್ಲಿ ದೊಡ್ಡ ಮನೆಗಳು; ಇವುಗಳಲ್ಲಿ ೧೬೪೮ ಭಟ್ಟಿಗಳು; ೨೯೮ ಆವಿ ಕುದಿಯುವ ಹಂಡೆಗಳು; ೭೭ ಆವಿಯ ಕೊಡತಿಗಳು; ೧೮ ಹೊರಳುವ ಗಾಣಗಳು; ೨೯೪ ಆವಿಯ ಯಂತ್ರಗಳು; ಈ ಯಂತ್ರಗಳ ಶಕ್ತಿ ೧೧೦೦೦ ಕುದುರೆಗಳ ಶಕ್ತಿಗೆ ಸಮವಾಗಿದೆ. ಈ ಯಂತ್ರಗಳೆಲ್ಲಾ ಫಿರಂಗಿಗಳನ್ನೇ ಮಾಡುವದಕ್ಕೆಂತ ನೆನಸ ಬಾರದು, ಆದರೆ ೨೪ ತಾಸುಗಳಲ್ಲಿ ೨೭೦೦ ಹೊಗೆಭಂಡಿಯ ಕಬ್ಬಿಣದ ಕಂಬಿಗಳೂ, ೩೫೦ ಚಕ್ರದ ಹಲಿಗಳೂ, ೧೫೦ ಭಂಡಿಯ ಅಚ್ಚುಗಳೂ, ಲೋಹಮಾರ್ಗದ ಸಣ್ಣ ದೊಡ್ಡ ೧೮೦ ಚಕ್ರಗಳೂ, ಲೋಹಮಾರ್ಗಕ್ಕೋಸ್ಕರ ೧೦೦೦ ಕಮಾನುಗಳೂ, ೧೫೦೦ ಫಿರಂಗಿಗುಂಡುಗಳೂ ಆ ಕಾರಖಾನೆಯಲ್ಲಿ ಆಗ ಬಹುದು. ಒಂದು ತಿಂಗಳಿಗೆ ೩೦೪, ಅಂದರೆ ದಿನಕ್ಕೆ ಸರಾಸರಿ ೧೦ ದೊಡ್ಡ ಫಿರಂಗಿಗಳನ್ನು ಮಾಡ ಬಹುದು. ಆ ಕಾರಖಾನೆಗೆ ದಿನ ೧ಕ್ಕೆ ೧೮೦೦ ಟನ್ ಇದ್ದಲಿ ಬೇಕು. ನಾಲ್ಕು ಇದ್ದಲಿಯ ಖಣಿಗಳೂ ೫೭೫ ಕಬ್ಬಿಣದ ಖನಿಗಳೂ ಅದಕ್ಕೆ ಬೇಕಾದ ಇದ್ದಲಿ ಕಬ್ಬಿಣ ಒದಗಿಸಿ ಕೊಡುತ್ತವೆ.

ನವೀನ ಸಂಕಲ್ಪನೆಗಳಲ್ಲಿ ಮೈಕ್ರೊಫೊನ ಎಂಬದೊಂದು ಪ್ರಖ್ಯಾತಿಗೆ ಬಂದದೆ. ಮೈಕ್ರೊಸ್ಕೋಪ ಎಂಬ ಭೂತಕನ್ನಡಿಯಿಂದ ಕಣ್ಣಿಗೆ ಕಾಣದ ಅಣುಪದಾರ್ಥಗಳು ದೃಶ್ಯವಾಗುವಂತೆ, ಮೈಕ್ರೊಫೊನ ಯಂತ್ರದಿಂದ ಕಿವಿಗೆ ಕೇಳದಂಥಾ ಧ್ವನಿಗಳು ಕೇಳಿಸುವಂತೆ ಆಗುತ್ತದೆ. ಅದರ ಮೂಲವಾಗಿ ನೊಣ ನಡಿಯುವ ಶಬ್ದವು ಆನೆಯ ಕಾಲಿನ ಒದೆಯಂತೆ ಕೇಳುತ್ತದಂತೆ.

ಇನ್ನೊಂದು ನವೀನವೇನಂದರೆ: ಅಮೇರಿಕದಲ್ಲಿ ಬೆಲ್ ಎಂಬ ಪಂಡಿತರು ಟೆಲಿಗ್ರಾಫ್ ತಂತಿಯ ಮೇಲೆಯೇ ಬಹು ದೂರಕ್ಕೆ ಶಬ್ದ ಕಳುಹಿಸುವ ಪ್ರಯೋಗ ಮಾಡಿ ನೋಡಿದರು. ಆ ಯುಕ್ತಿಯಿಂದ ಅವರು ೧೪೩ ಮೈಲು ದೂರದಲ್ಲಿರುವವರ ಸಂಗಡ ಸಂಭಾಷಣೆ ಮಾಡಿದರು. ಈಗ ನಾವು ಸಂಭಾಷಣೆ ಮಾಡ ತಕ್ಕ ಮನುಷ್ಯನು ಹತ್ತರವಿರ ಬೇಕೆಂಬ ಅವಶ್ಯವಿಲ್ಲಾ, ಮತ್ತು ದೂರವಿರುವದರಿಂದ ಏನೂ ಅಡಚಣಿ ಆಗುವದಿಲ್ಲಾ.

ಕಳೆದ ಅಂಕೆಯಲ್ಲಿ ಜರ್ಮನಿ ಮಹಾರಾಜರ ಪ್ರಾಣಘಾತ ಮಾಡಲಿಕ್ಕೆ ನೋಡಿದ ದುಷ್ಮಾನರು ಸೋಶಲಿಷ್ಟ ಎಂಬ ಪಕ್ಷದವರೆಂದು ಹೇಳಿದೆವು. ಆ ರಾಜ್ಯದಲ್ಲಿ ಈ ಪಕ್ಷದವರವು ೭೫ ವರ್ತಮಾನಪತ್ರಗಳು ಅವೆಯಂತೆ. ಮತ್ತು ಇವಕ್ಕೆ ೧೩೫೦೦೦ ಚಂದಾದಾರರಿದ್ಧಾರೆ. ಇದರಿಂದ ಆ ದುರ್ಮತವು ಎಷ್ಟು ವರ್ಧನೆಯಾಗಿದೆಂದು ತಿಳಿಯ ಬಹುದು.

ರುಸ್ಯರಿಗೂ ತುರ್ಕರಿಗೂ ನಡದ ಯುದ್ಧದಲ್ಲಿ ರುಸ್ಯರಿಗೆ ಒಂದು ನೂರು ಮಿಲ್ಲಿಯನ್ ಸ್ಟೆರ್ಲಿಂಗ್ ಅಂದರೆ ೧,೦೦೦,೦೦೦,೦೦೦ ರೂಪಾಯಿ ಖರ್ಚಾದವೆಂತ ಸೆಂತಪೀತರ್ಸಬರ್ಗನಲ್ಲಿ ಲೆಖ್ಖ ಮಾಡೋಣಾಯಿತು. ಈ ಹಣವು ೧೮೭೦-೭೧

ವರುಷದಲ್ಲಿ ಫ್ರೆಂಚರು ಜರ್ಮನರಿಗೆ ಕೊಟ್ಟ ಹಣದ ಅರ್ಧ ಪಾಲು ಮಾತ್ರವೇ.

ಮೇ ೨೯ನೇ ತಾರೀಕು ರುಸ್ಯ ಮಹಾರಾಜರ ಜನ್ಮದಿನವಾಗಿತ್ತು; ಈಗ ಅವರಿಗೆ ೬೦ ವರುಷವಾಯಿತು; ಆ ರಾಜ್ಯದ ಪಾಚ್ಛಾಯರಾಗಲಿ ರಾಣಿಗಳಾಗಲಿ ಯಾರೂ ಇಷ್ಟು ವರ್ಷಗಳು ಬದುಕಿದ್ದು ಇಲ್ಲವಂತೆ.

ಜೂನ ತಾರೀಕು ೧೩ರಲ್ಲು ರಾಜಸಭೆಯ ಮೊದಲನೇ ಕೂಟವಾಯಿತು. ನೆರದು ಬಂದ ಪ್ರತಿನಿಧಿಗಳು ಹೆಚ್ಚು ಕಡಿಮೆ ಇಪ್ಪತ್ತು ಮಂದಿ ಇದ್ದಾರೆ. ಇವರಲ್ಲಿ ಇಂಗ್ಲಾಂದ, ಜರ್ಮನಿ, ರುಸ್ಯ, ಓಸ್ತ್ರಿಯ, ತುರ್ಕಿ ರಾಜ್ಯಗಳವರು ಮೂರು ಮೂರು ಮಂದಿ; ಫ್ರಾನ್ಸ ಇತಲಿ ರಾಜ್ಯಗಳವರು ಇಬ್ಬರಿಬ್ಬರು; ಗ್ರೀಸ್, ರುಮಾನ್ಯ, ಸೆರ್ವ್ಯ, ಮೊಂತೆನಿಗ್ರೋ ರಾಜ್ಯಗಳೂ ತಮ್ಮ ಕಡೆ ವಕೀಲರನ್ನು ಸಭೆಗೆ ಕಳುಹಿಸಿದ್ದಾರೆ. ಈ ಸಭೆಯಲ್ಲಿ ಇಬ್ಬರು ಜರ್ಮನರೂ, ಒಬ್ಬ ಫ್ರೆಂಚನೂ ಕರಣೀಕರಾಗಿದ್ದಾರೆ. ಸಭೆಯಲ್ಲಿ ಆದ ಪಂಚಾಯತಿಕೆಯ ಮುಖ್ಯ ಸಾರಾಂಶವೇನಂದರೆ: ಬುಲ್ಗಾರ್ಯದ ವಿಷಯದಲ್ಲಿ ಅದಕ್ಕೆ ಒಬ್ಬ ಅರಸನನ್ನು ನೇಮಿಸ ಬೇಕು, ಮತ್ತು ಆ ಸಂಸ್ಥಾನದ ಸರಹದ್ದು ಫಲಾನಿ ಆಗಿರ ಬೇಕು ಎಂತ ತೀರ್ಪಾದ್ದರಿಂದ ಆ ಶೀಮೆಯನ್ನು ಕುರಿತ ವಿವಾದ ತೀರಿತು. ಸೆರ್ವ್ಯ ಶೀಮೆ ಸ್ವತಂತ್ರ ರಾಜ್ಯವಾಗ ಬೇಕು. ಬೊಸ್ನಿಯ ಹೆರ್ಜೆಗೊವೀನ ದೇಶಗಳು ಓಸ್ತ್ರಿಯ ಸಾಮ್ರಾಜ್ಯಕ್ಕೆ ಶೇರ ಬೇಕು; ಈ ಕಡೇ ಠರಾವಿಗೆ ತುರ್ಕ ಪ್ರತಿನಿಧಿಗಳು ಬಹಳ ಚರ್ಚೆ ಮಾಡಿದ್ದು ನಿಷ್ಫಲವಾಯಿತು. ಹ್ಯಾಗೂ ಈ ಎರಡು ಶೀಮೆಗಳನ್ನು ತುರ್ಕಿ ಅರಸತನದಲ್ಲಿರ ಬಿಟ್ಟರೆ ಪರಿಣಾಮವಿಲ್ಲದ್ದರಿಂದ ಓಸ್ತ್ರಿಯಕ್ಕೆ ಶೇರಿಸುವದು ಉತ್ತಮ ಉಪಾಯವೆಂದು ಸಭೆಗೆ ತೋರಿತು. ಮೊಂತೆನಿಗ್ರೋ ಶೀಮೆಗೆ ಸ್ವಲ್ಪ ಸಮುದ್ರತೀರದ ಪ್ರದೇಶವೂ ಅಂತಿವಾರಿ ಎಂಬ ರೇವೂ ಕೊಡಿಸಿದರು. ಬೆಸ್ಸರಬಿಯ ಶೀಮೆಯನ್ನು ರುಸ್ಯರಿಗೂ ರುಮೇಲಿಯಕ್ಕೂ ಹಂಚಿ ಕೊಟ್ಟರು. ಪೂರ್ವರುಮೇಲಿಯ ಶೀಮೆಯವರಿಗೆ ತಮ್ಮ ರಾಜ್ಯಕಾರ್ಯ ನಡಿಸುವ ಅಧಿಕಾರವು ಇರ ಬೇಕು; ಮತ್ತು ಆ ಶೀಮೆಗೆ ತುರ್ಕರಿಂದ ನೇಮಿಸಿ ಕೊಂಡು, ವಿಲಾಯತಿಯ ಇತರ ರಾಜ್ಯಗಳವರು ಒಪ್ಪಿಕೊಂಡ ಕ್ರೈಸ್ತ ಅಧಿಪತಿ ಇರ ಬೇಕು. ಬುಲ್‌ಗಾರ್ಯ ರುಮೇಲ್ಯ ಪ್ರಾಂತಗಳನ್ನು ರುಸ್ಯರು ಒಂಭತ್ತು ತಿಂಗಳಲ್ಲಿ ತಮ್ಮ ಸೈನ್ಯ ಹಿಂದಕ್ಕೆ ಕರಿಸಿ ಬರಿದು ಮಾಡಿ ಕೊಡ ಬೇಕು. ಗ್ರೀಸ ದೇಶದ ವಕೀಲನು ತಮ್ಮ ರಾಜ್ಯಕ್ಕೂ ಸ್ವಲ್ಪ ಶೀಮೆ ಕೊಡಿಸ ಬೇಕೆಂದು ಮಾಡುವ ವಿನಂತಿ ಸಭೆಯವರು ಅನುಕೂಲಿಸುವರು. ಪಾರಶಿ ರಾಜ್ಯಕ್ಕೆ ತುರ್ಕಿ ರಾಜ್ಯವು ಖಾತುರ್ ಶೀಮೆ ಬಿಟ್ಟುಕೊಡ ಬೇಕೆಂಬ ಮಾತಿಗೆ ಒಪ್ಪಿಕೊಳ್ಳಲಾಯಿತು. ಇಷ್ಟೆಲ್ಲಾ ಅಲ್ಲದೆ ಇಂಗ್ಲಿಷರು ಕುಪ್ರದ್ವೀಪವನ್ನು ತಕ್ಕೊಳ್ಳುತ್ತಾರೆ. ಹಿಂದುಸ್ಥಾನದಿಂದ ಮಾಲ್ಟಕ್ಕೆ ಕಳುಹಿಸಿದ ದಳವನ್ನು ಇದರಲ್ಲಿ ಠಾಣೆ ಇಡಲಾಗುವದಂತೆ. ಆದರೂ ಇಂಗ್ಲಿಷರು ಕುಪ್ರವನ್ನು ಶಾಶ್ವತವಾಗಿ ಇಟ್ಟುಕೊಳ್ಳದೆ ರುಸ್ಯರು ಬಾತುಮ ಊರನ್ನು ತುರ್ಕರಿಗೆ ಪುನಃ ಬಿಟ್ಟು ಕೊಟ್ಟರೆ, ಇವರು ಇದನ್ನು ಬಿಟ್ಟು ಕೊಡುವರು. ಮತ್ತು ಕಂದಾಯದಲ್ಲಿ ಖರ್ಚು ಕಳದು ಬಾಕಿ ಉಳಿದ ಹಣ ತುರ್ಕರ ಭಂಡಾರಕ್ಕೆ ಕೊಡುವರು. ಈ ದ್ವೀಪ ಕೊಟ್ಟದಕ್ಕೆ ಬದಲಾಗಿ ಇಂಗ್ಲಿಷರು ರುಸ್ಯರು ಇನ್ನು ತುರ್ಕಿಯ ಮೇಲೆ ಮಿಗುವರಿದು ಬಾರದಂತೆ ಭದ್ರವಿಡುವದಕ್ಕೆ ಮಾತು ಕೊಟ್ಟಿದ್ದಾರೆ.

ಈ ಪಂಚಾಯತಿಕೆ ಎಲ್ಲಾ ಆಗುವಾಗ್ಯೆ ತುರ್ಕ ಪ್ರಧಾನಿಗಳು ತಮ್ಮ ರಾಜ್ಯದ ಒಂದೊಂದೇ ಶೀಮೆಯನ್ನು ರಾಜಸಭೆ ತಮ್ಮ ಕೈಯಿಂದ ಕಸಕೊಳ್ಳುವದನ್ನು ಕಣ್ಣಾರೆ ನೋಡಿ, ಮೌನವಾಗಿದ್ದಾರೆ. ಈ ವಿಷಯ ಯಾರಿಗೂ ದುಃಖವಿಲ್ಲಾ. ತುರ್ಕರು ತಾವು ನಟ್ಟ ಬೀಜದ ಫಲ ಉಣ್ಣಾ ಬೇಕಷ್ಟೇ.

“ಜಹಾಂಗೀರನ ಚರಿತ್ರವು” ಎಂಬದೊಂದು ಚಿಕ್ಕ ಪುಸ್ತಕ ಸದ್ಯಾ ಛಾಪೆಯಾಗಿದೆ.

Printed at the Basel Mission Press, Mangalore.

ಕ್ರೈಸ್ತ ಸಭಾ ಪತ್ರ

ಪುಸ್ತಕ ೧೧. **SEPTEMBER 1878.** ಅಂಕೆ ೩.

ಅಡಕವು: ಯೇಸು ಸಬ್ಬತ್ತಿನಲ್ಲಿ ಜಲೋದರರೋಗಿಯನ್ನು ವಾಶಿ ಮಾಡಿದ್ದು—ವೈಗ್ಲೆ ಧೊರೆಯ ಚರಿತ್ರೆ—ಬಾಸಲ್ ಮಿಶ್ಯನ ರಿಪೋರ್ಟ್: ೧೮೭೭ನೇ ವರುಷಕ್ಕೆ—ವಿವಿಧ ವರ್ತಮಾನಗಳು.

ಯೇಸು ಸಬ್ಬತ್ತಿನಲ್ಲಿ ಜಲೋದರರೋಗಿಯನ್ನು ವಾಶಿ ಮಾಡಿದ್ದು.

ಲೂಕ. ೧೪, ೧—೧೧.

ಈ ಕಾರ್ಯ ಸಬ್ಬತ್ತಿನಲ್ಲಿ ನಡದದ್ದು. ಸಬ್ಬತ್ತು ಅಂದರೆ ವಿಶ್ರಾಂತಿಯ ದಿವಸ. ದೇವರು ಈ ದಿವಸವನ್ನು ಸೃಷ್ಟಿಯ ಆರಂಭದಲ್ಲಿ ಪರದೈಸಿನಲ್ಲಿಯೇ ಕೊಟ್ಟನು. ಆವಾಗ್ಯೆ ಪಾಪ ಕಷ್ಟ ಚಿಂತೆ ಇತ್ಯಾದಿ ಇಲ್ಲದಿರುವಾಗ ವಿಶ್ರಾಂತಿ ಬೇಕಿತ್ತೋ? ಆದಿಯಲ್ಲೇ ದೇವರು ಮನುಷ್ಯರನ್ನು ಸಬ್ಬತ್ತಿಗಿಂತಲೂ ಹೆಚ್ಚಾದ ಮಹಾ ವಿಶ್ರಾಂತಿಗೆ ನೇಮಿಸಿ, ಅದಕ್ಕೆ ಅವರನ್ನು ಸಿದ್ಧ ಮಾಡುವವನಾಗಿ, ಅದರ ರುಚಿಗಾಗಿ ಸಬ್ಬತ್ತು ನಿರ್ಮಿಸಿದನು. ಮನುಷ್ಯನು ಪಾಪದಲ್ಲಿ ಬಿದ್ದ ಮೇಲೆ ವಿಶ್ರಾಂತಿ ಎಷ್ಟೋ ಅವಶ್ಯವಾಯಿತು. ಆದರೂ ಈ ದಿನ ಅನೇಕರಿಗೆ ತಪ್ಪಿ ಹೋದದರಿಂದ ದೇವರು ಇಸ್ರಯೇಲ್ಯರಿಗೆ ನಾಲ್ಕನೇ ಆಜ್ಞೆ ಕೊಟ್ಟು ವಿಶ್ರಾಂತಿಯನ್ನು ಉಳಿಸಿದನು. ಕ್ರೈಸ್ತರಾದ ನಮಗೂ ಆದಿತ್ಯವಾರ ವಿಶ್ರಾಂತಿಯ ದಿನವಾಗಿ ದೊರಕಿ, ಮುಂಚಿನ ಸಬ್ಬತ್ತಿಗಿಂತಲೂ ಅಧಿಕ ಆಶೀರ್ವಾದ ಕೊಡುವಂಥಾದ್ದಾಗಿದೆ. ನಮಗೂ ಆದಿತ್ಯವಾರ ಆಶೀರ್ವಾದದ ದಿನವಾಗಿದೆಯೋ? ಈ ದಿನದಲ್ಲಿ ಹೃದಯಾತ್ಮಗಳಿಗೆ ಸಮಾಧಾನ ವಿಶ್ರಾಂತಿ ಶಿಕ್ಕುತ್ತದೋ? ಅದು ಯೇಸು ಕ್ರಿಸ್ತನ ಮುಖಾಂತರವಾಗಿ ಮಾತ್ರವೇ ಶಿಕ್ಕುತ್ತದೆ. ಆತ ನಿಲ್ಲದೆ ಈ ದಿನ ವ್ಯರ್ಥ. ಆತನು ಸಬ್ಬತ್ತನ್ನು ಹ್ಯಾಗೆ ಆಶೀರ್ವದಿಸಿದನೆಂಬದು ಈ ವಚನದಲ್ಲಿ ಕಾಣುತ್ತದೆ.

೧. ಯೇಸು ಸಬ್ಬತ್ತಿನಲ್ಲಿ ತನ್ನನ್ನು ಅಪೇಕ್ಷೆ ಮಾಡುವವರ ಬಳಿಗೆ ಬರುತ್ತಾನೆ. ಈ ದಿನ ಯೇಸುವನ್ನು ನಮ್ಮ ಬಳಿಗೆ ಕರಿಯುವದೇ ನಮ್ಮ ಮೊದಲನೇ ಕೆಲಸವಾಗಿರ ಬೇಕು. ಆದಿತ್ಯವಾರ ಕರ್ತನ ದಿನವೆಂತ ತಿಳಿದು—ಕರ್ತನೇ, ಬಾ! ಎಂತ ಪ್ರಾರ್ಥಿಸು. ಇಲ್ಲಿ ಕರ್ತನು ತನ್ನನ್ನು ಕರದ ಒಬ್ಬ ಫರಿಸಾಯನ ಮನೆಗೆ ಹೋದನು. ಆ ಫರಿಸಾಯನು ಪ್ರೀತಿಪೂರ್ವಕವಾಗಿ ಕರಿಯಲಿಲ್ಲಾ; ಅವನನ್ನು ಏನಾದರೊಂದು ತಪ್ಪಿನೊಳಗೆ ಶಿಕ್ಕಿ ಹಾಕ ಬೇಕೆಂಬದಾಗಿ ಹೊಂಚಿ ಕೊಳ್ಳುವವನಾಗಿ ಕರದವನ ಬಳಿಗಾದರೂ ಕರ್ತನು ಹೋದನಲ್ಲಾ? ಹಾಗಾದರೆ ಯಥಾರ್ಥ ಮನಸ್ಸಿನಿಂದ ಕರಿಯುವವನ ಬಳಿಗೆ

ಕರ್ತನು ಬಾರನೇ? ಕರ್ತನ ಹೆಸರಿನಲ್ಲಿ ನಾವು ಈ ಮನೆಯಲ್ಲಿ ಕೂಡಿ ಬಂದಿರಲಾಗಿ ನಮ್ಮ ಬಳಿಗೂ ಬರುತ್ತಾನೆ, ಸಮಾಧಾನ ಶಕ್ತಿ ಆದರಣೆ ದಯ ಮಾಡುವವನಾಗಿ ಬರುತ್ತಾನೆ. ಆದರೆ ಕರ್ತನ ಆಶೀರ್ವಾದ ಶಿಕ್ಕ ಬೇಕಾದರೆ, ಆ ಫರಿಸಾಯನ ಮನೆಯಲ್ಲಿದ್ದವರಿಗಿದ್ದ ಮನಸ್ಸು ನಮ್ಮೊಳಗಿರ ಬಾರದು. ಅವರು ಆತನನ್ನು ಹೊಂಚಿ ನೋಡಿದರು. ಆತನ ಮಾತು ಅವರ ಮನಸ್ಸಿಗೆ ಚುಚ್ಚುತ್ತಿತ್ತು; ಶಿರಸಾವಹಿಸಿ ಕೊಳ್ಳುವದಕ್ಕೆ ಅವರಿಗೆ ಮನಸ್ಸಿಲ್ಲದೆ ತಮ್ಮ ಮನಸ್ಸಾಕ್ಷಿ ಶಾಂತ ಮಾಡುವದಕ್ಕೆ ಆತನಲ್ಲೇ ಕಾರಣ ಹುಡುಕಿದರು. ನಮ್ಮಲ್ಲಿ ಇಂಥವರಿದ್ದಾರೋ? ಯೇಸುವಿಗೆ ಪೂರ್ಣ ವಶವಾಗಲಿಕ್ಕೆ ಅವರಿಗೆ ಮನಸ್ಸಿಲ್ಲದೆ ಕರ್ತನಲ್ಲಿ ತಪ್ಪು ಹಾಕಿದರು. ನಮ್ಮೊಳಗೂ ಇಂಥವರು ಅನೇಕರಿರುವರು. ತನಗೆ ಪ್ರಿಯವಾದದ್ದೊಂದು ಪಾಪವಿದ್ದರೆ, ಅದನ್ನು ಸಣ್ಣದು ಮಾಡಿ, ಬೋಧಕರಲ್ಲಿಯೂ ಮತ್ತೊಬ್ಬರಲ್ಲಿಯೂ ತಪ್ಪು ಹಾಕುವವರು ಇಲ್ಲವೋ? ಇಂಥವರಿಗೆ ವಿಶ್ರಾಂತಿ ದೊರಕದು. ಯಥಾರ್ಥ ಮನಸ್ಸಿನಿಂದ ನಾವು ಆತನನ್ನು ಕರಿಯುವಾ.

೨. ಕರ್ತನು ಕರದವರ ಬಳಿಗೆ ಬಂದು ವಾಶಿ ಮಾಡಲಿಕ್ಕೆ ಮನಸ್ಸುಳ್ಳವನಾಗಿದ್ದಾನೆ. ಯೇಸು ಆ ಮನೆಯಲ್ಲಿ ಜಲೋದರರೋಗಿಯನ್ನು ಕಂಡನು. ಆ ರೋಗಿ ತಾನಾಗಿ ಬಾರದೆ ಆ ಫರಿಸಾಯರು ಕರ್ತನಿಗೆ ಉರ್ಲೊಡ್ಡುವದಕ್ಕಾಗಿ ಅವನನ್ನು ಕರದಿರ ಬೇಕು. ಯೇಸು ಸ್ವಸ್ಥ ಮಾಡಿದರೆ ಸಬ್ಬತ್ತು ಮೀರುತ್ತಾನೆ, ಸ್ವಸ್ಥ ಮಾಡದಿದ್ದರೆ ನಿಷ್ಕರುಣಿಯಾಗಿದ್ದಾನೆ, ಇಲ್ಲವೆ ಸ್ವಸ್ಥ ಮಾಡುವ ಶಕ್ತಿಯಿಲ್ಲದವನಾಗಿದ್ದಾನೆ. ಹೀಗೇನಾದರೂ ಹೇಳ ಬೇಕೆಂದು ಅವರು ಮಾರ್ಗ ನೋಡುತ್ತಿದ್ದರು. ಆಗ್ಯೆ ಕರ್ತನು, ಸಬ್ಬತ್ತಿನಲ್ಲಿ ಸ್ವಸ್ಥ ಮಾಡ ಬಹುದೋ? ಎಂತ ಅವರನ್ನು ಕೇಳಿದನು. ಮಾಡ ಬಾರದೆಂದು ಹೇಳುವದಕ್ಕೆ ಅವರಿಗೆ ಧೈರ್ಯ ಬಾರದೆ, ಮಾಡ ಬಹುದೆಂತ ಹೇಳುವದಕ್ಕೆ ಮನಸ್ಸಿಲ್ಲದೆ, ಮೌನವಾಗಿದ್ದರು. ಯೇಸು ಆ ರೋಗಿಯನ್ನು ವಾಶಿ ಮಾಡಿ ಕಳುಹಿಸಿ ಬಿಟ್ಟನು. ಆದಿತ್ಯವಾರ ವಾಶಿ ಮಾಡುವದಕ್ಕೆ ಕರ್ತನಿಗೆ ಬಹಳ ಮನಸ್ಸದೆ; ಬೇರೆ ಆರು ದಿವಸಗಳಲ್ಲಿ ಸಹ ವಾಶಿ ಮಾಡುತ್ತಾನೆ. ವೈರಿಗಳ ಕಡೆಯವನಿಗೆ ವಾಶಿ ಮಾಡಿದವನು ಯಥಾರ್ಥ ಮನಸ್ಸಿನಿಂದ ಕರಿಯುವವರಿಗೆ ಮಾಡನೇ? ಆತನಿಂದ ನಿಮ್ಮ ಪಾಪರೋಗಕ್ಕೆ ಶಾಂತಿ ಪಡಕೊಂಡಿರೋ? ನಿಮಗೆ ಆತ್ಮದ ಕ್ಷೇಮಲಾಭವಾಯಿತೋ? ನಮ್ಮಲ್ಲಿಯೂ ನಾನಾ ರೋಗಿಗಳಿದ್ದಾರೆ. ಜಲೋದರವೆಂಬ ಗರ್ವವುಳ್ಳವರಿದ್ದಾರೆ; ಕಾವು ಎಂಬ ಮಾಂಸದ ಇಚ್ಛೆ ಒಳಗೆ ಉರಿಯುವವರಿದ್ದಾರೆ; ವಿಶ್ವಾಸ ಪ್ರೀತಿ ತಣ್ಣಗಾಗಿ ಹೋದ ಶೀತರೋಗಿಗಳಿದ್ದಾರೆ; ಆತ್ಮಿಕ ಜೀವ ಕ್ಷಯವಾಗಿ ಹೋದ ಕ್ಷಯರೋಗಿಗಳಿದ್ದಾರೆ; ಕರ್ತನು ಈ ಸರ್ವ ರೋಗಗಳನ್ನು ವಾಶಿ ಮಾಡುವದಕ್ಕೆ ಮನಸ್ಸುಳ್ಳವನಾಗಿದ್ದಾನೆ. ಅವನೇ ವೈದ್ಯನು ಎಂದು ನಂಬಿ, ಅವನ ಬಳಿಗೆ ಹೋಗುವಾ. ಆತನ ಕೈ ನಮಗೆ ತಾಗಿದರೆ, ಸ್ವಸ್ಥವಾಗುತ್ತೇವೆ. ಮುಖ್ಯವಾಗಿ ಆದಿತ್ಯವಾರ ಆತನು ವಾಶಿ ಮಾಡುತ್ತಾನೆ. ಶರೀರದಲ್ಲಿ ರೋಗವುಳ್ಳ ಕೆಲವರನ್ನು ಅವರ ಮನಸ್ಸಿಲ್ಲದೆ ಕರ್ತನು ಸ್ವಸ್ಥ ಮಾಡಿದರೂ, ಆತ್ಮಿಕ ರೋಗಿಗಳಿಗೆ ಹೀಗೆ ಮಾಡಲಾರನು. ವಾಶಿ ಮಾಡುವ ಅವನ ಕೈಯನ್ನು ದೂರ ಮಾಡ ಬೇಡಿ, ಆಗ ಗುಣವಾಗುತ್ತೀರಿ.

೩. ಕರ್ತನು ಸಬ್ಬತ್ತು ದಿನಕ್ಕೆ ತಕ್ಕ ಉಪದೇಶವನ್ನು ಕೊಡುವವನಾಗಿ ಬರುತ್ತಾನೆ. ವ. ೧೧. ತನ್ನನ್ನು ಹೆಚ್ಚಿಸಿ ಕೊಳ್ಳುವ ಪ್ರತಿ ಮನುಷ್ಯನು ತಗ್ಗಿಸಲ್ಪಡುವನು; ಮತ್ತು ತನ್ನನ್ನು ತಗ್ಗಿಸಿ ಕೊಳ್ಳುವವನು ಹೆಚ್ಚಿಸಲ್ಪಡುವನೆಂಬದು ಆದಿತ್ಯವಾರಕ್ಕೂ ತಕ್ಕ ಬೋಧನೆ. ಮೇಲಿನ ನಿತ್ಯ ವಿಶ್ರಾಂತಿಗೆ ಶೇರಿ, ಅಲ್ಲಿ ಮೇಜಿನಲ್ಲಿ ಕೂಡ್ರ ಬೇಕಾದರೆ, ತಗ್ಗಿಸಿ ಕೊಳ್ಳ ಬೇಕು. ಇಲ್ಲಿ ಮೊದಲನೇ ಪಂಕ್ತಿಗೆ ತಾನು ಯೋಗ್ಯನೆಂದು ನೆನಸಿ ಕೊಂಡವನನ್ನು ಯಜಮಾನನು ಕೆಳಗೆ ಹಾಕುವನು; ಕೆಳಗೆ ಇರುವವನನ್ನು ಮೇಲಕ್ಕೆ ಎತ್ತುವನು. ನಮ್ಮ ಸ್ವಂತ ಹೃದಯವೂ ನಮ್ಮ ಸ್ನೇಹಿತರೂ ಮುಖ್ಯವಾಗಿ

ಸೈತಾನನೂ ನಮ್ಮನ್ನು ಹೆಚ್ಚಿಸುವದುಂಟು. ಅದಕ್ಕೆ ಒಪ್ಪಿ ಕೊಂಡರೆ, ಮೋಸವಾಗುತ್ತದೆ. ಆದದರಿಂದ ಪೌಲನ ಹಾಗೆ, ಪಾಪಿಗಳಲ್ಲಿ ಮೊದಲನೆಯವನು ನಾನೇ ಎಂತ ಅರಿಕೆ ಮಾಡುವಾ, ತಗ್ಗಿಸಿಕೊಳ್ಳುವಾ; ಆಗ ಕರ್ತನು ನಮ್ಮನ್ನು ತಕ್ಕ ಸಮಯದಲ್ಲಿ ಏರಿಸುವನು. ಆಮೆನ್.

J. J. B.

ವೈಗ್ಲೆ ಧೊರೆಯ ಚರಿತ್ರೆ.

ಪ್ರಿಯ ಸಭಾಪತ್ರಾಧಿಪರೇ,

ಗುಳೇದಗುಡ್ಡದಲ್ಲಿ ಕರ್ತನ ಸೇವೆ ನಡಿಸಿದ ಪ್ರಿಯ ಬೋಧಕರಾದ ರೆ. ವೈಗ್ಲೆ ಧೊರೆಗಳಿಗೆ ೧೮೭೭ನೇ ದಶಂಬರ ೨೧ನೇ ತಾರೀಕಿನಲ್ಲಿ ದೈವಾಜ್ಞೆಯಾಯಿತೆಂಬ ವರ್ತಮಾನ ತಮ್ಮ ಸುಂದರವಾದ ಸಭಾಪತ್ರದಲ್ಲಿ ಸೂಚನೆಯಾಗಿ ಪ್ರಕಟಿಸೋಣವಾಯಿತು. ಆದರೆ ಅವರ ಜೀವಕಾಲದ ವೃತ್ತಾಂತವನ್ನು ಸ್ವಲ್ಪ ವಿಸ್ತಾರವಾಗಿ ತಮ್ಮ ಪತ್ರದಲ್ಲಿ ದಯ ಮಾಡಿ ಛಾಪಿಸ ಬೇಕೆಂದು ನನ್ನ ವಿನಂತಿ ಅದೆ.

ರೆ. ವೈಗ್ಲೆ ಧೊರೆಗಳು ಶ್ಲೀರ್‌ಬಾಖ್ ಎಂಬ ಊರಲ್ಲಿ ಜನ್ಮಿಸಿ, ಬೆಳದು, ಶಾಲೆಗೆ ಹೋಗ ತಕ್ಕ ಪ್ರಾಯ ಬಂದಾಗ, ಶಾಲೆಗೆ ಅವರನ್ನು ಕಳುಹಿಸಿದರು. ಅಲ್ಲಿ ತಕ್ಕಷ್ಟು ಕಲಿತ ಬಳಿಕ ಅವರ ತಂದೆ ತಾಯಿಗಳು ತಮ್ಮ ಊರಿಗೆ ಒಂದು ಹರದಾರಿ ದೂರವಿರುವ ಒಂದು ಪಟ್ಣದ ಶಾಲೆಗೆ ಕಳುಹಿಸಿದರು. ಅವರು ಹತ್ತು ವರುಷದವರಾದಾಗ ಅವರ ಪ್ರಿಯ ತಾಯಿಯು ತೀರಿಕೊಂಡದರಿಂದ ಅವರಿಗೆ ಬಹಳ ದುಃಖ ಚಿಂತೆ ಪ್ರಾಪ್ತವಾಯಿತು. ಈ ದುಃಖದ ಭಾರವು ಅವರ ಮೇಲೆ ಬಿದ್ದಾಗ್ಯೆ ಅವರು ವಿಶೇಷವಾಗಿ ದೇವರಿಗೆ ಪ್ರಾರ್ಥನೆ ಮಾಡಿ, ಸತ್ತ ತನ್ನ ತಾಯಿಯು ಪರಲೋಕದಲ್ಲಿ ಹ್ಯಾಗೆ ಇರುತ್ತಾಳೆ? ಆಕೆಗೆ ಅಲ್ಲಿ ಬಹಳ ಸುಖ ಇರುವದು ಎಂಬ ಇಂಥಾ ಆಲೋಚನೆಯಿಂದ ಅವರ ಮನಸ್ಸಿನಲ್ಲಿ ಪರಲೋಕದ ಕಡೆಗೆ ಹೆಚ್ಚು ಧ್ಯಾನ ಹುಟ್ಟಿ, ಇದರಿಂದ ಅವರಲ್ಲಿ ಭಕ್ತಿಸಂಬಂಧವಾದ ಅಸ್ತಿವಾರ ಹಾಕಿದ ಹಾಗೆ ಆಯಿತು. ಇದು ದೇವರಿಂದ ಆ ಚಿಕ್ಕ ಹೃದಯದಲ್ಲಿ ಉಂಟಾದ ಕಾರ್ಯವೇ ಸರಿ. ತಾಯಿಯ ಮರಣದ ದುಃಖೋಪಶಮನವನ್ನು ಹೊಂದಿದನಂತರ ಅವರ ತಂದೆಯವರು ಅವರನ್ನು ಮೊದಲು ಹೋಗಿದ್ದ ಶಾಲೆಗೆ ಕಳುಹಿಸಿದರು. ಅಲ್ಲಿ ಎರಡು ವರುಷ ಚನ್ನಾಗಿ ಅಭ್ಯಾಸ ಮಾಡಿದರು. ಅಂದಿನಿಂದ ಅವರ ಮನಸ್ಸಿನಲ್ಲಿ ಅನ್ಯ ಜನರ ಮಧ್ಯದಲ್ಲಿ ಕರ್ತನ ಕೆಲಸ ನಡಿಸ ಬೇಕೆಂಬ ಅಪೇಕ್ಷೆ ಹುಟ್ಟಿ, ಅದು ಸಿದ್ಧಿಗೆ ಬೈಯ ಬೇಕೆಂಬುವದು ಅವರಲ್ಲಿ ಹೆಚ್ಚು ಹೆಚ್ಚು ಬೆಳಿಯುತ್ತಾ ಬಂತು. ಆ ಮೇಲೆ ಅವರು ಕೊರ್ನ್‌ಥಾಲ್ ಎಂಬ ಗ್ರಾಮದಲ್ಲಿದ್ದ ದೊಡ್ಡ ಶಾಲೆಗೆ ಹೋದರು. ಆಗ ಅವರು ೧೨ ವರುಷ ಪ್ರಾಯದವರಾಗಿದ್ದರು. ಆ ಶಾಲೆಯಲ್ಲಿ ಬಹು ಜಾಗ್ರತೆಯಿಂದ ತಮ್ಮ ಪಾಠಗಳನ್ನು ಕಲಿಯುತ್ತಾ ಇದ್ದದರಿಂದ ಅಲ್ಲಿರುವ ಬೋಧಕರಿಗೆ ಬಹಳ ಸಂತೋಷವಾಯಿತು. ಆ ಶಾಲೆಯಲ್ಲಿ ಅವರು ೧೪ ವರುಷದವರಾಗಿರುವಾಗ ಆ ಊರಲ್ಲಿದ್ದ ಬಹು ಭಕ್ತಿಯುಳ್ಳವರಾದಂಥಾ, ವಿದ್ಯದಲ್ಲಿ ಘಟ್ಟಿಗರಾದಂಥಾ ರೆ. ಸ್ಟೌತ್ ಧೊರೆಗಳಿಂದ ದೃಢೀಕರಣವಾಯಿತು. ಆ ದೃಢೀಕರಣ ಆಗುವ ಮೊದಲು ಅವರಿಗೆ ಆದ ಉಪದೇಶದ ಸಮಯದಲ್ಲಿ ದೇವರಾತ್ಮನು ತನ್ನ ಕೆಲಸವನ್ನು ಅವರ ಹೃದಯದಲ್ಲಿ ಚನ್ನಾಗಿ ನಡಿಸಿದನು. ಅದರಿಂದ ಅನ್ಯಜನರಲ್ಲಿ ಕರ್ತನ ಸೇವೆಯನ್ನು ಮಾಡ ಬೇಕೆಂಬ ಅಪೇಕ್ಷೆಯು ಅವರೊಳಗೆ ಹೆಚ್ಚಾಗುತ್ತಾ ಹೋಯಿತು. ಈ ಶಾಲೆಯಲ್ಲಿ ಇನ್ನು ಕೆಲವು ವರುಷ ಇರುವಾಗ ಆ ಶಾಲೆಯಲ್ಲಿರುವವರೆಲ್ಲರಿಗೆ ಸದ್ಗುಣಗಳಲ್ಲಿ ಮಾದ್ರಿಯಾಗಿದ್ದರಂತೆ. ಅದರಿಂದ ಅಲ್ಲಿರುವ ಬೋಧಕರಿಗೆ ಬಹಳ ಸಂತೋಷವಾಯಿತು. ಹಾಂಗು ಎಲ್ಲರು ಅವರ ಮೇಲೆ ಬಹಳ ಪ್ರೀತಿ ಮಾಡಿ

ದರಂತೆ. ೧೮ನೇ ವರುಷದವರಾದಾಗ ತಮ್ಮ ಅಪೇಕ್ಷೆಯನ್ನು (ಕರ್ತನ ಸೇವೆಯನ್ನು) ಈಡೇರಿಸುವ ಹಾಗೆ ಬಾಸಲಿಗೆ ಬೋಧಕರಾಗುವ ಶಾಲೆಯಲ್ಲಿ ಶೇರಿದರು. ಅಲ್ಲಿ ನಾಲ್ಕು ವರುಷ ದೇವವಿದ್ಯ ಪಾರಾಯಣ ಮಾಡಿ, ಬಾಸಲಿನ ಹಿರಿಯರ ಅಪ್ಪಣೆಯ ಪ್ರಕಾರ ಹುಬ್ಬಳ್ಳಿಗೆ ನೇಮಕವಾಗಿ ಬಂದರು. ಆಗ ಅವರಿಗೆ ೨೨ ವರುಷಗಳಾಗಿದ್ದವು. ಇಂಥಾ ಎಳೇ ಪ್ರಾಯದ ಪುರುಷನು ತನ್ನ ಸ್ವದೇಶ, ಹಾಂಗು ಸ್ವಜನರನ್ನು ಬಿಟ್ಟು, ಈ ದೇಶಕ್ಕೆ ಬರ ಬೇಕಾದರೆ, ಉದ್ದೇಶ ಏನು? ಯೇಸು ಕ್ರಿಸ್ತನ ಪ್ರೀತಿಯನ್ನು ಅನುಭವಿಸಿ ತನ್ನನ್ನು ಪೂರ್ಣವಾಗಿ ಆತನಿಗೆ ಒಪ್ಪಿಸಿ ಕೊಟ್ಟು, ಈ ದೇಶದವರನ್ನು ಆತನ ಪಾದಕ್ಕೆ ಶೇರಿಸ ಬೇಕೆಂಬ ಪ್ರೀತಿಯೇ ಹೊರ್ತು ಮತ್ತ್ಯಾವ ಕಾರಣವಿಲ್ಲವೆಂದು ಅವರ ಜೀವಾಂತ್ಯಕಾಲದಲ್ಲಿ ಸಹ ಸ್ಪಷ್ಟವಾಗಿ ತೋರ ಬಂತು. ಅದರ ವಿಷಯ ಮುಂದೆ ಓದುವವರಿಗೆ ತಿಳಿಯ ಬರುವದು. ಹುಬ್ಬಳ್ಳಿಯಲ್ಲಿ ೨⅔ ವರುಷ ಇರುವದರೊಳಗೆ ಕನ್ನಡ ಭಾಷೆಯನ್ನು ಚನ್ನಾಗಿ ಕಲಿತು, ಸಭೆಯಲ್ಲಿಯೂ ಊರಲ್ಲಿಯೂ ಪ್ರಸಂಗ ಮಾಡಲಿಕ್ಕೆ ಆರಂಭ ಮಾಡಿದರು. ಇಷ್ಟರಲ್ಲಿ ಅವರಿಗೆ ಗುಳೇದಗುಡ್ಡಕ್ಕೆ ಹೋಗ ಬೇಕೆಂದು ಬಾಸಲಿನ ಹಿರಿಯರಿಂದ ಅಪ್ಪಣೆ ಬಂದ ಕಾರಣ ಗುಳೇದಗುಡ್ಡಕ್ಕೆ ಬಂದರು. ಆವಾಗ್ಯೆ ರೆ. ತುಂಮ್ ಧೊರೆಗಳು ಗುಳೇದಗುಡ್ಡದಲ್ಲಿ ಇದ್ದರು. ಒಂದೆರಡು ವರುಷ ಆದ ಮೇಲೆ ರೆ. ತುಂಮ್ ಧೊರೆಗಳು ಹಿರಿಯರ ಅಪ್ಪಣೆಯಿಂದ ಹುಬ್ಬಳ್ಳಿಗೆ ಹೋಗ ಬೇಕಾಯಿತು. ಆಗ ರೆ. ವೈಗ್ಲೆ ಧೊರೆಗಳು ಒಬ್ಬರೇ ಇದ್ದರು. ಆದರೂ ಆದಿತ್ಯವಾರದ ಎರಡು ಪ್ರಸಂಗಗಳನ್ನು ತಾವೇ ಮಾಡುವರು. ಮತ್ತು ಒಂದು ಹರದಾರಿ ದೂರ ಇರುವ ಕಟಕಿನಹಳ್ಳಿಗೆ ವಾರದಲ್ಲಿ ಎರಡು ಸರ್ತಿ ಹೋಗಿ, ಅಲ್ಲಿರುವ ಕ್ರೈಸ್ತರ ಸಂಗಡ ದೇವರ ವಾಕ್ಯ ಓದಿ, ಪ್ರಾರ್ಥನೆ ಮಾಡಿ ಬರುವರು. ಈ ಪ್ರಕಾರ ಎಲ್ಲಾ ಕೆಲಸ ತಾವೊಬ್ಬರೇ ಬೇಸರ ಪಡದೆ ನೋಡುತ್ತಿದ್ದರು. ಹಾಂಗು ಸಭೆಯ ವಿಷಯ ಯಾವಾಗಲು ಅವರ ಮುಖ್ಯ ಚಿಂತೆ ಕ್ರೈಸ್ತರು ವೊಳಗಿನ ಜೀವದಲ್ಲಿ ಬೆಳಿಯುವ ಹಾಗೆ ಯಾವ ಉಪಾಯ ಮಾಡ ಬೇಕೆಂಬದಾಗಿತ್ತು. ಇದರ ವಿಷಯ ಯಾವಾಗಲು ಮಾತಾಡುತ್ತಾ ಇದ್ದರು. ಮತ್ತು ಸಭೆಯಲ್ಲಿ ದಾವದೊಂದು ಮಾತು ಇದ್ದರೆ, ಬಹು ವಿವೇಕದಿಂದಲೂ ನಿಧಾನದಿಂದಲೂ ಅದನ್ನು ತೀರಿಸಿ, ಬುದ್ಧಿ ಹೇಳುವರು. ಅವರಲ್ಲಿ ಶಿಟ್ಟು ಅಂಬುವದು ಅಪರೂಪವೇ ಸರಿ. ಸಭೆಯವರಲ್ಲಿ ಯಾರಾದರೂ ಬುದ್ಧಿ ಇಲ್ಲದೆ ಮಾತಾಡಿದರೆ, ಅವರ ಸಂಗಡ ಸಮಾಧಾನದಿಂದ ಮಾತಾಡಿ, ಅವರನ್ನು ನಾಚಿಸುತ್ತಿದ್ದರು. ತಾನು ಸಭೆಯ ಬೋಧಕನೆಂದು ಸಭೆಯ ಮೇಲೆ ಅಧಿಕಾರ ನಡಿಸುವ ಕಾರಭಾರಿಯಂತೆ ಅಲ್ಲ, ಪ್ರೀತಿಯಿಂದಲೂ ತಾಳ್ಮೆಯಿಂದಲೂ ತಮ್ಮ ಕೆಲಸವನ್ನು ನಡಿಸುತ್ತಿದ್ದರು. ಮತ್ತು ಪೇಟೆಗೂ ಹಾಂಗು ಸಮೀಪದ ಹಳ್ಳಿಗೂ ದೇವರ ವಾಕ್ಯ ಪ್ರಸಂಗಿಸುವದಕ್ಕೆ ವಾರಕ್ಕೆ ೪ ಸರ್ತಿ ಉಪದೇಶಿಯನ್ನು ಕರಕೊಂಡು ಹೋಗುವರು. ಈ ಪ್ರಕಾರ ಒಬ್ಬರೇ ಇಷ್ಟೆಲ್ಲಾ ಕೆಲಸ ಬಿಡದೆ ನಡಿಸುತ್ತಿದ್ದರು. ಈ ಗುಳೇದಗುಡ್ಡದಲ್ಲಿ ಬಹು ಶೆಖೆ ಇದ್ದರೂ, ಅದಕ್ಕೆ ಅವರು ಝುಳಕದೆ, ಪೂರ್ಣ ಕ್ಷೇಮವಾಗಿದ್ದರು. ಅವರಿಗೆ ಅಸ್ವಸ್ಥವಾದದ್ದು ಒಂದಾವರ್ತಿಯಾದರೂ ನಾನು ನೋಡಲಿಲ್ಲ. ಸಭೆಯವರು ಸಹ ಅವರ ವಿಷಯ ಮಾತಾಡುತ್ತಿದ್ದದ್ದು ಏನಂದರೆ — ರೆ. ವೈಗ್ಲೆ ಧೊರೆಗಳು ಒಂದು ಸರ್ತಿಯಾದರೂ ತನಗೆ ಜೆಡ್ಡಾಗೆದೆ ಎಂಬುವದನ್ನು ಕೇಳಲಿಲ್ಲ; ಇವರ ಪ್ರಕೃತಿ ಎಂಥಾ ಘಟ್ಟಿಯುಳ್ಳದ್ದು, ಎಷ್ಟು ಬಿಸಲಿದ್ದರೂ ಏನೇನು ಝುಳಕುವದಿಲ್ಲವೆಂದು ಹೇಳುವರು. ಈ ಪ್ರಕಾರ ಅವರು ಒಬ್ಬರಾಗಿ ಇದ್ದು, ೧೮೭೪ನೇ ಇಸವಿಯಲ್ಲಿ ಹುಬ್ಬಳ್ಳಿಯಲ್ಲಿ ಲಗ್ನವಾಗಿ, ತಮ್ಮ ಪ್ರಿಯ ಧೊರೆಸಾನಿಯವರನ್ನು ಕರಕೊಂಡು, ಗುಳೇದಗುಡ್ಡಕ್ಕೆ ಬಂದರು. ಅವರ ವಿವಾಹದ ವರ್ತಮಾನ ಕೇಳುವಾಗ, ಮುಖ್ಯವಾಗಿ ಅವರಿಗೆ ನೇಮಕವಾದ ಧೊರೆಸಾನಿಯವರು ಎಲ್ಲಾ ಬಲ್ಲವರು ಇದ್ದದರಿಂದ ನಮ್ಮೆಲ್ಲರಿಗೆ ಬಹಳ ಸಂತೋಷವಿತ್ತು. ದಂಪತಿಗಳು ಬಹಳ ಪ್ರೀತಿಯಿಂದ ಏಕ

ಮನಸ್ಸುಳ್ಳವರಾಗಿದ್ದು, ಸಭೆಯನ್ನು ಚನ್ನಾಗಿ ಪರಾಂಬರಿಸಿ, ಸಭೆಯವರ ಸುಖ ದುಃಖವನ್ನು ಚಿಂತಿಸುವವರಾಗಿದ್ದರು. ದೇವರ ಕೃಪೆಯಿಂದ ಅವರಿಗೆ ಇಬ್ಬರು ಮಕ್ಕಳು ಹುಟ್ಟಿದರು. ಮೊದಲು ಹುಟ್ಟಿದ ಗಂಡು ಮಗುವು ಹೊರಗಿನ ರೂಪದಲ್ಲಿಯೂ ತರದಲ್ಲಿಯೂ ಕೇವಲ ವೈಗ್ಲೆ ಧೊರೆಗಳ ತದ್ರೂಪವೇ ಸರಿ. ಎರಡನೇದು ಹೆಣ್ಣು ಕೂಸು. ಈ ಇಬ್ಬರು ಮಕ್ಕಳಿಂದ ದಂಪತಿಗಳಿಗೆ ಬಹಳ ಸಂತೋಷವಿತ್ತು. ಈ ಗುಳೇವಗುಡ್ಡದಲ್ಲಿರುವ ಅನ್ಯ ಜನರು ಸಹ ಈ ದಂಪತಿಗಳನ್ನು ಬಹಳ ಪ್ರೀತಿ ಮಾಡಿದರು. ೧೮೭೫ನೇ ಇಸವಿಯಲ್ಲಿ ಈ ಊರಿನ ಪ್ರಮುಖರು ವೈಗ್ಲೆ ಧೊರೆಗಳನ್ನು ಮುನಿಸಿಪಾಲಿಟಿಯ ಪಂಚರಲ್ಲಿ ಮುಖ್ಯಸ್ಥರಾಗಿರ ಬೇಕೆಂದು ಬಹಳವಾಗಿ ಬೇಡಿ ಕೊಂಡದರಿಂದ ಒಪ್ಪಿ ಕೊಂಡು, ಆದರಲ್ಲಿ ಸಹ ಬಹಳ ವಿವೇಕದಿಂದ ಜಾಗ್ರತೆಯಿಂದ ಎಲ್ಲರಿಗೂ ಬಹಳ ಉಪಕಾರವಾಗುವಂತೆ ತಮ್ಮ ಕೈಲಾದ ಮಟ್ಟಿಗೂ ಕೆಲಸ ನಡಿಸಿ, ಸರಕಾರದ ಕಡೆಗೂ ಜನರ ಕಡೆಗೂ ಹಿತಸ್ಥರಾಗಿದ್ದರು. ಈ ಪ್ರಕಾರ ಸಭೆಯ ಕೆಲಸ, ಹಾಂಗು ಊರಿನ ಮುನಿಸಿಪಾಲಿಟಿ ಕೆಲಸ ನಡಿಸುವದರ ಹೊರ್ತು ಪ್ರಸಂಗಪ್ರಯಾಣ ಸಹ ಆಗಿಂದಾಗಲೇ ಮಾಡಿದರು. ಅವರು ಪ್ರಯಾಣಕ್ಕೆ ಹೋದರೆ, ಚಾಕ್ರಿಯವರಿಗಾಗಲಿ, ತಮ್ಮ ಸಂಗಡ ಇದ್ದ ಸಹಾಯಕರಿಗಾಗಲಿ, ಏನೇನು ಕಷ್ಟ ಆಗದಂತೆ ನೋಡಿ ಕೊಳ್ಳುವರು. ಪ್ರಯಾಣದಲ್ಲಿ ಬೇಗನೇ ಸಾಮಾನ ಸಿಗದೆ ತಡ ಆಗಿ, ತಮ್ಮ ಊಟದ ಹೊತ್ತು ಮೀರಿದರೂ, ಚಾಕ್ರಿಯವರ ಮೇಲೆ ಹರಿದು ಬೀಳಲಿಕ್ಕಿಲ್ಲ. ಸುಮ್ಮನೆ ಓದಿಕೋಂತಾ ಇಲ್ಲವೆ, ದಾರಿ ಆಯಾಸವಿದ್ದರೆ, ಮಂಚದ ಮೇಲೆ ಸುಮ್ಮನೆ ಮಲಗಿರುವರು. ಕಾಫಿ ತಯಾರಾದರೆ, ತಮ್ಮ ಸಂಗಡ ಇದ್ದ ಸಹಾಯಕನನ್ನು (ಉಪದೇಶಿ) ಕರೆದು—ನಿಮ್ಮ ಊಟ ತಡ ಆದೀತು, ಬನ್ನಿ, ಈಗ ಕಾಫಿ ಕುಡಿಯಿರಿ ಎಂದು, ತಮ್ಮ ಮೇಜಿನಲ್ಲಿ ತಯಾರ ಮಾಡಿ ಕೊಡುವರು. ಈ ಪ್ರಕಾರ ಎಲ್ಲಾ ಪರಾಂಬರಿಕೆ ತಕ್ಕೊಂಡು, ಎಲ್ಲರಿಗೂ ಸಂತೋಷವಾಗುವಂತೆ ಮಾಡುವರು. ಚಾಕ್ರಿಯವರು, ಎಷ್ಟೋ ಹೊತ್ತು ಆದರೂ ನಮ್ಮ ಧೊರೆ ಸುಮ್ಮಗೆ ಇದ್ಧಾರೆ ಎಂದು ನೋಡಿ, ತಾವೇ ಅಂತಃಕರಣ ಪಟ್ಟು, ಬೇಗ ಬೇಗನೇ ಓಡ್ಯಾಡಿ, ತಮ್ಮ ಕೆಲಸ ನಡಿಸುವರು. ಇದನ್ನೆಲ್ಲಾ ನಾನು ನೋಡಿ ಬರದಿದ್ಧೇನೆ. ಒಂದು ವೇಳೆ ಚಾಕ್ರಿಯವರು ಉಪದೇಶಿಯವರ ಅಡಿಗೆ ತಡ ಮಾಡಿದರೆ, ಧೊರೆಗಳು ಅಡಿಗೆಯವನಿಗೆ—ಅವರ ಊಟ ತಡ ಆಗ ಬಾರದು, ನಮ್ಮ ಊಟದ ಹೊತ್ತಿನಲ್ಲಿ ಅವರ ಊಟ ಸಹ ತಯಾರಾಗ ಬೇಕೆಂದು ಹೇಳುವರು. ಈ ಪ್ರಕಾರ ತಾವು, ತಮ್ಮ ಸಂಗಡ ಇದ್ದವರು ಸಮಾಧಾನದಿಂದ ಇರ ಬೇಕೆಂಬುವದು ಅವರ ಅಪೇಕ್ಷೆ. ಮತ್ತು ಅವರು ಒಬ್ಬರಿಗಾದರೂ ನೋಯಿಸುವ ಮಾತು ಆಡಲಿಕ್ಕಿಲ್ಲ: ಯಾರಾದರು ಒಂದಿಷ್ಟು ದುಬಾರಿ ಮಾತಾಡಿದರೆ, ಸುಮ್ಮನಿದ್ದು ತಾಳಿ ಕೊಳ್ಳುವರು. ಈ ವರುಷದ (೧೮೭೮ನೇ ಇಸವಿ) ಪಂಚಾಂಗದಲ್ಲಿ ಛಾಪಿಸಿದ ಪ್ರಕಾರ ಚಿಂತಾಮಣಿಯಂತ್ರವು "ತಾಳ್ಮೆ (ಸಹನವು)" ಎಂಬುವದೇ ಈ ಬೋಧಕರಲ್ಲಿ ವಿಶೇಷವಾಗಿ ಕಂಡು ಬಂತು. ಇದರ ವಿಷಯ ಮುಂದೆ ಓದುವವರಿಗೆ ತಿಳಿಯ ಬರುವದು. ೧೮೭೬ನೇ ಇಸವಿ ಅಗೊಸ್ತು ತಿಂಗಳಿನಲ್ಲಿ ಮಾಡಿದ ಪ್ರಸಂಗಪ್ರಯಾಣವು ಅವರ ಕಡೇ ಪ್ರಸಂಗಪ್ರಯಾಣವಾಗಿತ್ತು. ೧೮೭೬ನೇ ಇಸವಿಯಲ್ಲಿ ದುರ್ಭಿಕ್ಷವೆಂಬ ರಾಕ್ಷಸನ ಸ್ವಾರಿ ಜನರಿಗೆ ತಿಳಿಯದ ಹಾಗೆ ನಮ್ಮ ದೇಶದ ಮೇಲೆ ಬರಲಾರಂಭವಾಯಿತು. ಆಗ ಈ ಪ್ರಿಯ ಬೋಧಕರು ಮುಂದಿನ ವಿಷಯ ಆಲೋಚನೆ ಮಾಡಿ, ಸಭೆಯವರಿಗೆ ದುರ್ಭಿಕ್ಷದಿಂದ ಬರುವ ಕಷ್ಟವನ್ನು ತಮ್ಮ ಕೈಲಾದ ಮಟ್ಟಿಗೂ ಪರಿಹರಿಸುವದಕ್ಕಾಗಿ, ಜೋಳ ಮುಂತಾದ ಧಾನ್ಯವನ್ನು ಕೊಂಡಿಟ್ಟರು. ಊರಲ್ಲಿ ಆರು ಶೇರು ಮಾರುವಾಗ ನಮ್ಮ ಕ್ರೈಸ್ತರಿಗೆ ೧೮ ಶೇರು ಸಿಕ್ಕವು. ಇದರಿಂದ ಸಭೆಯವರಿಗೆ ಬಹಳ ಸಹಾಯುವಾಯಿತು. ಹಾಂಗು ಊರಲ್ಲಿರುವ ಬಡ ಜನರ ದೆಶೆಯಿಂದ ಚಿಂತಿಸಿ, ಊರಲ್ಲಿರುವ ಸಾವಕಾರ ಸಂಭಾವಿತ ಜನರನ್ನು ಕೂಡಿಸಿ, ಅವರವರ ಯೋಗ್ಯ

ತೆಯ ಪ್ರಕಾರ ಪಟ್ಟಿ ಹಾಕಿದರು. ಇದರಲ್ಲಿ ಕೆಲವು ಕ್ರೈಸ್ತರು ಸಹ ಹಣ ಕೊಟ್ಟರು. ಸರಕಾರದವರು ಬಡ ಜನರ ಸಹಾಯಕ್ಕಾಗಿ ೩೦೦ ರೂಪಾಯಿ ಕಳುಹಿಸಿದರು. ಹೀಗೆ ಜನರು ಕೊಟ್ಟದ್ದೂ ಸರಕಾರದ್ದೂ ಕೂಡಿ ೧೫ ನೂರು ರುಪಾಯಿ ಆಯಿತು. ಇದರಿಂದ ಜೋಳ ಕೊಂಡು, ತಮ್ಮ ಬಂಗಲೆಯ ವರಾಂಡದಲ್ಲಿ ದಿನಂಪ್ರತಿ ನೇಮಿಸಿದ ಹೊತ್ತಿನಲ್ಲಿ ಕೂಡಿ ಬರುವ ಜನರಿಗೆ ದರ ಒಂದು ತಲೆಗೆ ಶೇರಿನಂತೆ ಕೊಡುವ ಹಾಗೆ ಟರಾವು ಮಾಡಿ, ೫-೬ ತಿಂಗಳು ನಡಿಸಿದರು. ಇಷ್ಟರಲ್ಲಿ ಈ ದುರ್ಭಿಕ್ಷವೆಂಬ ರಾಕ್ಷಸನು ಜನರಿಗೆ ಬಹಳ ಕಷ್ಟ ಕೊಟ್ಟು, ಅನೇಕರನ್ನು ದಿವಾಳಿ ತೆಗಿಸಿ, ಅನೇಕರನ್ನು ಹಾಳು ಮಾಡಿ, ಅನೇಕರನ್ನು ನುಂಗಿ ಬಿಟ್ಟನು. ಈ ಪ್ರಕಾರ ದೇಶವು ಗೋಳಾಟದಿಂದ ತುಂಬಾಯಿತು. ಇಂಥಾ ಸಮಯದಲ್ಲಿ ಸರಕಾರದವರು ನಮ್ಮ ಊರಲ್ಲಿ ಹಾಂಗು ಬೇರೆ ಸ್ಥಳದಲ್ಲಿ ಅನ್ನಕ್ಷೇತ್ರ ಇಟ್ಟರು. ನಮ್ಮ ಊರಲ್ಲಿ ಇಟ್ಟ ಅನ್ನಕ್ಷೇತ್ರದ ಕೆಲಸವು ನೆಟ್ಟಗೆ ನಡಿಯುವ ಹಾಗೆ ರೆ. ವೈಗ್ಲೆ ಧೊರೆಗಳು ಮೇಲೆ ನೋಡುವವರಾಗಿದ್ದರು. ೧೮೭೭ನೇ ಮಾರ್ಚಿ ತಿಂಗಳಿನಿಂದ ಸುತ್ತಮುತ್ತ ಇರುವ (ಮುಷ್ಟಿಗೆರಿ, ನಂದಿಕೇಶ್ವರ, ಕಟಕಿನಹಳ್ಳಿ, ಕೊಟ್ನಹಳ್ಳಿ, ಲಾದಗುಂದಿ, ಆಸಂಗಿ ಮುಂತಾದ) ಹಳ್ಳಿಯ ಜನರು ಕ್ರೈಸ್ತರಾಗಲಿಕ್ಕೆ ಆರಂಭ ಮಾಡಿದರು. ಈ ಹಳ್ಳಿಗಳಿಂದ ಬರುವ ಜನರನ್ನು ವಿಚಾರಿಸಿ ನೋಡಿ, ತಕ್ಕವರನ್ನು ಕರಕೊಳ್ಳಲಿಕ್ಕೆ ಆರಂಭ ಮಾಡಿದರು. ಈ ಪ್ರಕಾರ ಹೊರಗಿನ ಒಳಗಿನ ಕೆಲಸದಿಂದ ಊಟಕ್ಕೂ ನಿದ್ರೆಗೂ ಫುರುಸತ್ತು ಸಮನಾಗಿ ಸಿಗದೆ ಹೋಯಿತು. ಬಂದಂಥಾ ಜನರ ದೆಶೆಯಿಂದ ಅವರಿಗೆ ಇದ್ದ ಕೆಲಸ ಎಷ್ಟೆಂದು ಬರಿಯ ಬೇಕಾದರೆ, ಪತ್ರ ಬಹಳ ವಿಸ್ತಾರವಾದೀತೆಂಬ ಭಯದಿಂದ ಸಂಕ್ಷೇಪವಾಗಿ ಹೇಳಿ ಮುಗಿಸುತ್ತೇನೆ. ೧೮೭೭ನೇ ಇಸವಿ ಜೂನ್ ತಿಂಗಳಿನಲ್ಲಿ ಅವರಿಗೆ ೮-೯ ದಿವಸ ಜ್ವರ ಬಂತು; ಆದರೂ ಕೆಲಸ ನಡಿಸುವದೂ, ಜನರ ಸಂಗಡ ಕಟಪಿಟಿ ಬಿಡುವದೂ ಬಿಡಲೇ ಇಲ್ಲ. ನಿರ್ವಾಹವಿಲ್ಲದೆ ೩-೪ ದಿವಸ ಅಸ್ವಸ್ಥದ ದೆಶೆಯಿಂದ ಒಳಗೆ ಇರುವದು ಅವರಿಗೆ ಬಹಳ ಕಷ್ಟವಾಗಿತ್ತು. ಯಾಕಂದರೆ ತನ್ನ ದೇಹದ ಪರಾಂಬರಿಕೆಗಿಂತ ಜನರ ಆತ್ಮದ, ಹಾಂಗು ಪ್ರಪಂಚದ ಪರಾಂಬರಿಕೆಯ ಚಿಂತೆಯು ಅವರಿಗೆ ಬಹಳ ಹತ್ತಿತ್ತು. ದೇವರ ದಯದಿಂದ ಜ್ವರವು ಹೋದ ಬಳಿಕ ತಮ್ಮ ಕೆಲಸವನ್ನು ೫ ತಿಂಗಳ ತನಕ ಅಂದರೆ ದಶಂಬರ ತಿಂಗಳಿನ ತನಕ ಬಹಳವಾಗಿ ನಡಿಸಿದರು. ಆಗ್ಯೆ ರೆ. ಗ್ರೊಸ್‌ಮಾನ್ ಧೊರೆಗಳು ಮುಷ್ಟಿಗೇರಿಗೆ ಹೋಗಿ, ಅಲ್ಲಿಯ ಕೆಲಸ ನಡಿಯುವ ಹಾಗೆ ಅಲ್ಲಿಯೇ ಇದ್ದರು. ರೆ. ವೈಗ್ಲೆ ಧೊರೆಗಳ ಸಹಾಯಕ್ಕಾಗಿ ಹೊನ್ನಾವರದಿಂದ ರೆ. ಗೆಂಗ್‌ನಾಗೆಲ್ ಧೊರೆಗಳು ಬಂದರು. ಕೆಲವು ತಿಂಗಳು ಕೆಲಸ ನಡಿಸಿ ಅವರು ತಿರಿಗಿ ಹೋಗ ಬೇಕಾಯಿತು. ಆ ಮೇಲೆ ಗ್ರೊಸ್‌ಮಾನ್ ಧೊರೆಗಳು ತಮ್ಮ ಲಗ್ನದ ದೆಶೆಯಿಂದ ಧಾರವಾಡಕ್ಕೆ ಹೋದರು. ಆದ ಕಾರಣ ಎಲ್ಲಾ ಕೆಲಸ ರೆ. ವೈಗ್ಲೆ ಧೊರೆಗಳ ಮೇಲೆಯೇ ಬಿತ್ತು. ಆ ಸಮಯದಲ್ಲಿ ಗುಳೇದಗುಡ್ಡದಲ್ಲಿ ಒಂದು ತರದ ಕೆಟ್ಟ ಜ್ವರವು ಊರಲ್ಲಿ ಆರಂಭವಾಯಿತು. ಅದು ನಮ್ಮ ಸಭೆಯಲ್ಲಿ ಕೆಲವರಿಗೆ ಬಂತು. ದಶಂಬರ ೬ನೇ ತಾರೀಕು ಬೃಹಸ್ಪತಿವಾರ ದಿವಸ ರೆ. ವೈಗ್ಲೆ ಧೊರೆಗಳಿಗೆ ಅದೇ ತರದ ಜ್ವರವು ಬರಲಿಕ್ಕೆ ಶುರುವಾಯಿತು. ತಾರೀಕು ೭ನೇ ದಶಂಬರದ ತನಕ ಸಾಧಾರಣ ಇತ್ತು. ೮ನೇ ತಾರೀಕಿನಲ್ಲಿ ತಮಗೆ ಸ್ವಲ್ಪ ಜ್ವರವಿರುವಾಗ ಅದೇ ತರದ ಜ್ವರದಲ್ಲಿ ಬಿದ್ದವರನ್ನು ನೋಡಲಿಕ್ಕೆ ಹೋಗಿದ್ದರು. ತಾರೀಕು ೯ನೇ ಆದಿತ್ಯವಾರ ಜ್ವರ ಹೆಚ್ಚು ಇದ್ದ ಕಾರಣ ಆಯಾಸ ಮುಂಚಿಗಿಂತ ಹೆಚ್ಚು ಇತ್ತು. ಆದರೂ ಮೊದಲನೇ ಪ್ರಸಂಗ ಆ ದಿವಸ ಮಾಡಿದರು. ಅವರು ಆ ದಿವಸ ಓದಿದ ದೇವರ ವಾಕ್ಯದ ಪರಿಛೇದ ಲೂಕ. ೨೧, ೨೫ — ೩೬ ತನಕ ಓದಿ, ಆ ಪ್ರಸಂಗದಲ್ಲಿ ಎಲ್ಲಾ ಸಭೆಯವರಿಗೆ ಹೇಳಿದ್ದು: ದೇವರು ಇಷ್ಟರೊಳಗೆ ನಮ್ಮೊಳಗಿಂದ ಅವರನ್ನು ಇವರನ್ನು ಕರಕೊಂಡು ಹೋದನು. ಮುಂದೆ ಯಾರನ್ನು ಕರೆಯುತ್ತಾನೋ ಏನೋ? ಆದರ ದೆಶೆಯಿಂದ ನಾವೆಲ್ಲರು ಆತನ ಕರೆಯುವಿಕೆಗೆ

ತಯಾರಾಗಿರುವ ಹಾಗೆ ಎಚ್ಚರಿಕೆಯಾಗಿರ ಬೇಕೆಂದು ಹಳೆಬರನ್ನು ಹಾಂಗು ಹೊಸದಾಗಿ ಬಂದವರನ್ನು ಎಚ್ಚರಿಸಿದರು. ಅನಂತರ ನನ್ನ ಹೆಣ್ಣು ಕೂಸಿಗೆ ಸ್ನಾನ ಕೊಟ್ಟರು. ಈ ದಿವಸದ ಕರ್ತನ ಸೇವೆಯ ಕೆಲಸವು ಈ ಬೋಧಕರ ಕಡೇ ಕೆಲಸವಾಗಿತ್ತು. ಪ್ರಾರ್ಥನೆ ಆದ ಬಳಿಕ ತಮ್ಮ ಮೇಲಾಂತಸ್ತಿಗೆ ಹೋಗಿ, ಬಹಳ ಆಯಾಸವಿದ್ದ ಕಾರಣ, ಆದಿತ್ಯವಾರದ ಉದ್ದಂಗಿ ತೆಗಿಯದೆ, ಹಾಂಗೆ ಮಂಚದ ಮೇಲೆ ಮಲಗಿದರು. ಎರಡು ತಾಸು ನಿದ್ರೆ ಹತ್ತಿತು. ಅನಂತರ ಎಚ್ಚರವಾದ ಬಳಿಕ ಅವರ ಆಯಾಸ ಏನೂ ಕಡಿಮೆ ಆಗಿರಲಿಲ್ಲ. ಜ್ವರವು ಹೆಚ್ಚಾಯಿತು. ಈ ದಿವಸದಿಂದ ಮುಂದಿನ ವಾರದಲ್ಲಿ ಜ್ವರ ಹೆಚ್ಚಾಗುತ್ತಾ ಹೋಯಿತು. ತಾರೀಕು ೧೬ನೇ ಆದಿತ್ಯವಾರ ಮೂರು ತಾಸು ರಾತ್ರಿಗೆ ಶ್ವಾಸ ಕೂಡಿತು. ಅದರಿಂದ ಅವರಿಗೆ ಬಹಳ ಆಯಾಸವಾಯಿತು. ಆಗ ನನ್ನನ್ನು ಕರೆಸಿ, ಕುರ್ಚಿಯ ಮೇಲೆ ಕೂದ್ರ ಹೇಳಿ, ಪ್ರೀತಿಯ ಸ್ವರದಿಂದ—ಸಾಲವೋನಪ್ಪಾ! ಈಗ ನನಗೆ ಜ್ವರ ಹೆಚ್ಚಾಯಿತು. ಹಾಂಗು ದಮ್ಮು ಕೂಡಿತು. ಇದರಿಂದ ನನಗೆ ಬಹಳ ಕಷ್ಟ ಆಗುತ್ತದೆ. ಇಂಥಾ ಕಷ್ಟದಲ್ಲಿ ಬಿದ್ದ ಮೇಲೆ ನನ್ನ ಕೆಲಸವೇನು? ಕೈ ಕಾಲುಗಳನ್ನು ಅತ್ತಲಾಗ ಇತ್ತಲಾಗ ಹಾಕುವದೇ ಸರಿ, ಬೇರೇನು ಇಲ್ಲ. ಇದು ಈ ವರುಷದ ಕೆಲಸದ ಫಲವೇ, ಅಂದರು. ಮತ್ತು—ಈ ದಮ್ಮು ಹೆಚ್ಚಾದರೆ, ನಾನು ಬದುಕುವದಿಲ್ಲವೆಂದು ನನಗೆ ಕಾಣಿಸುತ್ತದೆ. ಒಂದು ವೇಳೆ ನಾನು ತೀರಿ ಕೊಂಡರೆ, ಮುಂಚೆ ಬಂದ ಹಳೇ ಕ್ರೈಸ್ತರಿಗೆ ಹೇಳ ಬೇಕಾದದ್ದೇನಂದರೆ—ಅವರು ಯೇಸು ಕ್ರಿಸ್ತನಲ್ಲಿ ಇಡುವ ವಿಶ್ವಾಸದಲ್ಲಿಯೂ ಪ್ರೀತಿಯಲ್ಲಿಯೂ ಹೆಚ್ಚು ಹೆಚ್ಚಾಗಿ ಬೆಳದು, ಹೊಸದಾಗಿ ಬಂದವರಿಗೆ ಮಾದ್ರಿಯಾಗಿರ ಬೇಕೆಂದು ಹೇಳಿರಿ. ಹಾಂಗು ಹೊಸದಾಗಿ ಬಂದವರಿಗೆ ಅವರು ಯೇಸು ಕ್ರಿಸ್ತನನ್ನು ಪೂರ್ಣವಾಗಿ ತಿಳಿದು ಕೊಂಡು, ಆತನಲ್ಲಿಡುವ ವಿಶ್ವಾಸದಲ್ಲಿ ಸ್ಥಿರವಾಗಿದ್ದು, ಅಂತ್ಯದ ಪರ್ಯಂತರ ಆತನಲ್ಲಿ ನೆಲೆಗೊಳ್ಳ ಬೇಕು. ಹಾಂಗು ಪರಲೋಕದಲ್ಲಿ ಅವರೆಲ್ಲರನ್ನು ನಾನು ನೋಡುವದಾದರೆ, ನನಗೆ ಬಹಳ ಸಂತೋಷವಾಗುವದೆಂದು ಹೇಳಿ, ಎಲ್ಲರಿಗೆ ನನ್ನ ಸಲಾಮ್ ತಿಳಿಸಿರಿ—ಎಂದು ಹೇಳಿದರು. ಈ ಮಾತುಗಳನ್ನೆಲ್ಲಾ ಹೇಳುವಾಗ ಅಜಮಾಸು ಆರು ತಾಸು ರಾತ್ರಿ ಆಗುತ್ತಾ ಬಂತು. ಈ ಮಾತುಗಳನ್ನು ಕೇಳುವಾಗ ನನಗೆ ಬಹಳ ದುಃಖವಾಯಿತು; ಆದರೆ ಅವರಲ್ಲಿರುವ ಬಲವಾದ ವಿಶ್ವಾಸವನ್ನು ನೋಡುವಾಗ ನನ್ನ ಹೃದಯಕ್ಕೆ ಒಳ್ಳೇ ಬೋಧನೆಯುಂಟಾಯಿತು. ಆ ಸಮಯದಲ್ಲಿ ಅವರಿಗೆ ಆಯಾಸವಿದ್ದರೂ, ನನ್ನ ಅಕ್ಷೇಮದ ಪ್ರಕೃತಿಯನ್ನು ನೆನಪು ಮಾಡಿಕೊಂಡು—ಸಾಲವೋನಪ್ಪಾ, ನಿಮ್ಮ ಮೈಯಲ್ಲಿ ಸಹಾ ಪೂರ್ಣ ಕ್ಷೇಮವಿಲ್ಲ; ಈಗ ಬಹಳ ರಾತ್ರಿ ಆಯಿತು. ಮಲಗಲಿಕ್ಕೆ ಮನೆಗೆ ಹೋಗಿರಿ; ಆದರೆ ಹೊರಗೆ ಬಹಳ ತಂಪು ಇದ್ದೀತು; ಒಂದು ಕಂಬಳಿ ತಕ್ಕೊಂಡು ಹೋಗಿರಿ ಎಂದು ಹೇಳಿದರು. ಆಗ ನಾನು ಇನ್ನೂ ಸ್ವಲ್ಪ ಹೊತ್ತು ಕೂತೆನು. ಆದರೆ ಅವರು ನನ್ನ ದೆಸೆಯಿಂದ ಚಿಂತೆ ಮಾಡಿ, ಮತ್ತೊಂದು ಸರ್ತಿ ಹೇಳಿದರು. ಆಗ ನಾನು ಮನೆಗೆ ಬಂದೆನು; ಆದರೆ ನನ್ನ ಮನಸ್ಸಿನಲ್ಲಿ ಬಹಳ ಚಿಂತೆ ಇದ್ದದರಿಂದ ನಿದ್ದೆ ಬರಲಿಲ್ಲಾ. ಸೋಮವಾರ ನಸಿಗ್ಗೆ ಅವರ ಹತ್ತರ ಹೋದೆನು. ಆಗ ಅವರಿಗೆ ಬಹಳ ಆಯಾಸವಿತ್ತು. ಮತ್ತು ತಮ್ಮ ಕುಟುಂಬದವರ ಸಂಗಡ ಎಲ್ಲಾದರ ವಿಷಯ ಮಾತಾಡಿ, ಅವರಿಗೆ ಸಹ ಕಡೇ ಮಾತು ಹೇಳಿದ್ದರು. ಹಾಂಗು ರೆ. ಗ್ರೊಸ್‌ಮಾನ್ ಸಾಹೇಬರು ಊರಿನಿಂದ ಇನ್ನು ಬಾರದ ಕಾರಣ ಅವರ ದಾರಿ ಬಹಳ ನೋಡಿದರು. ಮತ್ತು ಯಾವಾಗ ಬರುತ್ತಾರೆಂದು ಆಗಿಂದಾಗಲೇ ಕೇಳುತ್ತಾ ಇದ್ದರು. ಸಭೆಯವರ ಪೈಕಿ ಕೆಲವರು ಅವರ ಹತ್ತರ ಹಗಲು ರಾತ್ರಿ ಯಾವಾಗಲು ಇರುತ್ತಿದ್ದರು. ಮಂಗಳವಾರ ಸಂಜೆಗೆ ರೆ. ಗ್ರೊಸ್‌ಮಾನ್ ಧೊರೆಗಳು ತಮ್ಮ ಧೊರೆಸಾನಿಯವರ ಸಹಿತ ಬೆಟ್ಟಗೇರಿಯಿಂದ ಬಂದರು. ಬುಧವಾರ ಮುಂಜಾನೆ ರೆ. ಗ್ರೊಸ್‌ಮಾನ್ ಧೊರೆಗಳು ರೆ. ವೈಗ್ಲೆ ಧೊರೆಗಳ ಹತ್ತರ ಬಂದು, ಮಾತಾಡಿಸಿದರು. ಆಗ ಅವರ ಸಂಗಡ ಸ್ವಲ್ಪ ಮಾ

ತಾಡಿದರು. ಯಾಕಂದರೆ ಆಯಾಸವು ಬಹಳವಿತ್ತು. ಈ ರೋಗ ಹೆಚ್ಚಾಗುತ್ತಾ ಬುಧವಾರ ಮಧ್ಯ ರಾತ್ರಿಗೆ ದಮ್ಮು ಸಹ ಜಾಸ್ತಿ ಆಯಿತು. ಅಲ್ಲಿಂದ ಕೈಕಾಲಿನ ನರಗಳು ಜಗ್ಗಲಿಕ್ಕೆ ಹತ್ತಿದವು. ಆದರೂ ಅವರಿಗೆ ಎಚ್ಚರಿಕೆ ಪೂರ್ಣ ಇತ್ತು. ಅದರಿಂದ ತಮ್ಮ ಮನಸ್ಸಿನಲ್ಲಿ ಪ್ರಾರ್ಥಿಸಿ, ಬಾಯಿಂದ ಸಹ—ದೇವರೇ! ಯೇಸುವೇ! ಎಂಬ ಶಬ್ದ ಉಚ್ಚರಿಸಿ, ಬೃಹಸ್ಪತಿವಾರ ಬೆಳಗಾಗಲಿಕ್ಕೆ ೨ ತಾಸು ರಾತ್ರಿ ಇರುವಾಗ ವಿಶ್ವಾಸದಿಂದ ಪ್ರಾಣ ಬಿಟ್ಟರು. ಈ ಪ್ರಿಯ ಬೋಧಕರ ಮರಣದಿಂದ ಅವರ ಕುಟುಂಬಕ್ಕೆ ಬಹಳ ದುಃಖವಾಯಿತು, ಹಾಂಗು ಸಭೆಯವರೆಲ್ಲರಿಗೂ ಸಹ ದುಃಖವಾಯಿತು. ತೀರಿಕೊಂಡು ಸ್ವಲ್ಪ ಹೊತ್ತು ಆದ ಬಳಿಕ ಪ್ರೇತಸ್ನಾನ ಮಾಡಿಸಿ, ಕರೇ ವಸ್ತ್ರಗಳನ್ನು ತೊಡಿಸಿ, ಬೇರೆ ಮಂಚದ ಮೇಲೆ ಮಲಗಿಸಿದಾಗ, ಮೋರೆಯ ಮೇಲೆ ಸುಕಾಂತಿಯು ಪ್ರಕಾಶಿಸಿತು. ಮುಂಜಾನೆ ಊರಲ್ಲೆಲ್ಲಾ ಸುದ್ದಿಯಾದಾಗ, ಸಾವಕಾರ, ಶೆಟ್ಟಿ, ಬ್ರಾಹ್ಮಣ ಮುಂತಾದ ದೊಡ್ಡ ಸಣ್ಣ ಜನರೆಲ್ಲರು ನೋಡಲಿಕ್ಕೆ ಬಂದು, ಎಂಥಾ ದಯಾಳು ಸಮಾಧಾನವುಳ್ಳ ಧೊರೆಯು ತಿರಿಕೊಂಡರಪ್ಪಾ! ಎಂದು ಚಿಂತೆ ಮಾಡಿದರು. ಆ ದಿವಸದಲ್ಲಿ ಬಂಗ್ಲೆಯ ವಠಾರವು ಜನರಿಂದ ತುಂಬಿತ್ತು. ಮತ್ತು ನೋಡಲಿಕ್ಕೆ ಬಾರದ ಗಂಡಸರೂ ಹೆಣ್ಣುಮಕ್ಕಳೂ ಊರಲ್ಲಿ ಒಬ್ಬರಾದರು ಉಳಿದಿರಲಿಕ್ಕಿಲ್ಲ. ಹಾಂಗು ಸುತ್ತಮುತ್ತಲಿನ ಹಳ್ಳಿಯ ಜನರು ಸಹ ನೋಡಲಿಕ್ಕೆ ಬಂದರು. ಆ ನೋಡಲಿಕ್ಕೆ ಬಂದ ಜನರಲ್ಲಿ ಒಬ್ಬ ಮುದುಕನು ಸಾಹೇಬರನ್ನು ಮಲಗಿಸಿದ ಮಂಚದ ಹತ್ತರ ಕೋಲೂರಿಕೊಂಡು ನಿಂತು, ನಮಸ್ಕಾರ ಮಾಡಿ—ನಮ್ಮಪ್ಪಾ! ನನ್ನಂಥ ಮುದುಕನು ಸಾಯ ಬಾರದೇ? ನಿನ್ನನ್ನು ದೇವರು ಇಷ್ಟು ಬೇಗನೆ ಯಾಕೆ ಕರೆದ? ಆತನಿಗೆ ನೀನು ಬೇಕಾಗಿದ್ಧೀ. ಅದರ ದೆಶೆಯಿಂದ ನಿನ್ನನ್ನು ಕರಕೊಂಡು ಹೋದನು ಎಂದು ಹೇಳಿ, ಇನ್ನು ಸ್ವಲ್ಪ ಹೊತ್ತು ನಿಂತು, ಅವರ ಧೊರೆಸಾನಿ ಮಕ್ಕಳನ್ನು ನೋಡಿ, ಮನೆಗೆ ಹೋದನು. ಬಂದಂಥ ಜನರಲ್ಲಿ ಕಣ್ಣೀರು ಸುರಿಸಿದವರು ಬಹುತೇಕ ಜನರು. ಈ ಪ್ರಕಾರ ಜನರ ಹೋಗೋಣ ಬರೋಣ ಮುಂಜಾನೆಯಿಂದ ಹೊತ್ತು ಮುಳುಗುವ ತನಕಾದರೂ ಇದ್ದೇ ಇತ್ತು. ಅಷ್ಟರಲ್ಲಿ ಚಂದ್ರನು ನಕ್ಷತ್ರಗಳೊಡನೆ ಆಕಾಶದಲ್ಲಿ ಶೋಭಾಯಮಾನವಾಗಿ ಪ್ರಕಾಶಿಸಿದನು. ಮತ್ತು ಸಾಹೇಬರ ಉತ್ತರಕ್ರಿಯೆ ತೀರಿಸಿ ಹೋಗ ಬೇಕೆಂದು ಕಾದು ಕೊಂಡಿದ್ದ ಜನರು ನಮ್ಮ ಕಂಪೌಂಡಿನಲ್ಲಿ ತುಂಬಿದರು. ಆಗ ಬಂಗ್ಲೆಯ ಮೇಲಂತಸ್ತಿನಿಂದ ಕೆಳಗೆ ಶವದ ಪೆಟ್ಟಿಗೆಯನ್ನು ತರುವಾಗ, ಅನಾಥ ಶಾಲೆಯ ಹುಡುಗರಲ್ಲಿ ಕೆಲವರು ಎಡ ಬಲಕ್ಕೆ ಮೋಂಬತ್ತಿಗಳನ್ನೂ, ಕೆಲವರು ಮುಂದೆ ಲಾಂಟನುಗಳನ್ನೂ ಹಿಡಿದು ಕೊಂಡು ನಡಿಯುತ್ತಾ ಇರುವಾಗ, ಆ ಪೆಟ್ಟಿಗೆಯ ಹಿಂದೆ ಅವರ ಧೊರೆಸಾನಿಯವರು, ಹಾಂಗು ರೆ. ಗ್ರೊಸ್‍ಮಾನ್‍ಧೊರೆ ಧೊರೆಸಾನಿಯವರು, ಇವರ ಹಿಂದೆ ಸಭೆಯವರೆಲ್ಲರು, ಈ ಪ್ರಕಾರ ಕ್ರಮೇಣವಾಗಿ ಸಮಾಧಿಗೆ ಹೋಗಿ, ಪೆಟ್ಟಿಗೆಯನ್ನು ಇಳಿಸಿ, ಮೊದಲು ೧೫೭ನೇ ಗೀತವನ್ನು ಹಾಡಿ, ಆ ಮೇಲೆ ನಾನು ಪ್ರಕಟ. ೧೪, ೧೩ ವಚನದಲ್ಲಿ ಓದಿ, ಸ್ವಲ್ಪ ಹೊತ್ತು ಮಾತಾಡಿ, ಕಡೆಗೆ ಅವರ ಜನ್ಮಚರಿತ್ರೆ ಸಂಕ್ಷೇಪವಾಗಿ ಹೇಳಿ ತೀರಿಸಿದ ಬಳಿಕ ರೆ. ಗ್ರೊಸ್‍ಮಾನ್ ಸಾಹೇಬರು ಉತ್ತರಕ್ರಿಯೆ ತೀರಿಸಿದರು. ಆ ಮೇಲೆ ಯಾವತ್ತು ಜನರು ತಮ್ಮ ತಮ್ಮ ಮನೆಗಳಿಗೆ ಹೋದರು.

ಈ ನಮ್ಮ ಪ್ರಿಯ ಬೋಧಕರ ಮರಣದಿಂದ ಸಭೆಯವರಿಗೂ ಹೊರಗಿನವರಿಗೂ ಬಹಳ ದುಃಖವಾಯಿತು. ಕರ್ತನು ತನ್ನ ಸಭೆಯೆಂಬ ತೋಟದಲ್ಲಿ ಆಸಕ್ತಿಯಿಂದ ಕೆಲಸ ನಡಿಸುತ್ತಿದ್ದ ತನ್ನ ಸೇವಕನನ್ನು ಒಮ್ಮಿಂದೊಮ್ಮೆ ಕೈಯೊಳಗಿನ ಹಣ್ಣನ್ನು ಹಾರಿ ಬಡಿದಂತೆ, ನಮ್ಮ ಮಧ್ಯದೊಳಗಿಂದ ತೆಗದದ್ದು ಆಶ್ಚರ್ಯವೇ ಸರಿ. ಆದರೂ ಆತನ ಚಿತ್ತಕ್ಕೆ ಇದು ಸರಿಯೆಂದು ತೋಚಿತು. ಒಳ್ಳೇದು, ತಮ್ಮ ಪತಿಯ ಮರಣದಲ್ಲಿಯೂ, ಮರಣದನಂತರ ದೇವರ ಚಿತ್ತಕ್ಕೆ ತಮ್ಮ ಎಲ್ಲಾ ಮಾತುಗಳನ್ನು ಒಪ್ಪಿಸಿ, ವಿಶ್ವಾಸದಲ್ಲಿಯೂ ನಿತ್ಯಜೀವದ ನಿರೀಕ್ಷೆಯಲ್ಲಿಯೂ ನಂಬಿಕೆಯುಳ್ಳವರಾಗಿ, ಕರ್ತನ ಸೇವೆ

ಯಲ್ಲಿ ತತ್ಪರರಾಗಿರುವ ಅವರ ಧೊರೆಸಾನಿಯವರನ್ನೂ, ಹಾಂಗು ಅವರ ಚಿಕ್ಕ ಮಕ್ಕಳನ್ನೂ ಕರ್ತನು ಈ ಪರದೇಶದಲ್ಲಿ ತನ್ನ ಕೃಪಾತಿಶಯದಿಂದ ಕಾಪಾಡಿ, ಅವರಿಗೆ ಯಾವಾಗಲು ಸಂತೋಷ ಇರುವಂತೆ ಮಾಡ ಬೇಕೆಂದು ನಮ್ಮ ಪ್ರಾರ್ಥನಾ ಆದೆ *S. B.*

ಬಾಸಲ್ ಮಿಶ್ಶನ ರಿಪೋರ್ಟ್: ೧೮೭೭ನೇ ವರುಷಕ್ಕೆ.

(22ನೇ ಪಾನಿನಿಂದ ಮುಂದೆ.)

ಅಫ್ರಿಕ.—೧೮೨೮ನೇ ವರುಷದಲ್ಲಿ ನಮ್ಮ ಸಂಘದವರು ಪಶ್ಚಿಮ ಅಫ್ರಿಕದ ಗೋಲ್ಡ್‌ಕೋಸ್ಟಿನಲ್ಲಿ ಮಿಶ್ಶನ ಕೆಲಸ ಪ್ರಾರಂಭಿಸಿದರು. ಅಲ್ಲಿಗೆ ಕಳುಹಿಸಿ ಕೊಂಡ ಮಿಶ್ಶನೆರಿಗಳು ಅನೇಕರು ಹವೆ ತಾಳಲಾರದೆ ಆಹುತಿಯಾದರೂ, ಧೈರ್ಯಬಿಡದೆ ಕೆಲಸ ಮುಂದೆ ಸಾಗಿಸಿ, ಏಳು ಶೀಮೆಗಳಲ್ಲಿ ಒಂಭತ್ತು ಠಾಣ್ಯಗಳನ್ನೂ ಇಪ್ಪತ್ತಮೂರು ಒಳಠಾಣ್ಯಗಳನ್ನೂ ಆವರಿಸಿ ಕೊಂಡರು. ಕಡೆಗೆ ಶಿಕ್ಕಿದ ಠಾಣ್ಯ ಅಶಂತಿ ದೇಶದಲ್ಲಿ ಅಬೆತಿಫಿ ಎಂಬದು. ಈ ಒಂದು ಹೊರ್ತು ಉಳಿದ ಆರು ಠಾಣ್ಯಗಳೂ ಇಂಗ್ಲಿಷ ಅಧಿಕಾರದೊಳಗವೆ. ಈ ಮೂವತ್ತೆರಡು ಊರುಗಳಲ್ಲಿ ೧೮೭೭ನೇ ವರುಷದ ಆರಂಭದಲ್ಲಿ ಮಾಡಿದ ಲೆಖ್ಖದ ಮೇರೆಗೆ ೩,೩೫೫ ಕ್ರೈಸ್ತರೂ, ೨೩ ಉಪಾಧ್ಯಾಯರೂ, ೧೨ ಉಪಾಧ್ಯಾಯಿಯರೂ, ೩೩ ಉಪದೇಶಿಗಳೂ, ೫ ದೇಶೀಯ ಬೋಧಕರೂ, ೩೦ ಮಿಶ್ಶನೆರಿಗಳೂ ಇದ್ದಾರೆ. ೫೦ ಶಾಲೆಗಳಲ್ಲಿ ಹುಡುಗರಿಗೂ ಹುಡುಗಿಯರಿಗೂ ಬರಹ ಕಲಿಸಲಾಗುತ್ತದೆ. ಕೈಗಾರಿಕೆಯ ಕಾರಖಾನೆಗಳು ಹಿಂದು ಸ್ಥಾನದಲ್ಲಿರುವವುಗಳಿಗಿಂತಲೂ ಹೆಚ್ಚು ವಿಶಾಲವಾಗಿವೆ. ೧೮೭೬ನೇ ವರ್ಷದಲ್ಲಿ ೪೨೬ ಮಂದಿಗೆ ಸ್ನಾನ ಕೊಡುವದಾಯಿತು. ಕೆಲವು ಸ್ಥಳಗಳಲ್ಲಿ ಪೂಜಾರಿಗಳೂ ಕ್ರೈಸ್ತರಾಗಿದ್ಧಾರೆ. ೧೮೭೭ನೇ ವರ್ಷದಲ್ಲಿ ಮುಖ್ಯವಾಗಿ ಅಕೆಮ್ ಶೀಮೆಯಲ್ಲಿ ಜನರು ಸುವಾರ್ತೆಯ ಪ್ರಸಂಗಕ್ಕೆ ಹೆಚ್ಚೆಚ್ಚು ಮನವೊಡ್ಡುವವರಾದ್ದನ್ನು ಕ್ರೈಸ್ತತ್ವಕ್ಕೆ ವೈರಿಯಾಗಿದ್ದ ಆ ಶೀಮೆಯ ಅರಸನು ತಿಳಿದು, ವಿರೋಧ ಮಾಡುವದಕ್ಕೆ ಕೈ ಹಾಕಿದನು. ಮಿಶ್ಶನೆರಿ ದಾವಿದ ಅಶಂತೆ ಇವರನ್ನು ಅರಮನೆಗೆ ಕರದು, ಬಾಯಿಗೆ ಬಂದ ಹಾಗೆ ಬೈದು, ಊರು ಬಿಟ್ಟು ಹೋಗ ಬೇಕೆಂದು ಅಪ್ಪಣೆ ಮಾಡಿದನು. ಕೆಲ ದಿನಗಳನಂತರ ತಾನೇ ಮಿಶ್ಶನ ಬಂಗಲೆಗೆ ಬಂದು, ಹಾಗೆಯೇ ಬೈಯುತ್ತಿರಲು, ಅರಸನ ಪರಿಚಾರಕರು ದಾತೆ ಎಂಬ ಬೋಧಕನ ಹೆಂಡತಿಯನ್ನು ಬಹಳ ಕ್ರೂರವಾಗಿ ಹೊಡದರು. ಆವಾಗ್ಯೆ ಇಂಗ್ಲಿಷ ಗವರ್ನರ್‌ಧೊರೆ ಬಂದು, ಮಿಶ್ಶನೆರಿಗೆ ಆಶ್ರಯವಾದರು. ೧೮೭೭ನೇ ಇಸವಿ ಜನವರಿ ತಿಂಗಳಲ್ಲಿ ಅಶಂತೆ ದೇಶದಲ್ಲಿರುವ ಅಬೆತಿಫಿ ಠಾಣ್ಯಕ್ಕೆ ಮೊದಲನೇ ಸಾರಿ ಹೋಗಿ, ಅವಶ್ಯವಾದ ಮನೆ ಮುಂತಾದವುಗಳನ್ನು ಕಟ್ಟಲಿಕ್ಕೆ ಪ್ರಾರಂಭಿಸಿದರು. ಅಭ್ಯಂತರಗಳು ಅನೇಕವಿದ್ದಾಗ್ಯೂ, ಕೆಲಸ ಮುಂದೆ ಸಾಗುತ್ತದೆ. ಕೆಲ ವರ್ಷಗಳ ಹಿಂದೆ ಅಶಂತಿಯಲ್ಲಿ ಶೆರೆಯವರಾಗಿದ್ದ ಘನ. ರಾಮ್‌ಸೆಯರ್ ಅಯ್ಯನವರು ಹೆಂಡತಿಯನ್ನು ಕರಕೊಂಡು ವಿಲಾಯತಿಗೆ ಹೋಗ ಬೇಕಾದ್ದರಿಂದ, ಆ ಹೊಸ ಕಾರ್ಯಕ್ಕೆ ಪೆಟ್ಟಾಯಿತಾದರೂ, ಅವರಿಬ್ಬರೂ ಮತ್ತೂ ಅಲ್ಲಿಗೆ ಹಿಂದಕ್ಕೆ ಬರುವವರಾದರು. ಈಗ ಅಲ್ಲಿ ಮಿಶ್ಶನ ಕೆಲಸ ಸಾಗುವದಕ್ಕೆ ಅಭ್ಯಂತರಗಳಿರುವಂತೆ ತೋರುವದಿಲ್ಲಾ. ಗೋಲ್ಡ್‌ಕೋಸ್ಟಿನ ಹವೆ ವಿಲಾಯತಿಯವರು ತಾಳಲಾರದ್ದಾಗಿದೆ. ೧೮೭೭ನೇ ವರ್ಷದಲ್ಲಿ ಮೂವರು ಮಿಶ್ಶನೆರಿಗಳೂ ಇಬ್ಬರು ಅಮ್ಮನವರೂ ತೀರಿಕೊಂಡವರಾದರು. ಬೇರೊಬ್ಬರು ಕ್ಷೇಮಲಾಭಕ್ಕಾಗಿ ವಿಲಾಯತಿಗೆ ಹೋಗುವದು ಅವಶ್ಯವಾಯಿತು.

ಚೀನ.—೧೮೪೭ನೇ ವರ್ಷದಲ್ಲಿ ನಮ್ಮ ಮಿಶ್ಶನಿನವರು ಚೀನಸಾಮ್ರಾಜ್ಯದ ತೆಂಪಡುವಲ ಶೀಮೆಯಲ್ಲಿ ಕೆಲಸ ಪ್ರಾರಂಭಿಸಿದರು. ಮೊದಲು ಕಾಂತೊನ್ ಶೀಮೆಯ ಲೀಲೊಂಗಿನಲ್ಲಿಯೂ ಇಂಗ್ಲಿಷ

ರಿಗೆ ಸ್ವಾಧೀನವಾಗಿರುವ ಹೊಂಗ್‌ಕೊಂಗಿನಲ್ಲಿಯೂ ಕೆಲಸ ನಡಿಸಿ, ೧೮೬೪ನೇ ವರ್ಷದಿಂದ ಈಚೆಗೆ ದೇಶದ ಒಳಗೆ ೧೫೦ ಮೈಲುಗಳ ವರೆಗೂ ಪ್ರವೇಶ ಮಾಡಿ, ೨ ಠಾಣ್ಯಗಳನ್ನೂ ಈ ಎಲ್ಲಾ ಠಾಣ್ಯಗಳಲ್ಲಿ ಸಭೆಗಳನ್ನೂ ಬೇರೆ ಬೇರೆ ಶಾಲೆಗಳನ್ನೂ ಸ್ಥಾಪಿಸಿದರು. ಮೇಲ್ ಶಾಲೆಯಲ್ಲಿ ೨೧ ಮಂದಿಗೆ ವಿದ್ಯಾಭ್ಯಾಸ ಮಾಡಿಸಿ, ಉಪದೇಶಕರು ಮಾಡಲಾಯಿತು. ಜರ್ಮನಿಗೆ ಕಳುಹಿಸಿ ಕೊಂಡ ಕೆಲಯೌವನಸ್ಥರಲ್ಲಿ ಇಬ್ಬರು ಬೋಧಕರಾಗಿ ಹಿಂದಕ್ಕೆ ಬಂದು, ತಮ್ಮ ಊರಲ್ಲಿ ಕೆಲಸ ನಡಿಸುತ್ತಾರೆ. ಇನ್ನು ಇಬ್ಬರು ಬಾಸಲಿನಲ್ಲಿ ಕಲಿಯುತ್ತಾ ಇದ್ಧಾರೆ.—ಲೀಲೊಂಗಿನಲ್ಲಿಯ ಮಿಶ್ಯನೆರಿಗಳು ೧೮೭೬ನೇ ವರ್ಷದಲ್ಲಿ ೭೧ ಮಂದಿಗೂ, ೧೮೭೭ನೆಯ ಆರಂಭದಲ್ಲಿ ಇನ್ನೂ ಕೆಲವರಿಗೂ ಸ್ನಾನ ಕೊಟ್ಟರು. ೮ ಹಳ್ಳಿಗಳಲ್ಲಿರುವ ಚಿಕ್ಕ ಚಿಕ್ಕ ಸಭೆಗಳು, ಹೊಸಬರು ಬಂದು ಶೇರುತ್ತಾ ಇರುವದರಿಂದ, ಹೆಚ್ಚುತ್ತಲೇ ಅವೆ. ನ್ಯಾಯೆನ್‌ಹಂಗ್ಲಿಯಲ್ಲಿರುವ ಮಿಶ್ಯನೆರಿಗಳು ೧೮೭೬ನೆ ವರ್ಷದಲ್ಲಿ ೧೯೧ ಮಂದಿಗೆ ಸ್ನಾನ ಕೊಟ್ಟರು. ಕ್ರೈಸ್ತರಾಗ ಬೇಕೆಂಬ ಅಪೇಕ್ಷೆಯುಳ್ಳ ಜನರು ಹೆಚ್ಚೆಚ್ಚು ಆಗುತ್ತಾ, ಅನೇಕ ಹಳ್ಳಿಗಳವರು ಬೊಂಬೆಗಳನ್ನು ಬಿಸಾಟು, ತಮಗೆ ಬೋಧಕರನ್ನು ಕಳುಹಿಸಿ ಕೊಡ ಬೇಕೆಂಬದಾಗಿ ಬೇಡಿ ಕೊಳ್ಳುವದಕ್ಕೆ ಮಿಶ್ಯನೆರಿಗಳ ಬಳಿಗೆ ಬರುತ್ತಲೇ ಇದ್ಧಾರೆ. ಒಟ್ಟಿಗೆ ನೋಡಿದರೆ, ಆ ಪ್ರಾಂತದಲ್ಲಿ ಹಣ್ಣಾದ ಬೆಳೆ ಬಹಳ, ಕೆಲಸದವರು ಸ್ವಲ್ಪ ಮಂದಿ. ಆದಿತ್ಯವಾರಗಳಲ್ಲಿಯೂ ಅಡವಾರಗಳಲ್ಲಿಯೂ ೪೫ ಮೈಲು ದೂರದಿಂದಲೂ ಜನರು ದೇವರ ವಾಕ್ಯ ಕೇಳುವದಕ್ಕೆ ಬರುತ್ತಾರೆ. ಅವರೆಲ್ಲರ ಪರಾಮರಿಕೆ ತಕ್ಕ ಮಟ್ಟಿಗಾದರೂ ಮಾಡುವದಕ್ಕೆ ಮಿಶ್ಯನೆರಿಗಳಿಗೆ ಸಮಯವಿಲ್ಲದೆ, ಇನ್ನೂ ಕೆಲಸದವರನ್ನು ಕಳುಹಿಸ ಬೇಕೆಂಬದಾಗಿ ಬೆಳೆಯ ಯಜಮಾನನನ್ನು ಬೇಡುತ್ತಾರೆ. ಅಲ್ಲಿಯ ಮಿಶ್ಯನೆರಿಗಳಲ್ಲಿ ಹಳಬರಾಗಿದ್ದವರೊಬ್ಬರು ವಿಲಾಯತಿಗೆ ಬರುವದು ಅವಶ್ಯವಾದರೂ, ಮಿಶ್ಯನಿನವರು ೧೮೭೭ನೆಯ ಆರಂಭದಲ್ಲಿ ೪ ಮಂದಿ ಹೊಸಬರನ್ನು ಅಲ್ಲಿಗೆ ಕಳುಹಿಸಿದರು. ನಾಲ್ಕು ಠಾಣ್ಯಗಳಲ್ಲಿ ಕ್ರೈಸ್ತರು ೧,೪೯೭, ಮಿಶ್ಯನೆರಿಗಳು ೧೨ ಮಂದಿ ಇದ್ಧಾರೆ.

ವಿವಿಧ ವರ್ತಮಾನಗಳು.

ತಿನ್ನೆವೆಲ್ಲಿಯಲ್ಲಿ ಹ್ಯಾಗೋ ಹಾಗೆಯೇ ಅಹ್ಮದನಗರದಲ್ಲಿ ಬಹಳ ಜನರು ಕ್ರೈಸ್ತರಾಗಲಿಕ್ಕೆ ಬರುತ್ತಾರೆ. ಅಲ್ಲಿಯ ಮಿಶ್ಯನೆರಿಗಳು ಇತ್ತಲಾಗೆ ಮಹಾರರೊಳಗಿಂದ ಬಂದ ೨ ಸಾವಿರ ಮಂದಿಗೆ ಸ್ನಾನ ಕೊಟ್ಟರು.

ಮದ್ರಾಸ ಸಂಸ್ಥಾನದಲ್ಲಿ ೧೮೭೬-೭೭ನೇ ವರ್ಷದಲ್ಲಿ ವಾಂತಿಭೇದಿಯಿಂದ ೨,೩೬,೯೩೬ ಜನರೂ, ಶಿಡುಬಿನಿಂದ ೨೭,೨೪೩ ಜನರೂ, ಜ್ವರದಿಂದ ೨,೨೬,೩೦೬ ಜನರೂ, ಒಟ್ಟಿಗೆ ಈ ಮೂರು ಕಾರಣಗಳಿಂದ ೪,೯೦,೪೮೫ ಜನರು ಮೃತವಾದರು. ಈ ಸಂಸ್ಥಾನದ ಜನಸಂಖ್ಯೆ ೩,೨೦,೦೦,೦೦೦ ಆಗಿರುತ್ತದೆ.

ಮೈಸೂರ ಸಂಸ್ಥಾನದಲ್ಲಿ ದುಷ್ಕಾಲ ಪರಿಹಾರವಾಗುತ್ತಾ ಬರುವಂತೆ ತೋರುವದರಿಂದ ಸಹಾಯಾರ್ಥಕ ಕೆಲಸಗಳನ್ನು ನಿಲ್ಲಿಸಿ ಬಿಡುವ ಆಲೋಚನೆಯುದೆಯುಂತೆ. ಈ ಕ್ಷಾಮಕಾಲದಲ್ಲಿ ಸರಕಾರದವರು ೯೦ ಲಕ್ಷ ರೂಪಾಯಿ ಖರ್ಚು ಮಾಡಿ, ಪ್ರಜೆಗಳನ್ನು ಸಂರಕ್ಷಣೆ ಮಾಡಿದರು.

ಈ ದೇಶದಲ್ಲಿ ಪದೇ ಪದೇ ಕ್ಷಾಮ ಬೀಳುವದಕ್ಕೆ ಮಳೆ ಕಡಿಮೆಯಾದದ್ದು ಮಾತ್ರವಲ್ಲಾ ಭೂಮಿಯ ಬೆಳೆ ಕಡಿಮೆಯಾಗುತ್ತಾ ಬರುವದು ಸಹ ಕಾರಣವಾಗಿದೆಂದು ವ್ಯವಸಾಯ ಪರೀಕ್ಷೆ ಮಾಡಿದವರು ಹೇಳುತ್ತಾರೆ. ಈ ಶೀಮೆಯಲ್ಲಿ ಒಂದು ಎಕ್ಕರೆಗೆ ಎಷ್ಟು ಬೆಳೆಯಾಗುತ್ತದೆ ಎಂತಲೂ, ಅಷ್ಟೇ ಜಾಗದಲ್ಲಿ ಬೇರೆ ಶೀಮೆಯಲ್ಲಿ ಎಷ್ಟು ಆಗುತ್ತದೆ ಎಂತಲೂ ನೋಡಿದರೆ, ಈ ಶೀಮೆಯದು ಬಹು ಕಡಿಮೆಯಾಗಿ ಕಾಣುತ್ತದೆ. ಕಡಿಮೆಯಾಗುವದಕ್ಕೆ ಕಾರಣಗಳು ಮೂರು—ಹೊಲಗಳನ್ನು ಆ

ಳವಾಗಿ ಉಳದೆ ಇರುವದು; ಈ ದೇಶದ ನೇಗಲು ಎರಡು ಮೂರು ಅಂಗುಲ ಮಾತ್ರವೇ ನೆಲದೊಳಗೆ ಹೋಗುತ್ತದೆ, ಇದು ಒಂದು ಕಾರಣ; ಇನ್ನೊಂದು ಬೈಲುಗಳಲ್ಲಿ ಬಹಳ ಪಶುಗಳನ್ನು ಮೇಯಿಸುವದರಿಂದ ಹುಲ್ಲು ಬೆಳದು ಬೀಜವಾಗಿ, ಭೂಮಿಯಲ್ಲಿ ತುಂಬುವದಕ್ಕೆ ಅಡ್ಡಿ ಮಾಡುವದು. ಮೂರನೇದೇನಂದರೆ: ಗೊಬ್ಬರವಾಗ ತಕ್ಕ ಸಪ್ಪುಸೆದೆ ಉರಿಸುವದು. ಕೆಲ ಊರುಗಳಲ್ಲಿ ಸಾದೆ ೨೫ ವರ್ಷಗಳ ಮೊದಲು ಇದ್ದದಕ್ಕಿಂತ ಈಗ ೩೦೦ ಪಾಲಷ್ಟು ಪ್ರಿಯವಾಗಿದೆ. ಒಂದು ಎಕ್ಕರೆ ಜಾಗದಲ್ಲಿ ಆಗುವ ಬೆಳೆ ಸಾಲದು ಎಂಬದು ಸ್ಪಷ್ಟವಾಗಿದೆ. ರುಸ್ಯ ದೇಶ ಬಿಟ್ಟು ವಿಲಾಯತಿಯ ಕ್ಷೇತ್ರಫಲ ೧೭,೯೬,೦೦೦ ಮೈಲು, ಜನಸಂಖ್ಯೆ ೨೨,೬೫,೧೩,೦೦೦. ಹಿಂದುಸ್ಥಾನದ ಕ್ಷೇತ್ರಫಲ ೧೫,೩೩,೨೨೬ ಮೈಲು, ಜನಸಂಖ್ಯೆ ೨೪,೦೦,೦೦,೦೦೦; ಅಜಮಾಸು ಲೆಖ್ಖ ಮಾಡಿದರೆ, ಕ್ಷೇತ್ರಫಲಕ್ಕೂ ಜನಸಂಖ್ಯೆಗೂ ಬಹಳ ಹೆಚ್ಚು ಕಡಿಮೆ ಇಲ್ಲ; ಆದರೆ ಫಲಪುಷ್ಟಿಯಲ್ಲಿ ಎಂಥಾ ಹೆಚ್ಚು ಕಡಿಮೆ! ವಿಲಾಯತಿಯಲ್ಲಿ ಜನರಿಗೆ ಸಾಕಾಗುವಷ್ಟು ಧಾನ್ಯ ದವಸ ಆಗುವದು ಮಾತ್ರವಲ್ಲ ಸಾದೆ ವಸ್ತ್ರ ಸಹ ಉಂಟಾಗುತ್ತದೆ. ಈ ಮೂರು ವಿಷಯಗಳು ಇಲ್ಲಿಗಿಂತಲೂ ಅಲ್ಲಿ ಹೆಚ್ಚು ಬೇಕಾಗುತ್ತವೆ. ಮತ್ತು ಇವುಗಳನ್ನು ವ್ಯಾಪಾರಸ್ಥರು ಪರದೇಶಗಳಿಂದ ತರುವದರಿಂದ ವಿಲಾಯತಿಯಲ್ಲಿ ಭರ್ತಿಯಾಗುತ್ತದೆ ಎಂತ ನೆನಸಬಾರದು. ದೇಶದ ಫಲಪುಷ್ಟಿಯಿಂದಲೇ ಆಗುತ್ತದೆ.—ಮೇಲಿನ ಸಂಗತಿ ಸರಕಾರದವರು ಲಕ್ಷ್ಯಕ್ಕೆ ತಂದು, ವಿಲಾಯತಿ ನೇಗಲುಗಳನ್ನು ತರಿಸಿ ಕೆಲಸ ಮಾಡುವ ಪ್ರಯತ್ನದಲ್ಲಿದ್ದಾರೆ; ಹೀಗೆ ಮಾಡಿದ ಸ್ಥಳದಲ್ಲಿ ಕಾರ್ಯ ಕೈಕೂಡಿಯೂ ಬಂದದೆ.

ಕಳದ ಕೆಲ ವರ್ಷಗಳಲ್ಲಿ ಮಿಡಿತೆಗಳು ಹಿಂದುಸ್ಥಾನದಲ್ಲಿ ಮಾಡಿದ ನಷ್ಟಕ್ಕಿಂತ ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಶೀಮೆಯಲ್ಲಿ ಸಾವಿರದಷ್ಟು ಹೆಚ್ಚು ನಷ್ಟ ಮಾಡಿದ್ದಾವೆ. ಅಲ್ಲಿಯ ಸರಕಾರದವರು ಒಂದುವರೆ ವರ್ಷದ ಮೊದಲ ಈ ಮಿಡಿತೆಗಳ ವಿಷಯದಲ್ಲಿ ಸೂಕ್ಷ್ಮ ವಿಚಾರಣೆ ಮಾಡುವದಕ್ಕೆ ವಿದ್ವಾಂಸರಾದ ಪಂಚರನ್ನು ನೇಮಿಸಿದರು. ಈ ಪಂಚರು ಮಿಡಿತೆಗಳ ಹುಟ್ಟು, ಅವುಗಳನ್ನು ನಾಶನ ಮಾಡುವದಕ್ಕೆ ಉತ್ತಮ ರೀತಿ ಸಹ ಚನ್ನಾಗಿ ತಿಳಿಯುವ ಹಾಗೆ ಅವುಗಳ ಸಹಜಧರ್ಮ ಜನನಸ್ಥಳ ಮುಂತಾಗಿ ಸರ್ವವೂ ಶೋಧನೆ ಮಾಡಿದರು. ಅವರು ಕೊಡುವ ಅಭಿಪ್ರಾಯವೇನಂದರೆ, ಮೊದಲನೇದು: ನೆಲವನ್ನು ಉತ್ತು, ಮಣ್ಣು ಹೆಂಟೆ ಒಡದು, ಮೊಟ್ಟೆಗಳನ್ನು ನಾಶನ ಮಾಡ ಬೇಕು. ಹೀಗೆ ಮಾಡಿದ್ದರಿಂದ ಫಲವಾಗಿದೆ. ಎರಡನೇದು: ಆ ನೆಲಕ್ಕೆ ನೀರು ಹನಿಸ ಬೇಕು. ಮೂರನೇದು: ಆ ಜಾಗದಲ್ಲಿ ದನಗಳನ್ನು ಕಟ್ಟಿ ಹಾಕಿ ತುಳಿಸ ಬೇಕು. ನಾಲ್ಕನೇದು: ಸರಕಾರದವರು ಮೊಟ್ಟೆಗಳನ್ನು ಕೂಡಿಸಿ ತರುವವರಿಗೆ ಇನಾಮು ಕೊಡ ಬೇಕು. ಒಂದು ಹೆಡಿಗೆ ತುಂಬ ಮೊಟ್ಟೆಗಳನ್ನು ಕೊಂದರೆ, ನೂರು ಎಕ್ಕರೆ ಸ್ಥಳದ ಧಾನ್ಯ ಉಳಿಸಿದ ಹಾಗಾಯಿತು. ಮಿಡಿತೆಗಳ ಮೊಟ್ಟೆಗಳು ಇರುವಲ್ಲಿ ಹುಲ್ಲು ಮುಂತಾದ ಕಸ ಹಾಕಿ ಸುಟ್ಟು ನಾಶನ ಮಾಡ ಬಹುದು. ಅಮೇರಿಕದಲ್ಲಿ ಕಲ್ಲೆಣ್ಣೆ ಹೊಯಿದು ಸಹ ಸುಟ್ಟು ಬಿಡುತ್ತಾರೆ. ಘಟ್ಟಿ ನೆಲದಲ್ಲಾದರೆ, ಚಕ್ರಗಳನ್ನು ತಿರುಗಿಸಿ ನುಜ್ಜುಗುಜ್ಜು ಮಾಡ ಬಹುದು. ಅವುಗಳಿಗೆ ರೆಕ್ಕೆ ಹುಟ್ಟಿದ ಮೇಲೆ ಅವುಗಳನ್ನು ಅಳಿಸಲಿಕ್ಕೆ ನೋಡುವದು ವ್ಯರ್ಥ.

ಬಂಗಾಳದಲ್ಲಿ ಅತಿರೇಕ ಮಳೆ ಬಿದ್ದು, ಮಹಾನದಿಗೆ ನೆರೆ ಬಂದು, ಶೆಳವಿನ ಬಲದಿಂದ ಹೊಗೆಭಂಡಿಯ ಸಂಕ ಮುರಿದು, ರಹದಾರಿ ಬಂದು ಆಯಿತು. ಇಂಥಾ ನೆರೆ ಮೊದಲು ಯಾವಾಗಲೂ ಬರಲಿಲ್ಲವಂತೆ. ಬಡೋದೆಯಲ್ಲಿಯೂ ಅತಿಶಯ ಮಳೆಯಿಂದ ಪಟ್ಣದ ಸುತ್ತಲೂ ನೀರು ತುಂಬಿ, ಅನೇಕ ಮನೆಗಳು ಬಿದ್ದು, ಬಹು ನಷ್ಟಕ್ಕೆ ಕಾರಣವಾಯಿತು. ನರ್ಮದಾ ಹೊಳೆಯು ತುಂಬಿ ಹೋಗಿ, ಅದರ ಮೇಲೆ ಕಟ್ಟಿದ ಬಲವಾದ ಕಬ್ಬಿಣದ ಸಂಕದ ಆರು ಕಮಾನುಗಳನ್ನು ಶೆಳವು ಬಡಕೊಂಡು ಹೋಯಿತು.

ಹಿಂದುಸ್ಥಾನದ ವಾಯುವ್ಯ ಪ್ರಾಂತದಲ್ಲಿ ದುಷ್ಕಾಲಗ್ರಸ್ತ ಜನರ ಸಹಾಯಾರ್ಥವಾಗಿ ಲೋಹಮಾರ್ಗಗಳನ್ನೂ ಕಾಲಿವೆಗಳನ್ನೂ ಮಾಡುವ ಕೆಲಸಗಳನ್ನು ಪ್ರಾರಂಭಿಸಿ, ೧೦ರಿಂದ ೨೨ ಕೋಟಿ ರೂಪಾಯಿ ವರೆಗೆ ಖರ್ಚು ಮಾಡ ಬಹುದೆಂತಾ ಗವರ್ನರ್ ಜನರಲ್ ಧೊರೆಗಳವರು ಅಪ್ಪಣೆ ಮಾಡಿದ್ಧಾರೆ.

ಇಂದಾಪುರ ತಾಲೂಕಿನಲ್ಲಿ ದುಷ್ಕಾಲದ ಬಾಧೆ ಹೆಚ್ಚಾಗಿದೆ. ಜನರ ಕೈಯಲ್ಲಿ ಹೊಟ್ಟೆಹೊರಕೊಳ್ಳಲಿಕ್ಕೆ ಏನೂ ಸಾಧನವಿಲ್ಲದಿರುವದರಿಂದ ಅವರಿಗೆ ಅನ್ನಾಹಾರ ನಡಿಸುವ ಪ್ರಯತ್ನ ನಡಿಸುತ್ತದೆ.

ಬ್ರಹ್ಮ ದೇಶದ ರಾಜಧಾನಿ ಮಂಡಲೆ ಪಟ್ಣದಲ್ಲಿ ಮಹಾ ಬೆಂಕಿ ಸಂಭವಿಸಿ, ೪,೭೫೦ ಮನೆಗಳು ಸುಟ್ಟು ಹೋದವು. ಅರಸನ ಕೆಲ ರಾಣಿಗಳ ರಾಜಪುತ್ರರ ಮನೆಗಳೂ ನಾಶವಾದವು. ಆದರೂ ಯಾರ ಪ್ರಾಣವೂ ನಷ್ಟವಾಗಲಿಲ್ಲಾ. ಅರಮನೆ ಭದ್ರವಾಗಿ ಉಳಿಯಿತು.

ಕ್ಷಾಮವು ಬಹು ಕಠೋರವಾಗಿ ವ್ಯಾಪಿಸಿದ್ಧ ಆ ಚೀನ ದೇಶದ ಕೆಲ ಕಡೆಗಳಲ್ಲಿ ಒಳ್ಳೇ ಮಳೆ ಸುರಿಯುವದಾಯಿತು. ಈ ಕಾರಣದಿಂದ ಚೀನಿ ಮಹಾರಾಜನು ತಮ್ಮ ದೇವರಿಗೆ ಸ್ತೋತ್ರಾರ್ಪಣೆ ಮಾಡುವದಕ್ಕೆ ಚಿತ್ರಪೀಠಗಳನ್ನು ದೇವಸ್ಥಾನಗಳಲ್ಲಿ ಸಮರ್ಪಿಸ ಬೇಕೆಂದು ದೇಶದಲ್ಲೆಲ್ಲಾ ಪ್ರಸಿದ್ಧ ಮಾಡಿದನು.

ಆದೇನಿಗೀಚೆ ಕಡೆಗೆ ಅಫ್ರಿಕ ತೀರದ ಹತ್ತಿರವಿರುವ ಸೊಕೊತ್ರಾ ಎಂಬ ದ್ವೀಪವನ್ನು ಇಂಗ್ಲಿಷ ಸರಕಾರದವರು ತೆಗದು ಕೊಂಡರು.

ಪರೀಸಿನಲ್ಲಿ ಭೂಮಿಯ ಮೇಲಿರುವ ಸರ್ವ ಅಪರೂಪ ವಸ್ತುಗಳ ಪ್ರದರ್ಶನಾರ್ಥವಾಗಿ ಕಟ್ಟಿದ ದೊಡ್ಡ ಮನೆ ಪೂರ್ಣ ಕಬ್ಬಿಣದ್ದೂ ಕಂಚಿನದ್ದೂ ಆಗಿ, ೨,೩೧೫ ಅಡಿ ಉದ್ದ ೧,೪೧೫ ಅಡಿ ಅಗಲವಾಗಿದೆ. ಇದರಲ್ಲಿ ದೇವರ ವಾಕ್ಯದ ಪ್ರತಿಗಳು ೧೪೮ ಭಾಷೆಗಳಲ್ಲಿ ನೋಡ ಬಹುದು.

ಜರ್ಮನ ಮಹಾರಾಜರಿಗೆ ದುಷ್ಮಾನನು ಕೋವಿ ಹೊಡದ್ದರಿಂದ ಚರೆಗಳು ಶರೀರಕ್ಕೆ ತಾಗಿ, ಅವರು ಅಸ್ವಸ್ಥವಾಗಿದ್ದರು; ಈಗ ಕ್ಷೇಮವಾಗಿದ್ಧಾರೆ; ಮತ್ತು ಆ ದುಷ್ಮಾನನಿಗೆ ಮರಣಶಿಕ್ಷೆ ತೀರ್ಪಾದದರಿಂದ ಅವನ ಪಕ್ಷದವರಾದ ಸೊಶಲಿಸ್ಟರು ಮಹಾ ವ್ಯಸನದಲ್ಲಿದ್ಧಾರಂತೆ.

ಬೆರ್ಲಿನ್ ಪಟ್ಣದಲ್ಲಿ ನೆರದು ಬಂದ ರಾಜಸಭೆಯವರು ಪಂಚಾಯತಿಕೆ ತೀರಿಸಿ, "ಬೆರ್ಲಿನ್ ಟ್ರೀಟಿ" ಅಂದರೆ ಬೆರ್ಲಿನಿನ ಕೌಲಿಗೆ ಒಪ್ಪಿತ ಹಾಕಿದ ಮೇಲೆ ತಮ್ಮ ತಮ್ಮ ಊರುಗಳಿಗೆ ಹೋದವರಾದರು. ಈ ಪಂಚಾಯತಿ ಪೂರ್ಣವಾದ್ದರಿಂದ ವಿಲಾಯತಿಯಲ್ಲಿ ಸಮಾಧಾನ ಭದ್ರವಾಗುವದಾಯಿತು. ಬುಲ್ಗಾರ್ಯ ಸ್ವತಂತ್ರರಾಜ್ಯವಾಯಿತು. ರುಮಾನ್ಯ, ಸೆರ್ವ್ಯ ರಾಜ್ಯಗಳು ತುರ್ಕಿಗೆ ಮೊದಲಿನಂತೆ ಅಧೀನ ರಾಜ್ಯಗಳಲ್ಲಾ. ಮೊಂಟಿನಿಗ್ರೋ ರಾಜ್ಯಕ್ಕೆ ಹೆಚ್ಚಿಗೆ ಶೀಮೆ ದೊರಕಿತು. ಬೊಸ್ನಿಯ, ಹೆರ್ಜೆಗೋವಿನ ಶೀಮೆಗಳು ಒಸ್ತ್ರಿಯರ ಅಧಿಕಾರದೊಳಗೂ, ಅರ್ಮೆನಿಯ ರುಸ್ಯರ ಅಧಿಕಾರದೊಳಗೂ, ಸಣ್ಣಾಸ್ಯವು ಬ್ರಿತಿಷರ ಅಧಿಕಾರದೊಳಗೂ ಶೇರಿಸಲಾದ್ದರಿಂದ, ಆ ಆ ಶೀಮೆಗಳಿಗೆ ಸುಖವಾಯಿತು. ಈ ಪಂಚಾಯತಿಕೆಯಲ್ಲಿ ರಾಜಸಭೆಯವರು ನಮ್ಮಕಡೆಗೆ ಲಕ್ಷ್ಯವಿಡದೆ ನಮ್ಮನ್ನು ಉದಾಸೀನ ಮಾಡಿದರೆಂಬದಾಗಿ ಗ್ರೀಕರಾಜ್ಯದವರು ಮಹಾ ಶಿಟ್ಟುಪಟ್ಟು, ತುರ್ಕರ ಮೇಲೆ ಯುದ್ಧಕ್ಕೆ ಹೋಗ ಬೇಕೆಂದು ಅಥೇನೆ ಪಟ್ಣದ ವರ್ತಮಾನಪತ್ರಕರ್ತರು ಸರಕಾರದವರನ್ನು ಪ್ರೇರೇಪಿಸುತ್ತಾರೆ. ಅದಲ್ಲದೆ ಬೊಸ್ನಿಯ ಹೆರ್ಜೆಗೋವಿನ ಶೀಮೆಗಳು ಒಸ್ತ್ರಿಯದವರಿಗೆ ಕೊಡಲ್ಪಟ್ಟ ಕಾರಣ ಇತಲ್ಯದವರಿಗೆ ಏನೂ ಸಂತೋಷವಿಲ್ಲಾ. ಒಂದು ವೇಳೆ ಇತಲ್ಯದವರು ಅಲ್ಬಾನ್ಯ ಶೀಮೆಯ ಮೇಲೆ ಬರುತ್ತಾರೋ ಏನೋ ಎಂತ ವದಂತಿಯೂ ಅದೆ. ಕೊನ್ಸ್ತಂತಿನೋಪೊಲಿಯಲ್ಲಿ ಸಹ ಇಂಗ್ಲಿಷರ ಮೇಲೆ ಬಹಳ ಕೋಪವು ಕಂಡು ಬರುತ್ತದಂತೆ. ತುರ್ಕರ ಸೈನ್ಯದಲ್ಲಿದ್ದ ಬೇಕರ್ಪಾಶಾ ಎಂಬ ಇಂಗ್ಲಿಷ ಸರದಾರನನ್ನು ಕಿತ್ತು ಹಾಕಿ, ನಾವು ನಿಮ್ಮಲ್ಲಿ ಉದ್ಯೋಗಕ್ಕೆ ಬರುತ್ತೇವೆಂದು ಹೇಳುತ್ತಿದ್ದ ಬೇರೆ ಸರದಾರರನ್ನು ನಿರಾಕರಿಸಲಾಯಿತಂತೆ.

Printed at the Basel Mission Press, Mangalore.

ಕ್ರೈಸ್ತಸಭಾಪತ್ರ

ಪುಸ್ತಕ ೧೧. OCTOBER 1878. ಅಂಕೆ ೪.

ಅಡಕವು: ಮೂಢನಾದ ಐಶ್ವರ್ಯವಂತನು—ಆ ಒಂದು ಬಾಗಲು—ಬಳುವಳಿ—ಭಕ್ತಿಭೋಳ ಬ್ರಾಹ್ಮಣನು—ಮೂರು ಮಾತುಗಳು—ಸಂತ ಕ್ರಿಸ್ಟೊಫರನ ಕಥೆ—ಸತ್‍ಕ್ರೈಸ್ತನು—ವಿವಿಧ ವರ್ತಮಾನಗಳು.

ಮೂಢನಾದ ಐಶ್ವರ್ಯವಂತನು.

ಲೂಕ. ೧೨, ೧೩—೨೧.

ಈ ವಚನಗಳನ್ನು ಓದಿದರೆ, ಹಳೇ ಒಡಂಬಡಿಕೆಯಲ್ಲಿ ಸಂಭವಿಸಿದ ಒಂದು ಸಂಗತಿ ನೆನಪಿಗೆ ಬರುತ್ತದೆ. ಬೆಲ್ಶಿಶಾಸರ ಅರಸನು ತನ್ನ ರಾಜ್ಯದ ಅಧಿಪತಿಗಳಿಗೆ ಔತಣ ಮಾಡಿಸಿ, ಅವರು ಉಂಡು ಕುಡಿದು ಸಂಭ್ರಮದಿಂದಿರುವ ವೇಳೆಯಲ್ಲಿ ಗೋಡೆಯಲ್ಲಿ ಒಂದು ಕೈ ಪ್ರತ್ಯಕ್ಷವಾಗಿ, ಬರಿಯುವದಕ್ಕೆ ಆರಂಭಿಸಿತು. ಕೂತವರೆಲ್ಲರೂ ಮಹಾ ಭಯಸ್ಥರಾಗಲಾಗಿ, ಅರಸನು ಈ ಬರಹ ಓದಲಿಕ್ಕೆ ರಾಜ್ಯದ ಜ್ಞಾನಿಗಳನ್ನು ಕರಿಸಿದನು. ಅವರು ಓದಲಾರದವರಾದ ಮೇಲೆ ರಾಣಿಯ ಮಾತಿನ ಮೇರೆಗೆ ದಾನಿಯೇಲನನ್ನು ಬರ ಹೇಳಿದನು. ಅವನು ಅದನ್ನು ಓದಿದ್ದು ಹ್ಯಾಗಂದರೆ: “ಮೆನೇ, ಮೆನೇ, ತೇಕೆಲ್ ಉಫಾರ್ಸಿನ್” ಅಂದರೆ ನಿನ್ನನ್ನು ತೂಕ ಮಾಡಿ ನೋಡಲಾಗಿ, ನೀನು ಕಡಿಮೆಯಾಗಿ ಕಂಡಿ. ನಿನ್ನ ರಾಜ್ಯ ಮೇದ್ಯ ಪಾರ್ಸಿಗಳಿಗೆ ಕೊಡಲಾಯಿತು.—ಈ ಸಂಗತಿ ಅದೇ ರಾತ್ರಿಯಲ್ಲಿ ಸಂಭವಿಸಿತು. ನಾವು ಓದಿದ ವಚನಗಳಲ್ಲಿ ಹೇಳಿರುವ ಐಶ್ವರ್ಯವಂತನೂ ಅಂಥವನೇ. ರಾತ್ರಿ ಎಲ್ಲಾ ಪೈರು ಕೂಡಿಸಿಡುವದಕ್ಕೆ ಜಾಗ ಎಲ್ಲಿ ಮಾಡಲೆಂದು ಚಿಂತೆ ಮಾಡುತ್ತಾ ಮಲಗಿದ್ದಾನೆ, ನಿದ್ರೆ ಬರೋದಿಲ್ಲಾ. ಅವನು ಅದೇ ಧ್ಯಾನದಲ್ಲಿರುವಾಗ್ಯೆ, ಇಂದು ನಿನ್ನ ಪ್ರಾಣ ನಿನ್ನಿಂದ ಕೇಳುವರೆಂಬದೊಂದು ಆಕಾಶವಾಣಿ ಅವನಿಗಾಗುತ್ತದೆ. ಇಂಥಾ ಮೋಸ ನಮಗಾಗ ಬಾರದೆಂಬ ಆಶೆ ನಮ್ಮೊಳಗೆ ಹುಟ್ಟುವದು: ಆಶೆ ಮಾತ್ರವಲ್ಲಾ, ನಮಗೆ ದ್ರವ್ಯ ಇಟ್ಟು ಕೊಂಡು, ದೇವರ ವಿಷಯ ಐಶ್ವರ್ಯವಂತರಾಗದೆ ಇರುವ ಮೋಸದಲ್ಲಿ ನಾವು ಬೀಳದ ಹಾಗೆ ಎಚ್ಚರಿಕೆಯಾಗಿದ್ದು, ಪ್ರಪಂಚದ ಮನಸ್ಸಿನಿಂದ ಬಹಳ ಮೋಸಗೊಂಡವನ ವಿಷಯವಾಗಿ ಆಲೋಚಿಸುವಾ.

೧. ಅವನಿಗಾದ ಮೋಸವೇನು? ಮನುಷ್ಯನ ಜೀವ ಆಸ್ತಿಯಿಂದಲೇ ಅದೆ ಎಂತ ಅವನು ನೆನಸಿದ್ದೇ ಮೊದಲನೇ ಮೋಸ. ಮನುಷ್ಯನು ರೊಟ್ಟಿಯಿಂದ ಮಾತ್ರವಲ್ಲಾ, ದೇವರ ಬಾಯಿಯಿಂದ ಹೊರಡುವ ಪ್ರತಿವಾಕ್ಯದಿಂದ ಬದುಕುತ್ತಾನೆಂದು ಕರ್ತನು ಹೇಳಿದನು. ನಾವು ತೆಗದು ಕೊಳ್ಳುವ ಆಹಾರದ ಮೇಲೆ ದೇವರ ಆಶೀರ್ವಾದವಿಲ್ಲದಿದ್ದರೆ, ಅದಕ್ಕೆ ನಮ್ಮನ್ನು ಬದುಕಿಸುವ ಬಲವಿಲ್ಲಾ. ಐಶ್ವರ್ಯವಂತನ ಈ ಆಲೋಚನೆ ನಮಗೆ ದೂರವಾಗಿದೆಯೋ? ಒಬ್ಬನು ಒಂದು ಕೈಯಲ್ಲಿ ಒಂದಿಷ್ಟು ಹಣ, ಮತ್ತೊಂದು

ಕೈಯಲ್ಲಿ ದೇವರ ವಾಕ್ಯ ಹಿಡಿದು ಕೊಂಡು, ನಿಮಗೆ ಕೊಡಲಿಕ್ಕೆ ಬಂದರೆ, ಯಾವದನ್ನು ಆದು ಕೊಳ್ಳುವಿರಿ? ಒಳ್ಳೇ ಆದಾಯ, ದೊಡ್ಡ ಸಂಬಳ ಶಿಕ್ಕಿದರೆ, ಈಗ ಸುಖವಾಗಿ ಬದುಕ ಬಹುದೆಂತ ನೆನಸುವದಿಲ್ಲವೋ? ದೇವರ ವಾಕ್ಯದಿಂದ ಬದುಕುತ್ತೇವೆಂತ ದೃಢವಾಗಿ ನಂಬಿರಿ. ಈ ಮೋಸದಲ್ಲಿ ಬಿದ್ದ ಆ ಧನಿಕನು ಆಸ್ತಿಯನ್ನು ಕೂಡಿಸಲಿಕ್ಕಾರಂಭಿಸಿ, ಇನ್ನೊಂದು ಮೋಸದಲ್ಲಿ ಬಿದ್ದನು. ಮೋಸದಿಂದ, ಅನ್ಯಾಯದಿಂದ ತನ್ನ ಆಸ್ತಿ ಕೂಡಿಸಲಿಲ್ಲಾ ಖರೆ; ದೇವರ ಆಶೀರ್ವಾದದಿಂದ ಅವನ ಹೊಲ ಬಹಳ ಫಲಿಸಿತು. ಆದರೆ ದೇವರು ಕೊಟ್ಟದ್ದು ದೇವರದು, ಆತನು ಯಜಮಾನ, ನಾನು ಚಾಕರ ಎಂಬ ತಿಳುವಿಕೆ ಅವನಿಗಿರ ಬೇಕಿತ್ತು. ಇದನ್ನು ಮನಸ್ಸಿಗೆ ತಾರದೆ, ದೇವರ ದಾನವಲ್ಲಾ ತನ್ನ ಸಂಪಾದನೆ ಎಂತಾ ಸಂಗ್ರಹ ಮಾಡಿದನು. ನಮ್ಮ ಸಂಗತಿ ಹ್ಯಾಗೆ? ಅನ್ಯಾಯವಾಗಿ ಅಲ್ಲಾ, ನೀತಿಮಾರ್ಗದಿಂದ ನಮಗೆ ಸಂಪಾದ್ಯವಾದದ್ದು ಹ್ಯಾಗೆ ಬಳಿಸುತ್ತೇವೆ? ಸಂಬಳವಿದ್ದವರು ತಮ್ಮ ಸಂಬಳ, ಉದ್ದಿಮೆಗಾರರು ತಮ್ಮ ಆದಾಯ, ವ್ಯವಸಾಯವುಳ್ಳವರು ತಮ್ಮ ಹುಟ್ಟುವಳಿ ಹ್ಯಾಗೆ ಖರ್ಚು ಮಾಡುತ್ತೀರಿ? ಅನೇಕರು ದೇವರ ದಾನವೆಂತ ನೆನಸದೆ, ನಾನು ಕಷ್ಟ ಮಾಡಿ ಸಂಪಾದಿಸಿದ್ದು, ನನ್ನ ಕಷ್ಟಾರ್ಜಿತವೆಂದು ಹೇಳಿ, ತಮ್ಮ ಸ್ವಂತ ಇಚ್ಛಾನುಸಾರ ಖರ್ಚು ಮಾಡುವವರು ಇಲ್ಲವೋ? ನಮ್ಮ ಕೈಗೆ ಬೀಳುವ ಒಂದೇ ಒಂದು ರುಪ್ಪಾಯ ವಿಷಯವಾದರೂ, ನೀನು ಹ್ಯಾಗೆ ಖರ್ಚು ಮಾಡಿದಿ? ಎಂದು ದೇವರು ಲೆಖ್ಖ ಕೇಳುವನು. ಇದನ್ನು ಲಕ್ಷ್ಯಕ್ಕೆ ತನ್ನಿ. ದೇವರು ಕೊಟ್ಟದ್ದು ಆತನ ಚಿತ್ತಕ್ಕನುಸಾರವಾಗಿಯೇ ಪ್ರಯೋಗ ಮಾಡಿರಿ. ಈ ಲೋಕದ ವಸ್ತುಗಳಿಂದ ಪ್ರಾಣ ತೃಪ್ತಿ ಪಡಿಸ ಬಹುದೆಂತಾ ಅವನು ನೆನಸಿದ್ದು ಮೂರನೇ ಮೋಸ. ಆ ಮನುಷ್ಯನು ಹೆಡ್ಡನೆಂತ ಹೇಳೀರಿ; ಒಳ್ಳೇದು, ನಿಮ್ಮ ಪ್ರಾಣಗಳನ್ನು ಯಾವದರಿಂದ ಸಾಕುತ್ತೀರಿ? ಅಥವಾ ಸಾಕುವದೇ ಬಿಟ್ಟದ್ದೀರೋ? ಸಂಬಳ ಹೆಚ್ಚುತ್ತದೆ, ಮನೆ ದೊಡ್ಡದಾಗುತ್ತದೆ, ಆಸ್ತಿ ಹೆಚ್ಚುತ್ತದೆ; ಆದರೆ ಇದೆಲ್ಲಾ ಆಗುತ್ತಿರುವಾಗ್ಯೆ ಪ್ರಾಣವನ್ನು ಹಶಿವೆಯಲ್ಲಿ ಬಿಡುತ್ತಾರೆ. ಶರೀರಕ್ಕೆ ಹ್ಯಾಗೋ ಹಾಗೆ ಪ್ರಾಣಕ್ಕೂ ದಿನಾಲೂ ಆಹಾರ ಬೇಕು. ನೀವು ಸಾಕುತ್ತೀರೋ? ನೋಡಿ ಕೊಳ್ಳಿರಿ. ಈ ಐಶ್ವರ್ಯವಂತನು ತನ್ನ ಪ್ರಾಣಕ್ಕೆ ಆಸ್ತಿ ಕೊಟ್ಟು ಸಾಕಲಿಕ್ಕೆ ನೋಡಿದವನು. ಆದರೆ—

೨. ಅವನು ನೆನಸದ ಘಳಿಗೆಯಲ್ಲಿ ಅವನ ಮೋಸ ಅವನಿಗೆ ಕಂಡು ಬಂತು. ಅವನು ಅನೇಕ ವರುಷಗಳಿಗೆ ಆಸ್ತಿ ಲೆಖ್ಖ ಮಾಡುವಾಗಲೇ, ಈ ರಾತ್ರಿ ನಿನ್ನ ಪ್ರಾಣ ನಿನ್ನಿಂದ ಕೇಳುವರೆಂಬ ದೈವೋತ್ತರ ಅವನಿಗಾಯಿತು. ಎಂಥಾ ಭಯಂಕರವಾದ ದೈವೋತ್ತರವಿದು! ಅವನು ತಕ್ಕ ಸಮಯ ವ್ಯರ್ಥವಾಗಿ ಕಳಕೊಂಡನು. ಅನೇಕ ವರ್ಷಗಳಿಗೆ ಉಂಟೆಂತ ನೆನಸುವಾಗ, ಇಹದ್ದೂ ತಪ್ಪಿತು, ಪರದ್ದೂ ತಪ್ಪಿತು. ಆದ್ದರಿಂದ ದೇವರು ಅವನಿಗೆ, ಬುದ್ಧಿಹೀನನೇ! ಅನ್ನುತ್ತಾನೆ. ನಿಮ್ಮ ಕಡೇ ಘಳಿಗೆ ಬರುವಾಗ, ಬುದ್ಧಿಹೀನನೇ ಎಂಬ ಮಾತು ಕೇಳದ ಹಾಗೆ ಎಚ್ಚರಿಕೆಯಾಗಿರಿ. ನಂಬಿಕೆಯುಳ್ಳ ದಾಸನೇ ಎಂಬದೊಂದು ಒಳ್ಳೇ ಕರಿಯುವಿಕೆಯೂ ಅದೆ. ಬುದ್ಧಿಹೀನನೆಂಬ ಕರಿಯುವಿಕೆಯಲ್ಲಾ, ನಂಬಿಕೆಯುಳ್ಳ ದಾಸನೇ ಎಂಬ ಕರಿಯುವಿಕೆ ನಮಗಾಗ ಬೇಕು. ಅದಾಗುವದಕ್ಕಾಗಿ ನಾವು ದೇವರ ವಿಷಯದಲ್ಲಿ ಐಶ್ವರ್ಯವಂತರಾಗುವ ಹಾಗೆ ಪ್ರಯತ್ನ ಮಾಡೋಣಾ. *J. J. B.*

ಆ ಒಂದು ಬಾಗಲು.

ಗೆರಾರ್ದ್ ಕೆಂಪಿಸ್ ಎಂತ ಒಬ್ಬ ಮಹಾ ಐಶ್ವರ್ಯವಂತನೂ ಮಹಾ ಗರ್ವಿಷ್ಠನೂ ಆಗಿರುವ ಮನುಷ್ಯನಿದ್ದನು. ಅವನು ಒಂದು ಮನೆಯನ್ನು ಮಹಾ ಆಡಂಬರವಾಗಿ ಕಟ್ಟಿಸಿ, ಗೃಹಪ್ರವೇಶದ

ದಿವಸದಲ್ಲಿ ಮೇಜುವಾನಿಕೆ ಮಾಡಿಸಿ, ನೆರೆಯಲ್ಲಿರುವ ದೊಡ್ಡ ದೊಡ್ಡವರನ್ನು ಊಟಕ್ಕೆ ಕರದನು. ಊಟ ಉಪಚಾರವಾಗಿ ಎಲ್ಲರೂ ಸಂಭ್ರಮದಿಂದ ಕೂತಿರುವಾಗ್ಯೆ, ಬಂದ ಅತಿಥಿಗಳಲ್ಲಿ ಒಬ್ಬೊಬ್ಬನು ಎದ್ದು, ತಮ್ಮ ಹಾಗೆ ಧನ್ಯನೂ ಐಶ್ವರ್ಯವಂತನೂ ಲೋಕದಲ್ಲಿ ಯಾರಿದ್ದಾರೆಂಬದಾಗಿ ಬಹು ತರವಾಗಿ ಅವನನ್ನು ಹೊಗಳಿ, ಆಕಾಶದ ವರೆಗೆ ಎಬ್ಬಿಸಿದರು. ಆ ಕೆಂಪಿಸನು ಮುಖಸ್ತುತಿಪ್ರಿಯನಾಗಿದ್ದದರಿಂದ ಈ ಸ್ತೋತ್ರವನ್ನು ಕೇಳುತ್ತಾ ಬಹಳ ಆನಂದ ಪಟ್ಟವನಾದನು.

ಆದರೆ ಬಂದ ಅತಿಥಿಗಳಲ್ಲಿ ಒಬ್ಬನು ಎಲ್ಲರೂ ಮಾತಾಡಿ ಮುಗಿಸುವ ವರೆಗೆ ಸುಮ್ಮನೆ ಕೂತಿದ್ದು, ಕಡೆಗೆ ಎದ್ದು, ತನ್ನನ್ನು ಕರೆದವನ ಸೌಭಾಗ್ಯದ ವಿಷಯ ವಿಶೇಷವಾದ ಒಂದು ಮಾತು ಹೇಳಿದನು: "ಅಯ್ಯಾ, ಯಜಮಾನರೇ, ನಿಮ್ಮ ಸೌಭಾಗ್ಯವು ಸಂಪೂರ್ಣವಾಗುವದಕ್ಕೆ ಇನ್ನೊಂದು ಅವಶ್ಯವಾಗಿದೆ; ಮತ್ತು ಅದು ಅತಿ ಅಗತ್ಯವಾದ ಕಾರ್ಯವು."

ಆಗ ಐಶ್ವರ್ಯವಂತನು ಕಣ್ಣು ಅಗಲವಾಗಿ ತೆರದು, "ಅದು ಯಾವದು ಹೇಳಿ!" ಅಂದನು.

ಅದಕ್ಕವನು—"ನಿಮ್ಮ ಮನೆಯ ಬಾಗಲುಗಳಲ್ಲಿ ಆ ಒಂದು ಬಾಗಲು ಮಣ್ಣು ಹಾಕಿ ಮುಚ್ಚಬೇಕು" ಅಂದನು.

ಈ ಅಪರೂಪ ಮಾತು ಕೇಳಿ, ಕೂತವರೆಲ್ಲರೂ ನಕ್ಕು, ಐಶ್ವರ್ಯವಂತನು ಸಹ, ಇವನಿಗೆ ಹುಚ್ಚು ಹಿಡಿದದೆಯೋ? ಏನೋ? ಎಂದು ಮನಸ್ಸಿನಲ್ಲೇ ನೆನಸುತ್ತಾ, ಆದರೂ ಆ ಒಗಟಿನಂತಿರುವ ಮಾತಿನ ಅಭಿಪ್ರಾಯ ತಿಳಿಯ ಬೇಕೆಂಬದಾಗಿ "ಅದು ಯಾವ ಬಾಗಲು ಅಯ್ಯಾ? ಹೇಳಿದರೆ, ಆಗ ಬಹುದು" ಅಂದನು.

ಆಗ್ಯೆ ಅವನು—"ಯಾವ ಬಾಗಲೆಂತ ಕೇಳುತ್ತೀರೋ? ನಿಮ್ಮನ್ನು ಒಂದು ದಿನ ಗೋರಿಗೆ ಯಾವ ಬಾಗಲಿನಿಂದ ವೈಯುವರೋ ಅದೇ ಬಾಗಲು" ಅಂದನು.

ಈ ಮಾತು ಕರೆದವನಿಗೂ ಕರಿಸಿ ಕೊಂಡವರಿಗೂ ಚನ್ನಾಗಿ ಮನಸ್ಸಿಗೆ ತಾಗಿ, ಅವರು ಆ ವಿಷಯ ಧ್ಯಾನ ಮಾಡುವವರಾದರು. ಮಹಾ ಅಭಿಮಾನಿಯಾಗಿದ್ದ ಆ ಮನುಷ್ಯನು ಅಂದಿನಿಂದ ಪ್ರಪಂಚವು ಮಾಯೆ ಎಂಬದು ಲಕ್ಷ್ಯಕ್ಕೆ ತಂದು ಕೊಂಡು, ತಾನು ಮಹಿಮೆ ಪಡುತ್ತಿದ್ದಂಥಾ ಮೂರು ದಿನದ ಐಶ್ವರ್ಯದ ಬಾಳ್ವೆ ಒಂದು ದಿನ ನಾಶವಾಗುದು ಎಂತ ತಿಳಿದು, ವೈರಾಗ್ಯ ಹಿಡಿದು, ತನ್ನ ಆಸ್ತಿಯನ್ನು ಪರೋಪಕಾರದ ಕಾರ್ಯಗಳಿಗೆ ಪ್ರಯೋಗಿಸುವವನಾದನು.

ಬಳುವಳಿ.

ಒಬ್ಬ ವಿಧವೆಗೆ ಒಬ್ಬಳೇ ಮಗಳು ಇದ್ದಳು. ಈ ಹುಡುಗಿ ಬಹಳ ಅಸ್ವಸ್ಥವಾಗಲಾಗಿ, ತಾಯಿ ಭಯಗೊಂಡು, ಬೋಧಕನನ್ನು ಮನೆಗೆ ಕರಿಸಿದಳು. ಆ ಹುಡುಗಿ ಅದೇ ಅಸ್ವಸ್ಥದಲ್ಲಿ ಬಿದ್ದವಳು ಏಳದೆ ತೀರಿ ಕೊಂಡಳು. ಕೆಲವು ದಿವಸಗಳ ಮೇಲೆ ಆ ಸ್ತ್ರೀಯು ಅದೇ ಬೋಧಕನ ಮನೆಗೆ ಬಂದು, ಸ್ವಲ್ಪ ಹೊತ್ತು ಮಾತಾಡಿ, ಹಣವಿರುವ ಒಂದು ಸಣ್ಣ ಗಂಟು ಅವನ ಕೈಯಲ್ಲಿ ಕೊಟ್ಟು, ಈ ಹಣ ಮೂರ್ತಿಪೂಜಕರೊಳಗೆ ದೇವರ ವಾಕ್ಯವನ್ನು ಕಳುಹಿಸುವ ಯಾವದಾದರೊಂದು ಮಿಶ್ಯನಿಗೆ ಕೊಡಿರಿ! ಅಂದಳು. ಬೋಧಕನು ಆ ಗಂಟು ಬಿಚ್ಚಿ, ಅದರಲ್ಲಿ ಇನ್ನೂರು ರೂಪಾಯಿ ಇರುವದನ್ನು ಕಂಡು, ವಿಸ್ಮಿತನಾಗಿ, ಅವಳಿಗೆ ಹೇಳಿದನು—ಅವ್ವಾ, ನೀನು ಬಡವೆ, ನಿನಗೆ ಸ್ಥಿರವಾದ ಉದ್ದಿಮೆ ಚಾಕ್ರಿ ಏನೂ ಇಲ್ಲಾ, ದುಡಿದು ಕೊಡುವವರೂ ಇಲ್ಲಾ. ವಸ್ತ್ರ ಒಗದು ಜೀವನ ಮಾಡುವವಳಾದ ನೀನು ಇಷ್ಟು ಹಣ ಕೊಡ ಬೇಡ ಎಂತ ಬಹು ತರವಾಗಿ ಹೇಳಿದನು. ಆಗ್ಯೆ ಅವಳು

ಹೇಳಿದಳು—ಅಯ್ಯಾ, ನೀವು ಅದನ್ನು ಹ್ಯಾಗೂ ತೆಗದು ಕೊಳ್ಳ ಬೇಕು. ಇಷ್ಟು ಹಣ ನನ್ನ ಕೈಯ ಲ್ಲಿ ಹ್ಯಾಗಾಯಿತು ಎಂತ ನಿಮಗೆ ಹೇಳುತ್ತೇನೆ; ನನ್ನ ಮಗಳು ಹುಟ್ಟಿದ ದಿನದಲ್ಲಿ, ಈ ಹುಡುಗಿ ಬೆಳದು ದೊಡ್ಡವಳಾದಾಗ ಸುಮಾರು ಈ ದಿನಗಳಲ್ಲಿ ಮದಿವೆಗೆ ಸಿದ್ಧವಾಗುವಳು, ಅವಳಿಗೆ ಬಳು ವಳಿ ಕೊಡುವದಕ್ಕೆ ನಾನೇನಾದರೂ ಕೂಡಿಸುತ್ತಾ ಬರ ಬೇಕು, ಹೀಗೆ ನಾನು ನೆನಸಿ, ಅದೇ ದಿನ ನಾಲ್ಕು ಆಣೆ ಒತ್ತಟ್ಟು ಇಟ್ಟೆ. ಅಂದಿನಿಂದ ಹಾಗೆಯೇ ನನ್ನ ಕೈಗೆ ಶಿಕ್ಕದ ಹಣದಲ್ಲಿ ಒಂದಿಷ್ಟು ಸಂಗ್ರಹ ಮಾಡುತ್ತಾ ಬಂದೆ; ಅದೀಗ ಇಷ್ಟಾಯಿತು. ಈಗ ಕಳದ ವಾರ ಆದದ್ದು ನೀವು ಬಲ್ಲಿರಷ್ಟೇ. ಪರಲೋಕದ ಮದುಮಗನು ಬಂದು, ಅವಳನ್ನು ತನ್ನ ಮನೆಗೆ ಕರಕೊಂಡು ಹೋದನು. ಮದು ಮಗಳನ್ನು ಕರಕೊಂಡು ಹೋದ ಮೇಲೆ ಬಳುವಳಿ ಅವನಿಗೆ ಒಪ್ಪಿಸಿ ಕೊಡುವದು ವಾಸ್ತವ್ಯವಾಗಿದೆ.

ಭಕ್ತಿಭೋಳ ಬ್ರಾಹ್ಮಣನು.

ಒಂದಾನೊಂದು ಊರಿನಲ್ಲಿ ಒಬ್ಬ ಬ್ರಾಹ್ಮಣನು ಇರುತ್ತಿದ್ದನು. ಅವನು ಮೂರ್ತಿಪೂಜೆಯಲ್ಲಿ ಮಹಾ ಭಕ್ತನಾಗಿದ್ದು, ತನ್ನ ಹಿತ್ತಲಲ್ಲಿ ಬಹು ಶೋಭಾಯಮಾನವಾದದ್ದೊಂದು ದೇವಸ್ಥಾನ ಕಟ್ಟಿಸಿ, ಸುಂದರವಾದ ಗರ್ಭಗೃಹ ಮಾಡಿ, ಅದರೊಳಗೆ ಭಂಗಾರ, ಬೆಳ್ಳಿ, ತಾಮ್ರ, ಹಿತ್ತಾಳಿ, ಸ್ಫಟಿ ಕ, ಕಲ್ಲು ಮುಂತಾದವುಗಳಿಂದ ಮಾಡಿದ ಅನೇಕ ಮೂರ್ತಿಗಳನ್ನೂ ಸಾಲಗ್ರಾಮಗಳನ್ನೂ ಇಟ್ಟನು. ಅನಂತರ ಬ್ರಾಹ್ಮಣರು ಬಂದು, ಮಂತ್ರೋಚ್ಚಾರಣೆ ಮಾಡಿದ್ದರಿಂದ ಆ ಮೂರ್ತಿಗಳಿಗೆ ಪ್ರಾಣಪ್ರತಿ ಷ್ಠೆಯಾಯಿತೆಂದು ನಂಬಿ, ದಿನ ನಿತ್ಯಾ ನಿಯಮ ಪ್ರಕಾರ ಸ್ನಾನ ಸಂಧ್ಯೆ ಮಾಡಿದ ಮೇಲೆ ಮಹಾ ಭಕ್ತಿಭಾವದಿಂದ ಅವುಗಳಿಗೆ ಸಾಂಗೋಪಾಂಗ ಪೂಜೆ ಮಾಡಿ ನೈವೇದ್ಯವಿಡುವನು. ಇದರಿಂದ ತಾನು ದೇವತಾಭಕ್ತಿ ಚಂದಾಗಿ ಮಾಡಿದೆನೆಂದು ಹೃದಯದೊಳಗೆ ಭರವಸ ಹಿಡಿದು, ಸಮಾಧಾನ ಮಾಡಿ ಕೊಂಡು, ನಾನು ಮಹಾ ಪುಣ್ಯಾತ್ಮನಾದ್ದರಿಂದ ದೇವರು ನನಗೆ ಪ್ರಸನ್ನನಾಗಿ, ನನಗೆ ಇಹ ಲೋಕದಲ್ಲಿ ಸಂಪತ್ತು ಪುತ್ರಸಂತತಿ ಮುಂತಾಗಿ ಕೊಟ್ಟು, ಕಡೆಗೆ ವೈಕುಂಠಕ್ಕೆ ಕರಕೊಂಡು ಹೋ ಗುವನೆಂದು ನಿಶ್ಚಯ ಮಾಡಿ ಕೊಂಡಿದ್ದನು.

ಹೀಗಿರುತ್ತಾ ಒಂದು ದಿನ ಅವನು ಪೂಜೆಗೆ ಕೂತಿರುವಾಗ್ಯೆ ಗರ್ಭಗೃಹದಲ್ಲಿರುವ ಯಾವತ್ತೂ ವಿಗ್ರಹಗಳು ಒಂದು ಈಚೆಗೆ ಒಂದು ಆಚೆಗೆ ಕಂಡಾಬಟ್ಟೆ ಬಿದ್ದಿರುವದು ಅವನ ದೃಷ್ಟಿಗೆ ಬೀಳಲಾಗಿ, ಅವನು ವ್ಯಾಕುಲನಾಗಿ, ಹೀಗಾಗುವದಕ್ಕೆ ಕಾರಣವೇನಾಗಿದ್ದೀತೆಂತ ತನ್ನ ಹೆಂಡತಿಯನ್ನು ಕರದು ಕೇಳಿದನು. ಅವಳು ಹೇಳಿದಳು—ರಾತ್ರಿ ಇಲಿಗಳು ಒಳಗೆ ಶೇರಿ ಕೊಂಡು, ದೇವತೆಗಳನ್ನೆಲ್ಲಾ ಗೊಂ ದಲ ಹಾಕಿದವು. ಇದನ್ನು ಕೇಳಲಾಗಿ ಭಕ್ತಿಭೋಳನಾದರೂ ವಿಚಕ್ಷಣನಾಗಿದ್ದ ಆ ಬ್ರಾಹ್ಮಣ ಭಟ್ಟನು ತನ್ನೊಳಗೆ ಆಲೋಚನೆ ಮಾಡುತ್ತಾನೆ— ಇಲಿಗಳಂಥಾ ಅಲ್ಪ ಪ್ರಾಣಿಗಳು ದೇವತೆಗಳನ್ನು ಬೀಳಿಸುವದು ಅಂದರೆ, ಇದೇನು ಚೋದ್ಯ! ಈ ಮೂರ್ತಿಗಳು ದೇವತೆಗಳಾಗಿದ್ದರೆ, ತಮ್ಮ ಮೇಲೆ ಇ ಲಿಗಳು ಬರುವದಕ್ಕೆ ಬಿಟ್ಟವ್ಯಾಕೆ? ಯಾಕೆ ಓಡಿಸಲಿಲ್ಲಾ? ಹೀಗೆ ಬಹಳ ಹೊತ್ತು ಆಲೋಚಿಸುತ್ತಾ ಇರುವಾಗ ಅವನಿಗೆ ಕಂಡು ಬಂದದ್ದೇನು—ಇವು ದೇವತೆಗಳಾಗಿದ್ದದ್ದು ಖರೆಯಾಗಿದ್ದರೆ, ಇಲಿಗ ಳಿಂದ ತಮಗೆ ತಂಟೆಯಾಗದಂತೆ ನೋಡಿ ಕೊಳ್ಳುತ್ತಿದ್ದವು. ಇವು ದೇವತೆಗಳಲ್ಲಾ; ನಾನು ಇಷ್ಟು ದಿವಸಗಳು ವ್ಯರ್ಥವಾಗಿ ಪೂಜೆ ಮಾಡಿ ಖರ್ಚು ಮಾಡಿದೆ; ಇನ್ನು ಮುಂದೆಯೂ ಇವುಗಳಿಂದ ನನಗೇನೂ ಫಲ ಬಾರದು. ಹೀಗೆ ಹೇಳಿ ಅವನು ಆ ಮೂರ್ತಿಗಳನ್ನು ಎಲ್ಲಾ ತೆಗದು, ಕೆಲವನ್ನು ಮಾರಿದನು, ಕೆಲವನ್ನು ಒಡದು ಹಾಕಿದನು. ಮತ್ತು ಕೆಲವು ಇಲಿಗಳನ್ನು ಹಿಡಿದು ಪಳಗಿಸಿ,

ಅವನ್ನು ಆ ಮನೆಯಲ್ಲಿ ಇಟ್ಟು, ನಿತ್ಯಾ ಅವುಗಳಿಗೆ ಪೂಜೆ ಮಾಡಿ, ನೈವೇದ್ಯವಿಡುವದಕ್ಕೆ ಆರಂಭಿಸಿ
ದನು. ಈ ಹೊಸ ದೇವತೆಗಳು ಆ ನೈವೇದ್ಯವೆಲ್ಲಾ ಪರಿಪೂರ್ಣ ತಿಂದು ಹಾಕುತ್ತಿರುವದನ್ನು ನೋಡಿ,
ಆ ಗೃಹಸ್ಥನು ಸಂತುಷ್ಟನಾಗಿ—ಶಾಭಾಸು, ಈ ದೇವತೆಗಳಾದರೆ ತಿನ್ನುತ್ತವೆ, ಆಡುತ್ತವೆ, ಓಡುತ್ತವೆ,
ಆ ಮೂರ್ತಿಗಳಿಗಿಂತ ಎಷ್ಟೋ ಉತ್ತಮ; ಆ ಬೊಂಬೆಗಳನ್ನು ಬಿಸಾಟು ಇವುಗಳನ್ನು ಸ್ವೀಕರಿಸಿ
ದ್ದರಿಂದ ಒಳ್ಳೇ ಕೆಲಸ ಮಾಡಿದೆ. ಹೀಗೆ ಕೆಲವು ದಿನ ಕಳದ ಮೇಲೆ ಒಮ್ಮೆ ಒಂದು ಬೆಕ್ಕು ಬಂದು,
ಆ ಇಲಿದೇವತೆಗಳನ್ನು ಹೊಡದು ತಿಂದಿತು. ಆಗ ತಿರಿಗಿ ಆ ಬ್ರಾಹ್ಮಣ—ಈಗ ಯಾರಿಗೆ ದೇವರನ್ನ
ಬೇಕು? ಇಲಿಗಳಿಗೋ? ಬೆಕ್ಕುಗಳಿಗೋ? ಎಂಬ ವಿಚಾರದೊಳಗೆ ಬಿದ್ದು, ಪೂರ್ಣ ವಿಚಾರ ಮಾಡಿದ
ಮೇಲೆ ಇಲಿಗಳಿಗಿಂತಲೂ ಬೆಕ್ಕು ಹೆಚ್ಚು ಬಲಿಷ್ಠವಾದ್ದು, ಅದೇ ದೇವತೆ ಎಂತ ನಿರ್ಣಯ ಮಾಡಿ,
ಬೆಕ್ಕುಗಳನ್ನು ಗರ್ಭಗೃಹದಲ್ಲಿ ತಂದಿರಿಸಿ, ಪೂಜೆ ಮಾಡುವದಕ್ಕೆ ಹತ್ತಿದನು. ಒಂದಾನೊಂದು
ದಿನ ಆ ಬೆಕ್ಕಿಗೂ ಒಂದು ನಾಯಿಗೂ ಭೇಟಿಯಾಗಲಾಗಿ, ನಾಯಿ ಆ ಬೆಕ್ಕಿನ ಕುತ್ತಿಗೆ ಹಿಡಿದು, ನೆ
ಲದಲ್ಲಿ ಹೊರಳಿಸಿ, ಅದರ ಜೀವ ತೆಗಿಯಿತು. ಆವಾಗ್ಯೆ ಆ ಬ್ರಾಹ್ಮಣ ಮೇಲೆ ಹೇಳಿದ ನ್ಯಾಯದ
ಮೇರೆಗೆ ನಾಯಿಗೆ ಪೂಜೆ ಮಾಡುವವನಾದನು. ಆ ನಾಯಿ ಪೂಜ್ಯವಾಗಿ, ಮನೆಯಲ್ಲೆಲ್ಲಾ ಅಡ್ಡಾಡಿ,
ಕಂಡದ್ದಕ್ಕೆಲ್ಲಾ ಬಾಯಿ ಹಾಕುತ್ತಾ ಒಂದು ದಿನ ಅಡಿಗೆಮನೆಯಲ್ಲಿ ಮಾಡಿಟ್ಟ ರೊಟ್ಟಿಗಳನ್ನು
ತಿಂದು ಬಿಡಲಾಗಿ ಬ್ರಾಹ್ಮಣಿಗೆ ಶಿಟ್ಟು ಬಂದು, ಗಂಡನ ಹೆಡ್ಡ ಬುದ್ಧಿಗೆ ಬೈಯ್ಯುತ್ತಾ ದೊಣ್ಣೆಯಿಂದ
ಆ ನಾಯಿ ಸೊಂಟಕ್ಕೆ ಹೊಡೆಯಲಾಗಿ, ನಾಯಿಯ ಸೊಂಟ ಮುರಿಯಿತು. ಬ್ರಾಹ್ಮಣನು ಇದನ್ನು
ನೋಡಿ, ತಿರಿಗಿ ಮೇಲಿನ ನ್ಯಾಯದ ಪ್ರಕಾರ ತನ್ನ ಹೆಂಡತಿಗೆ ಪೂಜೆ ಮಾಡುವವನಾದನು.

ಹೀಗೆ ಕೆಲವು ದಿನಗಳು ಹೋದವು. ಒಂದು ದಿನ ಏನೋ ಒಂದು ಕಾರಣದಿಂದ ಗಂಡ
ಹೆಂಡರೊಳಗೆ ಜಗಳ ಬರಲಾಗಿ, ಬ್ರಾಹ್ಮಣನಿಗೆ ಹೆಂಡತಿಯ ಮೇಲೆ ಸಂತಾಪ ಹುಟ್ಟಿ, ತಾನು ಅವ
ಳನ್ನು ದೇವತೆ ಎಂತ ಮಾಡಿದ್ದು ಮರತು ಹೋಗಿ, ಚನ್ನಾಗಿ ಹೊಡದನು. ಆಗ್ಯೆ ಆ ಬಡವೆ ಅಳು
ತ್ತಾ, ಅಳುತ್ತಾ—ನನ್ನ ಗಂಡನು ನನ್ನನ್ನು ದೇವತೆ ಮಾಡಿ, ಈ ಹೊತ್ತು ನನಗೆ ಹ್ಯಾಗೆ ಪೂಜೆ ಮಾಡಿ
ದರೆಂತಾ ನೋಡಿದಿರೋ? ಎಂತ ಹೇಳಿದಳು. ಇದನ್ನು ಕೇಳಿದಾಗ ಆ ಬ್ರಾಹ್ಮಣನು—ಓಹೋ?
ಇದೇನು ಮಾಡಿದೆ? ಹೆಂಡತಿ ನನ್ನ ದೇವತೆಯಾಗಿರಲಿಕ್ಕೆ ನಾನು ಅವಳಿಗೆ ಹೊಡದೆನಲ್ಲಾ? ಒಳ್ಳೇದು,
ನಾನು ಅವಳಿಗಿಂತ ಬಲಿಷ್ಠನೆಂಬದು ಇಷ್ಟರಲ್ಲೇ ಕಂಡು ಬಂತಷ್ಟೇ. ಅವಳು ದೇವತೆಯಲ್ಲಾ. ಅವ
ಳಿಗಿಂತ ಶಕ್ತಿವಂತ ನಾನೇ ದೇವರು. ಇಷ್ಟು ದಿವಸ ಮೂರ್ತಿಗಳಿಗೂ ಮೃಗಗಳಿಗೂ ನನ್ನ ಹೆಂಡ
ತಿಗೂ ಪೂಜೆ ಮಾಡಿ, ವ್ಯರ್ಥವಾಗಿ ಕಾಲ ಕಳದೆ. ಈಗ ನನ್ನ ಗುರುತು ನನಗಾಯಿತು; ಮೊ
ದಲೇ ಆಗಿದ್ದರೆ, ಎಷ್ಟು ಒಳ್ಳೇದಿತ್ತು! ಎಂಬದಾಗಿ ನೆನಸಿ, ಅಂದಿನಿಂದ ತನ್ನ ಪೂಜೆ ತಾನು ಮಾಡುವ
ವನಾದನು. ಒಂದು ದಿನಾ ಅವನು ಅಸ್ವಸ್ಥವಾಗಿ ಕ್ಷೀಣನಾಗುತ್ತಿರುವಾಗ, ನಾನು ಇನ್ನು ಬದುಕೆ,
ಬೇಗ ಸತ್ತೇನೆಂತ ಭಾವನೆ ಮಾಡಿ—ಎಲೋ, ಪರಮೇಶ್ವರನೇ! ಕರುಣಿಸಿ, ನನ್ನನ್ನು ಈ ಸಂಕಷ್ಟದೊ
ಳಗಿಂದ ಪಾರು ಮಾಡ ಬಾರದೇ! ಎಂತ ಕೂಗಲಾಗಿ, ಹತ್ತರ ಕೂತವನೊಬ್ಬನು ಅವನಿಗೆ—ಎಲಾ
ಗೃಹಸ್ಥಾ, ನಿನ್ನ ನೀನೇ ದೇವತೆ ಎಂತ ಪೂಜೆ ಮಾಡುತ್ತಿದ್ದ ನೀನು ಈಗ ಯಾಕೆ ಪರಮೇಶ್ವರನ
ಕರಿಯುತ್ತೀ? ಅಂಬೋಣ, ಬ್ರಾಹ್ಮಣನು ಉತ್ತರ ಕೊಟ್ಟದ್ದು—ಇಷ್ಟು ದಿವಸ ನಾನು ಬರಿದೇ
ಭ್ರಮೆಯಿಂದ ಕಾಲ ಕಳದೆ, ಪರಾತ್ಪರ ಪರಮೇಶ್ವರನಾಗಿರುವವನೇ ಸರ್ವ ವಿಶ್ವದ ಉತ್ಪತ್ತಿಕರ್ತನು,
ಇನ್ನೊಬ್ಬ ದೇವರಿಲ್ಲಾ. ನಾನು ಇಷ್ಟು ವರ್ಷಗಳು ಮೂರ್ತಿಗಳಿಗೂ ಮೃಗಗಳಿಗೂ ಹೆಂಡತಿಗೂ
ಸ್ವತೇ ನನಗೂ ಪೂಜೆ ಮಾಡಿದ್ದು ಎಡವಟ್ಟು ಕೆಲಸವಾಯಿತು; ಮಹಾ ಪಾಪಿಯಾದೆ, ಇನ್ನು ದೇ
ವರು ನನ್ನನ್ನು ಉಳಿಸಿದರೆ, ನಾನು ಅವನ ಭಕ್ತಿಯನ್ನೇ ಮಾಡುತ್ತಿರುವೆ, ಅವನನ್ನು ಎಂದೂ ಮರೆ

ಯೆ, ಅವನನ್ನಲ್ಲದೆ ಇನ್ನೊಬ್ಬನಿಗೆ ದೇವರೆಂದು ಹೇಳೆ. ಕಡೆಗೆ ಆ ಬ್ರಾಹ್ಮಣನು ಸ್ವಸ್ಥವಾಗಿ ಮರಣಾಂತದ ವರೆಗೂ ತಾನು ಮಾಡಿದ ದೃಢ ನಿಶ್ಚಯದ ಮೇರೆಗೆ ನಡಕೊಂಡವನಾದನು.

ಮೇಲಿನ ಪ್ರಸ್ತಾಪದಿಂದ ಈ ಲೋಕದಲ್ಲಿರುವ ಮನುಷ್ಯರು ಎಂಥಾ ಭ್ರಮೆಯಲ್ಲಿ ಬಿದ್ದಿದ್ದಾರೆಂತ ತಿಳಿದು ಬರುತ್ತದೆ. ಅವರೂ ಸಹ ವಿಚಾರ ಮಾಡಿದರೆ, ಮೂರ್ತಿಪೂಜೆ, ಪಶುಪೂಜೆ, ಮನುಷ್ಯಪೂಜೆ, ಅದ್ವೈತ ಮುಂತಾದದ್ದು ಯಾವತ್ತೂ ಮಿಥ್ಯ, ಒಬ್ಬನೇ ಸರ್ವ ಸಮರ್ಥನು, ಸನಾತನ ಪರಮಾತ್ಮನು, ಅವನೇ ದೇವರು, ಅವನನ್ನಲ್ಲದೆ ಬೇರೆ ಯಾರಿಗೂ ದೇವರು ಅನ್ನುವದು ಮಹಾ ಪಾಪವೆಂಬದು ಸಹಜ ತಿಳಿಯುವದು. ಹೀಗೆ ವಿಚಾರ ಮಾಡುವವರು ಕಮ್ಮಿ. ಆ ದೇವರ ಜ್ಞಾನವೂ ಮನುಷ್ಯರ ವಿಷಯ ಅವನ ಚಿತ್ತವೇನೆಂಬ ತಿಳುವಿಕೆಯೂ, ಅವನೇ ಕೊಟ್ಟ ಪವಿತ್ರ ಶಾಸ್ತ್ರದಿಂದಲೇ ಬರುತ್ತದೆ. ಈ ಶಾಸ್ತ್ರ ಬೇಡವೆಂಥೇಳಿ ಬಹು ವಿಚಾರ ತರ್ಕ ಮಾಡಿದ ಪಂಡಿತರು ಗೊಂದಲದಲ್ಲಿ ಬಿದ್ದರೇ ಹೊರ್ತು ನೆಲೆಗಡೆಗೆ ಬರಲಿಲ್ಲಾ. ಸತ್ಯವಾದ ಶಾಸ್ತ್ರ ಯಾವದು ಎಂತ ದೇವರ ಕೃಪೆಯಿಂದ ತಿಳುಕೊಂಡು, ಮಹತ್ತಾದ ಲಾಭ ಪಡಕೊಂಡವರಾಗಿರುವವರು ಆ ಪವಿತ್ರ ಶಾಸ್ತ್ರವನ್ನು ತಮ್ಮ ಬಂಧು ಬಾಂಧವರಿಗೆ ತಿಳಿಸಿ, ಅವರನ್ನು ಸತ್ಯವಾದ ದೇವರ ಕಡೆಗೆ, ಸತ್ಯವಾದ ರಕ್ಷಕನ ಕಡೆಗೆ ನಡಿಸಲಿಕ್ಕೆ ಪ್ರಯತ್ನ ಮಾಡುವದು ಅವಶ್ಯವಾದ ಕರ್ತವ್ಯಾಂಶವಾಗಿದೆ.

(ಜ್ಞಾನೋದಯ.)

ಮೂರು ಮಾತುಗಳು.

ಈ ಭೂಮಂಡಲದ ಮೇಲೆ ಒಂದಕ್ಕೊಂದು ವಿರೋಧವಾಗಿರುವ ನಾನಾ ಮತಗಳು ಅನೇಕ ಅವೆ, ಖರೆ. ಹೀಗಿದ್ದರೂ ಸರ್ವೇ ಮತಗಳಿಗೂ ಏಕ ಪ್ರಕಾರ ಸಮ್ಮತವಾಗಿರುವಂಥಾ ಆಯಾ ವಿಷಯಗಳೂ ವಿಚಾರಕರಿಗೆ ಕಂಡು ಬರುವವು. ಮುಖ್ಯವಾಗಿ ಮೂರು ಬೀಜ ಮಾತುಗಳ ವಿಷಯದಲ್ಲಿ ಎಲ್ಲಾ ಮತಗಳ ಅಭಿಪ್ರಾಯವು ಒಂದೇಯಾಗಿದೆ. ಆ ಬೀಜ ಮಾತುಗಳು ಯಾವವಂದರೆ:

ಪಾಪ. ತಾವು ಪಾಪಾತ್ಮರು ಖರೆ ಎಂತ ಎಲ್ಲಾ ಮನುಷ್ಯರು ಒಪ್ಪುವರು. ಯಾವ ಯಾವ ಕ್ರಿಯೆಗಳು ಪಾಪವೆಂಬುವ ವಿಷಯದಲ್ಲಿ ಒಂದು ಮತದ ಅಭಿಪ್ರಾಯ ಹೀಗೆ, ಮತ್ತೊಂದು ಮತದ ಅಭಿಪ್ರಾಯ ಹಾಗೆ ಇರ ಬಹುದು, ಇರಲಿ. ಆದರೆ ಆ ರೀತಿಯಲ್ಲಿಯಾದರೇನು? ಈ ರೀತಿಯಲ್ಲಿ ಯಾದರೇನು? ಸರ್ವರೂ ಪಾಪ ಮಾಡಿದ್ದಾರೆಂಬ ವಿಷಯದಲ್ಲಿ ಹೆಚ್ಚು ಕಡಿಮೆ ಇಲ್ಲಾ. ತಾವು ಪಾಪಿಗಳೆಂಬ ವಿಷಯ ಮನುಷ್ಯರ ಮನಸ್ಸಿನ ಸಾಕ್ಷಿಯು ನಿಸ್ಸಂಶಯವಾದದ್ದೂ ತಪ್ಪದ್ದೂ ಆಗಿದೆ. "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಗೆ ತಪ್ಪಿದ್ದಾರೆ" ಎಂತ ಕ್ರೈಸ್ತ ಪ್ರಸಂಗಿಯು ಸಾರುವಾಗ ಆ ಶಬ್ದಕ್ಕೆ ಮನುಷ್ಯರ ಮನಸ್ಸಾಕ್ಷಿಯಲ್ಲಿಯೂ ಅದೇ ವಾಕ್ಯವು ಪ್ರತಿಧ್ವನಿಯಾಗುತ್ತದೆ. ಈ ಸತ್ಯಾರ್ಥದಿಂದ ಎರಡನೇ ಬೀಜ ಮಾತು ಬರುತ್ತದೆ:

ಶಿಕ್ಷೆ. ಮನುಷ್ಯರು ಅನ್ಯಾಯ ಮಾಡಿದ್ದಾರಾದರೆ, ಶಿಕ್ಷೆಯನ್ನು ಅನುಭವಿಸ ಬೇಕು. ಈ ಸತ್ಯಾರ್ಥವೂ ಸರ್ವಸಮ್ಮತವೇ. ದೇವರು ನೀತಿವಂತನು, ಮನುಷ್ಯನು ಪಾಪ ಮಾಡಿದರೆ, ದೇವರು ಅವನಿಗೆ ಶಿಕ್ಷೆ ಮಾಡುತ್ತಾನೆ. ಇಲ್ಲಿಯೂ "ಪಾಪ ಮಾಡಿದ ಪ್ರಾಣಿ ಯಾರೋ ಅವನೇ ಸಾಯುವನು" ಎಂಬ ಯೆಹೂದಿ ಕಾಲಜ್ಞಾನಿಯ ಮಾತಿಗೆ, ಹೌದು ವಾಸ್ತವ್ಯ ಎಂತ ಸರ್ವೇ ಮತಗಳೂ ಒಪ್ಪುತ್ತವೆ. ತಾನು ಪಾಪ ಮಾಡಿದ್ದೇನೆಂಬ ಅರುಹೂ ಶಿಕ್ಷೆ ಬರುವದೆಂಬ ಭಯವೂ ಇವೆರಡೂ ಕೂಡಿ ಮನುಷ್ಯನೊಳಗಿಂದ ಯಾವ ಕೂಗು ಹೊರಡಿಸುತ್ತದೆ ಅಂದರೆ:

ರಕ್ಷಣೆ ಉಂಟೋ? ಹೌದು, ರಕ್ಷಣ್ಯವಾಗ ಬಹುದು ಎಂತ ಸರ್ವ ಮತಗಳೂ ಹೇಳುತ್ತವೆ. ಪಾಪಕ್ಕೆ ಬರ ಬೇಕಾದ ಶಿಕ್ಷೆ ಪರಿಹರಿಸಿ ಕೊಳ್ಳ ಬಹುದು. ಮನುಷ್ಯನ ಭವಿಷ್ಯತ್ತು ಏನು ಎಂಬದೇ ಅಂಧಕಾರ, ರಕ್ಷಣೆಯ ನಿರೀಕ್ಷೆ ಎಂಬದೇ ಆ ಅಂಧಕಾರವನ್ನು ಪರಿಹರಿಸುವ ದೀಪ. ಎಲ್ಲಾ ಮನುಷ್ಯರೂ ರಕ್ಷಣೆಯನ್ನು ಸಾಧಿಸಲಿಕ್ಕೆ ಪ್ರಯತ್ನ ಪಡುತ್ತಾರೆ. ಮತ್ತು ರಕ್ಷಣೆಯನ್ನು ಸಂಪಾದಿಸುವದಕ್ಕೆ ಮಾರ್ಗವನ್ನು ತೋರಿಸದಂಥ ಮತವು ಇಲ್ಲಾ.

ಪಾಪ, ಶಿಕ್ಷೆ, ರಕ್ಷಣೆ ಎಂಬ ಈ ಮೂರು ಮಾತುಗಳಲ್ಲಿ ಎಷ್ಟು ಅರ್ಥವು ಅಡಗಿರುತ್ತದೆ! ಮನುಷ್ಯನ ನಿಜ ಸ್ಥಿತಿ ಯಾವದು? ಭಯ ಯಾವದು? ಆಶೆ ಯಾವದು? ಇದು ಆ ಮೂರು ಮಾತುಗಳಲ್ಲಿ ಅದೆ. ನಿಜ ಸ್ಥಿತಿ ಇಂಥಾದ್ದೆಂದು ಬಲ್ಲೆವು, ಶಿಕ್ಷೆಗೆ ಭಯ ಪಡುತ್ತೇವೆ, ರಕ್ಷಣೆಗೆ ಆಶೆ ಮಾಡುತ್ತೇವೆ. ಈ ಮೂರು ಸುಲಭವಾದ ಶಬ್ದಗಳನ್ನು ಧ್ಯಾನದಲ್ಲಿಟ್ಟು ಕೊಂಡು, ಪದೇ ಪದೇ ಅವುಗಳ ಅರ್ಥವನ್ನು ಆಲೋಚನೆ ಮಾಡೋಣಾ.

ಸಂತ ಕ್ರಿಸ್ತೊಫರನ ಕಥೆ.

ಒಂದಾನೊಂದು ಕಾಲದಲ್ಲಿ ಅಫ್ರೊಬನು ಎಂತ ಒಬ್ಬ ಮನುಷ್ಯನಿದ್ದನು. ಅವನು ಉದ್ದಾಳು, ಬಹು ಗಡುತರನೂ ವಿಶಾಲ ಎದೆಯುಳ್ಳವನೂ ಮಹಾ ಬಲಿಷ್ಠನೂ ಆಗಿದ್ದನು. ತನ್ನಂಥಾ ಪರಾಕ್ರಮಿಯನ್ನು ಚಾಕರಿಗೆ ಇಟ್ಟು ಕೊಳ್ಳುವದಕ್ಕೆ ಯೋಗ್ಯನಾದ ಯಜಮಾನನು ಶಿಕ್ಕಿದರೆ, ಅವನಲ್ಲಿ ಚಾಕರಿ ಮಾಡ ಬೇಕೆಂತ ಅವನಿಗೆ ಮನಸ್ಸಾಯಿತು. ಆದರೆ ತನ್ನ ಯಜಮಾನನಾಗುವವನು ಯಾರಿಗೂ ಅಧೀನನಾಗಿರದವನೂ ಈ ಪೃಥ್ವಿಯಲ್ಲಿ ಯಾರಿಗೂ ಹೆದರದವನೂ ಆಗಿರ ಬೇಕು ಎಂತ ಅವನು ನೆನಸಿ, ಅಂಥಾ ಯಜಮಾನನನ್ನು ಹುಡುಕುತ್ತಿರುವಾಗ್ಯೆ, ಒಂದು ಊರಿನಲ್ಲಿ ಒಬ್ಬ ಬಲಾಢ್ಯ ಅರಸನಿದ್ದಾನೆಂತ ವರ್ತಮಾನ ಕೇಳಿ, ಅವನಲ್ಲಿಗೆ ಹೋಗಿ—ನಾನು ನಿಮ್ಮಲ್ಲಿ ಚಾಕರಿಗೆ ಇರುತ್ತೇನೆಂತ ಹೇಳಲಾಗಿ ಅರಸನು ಹರ್ಷಿತನಾಗಿ, ಅವನನ್ನು ಇಟ್ಟು ಕೊಂಡನು. ಅಫ್ರೊಬನು ಆ ಅರಸನ ಬಳಿಯಲ್ಲಿ ನಂಬಿಕೆಯಿಂದ ಕೆಲಸ ಮಾಡುತ್ತಾ ಕೆಲವು ಕಾಲ ಕಳದ ಮೇಲೆ ಒಂದಾನೊಂದು ದಿನ ಅರಸನು ಅಸ್ವಸ್ಥದಲ್ಲಿ ಬಿದ್ದು, ಪ್ರಾಣಾಂತಿಕವಾಗಲಾಗಿ, ಮರಣವನ್ನು ನೆನಸಿ, ಬಹು ಭಯಸ್ಥನಾದನು. ಆಗ್ಯೆ ಅಫ್ರೊಬನು ಹತ್ತರ ಬಂದು, "ಪರಾಕೆ, ತಾವು ಬಲಿಷ್ಠ ಅರಸರಾಗಿರುವಂಥವರು, ಯಾಕೆ ಭಯಸ್ಥರಾಗಿದ್ದೀರಿ?" ಎಂತ ವಿಚಾರಿಸಲು, ಅರಸನು ಹೇಳಿದನು "ಅಪ್ಪಾ, ನಾನು ಪಿಶಾಚನಿಗೆ ಹೆದರುತ್ತೇನೆ, ನಾನು ಈ ದೇಹ ಬಿಟ್ಟಾಗಲೇ ಅವನ ಕೈಯಲ್ಲಿ ಬೀಳುತ್ತೇನಲ್ಲಾ." ಅಫ್ರೊಬನು—"ಹಾಗಾದರೆ ನಿಮಗಿಂತಲೂ ಬಲಿಷ್ಠನಾದವನೊಬ್ಬನಿದ್ದಾನೆ." ಅರಸನು—"ಹೌದಪ್ಪಾ, ಪಿಶಾಚನು ನನಗಿಂತಲೂ ಬಲಿಷ್ಠನು. ಅಫ್ರೊಬನು—"ಹಾಗಾದರೆ ನಾನೀಗಲೇ ನಿಮ್ಮ ಚಾಕರಿ ಬಿಟ್ಟೆ; ಎರಡನೆ ಯಜಮಾನನಿಲ್ಲದ ಅರಸನ ಬಳಿಯ ಮಾತ್ರ ನಾನು ಚಾಕರಿ ಮಾಡುವವನು, ಬಲ್ಲಿರೋ?" ಹೀಗೆ ಹೇಳಿ, ಅಲ್ಲಿಂದ ಹೊರಟು, ಪಿಶಾಚನ ಹತ್ತರ ಚಾಕರಿಗೆ ನಿಂತನು. ಬಹಳ ದಿವಸ ಹೋಗಲಿಲ್ಲಾ, ಒಂದು ದಿನ ಅಫ್ರೊಬನು ಪಿಶಾಚನ ಕೂಡ ಹೋಗುವಾಗ್ಯೆ, ದಾರಿಯಲ್ಲಿ ನೆಟ್ಟಿದ್ದ ಕ್ರೂಜೆಯನ್ನು ನೋಡಿದ ಕೂಡಲೇ ಪಿಶಾಚನು ತರತರನೇ ನಡುಗುವದನ್ನು ಕಂಡನು. ಯಾಕೆ ಸ್ವಾಮಿ, ನೀವು ಹೀಗೆ ನಡುಗುತ್ತೀರಿ? ಅದೇನು? ಎಂತ ಅಫ್ರೊಬನು ಕೇಳಲು, ಪಿಶಾಚನು—"ಅದು ಕ್ರೂಜೆ." ಅಫ್ರೊಬನು—"ಕ್ರೂಜೆ ಹೌದಷ್ಟೇ, ನೀವು ನಡುಗುವದ್ಯಾಕೆ? ಹೇಳಿ!" ಪಿಶಾಚನು—"ಅದರ ಮೇಲೆ ತೂಗ ಹಾಕಿಸಿ ಕೊಂಡು ಮರಣ ಪಟ್ಟ ಕ್ರಿಸ್ತನಿಗೆ ನಾನು ಭಯ ಪಡುತ್ತೇನೆ." ಅಫ್ರೊಬನು—"ಅವನು ನಿಮಗಿಂತಲೂ ಶಕ್ತಿವಂತನೋ?" ಪಿಶಾ

ಚನು—"ಹೌದು, ಅವನು ನನ್ನ ವೈರಿ." ಅಫ್ರೊಬನು—"ನಮಸ್ಕಾರವಯ್ಯಾ, ನಿಮ್ಮ ಚಾಕರಿ ನಿಮಗೆ, ನಾನು ಕ್ರಿಸ್ತನನ್ನು ಹುಡುಕುತ್ತಾ ಹೋಗುತ್ತೇನೆ. ಎರಡನೆ ಯಜಮಾನನಿಲ್ಲದವನನ್ನು ಮಾತ್ರ ನಾನು ಸೇವಿಸುವವನು." ಹೀಗೆ ಹೇಳಿ ಅಫ್ರೊಬನು ಪಿಶಾಚನನ್ನು ಬಿಟ್ಟು ಹೋಗುತ್ತಿರುವಾಗ್ಯೆ ಒಂದು ವನಾಂತರದಲ್ಲಿ ಒಬ್ಬ ಯತಿಯ ಬಳಿಗೆ ಬಂದು, ಕ್ರಿಸ್ತನ ವಿಷಯ ವಿಚಾರಿಸಲು, ಯತಿ ಹೇಳಿದನು—"ನೀನು ಕ್ರಿಸ್ತನ ಕೆಲಸ ಮಾಡಿದರೆ, ನೀನು ಅವನ ಚಾಕರನಾಗುತ್ತಿ; ಒಂದಾನೊಂದು ಕಾಲ ಅವನು ತಾನೇ ನಿನಗೆ ಪ್ರತ್ಯಕ್ಷವಾಗಿ ನಿನ್ನ ಕೆಲಸಕ್ಕೆ ಮೆಚ್ಚಿ ಹೊಗಳುವನು," ಅಂದನು. ಈ ಮಾತು ಅಫ್ರೊಬನು ಶಿರಸಾವಹಿಸಿ ಕೊಂಡು, ಎಲ್ಲಿ ಯಾರಾದರೂ ಅಧ್ವಾನ ಪಟ್ಟರೋ ಅಲ್ಲಿಗೆ ಓಡಿ ಹೋಗಿ ಸಹಾಯ ಮಾಡುತ್ತಾ, ತಾನು ಕಣ್ಣಾರೆ ಕಾಣದಿದ್ದಾಗ್ಯೂ ಪ್ರೀತಿ ಮಾಡುತ್ತಿದ್ದ ಯಜಮಾನನ ದರ್ಶನ ತನಗಾಗ ಬೇಕೆಂತ ಪ್ರಾರ್ಥಿಸುತ್ತಾ ಬಹು ಕಾಲ ಕಳದನು. ಪರಲೋಕಕ್ಕೆ ಹೋಗುವವರು ಅವನಿಗೆ ಮಾಡುತ್ತಿದ್ದ ಆಶೀರ್ವಾದದಿಂದ ಅವನು ಮನಸ್ಸಿನಲ್ಲಿ ಮಹಾ ಸಂತುಷ್ಟನಾಗಿ, ಆನಂದಬಾಷ್ಪಗಳನ್ನು ಸುರಿಸುತ್ತಿದ್ದನು. ಅಫ್ರೊಬನು, ಯಾತ್ರಿಕರು ಪವಿತ್ರ ದೇಶಕ್ಕೆ ಹೋಗ ಬೇಕಾದರೆ, ದಾಟ ಬೇಕಾಗಿದ್ದ ಹೊಳೆಯ ಬಳಿಯಲ್ಲಿ ಸಣ್ಣದೊಂದು ಗುಡಿಸಿಲು ಮಾಡಿ ಕೊಂಡು, ಹೊಳೆ ದಾಟ ಆಚೆ ಹೋಗುವವರಿಗೆ ಸಹಾಯ ಮಾಡುತ್ತಾ ಇದ್ದನು.

ಒಂದು ದಿನ ರಾತ್ರಿ ಮಹಾ ಜಡಿಮಳೆ ಉಂಟಾಗಿ, ಹೊಳೆಯಲ್ಲಿ ನೀರು ಉಕ್ಕಿ, ಸಮುದ್ರದ ತೆರೆಗಳಂತೆ ಬಡಿಯುತ್ತಾ ಇರಲಾಗಿ—"ಬಾರಯ್ಯಾ, ನನ್ನನ್ನು ನದಿಯ ಆಚೆಗೆ ಪಾರು ಮಾಡು!" ಎಂತ ಕರಿಯುವ ಒಂದು ಮಗುವಿನ ಸುಸ್ವರವು ಅವನ ಕಿವಿಗೆ ಬಿತ್ತು. ಅವನು ಫಕ್ಕನೆ ಎಚ್ಚತ್ತು, ಹೀಗೆ ಮಳೆ ಬಡಿಯುವಾಗ್ಯೆ ಈ ಸಮರಾತ್ರಿ ವೇಳೆಗೆ ಮಗು ಇಲ್ಲಿಗೆ ಎಲ್ಲಿಂದ ಬಂತೆಂದು ಮನಸಿನಲ್ಲೆ ವಿಚಾರಿಸಿ ಕೊಳ್ಳುತ್ತಾ ಹೊರಗೆ ಬಂದು, ದಿನವೆಲ್ಲಾ ಜನರನ್ನು ಪಾರು ಮಾಡಿ, ತನಗಾದ ಆಯಾಸ ಮರೆತು, ಆ ಮಗುವನ್ನು ಹೆಗಲ ಮೇಲೆ ಕುಂಡ್ರಿಸಿ ಕೊಂಡು, ನೀರಲ್ಲಿ ಕಾಲಿಟ್ಟು ಮುಂದೆ ನಡದನು. "ಏನಿದು! ನಾನು ಹೊತ್ತದ್ದು ಒಂದು ಮಗು, ಅದು ಪರ್ವತದಷ್ಟು ಭಾರವಾಗಿ ಕಾಣುತ್ತದೆ!" ಎಂತ ಅವನು ಮನಸ್ಸಿನಲ್ಲಿ ಹೇಳುವಾಗಲೇ ಭಾರ ತಾಳಲಾರದೆ ಬೊಗ್ಗ ಬೇಕಾಯಿತು. ಅವನ ರೋಮರೋಮದಿಂದ ಬೆವರು ಹೊರಟಿತು. ಈ ಭಾರದಿಂದ ಅವನು ಮುಣುಗಲಿಕ್ಕಾಗಿ ಮಹದಾಶ್ಚರ್ಯದಿಂದ "ಮಗು, ನೀನ್ಯಾರು? ಹೇಳು!" ಅಂದನು. ಈ ಮಾತು ಅವನ ತುಟಿಯಿಂದ ಹೊರಗೆ ಬಂದಾಗಲೇ ಅವನು ಹೊತ್ತ ಮಗು ಅವನನ್ನು ಕೈಯಲ್ಲಿ ಹಿಡಿದು, ಅವನನ್ನು ನೀರಿನಿಂದ ಮೇಲೆ ತಂದು ಬಿಟ್ಟಿತು. ಆಗ ಆ ಮಗು ಹೇಳಿತು—"ನೀನು ಈ ವರೆಗೆ ಕಣ್ಣಾರೆ ಕಾಣದೆ ಚಾಕರಿ ಮಾಡುತ್ತಿದ್ದ ಕ್ರಿಸ್ತನು ನಾನೇ, ಈ ನನ್ನ ಚಾಕರರಿಗೆ ನೀನು ಮಾಡಿದ ಸೇವೆ ನನಗೆ ಸಂತು". ಆ ಕ್ಷಣವೇ ಅಫ್ರೊಬನು ನೆಲದಲ್ಲಿ ಸಾಷ್ಟಾಂಗ ಬಿದ್ದು ಅವನಿಗೆ ನಮಸ್ಕಾರ ಮಾಡಿದನು. ಆಗ್ಯೆ ಆ ಯಜಮಾನನು ಅಫ್ರೊಬನಿಗೆ,—"ನಿನಗೆ ಇನ್ನು ಮೇಲೆ ಅಫ್ರೊಬನೆಂದಲ್ಲಾ, ಕ್ರಿಸ್ತೊಫರ್ (ಕ್ರಿಸ್ತನನ್ನು ಹೊತ್ತವನು) ಎಂತ ಹೆಸರಾಗ ಬೇಕು. ಜಗದ್ರಕ್ಷಕನಾದ ಕ್ರಿಸ್ತನನ್ನು ನೀನು ಹೊತ್ತಿ" ಅಂದನು. ಅಂದಿನಿಂದ ಸಂತುಷ್ಟನಾದ ಕ್ರಿಸ್ತೊಫರನು ಯಜಮಾನನು ತನ್ನ ಮೇಲೆ ಯಾವ ಹೊರೆ ಇಟ್ಟಾಗ್ಯೂ, ಅದನ್ನು ಸಂತೋಷದಿಂದ ಹೊರುವವನಾದನು.

ಸತ್‌ಕ್ರೈಸ್ತನು.

ಸತ್‌ಕ್ರೈಸ್ತನು ಸಮುದ್ರದಲ್ಲಿ ನಡಿಯುವ ಹಡಗದೋಪಾದಿ ಇದ್ಧಾನೆ; ಹಡಗು ಸಮುದ್ರದಲ್ಲಿರುವದರಿಂದ ಮುಳುಗುವದಿಲ್ಲಾ; ಸಮುದ್ರದ ನೀರು ಹಡಗದೊಳಗೆ ಹೋಗುವದರಿಂದಲೇ ಮುಳುಗುತ್ತದೆ. ಹಾಗೆಯೇ ಲೋಕದ ಪ್ರೀತಿ ಮನಸ್ಸಿನೊಳಗೆ ಶೇರುವದರಿಂದಲೇ ಅನೇಕರು ನಾಶನವಾಗುತ್ತಾರೆ.

ವಿವಿಧ ವರ್ತಮಾನಗಳು.

ತಿನ್ನವೆಲ್ಲಿಯ ಎಸ್. ಪಿ. ಜಿ. ಮಿಶ್ಯನಿನಲ್ಲಿ ಸಮುದಾಯವಾಗಿ ಕ್ರೈಸ್ತಧರ್ಮ ಸ್ವೀಕಾರ ಮಾಡಿದ ಜನರ ಸಂಖ್ಯೆ ೨೦ ಸಾವಿರವಾಗಿದೆ. ಈ ಸಂಖ್ಯೆ ಇನ್ನೂ ಹೆಚ್ಚುವ ಹಾಗೆ ಕಾಣುತ್ತದೆ. ಅಲ್ಲಿಯ ಚರ್ಚ್‍ಮಿಶ್ಯನಿನಲ್ಲಿ ೧೦ ಸಾವಿರ ಜನರು ಸ್ನಾನ ತೆಗದು ಕೊಳ್ಳುವದಕ್ಕೆ ಉಪದೇಶ ಹೊಂದುತ್ತಾ ಇದ್ದಾರೆ. ಆರ್ಕಾಟಿನ ಅಮೇರಿಕನ್ ಮಿಶ್ಯನಿನಲ್ಲಿ ಕಳೆದ ವರುಷ ೧,೯೦೦ ಜನರು ಸ್ನಾನ ಬೋಧನೆಯಲ್ಲಿದ್ದರು; ಆ ಮೇಲೆ ೬ ಸಾವಿರ ಜನರು ಕ್ರೈಸ್ತರಾಗ ಬೇಕೆಂತ ನಿಶ್ಚಯ ಮಾಡಿ, ತಮ್ಮ ಬಳಿಗೆ ಉಪದೇಶಕರನ್ನು ಕಳುಹಿಸ ಬೇಕೆಂದು ಮಿಶ್ಯನೆರಿಗಳನ್ನು ಬೇಡಿ ಕೊಂಡಿದ್ದರು. ನಮ್ಮ ಮಿಶ್ಯನಿನಲ್ಲಿ ೧ ಸಾವಿರಕ್ಕಿಂತ ಹೆಚ್ಚು ಮಂದಿ ಸಭೆಯಲ್ಲಿ ಶೇರಿದರು. ಹೀಗೆ ದಕ್ಷಿಣ ಹಿಂದುಸ್ಥಾನದ ನಾಲ್ಕು ಮಿಶ್ಯನಿನಲ್ಲಿ ೩೮-೩೯ ಸಾವಿರ ಜನರು ಕ್ರೈಸ್ತಧರ್ಮಕ್ಕೆ ಶೇರಿದರು. ಉತ್ತರ ಹಿಂದುಸ್ಥಾನದಲ್ಲಿ ಚೋಟಾನಾಗಪುರದಲ್ಲಿಯ ಮಿಶ್ಯನಿನಲ್ಲಿ ವರುಷಂಪ್ರತಿ ಸಾವಿರ, ಎರಡು ಸಾವಿರ ಜನರು ಕ್ರೈಸ್ತರಾಗುತ್ತಾ ಇದ್ಧಾರೆ. ಚನ್ನಾಗಿ ವಿಚಾರಣೆ ಮಾಡಿದರೆ ೧೮೭೭—೭೮ನೇ ವರುಷದಲ್ಲಿ ಹಿಂದುದೇಶದಲ್ಲಿ ಒಟ್ಟಿಗೆ ೪೦—೪೫ ಅಥವಾ ೫೦ ಸಾವಿರ ಜನರು ಕ್ರೈಸ್ತರಾದರು ಎಂತ ನೆನಸ ಬೇಕಾಗುತ್ತದೆ. ಈ ವಿಷಯದಲ್ಲಿ ಹೆಚ್ಚಿನ ವರ್ತಮಾನ ಶಿಕ್ಕಿದರೆ, ನಮ್ಮ ವಾಚಕರಿಗೆ ತಿಳಿಸುವೆವು.

ಸಪ್ತಂಬರ ತಿಂಗಳಿನ ಆರಂಭದಲ್ಲಿ ಮಂಗಳೂರಿನಲ್ಲಿ ೨೫ ಮಂದಿಗೂ, ಜೂಮೈ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ೭೨ ಮಂದಿಗೂ ಸ್ನಾನವಾಯಿತು.

ಬರುವ ವರ್ಷದ ಜೂನ ತಿಂಗಳಿನಲ್ಲಿ ದಕ್ಷಿಣ ಹಿಂದುಸ್ಥಾನದ ಮಿಶ್ಯನೆರಿಗಳ ಒಂದು ಸಭೆ ಮಿಶ್ಯನ ಕಾರ್ಯಗಳನ್ನು ಕುರಿತು ಆಲೋಚನೆ ಮಾಡುವದಕ್ಕೆ ಬೆಂಗಳೂರಿನಲ್ಲಿ ನೆರದು ಬರುವದೆಂತಾ ವರ್ತಮಾನವದೆ. ಬಹಳ ವರುಷಗಳ ಹಿಂದೆ ಇದೇ ಉದ್ದಿಶ್ಯವಾಗಿ ನೀಲಗಿರಿಯ ಉತ್ತಕಮಂಡದಲ್ಲಿ ಸಭೆ ನೆರದು ಬರೋಣವಾಗಿತ್ತು.

ಸತ್ಯವೇದದಲ್ಲಿ ದೇವರ ವಾಗ್ದಾನಗಳು ೩೧ ಸಾವಿರಕ್ಕಿಂತ ಹೆಚ್ಚು ಅವೆ ಎಂತ ಸ್ಕೊತಲಾಂಡಿನವನು ಒಬ್ಬನು ಲೆಖ್ಖ ಮಾಡಿದ್ಧಾನೆ.

ಈ ಕಳೆದ ನೂರು ವರುಷಗಳಲ್ಲಿ ಶಾಂತ ಸಮುದ್ರದ ದ್ವೀಪಗಳಲ್ಲಿ ಲಂಡನ್, ವೆಸ್ಲಿಯನ್, ಅಮೇರಿಕನ್ ಮಿಶ್ಯನ ಸಂಘುಗಳವರ ಸಾಹಸ ಪ್ರಯತ್ನದಿಂದ ನರಪಶುಗಳಾಗಿದ್ದ ಮೂರು ಲಕ್ಷ ಜನಗಳು ಕ್ರೈಸ್ತರಾಗಿ ವಿಗ್ರಹಾರಾಧನೆಯನ್ನು ಪೂರ್ಣವಾಗಿ ತಳ್ಳಿ ಬಿಟ್ಟರು. ಸುವಾರ್ತೆಯ ಬಲದಿಂದ ಇಂಥಾ ಮಾರ್ಪಾಟವಾದದ್ದು ಮಹಾ ಅದ್ಭುತವಲ್ಲವೋ?

ಮೈಸೂರು ಪ್ರಾಂತದಿಂದ ರಮಾಬಾಯಿ ಎಂಬ ಒಬ್ಬ ಮಹಾರಾಷ್ಟ್ರ ಬ್ರಾಹ್ಮಣ ಸ್ತ್ರೀ ದೇಶಸಂಚಾರ ಮಾಡುತ್ತಾ ಕಲ್ಕತೆಗೆ ಹೋಗಿದ್ಧಾಳೆ. ಅವಳು ಅಲ್ಲಿಯ ಜನರಿಗೆ ತನ್ನ ವಿದ್ಯೆಯಿಂದಲೂ ಅಸಾಧರಣ ಬುದ್ಧಿಯಿಂದಲೂ ಬಹಳ ಆಶ್ಚರ್ಯಕ್ಕೆ ಕಾರಣವಾದಳು. ಅವಳಿಗೆ ಭಾಗವತದಲ್ಲಿ ೧೮,೦೦೦ ಗ್ರಂಥಗಳು ಮುಖಪಾಠ ಬರುತ್ತವೆ. ಪಾಣಿನೀ ವ್ಯಾಕರಣದ ಕಠಿಣ ಭಾಗದಲ್ಲಿ ಚನ್ನಾಗಿ ವ್ಯುತ್ಪತ್ತಿ ಅದೆ. ಸಂಸ್ಕೃತ ಭಾಷೆ ವ್ಯಾಕರಣಶುದ್ಧವಾಗಿಯೂ ಸರಳವಾಗಿಯೂ ಮಾತಾಡುತ್ತಾಳೆ, ಶ್ಲೋಕಗಳನ್ನು ತ್ವರಿತವಾಗಿ ರಚಿಸುತ್ತಾಳೆ. ಅವಳು ಸುಮಾರು ಇಪ್ಪತ್ತೆರಡು ವರುಷ ಪ್ರಾಯದವಳು, ಮಹಾ ಮರ್ಯಾದೆಶೀಲವುಳ್ಳವಳು; ಅವಳಿಗಿನ್ನೂ ವಿವಾಹವಾಗಲಿಲ್ಲವಂತೆ. ಅವಳ ಸಂಗಡವಿರುವ ಅವಳ ಸಹೋದರನೂ ಸಂಸ್ಕೃತದಲ್ಲಿ ಮಹಾ ನಿಪುಣನಾಗಿದ್ಧಾನೆ. ರಮಾಬಾಯಿ ಈ ಯಾವತ್ತು ವಿದ್ಯೆ ತನ್ನ ತಾಯಿಯಿಂದ ಕಲಿತಳು, ಅವಳು ತನ್ನ ಸಹೋದರನಿಂದ ಕಲಿತಿದ್ದವಳಂತೆ. ದಕ್ಷಿಣ ಹಿಂದುಸ್ಥಾನದಲ್ಲಿ ಅನೇಕ ಸ್ಥಳಗಳಲ್ಲಿ ಬ್ರಾಹ್ಮಣರು, ಯಾಕೆ ಶೂದ್ರರೂ ಸಹ, ಸಂಸ್ಕೃತಾಭ್ಯಾಸ ಚನ್ನಾಗಿ ಮಾಡಿದವರಿದ್ಧಾರೆ; ಇಂಥವರು ದಖನದಲ್ಲಿಯೂ ಉತ್ತರ ಹಿಂದುಸ್ಥಾನದಲ್ಲಿಯೂ ಬ್ರಾಹ್ಮಣರೊಳಗೂ ಕಮ್ಮಿ. ಈ ರಮಾ

ಬಾಯಿ ತೀರ್ಥಯಾತ್ರೆಗಾಗಿಯೂ ಜ್ಞಾನಪ್ರಾಪ್ತಿಗಾಗಿಯೂ ದೇಶಸಂಚಾರ ಮಾಡುತ್ತಿದ್ದಾರೆ.

ಮದ್ರಾಸ ಸಂಸ್ಥಾನದಲ್ಲಿ ಈಗ ಇಪ್ಪತ್ತೊಂದು ಜಿಲ್ಲೆಗಳು ಅವೆಯಷ್ಟೇ. ಇವುಗಳಲ್ಲಿ ಮಧುರೆ ಜಿಲ್ಲೆ, ಶಾಲ್ಯ ಜಿಲ್ಲೆ ಮುಂತಾದ ಕೆಲವು ಜಿಲ್ಲೆಗಳು ಬಹಳ ವಿಸ್ತಾರವಾಗಿರುವದರಿಂದ ಇನ್ನೂ ೪ ಹೊಸ ಜಿಲ್ಲೆಗಳನ್ನು ಏರ್ಪಡಿಸ ಬೇಕೆಂದು ಮದ್ರಾಸ ಆಧಿಪತ್ಯದವರು ಆಲೋಚನೆ ಮಾಡುತ್ತಿದ್ದಾರೆ.

ಮಿಡಿತೆಗಳು ಹಿಂದುಸ್ಥಾನದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಪಯಣ ಮಾಡುತ್ತಾ ಗುಜರಾತಿನ ಒಂದು ಕಡೆಗೆ ಬಂದು ಮುಟ್ಟಿದ್ದಾವೆ. ಅಮೇರಿಕದಲ್ಲಿ ಮಿಡಿತೆಗಳು ಹದಿನೆಂಟು ವರುಷಗಳಿಗೊಂದಾವರ್ತಿ ಕಾಣಿಸಿ ಕೊಳ್ಳುತ್ತವಂತೆ. ಇಲ್ಲಿ ಅವುಗಳು ಇದಕ್ಕೆ ಮುಂಚೆ ಬಂದು ಎಷ್ಟು ವರುಷಗಳಾದವೆಂದು ಯಾರಾದರೂ ಲೆಖ್ಖ ಮಾಡಿದ್ದಾರೋ?

ಗ್ವಾಲೇರ ಸಂಸ್ಥಾನದಲ್ಲಿ ಈ ವರುಷ ಒಳ್ಳೇ ಮಳೆ ಬಾರದ ಕಾರಣ ಆ ಶೀಮೆಯ ಮಹಾರಾಜನು ಒಂದು ಕೋಟಿ ಶಿವಲಿಂಗಗಳ ಪೂಜೆ ಮಾಡ ಬೇಕೆಂತ ಬ್ರಾಹ್ಮಣರನ್ನು ನೇಮಿಸಿದ್ದಾನೆ; ಈ ಸಂಬಂಧದಿಂದ ದಿನ ನಿತ್ಯಾ ೫೦೦ ಭಟ್ಟರಿಗೆ ಸಮಾರಾಧನೆಯಾಗುವ ಕ್ರಮ ನಡಿಯುತ್ತದೆ. ಮಹಾರಾಜನ ಈ ದೇವಭೋಳೆತನ ನೆನಸಿ, ದೇಶದ ಹಿತಚಿಂತಕರಾಗಿರುವವರಿಗೆ ಬಹಳ ವ್ಯಸನವಾಗಿದೆ.

ಕಾಶ್ಮೀರದಲ್ಲಿ ದುಷ್ಕಾಲದ ಧಾವತಿ ಅತಿರೇಕವಾಗಿ, ಜನರು ಗ್ರಾಮುಗಳನ್ನು ಬಿಟ್ಟು ವಲಸೆ ಹೋದ್ದರಿಂದ ವಿಸ್ತಾರ ಶೀಮೆಗಳು ನಿರ್ಜನವಾಗಿವೆ. ಸುಮಾರು ೩೦೦ ಜನರ ವಸ್ತಿ ಇದ್ದ ಒಂದು ಹಳ್ಳಿಯಲ್ಲಿ ಈಗ ಒಬ್ಬ ಫಕೀರನು, ಒಂದು ಆಡು, ಎರಡು ಕೋಳಿ ಮಾತ್ರ ಉಳಿದವೆ. ಊರು ಬಿಟ್ಟು ಹೋಗುವದಕ್ಕೆ ಜನರು ಪ್ರಯತ್ನ ಮಾಡಿ, ದಾರಿಯಲ್ಲೇ ಸಾವಿರಾರು ಮಂದಿ ಸತ್ತು ಹೋದರು. ರಾಜಧಾನಿ ಶ್ರೀನಗರದಲ್ಲಿ ಧಾವತಿ ಅಷ್ಟಿಲ್ಲದಿದ್ದಾಗ್ಯೂ, ಹೊಟ್ಟೆಗಿಲ್ಲದೆ ಬಳಲುವವರ ಮೊರೆ ಹೃದಯ ಒಡಿಯುವಂಥಾದ್ದೆಂದು ಕಣ್ಣಾಸಾಕ್ಷಿಗಳು ಹೇಳುತ್ತಾರೆ. ಇದಕ್ಕಿಂತಲೂ ಅರಿಷ್ಟ ಸ್ಥಿತಿ ಬರುತ್ತದೋ ಏನೋ ಎಂತ ಭಯವದೆ. ಈ ವರ್ಷ ಸಾಧಾರಣವಾಗಿ ಬೇಸಾಯ ಮಾಡುವ ಭೂಮಿಯ ನಾಲ್ಕನೇ ಒಂದಂಶ ಮಾತ್ರ ಸಾಗುವಳ್ಳಿಯಾಗಿದೆ. ಕೊಳ್ಳಲಿಕ್ಕೆ ಧಾನ್ಯವಿಲ್ಲದ್ದರಿಂದ ಅಲ್ಲಿ ಹಣದಿಂದ ಏನೂ ಪ್ರಯೋಜನವಿಲ್ಲಾ.

ಅಫ್ರಿಕ ಖಂಡದ ತೀರದ ಹತ್ತರ ದಾಸವ್ಯಾಪಾರದ ಪ್ರತಿಬಂಧನಾರ್ಥವಾಗಿ ಯಾವಾಗಲೂ ಸಂಚರಿಸುತ್ತಿದ್ದ ಇಂಗ್ಲಿಷ ಹಡಗಗಳನ್ನು ಸರಕಾರದವರು ಹಿಂದಕ್ಕೆ ಕರಿಸಿ ಕೊಂಡ ಕಾರಣ ಆ ಖಂಡದ ಸುಮಾರು ಸಾವಿರ ಹರದಾರಿ ಉದ್ದ ತೀರದಲ್ಲಿ ದಾಸರ ವ್ಯಾಪಾರ ಬಹಳ ಹೆಚ್ಚಾಗಿಯದೆ.

ತೆಲಿಫೋನ್ ಎಂಬ ದೂರ ಯಂತ್ರಧ್ವನಿಯ ವಿಷಯ ಕೆಲ ಸಾರಿ ಈ ಪತ್ರದಲ್ಲಿ ಪ್ರಸ್ತಾಪವಾಯಿತು. ಇದರಿಂದ ಅಪಾಯವಾಗುವದು ಉಂಟೆಂತ ಕೆಳಗೆ ಬರುವ ದೃಷ್ಟಾಂತದಿಂದ ಕಾಣುವದು. ಅಮೇರಿಕದಲ್ಲಿ ಒಬ್ಬ ವರ್ತಕನು ತನ್ನ ಮನೆಯಿಂದ ಅಂಗಡಿ ವರೆಗೆ ತೆಲಿಫೋನ್ ಯಂತ್ರವಿಟ್ಟು, ಅದರ ಮೂಲಕವಾಗಿ ಅವನು ಮನೆಯಲ್ಲೇ ಕೂತು, ಅಂಗಡಿಯಲ್ಲಿರುವ ತನ್ನ ಗುಮಾಸ್ತರಿಗೆ ಅಪ್ಪಣೆ ಸೂಚನೆ ಕೊಡುತ್ತಾ ಇದ್ದನು. ಒಂದು ದಿನ ಹೀಗೆ ಮಾಡುತ್ತಿರುವಾಗ ಆ ಯಂತ್ರದ ತಂತಿಯ ಮೇಲೆ ಶಿಡಿಲು ಹೊಡಿಯಿತು. ಆವಾಗ್ಯೆ ಅಂಗಡಿಯಲ್ಲಿ ಆ ಯಂತ್ರದ ಬಳಿಯ ನಿಂತು ಕಿವಿ ಕೊಡುತ್ತಾ ಇದ್ದ ಗುಮಾಸ್ತನಿಗೆ ಚನ್ನಾಗಿ ಧಕ್ಕೆ ತಾಗಿ, ಕೆಲವು ಹೊತ್ತು ಅವನು ಕಿವಡನಾದನು. ಯಂತ್ರದಿಂದ ಬರುತ್ತಿದ್ದ ಶಬ್ದ ತೋಫಿನ ಬಾರು ಹೊಡದ ಶಬ್ದದ ಹಾಗಿತ್ತೆಂತ ಅವನು ಹೇಳುತ್ತಾನೆ. ಈಚೆ ಕಡೆಗೆ ಯಜಮಾನನಿಗೆ ಯಂತ್ರದ ತಂತಿಯ ಸುತ್ತಲು ದೊಡ್ಡ ಬೆಂಕಿಯ ಗುಂಡು ಕಂಡು ಬಂತು. ಆ ಶಿಡಿಲಿನಿಂದ ಅವನು ಮೃತಿ ಪಟ್ಟನು.

ಅಮೇರಿಕದ ಒಬ್ಬ ಯಾತ್ರಿಕನು ಹಡಗದಲ್ಲಿ ಪಯಣ ಮಾಡುತ್ತಾ ೭೬ ದಿವಸಗಳಲ್ಲಿ ಈ ಭೂಮಂಡಲದ ಪ್ರದಕ್ಷಿಣೆ ಮಾಡಿದನೆಂದು ಹೇಳುತ್ತಾರೆ.

ಎರಡು ಮೂರು ವರುಷಗಳ ಹಿಂದೆ ಈಗ ನಡಿಯುವ ಶತಮಾನದ ಮೂರನೇ ಅಂಶದಲ್ಲಿ ಆದ ಸಂಗತಿಗಳನ್ನೆಲ್ಲಾ ಪುನರಾಲೋಚಿಸುವಾಗ, ಇನ್ನೂ ಉಳಿದಿರುವ ೨೫ ವರುಷಗಳಲ್ಲಿ ಹೊಸ ಚಮತ್ಕಾರಿಕಯಂತ್ರಗಳು ವಿಶೇಷವಾಗಿ ಸಂಕಲ್ಪನೆಯಾಗವು ಎಂಬದಾಗಿ ಎಲ್ಲರು ನೆನಸುತ್ತಿರುವಾಗ್ಯೆ ಟೆಲಿಫೋನ್, ಫೊನೆಗ್ರಾಫ್, ಮೈಕ್ರೊಫೊನ್ ಎಂಬ ನೂತನ ಚಮತ್ಕಾರಗಳು ಸಂಕಲ್ಪನೆಯಾದವು. ಇವುಗಳನ್ನು ಈ ಪತ್ರದಲ್ಲಿ ಪ್ರಸ್ತಾಪಿಸಿದ್ದೇವೆ. ಇವುಗಳ ಬೆನ್ನಿಗೆ ಇನ್ನೊಂದು ಸದ್ಯಾ ಪ್ರಖ್ಯಾತಿಗೆ ಬಂದದೆ. ಅದು ಯಾವದಂದರೆ—ಒಂದು ವಿಮಾನದಂಥಾ ಯಂತ್ರದಲ್ಲಿ ಕೂತು, ಆಕಾಶಮಾರ್ಗವಾಗಿ ಮನಸ್ಸಿದ್ದಲ್ಲಿಗೆ ತ್ವರೆಯಿಂದ ಹೋಗುವದು. ಹೀಗೆ ಅಮೇರಿಕದಲ್ಲಿ ಒಬ್ಬನು ಇಂಥಾದ್ದೊಂದು ವಿಮಾನ ಮಾಡಿ ಅದರಲ್ಲಿ ಕೂತು, ೨೫೦ ಅಡಿಗಳು ಮೇಲಕ್ಕೆ ಹೋಗಿ, ಸಮುದ್ರದಲ್ಲಿ ನಾವಿಕನು ಹಡಗನ್ನು ತನ್ನ ಇಚ್ಛೆಯ ಪ್ರಕಾರ ನಡಿಸುವಂತೆ ಅದನ್ನು ತಿರುಗಿಸುತ್ತಾ, ನೋಡುವವರಿಗೆ ಬಹಳ ವಿನೋದ ಉಂಟು ಮಾಡಿದನು. ಅವನು ಏರುವಾಗ ಘಾಳಿ ಇರಲಿಲ್ಲಾ. ಸ್ವಲ್ಪ ಮುಂದಕ್ಕೆ ಹೋಗಲಾಗಿ ಘಾಳಿ ಪ್ರಾರಂಭವಾದದ್ದು ನೋಡಿ, ಬಿರುಘಾಳಿ ಬಂದೀತೋ ಎಂತ ಸಂಶಯ ಪಟ್ಟು, ತನ್ನ ವಿಮಾನ ಹಿಂದಕ್ಕೆ ತಿರುಗಿಸಿ ತಾನು ಹೊರಟಲ್ಲಿಗೆ ಪುನಹಾ ಇಳಿದು ಬಂದನು.

ಜುಲಾಯಿ ತಿಂಗಳಿನ ಮಧ್ಯದಲ್ಲಿ ಅಮೇರಿಕದಲ್ಲಿ ಅತಿರೇಕ ಉಷ್ಣವಿತ್ತು; ಬಿಸಲಿನ ಹೊಡತಕ್ಕೆ (ಬಿಸಲಿನಿಂದಾಗುವ ನಂಜುಜ್ವರದಿಂದ) ಅನೇಕರು ಸತ್ತು ಹೋದರಂತೆ. ಜರ್ಮನ ದೇಶದಲ್ಲಿಯೂ ಅದೇ ಸಮಯದಲ್ಲಿ ಕಠಿಣ ಬಿಸಲು ಇತ್ತು, ಆದರೆ ಶೆಕೆ ಸ್ವಲ್ಪ ದಿವಸ ಮಾತ್ರ ತಾಗಿತು. ಈ ಸಂವತ್ಸರದಲ್ಲಿ ಮಳೆಯೂ ತಂಪೂ ಜಾಸ್ತಿ.

ತುರ್ಕರಿಂದ ಇಂಗ್ಲಿಷರು ಪಡಕೊಂಡ ಕುಪ್ರದ್ವೀಪವು ಮಧ್ಯ ಸಮುದ್ರದ ದ್ವೀಪಗಳಲ್ಲಿ ದೊಡ್ಡದು ಖರೆ; ಅದರಿಂದಲೇ ಅದು ಇಂಗ್ಲಿಷರಿಗೆ ವಿಶೇಷವೆಂಥೇಳ ಕೂಡದು. ಅದು ಸುಮಾರು ೧೫೦ ಮೈಲು ಉದ್ದ, ೬೦ ಮೈಲು ಅಗಲವಾಗಿದೆ. ಹೆಚ್ಚಿನ ಭಾಗವು ಗುಡ್ಡಗಳೇ. ಜನಸಂಖ್ಯೆ ಸುಮಾರು ಮೂವತ್ತು ನಾಲ್ವತ್ತು ಸಾವಿರವಾಗಿರುವದು. ಪರದೇಶಗಳಿಗೆ ಕಳುಹಿಸ ತಕ್ಕ ಸರಕೂ ಜೀನಸೂ ಕಡಿಮೆಯೇ. ಐದರಲ್ಲಿ ಒಂದು ಅಂಶ ನೆಲ ಮಾತ್ರ ಸಾಗುವಳ್ಳಿಯಾಗುತ್ತದೆ. ಪೂರ್ವದಲ್ಲಿ ವೆನೇಶ್ಯ ಸರಕಾರಕ್ಕೆ ಒಳಿತವಾಗಿರುವಾಗ್ಯೆ ಅದರಲ್ಲಿ ಹತ್ತು ಲಕ್ಷ ನಿವಾಸಿಗಳಿದ್ದು, ವ್ಯಾಪಾರ ಚನ್ನಾಗಿ ಮೆರೆಯುತ್ತಿತ್ತು. ಯಾವಾಗ್ಯೆ ತುರ್ಕರ ಕೈಗೆ ಬಿತ್ತೋ ಅಂದಿನಿಂದ ವರುಷವರುಷಕ್ಕೆ ಅದು ಕ್ಷಯವಾಗುತ್ತಾ ಅದರ ದ್ರಾಕ್ಷೇರಸ, ಅರಳೆ, ರೇಶಿಮೆ, ಬಣ್ಣಗಳು, ಇಪ್ಪೆಎಣ್ಣೆ, ನಾನಾ ಫಲಾದಿಗಳು ವಿಲಾಯತಿಯ ಪೇಟೆಗಳಲ್ಲಿ ಕಾಣುವದು ನಿಂತು ಹೋದವು. ವ್ಯಾಪಾರ ಉದ್ದಿಶ್ಯವಲ್ಲಾ, ಇಂಗ್ಲಿಷರ ಅಧಿಕಾರದಲ್ಲಿರುವ ಹಿಂದುಸ್ಥಾನ ಮುಂತಾದ ಶೀಮೆಗಳ ಭದ್ರತೆಗೋಸ್ಕರ ಅದು ಅವರಿಗೆ ಬಲವಾದ ಸ್ಥಾನವಾಗಿದೆ. ಅದು ಯುಫ್ರಾತನದಿಯ ತಗ್ಗಿನಿಂದ ಹಿಂದುಸ್ಥಾನಕ್ಕೆ ಬರುವ ಮಾರ್ಗಕ್ಕೂ ಸುವೇಜ ಕಾಲಿವೆಯ ಪ್ರವೇಶಕ್ಕೂ ಗಡೀ ಕಳ್ಳಿನಂತಿದ್ದು, ಇಂಗ್ಲಿಷರು ಹಿಂದುಸ್ಥಾನಕ್ಕೆ ಬರುವ ದಾರಿ ಕಾಯುವದಕ್ಕೂ ತುರ್ಕರ ಮೇಲೆ ತಮ್ಮ ಅಂಕೆ ನಡಿಸುವದಕ್ಕೂ ತಕ್ಕ ಸ್ಥಳವಾಗಿದೆ. ಇಂಗ್ಲಿಷರು ಅಲ್ಲಿರುವದರಿಂದ ಸುರಿಯ ಮುಂತಾದ ಶೀಮೆಗಳಿಗೆ ಶ್ರೇಯಸ್ಸುಂಟಾಗುವದು ನಿಜವೇ. ಕುಪ್ರ ದ್ವೀಪ ಇಂಗ್ಲಿಷರ ಅಧಿಕಾರದೊಳಗಾದ್ದರಿಂದ ಮಾಲ್ತ ದೇಶದಿಂದಲೂ ಐಗುಪ್ತ ದೇಶದಿಂದಲೂ ಅನೇಕರು ಅಲ್ಲಿಗೆ ವಸ್ತಿ ಮಾಡಲಿಕ್ಕೆ ಹೋಗುತ್ತಾ ಇದ್ಧಾರೆ. ಹಿಂದುಸ್ಥಾನದಿಂದ ಮಾಲ್ತ ದ್ವೀಪಕ್ಕೂ ಅಲ್ಲಿಂದ ಕುಪ್ರದ್ವೀಪಕ್ಕೂ ಕಳುಹಿಸಲ್ಪಟ್ಟ ದಳದ ಕೆಲ ಅಂಶಗಳು ಇತ್ತಲಾಗೆ ಬರ ಬೇಕೆಂತಾ ಅಪ್ಪಣೆಯಾಯಿತು.

ಬೆರ್ಲಿನನಲ್ಲಿ ನೆರದು ಬಂದಿದ್ದ ರಾಜಪ್ರತಿನಿಧಿಗಳ ಸಭೆಯು ತಹನಾಮೇ ಪ್ರಕಾರ ಆಸ್ತ್ರಿಯ ಸರಕಾರದವರು ಬೊಸ್ನಿಯ ಹೆರ್ಜೆಗೋವಿನ ಶೀಮೆಗಳನ್ನು ಸ್ವಾಧೀನ ಮಾಡಿ ಕೊಳ್ಳಲಿಕ್ಕೆ ದಂಡಾಳುಗಳನ್ನು ಕಳುಹಿಸಿದಾಗ್ಯೆ ಆ ಊರಿನ ರೈತರೂ ತುರ್ಕರೂ ಅವರಿಗೆ ಪ್ರತಿಬಂಧ ಮಾಡ ಬೇಕೆಂತ ಆಸ್ತ್ರಿಯರ ಸೈನ್ಯ ಯಾವಲ್ಲಿ ಬಂತೋ ಅಲ್ಲಿಗೆ ಅಡ್ಡ ಬಂದು ಕಾಳಗ ಮಾಡುತ್ತಿದ್ಧಾರೆ. ಆಸ್ತ್ರಿಯರ ಸೈನ್ಯಕ್ಕೆ ಸ್ವಲ್ಪ ತೊಂದರೆಯಾದರೂ, ಜಯವಾಗುತ್ತಾ ಹೆರ್ಜೆಗೊವಿನ ಶೀಮೆ ಅವರ ಕೈವಶವಾದಂತಾಯಿತು. ಸಮಾಧಾನವೆಂಬದು ಒಂದು ತರದಲ್ಲಿ ಆದಾಗ್ಯೂ, ಕಾಳಗವು ಇನ್ನೂ ತುರ್ಕ್ಯ ರಾಜ್ಯದಲ್ಲಿ ನಡಿಯುತ್ತಿರುತ್ತದೆ. ರಣರಂಗಕ್ಕೆ ಕಳುಹಿಸುವದಕ್ಕೆ ಆಸ್ತ್ರಿಯದವರು ಇನ್ನೂ ಸೈನ್ಯ ಕೂಡಿಸುತ್ತಾರೆ.

ತುರ್ಕರು ಬುಲ್ಗಾರ್ಯದ ಕ್ರೈಸ್ತರಿಗೆ ನಡಿಸಿದ ಹಾಗೆಯೇ ಬೊಸ್ನಿಯದ ಕ್ರೈಸ್ತರಿಗೂ ನಡಿಸಿದ್ದು ಚನ್ನಾಗಿ ಗೊತ್ತಾಗಲಿಲ್ಲಾ; ಆದರೆ ಆಸ್ತ್ರಿಯರು ಆ ಶೀಮೆ ಶೇರಿದ್ದರಿಂದ ತುರ್ಕರಲ್ಲಿಯು ಗುಟ್ಟು ಸಹಾ ಬೈಲಿಗೆ ಬಿದ್ದು, ಲೋಕಾಂತವಾಯಿತು. ಆ ದೇಶದಲ್ಲಿ ಹೆಚ್ಚಿನ ಸುದ್ದಿ ಇಲ್ಲದೆ ಸುಮಾರು ೨ ಲಕ್ಷ ಕ್ರೈಸ್ತರು ತುರ್ಕರ ಕೈಯಿಂದ ಸಂಹಾರವಾದರಂತೆ. ಹೀಗೆ ಕೊಲೆಯಾದವರ ಎಲುಬುಗಳನ್ನು ಈಗ ಆಸ್ತ್ರಿಯರು ಬಂದು, ಅಲ್ಲಿಲ್ಲಿ ರಾಶಿ ರಾಶಿಯಾಗಿ ಬಿದ್ದದ್ದು ಕಂಡು ಕೊಂಡರು.

ಬುಲ್ಗಾರ್ಯರು ಕೆಲವು ನೂರು ವರುಷಗಳಿಂದ ತುರ್ಕರ ಕ್ರೂರವಾದ ಆಳಿಕೆಯಲ್ಲಿದ್ದು, ಬಹಳ ತರವಾಗಿ ಕಷ್ಟವನ್ನು ತಾಳಿದವರಾಗಿ, ರುಸ್ಯರ ದಯೆಯಿಂದ ಸ್ವತಂತ್ರವನ್ನು ಪಡಕೊಂಡು, ಈಗ ತಮಗೆ ಮೊದಲು ಹಿಂಸೆ ಮಾಡುತ್ತಿದ್ದ ಮುಸಲ್ಮಾನರನ್ನು ನಾನಾ ಪ್ರಕಾರವಾಗಿ ಪೀಡಿಸುತ್ತಾರೆ. ಪ್ರತೀಕಾರದ ಮರುಳು ತಲೆಗೇರಿದ ಅವರು ಗ್ರೀಕರೂ ಕಥೋಲಿಕರೂ ಯೆಹೂದ್ಯರೂ ಎಂತ ಭೇದ ನೋಡದೆ ಸರ್ವರನ್ನೂ ಏಕ ಪ್ರಕಾರ ಹಿಂಸೆ ಮಾಡುತ್ತಾರಂತೆ. ಬಹುಕಾಲ ಮನಸ್ಸಿನೊಳಗೆ ಇದ್ದ ಹಗೆ ಸಾಧಿಸುವದಕ್ಕೆ ಅವರಿಗೆ ಇಂಬು ಶಿಕ್ಕಿದಾಗಲೇ, ಅಂಕೆ ಇಲ್ಲದ ಕಪಿ ಲಂಕೆ ಸುಟ್ಟಿತೆಂಬ ಗಾದೆಯ ಹಾಗೆ ನಡಕೊಳ್ಳುವದು ಒಂದು ವೇಳೆ ಬಹಳ ಆಶ್ಚರ್ಯವಾಗಿ ಕಾಣದು. ಎರಡು ವರುಷಗಳ ಹಿಂದೆ ತುರ್ಕರು ಅವರ ಮೇಲೆ ನಡಿಸಿದ ರಾಕ್ಷಸಕೃತ್ಯಗಳಿಗಿಂತಲೂ ಇವರು ಈಗ ಮಾಡುವವು ಕ್ರೂರತರವಾಗಿವೆಯಂತೆ. ಆ ಶೀಮೆಯಲ್ಲಿ ಕ್ರಮವಾದ ಆಳುವಿಕೆ ಬೇಗನೆ ಸ್ಥಾಪಿತವಾದರೆ, ಬಹಳ ಒಳ್ಳೇದಾದೀತು. ಆ ಬುಲ್ಗಾರ್ಯರು ಕ್ರೈಸ್ತರೇ ಖರೆ, ಆದರೆ ಹೆಸರಿನ ಪೂರ್ತಿಗೆ ಕ್ರೈಸ್ತರು ಹೊರ್ತು ತಮ್ಮ ಧರ್ಮದ ಸಾರಾಂಶ ಹೃದಯಕ್ಕೆ ತಂದು ನಡೆನುಡಿಗಳಲ್ಲಿ ಅದನ್ನು ಅನುಸರಿಸುವವರಲ್ಲಾ. ಬುಲ್ಗಾರ್ಯರ ಈ ಕ್ರೂರ ಕೃತ್ಯಗಳು ರುಸ್ಯರಿಗೆ ತಿಳಿದರೂ, ತಿಳಿಯದವರ ಹಾಗೆ ಮಾಡುವದರಿಂದ ಇಂಗ್ಲಿಷ ಪ್ರತಿನಿಧಿಯೂ ಸುಲ್ತಾನನೂ ರುಸ್ಯ ಮಹಾರಾಜನಿಗೆ ಬರಕೊಂಡಿದ್ಧಾರೆ.

ಕಳೆದ ವರುಷದ ಯುದ್ಧದಲ್ಲಿ ರುಸ್ಯರಿಗೆ ೧೩೫ ಕೋಟಿ ರೂಪಾಯಿ ಖರ್ಚಾದದ್ದಲ್ಲದೆ ೩೨೧,೦೦೦ ಜನ ದಂಡಾಳುಗಳು ಹತವಾಗಿಯೂ ಘಾಯವಾಗಿಯೂ ಹೋಗಿ ಇನ್ನು ಕೆಲಸಕ್ಕೆ ಬಾರದವರಾದರು.

ವಿಲಾಯತಿಯ ರಾಜ್ಯಗಳ ಸರಕಾರಿ ಖರ್ಚುವೆಚ್ಚವು ಬಹಳವಾಗಿ ಹೆಚ್ಚುತ್ತಾ ಬರುತ್ತದೆ. ಇಂಗ್ಲಂದದ ಸರಕಾರದ ಖರ್ಚುವೆಚ್ಚವು ೧೬೮೫ನೇ ಇಸ್ವಿಯಲ್ಲಿ ೧ ಕೋಟಿ ೪೦ ಲಕ್ಷ ರೂಪಾಯಿಯಷ್ಟಾಗಿತ್ತು. ೧೮೭೭ನೇ ಇಸ್ವಿಯದು ೭೬೦ ಕೋಟಿ ೬೩೪ ಲಕ್ಷ ರೂಪಾಯಿಯಷ್ಟಾಯಿತು. ಫ್ರಂಚ ಸರಕಾರವು ೧೭೪೦ನೇ ಇಸ್ವಿಯಲ್ಲಿ ೧೭ ಕೋಟಿ ಫ್ರಂಕನ್ ವೆಚ್ಚ ಮಾಡಿತು; ೧೮೭೭ನೇ ಇಸ್ವಿಯಲ್ಲಿ ೩೦೧ ಕೋಟಿ ೩೦ ಲಕ್ಷ ಫ್ರಂಕನ್ ಅದರ ವೆಚ್ಚವಾಯಿತು. ೧೭೪೦ನೇ ಇಸ್ವಿಯಲ್ಲಿ ೧ ಕೋಟಿ ೧೦ ಲಕ್ಷ ರೂಪಾಯಿ ವೆಚ್ಚ ಮಾಡಿದ ಪ್ರುಸ್ಯ ಸರಕಾರವು ೩೫ ಕೋಟಿಗಿಂತ ಹೆಚ್ಚು ಖರ್ಚು ಮಾಡಿತು. ಸದ್ಯಾ ಸರಾಸರಿ ಲೆಖ್ಖದಲ್ಲಿ ಒಂದೊಂದು ಜನಕ್ಕೆ ೧೮ ರೂಪಾಯಿ ಸರಕಾರಿ ವೆಚ್ಚವು ಬೀಳುತ್ತದಂತೆ.

Printed at the Basel Mission Press, Mangalore.

ಕ್ರೈಸ್ತಸಭಾಪತ್ರ

ಪುಸ್ತಕ ೧೧. **NOVEMBER 1878.** ಅಂಕೆ ೫.

ವಸ್ತ್ರಾಸ್ತ್ರ ಧರಿಸಿ ಕೊಳ್ಳೋಣ.

ರಾತ್ರಿ ಕಳದು ಹೋಗಿ, ಹಗಲು ಸಮೀಪವಾಯಿತು; ಆದದರಿಂದ ಅಂಧಕಾರದ ಕ್ರಿಯೆಗಳನ್ನು ತೆಗದು ಹಾಕಿ, ಬೆಳಕಿನ ಆಯುಧಗಳನ್ನೂ ಕರ್ತನಾದ ಯೇಸು ಕ್ರಿಸ್ತನನ್ನೂ ಧರಿಸಿ ಕೊಳ್ಳಿರಿ! ರೋಮಾ. ೧೩, ೧೨. ೧೪.

"ಕರ್ತನಾದ ಯೇಸು ಕ್ರಿಸ್ತನನ್ನು ಧರಿಸಿ ಕೊಳ್ಳಿರಿ! ಬೆಳಕಿನ ಆಯುಧಗಳನ್ನು ಧರಿಸಿ ಕೊಳ್ಳಿರಿ!"—ಆತ್ಮಿಕ ಮರಣಕ್ಕೆ ತಪ್ಪಿ, ಪಾಪವೆಂಬ ನಿದ್ರೆ ತಿಳಿದು ಎದ್ದವರಿಗೆ ಈ ಮಾತು ತಾಗುವಂಥಾದ್ದಾಗಿದೆ. ಎದ್ದವನು ಎಲ್ಲಾ ಕೆಲಸಕ್ಕೆ ಮೊದಲಾಗಿ ತನ್ನನ್ನು ತೊಳಕೊಂಡು, ವಸ್ತ್ರ ಧರಿಸಿ ಕೊಳ್ಳಬೇಕು. ಯೇಸು ಕ್ರಿಸ್ತನ ಬೆಳಕಿನಲ್ಲಿ ಎದ್ದವನಾದರೂ, ತನ್ನನ್ನು ತಾನೇ ನೋಡಿದರೆ, ವಿಧವಿಧವಾದ ಕಲ್ಮಷವನ್ನೂ ಹೇಸಿಕೆಯನ್ನೂ ತನ್ನಲ್ಲಿ ಕಂಡು ಕೊಳ್ಳುವನು. ತಕ್ಕ ಶುದ್ಧೀಕರಣಕ್ಕೆ ಸಾಧನವೇನು? "ಯೇಸು ಕ್ರಿಸ್ತನ ರಕ್ತವು ನಮ್ಮನ್ನು ಎಲ್ಲಾ ಪಾಪದಿಂದ ಶುದ್ಧ ಮಾಡುವದು." ೧ ಯೋಹಾ. ೧, ೭. ಈ ತೀರ್ಥದಲ್ಲಿ ಎದ್ದವರು ತಮ್ಮನ್ನು ತೊಳಕೊಂಡು ಶುದ್ಧರಾಗ ಬೇಕು. ಎದ್ದ ಮಾತು ಆಗುವ ತನಕ ಆದಂಥ ಪಾಪವೆಂಬ ಸಾಲವೆಲ್ಲವನ್ನು ಯೇಸು ಕ್ರಿಸ್ತನು ಮೊದಲೇ ಬಿಡಬೇಕು; ಅನಂತರ ಎದ್ದ ಮೇಲೆಯೂ ಅನುದಿನದಲ್ಲಿ ಆಗುವ ಪಾಪವನ್ನು ಆತನು ಮನ್ನಿಸಿ ಬಿಡುತ್ತಾ ಬರುವಾತನಾಗಿ, ನಾವು ತಿರಿಗಿ ಅಶುದ್ಧರಾಗದ ಹಾಗೆ ಆತನು ದಿನಾಲು ನಮ್ಮ ಕಾಲುಗಳನ್ನು ತೊಳದು ಶುದ್ಧ ಮಾಡ ಬೇಕು. (ಯೋಹಾ. ೧೩, ೧೦. ಮತ್ತು ಪ್ರಕಟ. ೭, ೧೪. ಸರಿ ನೋಡತಕ್ಕದ್ದು.) ಆದರೆ ಎದ್ದು ತೊಳಕೊಂಡವನು ಧರಿಸಿ ಕೊಳ್ಳ ತಕ್ಕ ವಸ್ತ್ರಾಭರಣವೇನು? ಅವನು ದೇವರ ಕುರಿಮರಿಯ ಕಲ್ಯಾಣಕ್ಕೆ (ಮದುವೆಗೆ) ಕರೆಯಲ್ಪಟ್ಟವನಾಗಿರಲಾಗಿ, ಮದುವೇ ವಸ್ತ್ರಾಭರಣಗಳನ್ನು ಧರಿಸಿ ಕೊಳ್ಳ ಬೇಕು. ಸ್ವಂತ ನೀತಿ ಎಂತಲೂ ಒಳ್ಳೇ ಕ್ರಿಯೆಗಳೆಂತಲೂ ಅನ್ನಿಸಿ ಕೊಳ್ಳುವ ಹರಕು ಬಟ್ಟೆಗಳಿಂದ ನೀನು ನಿನಗೆ ಒಂದು ದುಸ್ತು ಮಾಡಿ ಕೊಂಡರೆ, ಅದು ಆ ಮದುವೇ

ಪ್ರಸ್ತಕ್ಕೆ ಆದೀತೆಂತ ನೆನಸಿ ಕೊಳ್ಳ ಬೇಡಾ; ಅದಕ್ಕದು ಎಂದಿಗೂ ಆಗದು. “ಕ್ರಿಸ್ತ್ಯೇಸು ರಕ್ತ ನೀತಿಯೇ ನಮ್ಮಲಂಕಾರವಸ್ತ್ರವು.” ಈ ಅಲಂಕಾರವಸ್ತ್ರವನ್ನು ಹೊದ್ದು ಕೊಂಡವನು ಮಾತ್ರವೇ ಆ ದಿವಸದ ಪ್ರಸ್ತದಲ್ಲಿ ದೇವರ ಮುಂದೆ ಕಾಣಿಸಿ ಕೊಂಡು, ನಿಲ್ಲ ಬಹುದು. “ಆತನ ಕಣ್ಣುಗಳು ಬೆಂಕಿಯ ಉರಿಯಂತೆ.” ಆತನು ಇಂಗಿತಜ್ಞನಾಗಿ, ಸರ್ವರ ಅಂತರಿಂದ್ರಿಯಗಳನ್ನು ಶೋಧಿಸಿ ತಿಳಿದಾತನಾಗಿದ್ಧಾನೆ. ಇದನ್ನು ಚನ್ನಾಗಿ ತಕ್ಕಂತೆ ನೆನಸಿ ಕೊಳ್ಳುವವನಿಗೆ ಸ್ವಂತ ನೀತಿ ಎಂಬದು ಸಾಲದೆಂತ ಕಾಣುವದು. ದೇವರು ಸರ್ವಸದ್ಗುಣಸಂಪೂರ್ಣನೂ ಕೇವಲ ದೋಷರಹಿತನೂ ಆಗಿದ್ಧಾನೆ. ನಿನ್ನಲ್ಲಿ ಒಂದೆರಡು ಸುಗುಣಗಳು ಇದ್ದರೂ, ನೀನು ಆಗಿಂದಾಗ್ಯೆ ನೀತಿಗಳನ್ನು ಕೈಕೊಂಡು ಒಳ್ಳೇ ಸಂಕಲ್ಪಗಳಿಂದಲೂ ಭಕ್ತಿಭಾವನೆಗಳಿಂದಲೂ ಪ್ರೇರಿತನಾಗಿ ಒಳ್ಳೇದನ್ನು ಮಾಡಲಿಕ್ಕೆ ಹತ್ತಿದರೂ, ನೀನು ನಿನ್ನನ್ನು ನಿನಗಿಂತ ಪಾಪಿಗಳಾದವರಿಗೆ ಸರಿ ನೋಡುವಲ್ಲಿ ನೀನು ನೀತಿವಂತನು, ಒಳ್ಳೆಯವನು ಎಂದನ್ನಿಸಿ ಕೊಳ್ಳ ತಕ್ಕವನೆಂತ ಕಾಣಿಸಿ ಕೊಂಡರೂ, ನೀತಿಸ್ವರೂಪನೇ ಆಗಿರುವ ದೇವರಿಗೆ ಅದೇನು? ದೇವರ ಪರೀಕ್ಷೆಗೆ ನೀನು ಎಷ್ಟರವನು? ಇತರರಿಗೆ ನಿನ್ನನ್ನು ಸರಿ ನೋಡ ಬೇಡಪ್ಪಾ! ಕೇವಲ ಪವಿತ್ರನೂ ಕೇವಲ ಸದ್ಗುಣಸಂಪೂರ್ಣನೂ ಆಗಿರುವ ಯೇಸು ಕ್ರಿಸ್ತನಿಗೆನೇ ನಿನ್ನನ್ನು ಸರಿ ನೋಡುತ್ತಿರು! ಹಾಗೆ ಮಾಡಿದರೆ, ನಿನ್ನೆಲ್ಲಾ ಹೆಚ್ಚಳವೂ ನಿನ್ನೆಲ್ಲಾ ಸ್ವಾಭಿಮಾನವೂ ನಿನ್ನೆಲ್ಲಾ ಬಿಂಕದ ಬಗೆಗಳೂ ಆರಿ ಹೋಗುವವು. ಆದರೆ ನಿನಗೂ “ಕ್ರಿಸ್ತ ಯೇಸು ದೇವರಿಂದ ಜ್ಞಾನವಾಗಿಯೂ ನೀತಿಯಾಗಿಯೂ ಶುದ್ಧೀಕರಣವಾಗಿಯೂ ವಿಮೋಚನೆಯಾಗಿಯೂ ಮಾಡಲ್ಪಟ್ಟದ್ದನ್ನು” ನೆನಸಿ ಕೊಂಡು, ಮಹೋಪಕಾರವಾಯಿತೆಂದು ದೇವರನ್ನು ಮನಃಪೂರ್ವಕವಾಗಿ ಕೊಂಡಾಡು! ಹೀಗೆ ಮಾಡಿ, ಯೇಸು ಕ್ರಿಸ್ತನು ನನ್ನ ಉಡಿಗೆ ತೊಡಿಗೆ, ನನ್ನ ಭದ್ರವಾದ ಹೊದಿಗೆ ಎಂಥೇಳಿ, ಆತನನ್ನು ಧರಿಸಿಕೋ! ಆತನ ರೂಪಕ್ಕೆ ಸರಿಯಾಗಿ ನಿನ್ನನ್ನು ರೂಪಿಸಲೂ ನಿರ್ಮಿಸಲೂ ಕೊಡು! ಆತನಲ್ಲಿಯೇ ಆತನ ಪ್ರತಿರೂಪವಾಗಿ ನೀನು ಕಾಣಿಸಿ ಕೊಳ್ಳುವದಾದರೆ, ನೀನು ದೇವರಿಗೆ ಮೆಚ್ಚುವಿ. ವಸ್ತ್ರವು ಮನುಷ್ಯನ ಹೊದಿಕೆಯಾಗಿ, ಮರೆಯಾಗಿ, ಅವನನ್ನು ಮುಚ್ಚಿ ಬಿಡುವಂಥಾದ್ದಾಗಿದೆ. ಹೊದಿಕೆಯಲ್ಲಿ ಮನುಷ್ಯನು ಮುಣುಗಿ ಹೋದವನಂತಾಗಿದ್ಧಾನೆ; ಹ್ಯಾಗೋ ಹಾಗೆಯೇ ನಮ್ಮ ಇಡೀ ಸ್ವಭಾವವೂ ಅಹಂತತ್ವವೂ ನಮ್ಮ ವಾಸ ಶ್ವಾಸಗಳೂ ಯೇಸು ಕ್ರಿಸ್ತನಲ್ಲಿ ಮರೆಯಾಗಿ ಮುಳುಗಿ ಹೋದಂತಾಗ ಬೇಕು. “ಬದುಕುತ್ತೇನೆ; ಇನ್ನು ನಾನಲ್ಲಾ, ಕ್ರಿಸ್ತನೇ ನನ್ನಲ್ಲಿ ಬದುಕುತ್ತಾನೆ.” ಈ ಮಾತಿನ ಅಭಿಪ್ರಾಯವು ಒಬ್ಬೊಬ್ಬ ಕ್ರೈಸ್ತನಲ್ಲಿ ಹೌದಾಗ ಬೇಕು. ಹೌದಾಗಲಿ!

(ಮುಂದೆ ಸಾಗಿಸಲ್ಪಡುವದು.)

“ನಿನ್ನ ಮೇಲೆ ನನಗೆ ಇನ್ನು ಪ್ರೀತಿಯಿಲ್ಲಾ!”

ನನ್ನ ಪರಿಚಿತರಲ್ಲಿ ಕ್ಷಯರೋಗಗ್ರಸ್ತಳಾಗಿದ್ದ ಒಬ್ಬ ಸ್ತ್ರೀ ಸಹ ಇದ್ದಳು. ಆಕೆಗೆ ಹೆನ್ರಿ ಎಂಬ ಹೆಸರಿದ್ದ ಸಣ್ಣ ಮಗನೊಬ್ಬನು ಇದ್ದನು.

ಒಂದಾನೊಂದು ಹಿಮಕಾಲದ ದಿವಸದಲ್ಲಿ ನಾನು ನೋಡಲಿಕ್ಕಾಗಿ ಅವಳಲ್ಲಿಗೆ ಹೋಗಿ, ಆಕೆ ಬಿದ್ದಿದ್ದ ಹಾಸಿಗೆಯ ಹತ್ತರ ಕೂತು ಕೊಂಡು, ಸುಖ ದುಃಖ ಸ್ವಲ್ಪ ವಿಚಾರಿಸಿ ಕೇಳಿದ ವೇಳೆಗೆ ಆಕೆಗೆ ವಿಪರೀತವಾದ ಕೆಮ್ಮು ಬರಲಾಗಿ, ಉಸುರು ಕಟ್ಟಿ ಹೋಗಿ, ಸಾಯುತ್ತಾಳೆ ಎಂದು ಕಂಡ ಸಂಕಟವಾಯಿತು. ಆಕೆಯ ಮಗನು ಸಮೀಪದಲ್ಲಿ ಕುಳಿತು, ತಾಯಿಯ ಸಂಕಟವನ್ನು ನೋಡಿ, ಬಹಳ ಅತ್ತತ್ತು ಕಣ್ಣೀರಿಟ್ಟನು. ಕಡೆಗೆ ಕೆಮ್ಮು ತಿರಿಗಿ ಸ್ವಲ್ಪ ನಿಂತು ಹೋಗಿ, ಶಾಂತಿಯಾದಾಗ,

ಅವನು ತನ್ನ ತಾಯಿಯ ಕೊರಳನ್ನು ಬಹು ಅಕ್ಕರೆಯಲ್ಲಿ ತಬ್ಬಿಕೊಂಡು, ಅಂದದ್ದೇನಂದರೆ:— "ಅಮ್ಮಾ! ನಿನ್ನ ಮೇಲೆ ನನಗೆ ಬಹಳ ಬಹಳ ಪ್ರೀತಿಯುಂಟು; ಈ ಕೆಮ್ಮು ಹೋದರಾದೀತು; ಯಾಕೆ ಹೋಗವಲ್ಲದು?"

ಬಳಿಕ ಹೊರಗೆ ಹೋದ ಹುಡುಗನು ಸ್ವಲ್ಪ ಹೊತ್ತಿನ ಮೇಲೆ ತಿರಿಗಿ ಒಳಗೆ ಬಂದು, ತನ್ನ ಮೊಜ್ಜೆಗಳಿಗೆ ಹತ್ತಿದ್ದ ಹಿಮವನ್ನು ಝಾಡಿಸಿ ಬಿಟ್ಟು, ತಾಯಿಗೆ ಹೇಳಿದ್ದೇನಂದರೆ:—"ನಾನು ನೀರುಗಡ್ಡೇ ಮೇಲೆ ಸ್ವಲ್ಪ ಜಾರ್ರ್ಯಾಟ ಮಾಡಲಿಕ್ಕೆ ಹೋಗ ಬಹುದೋ? ಏಡ್ವರ್ಡ್ ಮತ್ತು ಚಾರ್ಲಿ ಅವರಿಬ್ಬರೂ ಹೋಗುತ್ತಾರೆ." ಅದಕ್ಕವನ ತಾಯಿ—"ಹೋಗ ಬೇಡಪ್ಪಾ! ನೀರುಗಡ್ಡೆ ಇನ್ನು ತಕ್ಕಷ್ಟು ದಪ್ಪವಾಗಿ ಘಟ್ಟಿಯಾಗಲಿಲ್ಲಾ" ಎಂದು ಬಹು ಮೆಲ್ಲಗೆ ಹೇಳಲು, ಹೆನ್ರಿ—"ನೀರುಗಡ್ಡೆ ಘಟ್ಟಿ, ನಿನಗೆ ಗೊತ್ತಿಲ್ಲಾ. ಯಾವಾಗಲೂ ಅಸ್ವಸ್ಥವಾಗಿ ಹಾಸಿಗೇ ಮೇಲೆ ಬಿದ್ದು ಕೊಂಡವಳಿಗೆ ಏನು ತಿಳಿಯುತ್ತದೆ?" ಎಂದು ಗಂಟುಮೋರೆ ಮಾಡಿ ಕೊಂಡು ಹೇಳಲಾಗಿ, ತಾಯಿ—"ಕಂದಯ್ಯಾ! ನನ್ನ ಮಾತು ಕೇಳು! ಹೋಗ ಬೇಡಾ!" ಎಂದು ಬಹು ಮೆಲ್ಲನೆ ಹಾಗೂ ಮಮಕಾರಪೂರ್ವಕವಾಗಿ ಹೇಳಿದ್ದಕ್ಕೆ ಹೆನ್ರಿ ಶಿಟ್ಟೇರಿ—"ಎಂಥಾ ನಿರ್ದಯದ ಮಾತಿದು!" ಎಂಥೇಳಿದನು. ಅದಕ್ಕೆ ತಾಯಿ ದುಃಖಮುಖಿಯಾಗಿ—"ಹೆನ್ರಿ! ಅಪಾಯವಿಲ್ಲದಿದ್ದರೆ, ಸಂತೋಷವಾಗಿ ಹೋಗಲಿಕ್ಕೆ ಅಪ್ಪಣೆ ಕೊಟ್ಟೇನು; ಆದರೆ ಹೋಗಲಿಕ್ಕಾಗದು; ಆದ ಕಾರಣ ನೀನು ಒಳ್ಳೇ ಬಾಲನಾಗಿ ನನ್ನ ಮಾತು ಕೇಳು! 'ನಿನ್ನ ಮೇಲೆ ನನಗೆ ಬಹಳ ಪ್ರೀತಿಯುಂಟು' ಎಂದು ನೀನು ತುಸ ಹೊತ್ತು ಮುಂಚೆ ನನಗೆ ಹೇಳಿದಿಯಲ್ಲಾ! ಈಗ ನಿನ್ನ ಪ್ರೀತಿಯನ್ನು ತೋರಿಸಿ ವಿಧೇಯನಾಗಿರು!" ಎಂದನ್ನಲು, ಹೆನ್ರಿ—"ನಿನ್ನ ಮೇಲೆ ನನಗೆ ಇನ್ನು ಪ್ರೀತಿಯಿಲ್ಲಾ!" ಎಂದು ಒದರಿ ಹೊರಡಲಿಕ್ಕೆ ಹೋಗಿ, ಶಿಟ್ಟಿನಲ್ಲಿ ಕದವನ್ನು ತನ್ನ ಹಿಂದೆ ಬಹು ಘಟ್ಟಿಯಾಗಿ ಹಾಕಿ ಬಿಟ್ಟನು.

ಸಣ್ಣವನು ಅಂಥಾ ಮರ್ಯಾದೆಯಲ್ಲಿ ಹೋಗಿ ಬಿಟ್ಟದ್ದಕ್ಕೆ ತಾಯಿಗೆ ತಿರಿಗಿ ಕೆಮ್ಮು ಶುರುವಾಗಿ, ಮಹಾ ಸಂಕಟವಾಯಿತು. ಆಕೆಯು ಕೆಮ್ಮಿನಲ್ಲಿ ನಾನು ಹೆನ್ರಿಯು ನೆನಪನ್ನು ಮರತು ಬಿಟ್ಟೆ; ಆದರೆ ಅವನಿಗೋಸ್ಕರವಾದ ದುಃಖದಿಂದ ತಾಯಿಯ ತಲೆಗಿಂಬು ಆಕೆಯ ಕಣ್ಣೀರಿನಿಂದ ನೆನೆದು ಹೋಯಿತು. ಕೆಮ್ಮು ತಿರಿಗಿ ಅಣಗಿ ಹೋಗಿ, ಸ್ವಲ್ಪ ಶಾಂತಿಯಾಗಲು, ಆಕೆಗೆ ದಣುವಿನಿಂದ ತುಸ ನಿದ್ದೆ ಬಂಥೋಯಿತು.

ಸ್ವಲ್ಪ ಹೊತ್ತಿನ ಮೇಲೆ ಜನ ಬರುವ ಶಬ್ದ ಕೇಳಲಾಯಿತು. ಬಹು ಮೆಲ್ಲಗೆ ಬರುವವರು ಏನಾದರೂ ಹೊತ್ತು ಕೊಂಡು ಬರುತ್ತಾರೆಂದು ಸದ್ದಿನ ತರದಿಂದ ತಿಳಿಯಲಾಯಿತು. ಜೀವ ಹಾರಿ ಹೋದಂತಾಗಿದ್ದ ಹೆನ್ರಿಯನ್ನುಹೊತ್ತು ಕೊಂಡು ಬಂದರು. ಕೋಪಾವೇಶದಲ್ಲಿ ತಾಯಿಯ ಮಾತನ್ನು ವಿಾರಿ ಹೊರಟು, ಊರನ್ನು ಹಾಯುವ ಹಳ್ಳವನ್ನು ಮುಸುಕಿದ್ದ ನೀರುಗಡ್ಡೇ ಮೇಲೆ ಜಾರ್ರ್ಯಾಟ ಮಾಡಲಿಕ್ಕೆ ಹೋಗಿದ್ದನು; ಆದರೆ ನೀರುಗಡ್ಡೆಯ ಗಾತ್ರವು ಅವನ ಮೈಭಾರಕ್ಕೆ ಸಾಲದ ಕಾರಣ, ನೀರುಗಡ್ಡೆ ಒಡದು, ಕುಸಿದು ಹೋದಲ್ಲಿ ಅವನು ನೀರಿನಲ್ಲಿ ಮುಳುಗಿ ಹೋದನು. ಅವನು ಮುಳುಗಿ ಹೋದದನ್ನು ಒಂದೆರಡು ಜನ ನೋಡಿ, ಓಡಿ ಬಂದು, ಅವನನ್ನು ನೀರಿನಿಂದ ಎತ್ತಿ ತೆಗದರು; ಆದರೆ ತೆಗೆಯಲಿಕ್ಕೆ ಬಹು ಪ್ರಯಾಸವಾಯಿತು. ಅರೆಪ್ರಾಣದಲ್ಲಿ ಅವನನ್ನು ಮನೆಗೆ ತಂಥಾಕಿದರು.

ಜನರು ಬರುವದನ್ನು ಕೇಳುತ್ತಲೇ ನಾನು ರೋಗಿಸ್ಥಳ ಕೋಣೆಯಿಂದ ಹೊರಗೆ ಹೋಗಿ, ನಡೆದ ಸಂಗತಿಯನ್ನು ತಿಳಿದು, ಹೆನ್ರಿಯನ್ನು ಬೇರೆ ಕೋಣೆಯಲ್ಲಿ ಮಲಗಿಸಿ, ಅವನ ತಾಯಿಗೆ ಏನೂ ತಿಳಿದು ಬಾರದ ಹಾಗೆ ಮಾಡ ಬೇಕೆಂದು ತಿರಿಗಿ ಅವಳ ಕೋಣೆಗೆ ಬಂದಲ್ಲಿ ಆಕೆ—"ಅಕಟಾ! ಗೊ

ತ್ತಾಯಿತು! ಹೆನ್ರಿಯನ್ನು ಹೊತ್ತು ಕೊಂಡು ಬಂದರೋ? ಅವನು ನೀರುಗಡ್ಡೇ ಮೇಲೆ ಹೋಗಿ, ಮುಳುಗಿ ಸತ್ತಾನು ಎಂಥೇಳಿದೆನಲ್ಲಾ! ಜೀವ ಹೋಯಿತೋ?" ಎಂದು ಕೇಳಿದಳು. ಆದರೆ ನಾನು "ಜೀವ ಹೋಗಲಿಲ್ಲಾ" ಎಂದು ಪ್ರತ್ಯುತ್ತರವಾಗಿ ಹೇಳಲಿಕ್ಕೆ ಬಾಯಿಯನ್ನು ತೆರೆಯಲಿಕ್ಕಾಗುವ ಮೊದಲು ಆಕೆಯ ಕೆಮ್ಮು ಮತ್ತೂ ಬಲು ಬಲವಾಗಿ ಶುರುವಾಯಿತು. ಅಂದಿನ ಕೆಮ್ಮಿನ ಉರುಪು ಮಿತಿ ಮಿಾರಿ ಹೋಗಿ, ಅವಳ ಉಸುರನ್ನು ಕಟ್ಟಿಸಿ ನಿಲ್ಲಿಸಿ ಬಿಡುವದಾಯಿತು. ಪಾಪ! ಮಗನ ಅವಿಧೇಯತೆ ತಾಯಿಯನ್ನು ಕೊಂದ ವಿಷವೇ ಆಯಿತು.

ಬಳಿಕ ನಾನು ಹೆನ್ರಿ ಮಲಗಿಸಿ ಕೊಂಡಿದ್ದ ಕೋಣೆಗೆ ಅವನನ್ನು ನೋಡಿ ಪರಾಂಬರಿಸಲಿಕ್ಕಾಗಿ ಹೋದೆನು. "ನಿನ್ನ ಮೇಲೆ ನನಗೆ ಇನ್ನು ಪ್ರೀತಿಯಿಲ್ಲಾ ಎಂದು ನಾನು ನನ್ನ ತಾಯಿಗೆ ಹೇಳಿದೆ ನಲ್ಲಾ! ಅಯ್ಯಯ್ಯೋ! ನಾನು ಎದ್ದು, ಅವಳ ಹಾಸಿಗೇ ಬದಿಗೆ ಹೋಗಿ, ಕ್ಷಮೆ ಬೇಡಿ, ನಿನ್ನ ಮೇಲೆ ನನಗೆ ಬಹಳ ಪ್ರೀತಿಯುಂಟು ಎಂದು ಆಕೆಗೆ ಹೇಳ ಬೇಕು" ಎಂದು ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿದನು. ಅವನ ದುಃಖ ನೋಡಿ ನನಗೆ ಕರುಳು ಕರಗಿ ಹೋಯಿತು. ನಿನ್ನ ತಾಯಿ ಇನ್ನು ಇಲ್ಲಾ, ಹೋದಳು ಎಂತ ಅವನಿಗೆ ತಿಳಿಸಲಿಕ್ಕೆ ನನಗೆ ಮಹಾ ಪ್ರಯಾಸವಾದ್ದರಿಂದ, ನಾನು ತಿಳಿ ಸದೆ, ಅವನನ್ನು ತಾಯಿಯ ಮಂಚದ ಬದಿಗೆ ಕರಕೊಂಡು ಬಂದೆ. "ಅಮ್ಮಾ! ನಿನ್ನನ್ನು ಬಹಳವಾಗಿ ಪ್ರೀತಿಸುತ್ತೇನೆ" ಎಂಥೇಳಿ, ತಾಯಿಯ ಮೇಲೆ ಬಿದ್ದು, ಆಕೆಯ ಕೈ ಹಿಡಿದು, ಹಣೆಗೆ ಮುದ್ದಿಟ್ಟನು. ಕೂಡಲೇ ಆಕೆ ತಣ್ಣಗಾಗಿ ಸತ್ತು ಹೋದವಳೆಂದು ತಿಳಿದು ಕೊಂಡನು. ಈ ಪೆಟ್ಟಿಗೆ ಆ ಸಣ್ಣವನಿಗೆ ಹಿಡಿದ ಶೋಕವನ್ನೂ ಪಶ್ಚಾತ್ತಾಪವನ್ನೂ ನಾನು ವರ್ಣಿಸಲಾರೆ. ನನ್ನ ಕರುಳೆಲ್ಲವೂ ಅವನ ದುಃಖ ನೋಡಿ, ಹರಿದು ಹೋದಂತಾಯಿತು. "ಅಮ್ಮಮ್ಮಾ, ಮಾಫು ಮಾಡು! ಮಾಫು ಮಾಡು! ನಿನ್ನನ್ನು ಪ್ರೀತಿಸುತ್ತೇನೆ. ನನಗೆ ಯಾಕೆ ಉತ್ತರ ಕೊಡುವದಿಲ್ಲಾ?" ಎಂಥೇಳುತ್ತಾ ಬಿಡದೆ ಅಳೋದೇ ಮಾಡಿದನು.

ಆದರೆ ತಾಯಿಯ ಬಾಯಿಯಿಂದ ಕ್ಷಮೆಯ ಮಾತು ಒಂದೂ ಹೊರಡಲಿಲ್ಲಾ. ತನ್ನ ಅವಿ ಧೇಯತೆಯನ್ನು ನೋಡಿ, ತನ್ನ ಅನ್ಯಾಯದ ಮಾತನ್ನು ಕೇಳಿ ತಾಯಿ ಸತ್ತು ಹೋದದಕ್ಕೆ ಹೆನ್ರಿ ಅಂದಿನಿಂದ ಮಹಾ ದುಃಖಿತನಾಗಿ, ಶೋಕದಲ್ಲಿ ಮುಳುಗಿದವನಾಗಿದ್ದನು. ಮುಪ್ಪಾಗುವ ಮೊದಲು ಮನಸ್ತಾಪದಿಂದ ಅವನ ತಲೇ ಕೂದಲು ಬಿಳುಪಾಗಿ ನರೆಕೂದಲಾಯಿತು. "ತಾಯಿೞ! ನಿನ್ನ ಮೇಲೆ ನನಗೆ ಇನ್ನು ಪ್ರೀತಿಯಿಲ್ಲಾ!" ಎಂಬುವ ಅವನ ಅಪಕಾರದ ಮಾತು ಅವನ ಹೊಟ್ಟೆಯಲ್ಲಿ ಒಂದು ಕೀಟದಂತಾಗಿ ನಿತ್ಯವೇ ಅವನನ್ನು ಕಾಡುವಂಥಾದ್ದಾಯಿತು.

ಈ ಸಂಗತಿಯನ್ನು ಓದಿದ ಹುಡುಗರೇ! ನೀವು ನುಡಿಯಿಂದಾಗಲಿ ನಡೆಯಿಂದಾಗಲಿ ತಾಯಿ ತಂದೆಗಳಿಗೆ ಎಂದಿಗಾದರೂ "ನಿಮ್ಮ ಮೇಲೆ ನನಗೆ ಪ್ರೀತಿಯಿಲ್ಲಾ!" ಎಂಬ ಹಾಗೆ ಅನ್ನುವವರಾಗಿ ದುಃಖ ಕೊಡ ಬೇಡಿ! ಮಕ್ಕಳು ತಾಯಿತಂದೆಗಳಿಗೆ ಕೊಟ್ಟ ದುಃಖವು ಅವರ ಮೇಲೆ ಪ್ರತಿಯಾಗಿ ಬಾರದೆ ಹೋಗದು! ನೆನವರಿಕೆಯಿರಲಿ!

ಫಲಾಹಾರವು.

ಎಲ್ಲಾ ಅವಿಧೇಯತೆಯನ್ನು ಖಂಡಿಸಲಿಕ್ಕೂ ಶಿಕ್ಷಿಸಲಿಕ್ಕೂ ಸಿದ್ಧರಾಗಿದ್ದೇವೆ.
೨ ಕೊರಿ. ೧೦, ೬.

ಒಂದು ಕುಟುಂಬದಲ್ಲಿ ಆಗಲಿ ಒಂದು ಸಭೆಯಲ್ಲಿ ಆಗಲಿ ದೇವರ ಅಪ್ಪಣೆಯನ್ನು ಲಕ್ಷ್ಯ ಮಾ ಡದೆ ಮಿಾರುವಂಥಾದ್ದು ಆಗುವಲ್ಲಿ ಬುದ್ಧಿ ಹೇಳಿ ಎಚ್ಚರಿಸುವದು ಮಾತ್ರವಲ್ಲಾ, ಶಿಕ್ಷಿಸುವದಾದರೂ

ಆಗಲಿಕ್ಕೆ ಬೇಕು. ಅಂಥಾ ತಪ್ಪು ಆದ ಬಳಿಕ ಬುದ್ಧಿ ಹೇಳುವದು ಸಾಕು, ಶಿಕ್ಷೆ ಅವಶ್ಯವಿಲ್ಲಾ ಎಂಥೇಳಿ, ನಾವು ಶಿಕ್ಷಿಸದೆ ಹೋದರೆ, ನಾವು ಪ್ರಧಾನಯಾಜಕನಾದ ಏಲಿಯ ಹಾಗಾಗಿ, ದೇವರ ದಂಡಕ್ಕೆ ಗುರಿಯಾದೇವು. ದೇವರ ನ್ಯಾಯಕ್ಕೂ ಘನಕ್ಕೂ ಕುಂದು ಹತ್ತ ಬಾರದು. ಕೆಟ್ಟದ್ದಕ್ಕೆ ಹೆದರುವದೂ ಹೇಸುವದೂ ಇರ ಬೇಕು. ಇದು ನ್ಯಾಯವಾದ ಶಿಕ್ಷೆಯಾಗದೆ ಇರುವಲ್ಲಿ ಇರ ಲಿಕ್ಕೆ ಕೂಡದು. ನಮ್ಮ ನುಡಿ ಮಾತ್ರವಲ್ಲಾ ನಮ್ಮ ನಡೆ ಸಹಾ, ನಮ್ಮ ನಡತೆ ಹೆಚ್ಚಾಗಿ, ಪಾಪಕ್ಕೆ ವಿರೋಧವಾದೊಂದು ಸಾಕ್ಷಿಯಾಗಿ, ಪಾಪವನ್ನು ಶಿಕ್ಷಿಸುವಂಥಾದ್ದಾಗಿರ ಬೇಕು. ಆದರೆ ದೇವರ ನ್ಯಾಯಕ್ಕೂ ತಪ್ಪುಗಳ ಭಾರ ತಾರತಮ್ಯಕ್ಕೂ ಸರಿಯಾಗುವಂತೆಯೇ ಶಿಕ್ಷಿಸುವದು ಸುಲಭವಾಗಿ ರದೆ ಕಷ್ಟವಾಗಿದೆ. ಅದಕ್ಕೆ ಬರೇ ಶಿಟ್ಟು ಆಗದು: ಯೇಸುವಿನ ಬುದ್ಧಿಯಂಥಾ ಬುದ್ಧಿ ಬೇಕು. ರೋಮಾ. ೮, ೨೮. "ದೇವರನ್ನು ಪ್ರೀತಿಸುವವರಿಗೆ ಎಲ್ಲವೂ ಮೇಲಿಗೆ ಕೈಕೂಡಿ ಬರುವದೆಂದು ಬಲ್ಲೆವು."

"ಎಲ್ಲವೂ" ಎಂಬ ಚಿಕ್ಕ ಶಬ್ದದಲ್ಲಿ ಎಂಥೆಂಥಾ ಅತಿಶಯಗಳೂ ಆಶ್ಚರ್ಯಗಳೂ ಅಡಗಿದ್ದಾವೆ! ಎಲ್ಲವು ಮೇಲಿಗೆ ಕೈಕೂಡಿ ಬರುತ್ತದೆ. ದೇವರು, ದೇವದೂತರು, ಪರಲೋಕ, ಭೂಲೋಕ, ಪಾ ತಾಳಲೋಕ, ಸೈತಾನನಾದರೂ, ಮರಣವಾದರೂ, ಸುಕಾಲ, ದುಷ್ಕಾಲ, ಮಿತ್ರ, ವೈರಿ, ಸಮ ಸ್ತವೂ, ಮಾಯಾವಶವಾದ ವಿಶಿಷ್ಟ ನಿರ್ಮಾಣವೂ, ಅದರ ನಿಟ್ಟುಸುರುಗಳೂ ನಾನಾ ಪ್ರಕಾರವಾಗಿ ದೇವರ ಮಕ್ಕಳ ಮಹಿಮೆಗೆ ಕಾರಣವಾಗ ಬೇಕು. ವಿಶ್ವಾಸವಿದ್ದವರಿಗೆ ಇದೊಂದು ಒಣ ಮಾತು, ಒಂದು ಭ್ರಾಂತಿ, ಆಗಿರದೆ, ಅನುಭವವಾಗುವ ಮಾತಾಗಿ ಮನಃಖಚಿತವಾದ ಸತ್ಯವೇ ಆಗಿದೆ. "ಬಲ್ಲೆವು" ಎಂದದೆ. ಅದು ಹೌದೆಂಬದಕ್ಕೆ ಪವಿತ್ರಾತ್ಮನು ದೇವರ ಮಕ್ಕಳಿಗೆ ಮುದ್ರೆಯಾಗಿದ್ದಾನೆ. ಹೀಗಿರುವದರಿಂದ ಐಹಿಕ ಕಷ್ಟ ತಾಪತ್ರಯಗಳನ್ನು ಬಹು ತಾಳ್ಮೆಯಾಗಿ ಮಾತ್ರವಲ್ಲಾ ಪವಿತ್ರಾತ್ಮನ ಮಹಾ ಸಂತೋಷದಲ್ಲಿಯೂ ಸಹಿಸಿ ಕೊಳ್ಳ ಶಕ್ತರಾಗಿದ್ದಾರೆ. ಯಾವಾಗಾದರೊಮ್ಮೆ ತಾಪತ್ರ ಯವು ಅವರಿಗೆ ತಡೆಯಲಿಕ್ಕೆ ಕೂಡದಷ್ಟಾಗಿ ಕಂಡು ಬಂದರೂ, ಯೇಸುವಿನ ನೊಗವು ಮೃದು ಎಂದು ಆತನು ತನ್ನವರ ಮೇಲೆ ಇಟ್ಟು ಕೊಡುವ ಹೊರೆ ಹೌರವೆಂದು ಮತ್ತೂ ತಿಳಿದು ಬರುತ್ತದೆ. ತಮಗೆ ಮೇಲಿನಿಂದಾದ ಕರಹವನ್ನು ನೆನಸಿ ಕೊಳ್ಳುತ್ತಾ ಇವೇ ಕಷ್ಟಗಳ ಮಾರ್ಗವಾಗಿ ತಮ್ಮ ನಾಯ ಕನು ತಮ್ಮನ್ನು ಸ್ವರ್ಗರಾಜ್ಯಲಾಭಕ್ಕೆ ನಡಿಸಿ ಮುಟ್ಟಿಸುವಲ್ಲಿ ದೇವರ ಮಹಾ ಸಂಕಲ್ಪಾರ್ಥವು ನೆರವೇರುವದು ಎಂದು ತಿಳಿದು ಕೊಂಡವರಿಗೆ ಕೆಲಸದಲ್ಲಿ ಸೋತು ಹೋದ ಕೈ, ಪಯಣದಲ್ಲಿ ದಣು ಗೊಂಡ ಕಾಲು ತಿರಿಗಿ ಬಲವಾಗಲೂ ಹೃದಯವೂ ಅಂತರಿಂದ್ರಿಯಗಳೂ ದೇವರ ಸಮಾಧಾನದಲ್ಲಿ ಭದ್ರವಾಗಿರಲೂ ಬಹುದು.

ಪ್ರಾಣಕ್ಕೆ ಪ್ರಾಣ ಕೊಟ್ಟ ಸ್ನೇಹಿತನು.

ಪ್ರಾಚೀನ ಕಾಲದಲ್ಲಿ ಸಿರಕೂಸ ಎಂಬ ದೇಶದಲ್ಲಿ ದಿಯೊನುಸ್ಯನೆಂಬ ಅರಸನು ಇರುತ್ತಿದ್ದನು. ಈ ಅರಸನು ದಾಮೋನನೆಂಬ ಒಬ್ಬ ವಿದ್ವಾಂಸನ ಮೇಲೆ ಏನೋ ಕಾರಣದಿಂದ ಶಿಟ್ಟುಗೊಂಡು, ಅವ ನಿಗೆ ಮರಣಾಜ್ಞೆ ವಿಧಿಸಲಾಗಿ, ಆ ವಿದ್ವಾಂಸನು ತನ್ನ ಸ್ನೇಹಿತನಾದ ಪಿಥಿಯನೆಂಬವನನ್ನು ಹೊಣೆ ಕೊಟ್ಟು, ತಾನು ಊರಿಗೆ ಹೋಗಿ ಹೆಂಡತಿ ಮಕ್ಕಳನ್ನು ನೋಡಿ ಕೊಂಡು ಬರುತ್ತೇನೆ, ಬಾರದಿದ್ದರೆ, ತನ್ನ ಬದಲಿಗೆ ಪಿಥಿಯನನ್ನು ಕೊಲ್ಲುವದು ಸರಿ ಎಂತ ಹೇಳಿ, ಅರಸನ ಹತ್ತರ ಅಪ್ಪಣೆ ಈಸಿ ಕೊಂಡು ಹೋದನು. ಬರುತ್ತೇನೆಂತ ಹೇಳಿದ ದಿವಸದಲ್ಲಿ ದಾಮೋನನು ಬಾರದೆ ಇರಲಾಗಿ ಅರಸನು ಶೆರೆಮ ನೆಗೆ ಹೋಗಿ, ಪಿಥಿಯನನ್ನು ಕೇಳಿದ್ದು: "ನೀನೆಂಥಾ ಮರುಳ! ದಾಮೋನನ ಮಾತು ನಂಬಿ ಕೆಟ್ಟ

ಯಲ್ಲಾ ನೀನು! ನಿನಗೋಸ್ಕರ ಅವನು ತನ್ನ ಪ್ರಾಣ ಕಳಕೊಳ್ಳುವನೆಂದು ನೆನಸುತ್ತೀಯಾ?" ಪಿಥಿಯಸು ಅನ್ನುತ್ತಾನೆ: "ಧೊರೆಯೇ, ನನ್ನ ಸ್ನೇಹಿತನು ಜೀವ ಹೋದರೂ ತನ್ನ ನಾಲಿಗೆಯಿಂದ ಬಿದ್ದ ವಚನ ಮಿಾರನೆಂತ ನನಗೆ ಪೂರ್ಣ ಭರವಸವದೆ. ಆದರೆ ಅವನ ಜೀವ ಉಳಿಸ ಬೇಕೆಂತ ನಾನು ದೇವರ ಹತ್ತರ ಬೇಡುತ್ತಾ ಇದ್ದೇನೆ. ವಾಯುದೇವನು ಅವನ ನಗಕ್ಕೆ ವಿಘ್ನ ಮಾಡುವವನಾಗಲಿ! ವಿಶ್ವಪತಿಯೇ, ಇಲ್ಲಿಗೆ ಬರ ಬೇಕೆಂಬ ಅವನ ಅತಿಕಾಂಕ್ಷೆಯನ್ನು ಅವನಿಂದ ಪರಿಹಾರ ಮಾಡು! ಅವನ ಪ್ರಿಯ ಹೆಂಡತಿಗೂ ಮುದ್ದು ಮಕ್ಕಳುಮರಿಗಳಿಗೂ ಸ್ನೇಹಿತರಿಗೂ ದೇಶಕ್ಕೂ ಅತಿಮೌಲ್ಯವಾಗಿರುವ ಅವನ ಜೀವವನ್ನು ನಾನು ಮರಣ ಪಟ್ಟು ಬಿಡುಗಡೆ ಮಾಡುವ ವರೆಗೆ ಅವನು ಇಲ್ಲಿಗೆ ಬಾರದ ಹಾಗೆ ಮಾಡು! ದಾಮೋನನ ಬದಲಿಗೆ ನನ್ನ ಜೀವ ತಕ್ಕೊಳ್ಳಿ! ಮಾತ್ರ ನನ್ನನ್ನು ಕ್ರೂರವಾಗಿ ಕೊಲ್ಲಿಸ ಬೇಡಿ!" ಈ ಮಾತುಗಳನ್ನು ಅರಸನು ಕೇಳಿ, ಬಹು ಘಾಬರಿಯಾಗಿ, ಮಾತಾಡಲಿಕ್ಕೆ ಬಾಯಿ ಬಾರದೆ, ಸುಮ್ಮಗಿದ್ದು, ಶೆರೆಮನೆಯಿಂದ ಹೊರಟು ಹೋದವನಾದನು. ಆ ಮೇಲೆ ಪಿಥಿಯನನ್ನು ಹೊರಗೆ ತಂದು, ಕೊಲೆಯ ಸ್ಥಳಕ್ಕೆ ತಕ್ಕೊಂಡು ಹೋಗಲಿಕ್ಕೆ ಅಪ್ಪಣೆಯಾಗಲು, ಅವನು ಹೆದರದೆ, ಮಹಾ ಸಂತೋಷದಿಂದ ಮುಂದೆ ನಡದನು. ಆ ಜಾಗಕ್ಕೆ ಅವನು ಮುಟ್ಟಿದಾಗ ಅವನು ನೆರದಿದ್ದ ಜನರ ಮುಂದೆ ಹೀಗಂದನು—"ದೇವತೆಗಳು ನನ್ನ ಪ್ರಾರ್ಥನೆ ಕೇಳಿದರು; ವಾಯುದೇವರು ದಾಮೋನನ ನಗಕ್ಕೆ ವಿಘ್ನ ಮಾಡಿದನು, ಅವನು ನಾಳೆ ಬರುವನು; ಅಷ್ಟರಲ್ಲಿ ಅವನ ಅಮೂಲ್ಯವಾದ ಜೀವ ನನ್ನ ಮರಣದಿಂದ ಬಿಡುಗಡೆಯಾಗಿರುವದು; ಇದಕ್ಕಾಗಿ ದೇವತೆಗಳಿಗೆ ಸ್ತೋತ್ರ ಮಾಡುತ್ತೇನೆ." ಈ ಮಾತುಗಳನ್ನಾಡಿ ತೀರಿಸಿದಾಗಲೇ ಕೂಡಿ ಬಂದ ಸಮೂಹದಲ್ಲಿ ಗಲಿಬಿಲಿಯಾಯಿತು: ಯಾರೋ ದೂರದಿಂದ ಒದರುವ ಶಬ್ದ ಎಲ್ಲರ ಕಿವಿಗೆ ಬಿದ್ದಾಗ ಎಲ್ಲರೂ "ಮಾರೆಕಾರನೇ, ಸ್ವಲ್ಪ ತಾಳು!" ಎಂಬದಾಗಿ ಕೂಗಿದರು. ಇಗೋ, ಒಬ್ಬ ಮನುಷ್ಯನು ಕುದುರೆಯನ್ನು ತ್ವರಿತವಾಗಿ ಓಡಿಸುತ್ತಾ ಬರುತ್ತಿದ್ದನು. ಪಿಥಿಯನು ನಿಂತಿದ್ದಲ್ಲಿಗೆ ಬಂದ ಕೂಡಲೇ ದಾಮೋನನು ಕುದುರೆಯಿಂದ ಕೆಳಗೆ ಹಾರಿ, ಪಿಥಿಯನನ್ನು ಎರಡು ಕೈಗಳಿಂದ ಅಪ್ಪಿ ಕೊಂಡು, "ನನ್ನ ಸ್ನೇಹಿತನೇ, ನಿನ್ನ ಪ್ರಾಣ ಉಳಿಯಿತು, ನೀನು ಭದ್ರವಾಗಿರು, ದೇವತೆಗಳಿಗೆ ಘನವಾಗಲಿ!" ಎಂತ ಹೇಳಿದಾಗ, ಪಿಥಿಯನ ಮುಖದ ಕಳೆಗುಂದಿ, ಬಿಕ್ಕಿ ಬಿಕ್ಕಿ ಮಾತಾಡುತ್ತಾ "ಅಯ್ಯೋ ನನ್ನ ವಿಧಿಯೇ! ನಿನ್ನ ಸ್ನೇಹಿತನಾದ ನನಗೆ ಯಾವ ದೇವತೆ ಈ ವಿಘ್ನ ತಂದು ಹಾಕಿತಣ್ಣಾ! ಆದರೂ ನಾನು ನಿರಾಶೆ ಮಾಡೋದಿಲ್ಲಾ; ನಿನ್ನ ಪ್ರಾಣ ಉಳಿಸಲಿಕ್ಕೆ ನಾನು ಸಾಯಲಾರೆ ಖರೆ, ಆದರೆ ಸರ್ವದಾ ನಿನ್ನ ಜೊತೆಯಲ್ಲಿರುವದಕ್ಕೆ ನಾನು ನಿನ್ನ ಕೂಡ ಸಾಯುತ್ತೇನೆ" ಎಂತ ಹೇಳಿದನು. ಸ್ವಲ್ಪ ದೂರದಲ್ಲಿ ನಿಂತು ಈ ನಡಿಯುವ ಸಂಗತಿ ಎಲ್ಲಾ ನೋಡುತ್ತಿದ್ದ ಅರಸನೊಳಗೆ ಕರುಣೆ ಹುಟ್ಟಿ, ಮನಸ್ಸು ಬಿಗಿ ಹಿಡಿಯಲಾರದವನಾದನು. ಅವನು ತನ್ನ ಆಸನದಿಂದ ಕೆಳಗಿಳಿದು—"ಎಲೋ! ವಿಂಗಡಿಸ ಕೂಡದಂತೆ ಅತ್ಯಂತ ಮಿತ್ರರಾದವರೇ, ಬದುಕಿರಿ! ನೀವು ಕೊಲೆ ಪಡ ಬಾರದು! ಈ ಭೂಮಿಯಲ್ಲಿ ಸದ್ಗುಣಿಗಳಿದ್ದಾರೆಂದೂ ಅವರ ಸದ್ಗುಣಕ್ಕೆ ದೇವರು ಫಲದಾಯಕನಾಗಿದ್ದಾನೆಂದೂ ನಿಮ್ಮ ನಡೆಯಿಂದ ನನಗೆ ಖಚಿತವಾಗಿ ತಿಳಿಯಿತು. ಇಂಥಾ ದಿವ್ಯ ಮಿತ್ರತ್ವದಲ್ಲಿ ನನಗೂ ಒಂದಂಶ ದೊರಕುವ ಹಾಗೆ ನನಗೆ ಉಪದೇಶ ಮಾಡಿ, ನನ್ನನ್ನು ನಿಮ್ಮ ಸ್ನೇಹಿತನೆಂತ ಮಾಡಿ ಕೊಳ್ಳಿರಿ," ಅಂದನು. ಆ ಮೇಲೆ ಅರಸನು ಅವರಿಬ್ಬರನ್ನು ತನ್ನ ಮಿತ್ರರು ಮಾಡಿ ಕೊಂಡು, ತನ್ನ ಹತ್ತರ ಇಟ್ಟು ಕೊಂಡನು.

ಮೂರ್ತಿಪೂಜಕರಾಗಿದ್ದ ಈ ಇಬ್ಬರು ಸ್ನೇಹಿತರೊಳಗಿದ್ದ ಪ್ರೀತಿಯು ಮಹಾ ಆಶ್ಚರ್ಯವಾಗಿದೆ. "ಒಬ್ಬನು ತನ್ನ ಸ್ನೇಹಿತನಿಗೋಸ್ಕರ ತನ್ನ ಪ್ರಾಣವನ್ನು ಕೊಡುವದಕ್ಕಿಂತ ದೊಡ್ಡ ಪ್ರೀತಿ ಯಾವನಿಗೂ ಇಲ್ಲ" ಎಂಬ ಯೇಸುಸ್ವಾಮಿಯ ವಚನದ ಮೇರೆಗೆ ಅದು ದೊಡ್ಡ ಪ್ರೀತಿಯೇ ಖರೆ;

"ನೀತಿವಂತನಿಗೋಸ್ಕರ ಯಾವನಾದರೂ ಸಾಯುವದು ದುರ್ಲಭವಾಗಿದೆ, ಒಂದು ವೇಳೆ ಉಪಕಾರಿಗೋಸ್ಕರ ಯಾವನಾದರೂ ಸಾಯುವದಕ್ಕೆ ಅಷ್ಟು ಧೈರ್ಯ ಪಟ್ಟಾನು" ಎಂತ ಪೌಲನು ಹೇಳಿದ್ಧನೆ. ಆದರೆ ಯೇಸುಸ್ವಾಮಿಯ ಪ್ರೀತಿ ಲೋಕದಲ್ಲಿ ಅತುಲ್ಯವಾಗಿದೆ. ಯಾಕಂದರೆ ಆತನು ಭಕ್ತಿಹೀನರಾದ ಶತ್ರುಗಳಾದ ಮನುಷ್ಯರಿಗೋಸ್ಕರ ಅವರ ಉದ್ಧಾರಣಕ್ಕೆ ಸ್ವಜೀವ ಅರ್ಪಣೆ ಮಾಡಿದನಲ್ಲವೇ? ಇದರಿಂದ "ದೇವರು ನಮ್ಮ ಮೇಲಿರುವ ತನ್ನ ಪ್ರೀತಿಯನ್ನು ಪ್ರಕಟ ಮಾಡಿದನು." ಈ ದಿವ್ಯ ಪ್ರೀತಿಯ ವರ್ತಮಾನ ಕೇಳುವದು ಸಾಲದು, ಆದರ ಹೃದಯಪೂರ್ವಕ ಅನುಭವ ಮಾಡಿಕೋ. "ನಾವಿನ್ನೂ ನಮ್ಮ ಮರೆಯೋಣ, ಪ್ರೇಮಾಬ್ಧಿಯಲ್ಲಿ ಮುಳುಗೋಣ."

ನಿಜವಾದ ಧೈರ್ಯವು.

"ಕರ್ತನು ನನಗೆ ಸಹಾಯಕನು, ಭಯ ಪಡೆನು, ಮನುಷ್ಯನು ನನಗೆ ಏನು ಮಾಡುವನು?" ಇಬ್ರಿ. ೧೩, ೬.

ಪೂರ್ವಕಾಲದಲ್ಲಿ ಕ್ರಿಸೊಸ್ತೊಮನೆಂಬ ಮಹಾ ಧೈರ್ಯಶಾಲಿಯಾದ ದೇವಭಕ್ತನಿದ್ದನು. ಇವನನ್ನು ಆ ಕಾಲದ ರೋಮನ್ ಮಹಾರಾಜನು ತನ್ನ ಸನ್ನಿಧಾನಕ್ಕೆ ಕರಸಿ, "ನೀನು ಕ್ರೈಸ್ತಧರ್ಮವನ್ನು ಬಿಟ್ಟು ನಿನ್ನ ವಿಶ್ವಾಸ ಅಲ್ಲಗಳಿಯದಿದ್ದರೆ, ನಿನ್ನನ್ನು ಗಡಿಪಾರು ಮಾಡುತ್ತೇನೆ" ಅಂದನು. ಕ್ರಿಸೊಸ್ತೊಮನು—"ತಾವು ನನ್ನನ್ನು ಗಡಿಪಾರು ಮಾಡಲಾರಿರಿ; ಈ ಅಖಂಡ ಪೃಥ್ವಿ ನನ್ನ ತಂದೆಯ ಮನೆ" ಅಂದನು. ಮಹಾರಾಜನು—"ನಾನು ನಿನ್ನನ್ನು ಕೊಲ್ಲಿಸುತ್ತೇನೆ". ಕ್ರಿಸೊಸ್ತೊಮನು—"ನನ್ನ ಜೀವ ತೆಗಿಯುವದೂ ತಮ್ಮಿಂದಾಗದು; ಅದು ಕ್ರಿಸ್ತನ ಸಂಗಡ ದೇವರಲ್ಲಿ ಅಡಗಿಯದೆ." ಮಹಾರಾಜನು—"ನಿನ್ನ ಸರ್ವಸ್ವವನ್ನು ನಿನ್ನಲ್ಲಿಂದ ಅಪಹರಿಸುತ್ತೇನೆ." ಕ್ರಿಸೊಸ್ತೊಮನು—"ಅದೂ ತಮ್ಮಿಂದಾಗದು, ನನ್ನ ಆಸ್ತಿ, ದ್ರವ್ಯ ಎಲ್ಲಿ ಎಂತ ತಮಗೆ ಗೊತ್ತಿಲ್ಲಾ. ನಾನದನ್ನು ಪರಲೋಕದಲ್ಲಿಟ್ಟಿದ್ಧೇನೆ, ನನ್ನ ಹೃದಯವು ಅಲ್ಲಿ ಆದೆ." ಮಹಾರಾಜನು—"ನಾನು ನಿನ್ನನ್ನು ಮನುಷ್ಯಸಂಚಾರದಿಂದ ದೂರ ಹಾಕಿ, ನಿನ್ನ ಹತ್ತರ ಒಬ್ಬ ಸ್ನೇಹಿತನಾದರೂ ಉಳಿಯದ ಹಾಗೆ ಮಾಡುತ್ತೇನೆ." ಕ್ರಿಸೊಸ್ತೊಮನು—"ಇದು ಸಹಾ ತಾವು ಮಾಡಲಾರಿರಿ, ನನಗೆ ಸ್ವರ್ಗದಲ್ಲಿ ಸ್ನೇಹಿತನಿದ್ಧಾನೆ, ಅವನಿಂದ ತಾವು ಸರ್ವಥಾ ನನ್ನನ್ನು ದೂರ ಮಾಡಲಾರಿರಿ; ತಮ್ಮ ಮನಸೋಯಿಚ್ಛೆ ಮಾಡ ಬಹುದು; ಆದರೆ ನನಗೇನಾದರೂ ಹಾನಿ ನಷ್ಟ ಮಾಡಲಿಕ್ಕೆ ತಮ್ಮಿಂದಾದೀತೆಂದು ಕನಮನಸ್ಸಿನಲ್ಲಿ ನೆನಸ ಬೇಡಿರಿ."

ಕರ್ತನನ್ನು ನಂಬಿ ಸಾಲ ಕೊಟ್ಟವನು.

ಒಬ್ಬ ಬಡ ಮಾರ್ಗಸ್ಥನು ಒಬ್ಬ ಒಳ್ಳೇ ಭಕ್ತನಾದವನ ಬಳಿಗೆ ಬಂದು, ಆರು ರೂಪಾಯಿ ಕಡವಾಗಿ ಕೇಳಿದನು. ಆ ಭಕ್ತನ ಬಳಿಯ ಆರು ರೂಪಾಯಿ ಅಲ್ಲದೆ ಬೇರೆ ಹಣವಿರಲಿಲ್ಲಾ. ಆ ಮಾರ್ಗಸ್ಥನು ಯೇಸುವಿನ ಹೆಸರಿನಲ್ಲಿ ಅವನನ್ನು ಬೇಡಿ ಕೊಂಡ ಕಾರಣ, ಒಂದು ಕಾಸು ಕಡಿಮೆ ಮಾಡದೆ, ತನ್ನ ಹತ್ತರವಿದ್ದ ಹಣವನ್ನೆಲ್ಲಾ ಅವನಿಗೆ ಕೊಟ್ಟು ಬಿಟ್ಟನು. ಕೆಲವು ಕಾಲದ ಮೇಲೆ ಆ ಭಕ್ತನು ಮಹಾ ಅನುಪಪತ್ತಿಯಲ್ಲಿ ಬಿದ್ದು, ತಾನು ಕಡವಾಗಿ ಕೊಟ್ಟ ಆ ರೂಪಾಯಿ ನೆನಸಿ, "ಕರ್ತನೇ, ನಿನಗೆ ಆರು ರೂಪಾಯಿ ಕಡವಾಗಿ ಕೊಟ್ಟಿದ್ಧೇನೆ, ಅದನ್ನು ನೀನು ನನಗೆ ಹಿಂದಕ್ಕೆ ಕೊಡಲಿಲ್ಲಾ;

ನನ್ನ ಅನುಪಪತ್ತಿಯನ್ನು ಮನಸ್ಸಿಗೆ ತಾ; ಆ ರೂಪಾಯಿ ನನಗೆ ತಿರಿಗಿ ಕೊಡು ಎಂದು ನಿನ್ನನ್ನು ಬೇಡಿ ಕೊಳ್ಳುತ್ತೇನೆ" ಎಂದು ಪ್ರಾರ್ಥನೆ ಮಾಡುವವನಾದನು. ಆ ದಿನವೇ ಅವನಿಗೊಂದು ಕಾಗದ ಬಂತು; ಅದನ್ನು ಒಡೆಯಲಾಗಿ "ನೀವು ನನಗೆ ಕೊಟ್ಟ ರೂಪಾಯಿ ಹಿಂದಕ್ಕೆ ತಕ್ಕೊಳ್ಳಿರಿ" ಎಂಬ ವರ್ತಮಾನವೂ, ೪೦೦ ರೂಪಾಯಿ ನೋಟೂ ಅದರಲ್ಲಿರುವದನ್ನು ಕಂಡನು. ಆಗ್ಯೆ ಅವನು—"ಪ್ರಿಯ ಕರ್ತನೇ, ನಾನು ನಿನಗೊಂದು ಸಣ್ಣ ಅರಿಕೆ ಮಾಡಿದ್ದು ನೀನು ಕೇಳಿ, ನನ್ನನ್ನು ಲಜ್ಜೆ ಪಡಿಸಿದಿ" ಎಂಬದಾಗಿ ಪ್ರಾರ್ಥಿಸಿ, ಸಂತುಷ್ಟನಾಗಿ ಸ್ತೋತ್ರ ಮಾಡುವವನಾದನು.

ಒಂದು ಪ್ರಾಚೀನ ಕಥೆ.

ತನ್ನ ಆತ್ಮವನ್ನು ಪಿಶಾಚನಿಗೆ ಮಾರಿ ಬಿಟ್ಟ ಒಬ್ಬ ಮನುಷ್ಯನಿದ್ದನು. ಅವನು ತನ್ನ ಆಶೆಯನ್ನೆಲ್ಲಾ ಕೆಲವು ವರ್ಷಗಳಿಗೆ ಸೈತಾನನ ವಶಕ್ಕೆ ಕೊಟ್ಟು, ತನ್ನನ್ನು ತೃಪ್ತಿ ಪಡಿಸಿ ಕೊಂಡನಂತರ ಅವನ ಕೈಯಿಂದ ಬಿಡಿಸಿ ಕೊಂಡು, ಆ ಮೇಲೆ ತನ್ನ ಮನಸ್ಸಿನಂತೆ ನಡಿಯುವದೆಂದು ಒಡಂಬಡಿಕೆ ಮಾಡಿದನು. ಹಾಗೆಯೇ ಕೆಲವು ವರ್ಷ ಮಾಡಿ, ಅವನು ನೆನಸಿದ ಕಾಲವು ಪೂರ್ತಿಯಾದಾಗ ಒಡಂಬಡಿಕೆ ಮುರಿಯುವದಕ್ಕೆ ಸೈತಾನನ ಬಳಿಗೆ ಹೋಗಿ, "ಅಯ್ಯಾ, ನಾನು ಹೋಗುತ್ತೇನೆ, ನನ್ನ ಒಡಂಬಡಿಕೆಯ ಮೇರೆಗೆ ನಾನು ಬಿಡುಗಡೆ ಹೊಂದ ಬೇಕು, ಅಪ್ಪಣೆ ಕೊಡಿರಿ!" ಅಂದನು. ಸೈತಾನನು—"ನೀನು ನಿನ್ನ ದೇವರಿಗೆ ಶಾಪ ಕೊಡು, ನಿನ್ನನ್ನು ಬಿಡುತ್ತೇನೆ". ಆ ಮನುಷ್ಯನು—"ಕೇವಲ ಪ್ರೀತಿಪೂರ್ಣನಾದಾತನನ್ನು ನಾನು ಶಪಿಸೆನು, ಅದಕ್ಕಿಂತ ಸ್ವಲ್ಪ ಕಡಿಮೆಯಾದ ಕೆಟ್ಟತನವೇನಾದರೂ ಇದ್ದರೆ ಹೇಳಿ, ಮಾಡುತ್ತೇನೆ." ಸೈತಾನನು—"ಒಳ್ಳೇದು, ಹಾಗಾದರೆ ನಿನ್ನ ತಂದೆಯನ್ನು ಕೊಂದು ಹಾಕು, ನಿನಗೆ ಬಿಡುಗಡೆ ಮಾಡುತ್ತೇನೆ." ಆ ಮನುಷ್ಯನು—"ಒಂದು ನಿಮಿಷವಾದರೂ ನೆನಸ ಬಾರದ ಆ ಮಹಾ ಪಾತಕ ನಾನು ಮಾಡೆ; ಬೇರೇನಾದರೂ ಸಂಕೇತವಿಲ್ಲವೋ?" ಸೈತಾನನು—"ಇನ್ನೊಂದು ಅದೆ; ನೀನು ಸಾರಾಯಿ ಕುಡಿದು ಅಮಲು ಮಾಡು." ಆ ಮನುಷ್ಯನು—"ಇದು ಬಹಳ ಸುಲಭವಾದದ್ದು; ಈ ಸಂಕೇತದ ಮೇರೆಗೆ ನಡಿಯುತ್ತೇನೆ; ನನ್ನ ದೇವರನ್ನು ಶಪಿಸಲಾರೆ, ನನ್ನ ತಂದೆಯನ್ನು ಕೊಲ್ಲಲೊಲ್ಲೆ; ಆದರೆ ಕುಡಿದು ಅಮಲು ಇಳಿದ ಮೇಲೆ ನಾನು ಕ್ರಮವಾಗಿ ಒಳ್ಳೆಯವನಾಗುವೆನು" ಅಂದನು.

ಹಾಗೆಯೇ ಅವನು ಕುಡಿಯಲಿಕ್ಕೆ ಆರಂಭಿಸಿ, ಬೇಗನೇ ಮಹಾ ಕುಡಿಕನಾದನು. ಒಂದು ದಿನ ಕುಡಿದು ಮತ್ತನಾಗಿದ್ದ ವೇಳೆಯಲ್ಲಿ ತಂದೆ ಅವನನ್ನು ನೋಡಿ ಗದರಿಸಿದಾಗ ಇವನಿಗೆ ಶಿಟ್ಟು ಬಂದು, ತಂದೆಯು ತಲೆಗೆ ಒಳ್ಳೇ ಪೆಟ್ಟು ಹೊಡೆಯಲು, ಅವನು ಬಿದ್ದು ಪ್ರಾಣ ಬಿಟ್ಟನು. ಕಡೆಗೆ ತಾನು ದೇವರನ್ನು ಶಪಿಸಿ, ಸ್ಮರಣೆ ತಪ್ಪಿದವನಾಗಿ ಮಾಳಿಗೆಯಿಂದ ಕೆಳಗೆ ಬಿದ್ದು ಸತ್ತು ಹೋದನು.

ಸೈತಾನನು ಅಲ್ಪವೆಂದು ತೋರುವ ಪಾಪ ಮಾಡುವದಕ್ಕೆ ಮೊದಲು ಮನುಷ್ಯನನ್ನು ಪುಸಲಾಯಿಸಿ, ಅದನ್ನು ಮಾಡಿದ ಮೇಲೆ ದೊಡ್ಡ ಪಾಪಗಳನ್ನು ಅವನಿಂದ ಮಾಡಿಸುತ್ತಾನೆ. ವಿಶೇಷವಾಗಿ ಮದ್ಯಪಾನದ ವ್ಯಸನದೊಳಗೆ ಬಿದ್ದವನು ಅದರಲ್ಲಿ ಮುಂದರಿದು, ಕಡೆಗೆ ಸಹಜವಾಗಿ ದೊಡ್ಡ ಪಾಪಗಳನ್ನೂ ಮಾಡುವವನಾಗುತ್ತಾನೆ.

ವಿವಿಧ ವರ್ತಮಾನಗಳು.

ತಿನ್ನವೆಲ್ಲಿಯ ಬಿಶೊಪ ಸಾರ್ಜೆಂಟ ಧೊರೆ ತನ್ನ ಜಿಲ್ಲೆಯ ಜನರಿಗೆ ಒಂದು ಆಮಂತ್ರಣಪತ್ರ ಕಳುಹಿಸಿದ್ಧಾರೆ. ಅದರಲ್ಲಿ ಕಳೆದ ವರುಷಗಳಲ್ಲಿ ದೇವರು ಕ್ಷಾಮಕಾಲ ಕಳುಹಿಸಿ ಶಿಕ್ಷೆ ಮಾಡಿದ್ದನ್ನೂ, ಕ್ರೈಸ್ತ ಇಂಗ್ಲಾಂಡಿನವರು ಉಪಶಮನಾರ್ಥವಾಗಿ ಸಹಾಯ ಮಾಡಿದ್ದನ್ನೂ ಮನಸ್ಸಿಗೆ ತಂದು, ಮೂರ್ತಿ ಪೂಜೆ ಉಪೇಕ್ಷಿಸಿ ಆತ್ಮರಕ್ಷಣಕ್ಕೆ ಯೇಸುಸ್ವಾಮಿಯ ಬಳಿಗೆ ಬರ ಬೇಕೆಂದೂ ತಿಳಿಸಿ, ಕಡೆಗೆ "ಈ ಪ್ರಸಿದ್ಧಿಪತ್ರ ಕೇಳುವವರೆಲ್ಲರೂ ದೇವರ ದಯೆಯಿಂದ ತಮ್ಮ ತಮ್ಮೊಳಗೆ ಒಪ್ಪಂದ ಮಾಡಿ ಕೊಂಡು, ಶುಭಕಾಲ ಬಂದದೆ, ಸತ್ಯವೇದ ಅಂಗೀಕರಿಸುವಾ ಎಂದು ಒಬ್ಬರಿಗೊಬ್ಬರು ಬುದ್ಧಿ ಹೇಳಿ ಕೊಳ್ಳುವರೆಂದು ನಾನು ಹಾರೈಸುತ್ತೇನೆ. ಆ ಮೇಲೆ ನೀವು ನಿಮ್ಮ ನಿಮ್ಮ ಊರಿಗೆ ಸಮೀಪವಿರುವ ಕ್ರೈಸ್ತಬೋಧಕನ ಹತ್ತರ ಬಂದು, ಮಾತನಾಡ ಬೇಕು, ಅಥವಾ ನನ್ನ ಬಳಿಗೆ ಪಾಳ್ಯಂಕೋಟೆಗೆ ಪ್ರತಿನಿಧಿಗಳನ್ನು ಕಳುಹಿಸಿ ಕೊಡ ಬೇಕು; ಆಗ ನಾನು ನೀವು ಮಾಡ ಬೇಕಾದದ್ದನ್ನು ನಿಮಗೆ ತಿಳಿಸುತ್ತೇನೆ" ಎಂಬದಾಗಿ ಬರದಿದ್ಧಾರೆ.

ಒಬ್ಬ ಇಂಗ್ಲಿಷನು ಮೂರ್ತಿಪೂಜಕರೊಳಗೆ ಸುವಾರ್ತೆ ಸಾರುವದಕ್ಕೆ ತಾನು ಹೋಗ ಬೇಕೆಂದು ಮಾಡಿದ ನಿರ್ಧಾರ ಮತ್ತೆ ಮುರಿಯ ಬೇಕಾದ್ದಕ್ಕೆ ಒಬ್ಬ ಮಿಶ್ಯನೆರಿಯ ಸಂಬಳವಾಗಿ ವರ್ಷವರ್ಷಕ್ಕೆ ೨,೫೦೦ ರೂಪಾಯಿ ಚರ್ಚಮಿಶ್ಯನ ಸಂಘಕ್ಕೆ ಕೊಡುತ್ತೇನೆಂದು ನಿರ್ಣಯ ಮಾಡಿದ್ಧಾನೆ.

ಮೈಸೂರಿನಲ್ಲಿ ಕ್ಷಾಮಸಂಬಂಧವಾಗಿ ನೇಮಕ ಪಟ್ಟ ಕಮ್ಮಿಶ್ಯನರ್ ಸಾಹೇಬರು ದುಷ್ಕಾಲದಲ್ಲಿ ೧೦,೫೦,೦೦೦ ಜನರು ಸತ್ತು ಹೋದರೆಂದೂ, ಆ ದೇಶೀಯ ಚೇಫ್‌ಕಮ್ಮಿಶ್ಯನರ್ ಧೊರೆ ೭,೦೦,೦೦೦ ಜನರು ಸತ್ತು ಹೋದರೆಂದೂ, ಅಜಮಾಸು ಲೆಖ್ಖ ಮಾಡಿದ್ಧಾರೆ. ಈಗಲೂ ಕ್ಷಾಮದಿಂದುಂಟಾದ ರೋಗದಿಂದ ಹೇರಳ ಜನರು ಸಾಯುತ್ತಾರೆ; ಈ ರೋಗ ಇನ್ನೂ ಕೆಲವು ತಿಂಗಳು ಇದ್ದೀತು.

ಕೊಡಗು ಮೈಸೂರು ಶೀಮೆಗಳು ಮಹಾರಾಜರಿಗೆ ಒಪ್ಪಿಸಿ ಕೊಡುವ ಮೊದಲು ಖಾನೆಶುಮಾರಿ ಲೆಖ್ಖವಾಗುವದಂತೆ; ಆವಾಗ್ಯೆ ಯಥಾಸ್ಥಿತಿ ಚನ್ನಾಗಿ ತಿಳಿದು ಬರುವದು.

ಬೆಂಗಳೂರಿನಲ್ಲಿ ವ್ಯವಸಾಯದ ಮೇಲುದ್ಯೋಗಸ್ಥರು ವಿಲಾಯತಿಯ ನೇಗಲನ್ನೂ ಊರಿನ ನೇಗಲನ್ನೂ ಸರಿಯಾಗಿ ಪರೀಕ್ಷಿಸಿ ನೋಡಿದರು. ಹತ್ತರ ಹತ್ತರವಿದ್ದಂಥಾ, ಏನೂ ಭೇದವಿಲ್ಲದಂಥಾ ಎರಡು ಹೊಲಗಳನ್ನು ಗೊಬ್ಬರ ಹಾಕದೆ, ಒಂದನ್ನು ವಿಲಾಯತಿ ನೇಗಲಿನಿಂದಲೂ, ಇನ್ನೊಂದು ಊರಿನ ನೇಗಲಿನಿಂದಲೂ ಉತ್ತು, ಹುರುಳಿ ಬಿತ್ತಿದರು. ಊರಿನ ನೇಗಲಿನಿಂದ ಉತ್ತ ಹೊಲದಲ್ಲಿ ೧೦೦ ಶೇರೂ, ವಿಲಾಯತಿಯ ನೇಗಲಿನಿಂದ ಉತ್ತದರಲ್ಲಿ ೪೧೫ ಶೇರೂ ಉತ್ಪತ್ತಿಯಾಯಿತು. ಇನ್ನೊಂದು ತುಂಡು ಗದ್ದೆ ವಿಲಾಯತಿ ನೇಗಲಿನಿಂದ ಉತ್ತು ಭತ್ತ ಬಿತ್ತಿದಾಗ ಆ ಗದ್ದೆಯಲ್ಲಿ ನೀರುಹನಿಸದೆ, ಕೇವಲ ಮಳೆನೀರಿನಿಂದಲೇ ೪,೩೨೦ ರಾತಲು ಭತ್ತ ಬೆಳೆಯಿತು. ಅಷ್ಟೇ ದೊಡ್ಡ ಗದ್ದೆ ಊರಿನ ನೇಗಲಿನಿಂದ ಉತ್ತು ನೀರು ಹನಿಸದೆ, ೮೦೦ ರಾತಲು ಭತ್ತವೂ, ನೀರು ಹನಿಸಿ ೧,೨೦೦ ರಾತಲು ಭತ್ತವೂ ಬೆಳೆಯಿತು. ಮತ್ತು ವಿಲಾಯತಿಯ ನೇಗಲಿನಿಂದ ಉತ್ತ ಗದ್ದೆಯಲ್ಲಿ ತಂಪು ಹೆಚ್ಚು ದಿವಸಗಳಿರುತ್ತದೆ. ನೀರು ಹಾಯಿಸ ಬೇಕಾದ ಗದ್ದೆಯಾಗಿದ್ದರೆ, ಆರು ಎಂಟು ದಿವಸಗಳಿಗೊಮ್ಮೆ ಮಾತ್ರ ನೀರು ಅವಶ್ಯವಾಗಿರುವದು. ವಿಲಾಯತಿ ನೇಗಲಿನಿಂದ ಉಳುವ ನೆಲ ಮಳೆಯಿಲ್ಲದ ಕಾಲದಲ್ಲಿಯೂ ಮೃದುವಾಗಿರುತ್ತದೆ; ಊರಿನ ನೇಗಲಿನಿಂದ ಉಳುವ ನೆಲ ಮಳೆಯಿಲ್ಲದ ಕಾಲದಲ್ಲಿ ಎಂಥಾ ನೇಗಲಿಗೂ ಅಸಾಧ್ಯವಾಗಿ ಘಟ್ಟಿಯಾಗಿ ಹೋಗುತ್ತದೆ. ಇಂಥಾ ವಿಲಾಯತಿ ನೇಗಲನ್ನು ಈ ಊರಿನ ಬಡ ಎತ್ತುಗಳು ಎಳಿಯಲಾರವು ಖರೆ. ಎತ್ತುಗಳು ಒಳ್ಳೇ ಬಲಿಷ್ಠ ಎತ್ತುಗಳಾಗಿರ ಬೇಕು. ವಿಲಾಯತಿಯ ನೇಗಲುಗಳಿಂದ ಮೇಲೆ ಕಾಣಿಸಿದಷ್ಟು ಆದಾಯ

ವಿರುವದರಿಂದ, ವಿಲಾಯತಿ ನೇಗಲುಗಳನ್ನೂ ಅವಕ್ಕೆ ತಕ್ಕ ಎತ್ತುಗಳನ್ನೂ ಕೊಂಡು ಕೊಂಡು, ಒಳ್ಳೇ ತೀನಿ ಹಾಕಿ ಸಾಕಿದರೆ, ಹುಟ್ಟುವಳಿಯೂ ಮೂರು ನಾಲ್ಕು ಪಾಲು ಅಧಿಕವಾಗಿ ಶಿಕ್ಕುವದು.

ಶಾಲ್ಯದಲ್ಲಿ ಒಬ್ಬ ಮಿಶ್ಯನೆರಿ ಮಿಡಿತೆಗಳನ್ನು ಎಷ್ಟು ವರೆಗೆ ಕೊಂದು ನಿರ್ಮೂಲ ಮಾಡ ಬಹುದೆಂತ ನೋಡುವದಕ್ಕೆ ಒಂದು ಶೇರು ಮಿಡಿತೆಗಳಿಗೆ ಒಂದಾಣೆ ಕೊಡುತ್ತೇನೆಂದು ಜನರ ಮುಂದೆ ಹೇಳಲಾಗಿ, ಒಂದೇ ದಿವಸದಲ್ಲಿ ೨,೦೦೦ ಶೇರು ಮಿಡಿತೆಗಳು ಹೊಡದು ತಂದರು. ಬಹಳ ಬೆಳಗ್ಯೆ ಮಿಡಿತೆಗಳು ಹಾರಲಾರದವುಗಳಾಗಿರುವದರಿಂದ ಅವನ್ನು ಆಗ್ಯೆ ಸುಲಭದಲ್ಲಿ ಕೊಂದು ಹಾಕ ಬಹುದಂತೆ.

ಔಡ್ಲಗಿಡದ ಎಲೆಗಳು ಮಿಡಿತೆಗಳಿಗೆ ವಿಷವಾಗಿವೆಂದು ಅಮೇರಿಕದಲ್ಲಿ ಪರೀಕ್ಷೆ ಮಾಡಿದ್ದಾರೆ. ಕಲಿಫೊರ್ನಿಯದಲ್ಲಿ ಒಬ್ಬ ಪಕ್ಕಲಿಗನ ತೋಟದಲ್ಲಿ ಮಿಡಿತೆಗಳು ಬಂದು, ಮರಗಳನ್ನು ತಿಂದು ಬೋಳು ಮಾಡುವಾಗ್ಯೆ ಅವನು ಔಡ್ಲಗಿಡದ ಎಲೆಗಳನ್ನು ಮರಗಳ ಕೆಳಗೆ ಚೆಲ್ಲಿದನು. ಒಂದೇ ಮರದ ಕೆಳಗಿನ ಎಲೆಗಳನ್ನು ತಿಂದವುಗಳು ೪೫೮ ಸತ್ತು ಹೋಗಿದ್ದವು, ೨೦ ಸಾಯಲಿಕ್ಕಾಗಿದ್ದವು; ಅವು ಎಲೆಗಳನ್ನು ಸ್ವಲ್ಪ ಮಾತ್ರ ತಿಂದಿದ್ದವು. ತಿಂದದ್ದು ಮಾತ್ರ ನೋಡಿದರೆ, ಇನ್ನು ಹತ್ತು ಪಾಲಷ್ಟು ಸಾಯುವದಕ್ಕೆ ಬೇಕಾದಷ್ಟು ಉಳದಿತ್ತು. ಆದ್ದರಿಂದ ಹೊಲಗಳ ಸುತ್ತಲೂ ಔಡ್ಲಗಿಡಗಳ ಬೇಲಿ ಹಾಕುವದೂ ತೋಟಗಳಲ್ಲಿಯೂ ನೆಡುವದೂ ಬಹಳ ಪ್ರಯೋಜನವಾಗಿದೆ.

ಮುಂಬಾಯಿ ಸಂಸ್ಥಾನದಲ್ಲಿ ಅರಳೆಯ ನೂಲೂ ವಸ್ತ್ರವೂ ಮಾಡುವ ಕಾರಖಾನೆಗಳಲ್ಲಿ ಹೆಚ್ಚು ಕಡಿಮೆ ಮೂವತ್ತು ಸಾವಿರ ಜನರು ಕೆಲಸ ಮಾಡುತ್ತಾರೆ. ಇದೇ ಉದ್ದಿಮೆಯ ಇಂಗ್ಲಿಷ ಅಮೆರಿಕನ ಕಾರಖಾನೆಗಳವರು ತಮ್ಮ ವ್ಯಾಪಾರ ಮಂದವಾಗುವದೋ ಎಂತ ಭಯ ಪಡುತ್ತಾರೆ.

ಕೆಲ ತಿಂಗಳ ಹಿಂದೆ ಹೊಸ "ಲೈಸೆನ್ಸ ಟಾಕ್ಸ" ಎಂಬ ತೆರಿಗೆ ಏರ್ಪಡಿಸಿದ ಸಮಯದಲ್ಲಿ ಸೂರತಿನ ಜನರು ದಂಗೆ ಮಾಡಿದರು ಎಂಬದಾಗಿ ಈ ಪತ್ರದಲ್ಲಿ ಹೇಳಿದ್ದೆವು. ಆ ಸಂಬಂಧದಲ್ಲಿ ಸೂರತಿನ ದೇಶೀಯ ವರ್ತಮಾನಪತ್ರಕರ್ತರು ಜನರಿಗೆ ದಂಗೆ ಮಾಡಲಿಕ್ಕೆ ಉತ್ತೇಜನ ಕೊಟ್ಟರು ಎಂತ ಅವರ ಮೇಲೆ ತಪ್ಪು ಸ್ಥಾಪಿಸಿ, ಹೊಣೆ ಸಹಾ ತೆಗದು ಕೊಳ್ಳದೆ, ಅವರನ್ನು ಸೆರೆಯಲ್ಲಿ ದೋಣಾಗಿತ್ತು. ಇವರಿಗೆ ಏನು ತೀರ್ಪು ಗುತ್ತದೆಂತ ಎಲ್ಲಾ ಕಡೆಯವರು ಬಹಳ ಕಾಂಕ್ಷೆಯಿಂದ ಕಾದು ಕೊಂಡಿದ್ದರು. ಹೀಗೆ ಆ ವರ್ತಮಾನಪತ್ರಕರ್ತರು ತೀರ್ಪು ಕಾಯುತ್ತಾ ಸೆರೆಯಲ್ಲಿ ಮೂರು ತಿಂಗಳಿದ್ದ ಮೇಲೆ ಕಡೆಗೆ ವಿಚಾರಣೆ ಪ್ರಾರಂಭವಾಗಿ, ೨೧ ದಿವಸಗಳು ನಡಿಯುವದಾಯಿತು. ಅನೇಕ ಸಾಕ್ಷಿಗಾರರು ತಾವು ಮೆಜಿಸ್ಟ್ರೇಟರ ಮುಂದೆ ಕೊಟ್ಟ ವಾಗ್ಮೂಲ ಪೊಲೀಸನವರು ಹೊಡದು ಬಡದು ಕಲಿಸಿದ ಮೇರೆಗೆ ಕೊಟ್ಟದ್ದೇ ಹೊರ್ತು ವಾಜಿಬಿಯಲ್ಲಾ ಎಂಬದಾಗಿ ಹೇಳಿದರು. ಮತ್ತು ಆ ವರ್ತಮಾನಪತ್ರಕರ್ತರು ಫಲಾನಿ ತಾರೀಕಿನಲ್ಲಿ ಸಭೆಯಲ್ಲಿ ನಿಂತು ಕೊಂಡು ಸರಕಾರಕ್ಕೆ ವಿರುದ್ಧ ಭಾಷಣ ಮಾಡಿದ್ದು ನಾವು ಕೇಳಿದೆವೆಂದು ಕೆಲ ಸಾಕ್ಷಿಗಾರರು ಹೇಳಿದ್ದಕ್ಕೆ ಆ ತಾರೀಕಿನಲ್ಲಿ ಆ ವರ್ತಮಾನಪತ್ರಕರ್ತರು ಮುಂಬಾಯಿಯಲ್ಲಿದ್ದರೆಂದು ಮುಂಬಾಯಿಯ ಮಾತುಭಾರಿ ಗೃಹಸ್ಥರು ಹೇಳಲಾಗಿ ಜಡ್ಜಿಸಾಹೇಬರೂ ಅಸ್ಸೆಸರರೂ ಆ ಪತ್ರಕರ್ತರ ಮೇಲೆ ತಪ್ಪಿಲ್ಲಾ ಎಂಬದಾಗಿ ಠರಾಯಿಸಿ, ಅವರನ್ನು ಬಿಡಿಸಿದರು. ಇಂಥಾ ದೊಡ್ಡ ವಿಚಾರಣೆ ಪಶ್ಚಿಮ ಹಿಂದುಸ್ಥಾನದಲ್ಲಿ ಈ ವರೆಗೆ ಆದದ್ದಿಲ್ಲಾ. ಆ ಬಡ ವರ್ತಮಾನಪತ್ರಕರ್ತರು ಬಿಡುಗಡೆ ಹೊಂದುವದಕ್ಕೆ ತಮ್ಮ ಸರ್ವಸ್ವವನ್ನು ಖರ್ಚು ಮಾಡಿದರಂತೆ.

ಎರಡು ಮೂರು ತಿಂಗಳ ಹಿಂದೆ ಅಫಘಾನಿಸ್ಥಾನದ ಅಮೀರನ ದರಬಾರಿಗೆ ರುಸ್ಯರ ಕಡೆಯಿಂದ ರಾಯಭಾರಿ ಬಂದ ವರ್ತಮಾನ ಹಿಂದುಸ್ಥಾನದ ಸರಕಾರದವರು ಕೇಳಿ, ತಾವೂ ಕಳುಹಿಸ ಬೇಕೆಂದಿದ್ದಾಗ್ಯೆ ಅಮೀರನ ಮಗನು ತೀರಿ

ಕೊಂಡದ್ದರಿಂದ ಅಭ್ಯಂತರವಾಯಿತು. ಆ ಮೇಲೆ ಸರಕಾರದವರು ಕಳುಹಿಸಿದ ಕೆಲವು ಕಾಗದಗಳಿಗೆ ಅಮೀರನು ಉತ್ತರ ಬರಿಯಲಿಲ್ಲ. ಹೀಗಿರಲಾಗಿ ಸರ್‌ನೆವಿಲ್ ಚಂಬರ್ಲಿನ್ ಧೊರೆಗಳು ರಾಯಭಾರಿಯಾಗಿ ಪರಿಜನರನ್ನು ಕೂಡಿ ಕೊಂಡು ಪೇಶಾವರದಿಂದ ಹೊರಟು, ಅಮೀರನ ಶೀಮೆಯ ಪ್ರಾಂತಕ್ಕೆ ಬರಲಾಗಿ ಅಲ್ಲಿ ಅಮೀರನ ದಳವಾಯಿ ಅವರನ್ನು ಸರ್ವಥಾ ಮುಂದರಿಸಲಿಕ್ಕೆ ಬಿಡದ ಕಾರಣ ಇಂಗ್ಲಿಷ ಸರಕಾರಕ್ಕೆ ಮಹಾ ಅಪಮಾನ ಮಾಡಿದ ಹಾಗಾಯಿತು. ಇದನ್ನು ಸೈರಿಸ ಬಾರದು, ಅವನ ಶೀಮೆಗೆ ದಂಡು ಕಳುಹಿಸಿ, ಅವನಿಗೆ ಬುದ್ಧಿ ಕಲಿಸುವದು ಯುಕ್ತವೆಂದು ಅನೇಕ ಇಂಗ್ಲಿಷ ವರ್ತಮಾನಪತ್ರಕರ್ತರು ಸೂಚನೆ ಕೊಡುವದರಿಂದ ಅಫಘಾನಿಸ್ಥಾನದ ಮೇಲೆ ಯುದ್ಧ ಮಾಡುವ ಸಂಭವವು ತೋರುತ್ತಾ ಅದೆ.

ಪೇಗು ಶೀಮೆಯ ಪ್ರೋಮ ಎಂಬ ಪಟ್ಣದ ಬಳಿಯ ಒಳ್ಳೇ ತರದ ಕಲ್ಲಿದ್ದಲಿ ಪುಷ್ಕಳವಾಗಿ ದೊರಕುತ್ತದಂತೆ. ಹೊಗೆಭಂಡಿಯ ಸಾವಕಾರರು ಇಂಗ್ಲಾಂಡಿನಿಂದ ತರಿಸುವ ಕಲ್ಲಿದ್ದಲಿಗೆ ಅದು ಸಮಾನವಾಗಿದೆ. ಈ ವರೆಗೆ ಟನ್ ೧ಕ್ಕೆ ೧೯ ರೂಪಾಯಿಗೆ ಶಿಕ್ಕುತ್ತಿದ್ದಂಥಾ ಕಲ್ಲಿದ್ದಲಿ ಇನ್ನು ಮುಂದೆ ೯ ರೂಪಾಯಿಗೆ ಶಿಕ್ಕುವದು.

ಸುಮಾತ್ರಾ ದ್ವೀಪದವರು ಬುಂದು (ಕಾಪಿ) ಗಿಡದ ಎಳೇ ಚಿಗುರು ಕಿತ್ತು, ಹೊಗೆ ಬಾರದಂತೆ ಪಾತ್ರದಲ್ಲಿಟ್ಟು ಹುರಿದು, ಬೆರಳಿನಿಂದ ಪುಡಿ ಮಾಡಿ, ಬಿಶಿ ನೀರಲ್ಲಿ ಹಾಕಿ, ಗಾಳಿಸಿ ತೆಗದು ಈ ಪಾನವನ್ನು ದಿವ್ಯವೆಂದು ಕುಡಿಯುತ್ತಾರೆ; ಬೀಜವನ್ನು ಬಿಸಾಡುತ್ತಾರೆ. ಈ ಪಾನಕದ ಶಕ್ತಿಯಿಂದ ಆ ದ್ವೀಪದವರು ಮಳೆ ಬಿಸಲು ಕೆಸರು ಎಂತ ಲಕ್ಷಿಸದೆ, ಚನ್ನಾಗಿ ಕೆಲಸ ಮಾಡಿ, ಸುಖದೇಹಿಗಳಾಗಿದ್ದಾರಂತೆ.

ಯೊಪ್ಪಿಯಿಂದ ಯೆರೂಸಲೇಮಿನ ವರೆಗೆ ಲೋಹಮಾರ್ಗ ಮಾಡ ಬೇಕೆಂತ ಬಹು ಕಾಲದಿಂದಿದ್ದ ಆಲೋಚನೆ ಈಗ ಕಾರ್ಯಾರ್ಥದಲ್ಲಿ ಆಗುವದು. ತುರ್ಕ ಸರಕಾರದವರು ಅದಕ್ಕೆ ಅಪ್ಪಣೆ ಕೊಟ್ಟಿದ್ದಾರೆ.

ಜಾಪಾನ ದೇಶದಲ್ಲಿ ಮರುಯಿಕಾನೆಟರೊ ಎಂಬವನೊಬ್ಬನು ಚರ್ಮದ ಕೋವಿ ಮಾಡುವ ನೂತನ ಯುಕ್ತಿ ತೆಗದಿದ್ದಾನೆ.

ಸನ್ ೧೮೭೯ನೇ ಇಸವಿಯ ಮಧ್ಯದಲ್ಲಿ ಆಸ್ಟ್ರೇಲಿಯ ಮಹಾ ದ್ವೀಪದ ಸಿದ್ನಿ ಪಟ್ಣದಲ್ಲಿಯೂ, ೧೮೮೦ನೇ ಇಸವಿಯ ಮಧ್ಯದಲ್ಲಿ ಮೆಲ್ಬೂರ್ನಿನಲ್ಲಿಯೂ, ಈ ವರುಷ ಫ್ರಾನ್ಸ ದೇಶದಲ್ಲಿ ಆಗುವಂತೆ, ಪೃಥ್ವಿಯ ಮೇಲಣ ವಿಚಿತ್ರ ಪದಾರ್ಥಗಳ ಪ್ರದರ್ಶನವಾಗ ಬೇಕೆಂದು ಅಲ್ಲಿಯವರು ಆಲೋಚನೆ ಮಾಡಿ, ನಾನಾ ಅಪೂರ್ವ ವಸ್ತುಗಳನ್ನು ಕಳುಹಿಸ ಬೇಕೆಂದು ಎಲ್ಲಾ ದೇಶಗಳವರಿಗೆ ಬಿನ್ನಹ ಮಾಡುತ್ತಾರೆ.

ವಿಲಾಯತಿಯ ದೊಡ್ಡ ದೊಡ್ಡ ಪಟ್ಣಗಳಲ್ಲಿಯೂ ಮುಂಬಾಯಿಯಲ್ಲಿಯೂ ಗಾಸ್ ಎಂಬ ಹವೆಯಿಂದ ದೀಪ ಉರಿಸುತ್ತಾರೆ. ಆದರೆ ಲಂಡನಿನಲ್ಲಿ ಒಬ್ಬನು "ಇಲೆಕ್ಟ್ರಿಕ್ ಲೈಟ" ಅಂದರೆ ವಿದ್ಯುತ್‌ಶಕ್ತಿಯಿಂದ ದೀಪ ಉರಿಸಲಿಕ್ಕೆ ಪ್ರಾರಂಭ ಮಾಡುವವನಾದ್ದರಿಂದ ಪಟ್ಣಕ್ಕೆ ಗಾಸ್ ಒದಗಿಸಿ ಕೊಡುವ ಸಾವಕಾರಮಂಡಲಿಯವರು ಬಹುಶಾ ಘಾಬರಿಗೊಂಡಿದ್ದಾರೆ. ಈ ನೂತನ ದೀಪದ ಬೆಳಕು ಸೂರ್ಯನ ಪ್ರಕಾಶಕ್ಕೆ ಹೋಲುವಂಥಾದ್ದಾಗಿ, ಅದು ಹಚ್ಚಿರುವಲ್ಲಿ ಸರ್ವ ಪದಾರ್ಥಗಳು ಹಗಲಲ್ಲಿ ಹ್ಯಾಗೋ ಹಾಗೆಯೇ ಕಾಣುತ್ತವಂತೆ.

ಇಂಗ್ಲಾಂಡಿನವರು ಹೆಚ್ಚೆಚ್ಚಾಗಿ ಅನ್ಯದೇಶಗಳಿಂದ ಬರುವ ಆಹಾರದ ಮೇಲೆ ಆತುಕೊಳ್ಳುವವರಾಗಿದ್ದಾರೆ. ಗೋಧಿ ಮುಂತಾದ ಧಾನ್ಯ, ಮಾಂಸ, ಬಟಾಟೆ, ಸಕ್ಕರೆ, ಇನ್ನು ಬೇರೆ ಜಿನಸು ಅನ್ಯದೇಶಗಳಿಂದಬರುವದು ಹೆಚ್ಚುತ್ತದೆ. ೧೮೬೭ನೇ ಇಸವಿಯಲ್ಲಿ ಇಂಗ್ಲಾಂಡಿನಲ್ಲಿ ಅನ್ಯದೇಶಗಳಿಂದ ಬಂದ ಗೋಧಿ ಒಬ್ಬ ಮನುಷ್ಯನಿಗೆ ೧೪೦ ರಾತ್ಲ ಮೇರೆಗೆ ಖರ್ಚಾಯಿತು; ೧೮೭೭ನೆಯಲ್ಲಿ ೨೦೩ ರಾತಲು, ೧೮೬೭ನೆಯಲ್ಲಿ ಪರದೇಶಗಳ ಬಟಾಟೆ ೫ ರಾತಲು, ೧೮೭೭ನೆಯಲ್ಲಿ ೨೭ ರಾತಲು; ಅಕ್ಕಿ ೧೮೬೭ನೆಯಲ್ಲಿ ಒಬ್ಬನಿಗೆ ೬ ರಾತಲು ಪ್ರಕಾರ, ೧೮೭೭ನೆಯಲ್ಲಿ ೧೩ ರಾತ

ಯು ಪ್ರಕಾರ; ಬೇರೆ ಜಿನಸೂ ಹೀಗೆಯೇ. ಒಂದು ಜನಾಂಗ ಆಹಾರಕ್ಕೋಸ್ಕರ ಬೇರೆ ಜನಾಂಗಗಳ ಮೇಲೆ ಆತುಕೊಳ್ಳುವದು ಸಮಾಧಾನದ ಭದ್ರತೆಗೆ ಗುರುತಾಗಿದೆ; ಯುದ್ಧಸಮಯದಲ್ಲಿ ಅನ್ಯದೇಶಗಳಿಂದ ಜೀನಸು ಬರುವದಕ್ಕೆ ಅಡ್ಡಿಯಾಗುತ್ತದೆ, ಮತ್ತು ಇದರಿಂದ ಆ ಜನಾಂಗಕ್ಕೆ ಆಹಾರದ ವಿಷಯದಲ್ಲಿ ಧಾವತಿ ಉಂಟಾಗುವದು. ಆದ್ದರಿಂದ ಲೋಕದ ಜನಾಂಗಗಳು ವ್ಯಾಪಾರದ ದೆಶೆಯಿಂದ ತಮ್ಮ ತಮ್ಮೊಳಗೆ ಹೊಕ್ಕುಬಳಿಕೆ ಮಾಡುತ್ತಾ ಇದ್ದು, ಒಂದರ ಮೇಲೊಂದು ಆತುಕೊಳ್ಳುವಷ್ಟು ಯುದ್ಧದ ಸಂಭವ ಕಡಿಮೆಯಾಗುವದು.

ಈ ಕಳೆದ ಅರುವತ್ತು ವರ್ಷಗಳಲ್ಲಿ ಗ್ರೇಟ್ ಬ್ರಿಟನ್ ರಾಜ್ಯದ ಪ್ರಜೆ ಇಮ್ಮಡಿಗಿಂತ ಹೆಚ್ಚಾಗಿ ಐಶ್ವರ್ಯವು ನಾಲ್ಕಷ್ಟು ಹೆಚ್ಚಾಗಿ ವರ್ಧನೆಯಾಯಿತು. ೧೮೧೫ನೇ ಇಸವಿಯಲ್ಲಿ ತೆರಿಗೆ ವಸೂಲು ಮಾಡ ತಕ್ಕ ಆಸ್ತಿ ೧೩೦,೦೦೦,೦೦೦ ಪೌಂಡ್ ಆಗಿತ್ತು. ಈಗ ೫೩೬,೦೦೦,೦೦೦ ಆಗಿದೆ. ಈಗ ವಸೂಲಾಗುವ ತೆರಿಗೆ ಸರಾಸರಿ ಒಬ್ಬನಿಗೆ ಒಂದು ವರ್ಷಕ್ಕೆ ೨೧ ರೂಪಾಯಿ ಆಗುತ್ತದೆ. ಪರದೇಶಗಳಿಗೆ ಕಳುಹಿಸುವ ಸರಕಿನ ಮೌಲ್ಯವೂ ಈಗ ಆರ್ವತ್ತು ವರ್ಷಗಳಿಗೆ ಮೊದಲು ಇದ್ದದಕ್ಕಿಂತ ನಾಲ್ಕಷ್ಟು ಹೆಚ್ಚಾಗಿದೆ. ಈಗ ಆ ಮೌಲ್ಯ ವರ್ಷಕ್ಕೆ ೨೦೦,೦೦೦,೦೦೦ ಪೌಂಡ್ ಆಗುತ್ತದೆ. ಬೇರೆ ಜನಾಂಗಗಳಿಗಿರುವ ಸರ್ವ ಹೊಗೆಹಡಗುಗಳನ್ನು ಕೂಡಿಸಿದರೆ, ಅವುಗಳ ಎರಡಷ್ಟು ಇಂಗ್ಲಾಂಡಿನವರಿಗೆ ಇವೆ. ನೀತಿಯಲ್ಲಿಯೂ ಲೌಕಿಕದಲ್ಲಿಯೂ ಸಾಧಾರಣ ಜನರಸ್ಥಿತಿ ಬಹಳ ಉತ್ತಮವಾಗಿದೆ. ಧಾನ್ಯಾದಿಗಳ ಧಾರಣೆ ಕಡಿಮೆಯಾಗಿ ಖರ್ಚು ಹೆಚ್ಚಾಗಿದೆ. ಚಾ, ಕಾಪಿ ಈ ಅವಶ್ಯ ಪದಾರ್ಥಗಳ ಖರ್ಚೂ ಹೆಚ್ಚಾಗಿದೆ. ಮತ್ತು ಬೇಂಕುಗಳಲ್ಲಿ ಜನರು ಬಡ್ಡಿಗೆ ಹಾಕುವ ಹಣವೂ ಹೆಚ್ಚಾಗಿದೆ. ಅತ್ತ ಕಡೆಯಲ್ಲಿ ಜನಸಂಖ್ಯೆ ಅಭಿವೃದ್ಧಿಯಾದರೂ, ಅಪರಾಧಿಗಳಾಗಿ ಶೆರೆಯಲ್ಲಿ ಬೀಳುವವರ ಸಂಖ್ಯೆಯೂ ಕಡಿಮೆಯಾಗುತ್ತಾ ಬರುತ್ತದೆ. ಭಿಕ್ಷಕರ ಸಂಖ್ಯೆಯೂ ಮೊದಲು ಇದ್ದದಕ್ಕಿಂತ ಕಡಿಮೆಯಾಗಿ, ನಾಲ್ಕನೇ ಒಂದಂಶ ಮಾತ್ರವಾಗಿದೆ.

ಕಳೆದ ವರ್ಷ ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಶೀಮೆಯಲ್ಲಿ ೨೬,೦೦೦,೦೦೦ ರಾತಲು ಹೊಗೆಸಪ್ಪು, ಇಪ್ಪತ್ತು ಸಾವಿರ ಅರ್ಬುದ ಚುರುಟೂ ಶೇದುವದರಿಂದ, ನಶೆ ಮಾಡುವದರಿಂದ, ತಿನ್ನುವದರಿಂದ ಖರ್ಚಾಯಿತು. ಅದಕ್ಕೆ ಹಿಂದಣ ವರ್ಷದಲ್ಲಿ ಖರ್ಚಾದದ್ದು ನೋಡಿದರೆ ೮,೦೦೦೦೦೦ ರಾತಲು ಹೊಗೆಸಪ್ಪು, ೫೦,೦೦೦,೦೦೦ ಚುರುಟೂ ಕಳೆದ ವರ್ಷ ಹೆಚ್ಚಿಗೆ ಖರ್ಚಾದದ್ದು.

(Carbonate of soda) ಸೋಡಾ ಖಾರದ ದ್ರಾವಕ, ಇದನ್ನು ಸುಟ್ಟ ಘಾಯ ಎಷ್ಟು ದೊಡ್ಡದಾಗಿದ್ದರೂ, ಅದರ ಮೇಲೆ ಇಟ್ಟರೆ, ನೋವು ಬಹಳ ಕಡಿಮೆಯಾಗಿ ಬೇಗ ವಾಶಿಯಾಗುತ್ತದೆ.

ಜ್ವರದ ನಿಮಿತ್ತ ಅಥವಾ ಬೇರೊಂದು ಕಾರಣದಿಂದ ಕೊಯನಾನು ತೆಗದು ಕೊಳ್ಳುವದು ಅನೇಕರಿಗೆ ಅವಶ್ಯ ಬೀಳುತ್ತದೆ. ಅದರ ರುಚಿ ಮಹಾ ಕಹಿ ಎಂದು ರುಚಿ ನೋಡಿದವರು ಬಲ್ಲರು. ಅದನ್ನು ಪರಿಹರಿಸುವದಕ್ಕೆ ಹಾಲು ಉತ್ತಮ ಪದಾರ್ಥವಾಗಿದೆ. ಒಂದು ಗ್ರೇನ್ ಕೊಯನಾನು ಒಂದು ಔನ್ಸ್ ಹಾಲಿನಲ್ಲಿ ಕರಗಿಸಿದರೆ, ಕೊಯನಾನಿನ ಕಹಿ ತಿಳಿಯುವದಿಲ್ಲಾ.

ಐನ ಬೇಸಿಗೆಯಲ್ಲಿ ಸಾಧಾರಣವಾಗಿ ಬೆವರುಸಾಲೆ (ಶೆಕೆ ಬೊಕ್ಕೆಗಳು) ಆದರೆ, ಅದಕ್ಕೆ ಶಾಂತಿ ಮಾಡುವದು ಹ್ಯಾಗಂದರೆ—ಒಂದು ಔನ್ಸ್ ನೀರಿಗೆ ಒಂದು ಗ್ರೇನ್ ಮೈಲತುತ್ತಿನ ಪ್ರಕಾರ ಹಾಕಿ ಕಲಸಿ, ಆ ಕಷಾಯದ ನೀರಿನಲ್ಲಿ ದಿವಸಕ್ಕೆ ಒಂದೆರಡು ಸಾರಿ ಮೈ ಒರಸಿದರೆ ಉಪಶಮನವಾಗುವದು.

ಕಿವಿ ನೋವಿಗೆ ಒಂದು ಅರಿವೆಯ ತುಂಡಿನಲ್ಲಿ ಒಂದು ಚಿಮುಟಿ ಕರೆಮೆಣಸಿನ ಪುಡಿ ಹಾಕಿ ಕಟ್ಟಿ, ಅದನ್ನು ಎಳ್ಳೆಣ್ಣೆಯಲ್ಲಿ ಅಥವಾ ಇಪ್ಪೆ ಎಣ್ಣೆಯಲ್ಲಿ ಅದ್ದಿ, ಕಿವಿಯೊಳಗಿಡ ಬೇಕು; ಮತ್ತು ಉಣ್ಣೆ ವಸ್ತ್ರ ತಲೆಗೆ ಸುತ್ತಿ ತಲೆ ಬೆಚ್ಚಗಿಡ ಬೇಕು; ತತ್‌ಕ್ಷಣ ನೋವು ಶಾಂತವಾಗುವದು.

Printed at the Basel Mission Press, Mangalore.

ಕ್ರೈಸ್ತ ಸಭಾ ಪತ್ರ

ಪುಸ್ತಕ ೧೧. **DECEMBER 1878.** ಅಂಕೆ ೬.

ವಸ್ತ್ರಾಸ್ತ್ರ ಧರಿಸಿ ಕೊಳ್ಳೋಣ.

(54ನೇ ಪಾನಿನಿಂದ ಮುಂದೆ.)

ನಾವು ಯೇಸುವಿನ ಶಿಷ್ಯಮರಿಗಳು ಆಗ ಬೇಕು. ಹಾಗಾದರೆ ಆತನನ್ನು ಅನುಸರಿಸುತ್ತಾ ಆತನಿಂದ ಕಲಿತು ಕೊಳ್ಳುತ್ತಾ ಇರುವದು ನಮ್ಮ ಧರ್ಮವಾಗಿರುತ್ತದೆ. ಮುಖ್ಯವಾಗಿ ಮನೋದೀನತೆಯನ್ನೂ ಸಾತ್ವೀಕತ್ವವನ್ನೂ (ಮತ್ತಾ. ೧೧, ೨೯-೩೦.) ಆತನಿಂದ ಕಲಿತುಕೋಬೇಕು. ಇವೆರಡು ಗುಣಗಳು ನಮ್ಮ ಸ್ವಾಭಾವಿಕ ಭೂಷಣವಾಗಿರದ ಕಾರಣ ನಾವು ಅವನ್ನು ಮುಖ್ಯವಾಗಿ ಸಾಧಿಸಿ ಕೊಳ್ಳ ಬೇಕು. ಇವೆರಡು ಗುಣಗಳ ಸಂಪಾದನೆಗೆ ಜೋಡಾಗಿ ನಮ್ಮ ದುರ್ಗುಣಗಳ ನಿಗ್ರಹವು ಆಗ ಬೇಕು. ವ್ಯಸನಗಳನ್ನೂ ನಮಗೆ ಇಷ್ಟವಾಗಿರುವ ಪಾಪಗಳನ್ನೂ ನಾವು ಪೂರೈಸದೆ, ಕಿತ್ತು ಹಾಕ ಬೇಕು. ಹೀಗಿರಲಾಗಿ ಶುಭ್ರವಾಗಿಯೂ ಸುಂದರವಾಗಿಯೂ ಇರುವ ವಸ್ತ್ರಾಲಂಕಾರವು ನಿನಗೆ ಬೇಕಾದರೆ, ನೀನು ನಿನ್ನ ಗರ್ವವನ್ನೂ ಸ್ವಾಭಿಮಾನವನ್ನೂ ಕೋಪವನ್ನೂ ಹೊಟ್ಟೇಕಿಚ್ಚನ್ನೂ ತೆಗದು ಹಾಕಿ, ಯೇಸು ಕ್ರಿಸ್ತನ ಕೈಯಿಂದ ಮನೋದೀನತೆಯನ್ನು ಉಡಿಸಿ, ಸಾಧುಭಾವವನ್ನು ತೊಡಿಸಿ ಕೊಳ್ಳ ಬೇಕು.

ಆದರೆ ತಕ್ಕ ವಸ್ತ್ರಾಲಂಕಾರವು ಇದ್ದರೂ, ಸಾಲದು: ಶತ್ರುಗಳ ಮುತ್ತಿಗೆಯಲ್ಲಿರುವವನು ಒಳ್ಳೇ ಆಯುಧಧಾರಿಯಾಗಿ, ಖಡ್ಗ ಮೊದಲಾದ ಅಸ್ತ್ರಗಳಿದ್ದವನೂ ಆಗಿರ ಬೇಕು; ಇಲ್ಲವಾದರೆ, ಶತ್ರುಗಳನ್ನು ಪರಾಜಯ ಪಡಿಸಿ, ಓಡಿಸಲಾರನು. ತನ್ನ ಶತ್ರುಗಳನ್ನು ಸೋಲಿಸಿ, ಓಡಿಸಿ ಬಿಡೋದಕ್ಕೆ ತನ್ನ ಸ್ವಂತ ಶಕ್ತಿ ಸಾಲದೆಂದು ಸತ್‌ಕ್ರೈಸ್ತನಿಗೆ ತಿಳಿದಿರುತ್ತದೆ.

"ನಮ್ಮಲ್ಲಿ ತ್ರಾಣವಿಲ್ಲವು, ನಾಂ ಗೆಲ್ಲುವವರಲ್ಲಾ;
ಯೆಹೋವನಾಯ್ದ ಶೂರನು ವಿಜಯ ಕೊಡ ಬಲ್ಲ.
ಆದಾರಂದರೆ: ಯೇಸು ಕ್ರಿಸ್ತನೇ!"

ಎಂಬದಾಗಿ ಅವನು ಒಳ್ಳೇ ಅನುಭವದ ಮೇಲೆ ಮನಃಪೂರ್ವಕವಾಗಿ ಅರಿಕೆ ಮಾಡುವವನಾಗಿದ್ದಾನೆ.

ಆದರೆ ಕ್ರಿಸ್ತಯೇಸುವನ್ನು ಧರಿಸಿ ಕೊಂಡ ಸತ್‌ಕ್ರೈಸ್ತನಿಗೆ ಕ್ರಿಸ್ತನೇ ಬಲವೂ ಆಶ್ರಯವೂ ಆಗಿದ್ದಾನೆ. ಆತನು ಒಳ್ಳೇ ಕುರುಬನಾಗಿದ್ದಾನೆ. ಆತನ ಕುರಿಗಳು ಹೊಗಳಿ ಕೊಳ್ಳುತ್ತಾ ಆತನ ವಿಷಯವಾಗಿ ಅರಿಕೆ ಮಾಡ ಬಹುದು, ಹ್ಯಾಗಂದರೆ: "ನಾನು ಕಾರ್ಗತ್ತಲೆಯಲ್ಲಿ ನಡದು ಹೋಗುವಾಗಾದರೂ, ಕೇಡಾದೀತೆಂತ ಭಯ ಪಡೆನು; ಯಾಕಂದರೆ ನೀನು ನನ್ನ ಸಂಗಡ ಇರುವಾತನು; ನಿನ್ನ ಕೋಲು ನನಗೆ ಆಧಾರವಾಗಿರುತ್ತದೆ." (ಕೀರ್ತ. ೨೩, ೪.) ಆತನು ತಾನೇ ಅಭಯ ಕೊಟ್ಟು ಹೇಳಿದ್ದೇನಂದರೆ: "ನನ್ನ ಕುರಿಗಳನ್ನು ಯಾರೂ ನನ್ನ ಕೈಗೆ ತಪ್ಪಿಸಲೂ ಕಸಕೊಳ್ಳಲೂ ಕೂಡದು." ಆತನು ಕೂಲಿಯಾಳಾಗಿ ಸಂಬಳಕ್ಕಾಗಿ, ಬರೇ ಸ್ವಾರ್ಥಕ್ಕೆ ಅಲ್ಲಾ, ಒಡೆಯನಾಗಿ ಮಮಕಾರಪೂರ್ವಕವಾಗಿ ಕುರಿಗಳನ್ನು ಕಾಯುತ್ತಾನೆ, ಮೇಯಿಸುತ್ತಾನೆ, ನಡಿಸುತ್ತಾನೆ. ಕುರಿಗಳಿಗೆ ಅಪಾಯ ಕಂಡರೆ, ಹುಲಿ ಬಂದರೆ, ಆತನು ಓಡಿ ಹೋಗದೆ, ಕುರಿಗಳನ್ನುತಪ್ಪಿಸಿ ರಕ್ಷಿಸಲಿಕ್ಕಾಗಿ ತಾನೇ ಹುಲಿಯ ಎದುರಿಗೆ ಹೋಗಿ, ತನ್ನ ಪ್ರಾಣವನ್ನಾದರೂ ಕುರಿಗಳಿಗೋಸ್ಕರವಾಗಿ ಕೊಟ್ಟು ಬಿಡುತ್ತಾನೆ. (ಯೋಹಾನ್. ೧೦, ೧೨. ೧೩.)

ಆದರೂ ಯೇಸುವಿನ ಕುರಿಯಂತಾದ ಕ್ರೈಸ್ತನು ತಾನೇ ಸಹಾ ತನ್ನ ಪ್ರಾಣಲಾಭವನ್ನು ನೋಡಿ ಕೊಂಡು, ಶತ್ರುಗಳನ್ನು ಎದುರಿಸಿ ಹೋರಾಡ ಬೇಕು. "ಪ್ರಾರ್ಥಿಸುತ್ತಾ ಕೆಲಸ ಮಾಡ ಬೇಕು" ಎಂಥೇಳ ತಕ್ಕದಾಗಿರುವಂತೆ "ಹೋರಾಡುತ್ತಾ ಪ್ರಾರ್ಥನೆ ಮಾಡ ಬೇಕು" ಎಂದು ಹೇಳಲೂ ತಕ್ಕದಾಗಿರುತ್ತದೆ. ಪೌಲ ಅಪೊಸ್ತಲನು ತನ್ನ ಶಿಷ್ಯ ತಿಮೊಥೆಯನಿಗೆ ಬರದದೇನಂದರೆ: "ಹೋರಾಡುವವನಿಗಾದರೂ, ಚನ್ನಾಗಿ ಹೋರಾಡದಿದ್ದರೆ, ಜಯವೂ ಕಿರೀಟವೂ ಶಿಕ್ಕದು. ಯೇಸು ಕ್ರಿಸ್ತನ ಒಳ್ಳೇ ದಂಡಾಳಾಗಿ ತಾಳಿಕೋ!" (೨. ತಿಮೊ. ೨, ೫. ೩.) ತನ್ನ ವಿಷಯದಲ್ಲಿ ಅವನು ಹೊಗಳಿ ಕೊಂಡು, ಹೇಳಿದ್ದೇನಂದರೆ: "ನಾನು ಒಳ್ಳೇ ಹೋರಾಟ ಮಾಡಿ ತೀರಿಸಿದ್ದೇನೆ; ಜಯಗೊಂಡಿದ್ದೇನೆ." (೨ ತಿಮೊ. ೪, ೭.) ಮತ್ತು "ಪಾಪಕ್ಕೆ ವಿರೋಧವಾದ ಹೋರಾಟದಲ್ಲಿ ನೀವು ಪ್ರಾಣ ಕೊಟ್ಟು ಬಿಡುವಷ್ಟು ಇನ್ನು ಎದುರಾಡಿ ಹೋರಾಡಲಿಲ್ಲಾ; ಆದರೆ ಹೋರಾಟವು ಹ್ಯಾಗೂ ಅಷ್ಟಕ್ಕೆ ಬರ ಬೇಕು" ಎಂಬದಾಗಿ ಇಬ್ರಿ. ೧೨, ೪ರಲ್ಲಿ ಹೇಳಿರುತ್ತದೆ. ಹೀಗಿರಲಾಗಿ ಕ್ರೈಸ್ತನು "ನಾನಿಲ್ಲದೆ ಏನೂ ಮಾಡಲಾರಿರಿ" ಎಂಬುವ ಕರ್ತನ ನುಡಿಯನ್ನು ಹೌದೆಂತ ಅನುಭವ ಮಾಡಿ, ಪೂರ್ಣವಾಗಿ ನಂಬಿದರೂ, ತಾನೂ ಕಾದಾಡ ಬೇಕು, ಹೋರಾಡ ಬೇಕು. ಸ್ವಂತ ಹೆಸರಿನಲ್ಲಿ, ಸ್ವಂತ ಬಲದಲ್ಲಿ ಅಲ್ಲಾ, ಯೇಸುವಿನ ಶ್ರೀನಾಮಬಲದಲ್ಲಿ, ದೇವರ ಬಲದಲ್ಲಿ ಕಾದಾಡುತ್ತಿದ್ದಾನೆ. ತಾನು ಬಲಹೀನನೆಂದು ಚನ್ನಾಗಿ ತಿಳಿದಿರುವ ಕಾರಣದಿಂದಲೇ "ನನ್ನ ಬಲವು ಬಲಹೀನರಲ್ಲಿ ಬಲುವಾಗಿ ನೆರೆಯಾಗುವದು" ಎಂಥೇಳಿದ ನಾಯಕನ ವಚನಕ್ಕೆ ಧೈರ್ಯಶಾಲಿಯಾಗಿ ಸಂತೋಷವಾಗಿರುತ್ತಾನೆ. ತನ್ನ ಯುದ್ಧಕ್ಕೆ ಕ್ರೈಸ್ತನ ಮುಖ್ಯ ಆಯುಧ ಒಂದು ಪ್ರಾರ್ಥನೆಯೇ. ಏನಾದರೊಂದು ಭಯವು ಕಾಣುವಲ್ಲಿ ಯೇಸುವನ್ನು ಮರೆಹೊಗುತ್ತಾನೆ. ಅಪಾಯವು ಕಾಣುವ ಮೊದಲಾದರೂ, "ಒಡೆಯಾ! ನನ್ನನ್ನು ತಪ್ಪಿಸು! ನನ್ನನ್ನು ಕಾಪಾಡು! ನನಗೆ ಆಶ್ರಯವಾಗಿರು!" ಎಂದು ಬೇಡಿ ಕೊಳ್ಳುತ್ತಾನೆ. ಆದರೆ ಮಹಾ ಯುಕ್ತಿಶಾಲಿಯೂ ತಂತ್ರಗಾರನೂ ವೇಷಧಾರಿಯೂ ಆಗಿರುವ ಶತ್ರುವನ್ನು ತಾನು ಕಂಡು, ಬೇಗ ಗುರ್ತು ಹಿಡಿಯಲಿಕ್ಕೆ ಕೂಡುವ ಹಾಗೆ ತನಗೆ ಸತ್ಯದ ಜ್ಞಾನವನ್ನೂ ತೀವ್ರ ದೃಷ್ಟಿಯನ್ನೂ ಸೂಕ್ಷ್ಮ ವಿಚಾರಬುದ್ಧಿಯನ್ನೂ ಬಲು ಪರೀಕ್ಷಾಶಕ್ತಿಯನ್ನೂ ದಯಪಾಲಿಸ ಬೇಕೆಂತಲೂ ಯೇಸುವನ್ನು ಬೇಡಿ ಕೊಳ್ಳುತ್ತಾನೆ. ಪಾಪಪರಿಹಾರದ ಲಾಭದಲ್ಲಿ

ಅಡಗಿರುವ ನೀತಿಯುನ್ನೂ ಬೇಡಿ ಕೊಳ್ಳುತ್ತಾನೆ. ಈ ನೀತಿ "ಅಗ್ನ್ಯಂಬುಗಳು" ತಾಗಿ ಘಾಯ ಮಾಡಿ ಬಿಡದ ಹಾಗೆ ತಡೆಯಾಗಿರುವ ಕವಚವಾಗಿರುತ್ತದೆ. ಕ್ರಿಸ್ತ ಯೇಸುವಿನಲ್ಲಿ ದೇವರಿಗೆ ಸಂಧಾನವಾಗಿ ಅನ್ಯೋನ್ಯವಾಗಿರುವವನಿಗೆ ದೇವರೇ ಮಹಾ ಭದ್ರವಾದ ದುರ್ಗವಾಗಿದ್ದಾನೆ. ಸಂಧಾನದ ಸುವಾರ್ತೆಯನ್ನು ಸಾರಿ, ಯೇಸುವನ್ನು ಅರಿಕೆ ಮಾಡಲಿಕ್ಕೂ ಯೇಸುವಿನ ಬಳಿಗೆ ಜನರನ್ನು ಕರೆಯಲಿಕ್ಕೂ ಆಯತ್ತವನ್ನೂ ಬೇಡಿ ಕೊಳ್ಳುತ್ತಾನೆ. ಯೇಸು ಕ್ರಿಸ್ತನಿಗೆ ಒಳ್ಳೇ ಸಾಕ್ಷಿಗಾರನಾದವನಿಗೆ ಸೈತಾನನಾದರೂ ಅಂಜಿ ಕೊಳ್ಳುತ್ತಾನೆ. ವಿಶ್ವಾಸವನ್ನೂ ದೇವರಲ್ಲಿ ಬಲು ನಂಬಿಕೆಯನ್ನು ಬೇಡಿ ಕೊಳ್ಳುತ್ತಾನೆ; ಯಾಕಂದರೆ ಇದು ಭಯವನ್ನೂ ಹೇಡಿತನವನ್ನೂ ಹೊರಡಿಸಿ, ಮಹಾ ಧೈರ್ಯ ಕೊಡುವದು. ಪ್ರಾರ್ಥನೆಯಲ್ಲದೆ ದೇವರ ವಾಕ್ಯವೂ ಒಂದು ಮುಖ್ಯ ಆಯುಧ. ದೇವರ ವಾಕ್ಯವನ್ನು ಚನ್ನಾಗಿ ಕಲಿತು, ತಿಳಿದು, ಅನುಭವ ಮಾಡಿ, ರುಚಿ ನೋಡಿ, ಉಪಯೋಗಿಸು. ದೇವರ ಚಿತ್ತವೇನೆಂದು ಅದರಿಂದಲೇ ನಿನಗೆ ತಿಳಿದು ಬರುವದಲ್ಲದೆ, ಶತ್ರುಗಳನ್ನು ಸೋಲಿಸಿ, ಜಯ ಪಡುವದು ಹ್ಯಾಗೆಂದೂ ತಿಳಿಯುವದು. ದೇವರ ವಾಕ್ಯದಲ್ಲಿ ಮುಳುಗಿದವನಿಗೆ ಶತ್ರುಗಳು ಮುಟ್ಟರು.

ಧೈರ್ಯವಂತ ವೈದ್ಯನು.

ಒಮ್ಮೆ ಮಾರ್ಸೆಲ್ಸ ಪಟ್ಟಣದಲ್ಲಿ ಕೆಟ್ಟ ವ್ಯಾಧಿ ಪ್ರಬಲವಾಗಿ ಜನರು ಸಾವಿರ ಗಟ್ಲೆಯಾಗಿ ಸಾಯುತ್ತಿದ್ದರು. ತಂದೆಗೆ ಮಗನ ಮೇಲೆ ಮಗನಿಗೆ ತಂದೆಯ ಮೇಲೆ ವಾತ್ಸಲ್ಯವಿಲ್ಲದೆ ಹೋಗುವದಾಯಿತು. ಪಟ್ಟಣ ನಿರ್ಜನಪ್ರದೇಶವಾಗುತ್ತಾ ಬಂತು; ಬೀದಿಯಲ್ಲೆಲ್ಲಾ ಹುಲ್ಲು ಬೆಳೆಯಿತು. ಘಳಿಗೆಗೆ ಒಂದು ಹೆಣ ಹೂಣಿಡುವದಕ್ಕೆ ತಕ್ಕೊಂಡು ಹೋಗುತ್ತಿದ್ದರು. ಈ ವ್ಯಾಧಿ ಯಾವದು? ಅದಕ್ಕೆ ಚಿಕಿತ್ಸೆ ಏನು? ಎಂಬದು ಮಹಾ ಮಹಾ ವೈದ್ಯರಿಗೂ ಸೂಚಿಸಲಿಲ್ಲಾ. ಹೀಗಿರುವದರಿಂದ ಪಟ್ಟಣದ ವೈದ್ಯರೆಲ್ಲರೂ ಒಟ್ಟಿಗೆ ನೆರದು ಆಲೋಚನೆ ಮಾಡಿ, ಈ ವ್ಯಾಧಿಯಲ್ಲಿ ಏನೋ ಒಂದು ರಹಸ್ಯವಾದದ್ದು ಅದೆ; ಅದು ತಿಳಿಯುವದಕ್ಕೆ ಒಂದು ಹೆಣ ಕೊಯಿದು ಪರೀಕ್ಷೆ ಮಾಡಿ ನೋಡ ಬೇಕೆಂದು ಠರಾಯಿಸಿದರು. ಆದರೆ ಕೊಯಿದು ನೋಡುವವರು ಯಾರು? ಯಾರು ಕೊಯ್ಯುತ್ತಾನೋ ಅವನೂ ಕೆಲವು ತಾಸಿನೊಳಗಾಗಿ ಸಾಯುವನು. ಜೀವದ ಮೇಲೆ ಆಶೆ ಇಲ್ಲದವನ್ಯಾರಿದ್ದಾನೆ? ಹೀಗೆ ಒಬ್ಬರ ಮುಖ ಒಬ್ಬರು ನೋಡುತ್ತಿರುವಾಗ ಪ್ರಖ್ಯಾತಿ ಪಟ್ಟ ಒಬ್ಬ ಯೌವನಸ್ಥ ವೈದ್ಯನು ಗ್ಯೆಯೋನ್ ಎಂಬವನು ಎದ್ದು ನಿಂತು—"ಆಗಲಿ, ನನ್ನ ದೇಶದ ಹಿತಕ್ಕೆ ನಾನು ಪ್ರಯತ್ನ ಮಾಡುತ್ತೇನೆ; ನಾಳೆ ಬೆಳಿಗ್ಯೆ ಒಂದು ಹೆಣ ಕೊಯಿದು ಪರೀಕ್ಷಿಸಿ, ನನಗೆ ತಿಳಿದು ಬರುವಂಥಾದ್ದು ಕಾಗದದಲ್ಲಿ ಬರದಿಡುತ್ತೇನೆ" ಅಂದನು. ಅವನಿಗೆ ಮದುವೆಯಾಗಿದ್ದಿಲ್ಲಾ, ಬಹಳ ಐಶ್ವರ್ಯವಿತ್ತು. ಸಂಗಡಲೇ ಅವನು ತನ್ನ ಆಸ್ತೀ ವಿಷಯ ಮರಣಶಾಸನ ಬರದಿಟ್ಟನು. ಬೆಳಿಗ್ಯೆ ಆಗುತ್ತಲೇ ಅದೇ ರಾತ್ರಿ ಸತ್ತ ಒಬ್ಬನ ಹೆಣ ತನ್ನ ಕೋಣೆಯೊಳಗೆ ತಂದು, ಕಾಗದ ಮಶಿ ಲೇಖಣಿ ಯಾವತ್ತು ಸಿದ್ಧ ಮಾಡಿ ಕೊಂಡು, ಕೊಯ್ಯುವ ಕೆಲಸ ಪ್ರಾರಂಭಿಸಿ, ಶಸ್ತ್ರಪರೀಕ್ಷೆಯಿಂದ ರೋಗನಿದಾನ ತನಗೆ ತಿಳಿದು ಬಂದದ್ದು ಬರಿಯುತ್ತಾ ತೀರಿಸಿದನು. ಕಡೆಗೆ ಕೋಣೆಯಿಂದ ಹೊರಗೆ ಬಂದು, ಬರದ ಕಾಗದಗಳನ್ನು ಸಿರ್ಕದ ಪಾತ್ರದಲ್ಲಿ ಹಾಕಿ ಇಟ್ಟನಂತರ ಹನ್ನೆರಡು ತಾಸಿನೊಳಗೆ ತೀರಿ ಕೊಂಡನು. ತನ್ನ ದೇಶ ರಕ್ಷಿಸುವದಕ್ಕಾಗಿ ಯುದ್ಧಮುಖಕ್ಕೆ ಹೋಗಿ ಕಾದು ಸಾಯುವ ವೀರನ ಮರಣಕ್ಕಿಂತಲೂ ಈ ವೈದ್ಯನ ಮರಣ ಸಾವಿರ ಪಾಲಿಗೆ ಸ್ತುತ್ಯವಾಗಿದೆ.

ಮೂರ್ತಿಪೂಜೆ.

ಅಹಮದನಗರ ಜಿಲ್ಲೆಯಲ್ಲಿ ಎಸ್. ಪಿ. ಜಿ. ಮಿಶ್ಯನಿನ ಕ್ರೈಸ್ತರು ಬಹಳ ಜನರು (ಹೆಚ್ಚು ಕಡಿಮೆ ೩೦೦ ಮಂದಿ) ರೋಮನ ಸಭೆಗೆ ಶೇರಿ ಕೊಂಡರೆಂಬ ವರ್ತಮಾನ ಹಿಂದಿನ ಒಂದು ಅಂಕೆಯಲ್ಲಿ ಪ್ರಸ್ತಾಪಿಸಿದ್ದು ವಾಚಕರಿಗೆ ನೆನಪಿದ್ದೀತು. ರೋಮನ ಸಭೆಯ ಮೂರ್ತಿಪೂಜೆ ಧರ್ಮ್ಯವೇ ಎಂತ ಅವರನ್ನು ಸಮ್ಮತಿ ಪಡಿಸುವದಕ್ಕೆ ಪ್ರೀಸ್ತರು ಅವರಿಗೆ ಈ ದೃಷ್ಟಾಂತ ಕೊಟ್ಟರಂತೆ, ಅದು ಯಾವದಂದರೆ: ಯೆಹೂದ್ಯರ ಸಾಕ್ಷಿಗುಡಾರದಲ್ಲಿಯೂ ದೇವಾಲಯದಲ್ಲಿಯೂ ಕೆರೂಬಿಗಳು ಇದ್ದವಲ್ಲಾ; ದೇವರ ಅಪ್ಪಣೆಯ ಮೇರೆಗೆ ಅವುಗಳು ಅಲ್ಲಿ ಇಡಲ್ಪಟ್ಟ ಕಾರಣ ಅದರಲ್ಲಿ ಎರಡನೇ ಆಜ್ಞೆಯನ್ನು ಮೀರಿದ ಹಾಗಾಯಿತು ಎಂತ ಹೇಳಲಿಕ್ಕಾಗುವದಿಲ್ಲಾ; ಆದ್ದರಿಂದ ದೇವಾರಾಧನೆಯಲ್ಲಿ ಪ್ರತಿಮೆಗಳನ್ನಿಡುವದು ನ್ಯಾಯವೇ.

ರೋಮಾಯರ ಈ ಪ್ರತಿವಾದಕ್ಕೆ ಒಂದೇ ಆಕ್ಷೇಪ ಸಾಕು. ಆ ಕೆರೂಬಿಗಳ ಪ್ರತಿಮೆಗಳು ಆರಾಧನೆ ಮಾಡುವವನಿಗೆ ಆರಾಧನೆಯ ವಿಷಯಗಳಾಗಿ ಅಲ್ಲಾ, ತಾವೇ ದೇವರನ್ನು ಆರಾಧನೆ ಮಾಡುವ ಆಕಾರದಲ್ಲಿ ಅಲ್ಲಿಡಲ್ಪಟ್ಟಿದ್ದವು ಎಂತ ಹೊರಡೋಣ ೨೫, ೧೮. ಓದಿದರೆ, ತಿಳಿಯುವದು. "ಭಂಗಾರದಿಂದ ಎರಡು ಕೆರೂಬಿಗಳನ್ನು ಕೃಪಾಸನದ ಎರಡು ಕೊನೆಗಳಲ್ಲಿ ಮಾಡಬೇಕು. ಆ ಕೆರೂಬಿಗಳು ಮೇಲಕ್ಕೆ ರೆಕ್ಕೆಗಳನ್ನು ಚಾಚುವವುಗಳಾಗಿಯೂ ಕೃಪಾಸನವನ್ನು ಮುಚ್ಚುವವುಗಳಾಗಿಯೂ ಒಂದರ ಕೆಳಗೆ ಒಂದು ನೋಡುವವುಗಳಾಗಿಯೂ ಇರ ಬೇಕು. ಕೆರೂಬಿಗಳ ಮುಖಗಳು ಕೃಪಾಸನದ ಕಡೆಗೆ ಇರ ಬೇಕು. ಕೃಪಾಸನವನ್ನು ಪೆಟ್ಟಿಗೆಗೆ ಮೇಲಾಗಿಡಬೇಕು. ಅಲ್ಲಿ ನಿನ್ನನ್ನು ಎದುರ್ಗೊಂಡು ಕೃಪಾಸನದ ಮೇಲಿನಿಂದ ಸಾಕ್ಷಿಪೆಟ್ಟಿಗೆಯ ಮೇಲಿರುವ ಎರಡು ಕೆರೂಬಿಗಳ ನಡುವೆಯಿಂದ ನಿನ್ನ ಸಂಗಡ ಮಾತಾಡುವೆನು!" ಇಲ್ಲಿ ದೇವರು ಕೃಪಾಸನದಿಂದ, ಕೃಪಾಸನದ ಕಡೆಗೆ ಮುಖಗಳಿರುವ ಎರಡು ಕೆರೂಬಿಗಳ ಮಧ್ಯದಿಂದ ತನ್ನ ಭಕ್ತನ ಸಂಗಡ ಮಾತಾಡುವೆನೆಂದು ಹೇಳುತ್ತಾನೆ. ಆ ಕೆರೂಬಿಗಳು ಮನುಷ್ಯನಾದ ಭಕ್ತನು ಎಲ್ಲಿ ನೋಡುತ್ತಾನೋ ಅಲ್ಲೇ ನೋಡುತ್ತಿದ್ದಾವೆ. ಮತ್ತು ದೇವರು ಕೆರೂಬಿಗಳ ಮಧ್ಯದಲ್ಲಿ ವಾಸವಾಗಿದ್ದಾನೆ, ಕೆರೂಬಿಗಳನ್ನು ತನ್ನ ವಾಹನಗಳು ಮಾಡುತ್ತಾನೆ ಎಂತಲೂ ಹಳೇ ಒಡಂಬಡಿಕೆಯಲ್ಲಿ ತೋರುತ್ತದೆ. ಸೊಲೊಮೋನನ ಸಿಂಹಾಸನದ ಉಭಯ ಪಾರ್ಶ್ವಗಳಲ್ಲಿ ಎರಡು ಸಿಂಹಗಳಿದ್ದವು. ಹಾಗಾದರೆ ಸಿಂಹಗಳ ಮುಂದೆ ಸಾಷ್ಟಾಂಗವೆರಗಿದವರು ಅರಸನ ಮುಂದೆ ಸಾಷ್ಟಾಂಗವೆರಗಿದರೆಂದು ಹೇಳ ಬಹುದೋ? ಅರಸನಿಂದ ಏನಾದರೊಂದು ಕಾರ್ಯ ಬೇಡಿ ಕೊಳ್ಳಲಿಕ್ಕೆ ಬಂದವನೊಬ್ಬ ಸಿಂಹಗಳ ಮುಂದೆ ತಾನು ಅಡ್ಡ ಬಿದ್ದರೆ ಸಾಕೆಂತ ನೆನಸುತ್ತಿದ್ದರೆ, ಸೊಲೊಮೋನನು ಅವನಿಗೆ ಏನು ಹೇಳುತ್ತಿದ್ದಾನು? ಆ ಸಿಂಹಗಳು ಸೊಲೊಮೋನರಸನ ಮಹತ್ವವನ್ನು ಸೂಚಿಸುವವುಗಳಾಗಿದ್ದವು. ಕೆರೂಬಿಗಳು ಸೈನ್ಯಗಳ ಯೆಹೋವನೆಂದು ಹೆಸರುಳ್ಳ ಯೆಹೋವನ ಮಹತ್ವವನ್ನು ಮನುಷ್ಯರಿಗೆ ತೋರಿಸುವದಕ್ಕೆ ಕೃಪಾಸನದ ಬಳಿಯ ಇದ್ದವು. ಕೆರೂಬಿಗಳಿಗೆ ಪ್ರಾರ್ಥನೆ ಮಾಡಿದ್ದುಂಟು ಎಂಬುವದಕ್ಕೆ ರೋಮಾಯರು ಒಂದೇ ಒಂದು ದೃಷ್ಟಾಂತವಾದರೂ ಕೊಡಲಾರರು. ಹಾಗಾದರೆ ಕೆರೂಬಿಗಳಿಂದ ತಮ್ಮ ಸಭೆಯಲ್ಲಿ ನಡಿಯುವ ಮೂರ್ತಿಪೂಜೆ ಸಿದ್ಧಾಂತ ಪಡಿಸುವದಕ್ಕೆ ನೋಡುವದು ನಿರರ್ಥಕವೇ.

ಮತ್ತು ಆ ಕೆರೂಬಿಗಳನ್ನು ಇಟ್ಟಿರುವಂಥಾ ತೆರೆಯ ಒಳಗಣ ಪರಿಶುದ್ಧ ಸ್ಥಳಕ್ಕೆ ಪ್ರಧಾನಯಾಜಕನೂ ನಿತ್ಯಾ ಹೋಗ ಬಾರದಿತ್ತು. (ಲೇವಿಕ. ೧೬, ೨.) ವರುಷಕ್ಕೊಮ್ಮೆ ಮಾತ್ರ ಅವನು ಹೋಗುವಾಗ್ಯೆ ಸಭೆಯ ಗುಡಾರದಲ್ಲಿ ಯಾರೂ ಇರ ಬಾರದಿತ್ತು. (ವ. ೧೭.) ಕೆರೂಬಿಗಳು ಇದ್ದ

ಸ್ಥಳಕ್ಕೆ ಹೋಗುವದಕ್ಕೆ ಯೆಹೂದ್ಯರಿಗೆ ಅಪ್ಪಣೆ ಇದ್ದಿಲ್ಲವಾದರೆ, ಅವರಿಗೆ ನೋಡಲಿಕ್ಕೆ ಸಂದರ್ಭವಾಗದಂಥಾ ಕೆರೂಬಿಗಳನ್ನು ಆರಾಧನೆಯಲ್ಲಿ ಪ್ರಯೋಗಿಸಿದರೆಂದು ಹ್ಯಾಗೆ ಹೇಳ ಬಹುದು? ಜನಾಂಗದ ಪ್ರತಿನಿಧಿಯಾಗಿ ಪ್ರಾಯಶ್ಚಿತ್ತ ಮಾಡುವ ಉದ್ದಿಶ್ಯ ಆ ಪರಿಶುದ್ಧ ಸ್ಥಳಕ್ಕೆ ಹೋಗುತ್ತಿದ್ದ ಪ್ರಧಾನ ಯಾಜಕನ ಮುಖಾಂತರವಾಗಿ ಅವರು ಅವುಗಳನ್ನು ಪ್ರಯೋಗಿಸಿದ ಹಾಗಾಯಿತು ಎಂತ ರೋಮಾಯರು ಆಕ್ಷೇಪ ತರುವರು. ಆಗಲಿ; ಪ್ರಧಾನ ಯಾಜಕನು ಅಲ್ಲಿಗೆ ಹೋಗುವ ವಿಷಯದಲ್ಲಿ ಲೇವಿಕ ೧೬, ೧೨. ೧೩. ವಚನಗಳಲ್ಲಿರುವ ಕ್ರಮಗಳನ್ನು ಓದಿದರೆ, ಅವನಾದರೂ ಧೂಪದ ಹೊಗೆಯ ಮೇಘವು ಕೃಪಾಸನವನ್ನೂ ಕೆರೂಬಿಗಳನ್ನೂ ಸಹ ಮುಚ್ಚಿದ್ದರಿಂದ ಅವುಗಳನ್ನು ನೋಡ ಕೂಡದಿತ್ತು, ನೋಡ ಕೂಡದಿದ್ದರೆ, ಆರಾಧನೆಯಲ್ಲಿ ಅವುಗಳನ್ನು ಪ್ರಯೋಗಿಸಿದನೆಂದು ಹೇಳ ಬಹುದೋ?

ರೋಮಾಯರು ಇನ್ನೊಂದು ಉದಾಹರಣೆ ಕೊಡುತ್ತಾರೆ: ಮೋಶೆ ದೇವರ ಅಪ್ಪಣೆಯ ಪ್ರಕಾರ ಅರಣ್ಯದಲ್ಲಿ ಹಿತ್ತಾಳೆಯ ಸರ್ಪ ಮಾಡಿ, ಒಂದು ಗಣೆಯ ಮೇಲಿಟ್ಟು, ಅಗ್ನಿಸರ್ಪಗಳಿಂದ ಕಚ್ಚಿಸಿ ಕೊಂಡ ಇಸ್ರಯೇಲ್ಯರನ್ನ ಅದರ ಕಡೆಗೆ ನೋಡ ಬೇಕೆಂತ ಹೇಳಿದನಲ್ಲಾ. ಒಳ್ಳೇದು, ಇರಲಿ, ಈ ಹಿತ್ತಾಳೆ ಸರ್ಪ ದೇವತಾಪ್ರತಿಮೆ, ಇದನ್ನು ಪೂಜಿಸಿರಿ! ಎಂತ ಅವನು ಅವರಿಗೆ ಹೇಳಿದನೋ? ಹೀಗೆ ಹೇಳಿದ್ದ ಪಕ್ಷದಲ್ಲಿ ರೋಮಾಯರ ಮೂರ್ತಿಪೂಜೆ ಮಾತ್ರವಲ್ಲಾ, ಈ ಪೃಥ್ವಿಯ ಮೇಲಣ ಸರ್ವ ವಿಧದ ಮೂರ್ತಿಪೂಜೆಯೂ ಧರ್ಮ್ಯವೆಂಬದಕ್ಕೆ ಒಳ್ಳೇ ಸಿದ್ಧಾಂತ ಸಿಕ್ಕಿದ ಹಾಗಾಯಿತು. ಆ ಸರ್ಪದ ಕಡೆಗೆ ದೃಷ್ಟಿ ಇಟ್ಟು, ಸರ್ಪದಂಶವನ್ನು ಪರಿಹರಿಸಿ ಕೊಂಡವರು ಅನಂತರದಲ್ಲಿ ಅದಕ್ಕೆ ಅಡ್ಡ ಬಿದ್ದು ಪೂಜಿಸುತ್ತಿದ್ದರೆ, ದೇವರ ಕೋಪವು ಅವರ ಮೇಲೆ ಉರಿಯುತ್ತಿತ್ತಲ್ಲವೋ? ದೇವರ ವಾಕ್ಯದಲ್ಲಿ ಏನು ಹೇಳಿಯದೆ? ಕೆಲವು ನೂರು ವರುಷಗಳ ಮೇಲೆ ಇಸ್ರಯೇಲ್ಯರು ಅದೇ ಹಿತ್ತಾಳೆಯ ಸರ್ಪದ ಮುಂದೆ ಧೂಪ ಸುಟ್ಟು ಪೂಜಿಸುವವರಾದಾಗ, ಹೆಜೆಕಿಯ ಅರಸನು ಅದನ್ನು ಒಡದು ಚೂರು ಚೂರು ಮಾಡಿ ಬಿಟ್ಟನು, ಎಂದು ಅರಸುಗಳ ಎರಡನೇ ಪುಸ್ತಕದಲ್ಲಿ ಓದುತ್ತೇವೆ.

ಮೂರ್ತಿಪೂಜೆ ಹಳೇ ಒಡಂಬಡಿಕೆಯಲ್ಲಿ ಖಂಡಿಸಲ್ಪಟ್ಟಷ್ಟು ಹೊಸ ಒಡಂಬಡಿಕೆಯಲ್ಲಿ ಖಂಡಿಸಲ್ಪಡುವದಿಲ್ಲಾ ಎಂತ ನೆನಸ ಬಾರದು. ನಮ್ಮ ರಕ್ಷಕನ ಕಾಲದಲ್ಲಿದ್ದ ಯೆಹೂದ್ಯರು ತಮ್ಮ ಹಿರಿಯರಂತೆ ಮೂರ್ತಿಪೂಜೆ ಎಂಬ ವ್ಯಸನದಲ್ಲಿ ಬಿದ್ದವರಾಗಿರಲಿಲ್ಲಾ. ಆದದರಿಂದ ಯೇಸುಸ್ವಾಮಿಯ ಪ್ರಸಂಗಗಳಲ್ಲಿ ಮೂರ್ತಿಪೂಜೆಯ ಖಂಡನೆ ಬಹುಶಾ ಇಲ್ಲಾ. ಆದರೆ ಪತ್ರಿಕೆಗಳಲ್ಲಿ ಅಪೊಸ್ತಲರು ಅದನ್ನು ಎಷ್ಟು ಬಲವಾಗಿ ಖಂಡಿಸುತ್ತಾರೆ; ಮತ್ತು ಪ್ರಕಟಣೆಯ ತುದಿಯಲ್ಲಿ ಯೋಹಾನನು ವಿಗ್ರಹಾರಾಧಕರಿಗೆ ಬೆಂಕಿ ಗಂಧಕ ಉರಿಯುವ ಕೆರೆಯಲ್ಲಿ ಪಾಲು ಅದೆ ಎಂತ ಹೇಳಿದ್ಧಾನೆ. ಇವನೇ ಯೋಹಾನನು ತನಗೆ ಹೊಸ ಯೆರೂಸಲೇಮನ್ನು ತೋರಿಸಿದ ದೂತನ ಪಾದಗಳಿಗೆ ಬಿದ್ದಾಗ ಆ ದೂತನು ನಾನು ನಿನ್ನ ಜತೆದಾಸನು, ದೇವರಿಗೆ ನಮಸ್ಕರಿಸು ಎಂತಂದನು. ಮಹಿಮೆಗೆ ಸೇರಿದ ಪರಿಶುದ್ಧನೊಬ್ಬನು ನಮಗೆ ಪ್ರತ್ಯಕ್ಷನಾದರೆ, ಅವನನ್ನು ಆರಾಧಿಸುವದು ನ್ಯಾಯವಲ್ಲದಿದ್ದರೆ, ಅಂಥಾ ಪರಿಶುದ್ಧರ ಪ್ರತಿಮೆಗಳಿಗೆ ಆರಾಧನೆ ಮಾಡುವದು ನ್ಯಾಯವಲ್ಲವೆಂಬದು ಸಹಜವಷ್ಟೆ.

ಈ ಅನಾಚಾರದ ವಿಷಯ ರೋಮಾಯರ ಸಂಗಡ ಮಾತಾಡಿದರೆ, ಅವರು ಹೇಳುವದೇನು— ನಾವು ದೇವಾಲಯದಲ್ಲಿ ಪ್ರತಿಮೆಗಳನ್ನಿಡುವದು ವಿಗ್ರಹಾರಾಧನೆಯಾಗುವದಿಲ್ಲಾ, ಯಾಕಂದರೆ ನಾವು ಪ್ರಾರ್ಥನೆ ಮಾಡುವಾಗ ನಮ್ಮ ಮನಸುಗಳಲ್ಲಿ ಈ ಪ್ರತಿಮೆಗಳಿಗಾಚೆಗೆ ಹೋಗಿ ದೇವರನ್ನೇ ಧ್ಯಾನಿಸುತ್ತೇವೆ. ಈ ಮಾತಿನಲ್ಲಿ ಪುರುಷಾರ್ಥವಿಲ್ಲಾ. ಯಾಕೆ ಅಂದರೆ: ೧. ಎರಡನೇ ಆಜ್ಞೆಯಲ್ಲಿ ಪ್ರತಿಮೆಗಳಿಗೆ ಸಾಷ್ಟಾಂಗವೆರಗ ಬಾರದೆಂತ ಉಂಟು. ಪ್ರತಿಮೆಗಳ ಮುಂದೆ ಎರಗಿರುವಾಗ ಹೃದ

ಯದಲ್ಲಿ ದೇವರನ್ನು ನೆನಪು ಮಾಡುತ್ತೇವೆಂತ ಹೇಳುವವರ ವಿಷಯು ಅದರಲ್ಲಿ ಪ್ರತಿಷೇಧವಿಲ್ಲಾ. ೨. ಹಿಂದು ಜನರೂ, ಈ ಬೊಂಬೆ ನಾವು ಪೂಜಿಸುವದಿಲ್ಲಾ; ಈ ಬೊಂಬೆಯ ಮೂಲವಾಗಿ ನಿರಾಕಾರಿಯಾದ ಭಗವಂತನನ್ನು ಧ್ಯಾನಿಸುತ್ತೇವೆಂತ ಹೇಳುತ್ತಾರೆ. ೩. ಇಸ್ರಯೇಲ್ಯರು ಭಂಗಾರದ ಕರುಗಳನ್ನು ಮಾಡಿದಾಗ ಯೆಹೋವಾರಾಧನೆ ವಿಸರ್ಜಿಸ ಬೇಕೆಂಬ ಆಲೋಚನೆ ಅವರಿಗಿರಲಿಲ್ಲಾ. ಆದಾಗ್ಯೂ ಅವರಿಗೆ ಶಿಕ್ಷೆ ಬಂತಲ್ಲಾ. ೪. ರೋಮಾಯರು ಭಕ್ತರ ಪ್ರತಿಮೆಗಳನ್ನು ಮುಂದಿಟ್ಟುಕೊಂಡು, ನಮಗಾಗಿ ದೇವರ ಹತ್ತರ ಬೇಡಿ ಕೊಳ್ಳಿರಿ ಎಂತ ಅವುಗಳನ್ನೇ ನಿಜವಾಗಿ ಪ್ರಾರ್ಥಿಸುತ್ತಾರೆ. ೫. ದೇವರಿಗೊಬ್ಬನಿಗೆ ಹೊರ್ತು ಬೇರೆ ಯಾರಿಗಾದರೂ ಭಕ್ತರು ಪ್ರಾರ್ಥನೆ ಮಾಡಿದ್ದುಂಟು ಎಂಬದಕ್ಕೆ ಹಳೇ ಹೊಸ ಒಡಂಬಡಿಕೆಗಳಲ್ಲಿ ಒಂದೇ ಒಂದು ಉದಾಹರಣೆಯೂ ಇಲ್ಲಾ. ಹಾಗೆ ಮಾಡಿದ್ದು ಇದ್ದ ಪಕ್ಷದಲ್ಲಿ ಅದನ್ನು ಅಲ್ಲೇ ಖಂಡಿಸಿದ್ದು ಉಂಟು.

ಎಲ್ಲಿ?

ಸಹೋದರನೇ, ನೀನು ಎಲ್ಲಿ ನಿಂತಿದ್ದೀ? ನಿನ್ನ ಮನೆಯು ತಳಾದಿ ಯಾವದರ ಮೇಲೆ ಹಾಕಿದ್ದೀ? ಯೇಸು ಕ್ರಿಸ್ತನೆಂಬ ಬಂಡೆಯು ಮೇಲೋ? ಅಲ್ಲ, ಈ ಲೋಕದ ಮರುಳು ಮಾಯೆ ಎಂಬ ಉಸುಬಿನ ಮೇಲೋ?

ನಿನ್ನ ಮನೆ ಎಷ್ಟು ಕಾಲ ನಿಲ್ಲುವದು? ತಳಾದಿ ನಿಲ್ಲುವ ಕಾಲಕ್ಕಿಂತ ಹೆಚ್ಚು ಕಾಲ ನಿಲ್ಲದು. ಕ್ರಿಸ್ತ ರಕ್ಷಕನ ಮೇಲೆ ನೀನು ನಿಂತಿದ್ದಿಯಾದರೆ, ಆ ತಳಾದಿಯು ಮೇಲೆ ನೀನು ಎಂದೆಂದಿಗೂ ನಿಲ್ಲುವಿ. ಜೀವವುಳ್ಳ ದೇವರಾಗಿರುವ ಆತನು ನಿತ್ಯಕಾಲದಿಂದ ನಿತ್ಯಕಾಲಕ್ಕೆ ಸ್ಥಿರವಾಗಿರುವಂಥವನು. ಲೌಕಿಕ ಸುಖಭೋಗದ ಮೇಲೆ ನೀನು ನಿಂತಿದ್ದಿಯಾದರೆ, ಅದು ಎಷ್ಟು ವರೆಗೆ ಬಾಳುವಂಥಾದ್ದು? ಈಗ ನಾನು ತೃಪ್ತನಾಗಿದ್ದೇನೆ, ಭದ್ರವಾಗಿದ್ದೇನೆ, ಎಲ್ಲಾ ಚನ್ನಾಗಿದೆ, ಭಯವಿಲ್ಲವೆಂತ ನೆನಸುತ್ತೀ, ಖರೆ; ಈಗ ಎಲ್ಲಾ ಚನ್ನಾಗಿದೆ ಎಂತ ಕಂಡರೆ, ಆಯಿತೋ? ನಿತ್ಯಕಾಲದ ಚಿಂತೆ ನಿನಗೆ ಬೇಡವೋ? ಸ್ವಲ್ಪ ಸುಖ, ಕೆಲವು ತಾಸು ಸಂತೋಷ; ಚಿಂತೆ ಇಲ್ಲಾ; ಆದರೆ ಕ್ಷಣ ಮಾತ್ರದಲ್ಲಿ ನಿತ್ಯಕಾಲಕ್ಕೆ ಉದಯವಾಗುವ ದಿವಸ ಬರುತ್ತದೆ. ಕೇಳು! "ಶರೀರದಲ್ಲಿ ನಡದ ಕ್ರಿಯೆಗಳ ಲೆಖ್ಖ ಒಪ್ಪಿಸು" ಎಂತ ನಿನಗೆ ಪ್ರಶ್ನೆ ಹಾಕಿದರೆ, ಏನು ಉತ್ತರ ಕೊಡುವಿ? ಉತ್ತರವೇನೂ ಇಲ್ಲಾ; "ಶಪಿತರೇ, ನನ್ನನ್ನು ಬಿಟ್ಟು, ಸೈತಾನನಿಗೂ ಅವನ ದೂತರಿಗೂ ಸಿದ್ಧ ಮಾಡಿದ ನಿತ್ಯ ಬೆಂಕಿಗೆ ಹೋಗಿರಿ."

ಪಾಪಿಯೇ, "ಬರುವ ಕೋಪಕ್ಕೆ ತಪ್ಪಿಸಿಕೋ." ಈಗಲೇ ಕರ್ತನ ಕಡೆಗೆ ತಿರುಗಿ, ರಕ್ಷಣೆ ಪಡಕೋ. "ಈಗಲೇ ತಕ್ಕ ಸಮಯ, ಈಗಲೇ ರಕ್ಷಣೆಯ ದಿನ."

ಪ್ರಾರ್ಥನೆಯೂ ಕೆಲಸವೂ.

ಯಾವ ಕಾರ್ಯವೂ ಹಿಂದೆ, ದೇವಕಾರ್ಯ ಮುಂದೆ.

ಅಮೇರಿಕದ ಸಿನ್ಸಿನಾತಿ ಎಂಬ ಊರಿನಲ್ಲಿ ಒಬ್ಬ ಒಕ್ಕಲಿಗನು ವಿಶಾಲವಾದ ಜಾಗ ತೆಗದುಕೊಂಡು, ಮರಮಟ್ಟು ಮುಂತಾದ್ದು ಕಡಿದು ಸಾಗುವಳಿ ಮಾಡುವದಕ್ಕೆ ಅನೇಕ ಕೂಲಿಯವರನ್ನು ಕೆಲಸಕ್ಕಿಟ್ಟು ಕೊಂಡಿದ್ದನು. ಅವನು ಆವರೆಲ್ಲರನ್ನು ಬೆಳಿಗ್ಯೆ ಕರದು, ಊಟ ಮಾಡದೆ ಅವರ ಸಂಗಡಲೇ ಕೆಲಸಕ್ಕೆ ಹೋಗುವನು. ಊಟ ಸಿದ್ಧವಾದಾಗಲೇ ಮನೆಯುಲ್ಲಿಂದ ಒಂದು ಕಹಳೆ ಊ

ದುವರು, ಆಗ ಎಲ್ಲರೂ ಬಂದು, ಉಂಡು ಪುನಹ ಕೆಲಸಕ್ಕೆ ಹೋಗುವರು. ಆ ಒಕ್ಕಲಿಗನು ಮನೆಯಲ್ಲಿ ದಿನಾಲೂ ಬೆಳಿಗ್ಯೆ ಎಲ್ಲವರ ಸಂಗಡ ಪ್ರಾರ್ಥನೆ ಮಾಡುವ ಪದ್ಧತಿ ಇತ್ತು. ಆದರೆ ಇಷ್ಟು ಮಂದಿ ಕಡಿಯುವ ಅಗಿಯುವ ಕೆಲಸ ಬಿಟ್ಟು, ತಾನು ಪ್ರಾರ್ಥನೆ ಮಾಡುವಾಗ ಸುಮ್ಮನೆ ಕುಳಿತಿರುವದು ಅವನ ಮನಸ್ಸಿಗೆ ಒಪ್ಪಲಿಲ್ಲ; ನಷ್ಟವಾಗುತ್ತದೆಂತ ನೆನೆಸಿದನು. ಈ ಸೈತಾನನ ಸೂಚನೆಗೆ ಅವನು ಕಿವಿ ಕೊಟ್ಟು, ಬೆಳಿಗ್ಯೆಯ ಪ್ರಾರ್ಥನೆ ನಿಲ್ಲಿಸಿ ಬಿಟ್ಟನು. ಭಕ್ತಿವಂತೆಯಾಗಿದ್ದ ಅವನ ಹೆಂಡತಿ ತನ್ನ ಗಂಡನು ಬೇಗ ಐಶ್ವರ್ಯವಂತನಾಗ ಬೇಕೆಂಬ ಆಶೆಯಿಂದ ದೇವರನ್ನು ಬಿಟ್ಟು ಬಿಡುವದು ನೋಡಿ ದುಃಖಗೊಂಡು, ಗಂಡನಿಗೆ ಬಹು ವಿಧವಾಗಿ ಬುದ್ಧಿ ಹೇಳಿದರೂ, ಬೇಡಿ ಕೊಂಡರೂ, ಅವಳ ಮಾತಿನ ಕಡೆಗೆ ಅವನು ಲಕ್ಷ್ಯವಿಡದೆ ಹೋದನು. ಮಾತಿನಿಂದ ಆಗದೆ ಹೋದದ್ದು ಕಾರ್ಯದಿಂದ ಮಾಡ ಬೇಕೆಂಬದಾಗಿ ಅವಳು ಆಲೋಚಿಸಿ, ಒಂದು ಯುಕ್ತಿ ನಡಿಸಿದಳು. ಒಂದು ದಿನ ವಾಡಿಕೆಯ ಮೇರೆಗೆ ಗಂಡನು ಬೆಳಿಗ್ಯೆ ಆಳುಗಳನ್ನು ಕರಕೊಂಡು ಕೆಲಸಕ್ಕೆ ಹೋದನು; ಹೊತ್ತೇರಿ ಮೇಲೆ ಬಂದರೂ, ಬೆಳಿಗ್ಯೆಯ ಊಟದ ಕಹಳೆ ಕೇಳಲಿಲ್ಲಾ. ಅವರಿಗೆ ಬಹಳ ಹಶಿವೆಯಾಯಿತು. ಪದೇ ಪದೇ ಮನೇ ಕಡೆಗೆ ನೋಡಿದರು; ಕಹಳೆಯ ಶಬ್ದ ಕೇಳುತ್ತದೋ ಎಂತ ಚನ್ನಾಗಿ ಕಿವಿ ಕೊಟ್ಟರು; ಆದರೆ ಏನೂ ಕೇಳಲಿಲ್ಲಾ. ಒಂದೆರಡು ತಾಸು ಕಾದು, ಆ ಮೇಲೆ ಮನೆಗೆ ಹೋಗಿ ನೋಡಲಾಗಿ, ಮೇಜಿನಲ್ಲಿ ಊಟವಿಲ್ಲಾ; ಒಲೆಯಲ್ಲಿ ಕಾಪಿ ಇಲ್ಲಾ; ಏನೂ ಸಿದ್ಧವಾಗಿರಲಿಲ್ಲ. ಮನೆಯ ಯಜಮಾನಿ ತೊಡೆಯ ಮೇಲೆ ಸತ್ಯವೇದವನ್ನಿಟ್ಟು ಕೊಂಡು, ಹೊಲಿಯುತ್ತಾ ಕುಳಿತಿದ್ದಳು. ಗಂಡನು ಶಿಟ್ಟಿನಿಂದ— "ಇದೇನು? ಇಷ್ಟು ಹೊತ್ತಾದರೂ, ಇನ್ನೂ ಊಟ ಸಿದ್ಧವಾಗಲಿಲ್ಲಾ?" ಹೆಂಡತಿ—"ನಿಮಗೆ ಬಹಳ ಅವಸರದ ಕೆಲಸವದೆ, ಊಟಕ್ಕೆ ಸಮಯ ಶಿಕ್ಕದೆಂದು ನೆನಸಿ, ಊಟ ಸಿದ್ಧ ಮಾಡಲಿಲ್ಲ." ಗಂಡನು— "ಊಟಕ್ಕೆ ಸಮಯ ಶಿಕ್ಕದೆಂದು ನೆನಸಿದಿಯಾ? ನಾವು ಉಣ್ಣದೆ ಬದುಕುವವರೆಂದು ಮಾಡಿದ್ಧೀಯಾ?" ಹೆಂಡತಿ— "ನೀವು ಉಣ್ಣದೆ ಬದುಕುವವರು, ಪ್ರಾರ್ಥನೆ ಇಲ್ಲದೆಯೂ ಬದುಕುವವರು; ಈ ಹೊಟ್ಟೆಗೆ ಹ್ಯಾಗೆ ರೊಟ್ಟೆ ಬೇಕೋ ಹಾಗೆಯೇ ನಮ್ಮ ಆತ್ಮಗಳಿಗೆ ಪರಲೋಕದ ರೊಟ್ಟೆ ಅವಶ್ಯ." ಗಂಡನು— "ನೀನು ಹೇಳಿದ್ದು ವಾಸ್ತವ್ಯ; ಊಟಕ್ಕೆ ಬೇಗ ಸಿದ್ಧ ಮಾಡು, ನಾವು ಇಂದಿನಿಂದ ಎಡೆ ಬಿಡದೆ ಬೆಳಿಗ್ಯೆ ದೇವಾರಾಧನೆ ಮಾಡುತ್ತಾ ಇರುವಾ; ನನಗೆ ಎಷ್ಟು ಕೆಲಸವಿರಲಿ, ಎಷ್ಟು ಮಂದಿ ಆಳುಗಳೂ ನನ್ನ ಕೈಕೆಳಗಿರಲಿ, ನಾನು ಇನ್ನು ಮೇಲೆ ದೇವರ ಭಕ್ತಿ ಉದಾಸೀನ ಮಾಡೆನು" ಎಂದು ಹೇಳಿ, ಅಂದಿನಿಂದ ತನ್ನ ವಚನದ ಪ್ರಕಾರವೇ ನಡಕೊಳ್ಳುವವನಾದನು.

ನಿಜವಾದ ಔದಾರ್ಯವು.

ಪೂರ್ವಕಾಲದಲ್ಲಿ ವಿಲಾಯತಿಯಲ್ಲಿ ಒಬ್ಬ ಅರಸನು ತನ್ನ ಹೆಸರೂ ಕೀರ್ತಿಯೂ ಉಳಿಯ ಬೇಕೆಂಬ ಅಭಿಮಾನದಿಂದ ಬಹು ಶೋಭಾಯಮಾನವಾಗಿ ದೊಡ್ಡದೊಂದು ದೇವಾಲಯ ಕಟ್ಟಿಸುವದಕ್ಕೆ ನಿಶ್ಚಯಿಸಿ, ಆ ಕೆಲಸಕ್ಕೆ ಯಾರೊಬ್ಬನೂ ಒಂದು ಕಾಸಾದರೂ ಕೊಡಲೂ ಬೇರೆ ಯಾವ ವಿಧದ ಸಹಾಯವಾದರೂ ಮಾಡಲೂ ಬಾರದೆಂದು ಖಂಡಿತವಾದ ಅಪ್ಪಣೆ ಕೊಟ್ಟನು. ಕಟ್ಟಿಸುವ ಕೆಲಸವೆಲ್ಲಾ ಆಗಿ, ದೇವಾಲಯ ಸಿದ್ಧವಾದ ಮೇಲೆ ಇಂಥಾ ಅರಸನು ಇಂಥಾ ವರುಷದಲ್ಲಿ ಕಟ್ಟಿಸಿದ್ದು ಎಂಬದಾಗಿ ಅದರಲ್ಲಿ ಶಾಸನ ಬರಸಿದನು. ಹೀಗಿರುವಾಗ ಒಂದು ರಾತ್ರಿ ಅವನಿಗೆ ಸ್ವಪ್ನ ಬಿತ್ತು. ಸ್ವಪ್ನದಲ್ಲಿ ಪರಲೋಕದಿಂದ ಒಬ್ಬ ದೂತನು ಬಂದು, ಶಾಸನದಲ್ಲಿ ಬರೆದಿರುವ ತನ್ನ ಹೆಸರು ಅಳಿಸಿ, ಅದರ ಮೇಲೆ ಒಬ್ಬ ಬಡವೆ ವಿಧವೆಯ ಹೆಸರನ್ನು ಬರದು ಹೋದದ್ದನ್ನು ಕಂಡನು. ಹೀಗೆ ಮೂರು

ಸಾರಿ ಅದೇ ಸ್ವಪ್ನವಾಯಿತು. ಮಾರಣೇ ದಿನ ಅರಸನು ನೆನಪು ಮಾಡಿ, ತಾನು ಸ್ವಪ್ನದಲ್ಲಿ ಕಂಡ ವಿಧವೆಯನ್ನು ಕರಿಸಿ, "ನೀನು ಮಾಡಿದ್ದೇನು? ನನ್ನ ಅಪ್ಪಣೆ ಹ್ಯಾಗೆ ಮೀರಿದಿ?" ಎಂತ ವಿಚಾರಿಸಲು, ಅವಳು ನಡುಗುತ್ತಾ—"ಸ್ವಾಮೀ!" ಅಂದಳು. "ನಾನು ನನ್ನ ದೇವರನ್ನು ಪ್ರೀತಿ ಮಾಡುವಾಕೆ; ಅವನ ಹೆಸರಿನಲ್ಲಿ ಏನಾದರೊಂದು ಅಲ್ಪ ಕಾರ್ಯವಾದರೂ ಮಾಡ ಬೇಕೆಂತ ನನ್ನ ಮನಸ್ಸಿನಲ್ಲಿತ್ತು; ಈ ದೇವಾಲಯದ ಕೆಲಸಕ್ಕೆ ಏನಾದರೂ ಸಹಾಯ ಮಾಡುವಾ ಅಂದರೆ ತಮ್ಮ ಖಂಡಿತ ಅಪ್ಪಣೆ ಮೀರಲಿಕ್ಕೆ ಭಯ ಪಟ್ಟು, ದೇವಾಲಯದ ಕೆಲಸಕ್ಕೆ ಕಲ್ಲು ತಂದ ಗಾಡಿಯ ಎತ್ತುಗಳಿಗೆ ಒಂದು ಹಿಡಿ ಹುಲ್ಲು ಹಾಕಿದ್ದೆ; ಇಷ್ಟೇ ಅಲ್ಲದೆ ಮತ್ತೇನೂ ಮಾಡಲಿಲ್ಲ" ಎಂತ ಅರಿಕೆ ಮಾಡಿ ಕೊಂಡಳು. ಆಗ್ಯೆ ಅರಸನು, ತಾನು ತನ್ನ ಸ್ವಾಭಿಮಾನಕ್ಕೆ ಕಷ್ಟ ಮಾಡಿದೆ, ಇವಳು ದೇವರ ಮಹಿಮೆಗೆ ಕಷ್ಟ ಮಾಡಿದಳು ಎಂದು ತಿಳಿದು, ಆ ಶಾಸನದ ಮೇಲೆ ಅವಳ ಹೆಸರು ಬರಸಿದನು.

ಹುಡುಗರಿಗೆ ಒಂದು ಕಥೆ.

ಕಾಗೆಗಳಿಗೆ ಮೂರೇ ಲೆಖ್ಖ ಮಾಡಲಿಕ್ಕೆ ಬರುತ್ತದೆ.

ಅಮೇರಿಕದ ಯುನೈಟೆಡ್ ಸ್ಟೇಟ್ಸ್ ಶೀಮೆಯಲ್ಲಿ ಒಬ್ಬ ಒಕ್ಕಲಿಗನಿಗೆ ದೊಡ್ಡ ಹೊಲವಿತ್ತು; ಅದರಲ್ಲಿ ಅವನು ಜೋಳ ಬಿತ್ತಿದ್ದನು; ಅದು ಚಿಗಿತು ಬರುವಷ್ಟರಲ್ಲಿ ಕಾಗೆಗಳಿಂದ ಮಹಾ ಕಾಟವಾಯಿತು; ಕಾಗೆಗಳ ತಂಡೇ ತಂಡು ಹೊಲದ ಬಳಿಯಲ್ಲಿರುವ ಒಂದು ಮರದ ಮೇಲೆ ಬಂದು ಕೂತು, ಕಾ ಕಾ ಕಾ ಎಂತ ಒದರಿ, ಗುಂಪು ಕೂಡಿ, ಹೊಲದಲ್ಲಿ ಇಳಿದು, ಸಸಿಗಳ ಮೇಲಿರುವ ಹುಳ ತಿನ್ನುವಾಗ ಸಸಿಗಳನ್ನೇ ಕಿತ್ತು ಬಿಡುವವು; ಇದನ್ನು ನೋಡಿ ನೋಡಿ ಆ ಒಕ್ಕಲಿಗನಿಗೆ ಕಾಗೆಗಳ ಮೇಲೆ ಬಹಳ ಶಿಟ್ಟು ಬಂದು, ಅವುಗಳನ್ನ ಕೊಂದು ನಿಸ್ಸಂತಾನ ಮಾಡ ಬೇಕೆಂದು ನಿಶ್ಚಯ ಮಾಡಿದ; ಮತ್ತು ಕೋವಿ ಹಿಡಿದು ಕೊಂಡು ಕೂತನು. ಆದರೆ ಅವು ಮಹಾ ಶಾಣೆ ಕಾಗೆಗಳು; ಅವನು ಅವುಗಳ ದಾರಿ ನೋಡುತ್ತಾ ಇದ್ದರೆ, ಅವು ಎಂದಿಗೂ ಹತ್ತರ ಬರೋದೇ ಇಲ್ಲ; ಅಲ್ಲಿಂದ ಎದ್ದು ಹೋದರೆ, ಯಥಾ ಪ್ರಕಾರ ತಂಡು ತಂಡಾಗಿ ಬಂದು, ತಮ್ಮ ಕೆಲಸ ತಾವು ಮಾಡುತ್ತಿದ್ದವು. ಆ ಹೊಲದ ಮಧ್ಯ ಭಾಗದಲ್ಲಿ ಒಂದು ಸಣ್ಣ ಗುಡಿಸಿಲಿತ್ತು; ಅಲ್ಲಿ ಆ ಒಕ್ಕಲಿಗ ಅಡಗಿ ಕೊಂಡಿರುವ; ಆದರೆ ಅವನು ಕಾಣದಿದ್ದರೂ, ಅವನು ಅಲ್ಲೇ ಇರುವಾಗ ಅವು ಗದ್ದೆಗೆ ಇಳಿಯುವಲ್ಲವು. ಆಗ ಆ ಒಕ್ಕಲಿಗನಿಗೆ ಒಂದು ಯುಕ್ತಿ ಸೂಚಿಸಿತು; ಈ ಪಕ್ಷಿಗಳಿಗೆ ಲೆಖ್ಖ ಮಾಡಲಿಕ್ಕೆ ಬರುತ್ತದೋ ನೋಡ ಬೇಕು ಎಂಬದಾಗಿ ಅವನು ಮಾರಣೆ ದಿನ ತನ್ನ ಮಗನನ್ನು ಆ ಗುಡಿಸಿಲಿಗೆ ಕರಕೊಂಡು ಬಂದನು. ಅಲ್ಲಿ ಬಹಳ ಹೊತ್ತು ಇದ್ದ ಮೇಲೆ ತನ್ನ ಮಗನನ್ನು ಮನೆಗೆ ಕಳುಹಿಸಿ ಬಿಟ್ಟನು. ಇಬ್ಬರಲ್ಲಿ ಒಬ್ಬ ಹೋದ, ಇನ್ನು ಉಳಿದವ ಒಬ್ಬ, ಇದು ಅವುಗಳಿಗೆ ತಿಳಿಯದೆಂದು ಅವನು ನೆನಸಿದನು. ಆದರೆ ಅವು ಹತ್ತರ ಬರವಲ್ಲವು, ಅವನು ತಾನೇ ಮನೆಗೆ ಹೋಗುವ ವರೆಗೆ ಹೊಲಕ್ಕೆ ಇಳಿಯುವಲ್ಲವು. ಮಾರಣೆ ದಿನ ಅವನು ತನ್ನ ಸಂಗಡ ಇನ್ನಿಬ್ಬರನ್ನು ಗುಡಿಸಿಲಿಗೆ ಕರಕೊಂಡು ಬಂದನು. ಆದರೂ ಮುಂಚಿನಂತೆ; ಅವನು ಒಬ್ಬನನ್ನು ಮನೆಗೆ ಕಳುಹಿಸಿದ, ಆ ಮೇಲೆ ಎರಡನೆಯವನನ್ನು ಕಳುಹಿಸಿದ, ಆದರೆ ಮೂರನೆಯವ ಹೋಗುವ ವರೆಗೆ ಆ ಜಾಣ ಕಾಗೆಗಳು ಕೆಳಗಿಳಿಯೋದೇ ಇಲ್ಲಾ. ಮೂರನೇ ದಿನ ಆ ಒಕ್ಕಲಿಗ ತನ್ನ ಸಂಗಡ ಐವರನ್ನು ಕರಕೊಂಡು ಬಂದನು; ಮತ್ತು ಗುಡಿಸಿಲಿನಲ್ಲಿ ಕೆಲವು ಹೊತ್ತು ಕೂತ ಮೇಲೆ ಒಬ್ಬ ಎದ್ದು ನಡದನು; ಆಗ್ಯೆ ಕಾಗೆಗಳು ಕಾ ಕಾ ಕಾ ಅನ್ನಲಾರಂಭಿಸಿದವು, ಕೆಳಗಿಳಿಯಲಿಲ್ಲಾ. ಆ ಮೇಲೆ ಎರಡನೆಯವ ಎದ್ದು ಹೋದನು; ಮತ್ತೂ ಹಾಗೆಯೇ ಅಂದವು; ಕಡೆಗೆ ಮೂ

ರನೆಯುವ ಹೊರಟು ಹೋದ, ಆಗ್ಯೆ ಆ ಬಡ ಕಾಗೆಗಳಿಗೆ ಮೂರರ ಮೇಲೆ ಲೆಖ್ಖ ಮಾಡಲಿಕ್ಕೆ ಬರುವದಿಲ್ಲವೆಂತ ಕಂಡು ಬಂತು, ಯಾಕಂದರೆ ಮೂರನೆಯುವನು ಎದ್ದು ಹೋದ ಮೇಲೆ ಎಲ್ಲರೂ ಹೋದರು ಎಂದು ನೆನಸಿ, ಅವೆಲ್ಲಾ ಹೊಲಕ್ಕೆ ಇಳಿದವು. ಮತ್ತೇನಾಯಿತು ಎಂತ ಕೇಳುತ್ತೀರಾ? ಗುಡಿಸಿಲಿನಲ್ಲಿದ್ದ ಮೂವರು ಕೋವಿ ಹಾರಿಸಲಾಗಿ ಅಲ್ಲಿ ಇಲ್ಲಿ ಕಾಗೆಗಳು ಬಿದ್ದವು.

ಈ ಸಂಗತಿಯ ಅನುಭವವನ್ನು ಆ ಒಕ್ಕಲಿಗ ಇನ್ನೂ ಅನೇಕ ಸಾರಿ ಮಾಡಿದನು. ಆದರೆ ಎಷ್ಟೂ ಜನರು ಇರಲಿ, ಆ ಕಾಗೆಗಳಿಗೆ ಮೂರರ ಮೇಲೆ ಎಂದಿಗೂ ಲೆಖ್ಖ ಮಾಡಲಿಕ್ಕೆ ಬರಲೇ ಇಲ್ಲಾ; ಮೂವರು ಎದ್ದು ಹೋದ ಮೇಲೆ ಅವು ಕೆಳಗಿಳಿದು ಬರುತ್ತಿದ್ದವು.

ಆತ್ಮದ ಕೂಗೂ ರಕ್ಷಕನ ಉತ್ತರವೂ.

ಆತ್ಮದ ಕೂಗು: "ಯೆಹೋವನೇ, ನನಗೆ ಸಹಾಯಕನಾಗಿರು."—ಕೀರ್ತ. ೩೦, ೧೧.

ರಕ್ಷಕನ ಉತ್ತರ: "ಭಯ ಪಡ ಬೇಡ, ನಾನು ನಿನಗೆ ಸಹಾಯ ಮಾಡುತ್ತೇನೆಂದು ಯೆಹೋವನು ಹೇಳುತ್ತಾನೆ."—ಯೆಶಾ. ೪೧, ೧೪.

ಆ. ಕೂ. "ಯೆಹೋವನೇ, ನನಗೆ ದಯ ಮಾಡು, ಯಾಕಂದರೆ ನನಗೆ ಇಕ್ಕಟ್ಟು ಅದೆ."—ಕೀರ್ತ. ೩೧, ೯.

ರ. ಉ. "ಇಕ್ಕಟ್ಟಿನ ದಿವಸದಲ್ಲಿ ನನ್ನನ್ನು ಕರೆ; ನಾನು ನಿನ್ನನ್ನು ತಪ್ಪಿಸಿ ಬಿಡುವೆನು."—ಕೀರ್ತ. ೫೦, ೧೫.

ಆ. ಕೂ. "ನನ್ನ ಅಕ್ರಮದಿಂದ ನನ್ನನ್ನು ಪೂರ್ಣವಾಗಿ ತೊಳಿ, ನನ್ನ ಪಾಪದಿಂದ ನನ್ನನ್ನು ಶುಚಿ ಮಾಡು".—ಕೀರ್ತ. ೫೧, ೨.

ರ. ಉ. "ಮನಸ್ಸುಂಟು, ಶುದ್ಧವಾಗು."—ಮತ್ತಾ. ೮, ೩.

ಆ. ಕೂ. "ನನ್ನ ತುಟಿಗಳ ಕದವನ್ನು ಕಾಯಿ."—ಕೀರ್ತ. ೧೪೧, ೩.

ರ. ಉ. "ನಾನೇ ನಿನ್ನ ಬಾಯಿಯ ಸಂಗಡ ಇದ್ದು, ನೀನು ಮಾತಾಡ ತಕ್ಕದ್ದನ್ನು ನಿನಗೆ ಬೋಧಿಸುವೆನು".—ಹೊರ. ೪, ೧೨.

ಆ. ಕೂ. "ದೇವರೇ, ಪಾಪಿಯಾದ ನನ್ನನ್ನು ಕರುಣಿಸು!"—ಲೂಕ. ೧೮, ೧೩.

ರ. ಉ. "ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕಕ್ಕೆ ಬಂದನು."—೧ ತಿಮೊ. ೧, ೧೫.

ಆ. ಕೂ. "ನಾನು ರಕ್ಷಿಸಲ್ಪಡುವ ಹಾಗೆ, ಏನು ಮಾಡ ಬೇಕು?" ಅ. ಕ್ರಿ. ೧೬, ೩೦.

ರ. ಉ. "ಕರ್ತನಾದ ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಡು: ಆಗ ನೀನೂ ನಿನ್ನ ಮನೆಯವರೂ ರಕ್ಷಿಸಲ್ಪಡುವಿರಿ."—ಅ. ಕ್ರಿ. ೧೬, ೩೧.

ಆ. ಕೂ. "ನಾನು ತಿಳಿದು ಕೊಂಡು, ಅವನನ್ನು ಕಂಡು ಕೊಂಡರೆ, ಎಷ್ಟೋ ಒಳ್ಳೇದು."—ಯೋಬ. ೨೩, ೩.

ರ. ಉ. "ನನ್ನನ್ನು ಹುಡುಕುವಿರಿ; ಮತ್ತು ಪೂರ್ಣ ಹೃದಯದಿಂದ ನನ್ನನ್ನು ಹುಡುಕುವಾಗ ನನ್ನನ್ನು ಕಂಡುಕೊಳ್ಳುವಿರಿ."—ಯೆರೆ. ೨೯, ೧೩.

ಆ. ಕೂ. "ಇಗೋ, ನೀಚನಾಗಿದ್ಧೇನೆ; ನಿನಗೆ ಏನು ಪ್ರತ್ಯುತ್ತರ ಕೊಡಲಿ?"—ಯೋಬ. ೪೦, ೪.

ರ. ಉ. "ನಿಮ್ಮ ಪಾಪಗಳು ಲಾಕಿ ಬಣ್ಣದ ಹಾಗಿದ್ದರೂ, ಹಿಮದ ಹಾಗೆ ಬಿಳುಪಾಗುವವು."—ಯೆಶಾ. ೧, ೧೮.

ಆ. ಕೂ. "ನನ್ನ ನಿಟ್ಟುಸುರಿನಿಂದ ದಣಿದಿದ್ಧೇನೆ."—ಕೀರ್ತ. ೬, ೬.

ರ. ಉ. "ಯೆಹೋವನ ಮೇಲೆ ನಿನ್ನ ಭಾರವನ್ನು ಹಾಕು. ಅವನು ನಿನಗೆ ಆಸ್ಪದವಾಗಿರುವನು."—ಕೀರ್ತ. ೫೫, ೨೨.

ಆ. ಕೂ. "ನನ್ನನ್ನು ವಿಸರ್ಜಿಸ ಬೇಡ; ನನ್ನನ್ನು ಬಿಟ್ಟು ಬಿಡ ಬೇಡ, ನನ್ನ ರಕ್ಷಣೆಯ ದೇವರೇ."—ಕೀರ್ತ. ೨೭, ೯.

ರ. ಉ. "ನಾನು ನಿನ್ನನ್ನು ಬಿಟ್ಟು ಬಿಡೆನೆಂದೂ, ನಿನ್ನನ್ನು ಕೈ ಬಿಡೆನೆಂದೂ ಅವನು ಹೇಳಿದ್ಧಾನೆ."—ಇಬ್ರಿ. ೧೩, ೫.

ಆ. ಕೂ. "ಇವುಗಳಿಗೆ ಯೋಗ್ಯನು ಯಾರು?"—೨ ಕೊರಿ. ೨, ೧೬.

ರ. ಉ. "ನನ್ನ ಕೃಪೆಯು ನಿನಗೆ ಸಾಕು."—೨ ಕೊರಿ. ೧೨, ೯.

ಆ. ಕೂ. "ದೇವರಿಗೋಸ್ಕರ, ಜೀವವುಳ್ಳ ದೇವರಿಗೋಸ್ಕರ ನನ್ನ ಪ್ರಾಣವು ದಾಹಗೊಳ್ಳುತ್ತದೆ."—ಕೀರ್ತ. ೪೨, ೨.

ರ. ಉ. "ನಿನ್ನ ಕಣ್ಣುಗಳು ಅರಸನನ್ನು, ಅವನ ಸೌಂದರ್ಯದಲ್ಲಿ, ದೃಷ್ಟಿಸುವವು."—ಯೆಶಾ. ೩೩, ೧೭.

ಆ. ಕೂ. "ಉದಯಕ್ಕೆ ಕಾದು ಕೊಳ್ಳುವವರಿಗಿಂತ ನನ್ನ ಪ್ರಾಣವು ಕರ್ತನನ್ನು ನಿರೀಕ್ಷಿಸುತ್ತದೆ."—ಕೀರ್ತ. ೧೩೦, ೬.

ರ. ಉ. "ಯೆಹೋವನನ್ನು ಕಾದು ಕೊಳ್ಳುವವರು ಹೊಸ ಬಲವನ್ನು ತಂದು ಕೊಳ್ಳುವರು."—ಯೆಶಾ. ೪೦, ೩೧.

ಆ. ಕೂ. "ಮರಣದ ಬೆದರಿಕೆಗಳು ನನ್ನ ಮೇಲೆ ಬಿದ್ದವೆ."—ಕೀರ್ತ. ೫೫, ೪.

ರ. ಉ. "ನನ್ನಲ್ಲಿ ವಿಶ್ವಾಸವಿಡುವವನು ಸತ್ತರೂ, ಬದುಕುವನು."—ಯೋಹಾ. ೧೧, ೨೫.

ವಿವಿಧ ವರ್ತಮಾನಗಳು.

೧೮೭೯ನೇ ಇಸವಿ ಜನವರಿ ತಿಂಗಳ ಮೊದಲನೆ ವಾರದಲ್ಲಿ ೫ನೇ ತಾರೀಕಿನಿಂದ ೭ ದಿನ ವರೆಗೆ ದಿನಾಲೂ ನಡಿಯುವ ಪ್ರಾರ್ಥನೆಯ ಮುಖ್ಯ ಪ್ರಸ್ತಾಪಗಳ್ಯಾವವಂದರೆ: — ಸೋಮವಾರ — ಶಾರೀರಿಕ ಆತ್ಮಿಕ ಆಶೀರ್ವಾದಗಳಿಗಾಗಿ ದೇವರಿಗೆ ಸ್ತೋತ್ರ ಮಾಡುವದು. ಮಂಗಳವಾರ— ಶುದ್ಧ ಬೋಧನೆ ಪರಿಶುದ್ಧ ಜೀವನ ನೆಲೆಯಾಗಿರುವಂತೆ ದೇವರ ಸಭೆಗೋಸ್ಕರ ಪ್ರಾರ್ಥನೆ. ಬುಧವಾರ— ಸರ್ವಲೋಕಕ್ಕಾಗಿ, ಪಾಪಿಗಳು ಮಾನಸಾಂತರ ಪಡುವದಕ್ಕಾಗಿ, ಕುಟುಂಬಗಳಿಗಾಗಿ ಪ್ರಾರ್ಥನೆ. ಬೃಹಸ್ಪತಿವಾರ—ಸಂಘುಗಳ ಮೇಲಣ ಮತ್ತು ಜನಾಂಗಗಳ ಮೇಲಣ ದೇವರ ಆಶೀರ್ವಾದಕ್ಕಾಗಿ ಪ್ರಾರ್ಥನೆ. ಶುಕ್ರವಾರ— ಸರ್ವದೇಶಗಳಲ್ಲಿರುವ ಸರ್ವಮಿಶ್ಯನುಗಳಿಗಾಗಿ ಪ್ರಾರ್ಥನೆ. ಶನಿವಾರ—ದೇವರ ಸಭೆಯಲ್ಲಿರುವ ಬೋಧಕರೂ ಉಪಾಧ್ಯಾಯರೂ ಹಿರಿಯರೂ ಇವರಿಗೋಸ್ಕರ ಪ್ರಾರ್ಥನೆ.

ವರುಷಂಪ್ರತಿಯಲ್ಲು ಮಂಗಳೂರಿನಲ್ಲಿ ಆಗುವ ಮಿಶ್ಯನ ಹಬ್ಬವು ಈ ವರುಷ ದಶಂಬರ ತಿಂಗಳ ತಾರೀಕು ೩ರಲ್ಲು ಆಗುತ್ತದೆ; ಅಂದು ಕೆಲ ತಿಂ

ಗಳ ಹಿಂದೆ ಕ್ರೈಸ್ತಧರ್ಮ ಸ್ವೀಕಾರ ಮಾಡಿದ ಮಂಗಳೂರಿನ ಒಬ್ಬ ಸಾರಸ್ವತ ಯೌವನಸ್ಥನಿಗೆ ಸ್ನಾನವೂ, ಕಾರವಾರದ ಕಂಸಿಕಯ್ಯನವರಿಗೆ ಉಪಪ್ರಸಂಗಿ ಉದ್ಯೋಗಕ್ಕೆ ಆಶೀರ್ವಾದವೂ ಆಗುವದು.

ಇದೇ ನವಂಬರ ತಿಂಗಳಲ್ಲಿ ಉಡ್ಪಿಗೆ ಸಮೀಪವಿರುವ ಶಿರುವ ಎಂಬಲ್ಲಿ ಉಪದೇಶಿ ಚಾರ್ಲ್ಸ್ ಅಯ್ಯನವರಿಗೆ ಉಪಪ್ರಸಂಗಿಯಾಗಿ ನೇಮಿಸಲಾಯಿತು. ತಲಷೇರಿಯಲ್ಲಿ ಉಪಾಧ್ಯಾಯರಾಗಿದ್ದ ಶ್ಮೋಲ್ಕ ಧೊರೆಯನ್ನೂ ಬೋಧಕೋದ್ಯೋಗಕ್ಕೆ ನೇಮಿಸಲಾಯಿತು.

ಸಪ್ತಂಬರ ತಾರೀಕು ೨ಲ್ಲು ಗದಗಬೆಟ್ಟಿಗೇರಿಯ ಸಮೀಪವಿರುವ ಶಾಗೋಟಿಯಲ್ಲಿ ಘುನ. ಜಿಗ್ಲರ್ ಅಯ್ಯನವರು ಇಪ್ಪತ್ತೆರಡು ಮಂದಿಗೆ ಸ್ನಾನ ಕೊಟ್ಟರು. ಅಕ್ಟೋಬರ ತಾರೀಕು ೬ಲ್ಲು ಅದೇ ಗದಗಬೆಟ್ಟಿಗೇರಿಯಲ್ಲಿ ಘುನ. ಹೀಬ್ನರ್ ಅಯ್ಯನವರು ನಾಲ್ವತ್ತೊಂದು ಮಂದಿಗೂ ಸ್ನಾನ ಕೊಟ್ಟರು.

ಕೆಲವು ತಿಂಗಳ ಹಿಂದೆ ತೆಲುಗು ಜನರೊಳಗೆ ಸುವಾರ್ತೆಯ ಕೆಲಸ ನಡಿಸುವ ಒಬ್ಬರು ಮಿಶ್ಯನೆರಿಯವರು ಇನ್ನು ಆರು ತಿಂಗಳ ಒಳಗೆ ಹದಿನೈದು ಅಥವಾ ಇಪ್ಪತ್ತು ಸಾವಿರ ಜನರು ಕ್ರೈಸ್ತ ಸಭೆಗೆ ಶೇರುವರೆಂಬದಾಗಿ ಇದೇ ಕಳೆದ ಜೂನ್ ತಿಂಗಳಲ್ಲಿ ತಮ್ಮ ಮಿಶ್ಯನಿನ ಹಿರೇ ಸ್ಥಾನಕ್ಕೆ ಬರದಿದ್ದರು. ಒಂಗೋಲದಲ್ಲಿ ಮೂರು ವಾರದೊಳಗೆ ಐದು ಸಾವಿರ ಜನರು ಕ್ರೈಸ್ತರಾದರು. ಅದ್ಭುತದಂತೆ ಪ್ರಾರಂಭವಾದ ಈ ಕಾರ್ಯ ಮುಂದೆ ಸಾಗುತ್ತಾ ಅದೆ. ಕ್ರೈಸ್ತರಾದವರಿಗೆ ದುಷ್ಕಾಲದ ಸಹಾಯಾರ್ಥಕ ರೊಖ್ಖದಿಂದ ಒಂದು ಪೈಯೂ ಶಿಕ್ಕಿದ್ದಿಲ್ಲ; ಮತ್ತು ಯಾರೂ ಹಣದ ಸಹಾಯ ಬೇಕೆಂಬ ಅಪೇಕ್ಷೆ ಮಾಡುವದೂ ಇಲ್ಲವಂತೆ.

ತಿನ್ನೆವೆಲ್ಲಿಯ ಜಿಲ್ಲೆಯಲ್ಲಿಯೂ ಎಂಟು ಸಾವಿರ ಜನರು ತಮಗೆ ಕ್ರೈಸ್ತಧರ್ಮ ಬೋಧನೆ ಮಾಡ ಬೇಕೆಂದು ಚರ್ಚ ಮಿಶ್ಯನಿನ ಬೋಧಕರನ್ನು ಬೇಡಿ ಕೊಂಡಿದ್ಧಾರೆ.

ಕಳೆದ ವರುಷ ಜಾಪಾನ ದೇಶದಲ್ಲಿ ಸಭೆಗಳ ಸಂಖ್ಯೆಯೂ ಕ್ರೈಸ್ತರಾದವರ ಸಂಖ್ಯೆಯೂ ಇಮ್ಮಡಿಯಾಗಿ ವರ್ಧನೆಯಾಗುವದಾಯಿತು.

ಕುಚ್‌ಬೆಹಾರ್ ಸಂಸ್ಥಾನದಲ್ಲಿ ಇತ್ತಲಾಗೆ ಒಂದು ಆನೆಯನ್ನು ಹುಚ್ಚು ನಾಯಿ ಕಚ್ಚಿತು; ಅದರಿಂದ ಕೆಲವು ದಿವಸಗಳಲ್ಲಿ ಅದರ ವಿಷ ತಾಗಿ, ಮನುಷ್ಯನಿಗೆ ಹ್ಯಾಗೆ ನಾನಾ ವಿಕಾರವಾಗುವದೋ ಹಾಗೆಯೇ ಆ ಆನೆಗೂ ಆಗಿ ಅದು ಸತ್ತು ಹೋಯಿತು.

ಇದೇ ನವಂಬರ್ ತಿಂಗಳಿನಲ್ಲಿ ವಿಶಾಖಪಟ್ಣದಲ್ಲಿ ಭಯಂಕರವಾದ ತುಫಾನು ಉಂಟಾಗಿ ಧಾನ್ಯ ತುಂಬಿದ ಎರಡು ಹಡಗಗಳು ಒಡದು ಹೋದವು. ಸಮುದ್ರದಲ್ಲಿ ಮಹಾ ಹಲ್ಲಕಲ್ಲೋಲವಿತ್ತು.

ಗಿಡಗಳಿಂದುಂಟಾಗುವ ಪ್ರಯೋಜನ ದೊಡ್ಡದಾಗಿದೆಂದು ಒಂದು ವೈದ್ಯಸಂಬಂಧ ಪತ್ರದಲ್ಲಿ ಕಾಣುತ್ತದೆ. ಗಿಡಗಳು ಪ್ರಾಣನಾಶಕವಾಯುವನ್ನು ಹೀರಿ ಕೊಂಡು, ಪ್ರಾಣರಕ್ಷಕ ವಾಯುವನ್ನು ಹೊರಗೆ ಬಿಡುತ್ತವೆ. ಅವುಗಳ ದೆಶೆಯಿಂದ ಬುಡದ ಕೆಳಗಣ ನೆಲ ಸ್ವಚ್ಛವಾಗುತ್ತದೆ. ಶೆಖೆ ಕಾಲದಲ್ಲಿ ತಂಪೂ ಛಳಿಕಾಲದಲ್ಲಿ ಬಿಸಿಯೂ ಅವುಗಳಿಂದ ಬರುವ ಕಾರಣ ಪಟ್ಣಗಳ ದೊಡ್ಡ ದೊಡ್ಡ ಬೀದಿಗಳ ಪಾರ್ಶ್ವಗಳಲ್ಲಿ ಮರಗಳ ಸಾಲು ಇದ್ದರೆ, ರೋಗಗಳು ಕಡಿಮೆಯಾದಾವೆಂಬದಕ್ಕೆ ಸಂದೇಹವಿಲ್ಲ.

ಈ ವರುಷದಲ್ಲಿ ಬೆಳೆ ಹಿಂದುಸ್ಥಾನದ ಸರ್ವ ಶೀಮೆಗಳಲ್ಲಿ ತಕ್ಕ ಮಟ್ಟಿಗೆ ಚನ್ನಾಗಿದೆ. ಕೆಲವು ಊರುಗಳಲ್ಲಿ ಮಿಡಿತೆಗಳಿಂದ ನಷ್ಟ ಬಂತಂತೆ; ಮಳೆ ಅಂತೂ ಪುಷ್ಕಳವಾಗಿ ಬಂತು. ಮಧ್ಯಪ್ರದೇಶದಲ್ಲಿ ರಬಿ ಬೆಳೆಗೆ ಮಳೆ ಇನ್ನೂ ಬೇಕಂತೆ. ಬಹಳ ಊರುಗಳಲ್ಲಿ ಜ್ವರವು ಇನ್ನೂ ಇರುತ್ತದೆ; ವಾಂತಿಭೇದಿ ಉತಾರಾಗುತ್ತಾ ಬರುತ್ತದೆ.

ಬರ್ಮ ದೇಶದ ಅರಸನು ಮೃತಪಟ್ಟನು. ಅವನ ಪಟ್ಟಕ್ಕೆ ಬಂದ ಹೊಸ ಅರಸನು ಅವನ ಮರಣ ಪ್ರಸಿದ್ಧಿ ಪಡಿಸಿದ್ದು ಹ್ಯಾಗಂದರೆ: “ಭೂ

ಮಿ ಉದಕದ ಸ್ವಾಮಿಯಾದವನು—ಸದ್ದನ ಎಂಬ ನಾಗೇಂದ್ರನ ಸ್ವಾಮಿಯಾದವನು, ಅನೇಕ ಬಿಳೇ ಆನೆಗಳ ಸ್ವಾಮಿಯು, ಚಕ್ರಾಯುಧದ ಯಜಮಾನನು, ಇಹಜೀವದ ಸ್ವಾಮಿಯು, ರಾಜಪಿತನಾಗಿ ಮಹಾ ಪ್ರತಾಪಶಾಲಿಯಾಗಿದ್ದ ನೀತಿಯುಳ್ಳ ಅರಸನು, ಮನುಷ್ಯರು ವಾಸಿಸುವ ಈ ಲೋಕಕ್ಕೆ ಬೇಸತ್ತು ನತರ ಆಸನಗಳಿಗೆ ಏರಿ ಹೋದವರಾದರು. ಅರಸನೂ ರಾಣಿಯೂ ರಾಜಕುಮಾರರೂ ಮಂತ್ರಿಗಳೂ ಶ್ರೀಮಂತರೂ ಸಾನಿಗಳೂ ಪತ್ನಿಗಳೂ ಏಳು ದಿವಸಗಳ ವರೆಗೆ ಬಿಳೇ ವಸ್ತ್ರ ಧರಿಸಿ ಕೊಳ್ಳಲಿ!" ವಿಲಾಯತಿಯವರು ದುಃಖ ತೋರಿಸುವದಕ್ಕೆ ಕಪ್ಪು ದುಸ್ತು ಹಾಕಿಕೊಳ್ಳುವಂತೆ ಬರ್ಮದವರು ಬಿಳೇ ದುಸ್ತು ಹಾಕಿ ಕೊಳ್ಳುತ್ತಾರಂತೆ.

ಹಿಂದುಸ್ಥಾನದ ದುಷ್ಕಾಲದಿಂದ ಬರ್ಮದೇಶಕ್ಕೆ ಐಶ್ವರ್ಯ ಹೆಚ್ಚಿತಂತೆ; ಆ ದೇಶದವರು ಹಿಂದುಸ್ಥಾನಕ್ಕೆ ಸಾಗಿಸಿದ ಧಾನ್ಯದವಸ ಕಳದ ವರ್ಷಗಳಿಗಿಂತ ಹೆಚ್ಚಲ್ಲದಿದ್ದಾಗ್ಯೂ, ಅದರ ಮೌಲ್ಯ ನೂರಕ್ಕೆ ೪೫ರ ಮೇರೆಗೆ ಹೆಚ್ಚಾಗಿ, ದೇಶದ ಐಶ್ವರ್ಯಕ್ಕೆ ಎರಡು ಕೋಟಿ ರೂಪಾಯಿ ಕೂಡಿದ ಹಾಗಾಯಿತು. ಹಿಂದುಸ್ಥಾನದ ರೈತನ ಆಭರಣಗಳೂ ಮನೆಯ ಸಾಮಾನೂ ಬರ್ಮದ ರೈತನ ಮತ್ತು ಸಾವಕಾರನ ಪೆಟ್ಟಿಗೆಯೊಳಗೆ ಬೀಳುವದಕ್ಕೆ ಹೋದವು. ಆದಾಗ್ಯೂ ಒಂದಾನೊಂದು ಕಾಲ ತಕ್ಕಡಿ ತಿರುಗಲಿಕ್ಕೂ ಸಾಕು.

ಚೀನ ದೇಶದ ಉತ್ತರ ಭಾಗದಲ್ಲಿ ಉಂಟಾಗಿದ್ದ ಮಹಾ ದುಷ್ಕಾಲದಿಂದ ಹೆಚ್ಚು ಕಡಿಮೆ ೭೦ ೦೦,೦೦೦ ಜನರು ಮೃತವಾದರಂತೆ.

ಚೀನಿ ಕೊಡೆಗಳನ್ನು ಹ್ಯಾಗೆ ಮಾಡುತ್ತಾರೆ? ಚೀನಿ ಜನರು ದನಗಳನ್ನು ಮೇಯಿಸುವದಕ್ಕೆ ಕಾಡಿಗೆ ಹೋಗುವಾಗ್ಯೆ ಚೂರಿ ತಕ್ಕೊಂಡು ಹೋಗುತ್ತಾರೆ; ದನಗಳು ಮೇಯುತ್ತಿರುವಾಗ ಒಂದು ಕಡೆಯಲ್ಲಿ ಅವರ ಕೊಡೆ ಮಾಡುವ ಕೆಲಸ ನಡಿಯುತ್ತಿರುತ್ತದೆ. ಚೀನ ದೇಶದಲ್ಲಿ ಬಿದುರಿನ ಕಾಡುಗಳು ಬಹಳ ಅವೆ. ಈ ಬಿದುರುಗಳನ್ನು ಕೊಯಿದು, ಬೇಕಾಗುವಷ್ಟು ಸಪೂರ ಕಡ್ಡಿಗಳಾಗಿ ಮಾಡಿ, ಆಗಲೇ ಅವು ಇನ್ನೂ ಹಶಿದಾಗಿರುವಾಗ ಅವುಗಳಿಗೆ ತೂತು ಮಾಡುತ್ತಾರೆ. ಹೀಗೆ ಕಡ್ಡಿಗಳ ಒಂದು ಹೊರೆಯಾಗುವ ವರೆಗೆ ಆ ಸಿದ್ಧ ಮಾಡಿದ ಕಡ್ಡಿಗಳು ಕಾಡಿನಲ್ಲೇ ಒಂದು ಕಡೆಯಲ್ಲಿ ಕೂಡಿಸಿಟ್ಟು, ಆ ಮೇಲೆ ಮನೆಗೆ ತರುತ್ತಾರೆ. ಆ ಕಡ್ಡಿಗಳ ಸಂಗಡಲೇ ಕೊಡೆಗೆ ಬೇಕಾದ ಕೋಲು, ಕಡ್ಡಿಗಳು ಕುಂದ್ರಿಸಲಿಕ್ಕೆ ಬೇಕಾದ ಗೂಡಿನಂತಿರುವಂಥಾದ್ದು ಸಹಾ ತರುತ್ತಾರೆ. ಇಷ್ಟು ಸಾಮಾನು ಮನೆಗೆ ಬಂದು ಬಿದ್ದಕೂಡಲೇ ಅವರ ಸ್ತ್ರೀಯರು ಕಡ್ಡಿಗಳ ಪೆಜ್ಜಗಳಲ್ಲಿ ರೇಶಿಮೆ ನೂಲು ಸುರಿದು, ಕೊಡೆ ತಯಾರು ಮಾಡಿ, ಅದರ ಮೇಲೆ ಕಾಗದ ಹಚ್ಚುತ್ತಾರೆ.

ಜಾವಾ ದ್ವೀಪದಲ್ಲಿ ಕಲ್ಲಿದ್ದಲಿ ಶಿಕ್ಕುತ್ತದಂತೆ. ಆ ಕಡೆಯ ದ್ವೀಪಾಂತರಗಳ ನೆಲದೊಳಗೆ ಕಲ್ಲಿದ್ದಲಿ ಯಥೇಷ್ಟ ಉಂಟೆಂದು ವಿದ್ವಾಂಸರು ಹೇಳುತ್ತಾರೆ.

ಅಮೇರಿಕದ ಯುನೈಟೆಡ್‌ಸ್ಟೇಟ್ಸ್ ಶೀಮೆಯ ಹತ್ತಿ ಬೆಳೆ ಅಗೊಸ್ತು ತಿಂಗಳಿಗೆ ಮುಗಿಯುವ ಸಂವತ್ಸರಕ್ಕೆ ೪೮,೧೧,೨೬೫ ಕಟ್ಟುಗಳು ಆದವು. ಒಂದೊಂದು ಕಟ್ಟು ೪೦೦ ರಾತ್ಲು ಭಾರವಾದದ್ದು; ಕಳದ ವರ್ಷಕ್ಕಿಂತ ಈ ವರ್ಷದ ಬೆಳೆ ಬಹಳ ಹೆಚ್ಚು. ೧೮೬೦ನೇ ಇಸವಿಯಲ್ಲಿ ೪೮,೭೩,೭೭೦ ಕಟ್ಟುಗಳು ಆಗಿದ್ದವು; ಅಂದಿನಿಂದ ಈ ವರೆಗೆ ಇಂಥಾ ಬೆಳೆಯಾಗಲಿಲ್ಲ. ಮುಂದಿನ ವರ್ಷದ ಬೆಳೆಯೂ ಬಹು ಚನ್ನಾಗಿದೆ. ಇಷ್ಟು ಅರಳೆಯಲ್ಲಿ ಹೆಚ್ಚು ಕಡಿಮೆ ನಾಲ್ವತ್ತೆರಡುವರೆ ಲಕ್ಷ ಕಟ್ಟುಗಳನ್ನು ಅವರು ಪರದೇಶಗಳಿಗೆ ಕಳುಹಿಸಿದರು. ಹಿಂದುಸ್ಥಾನದಲ್ಲಿ ಹತ್ತಿ ಬೆಳಿಸುವವರು ಇದನ್ನು ಲಕ್ಷ್ಯಕ್ಕೆ ತರ ಬೇಕು; ಅರಳೆಯ ಧಾರಣೆ ಬಹುಶಾ ತಗ್ಗುವದು, ಆದ್ದರಿಂದ ಧಾನ್ಯಕಾಳು ಬೆಳಿಸುವದು ಅರಳೆ ಬೆಳಿಸುವದಕ್ಕಿಂತಲೂ ಹೆಚ್ಚು ಆದಾಯಕರವಾಗಿರುವದು.

ಅಮೇರಿಕದಲ್ಲಿ ಬ್ರುಕ್‌ಲಿನ್ ಪಟ್ಟಣದಲ್ಲಿ ಇಬ್ಬರು ಕನ್ನಗಳ್ಳರು ಒಂದು ಮನೆಯೊಳಗೆ ಹೊಕ್ಕು,

ಯಾವತ್ತು ಅಮೂಲ್ಯ ಜಿಂದಗಿ ಒಂದು ಕೋಣೆಯಲ್ಲಿ ಕೂಡಿಸಿ, ಹೊರಗೆ ವ್ಯೈಯುವ ಮೊದಲು ಅದೇ ಕೋಣೆಯಲ್ಲಿದ್ದ ಸಾರಾಯಿ ಕಂಡು, ಸ್ವಲ್ಪ ಕುಡಿದು ಹೊರಗೆ ಹೋಗುವ ಎಂದು ಕುಡಿದು ಬಿಟ್ಟರು. ಅದು ಚನ್ನಾಗಿ ತಲೆಗೇರಲು, ಅಲ್ಲೇ ಮಲಗಿ ಕೊಂಡಾಗ ಮೂರಣೆ ದಿನ ಹತ್ತು ಘಂಟೆಗೆ ಮನೆಯಜಮಾನನು ಅವರನ್ನು ನೋಡಿ, ಹಿಡಿಸಿದನು. ಸಾರಾಯಿಯಿಂದ ಉಂಟಾದ ಒಳ್ಳೇ ಫಲ ಇದೊಂದೇ.

ಇಂಗ್ಲಾಂಡಿನಲ್ಲಿ ಸರಕಾರಿ ಶಾಲೆಗಳ ಇನ್‌ಸ್ಪೆಕ್ಟರುಗಳಿಗೆ ಅವರ ಮೇಲುದ್ಯೋಗಸ್ಥರು ವಿಶೇಷವಾದ ಅಪ್ಪಣೆ ಕೊಟ್ಟಿದ್ದಾರೆ. ಅದೇನಂದರೆ: ಹುಡುಗಿಯರು ಹೊಲಿಗೆ ಕಸೂದಿ ಕೆಲಸ ಕಲಿಯಬೇಕಾಗುವದರಿಂದ ಅವರನ್ನು ಗಣಿತದಲ್ಲಿ ಪರೀಕ್ಷೆ ಮಾಡುವಾಗ್ಯೆ ಹುಡುಗರಿಗೆ ಮಾಡುವ ದರ್ಜೆಯ ಮೇರೆಗೆ ಪರೀಕ್ಷೆ ಮಾಡ ಬಾರದು; ಉಪಾಧ್ಯಾಯರಲ್ಲಿ ತಪ್ಪು ಹಿಡಿಯುವದೂ ಅವರನ್ನು ಗದರಿಸುವದೂ ಇನ್‌ಸ್ಪೆಕ್ಟರರ ಕೆಲಸವಲ್ಲಾ; ಮತ್ತು ಇನ್‌ಸ್ಪೆಕ್ಟರರು ಪರೀಕ್ಷೆ ಮಾಡುವ ವಿಧದಿಂದ ಹುಡುಗರು ಎಷ್ಟು ಕಲಿತಿದ್ದಾರೆಂತ ನೋಡ ಬೇಕಲ್ಲದೆ, ಅವರಿಗೆ ಏನೇನು ಬರುವದಿಲ್ಲವೆಂದು ನೋಡ ಬಾರದು. ಮತ್ತು ಅವರು ಕಠಿಣವಾಗಿ, ಅಸ್ಪಷ್ಟವಾಗಿ, ತಾಳ್ಮೆ ಇಲ್ಲದೆ ಪ್ರಶ್ನೆಗಳನ್ನು ಹುಡುಗರಿಗೆ ಹಾಕಿ ಅವರನ್ನು ಘಾಬರಿ ಮಾಡ ಬಾರದು.—ಮೇಲಿನ ಅಪ್ಪಣೆಯಲ್ಲಿ ಕಾಣಿಸಿದ ಸೂಚನೆಗಳು ಬಹು ಉಪಯುಕ್ತವಾದವುಗಳೆಂಬದಕ್ಕೆ ಸಂದೇಹವಿಲ್ಲಾ.

ಜಾಪಾನ ದೇಶದಿಂದ ಒಂದು ಕಾಡನಾಯಿ ಲಂಡನಿಗೆ ತರಿಸಿದ್ದಾರೆ; ನೋಡಿದರೆ, ಅದು ತೋಳವೂ ಅಲ್ಲಾ, ನಾಯಿಯೂ ಅಲ್ಲ; ಹೀಗಿರುವದರಿಂದ ಅದು ಯಾವ ಜಾತಿಯದಾಗಿದ್ದೀತೆಂದು ವಿದ್ವಾಂಸರಿಗೂ ತಿಳಿಯುವದಿಲ್ಲವಂತೆ.

ವೇಲ್ಸ ದೇಶದ ದಕ್ಷಿಣ ಭಾಗದಲ್ಲಿ ಕಲ್ಲಿದ್ದಲಿ ಅಗಿದು ತೆಗೆಯುವ ಒಂದು ಖನಿಯಲ್ಲಿಯ ವಾಯುವಿಗೆ ಬೆಂಕಿ ಹಿಡಿದು, ಮುನ್ನೂರು ಮಂದಿ ಗಂಡಸರೂ ಹುಡುಗರೂ ನಾಶನವಾದರು.

ಇಂಗ್ಲಾಂಡದಲ್ಲಿ ನಾನಾ ಉದ್ದಿಮೆಗಾರರು ಸರಕಾರಕ್ಕೆ ಕೊಡುವ ಕಂದಾಯದ ಪ್ರತಿ ಒಂದು ಪೌಂಡಿನಲ್ಲಿ ೧೩ ಶಿಲ್ಲಿಂಗು ೫ ಪೆನ್ಸ್ ಮದ್ಯದಿಂದಲೂ ಹೊಗೆಸೊಪ್ಪಿನಿಂದಲೂ ಬರುತ್ತದಂತೆ. ಮನುಷ್ಯರು ದುರ್ವ್ಯಸನಾದಿಗಳಿಗೆ ಮಾಡುವ ವೆಚ್ಚವು ಅನ್ನವಸ್ತ್ರಾದಿಗಳಿಗೂ ವಿದ್ಯಾಭ್ಯಾಸಕ್ಕೂ ಮಾಡುವ ಖರ್ಚಿಗಿಂತ ಬಹಳ ಹೆಚ್ಚು ಆಗುತ್ತದೆ. ಆದರೆ ಫಲವೇನು? ಖರ್ಚು ಮಾಡಿ ಕ್ಷಣಿಕ ತೃಪ್ತಿಯಾದ ಮೇಲೆ ಮನೋವ್ಯಥೆ, ಸುಖವಿಲ್ಲಾ ನಿರಾಶೆ;—ಇದೇ ಫಲ.

ಸಕ್ಸನಿ ದೇಶದ ದ್ರೆಸ್ಡೆನ್ ಪಟ್ಟಣದಲ್ಲಿ ಒಬ್ಬರು ಪ್ರಯಾಣಸ್ಥರಿಗಾಗಿ ವಿಚಿತ್ರವಾದದ್ದೊಂದು ಊರುಕೋಲು ಮಾಡಿದ್ದಾರೆ. ಕೋಲಿನ ಹಿಡಿಯಲ್ಲಿ ಒಂದು ದಿಕ್ಚಕ್ರ, ಒಂದು ಭೂತಕನ್ನಡಿ, ಒಂದು ಶಿಳ್ಳು; ಅದರ ಕೆಳಗೆ ಒಂದು ಕಡೆಯಲ್ಲಿ ವಾಯುಮಾಪಕಯಂತ್ರ; ಇನ್ನೊಂದು ಕಡೆಯಲ್ಲಿ ಉಸುಬಿನ ಘಡಿಯಾರು, ಒಂದು ಅಳಿಯುವ ಗಜ; ತುದಿಯ ಸಮೀಪದಲ್ಲಿ ಒಂದು ಕತ್ತಿ; ತುದಿಯಲ್ಲಿ ಒಂದು ತಿರುಗಣೆ, ಅದರಲ್ಲಿ ಸಣ್ಣ ಗುದ್ದಲಿಯಾಗಲಿ ಸುತ್ತಿಗೆಯಾಗಲಿ ಕೊಡ್ಲಿಯಾಗಲಿ ಇಡ ಬಹುದು. ಕೋಲಿನಲ್ಲಿಯೇ ಇರುವ ಪೊಳ್ಳಿನಲ್ಲಿ ವಿಚಿತ್ರವಾದ ಹುಳಹುಪ್ಪಡಿಗಳನ್ನು ಕೊಲ್ಲುವ ಔಷಧವಿರುವ ಒಂದು ಬಾಟ್ಲಿಯೂ ಅದೆ.

ರೋಮಪಟ್ಟಣದಲ್ಲಿ ಆರು ಭಾಷೆಗಳಿಂದ ಒಂದು ಕಥೋಲಿಕ ವರ್ತಮಾನಪತ್ರ ಛಾಪೆಯಾಗುವದಕ್ಕೆ ಪ್ರಾರಂಭವಾಗುತ್ತದಂತೆ.

ಕುಪ್ರ ದ್ವೀಪವು ಕ್ರೈಸ್ತ ಧೊರೆ ಇದ್ದಂಥಾ ಮೊದಲನೇ ದೇಶವಾಗಿದೆ. ಪೌಲನಿಂದ ಸುವಾರ್ತೆ ಕೇಳಿ ವಿಶ್ವಾಸಿಸಿದ ಸೆರ್ಗ್ಯಪೌಲನು ಕುಪ್ರದ ಧೊರೆಯಾಗಿದ್ದನು. ಈ ದ್ವೀಪದಲ್ಲೇ ಸೌಲನ ಹೆಸರು ಪೌಲನೆಂಬದಾಗಿ ಆಯಿತು. ಬರ್ನಬನು ಹುಟ್ಟಿದ ಊರು ಕುಪ್ರ; ಮೊದಲನೇ ಕ್ರೈಸ್ತರ ಸಹಾಯಾರ್ಥವಾಗಿ ಅವನು ಮಾರಿದ ಭೂಮಿ ಕುಪ್ರದಲ್ಲಿತ್ತು; ಆ ಕಾಲದಲ್ಲಿ ಕುಪ್ರ ಜನಭರಿತ

ವಾದ ವಿಶೇಷ ಶೀಮೆಯಾಗಿತ್ತು. ಅದರಲ್ಲಿ ಬಹುಶೇಕ ಯೆಹೂದ್ಯರು ವಾಸವಾಗಿದ್ದರು; ಮತ್ತು ಪೂರ್ವದವರೂ ಪಶ್ಚಿಮದವರೂ ಕೂಡಿ ಭೇಟಿಯಾಗುವದಕ್ಕೆ ಅದರ ಹೊರ್ತು ಬೇರೆ ತಕ್ಕ ಸ್ಥಳ ಯಾವದು? ಇಲ್ಲಿ ಕ್ರಿಸ್ತ ಶಕದ ಆರಂಭದಲ್ಲಿ ಯೆಹೂದ್ಯರ ಕೆಲವು ಸಭೆಮನೆಗಳಿದ್ದವು. ಸಣಬು, ದ್ರಾಕ್ಷೆರಸ, ನಾನಾ ಫಲಗಳು ತಾಂಬ್ರ ಈ ಸರಕುಗಳ ವ್ಯಾಪಾರದ ಸಂಬಂಧವಾಗಿ ಯೆಹೂದ್ಯರು ಅಲ್ಲಿಗೆ ಬಂದು ವಸ್ತಿಯಾಗಿರುತ್ತಿದ್ದರು.

ರುಸ್ಯ ಸರಕಾರದವರು ತಮ್ಮ ಸೈನ್ಯ ಹೆಚ್ಚಿಸುವ ಕೆಲಸದಲ್ಲೇ ಇದ್ದಾರೆ; ಹೊಸ ದಳಗಳನ್ನು ಏರ್ಪಡಿಸುವದು ಮಾತ್ರವಲ್ಲ, ಪ್ರತಿ ಒಂದು ದಳದಲ್ಲಿ ಶಿಪಾಯಿಗಳ ಸಂಖ್ಯೆ ಹೆಚ್ಚಿಸುತ್ತಿದ್ದಾರೆ. ಈ ಯುಕ್ತಿಯಿಂದ ಅವರ ಸೈನ್ಯ ಇಪ್ಪತ್ತು ಲಕ್ಷವಾದೀತಂತೆ.

ರುಸ್ಯದ ಭಾಗಕ್ಕೆ ಶೇರಿದ ಕಸ್ಪಿಯ ಸಮುದ್ರತೀರದಲ್ಲಿ ಎಣ್ಣೆಯ ಭಾವಿಗಳು ದೊರಕಿಯುವಂತೆ.

ಈ ಪೃಥ್ವೀ ಮೇಲಣ ಜನಸಂಖ್ಯೆ ಎಷ್ಟು ಅಂದರೆ: ಯೂರೋಪಿನಲ್ಲಿ ೩೧ ೨೬,೯೮,೪೮೦; ಆಸ್ಯದಲ್ಲಿ ೮೩,೧೦,೦೦,೦೦೦; ಅಫ್ರಿಕದಲ್ಲಿ ೨೦,೫೨,೧೯,೫೦೦; ಔಸ್ತ್ರೇಲಿಯ ಮತ್ತು ಪೊಲಿನೇಶಿಯದಲ್ಲಿ ೪೪,೧೧,೩೦೦; ಅಮೇರಿಕದಲ್ಲಿ ೮,೬೧,೧೬,೦೦೦; ಅಂತು ೧,೪೩,೯೧,೪೫,೩೦೦. ಈ ಲೆಖ್ಖ ಭರವಸಯೋಗ್ಯವಾಗಿದೆಂದು ಹೇಳುತ್ತಾರೆ. ಈ ಲೆಖ್ಖ ನೋಡಿದರೆ, ಈ ವರೆಗೆ ಸಾಧಾರಣವಾಗಿ ನೆನಸುತ್ತಿದ್ದ ಸಂಖ್ಯೆಗಿಂತ ಒಂದುವರೆ ಕೋಟಿ ಹೆಚ್ಚು ಜನಪದ ವರ್ಧನೆಯಾಯಿತೆಂದು ಕಾಣುತ್ತದೆ.

ಈ ಸಮಸ್ತ ಪೃಥ್ವಿಯ ಮೇಲೆ ಯಾವದಾದರೂ ಒಂದೇ ಭಾಷೆ ಇರ ಬೇಕು, ಅಂಥಾ ಭಾಷೆ ಯಾವ ರೀತಿಯಿಂದ ಮಾಡುವದಕ್ಕಾದೀತು ಎಂತ ಈ ವಿಷಯದಲ್ಲಿ ಪರೀಸ ಪಟ್ಣದಲ್ಲಿ ವಿಚಾರ ನಡಿಯುತ್ತಿತ್ತು; ಆ ವಿಚಾರ ಮಾಡುವವರು ನೂತನವಾದದ್ದೊಂದು ಭಾಷೆ ಸಿದ್ಧ ಮಾಡಿ ಪೃಥ್ವಿಯ ಮೇಲೆ ರೂಢಿ ಮಾಡಿಸ ಬೇಕೆಂಬ ಅಭಿಪ್ರಾಯದಲ್ಲಿದ್ದಾರೆ. ಈ ಹೊಸ ಭಾಷೆಯಲ್ಲಿ ವಿದ್ಯಾಭ್ಯಾಸ ಮುಂತಾದ್ದು ಮಾಡ ಬೇಕೆಂದಲ್ಲ, ಅದಕ್ಕೆ ಆಯಾ ದೇಶಗಳವರು ತಮ್ಮ ತಮ್ಮ ಪೂರ್ವಭಾಷೆಯನ್ನೇ ಪ್ರಯೋಗಿಸ ಬೇಕು. ಆದರೆ ಸಾಧಾರಣ ಕಾರ್ಯಗಳಲ್ಲಿ ಯಾವ ದೇಶಕ್ಕೆ ಹೋದರೂ ಮಾತಾಡುವ ಹಾಗೆ ಆಗುವದಕ್ಕೆ ಈ ಹೊಸ ಭಾಷೆ ಎಲ್ಲರೂ ಕಲಿಯ ಬೇಕು ಎಂಬದು ಅವರ ಅಭಿಪ್ರಾಯವಾಗಿದೆ. ಭೂಮಿಯಲ್ಲಿ ಹೆಚ್ಚು ಕಡಿಮೆ ೧,೯೨೫ ವಿಧದ ಭಾಷೆಗಳವೆ. ಯುರೋಪಿನಲ್ಲಿ ೫೮೭; ಆಸ್ಯದಲ್ಲಿ ೯೩೭; ಅಫ್ರಿಕದಲ್ಲಿ ೨೭೫; ಅಮೇರಿಕದಲ್ಲಿ ೧೨೬.

ಮನೆಗಳಿಗೆ ಶಿಡಿಲು ಬೀಳದಂತೆ ತಡಿಯುವದಕ್ಕೆ ಒಂದು ಉಪಾಯವನ್ನು ಒಬ್ಬನು ಕಂಡಿದ್ದಾನೆಂತ ಒಂದು ಫ್ರೆಂಚ ಪತ್ರಿಕೆಯಲ್ಲಿ ಬರದದೆ. ಅದೇನಂದರೆ— ಮನೆಯ ಮಾಡಿನಲ್ಲಿ ಒಂದು ಸಣ್ಣ ಗಳೆ ನಟ್ಟು, ಅದರ ತುದಿಯಲ್ಲಿ ಒಂದು ಒಣ ಹುಲ್ಲಿನ ಕಟ್ಟು ಸುತ್ತಿ ಇಡಲು ಅದು ಶಿಡಿಲು ಹೊಡಿಯದ ಹಾಗೆ ತಡಿಯುತ್ತದೆಂತ ಫ್ರೆಂಚ ದೇಶದ ಒಕ್ಕಲಿಗ ಒಬ್ಬನು ಅನುಭವದಿಂದ ತಿಳಿದು ಪ್ರಕಟ ಮಾಡಿದ್ದಾನೆ. ಆ ಉಪಾಯವನ್ನು ಹದಿನೆಂಟು ಗ್ರಾಮದವರು ಪ್ರಯೋಗಿಸಿದ್ದರಿಂದ ಆ ಮೇಲೆ ಅವರ ಮನೆಗಳಿಗೆ ಶಿಡಿಲು ಬಡಿಯಲಿಲ್ಲವಂತೆ. ಈ ಸುಲಭ ಉಪಾಯ ಎಲ್ಲರೂ ಅನುಸರಿಸಿ ಅನುಭವದಿಂದ ನಿಶ್ಚಯ ಮಾಡಿದರೆ ಏನು?

ವಾತ ಸಂಬಂಧದಿಂದ ಶರೀರದ ಸಂದು ಹಿಡುಕೊಂಡರೆ, ಆ ಸ್ಥಳಕ್ಕೆ ಜೇನುನೊಣ ತಂದು ಕಚ್ಚಿಸಿದ್ದಲ್ಲಿ ರೋಗ ದೂರವಾಗುತ್ತದೆ. ಇದನ್ನು ಒಬ್ಬ ಯೂರೋಪಿಯನ ಒಕ್ಕಲಿಗನು ಪರೀಕ್ಷೆ ಮಾಡಿ ತಿಳಿದಿದ್ದಾನೆ.

ಪ್ರಾಯಸ್ಥರು ಎರಡನೆ ಸಾರಿ ದಾಕು ಹಾಕಿಸಿಕೊಳ್ಳುವದರಿಂದ ಶಿಡುಬು ಹತ್ತುವದಿಲ್ಲವೆಂಬದು ಈಗ ಸಿದ್ಧಾಂತವಾಗಿ ತಿಳಿದು ಬಂದದೆ. ಲಂಡನಿನಲ್ಲಿ ಶಿಡುಬು ಆದವರನ್ನು ಪರಾಂಬರಿಸುವ ಆಸ್ಪ

ತ್ರಿಯದೆ. ಕಳೆದ ಏಳು ವರುಷಗಳಲ್ಲಿ ಆ ಆಸ್ಪತ್ರಿಯಲ್ಲಿ ೩೬೭ ಸ್ತ್ರೀಯರು ಪರಿಚಾರಕ ಕೆಲಸದಲ್ಲಿದ್ದರು. ಅಲ್ಲಿ ಚಾಕರಿ ಶಿಕ್ಕ ಬೇಕಾದರೆ, ಎರಡನೇ ಸಾರಿ ದಾಕು ಹಾಕಿಸಿ ಕೊಳ್ಳ ಬೇಕು. ಮೊದಲೇ ಶಿಡುಬಾಗಿದ್ದು, ಅಥವಾ ಎರಡು ಸಾರಿ ದಾಕು ಹಾಕಿಸಿ ಕೊಂಡಿದ್ದರೆ, ಶೇರುವಾಗ ಹಾಕಿಸಿ ಕೊಳ್ಳುವದು ಅವಶ್ಯವಿಲ್ಲಾ. ಈ ೩೬೭ ಮಂದಿಯಲ್ಲಿ ಒಬ್ಬಳಿಗೆ ಮಾತ್ರ ಆಸ್ಪತ್ರಿಯಲ್ಲಿ ಶಿಡುಬು ಹತ್ತಿತು. ಮತ್ತು ಅವಳ ಪಕ್ಷದಲ್ಲಿ ಎರಡನೆ ಸಾರಿ ದಾಕು ಹಾಕಿದ್ದಿಲ್ಲವಂತೆ.

ಚಿಕ್ಕ ಚಿಕ್ಕ ಜೀವಜಂತುಗಳನ್ನು ಸೂಕ್ಷ್ಮವಾಗಿ ಪರೀಕ್ಷೆ ಮಾಡುವ ವಿದ್ವಾಂಸರು ಇರುವೆಗಳ ಮಡಿಯ ವಿಷಯ ಆಶ್ಚರ್ಯವಾದ ಮಾತು ಹೇಳುತ್ತಾರೆ; ಏನಂದರೆ: ಕೆಲವು ಜಾತಿಯ ಇರುವೆಗಳು ತಮ್ಮ ಶರೀರದ ಶುಚಿಯ ವಿಷಯವಾಗಿ ಬಹಳ ಸೂಕ್ಷ್ಮವಾಗಿದ್ಧಾವೆ. ಅಣುರೇಣುವಿನಂತಿರುವ ಮೈಲಿಗೆಯನ್ನಾದರೂ ಅವು ತೆಗದು ಹಾಕಿ, ಮುಖ್ಯತಾ ಊಟ ನಿದ್ರೆ ಆದ ಮೇಲೆ ಶರೀರವನ್ನು ಪದೇ ಪದೇ ಚನ್ನಾಗಿ ತೊಳಿಯುತ್ತಾವೆ. ಶುಚಿ ಮಾಡಿ ಕೊಳ್ಳುವದಕ್ಕೆ ಒಂದು ಇರುವೆ ಮತ್ತೊಂದಕ್ಕೆ ಸಹಾಯ ಮಾಡುತ್ತದೆ; ಆವಾಗ್ಯೆ ನಾಯಿ ದನಗಳು ಮೈ ತುರಿಸಿದರೆ, ಹ್ಯಾಗೆ ಸಂತುಷ್ಟಿಯನ್ನು ತೋರಿಸುವವೋ ತದೋಪಾದಿ ಇವೂ ತಮ್ಮ ಅಂಗಚೇಷ್ಟೆಯಿಂದ ತೋರಿಸುತ್ತವೆ. ಒಂದು ಇರುವೆ ಮತ್ತೊಂದರ ಮುಂದೆ ಮೊಣಕಾಲೂರಿ, ತನ್ನ ತಲೆ ಅದರ ಮುಖದ ಕೆಳಗೆ ಮಾಡಿ, ಅಲ್ಲಾಡದೆ ಬಿದ್ದು, ತನ್ನನ್ನು ತೊಳಿಯಬೇಕೆಂದು ಸೂಚಿಸುತ್ತದೆ. ತೊಳಿಯುವದಕ್ಕೆ ಬೇಕಾದ ನೀರು ಬಾಯಿಯಲ್ಲಿರುವ ಎಂಜಲೇ, ಬೇರೆ ಅವುಗಳಿಗಿಲ್ಲಾ. "ಮೈಗಳ್ಳನೇ, ಇರುವೆಯ ಹತ್ತರ ಹೋಗಿ ಬುದ್ಧಿ ಕಲಿತುಕೋ" ಎಂದು ಹೇಳಿದ ಸೊಲೊಮೋನನು ಈಗ ತನ್ನ ಗ್ರಂಥ ತಿದ್ದುಪಾಟು ಮಾಡುತ್ತಿದ್ದನಾದರೆ, "ಮೈಲಿಗೆಯವನೇ, ಇರುವೆಯ ಹತ್ತರ ಹೋಗಿ, ಅದರ ಮಾರ್ಗಗಳನ್ನು ನೋಡಿ, ಶುಚಿಯನಾಗಿರು" ಎಂಬ ವಚನವನ್ನು ಕೂಡಿಸುತ್ತಿದ್ದನು.

ಅಮೇರಿಕದಲ್ಲಿ ನ್ಯೂಯೋರ್ಕ್ ಪಟ್ಟಣದಲ್ಲಿ ಒಬ್ಬನು ನೀರಿನಿಂದ ಉತ್ಪನ್ನವಾಗುವಂಥಾ ಒಂದು ವಿಧದ ಗಾಸ್ ಎಂಬ ವಾಯುವಿನಿಂದ ದೀಪ ಉರಿಸುವ ಹೊಸ ಯುಕ್ತಿ ಕಂಡಿದ್ಧಾನೆ. ಅಂಥಾ ದೀಪಗಳು ಆ ಪಟ್ಟಣದಲ್ಲಿ ಹಚ್ಚುವದಕ್ಕೆ ಪ್ರಾರಂಭಿಸಿದ್ಧಾರೆ.

ಅದೇ ನ್ಯೂಯೋರ್ಕಿನಲ್ಲಿ ಹುಲ್ಲನ್ನು ಬಹು ತೆಳುವಾದ ಪದಾರ್ಥ ಮಾಡಿ, ಅದರಿಂದ ಪೀಪಾಯಿಗಳನ್ನು ಮಾಡುತ್ತಾರೆ. ಈ ಪೀಪಾಯಿಗಳು ಮರದವುಗಳಿಗಿಂತ ಹೌರವೂ ಕಮ್ಮಿ ಬೆಲೆಯವೂ ಆಗಿವೆ.

ಮಿಾನುಗಳು ತಮ್ಮ ಮೊಟ್ಟೆಗಳ ಮೇಲೆ ಬಹಳ ಜಾಗ್ರತೆ ಮಾಡುತ್ತವಂತೆ; ಮೊಟ್ಟೆ ಇಡುವದಕ್ಕೆ ಅವು ಹುದಿಲು ಹಾವಚ್ಚೆ ಇದ್ದ ಜಾಗದಲ್ಲಿ ಗೂಡುಗಳನ್ನು ಮಾಡಿ ಕೊಂಡು, ಮೊಟ್ಟೆ ಇಟ್ಟ ಮೇಲೆ ಬೇರೆ ಮಿಾನುಗಳು ಅದನ್ನು ತಿನ್ನದ ಹಾಗೆ ಕಾವಲು ಇಡುತ್ತವೆ; ಅವುಗಳ ಈ ರೀತಿ ತಿಳಿದು ಸಿದ್ದಿ ಜನರು ಯುಕ್ತಿಯಿಂದ ಅವುಗಳನ್ನು ಹಿಡಿಯುತ್ತಾರೆ; ಹ್ಯಾಗಂದರೆ ಮೊಟ್ಟೆಗಳಿರುವ ಗೂಡಿನ ಬಳಿಯ ಕೈಗಳಿಡುವಾಗ ಆ ಮಿಾನುಗಳು ಮೊಟ್ಟೆಗಳ ಮೇಲಣ ಚಿಂತೆಯಿಂದ ಅವರ ಕೈಗಳಿಗೆ ಹಾರಿ ಬೀಳುತ್ತವೆ; ಆಗ ಅವರು ಅವುಗಳನ್ನು ಹಿಡಿಯುತ್ತಾರೆ.

ಮಹಾ ಯುಕ್ತಿವಂತರಾದ ಚೀನಿ ಜನರು ಮಿಾನುಗಳ ಮೊಟ್ಟೆಗಳನ್ನು ತೆಗದು ಕೊಂಡು ಬಂದು, ಕೋಳಿ ಮೊಟ್ಟೆಗಳಿಗೆ ತೂತು ಮಾಡಿ, ಒಳಗಿನ ಲೋಳೆಯನ್ನು ಚಲ್ಲಿ, ಅವುಗಳೊಳಗೆ ಆ ಮೊಟ್ಟೆಗಳನ್ನು ಹಾಕಿ, ತೂತನ್ನು ಅಂಟಿನಿಂದ ಮುಚ್ಚಿ ಬಿಟ್ಟು, ಕೋಳಿಯ ರೆಕ್ಕೆಗಳ ಕೆಳಗಿಡುತ್ತಾರೆ. ಅದು ಕಾವಿಗೆ ಕುಂಡ್ರುವದರಿಂದ ಯಥೇಷ್ಟ ಮಿಾನುಗಳು ಹುಟ್ಟುತ್ತವೆ. ಈ ಉಪಾಯದಿಂದ ಚೀನ ದೇಶದಲ್ಲಿ ಮಿಾನು ಯಥೇಷ್ಟವಾಗಿಯೂ ಅಗ್ಗವಾಗಿಯೂ ದೊರಕುತ್ತವೆ.

Mir nach! spricht Christus. Tul. 72.

1. ಕ್ರಿಸ್ತೇಸು ನಮ್ಮ ಶೂರನೆ, ಸತ್ಕ್ರೈಸ್ತರೆಲ್ಲರಿಂದ
ಕೇಳಿದ್ದು: ಲೋಕನಡತೆ ಮಾಂಸಾಶೆ ಭಕ್ತಿಯಿಂದ
ಬಿಟ್ಟೋಗು, ತಾಳು ಕ್ರೂಜೆಯು, ಹಿಂಬಾಲಿಸೋದಕೆನ್ನ ಬಾ!
2. ನೀ ನಡುತೀರ್ವ ಮಾರ್ಗದಿ ನಾ ಮುಂದೆ ಹೋಗುತಿದ್ದೆ;
ಸಂದೇಹವೆಲ್ಲ ತ್ಯಜಿಸಿ ನಂಬಿರು, ನಿನ್ನ ಬಿಡೆ;
ಪ್ರಯಾಸ ನಿನಗಾದರೂ ಕಡೇಲಿ ಜಯ ನಿನ್ನದು.
3. ಓ ಯೇಸು, ನಡಿಸೆನ್ನನು! ಪೂರೈಸು ಕಾರ್ಯವನ್ನು!
ನಾ ನಿನ್ನ ಕ್ರೂಜೆ ಹಿಡಿದು, ನೀ ಕೊಟ್ಟ ಶಕ್ತಿಯನ್ನು
ಪ್ರಯೋಗ ಮಾಡಿ, ಜೈಸುವೆ ನಿನ್ವಿರುದ್ಧ ಕಷ್ಟದಲ್ಲಿಯೇ.

So lang ich hier noch walle. C. Tune 23.

1. ಈ ಭೂಸಂಚಾರದಲ್ಲಿ ನಾ ಬೇಡಿ ಕೊಳ್ಳೋದು:
ಸಮಸ್ತ ಸ್ಥಿತಿಯಲ್ಲಿ ನಿನ್ನವ ರಕ್ಷಿಸು!
2. ನಾ ರಾತ್ರೆ ನಿದ್ದೆ ಮಾಡಿ ಮುಂಜಾನೆ ಏಳಲು,
ನೀನೆಂದಿಗೂ ಕಾಪಾಡಿ ನಿನ್ನವ ರಕ್ಷಿಸು!
3. ಉದ್ಯೋಗ ಕಷ್ಟದಲ್ಲೂ ನೀ ನಡಿಸೆನ್ನನು!
ವಿವೇಕ ಗೈಸುವಲ್ಲೂ ನಿನ್ನವ ರಕ್ಷಿಸು!
4. ಮಾಂಸಾಶಾಶೋಭೆಯಿಂದ ಗಂಡಾಂತರಾಗಲು,
ಓ ಕರ್ತಾ, ದಯದಿಂದ ನಿನ್ನವ ರಕ್ಷಿಸು.
5. ಕಳಂಕ ಪಾಪದೋಷ ನನ್ನಲ್ಲಿ ಹುಟ್ಟಲು,
ನೀ ತೋರಿಸಾತ್ಮಪೋಷ; ನಿನ್ನವ ರಕ್ಷಿಸು!
6. ನಾನಪಧೈರ್ಯನಾಗಿ ಸಂದೇಹ ಮಾಡಲು,
ನಿನ್ನಾತ್ಮಮೂಲವಾಗಿ ನಿನ್ನವ ರಕ್ಷಿಸು!
7. ನಾ ಕಷ್ಟ ಶ್ರಮೆಯಲ್ಲಿ ಸುಶಿಕ್ಷೆ ಪಡಲು,
ನೀನೆನೆದದರಲ್ಲಿ ನಿನ್ನವ ರಕ್ಷಿಸು!
8. ಸೈತಾನ ತಂತ್ರಕ್ಕಾಗಿ ಲೋಕಾಶಾಮೋಸಕ್ಕೂ
ನೀ ಕಾಯು ಪೂರ್ತಿಯಾಗಿ! ನಿನ್ನವ ರಕ್ಷಿಸು!
9. ಹೃದೀಲೆನ್ನವಿವೇಕ ಸಂಶಯ ಮಾಡಲು,
ಕೊಡೆನಗಭಿಷೇಕ! ನಿನ್ನವ ರಕ್ಷಿಸು!
10. ನಾ ಮೃತಿಗೆದುರಾಗಿ ನಿನ್ನಾಮವನ್ನಲು,
ನಿನ್ನೈದು ಘಾಯಕ್ಕಾಗಿ ನಿನ್ನವ ರಕ್ಷಿಸು! *A. M.*

Printed at the Basel Mission Press, Mangalore.

...ತಾ ಪತ್ರವು.

(...ಕ್ಕೆ ಪ್ರಕಟವಾಗುವಂಥಾದ್ದು.)

...ೕ ಪುಸ್ತಕವು.

...NGALORE
...n Book & Tract Depository
1878